ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭಾಷಾಭಿವೃದ್ಧಿ ಯೋಜನೆ

ಸಂಪುಟ ೩

ಅಕ್ಕ ಮಹಾದೇವಿ

ಸಂಪಾದಕರು

ಡಾ. ವಿಜಯಶ್ರೀ ಸಬರದ



ಕನ್ನಡ ಅಧ್ಯಯನ ಸಂಸ್ಥೆ

ಗುಲಬರ್ಗಾ ವಿಶ್ವವಿದ್ಯಾಲಯ

ಗುಲಬರ್ಗಾ – ೫೮೫ ೧೦೬

BVP-1143- २|२|१७
G-1133- 22|28.

ಕನ್ನಡ ಭಾಷಾಭಿವೃದ್ಧಿ ಯೋಜನೆ

ಸಂಪುಟ
೩

ಕರ್ನಾಟಕ ಸರಕಾರ

ಅಕ್ಕಮಹಾದೇವಿ

ಪ್ರಧಾನ ಸಂಪಾದಕರು

ಡಾ. ಎಚ್.ಟಿ. ಪೋತೆ

ಸಂಪಾದಕರು

ಡಾ. ವಿಜಯಶ್ರೀ ಸಬರದ

GULBARGA UNIVERSITY

ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

AKKA MAHADEVI : A Collection of selected articles of Akkamahadevi Edited by: Dr. Vijayashree Sabarad Professor of Kannada, Karnataka State Women University, Bijapur, Principal Investigator Dr. H.T. Pote, Professor of Kannada, Gulbarga University, Gulbarga. Published by Kannada Adhyana Samsthe, Gulbarga University, Gulbarga. Funding Agency : Govt. of Karnataka

ಅಕ್ಕಮಹಾದೇವಿ

ಸಂ. : **ಡಾ. ವಿಜಯಶ್ರೀ ಸಬರದ,** ಮುಖ್ಯಸ್ಥರು, ಕನ್ನಡ ಅಧ್ಯಯನ ವಿಭಾಗ, ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ, ಬಿಜಾಪುರ.

ಪ್ರ.ಸಂ.: **ಡಾ. ಎಚ್.ಟಿ. ಪೋತೆ,** ಪ್ರಾಧ್ಯಾಪಕರು ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

ISBN	:	978-81-921036-2-4
First Edition	:	2011
Pages	:	xxviii+292 = 320
©	:	Institute of Kannada Studies, Gulbarga University, Gulbarga
Paper used	:	70 gsm N.S. Maplitho
Price	:	**Rs. 200/-**

ಪ್ರಥಮ ಮುದ್ರಣ	:	೨೦೧೧
ಪುಟಗಳು	:	xxviii+292 = 320
©	:	ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ
ಬಳಸಿದ ಕಾಗದ	:	೭೦ gsm ಎನ್.ಎಸ್. ಮ್ಯಾಪ್‌ಲಿಥೋ
ಬೆಲೆ	:	**ರೂ. ೨೦೦/-**

ಮುದ್ರಣ

ಇಳಾ ಮುದ್ರಣ

ನಂ. ೩೬, ೪೦ ಅಡಿ ರಸ್ತೆ
ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್
ಬೆಂಗಳೂರು - ೫೬೦ ೦೨೬
ದೂರವಾಣಿ : ೨೬೭೫೭೧೯

ಸಲಹಾ ಸಮಿತಿ

ಅಧ್ಯಕ್ಷರು

ಪ್ರೊ. ಈ.ಟಿ. ಪುಟ್ಟಯ್ಯ

ಕುಲಪತಿಗಳು

ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಉಪಾಧ್ಯಕ್ಷರು

ಪ್ರೊ. ಎಸ್.ಎಲ್. ಹಿರೇಮಠ

ಕುಲಸಚಿವರು

ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ

ಸಂಚಾಲಕರು

ಪ್ರೊ. ಬಸವರಾಜ ಸಬರದ

ಪ್ರೊ. ವೀರಣ್ಣದಂಡೆ

ಸದಸ್ಯರು

ಡಾ. ಮ.ಗು. ಬಿರಾದಾರ

ಡಾ. ವೀರಣ್ಣ ರಾಜೂರ

ಡಾ. ವಸಂತ ಕುಷ್ಟಗಿ

ಬಿ. ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಕರ್ನಾಟಕ ಸರಕಾರ

ವಿಧಾನಸೌಧ
ಬೆಂಗಳೂರು-೫೬೦ ೦೦೧
ದಿನಾಂಕ: ೧೫-೨-೨೦೧೧

ಶುಭಹಾರೈಕೆ

ಗುಲಬರ್ಗಾ ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯು ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಯೋಜನೆಯಡಿಯಲ್ಲಿ ಸಿದ್ಧಪಡಿಸಿರುವ ಹನ್ನೆರಡು ಹೊಸ ಸಂಪುಟಗಳ ಬಿಡುಗಡೆ ಕಾರ್ಯಕ್ರಮವನ್ನು ೨೦೧೧ರಂದು ಹಮ್ಮಿಕೊಂಡಿರುವುದು ಔಚಿತ್ಯಪೂರ್ಣ.

ನಮ್ಮ ಸರ್ಕಾರದ ಪ್ರಯತ್ನದ ಫಲವಾಗಿ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನ ದೊರೆತಿದ್ದು, ಈ ಹಿನ್ನೆಲೆಯಲ್ಲಿ ಕನ್ನಡ ಭಾಷಾಭಿವೃದ್ಧಿ ಯೋಜನೆ ಕಾರ್ಯಕ್ರಮಗಳಿಗೆ ನಮ್ಮ ಸರ್ಕಾರ ವಿಶೇಷ ಅನುದಾನವಾಗಿ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳಿಗೆ ತಲಾ ಎರಡು ಕೋಟಿ ರೂಪಾಯಿ ಅನುದಾನವನ್ನು ಮೀಸಲಿಟ್ಟು, ಈಗಾಗಲೇ ಒಂದು ಕೋಟಿ ರೂಪಾಯಿ ಬಿಡುಗಡೆ ಮಾಡಲಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯೂ ಸೇರಿದಂತೆ ನಾಡಿನ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಈ ಕಾರ್ಯಯೋಜನೆಯನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಕಾರ್ಯತತ್ಪರರಾಗಿರುವುದು ಮೆಚ್ಚತಕ್ಕ ಸಂಗತಿ.

ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ವಚನಸಾಹಿತ್ಯ, ದಾಸಸಾಹಿತ್ಯ, ತತ್ವಪದ ಸಾಹಿತ್ಯ, ದಲಿತ ಬಂಡಾಯ ಸಾಹಿತ್ಯ, ಜಾನಪದ, ಶಾಸನ, ಇತಿಹಾಸ, ಹಸ್ತಪ್ರತಿ, ಸಾಹಿತ್ಯಚರಿತ್ರೆ, ರಂಗಭೂಮಿ, ತಂತ್ರಜ್ಞಾನ, ಕನ್ನಡೇತರರಿಗೆ ಕನ್ನಡ ಪರಿಚಯ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ರೂಪಿಸಲಾದ ವಿವಿಧ ಕ್ರಿಯಾಯೋಜನೆಗಳು ಹೆಚ್ಚು ಉಪಯುಕ್ತಕಾರಿಯಾಗಿವೆ. ಕನ್ನಡ ಅಧ್ಯಯನ ಮತ್ತು ಸಂಶೋಧನಾ ವ್ಯಾಪ್ತಿಯನ್ನು ವಿಸ್ತರಿಸುವುದರ ಮೂಲಕ ಕನ್ನಡಕ್ಕೆ ಹೊಸ ಆಯಾಮಗಳನ್ನು ಜೋಡಿಸಿದೆ. ಈ ಕಾರ್ಯದಲ್ಲಿ ನಾಡಿನ ಅನೇಕ ಸಂಶೋಧನಾಸಕ್ತರು ಪಾಲುಗೊಂಡಿದ್ದು, ಅವರ ಎಲ್ಲ ಸಂಶೋಧನೆ, ಅಧ್ಯಯನ, ಪುಸ್ತಕ ರೂಪದಲ್ಲಿ ಪ್ರಕಟಗೊಳ್ಳುತ್ತಿರುವುದು ಶ್ಲಾಘನೀಯ.

ಕನ್ನಡ ಭಾಷೆಗೆ ಎರಡು ಸಾವಿರ ವರ್ಷಗಳ ಸುದೀರ್ಘ ಇತಿಹಾಸವಿದೆ. ಸಮೃದ್ಧವೂ ಪ್ರಬುದ್ಧವೂ ಆದ ಕನ್ನಡ ಭಾಷಾ ಸಾಹಿತ್ಯ ತನ್ನ ಭಾಷಿಕ, ಸಾಂಸ್ಕೃತಿಕ, ಸಾಹಿತ್ಯಿಕ ಅನನ್ಯತೆಯಿಂದ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದೆ. ಈ ಬೆಳವಣಿಗೆಗೆ ಕನ್ನಡದ ಅಸಂಖ್ಯಾತ ಕವಿಗಳೂ, ಲೇಖಕರೂ, ಕಲಾವಿದರೂ ಕಾರಣರಾಗಿದ್ದಾರೆ. ಕನ್ನಡ ಭಾಷೆ ಸೃಜನಶೀಲವಾಗಿ ಮತ್ತು

ಶಾಸ್ತ್ರೀಯವಾಗಿ ಶ್ರೇಷ್ಠಮಟ್ಟದ ಬೆಳವಣಿಗೆಯನ್ನು ಹೊಂದಿದೆ. ವೈವಿಧ್ಯಪೂರ್ಣವಾದ ಒಂದು ದೊಡ್ಡ ಪರಂಪರೆ ನಮ್ಮ ಹಿಂದಿದೆ. ಈ ಮಹಾಪರಂಪರೆಯ ಮುಂಚೂಣಿಯಲ್ಲಿ ನಾವಿದ್ದೇವೆ. ಕನ್ನಡವನ್ನು ಇನ್ನೂ ಎತ್ತರಕ್ಕೆ ತೆಗೆದುಕೊಂಡುಹೋಗುವ ಬಹುಮುಖ್ಯ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ. ಕನ್ನಡ ಕಟ್ಟುವ ಈ ಮಹತ್ವದ ಕೈಂಕರ್ಯಕ್ಕೆ ಎಲ್ಲರೂ ಕೈಜೋಡಿಸಬೇಕಾಗಿದೆ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ **ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆ**ಯಡಿಯಲ್ಲಿ ಸಿದ್ಧಪಡಿಸಿರುವ ಹನ್ನೆರಡು ಬೃಹತ್ ಸಂಪುಟಗಳಲ್ಲಿ ಈಗ ಏಳು ಸಂಪುಟಗಳನ್ನು ಪ್ರಕಟಪಡಿಸಲು ಶ್ರಮಿಸಿದ ಎಲ್ಲರನ್ನೂ ಅಭಿನಂದಿಸಿ ಈ ಕೃತಿಗಳು ನಾಡಿನ ಸಹೃದಯರ ಮನ ಗೆಲ್ಲಲಿ ಎಂದು ಹಾರೈಸಿ ಶುಭ ಕೋರುತ್ತೇನೆ.

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿ

ಗೋವಿಂದ ಎಂ. ಕಾರಜೋಳ
ಸಣ್ಣ ನೀರಾವರಿ,
ಕನ್ನಡ ಮತ್ತು ಸಂಸ್ಕೃತಿ ಸಚಿವರು

ಕರ್ನಾಟಕ ಸರಕಾರ

ನಂ. ೩೩೦, ೩ನೇ ಮಹಡಿ
ವಿಧಾನಸೌಧ
ಬೆಂಗಳೂರು – ೫೬೦ ೦೦೧
ದಿನಾಂಕ: ೧೫–೨–೨೦೧೧

ಶುಭಹಾರೈಕೆ

ಕನ್ನಡ ನಾಡು–ನುಡಿಗೆ ಸುದೀರ್ಘವಾದ ಇತಿಹಾಸವಿದೆ. ಭವ್ಯ ಪರಂಪರೆಯನ್ನು ಈ ನಾಡು ಹೊಂದಿದೆ. ಭಾರತೀಯ ಭಾಷೆಗಳಲ್ಲಿಯೇ ಅತಿ ಹೆಚ್ಚು ಜ್ಞಾನಪೀಠ ಪ್ರಶಸ್ತಿಗಳನ್ನು ಪಡೆದಿರುವ ಹೆಗ್ಗಳಿಕೆಗೆ ನಮ್ಮ ಭಾಷೆ ಪಾತ್ರವಾಗಿದೆ. ಈ ನಾಡಿನ ಕವಿಗಳು, ಸಾಹಿತಿಗಳು, ಕಲಾವಿದರು, ಸಂಶೋಧಕರು, ಶಿಕ್ಷಣತಜ್ಞರು, ವಿಜ್ಞಾನಿಗಳು ವಿಶ್ವದಾದ್ಯಂತ ಹೆಸರು ಮಾಡಿದ್ದಾರೆ.

ಕನ್ನಡ ನಾಡು–ನುಡಿಗೆ ಸಂಬಂಧಪಟ್ಟ ಮಾತುಗಳು ರಾಮಾಯಣ ಮಹಾಭಾರತಗಳಲ್ಲಿ ಕಂಡುಬರುತ್ತವೆ. ಕ್ರಿಸ್ತಪೂರ್ವದಿಂದಲೇ ಕನ್ನಡ ಭಾಷೆಯ ಅಸ್ತಿತ್ವವನ್ನು ಸಂಶೋಧಕರು ಗುರುತಿಸಿದ್ದಾರೆ. ಕ್ರಿಸ್ತಶಕ ೪೫೦ರ ಹಲ್ಮಿಡಿ ಶಾಸನ ಕನ್ನಡದ ಉಪಲಬ್ಧವಿರುವ ಮೊದಲ ಲಿಖಿತ ರೂಪದ ಶಾಸನ. ಕನ್ನಡದ ಆದಿ ಮಹಾಕವಿ ಪಂಪನಿಗಿಂತ ಹಿಂದೆಯೇ ಒಂದು ಸಮೃದ್ಧವಾದ ಸಾಹಿತ್ಯ ಪರಂಪರೆಯನ್ನು ಕನ್ನಡ ಕಂಡಿದೆ ಎಂಬುದಕ್ಕೆ ಸಂಶೋಧಕರು ಸಾಕಷ್ಟು ಪುರಾವೆಗಳನ್ನು ನೀಡಿದ್ದಾರೆ. ಶಾತವಾಹನರು, ಕದಂಬರು, ಚಾಲುಕ್ಯರು, ಗಂಗರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಅರಸರು ಈ ನಾಡಿನ ಕಲೆ, ಸಾಹಿತ್ಯ, ವಾಸ್ತುಶಿಲ್ಪ, ಸಂಗೀತ ಮೊದಲಾದ ಕ್ಷೇತ್ರಗಳಲ್ಲಿ ಅಪೂರ್ವ ಕೊಡುಗೆ ನೀಡಿದ್ದಾರೆ.

ಇಂಥ ಅಪೂರ್ವ ಪರಂಪರೆ ಹೊಂದಿರುವ ಕನ್ನಡ ಭಾಷೆಯನ್ನು ಕೇಂದ್ರ ಸರ್ಕಾರ ಶಾಸ್ತ್ರೀಯ ಭಾಷೆ ಎಂದು ಘೋಷಿಸಿದೆ. ಕನ್ನಡದ ಕೆಲಸಕ್ಕೆ ಕೈಜೋಡಿಸಿರುವ ಕರ್ನಾಟಕ ರಾಜ್ಯ ಸರ್ಕಾರ 'ಕನ್ನಡ ಭಾಷಾಭಿವೃದ್ಧಿ ಯೋಜನೆ'ಗೆ ವಿಶೇಷ ಅನುದಾನ ಬಿಡುಗಡೆ ಮಾಡಿದೆ. ಈ ಹಿನ್ನೆಲೆಯಲ್ಲಿ ಕರ್ನಾಟಕದ ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕನ್ನಡ ಕಟ್ಟುವ ಕೆಲಸ ಭರದಿಂದ ನಡೆದಿದೆ. ಕನ್ನಡದ ಇತಿಹಾಸ, ಭಾಷೆ, ಸಾಹಿತ್ಯ, ಪರಂಪರೆ, ಜಾನಪದ, ವಿಜ್ಞಾನ, ಮಾನವಿಕ ಇನ್ನಿತರ ಅಂಶಗಳನ್ನು ಕುರಿತ ಹೊತ್ತಗೆಗಳು ಸಿದ್ಧವಾಗುತ್ತಿವೆ. ಈ ಯೋಜನೆಯ **ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆ**ಯ ಅಡಿಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಶರಣಸಾಹಿತ್ಯಕ್ಕೆ ಸಂಬಂಧಿಸಿದ ನಾಡಿನ ವಿವಿಧ ಲೇಖಕರು ಬರೆದ ವಿಮರ್ಶಾ ಲೇಖನಗಳ ಒಟ್ಟು ಹನ್ನೆರಡು ಸಂಪುಟಗಳಲ್ಲಿ ಈಗ

ಏಳು ಬೃಹತ್ ಸಂಪುಟಗಳು ಪ್ರಕಟವಾಗುತ್ತಿವೆ ಎಂಬ ವಿಚಾರ ತಿಳಿದು ನನಗೆ ತುಂಬಾ ಸಂತೋಷವಾಗಿದೆ.

ಕನ್ನಡದ ತೇರು ಎಳೆಯುವ ಮಹತ್ಕಾರ್ಯದಲ್ಲಿ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಪ್ರೇರೇಪಿಸಿ, ಉತ್ತೇಜಿಸಿ ಆ ಎಲ್ಲ ವಿಶೇಷ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ನಿರ್ದೇಶನ ನೀಡಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ರಮೇಶ್ ಬಿ. ಝುಳಕಿ ಅವರನ್ನು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಈ ಮಾಲೆಯಲ್ಲಿ ಈ ಬಗೆಯ ಇನ್ನೂ ಅನೇಕ ಕೃತಿಗಳು ಕನ್ನಡಿಗರಿಗೆ ದೊರೆಯಲಿವೆ ಎಂಬ ವಿಚಾರ ತಿಳಿದಾಗಲಂತೂ ನನಗೆ ಇನ್ನಷ್ಟು ಮಹದಾನಂದವಾಗಿದೆ. ಇದರ ಪೂರ್ಣ ಪ್ರಯೋಜನವನ್ನು ನಾಡಿನ ಜನತೆ ಪಡೆಯು ವಂತಾಗಲಿ.

ರಾಜ್ಯ ಸರ್ಕಾರದ ಈ ಯೋಜನೆ ಕನ್ನಡ ನಾಡು-ನುಡಿ ಸಂಸ್ಕೃತಿಯ ಪುನರುತ್ಥಾನಕ್ಕೆ ಕಾರಣವಾಗಿದೆ. ಈ ಮೂಲಕ ವಿವಿಧ ಜ್ಞಾನಶಿಸ್ತುಗಳಲ್ಲಿ ಕನ್ನಡಿಗರ ಅಧ್ಯಯನ ಆಸಕ್ತಿ ಬೆಳೆಯಲು ವಿವಿಧ ಕ್ರಿಯಾ ಯೋಜನೆಗಳು ಸಹಕಾರಿಯಾಗಿವೆ. ಇದರಿಂದ ಹೊಸ ಚೈತನ್ಯವನ್ನು ಹುಟ್ಟುಹಾಕುವ ಹೊಸ ಸಂಚಲನವನ್ನು ಉಂಟುಮಾಡುವ ಅನನ್ಯ ಪರಂಪರೆಯೊಂದಕ್ಕೆ ಚಾಲನೆ ಸಿಕ್ಕಂತಾಗಿದೆ.

ಈ ಪರ್ವಕಾಲದಲ್ಲಿ ನಾವಿದ್ದೇವೆ ಎನ್ನುವುದು ಸಂತಸದ ಸಂಗತಿ. ಕನ್ನಡದ ಅಪೂರ್ವ ಪರಂಪರೆಯನ್ನು ಉಳಿಸಿ ಬೆಳೆಸುವ ಮಹತ್ಕಾರ್ಯದಲ್ಲಿ ಎಲ್ಲರೂ ಕೈಜೋಡಿಸಿದ್ದಾರೆ. ನಾಡು-ನುಡಿಯ ಅಭಿವೃದ್ಧಿ ವಿಚಾರದಲ್ಲಿ ಸರ್ಕಾರ ಸದಾ ಸಹಕಾರ ನೀಡುವುದು. ಕನ್ನಡಿಗರಿಗೆ ಒಳಿತಾಗಲಿ, ಸರ್ವರೂ ಸುಖ ಶಾಂತಿಯಿಂದ ಬದುಕಿ ಬಾಳಲೆಂದು ಹೃದಯತುಂಬಿ ಹಾರೈಸುವೆ.

ಸಹಿ/-

ಗೋವಿಂದ ಎಂ. ಕಾರಜೋಳ

ಸಚಿವರು

ರಮೇಶ್ ಬಿ. ಝುಳಕಿ
ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ
ಹಾಗೂ ವಾರ್ತಾ ಇಲಾಖೆ

ಕರ್ನಾಟಕ ಸರಕಾರ

ಕೊಠಡಿ ಸಂಖ್ಯೆ ೨,
ನೆಲಮಹಡಿ, ವಿಕಾಸಸೌಧ,
ಬೆಂಗಳೂರು-೫೬೦ ೦೦೧
ದಿನಾಂಕ: ೧೫-೨-೨೦೧೧

ಶುಭಹಾರೈಕೆ

ದ್ರಾವಿಡ ಭಾಷಾ ಪರಂಪರೆಯ ನಡುವೆ ಕನ್ನಡ ಭಾಷೆಯ ಶ್ರೀಮಂತಿಕೆ ಮತ್ತು ಅದರ ಸಾಂಸ್ಕೃತಿಕ ವೈವಿಧ್ಯತೆ ಎದ್ದು ಕಾಣುವಂತಿದೆ. ತಮಿಳು ಭಾಷೆಯ ಪರಂಪರೆಗೆ ಸರಿಸಮಾನವಾಗಿಯೇ ಬೆಳೆದು ಬಂದಿರುವ ಕನ್ನಡಕ್ಕೆ ನಿಖರವಾಗಿಯೇ ಒಂದೂವರೆ ಸಾವಿರ ವರ್ಷಗಳಿಗೂ ಮೀರಿದ ಇತಿಹಾಸವಿರುತ್ತದೆ. ಕ್ರಿ.ಶ. ೪೫೦ ಹಲ್ಮಿಡಿ ಶಾಸನದ ಕಾಲಕ್ಕೆ ಕನ್ನಡ ಕರ್ನಾಟಕದಲ್ಲಿ ಬಳಕೆಯಲ್ಲಿತ್ತು. ವ್ಯಾಸಕೃತ ಮಹಾಭಾರತದಲ್ಲಿಯೇ ಕರ್ನಾಟಕದ ಪ್ರಸ್ತಾಪವಿದೆ. ಶಾತವಾಹನರು, ಕದಂಬರು ಇಲ್ಲಿಯ ಪ್ರಾಚೀನ ಅರಸು ಮನೆತನದವರೆಂದು ಇತಿಹಾಸಕಾರರು ಗುರುತಿಸಿರುತ್ತಾರೆ. ಗ್ರೀಕ್ ಭೂಗೋಳಶಾಸ್ತ್ರದ ಟಾಲೆಮಿಯ ಪ್ರವಾಸಿ ಬರೆವಣಿಗೆಯ್ಲಲ್ಲಿಯೇ ಕನ್ನಡನಾಡಿನ ಅನೇಕ ಪ್ರದೇಶಗಳ ಪ್ರಸ್ತಾಪವಿರುವುದನ್ನು ಸಂಶೋಧಕ ಗೋವಿಂದ ಪೈ ಅವರು ಬೆಳಕಿಗೆ ತಂದರು. ಅಶೋಕನು ದಕ್ಷಿಣ ಭಾರತದಲ್ಲಿ ಹಾಕಿಸಿದ ಶಾಸನಗಳು ಮೊದಲು ದೊರಕಿರುವುದು ಕರ್ನಾಟಕದಲ್ಲಿಯೇ! ಚಿತ್ರದುರ್ಗದ ಸಿದ್ಧಾಪುರ, ರಾಯಚೂರಿನ ಮಸ್ಕಿ ಭಾಗದಲ್ಲಿ ದೊರಕಿದ ಶಾಸನದಿಂದಲೇ ಅಶೋಕನಿಗೆ 'ದೇವಾನಾಂಪ್ರಿಯ' ಎಂಬ ಬಿರುದು ಇದ್ದಿತೆಂದು ತಿಳಿದುಬರುತ್ತದೆ. ಅಶೋಕನು ದಕ್ಷಿಣ ಭಾರತದ ಕರ್ನಾಟಕದಲ್ಲಿಯೇ ತನ್ನ ಶಾಸನಗಳನ್ನು ಹಾಕಿಸಿದನೆಂದರೆ ಕರ್ನಾಟಕದಲ್ಲಿಯ ಭಾಷಾಪ್ರದೇಶಗಳು ಚೆನ್ನಾಗಿಯೇ ನೆಲೆಯೂರಿದ್ದವೆಂದು ತಿಳಿಯಬಹುದಾಗಿರುತ್ತದೆ. ಇಷ್ಟೇ ಅಲ್ಲದೆ ಕಾಳಿದಾಸನ ಕಾಲ ನಿಗದಿ ಮಾಡುವುದರಲ್ಲಿಯೂ ಮೊದಲು ಸಹಾಯಕ್ಕೆ ಬಂದದ್ದು ಕರ್ನಾಟಕದ ಐಹೊಳೆಯ ಮೇಗುತಿ ದೇವಾಲಯದ ರವಿಕೀರ್ತಿಯ ಐದನೆಯ ಶತಮಾನದ ಶಾಸನ. 'ಅಯ್ಯಾಹೊಳೆಯ' ಐನೂರು ಜನ ವ್ಯಾಪಾರಸ್ಥರು ದಕ್ಷಿಣ ಭಾರತದ ವ್ಯಾಪಾರವನ್ನೆಲ್ಲ ನಿಯಂತ್ರಿಸುತ್ತಿದ್ದರಂತೆ. ಅಂದರೆ ಭಾರತದ ಇತಿಹಾಸಕ್ಕೆ ತನ್ನದೇ ಕಾಣಿಕೆ ನೀಡಿದ ಕರ್ನಾಟಕದ ಸಾಂಸ್ಕೃತಿಕ ಪರಂಪರೆಯ ಈ ಹೆಗ್ಗುರುತುಗಳನ್ನು ಇಲ್ಲಿ ಪ್ರಸ್ತಾಪಿಸುತ್ತಿರುವುದರ ಕಾರಣವೆಂದರೆ, ಭಾರತ ಸರ್ಕಾರ ಕನ್ನಡಕ್ಕೆ ಶಾಸ್ತ್ರೀಯ ಭಾಷೆಯ ಸ್ಥಾನಮಾನವನ್ನು ನೀಡಿರುವುದು, ಎಲ್ಲಾ

ರೀತಿಯಿಂದಲೂ ಸಮಂಜಸ ಹಾಗೂ ಸೂಕ್ತ ಎಂಬುದಕ್ಕಾಗಿ. ೨೦೦೮ರಲ್ಲಿ ಕನ್ನಡಕ್ಕೆ ಶಾಸ್ತ್ರೀಯ ಸ್ಥಾನಮಾನ ದೊರೆತ ಸಂದರ್ಭದಲ್ಲಿ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಕರ್ನಾಟಕದ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೂ ಎರಡೆರಡು ಕೋಟಿ ಅನುದಾನವನ್ನು ಬಿಡುಗಡೆ ಮಾಡಿ ಅದರಡಿಯಲ್ಲಿ ಕನ್ನಡ ಸಾಹಿತ್ಯ ಸಂಸ್ಕೃತಿ ಸಂವರ್ಧನೆಯ ಯೋಜನೆಗಳು ನೆರವೇರುವಂತಾಗಲಿ ಎಂದು ತಿಳಿಸಿರುತ್ತಾರೆ. ಅದರಂತೆ ಕರ್ನಾಟಕದ ವಿವಿಧ ಭಾಗದ ವಿಶ್ವವಿದ್ಯಾಲಯದ ಕನ್ನಡ ವಿಭಾಗಗಳು ಕನ್ನಡ ಸಾಹಿತ್ಯ ಪರಂಪರೆಯನ್ನು ಕುರಿತಾಗಿ ಅನೇಕ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡಿರುತ್ತವೆ. ಈ ಹಿನ್ನೆಲೆಯಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು **ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆಯನ್ನು** ಹಮ್ಮಿಕೊಂಡು ಶರಣಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳ ಒಟ್ಟು ಹನ್ನೆರಡು ಸಂಪುಟಗಳಲ್ಲಿ ಈಗ ಏಳು ಸಂಪುಟಗಳನ್ನು ಮೊದಲ ಕಂತಾಗಿ ಪ್ರಕಟಿಸಿದೆ. ಕನ್ನಡ ಆಸಕ್ತರು ನಮ್ಮ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆ ಕುರಿತಂತೆ ಸಮಗ್ರ ಅರಿವನ್ನು ಪಡೆಯುವಂತೆ ರಚಿತವಾಗಿರುತ್ತವೆ. ಇಂಥದೊಂದು ಯೋಜನೆಯನ್ನು ಕೈಗೆತ್ತಿಕೊಂಡು ಅದರ ಮೊದಲ ಹಂತದ ಕಾರ್ಯ ಮುಗಿಸಿ, ಮುಂದಿನ ಹಂತದಲ್ಲಿಯೂ ಈ ಬಗೆಯ ಇನ್ನಷ್ಟು ಗ್ರಂಥಗಳ ಪ್ರಕಟಣೆಯ ಯೋಜನೆಯನ್ನು ಕೈಗೆತ್ತಿಕೊಂಡು ಉತ್ಸಾಹದಿಂದ ಮುಂದುವರೆಸುತ್ತಿರುವ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರು ಮತ್ತು ಯೋಜನೆಯ ಸಂಚಾಲಕರೂ ಸಂಪುಟದ ಪ್ರಧಾನ ಸಂಪಾದಕರಾದ ಡಾ. ಎಚ್.ಟಿ. ಪೋತೆ ಅವರನ್ನೂ ಕುಲಪತಿ ಪ್ರೊ. ಈ.ಟಿ. ಪುಟ್ಟಯ್ಯ ಅವರನ್ನೂ ಮತ್ತು ಕುಲಸಚಿವ ಪ್ರೊ. ಎಸ್.ಎಲ್. ಹಿರೇಮಠ ಅವರನ್ನೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ವೀರಣ್ಣ ದಂಡೆಯವರನ್ನು ನಾನು ಕರ್ನಾಟಕ ಸರ್ಕಾರದ ಪರವಾಗಿ ಅಭಿನಂದಿಸುತ್ತೇನೆ.

ಕನ್ನಡ ಸಾಹಿತ್ಯದ ಎರಡು ಕಣ್ಣುಗಳೆಂದರೆ ವಚನ ದಾಸ ಪ್ರಕಾರಗಳು. ಅದ್ದರಲ್ಲೂ ವಚನಕಾರರ ಸಮಾಜಮುಖಿ ಚಿಂತನೆ ಜಗತ್ತಿನ ಇತಿಹಾಸದಲ್ಲಿ ಅವಿಸ್ಮರಣೀಯವಾದುದು. ಬುದ್ಧನ ತರುವಾಯ ಸಾಮಾನ್ಯರ ಕೊರಳಾಗಿ ಹೊರಹೊಮ್ಮಿದ ಸಾಹಿತ್ಯ ಪ್ರಕಾರವಿದು. ಈ ಚಿಂತನೆಯನ್ನು ವಿಮರ್ಶಿಸಿ ಬರೆದ ನಾಡಿನ ವಿದ್ವಾಂಸರ ಲೇಖನಗಳನ್ನು ಒಂದೆಡೆ ಸಂಕಲಿಸಿ ಬೃಹತ್ ಗ್ರಂಥರೂಪದಲ್ಲಿ ಪ್ರಕಟಿಸುತ್ತಿರುವುದು ಶ್ಲಾಘನೀಯವಾಗಿದೆ.

ಸಹಿ/–

ರಮೇಶ್ ಬಿ. ಝುಳಕಿ

ಕಾರ್ಯದರ್ಶಿ

ಮನು ಬಳಿಗಾರ್
ಕ.ಆ.ಸೇ
ನಿರ್ದೇಶಕರು,
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕರ್ನಾಟಕ ಸರಕಾರ

ಕನ್ನಡ ಭವನ,
ಜೆ.ಸಿ. ರಸ್ತೆ,
ಬೆಂಗಳೂರು-೫೬೦ ೦೦೨
ದಿನಾಂಕ: ೧೫-೨-೨೦೧೧

ನಲ್ನುಡಿ

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯೇ ಕುತೂಹಲಕರ ಮತ್ತು ವೈವಿಧ್ಯಮಯವಾದುದು. ಹತ್ತನೆಯ ಶತಮಾನ ಮತ್ತು ಅದರ ಪೂರ್ವಯುಗವನ್ನು ವೀರಯುಗ ಎಂದು ವಿದ್ವಾಂಸರು ಕರೆದಿರುವುದಲ್ಲದೆ, ಆ ಕಾಲಕ್ಕೆ ಬಂದ ಕೃತಿಗಳೆಲ್ಲವೂ ಕ್ಷಾತ್ರಧರ್ಮ ಮತ್ತು ಅದರ ಮೌಲ್ಯಗಳನ್ನೇ ಹೇಳುವಂಥವಾಗಿರುತ್ತವೆ. ಪಂಪ ಬರೆದದ್ದು 'ವಿಕ್ರಮಾರ್ಜುನ ವಿಜಯ' ವಾದರೆ ರನ್ನ ಬರೆದದ್ದು 'ಸಾಹಸಭೀಮವಿಜಯ'. ಇದೆಲ್ಲಕ್ಕಿಂತ ಪೂರ್ವದಲ್ಲಿ ಕವಿರಾಜ ಮಾರ್ಗಕಾರನು ಕನ್ನಡ ನಾಡಿನ ಜನಗಳನ್ನು ಕಲಿಗಳೆಂದೂ, ಕವಿಗಳೆಂದೂ ಮುಕ್ತಕಂಠದಿಂದ ಪ್ರಶಂಸಿಸುತ್ತಾನೆ. ಕನ್ನಡ ನಾಡಿನ ಸಾಂಸ್ಕೃತಿಕ ಇತಿಹಾಸವನ್ನು ಕುರಿತು ಆರಂಭ ಕಾಲಕ್ಕೆ ಎಲ್ಲ ಕವಿಗಳು ಹೇಳುವ ಮಾತಿನಲ್ಲಿ ಆಶ್ಚರ್ಯಕರ, ಕುತೂಹಲಕರ ಹೊಂದಾಣಿಕೆ ಇದೆ. ಕವಿರಾಜ ಮಾರ್ಗಕಾರನು ಕನ್ನಡ ಜನರು ಕವಿಗಳೂ ಕಲಿಗಳೂ ಆಗಿದ್ದರೆಂದರೆ, ಪಂಪ ತಾನೇ ಸತ್ಕವಿ, ಕಲಿ ಎಂದು ಹೇಳಿಕೊಳ್ಳುತ್ತಾನೆ. ಪಂಪ, ರನ್ನರ ಕೃತಿಗಳಲ್ಲಿ ಬರುವ ಸ್ತ್ರೀಪಾತ್ರಗಳು ಕೂಡ ಪುರುಷ ಪರಾಕ್ರಮವನ್ನು ಪುರಸ್ಕರಿಸಿ ಮಾತನಾಡುತ್ತವೆ. ಇದು ಕನ್ನಡನಾಡಿನ ಹತ್ತನೆ ಶತಮಾನ ಮತ್ತು ಅದರ ಪೂರ್ವ ವಿವರವಾದರೆ ಹನ್ನೆರಡನೆಯ ಶತಮಾನದ ಸಂಗತಿಯೇ ಬೇರೆ. ಅರಮನೆಯಲ್ಲಿ ಬೆಳೆದ ಸಾಹಿತ್ಯ ಸಾಮಾನ್ಯರ ನಡುವೆ ಬಂದು ಚಳವಳಿಯ ರೂಪ ಪಡೆದುಕೊಂಡಿತು. ಪಾಂಡಿತ್ಯಪೂರ್ಣ ಸಾಹಿತ್ಯಸೃಷ್ಟಿಗಿಂತ ಜನಸಾಮಾನ್ಯರಿಗೆ ಅರ್ಥವಾಗುವ ಸಂಗತಿ ಮುಖ್ಯವೆಂಬ ಧೋರಣೆಯ ರಚನಕಾರರ ಪ್ರಭುತ್ವವನ್ನೇ ಪ್ರತಿಭಟಿಸಿ ಹೊರಬಂದದ್ದು ಆಶ್ಚರ್ಯಕರ ಬೆಳವಣಿಗೆ, ಬಸವಣ್ಣ, ಅಕ್ಕಮಹಾದೇವಿ, ಹರಿಹರ, ರಾಘವಾಂಕ ಇವರೆಲ್ಲ ಅರಸನ ವೈಭವದ ಆಸ್ಥಾನವನ್ನು ಬಿಟ್ಟು ಬಂದವರೆ. ತಮ್ಮ ಸಾಹಿತ್ಯ ಕೃತಿಗಳಲ್ಲಿ ಮಾನವೀಯತೆ, ಸರ್ವಸಮಾನತೆ, ಭಕ್ತಿ ಮತ್ತು ಅಧ್ಯಾತ್ಮವನ್ನು ಸಂಸ್ಥಾಪಿಸಿದವರು; ಅದಕ್ಕನುಗುಣವಾದ ಕಥೆ ಹಾಗೂ ಪಾತ್ರಗಳನ್ನೇ ಸೃಷ್ಟಿಸಿದರು.

ವಚನಕಾರರ ಕಾಲಕ್ಕೆ ಸಾಮಾನ್ಯ ಜನರ ನಡುವೆ ಬಂದ ಸಾಹಿತ್ಯವು ದಾಸವರಣ್ಯರ ಕಾಲಕ್ಕೆ ಜನಸಮೂಹದ ಅಂತರಂಗವನ್ನು ರಾಗ, ತಾಳಗಳ ಮುಖೇನ ಕಾಂತಾಸಮ್ಮಿತ ಭಾವದ ಮೂಲಕವೇ ಮುಟ್ಟತೊಡಗಿತು. 'ವೀರನಾರಾಯಣನೇ ಕವಿ, ಲಿಪಿಕಾರ

ಕುವರವ್ಯಾಸ, ಕೇಳುವ ಸೂರಿಗಳೆ ಜಂಗಮ ಜನಾರ್ಧನರು' ಎನ್ನುತ್ತಾನೆ ಕುಮಾರವ್ಯಾಸ. ಹೀಗೆ ಅರಮನೆಯಿಂದ ಜನಸಾಮಾನ್ಯರ ಕಡೆಗೆ ಪ್ರವಹಿಸಿದ ಕನ್ನಡ ಸಾಹಿತ್ಯ ಪರಂಪರೆಯೇ ವೈವಿಧ್ಯಮಯವಾದುದು. ಆಧುನಿಕ ಕನ್ನಡ ಸಂದರ್ಭದ ಕವಿ, ಕಥೆಗಾರ, ಕಾದಂಬರಿಕಾರರ ಪ್ರತಿಭಾನ್ವಿತ ಬರವಣಿಗೆಯಂತೂ ಸಮಸ್ತ ಕನ್ನಡಿಗರ ಅರಿವಿಗೆ ಬಂದಿರುವಂಥದ್ದೆ. ಹೀಗೆ ಒಂದೂವರೆ ಸಾವಿರ ವರ್ಷಗಳ ಸ್ಪಷ್ಟ ಮತ್ತು ಸಮಗ್ರ ಇತಿಹಾಸವಿರುವ ಕನ್ನಡ ಭಾಷಾ ಶ್ರೀಮಂತಿಕೆಗೆ ೨೦೦೮ರಲ್ಲಿ ಭಾರತ ಸರ್ಕಾರ ಶಾಸ್ತ್ರೀಯ ಸ್ಥಾನಮಾನ ನೀಡಿತು. ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರವೂ ಕೂಡ ಕನ್ನಡನಾಡಿನ ಎಲ್ಲ ವಿಶ್ವವಿದ್ಯಾಲಯಗಳ ಕನ್ನಡ ವಿಭಾಗಗಳಿಗೆ ತಲಾ ಎರಡು ಕೋಟಿ ರೂಪಾಯಿಗಳ ಅನುದಾನವನ್ನು ಬಿಡುಗಡೆ ಮಾಡಿತು. ಈಗ ಎಲ್ಲ ವಿಶ್ವವಿದ್ಯಾಲಯಗಳು ಕನ್ನಡ ಸಾಹಿತ್ಯ, ಸಂಸ್ಕೃತಿ ತತ್ಸಂಬಂಧದ ಸಂಶೋಧನೆಯ ಯೋಜನೆಗಳಲ್ಲಿ ತೊಡಗಿಕೊಂಡಿವೆ. ಈ ನಿಟ್ಟಿನಲ್ಲಿ ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು **ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆ**ಯನ್ನು ಕೈಗೆತ್ತಿಕೊಂಡು ಅದರ ಮೊದಲ ಹಂತದ ಏಳು ಬೃಹತ್ ಸಂಪುಟಗಳನ್ನು ಬಿಡುಗಡೆ ಮಾಡುತ್ತಿದೆ. ಈ ಯೋಜನೆಯ ಯಶಸ್ಸಿಗೆ ಕಾರಣರಾದ ಗುಲಬರ್ಗಾ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಈ.ಟಿ. ಪುಟ್ಟಯ್ಯ ಅವರಿಗೆ, ಕುಲಸಚಿವರಾದ ಪ್ರೊ. ಎಸ್.ಎಲ್. ಹಿರೇಮಠ ಅವರಿಗೆ ಪ್ರಾಧ್ಯಾಪಕರೂ ಹಾಗೂ ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರಾದ ಡಾ. ವೀರಣ್ಣ ದಂಡೆ ಅವರಿಗೆ, ಈ ಯೋಜನೆಯ ಸಂಚಾಲಕರೂ ಸಂಪುಟದ ಪ್ರಧಾನ ಸಂಪಾದಕರಾದ ಡಾ. ಎಚ್.ಟಿ. ಪೋತೆ ಅವರಿಗೆ, ಸಂಪುಟದ ಸಂಪಾದಕರಾದ ಪ್ರೊ. ವಿಜಯಶ್ರೀ ಸಬರದ ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪರವಾಗಿ ನಾನು ಹೃತ್ಪೂರ್ವಕವಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಸಹಿ/-

ಮನು ಬಳಿಗಾರ್

ನಿರ್ದೇಶಕರು

ಪ್ರೊ. ಈ. ಟಿ. ಪುಟ್ಟಯ್ಯ
ಕುಲಪತಿಗಳು

ಕಾರ್ಯಸೌಧ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ

ಕುಲಪತಿಗಳ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯವು ಹೈದ್ರಾಬಾದ ಕರ್ನಾಟಕ ಪ್ರದೇಶದ ಹೆಮ್ಮೆಯ ವಿದ್ಯಾಸಂಸ್ಥೆಯಾಗಿದೆ. ೧೯೭೦-೭೧ರಲ್ಲಿ ಇದು ಕರ್ನಾಟಕ ವಿಶ್ವವಿದ್ಯಾಲಯದ ಒಂದು ಸ್ನಾತಕೋತ್ತರ ಕೇಂದ್ರವಾಗಿ ಮುಂದೆ ೧೯೮೦ರಲ್ಲಿ ಸ್ವತಂತ್ರ ವಿಶ್ವವಿದ್ಯಾಲಯವಾಗಿ ಮಾರ್ಪಟ್ಟಿತು. ಕಳೆದ ಮೂವತ್ತು ವರ್ಷಗಳಿಂದ ಈ ವಿಶ್ವವಿದ್ಯಾಲಯವು ಬೋಧನೆ, ಸಂಶೋಧನೆ ಹಾಗೂ ಪ್ರಕಟನೆಗಳ ಮೂಲಕ ಜನಮನ್ನಣೆಯನ್ನು ಗಳಿಸಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ, ಬೋಧನೆ ಮತ್ತು ಸಂಶೋಧನೆ ಇವು ಆಕರಗೊಳ್ಳುವುದು ಪ್ರಕಟನೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಸಾರಾಂಗವು ಅನೇಕ ಮೌಲಿಕವಾದ ಪ್ರಕಟಣೆಗಳನ್ನು ಪ್ರಕಟಿಸಿದೆ. ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರುಗಳು ಇದುವರೆಗೆ ನಾಲ್ಕು ನೂರಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದುದು ತುಂಬ ಹೆಮ್ಮೆಯ ಸಂಗತಿಯಾಗಿದೆ. ಕನ್ನಡ ಅಧ್ಯಯನ ಸಂಸ್ಥೆಯ ಸಂಶೋಧನ ವಿದ್ಯಾರ್ಥಿಗಳು ಬರೆದ ಸಂಶೋಧನ ಲೇಖನಗಳ ಸಂಕಲನ 'ಜ್ಞಾನ ಗಂಗಾ' ಸಂಚಿಕೆಗಳಂತೂ ತುಂಬ ಜನಪ್ರಿಯ ವಾಗಿವೆ. ಒಟ್ಟಿನಲ್ಲಿ ಕನ್ನಡ ಅಧ್ಯಯನ ಸಂಸ್ಥೆಯು ಅಪೂರ್ವ ಪ್ರಕಟನೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆದಿದೆ.

ಕರ್ನಾಟಕ ಸರಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕನ್ನಡ ಭಾಷೆ, ಸಂಸ್ಕೃತಿ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ಉನ್ನತ ಸಂಶೋಧನೆ ನಡೆಸಲೆಂಬ ಧ್ಯೇಯವನ್ನಿರಿಸಿಕೊಂಡು ನಮ್ಮ ವಿಶ್ವವಿದ್ಯಾಲಯಕ್ಕೆ ವಿಶೇಷ ಅನುದಾನವನ್ನು ನೀಡಿದೆ. ಕನ್ನಡ ಭಾಷಾಭಿವೃದ್ಧಿ ಯೋಜನೆಯಡಿ ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯವು ನೀಡಿದ ಅನುದಾನ ಪಡೆದು ನಮ್ಮ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯ ಪ್ರಾಧ್ಯಾಪಕರು, ಬಸವಾದಿ ಶರಣರ ಸ್ಮಾರಕಗಳು, ತತ್ವಪದಕಾರರ ಸ್ಮಾರಕಗಳು, ಕೀರ್ತನಕಾರರ ಸ್ಮಾರಕಗಳು, ಸಾಂಸ್ಕೃತಿಕ ಪದಕೋಶ, ಹೈದ್ರಾಬಾದ ಕರ್ನಾಟಕದ ಸಾಹಿತ್ಯ ಚರಿತ್ರೆ, ಆಧುನಿಕ ನಾಟಕಗಳು, ಹಸ್ತಪ್ರತಿಗಳ ಸಂರಕ್ಷಣೆ ಹಾಗೂ ಪ್ರಕಟನೆ, ಶರಣಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟನೆ ಈ ಮುಂತಾದ ಮಹತ್ವದ ಸಂಶೋಧನಾ ಯೋಜನೆಗಳನ್ನು ಕೈಗೆತ್ತಿಕೊಂಡು ಅಧ್ಯಯನ ನಡೆಸುತ್ತಿರುವರು. ಶರಣ

ಸಾಹಿತ್ಯ ವಿಮರ್ಶಾಸಂಪುಟಗಳ ಪ್ರಕಟನಾ ಯೋಜನೆಯೂ ಒಂದು. ಈ ಯೋಜನೆಗೆ ಸಂಬಂಧಿಸಿದಂತೆ ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಶೂನ್ಯಸಂಪಾದನೆ, ವಚನಕಾವ್ಯಚಿಂತನೆ, ಜಾಗತಿಕ ಚಿಂತಕರು ಮತ್ತು ಬಸವಣ್ಣ, ಸಿದ್ಧರಾಮ, ವಚನಕಾರ್ತಿಯರು, ಇತರವಚನಕಾರರು, ದಲಿತ ವಚನಕಾರರು ಹಾಗೂ ವಚನ: ಜಾನಪದ ಹೀಗೆ ಒಟ್ಟು ಹನ್ನೆರಡು ಸಂಪುಟಗಳಲ್ಲಿ ಈಗ ಏಳು ಸಂಪುಟಗಳನ್ನು ಹೊರತರುತ್ತಿರುವುದು ಹರ್ಷದ ಸಂಗತಿಯಾಗಿದೆ.

ಪ್ರಸ್ತುತ 'ಅಕ್ಕಮಹಾದೇವಿ' ಸಂಪುಟವನ್ನು ಡಾ. ವಿಜಯಶ್ರೀ ಸಬರದ ಅವರು ವಿಶೇಷ ಶ್ರಮವಹಿಸಿ ಸಿದ್ಧಪಡಿಸಿರವರು. ಇಲ್ಲಿನ ಲೇಖನಗಳು ತುಂಬ ಮೌಲಿಕವಾಗಿವೆ, ಅಕ್ಕಮಹಾದೇವಿಯ ಜೀವನ ಹಾಗೂ ಸಾಧನೆ, ಸಿದ್ಧಿಗಳನ್ನು ಜನಸಾಮಾನ್ಯರಿಗೆ ತಿಳಿಸುವಲ್ಲಿ ಇಲ್ಲಿನ ಲೇಖನಗಳು ಯಶಸ್ವಿಯಾಗಿವೆ. ಒಟ್ಟಿನಲ್ಲಿ ಇಲ್ಲಿನ ಲೇಖನಗಳೆಲ್ಲವೂ ಶತಮಾನದ ವಿಮರ್ಶಾಚಿಂತನೆಯನ್ನು ಸಾದರಪಡಿಸುತ್ತಲೇ ಹೊಸ ಆವಿಷ್ಕಾರ ಮತ್ತು ಚಿಂತನೆಗಳಿಗೆ ಉತ್ತಮ ದಾರಿಯನ್ನು ನಿರ್ಮಿಸುವಲ್ಲಿ ಯಶಸ್ವಿಯಾಗಿವೆ. ಈ ಸಂಪುಟವನ್ನು ತುಂಬ ಶ್ರಮವಹಿಸಿ ಸಿದ್ಧಪಡಿಸಿದ ಸಂಪಾದಕರಾದ ಡಾ. ವಿಜಯಶ್ರೀ ಸಬರದ ಅವರಿಗೂ, ಯೋಜನೆಯ ಸಂಚಾಲಕರು ಹಾಗೂ ಸಂಪುಟದ ಪ್ರಧಾನ ಸಂಪಾದಕರಾದ ಡಾ. ಎಚ್.ಟಿ. ಪೋತೆ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ರಮೇಶ್ ಬಿ. ಝುಳಕಿ ಅವರಿಗೂ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಮನು ಬಳಿಗಾರ್ ಅವರಿಗೂ ಅಲ್ಲದೆ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಪ್ರಧಾನ ಸಂಪಾದಕರ ನುಡಿ

ಮಹಾದೇವಿಯಕ್ಕನವರು ಬರೀ ಹೆಣ್ಣು ಲೋಕದ ಧ್ವನಿಯಲ್ಲ, ಅವರು 'ಅರ್ಧನಾರೀಶ್ವರ' ನಂತಿದ್ದಾರೆ. ಮಹಿಳಾ ಸಮಾಜಕ್ಕೆ ತಲೆ ಎತ್ತಿ ನಿಲ್ಲಲು ಬೇಕಾಗಬಲ್ಲ ಸಾಮರ್ಥ್ಯದ ಪರಿಕರಗಳು ಅಕ್ಕನಲ್ಲಿ ದೊರಕುವಂತೆ, ಪುರುಷ ಸಮಾಜವು ಸದಾಚಾರ–ಸದ್ವಿಚಾರದಿಂದ ಬದುಕುವುದಕ್ಕೆ ಬೇಕಾದ ಶಕ್ತಿಯ ಕಿರಣಗಳು ಅಲ್ಲಿ ಪ್ರಾಪ್ತವಾಗುತ್ತವೆ ಸ್ತ್ರೀಯಾಗಿ ಅಕ್ಕನವರು ಅನಾಚಾರಿಯಾದ ಪತಿಯನ್ನು ತೊರೆಯುವುದು ಒಟ್ಟು ಮಹಿಳಾ ಲೋಕಕ್ಕೊಂದು ಕಿವಿ ಮಾತು ಆಗಿರುವಂತೆ, ಅನಾಚಾರ ಅಧರ್ಮಿಯಾದ ಪ್ರಭುವನ್ನು ತೊರೆಯಬೇಕೆಂಬ ಸಂದೇಶವು ಅಕ್ಕನ ಜೀವನ ನಿಲುವಿನಲ್ಲಿ ಪತಿತ್ವ ನಿರಾಕರಣೆಯ ಸಂದರ್ಭದಲ್ಲಿಯೇ ಅಭಿವ್ಯಕ್ತವಾಗುತ್ತದೆ. ಅದು ಬರೀ ಸ್ತ್ರೀಯರಿಗಷ್ಟೇ ಅಲ್ಲ ಪುರುಷರಿಗೂ ಬೇಕಾಗುವಂತಹದ್ದಾಗಿದೆ. ಹೀಗೆ ಅಕ್ಕನವರು ಅಂದಿನ ಕಾಲ ಸಂದರ್ಭದಲ್ಲಿ ಪುರುಷರಿಗೆ ಸರಿ–ಮಿಗಿಲಾಗಿ ನಿಂತುಕೊಳ್ಳತ್ತ : ವಿಶ್ವ ಮಹಿಳಾ ಲೋಕದ ಪ್ರಥಮ ಧ್ವನಿಯಾಗಿ ಸಮಾಜದ ವೈರುಧ್ಯಗಳ ಬಗೆಗೆ ಪ್ರತಿಭಟಿಸಿದರು.

ಕನ್ನಡನಾಡಿನ ಹನ್ನೆರಡನೆಯ ಶತಮಾನದಲ್ಲಿ ಸಾಂಪ್ರದಾಯಿಕತೆಯ ಹಾಸು–ಹೊದಿಕೆಯೇ ಇದ್ದಿತು 'ಮಹಿಳೆಯ ದೃಷ್ಟಿಯಲ್ಲಂತೂ ಯಾವ ಧರ್ಮ–ಯಾವ ಮಹಾಪುರುಷ, ಯಾವುದೇ ತತ್ತ್ವ–ಸಿದ್ಧಾಂತಕ್ಕೆ ಉದಾರ ಭಾವನೆಯಿರಲಿಲ್ಲ. ಶೂದ್ರರಂತೆ ಅಸ್ಪೃಶ್ಯರಂತೆ ಮಹಿಳೆ ಸಮಾಜದ ಅತ್ಯಂತ ಕೆಳಸ್ತರದಲ್ಲಿಯೇ ಇದ್ದಳು. ಪುರುಷನ ಶೋಷಣೆಯ ಕಬಂಧ ಬಾಹುವಿನಲ್ಲಿಯೇ ಅವಳು ನಲುಗಿ ಹೋಗಿದ್ದಳು. ಇಂತಹ ದುರ್ಧರ ಸಂದರ್ಭದಲ್ಲಿ ಬಸವಾದಿಶರಣರ ಅವತರಣವು ದೋಷಿತದ ಮಾನ–ನಿಮ್ನ–ತಳದವರಿಗೆಲ್ಲ ಹೊಸಗಾಳಿ ಉಸಿರಾಡಿಸುವಂತೆ ಮಾಡಿ, ಅವರಲ್ಲಿ ಜೀವ ಚೈತನ್ಯವನ್ನು ತುಂಬಿತು. ಮಹಾದೇವಿ ಅಕ್ಕನಂತಹ ವ್ಯಕ್ತಿಶಕ್ತಿಗಳು ಈ ಕ್ರಿಯೆ ವಾಚಿಕೆಗೊಂದು ಸಾಕಾರ ರೋಷದಂತೆ ಕಾಣುತ್ತದೆ.

ಪ್ರಭುದೇವರಂತಹ ಶಕ್ತಿಗಳು ಮಹಾದೇವಿ ಅಕ್ಕನವರ ಮಹೋನ್ನತ ವ್ಯಕ್ತಿತ್ವಕ್ಕೆ ನಮೊ ನಮೊ ಎನ್ನುತ್ತಾರೆ. ಮಹಾದೇವಿ ಅಕ್ಕನವರ ಪ್ರತಿಭಟನಾತ್ಮಕ ಬದುಕು ಅಂದಿನ ಕಾಲದ ಹತ್ತು–ಹಲವಾರು ಸ್ತ್ರೀಯರಿಗೆ ಪ್ರೇರಣೆ ನೀಡಿತು. ಆದುದರಿಂದಲೇ ಅಂದು ಶರಣರೊಂದಿಗೆ ಹಲವಾರು ಶರಣೆಯರು ವಚನಗೈದರಲ್ಲದೆ: ಅನುಭಾವ ಮಂಟಪದಲ್ಲಿನ ಅನುಭಾವಗೋಷ್ಠಿಗೆ ಪಾಲುದಾರರಾದರು.

ಅಕ್ಕನ ವಚನಗಳು ಭಾವಗೀತಾತ್ಮಕ ಶೈಲಿಯಲ್ಲಿದೆಯಾದರೂ ತಾತ್ವಿಕತೆಯ ಸೀಮೆಯನ್ನು ಮೀರಿ ನಿಲ್ಲುವುದಿಲ್ಲ, ಸರಳ–ಸುಂದರ–ಸುಲಲಿತವಾಗಿ ತತ್ತ್ವವನ್ನು ಹೇಳುವುದು ಅಕ್ಕನವರ ವಚನಗಳ ಪರಿಯಾಗಿದೆ. ವೀರ ವಿರಾಗಿಣಿಯಾಗಿ ಭಕ್ತಿಯ ಖಣಿಯಾಗಿ ಬದುಕಿದ ಅಕ್ಕನವರು

ವೈಚಾರಿಕ ಪ್ರಖರತೆಯಿಂದ ವಿಮುಖರಾದವರಲ್ಲ, ಅಕ್ಕನ ಸಾಧನೆ ಸಿದ್ಧಿಗಳು ಆವರೆಗೆ ಇದ್ದ ಹೆಣ್ಣಿನ ಬಗೆಗಿನ ಸಮಾಜದ ದೃಷ್ಟಿಕೋನವನ್ನೇ ಪಲ್ಲಟವಾಗಿಸಿತು. ಸಿದ್ಧರಾಮ ಶಿವಯೋಗಿ ಹೇಳುವ 'ಹೆಣ್ಣು ಹೆಣ್ಣಲ್ಲ, ಹೆಣ್ಣು ರಾಕ್ಷಾಸಿಯಲ್ಲ, ಹೆಣ್ಣು ಸಾಕ್ಷಾತ್ ಕಪಿಲ ಸಿದ್ಧಮಲ್ಲಿಕಾರ್ಜುನ' ಎಂಬುದು ಒಟ್ಟು ಲೋಕ ತಳೆದ ನಿಲುವು.

ಈ ಸಂಪುಟದಲ್ಲಿ ಮಹಾದೇವಿ ಅಕ್ಕನ ಜೀವನ ಸಿದ್ಧಿ–ಸಾಹಿತ್ಯ ಕುರಿತಂತೆ ವಿದ್ವಾಂಸರು ತಮ್ಮ ಲೇಖನಗಳಲ್ಲಿ ಸಾದರಪೂರ್ವಕವಾಗಿ ವಿವರಿಸಿರುವುದು ವಿನೂತನವಾದುದಾಗಿದೆ. ಪರಿಶ್ರಮದಿಂದ ಹಾಗೂ ಆಳವಾದ ಅಧ್ಯಯನದಿಂದ ರೂಪುಗೊಂಡಂಥವಾಗಿವೆ. ಇಂಥ ಮೌಲಿಕವಾದ ಲೇಖನಗಳನ್ನು ನಾಡಿನ ವಿದ್ವಾಂಸರಿಂದ ಸಂಗ್ರಹಿಸಿ, ಸಂಪಾದಸಿಕೊಟ್ಟ ಡಾ. ವಿಜಯಶ್ರೀ ಸಬರದ ಅವರು ಅಭಿನಂದನೆಗೆ ಪಾತ್ರರಾಗಿದ್ದಾರೆ. ಅವರು ಇಲ್ಲಿ ಅಕ್ಕನಿಗೆ ಸಂಬಂಧಿಸಿದ ಆ ಕುರಿತು ವಿಶೇಷ ಅಧ್ಯಯನ ನಡೆಸಿ ಬರೆದ ಪ್ರಸ್ತಾವನೆ ವಿದ್ವಾಂಸರ ಗಮನ ಸೆಳೆಯುತ್ತದೆ. ಇದರಿಂದಾಗಿ ಪ್ರಸ್ತುತ ಸಂಪುಟಕ್ಕೆ ಒಂದು ವಿಧದ ಸಮಗ್ರತೆಯುಂಟಾಗಿದೆ. ಇಲ್ಲಿನ ವಿಮರ್ಶಾ ಹಾಗೂ ಸಂಶೋಧನ ಲೇಖನಗಳು ಅಕ್ಕಮಹಾದೇವಿಯ ಬದುಕು ಹಾಗೂ ಬರಹದ ಮೇಲೆ ಹೊಸ ಬೆಳಕು ಚೆಲ್ಲುವಲ್ಲಿ ಯಶಸ್ವಿಯಾಗಿವೆ.

ಡಾ. ಎಚ್.ಟಿ. ಪೋತೆ
ಪ್ರಧಾನ ಸಂಪಾದಕರು

ಸಂಪಾದಕರ ನುಡಿ

ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಭಾಷಾಭಿವೃದ್ಧಿ ಯೋಜನೆಗೆ ಸಂಬಂಧಿಸಿದಂತೆ ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆಯಲ್ಲಿ ಈ ಸಂಪುಟ ಪ್ರಕಟವಾಗುತ್ತಲಿದೆ. ಈ ಮೂರು ದಶಕಗಳಿಂದ ಅಕ್ಕನನ್ನು ಕುರಿತು ನನ್ನ ಮಿತಿಯಲ್ಲಿ ನಾನು ಅಧ್ಯಯನ ಮಾಡಿದ್ದೇನೆ, ಕೆಲವು ಕೃತಿಗಳನ್ನೂ ರಚಿಸಿದ್ದೇನೆ. 'ಅಕ್ಕ' ಎನ್ನುವುದು ಕೇವಲ ಹನ್ನೆರಡನೇ ಶತಮಾನದ ಶರಣೆಯ ಹೆಸರು ಮಾತ್ರವಲ್ಲ, ಅದು ಸಮಕಾಲೀನ ಸಂದರ್ಭದ ಸ್ತ್ರೀವಾದದ ಮುಂದುವರಿಕೆಯೂ ಹೌದು. 'ಅಕ್ಕ' ಬತ್ತದ ಒರತೆ, ಆಕೆಯ ವಚನಗಳನ್ನು ಕುರಿತು ಚಿಂತಿಸಿದಷ್ಟೂ ಹೊಸ ಹೊಸ ಅರ್ಥಗಳು ಬಿಚ್ಚಿಕೊಳ್ಳುತ್ತವೆ. ಇಂತಹ ಚಿಂತನೆಯ ಮೂವತ್ತೊಂದು ಲೇಖನಗಳು ಈ ಸಂಪುಟದಲ್ಲಿವೆ.

ನನ್ನ ಮೇಲೆ ವಿಶ್ವಾಸವಿಟ್ಟು ಇಂತಹ ಸಂಪುಟದ ಸಂಪಾದನೆಯ ಜವಾಬ್ದಾರಿಯನ್ನು ವಹಿಸಿದ ಈ ಯೋಜನೆಯ ಪ್ರಧಾನ ಸಂಶೋಧಕರಾಗಿರುವ ಡಾ. ಎಚ್.ಟಿ. ಪೋತೆ ಯವರಿಗೆ ಕೃತಜ್ಞತೆಗಳು. ಅವರು ಈ ಅವಕಾಶ ನೀಡದಿದ್ದರೆ, ನಾನು ಅಕ್ಕನನ್ನು ಕುರಿತು ಮತ್ತೆ ಇಷ್ಟು ದೀರ್ಘವಾಗಿ ಓದಲಾಗುತ್ತಿರಲಿಲ್ಲ. ಈ ಸಂಪುಟ ಸಿದ್ಧಪಡಿಸುತ್ತಲ್ಲಿ ನನಗೆ ನಿಜಕ್ಕೂ ಖುಷಿಯಾಗಿದೆ. ಅಕ್ಕನ ಬಗೆಗೆ ಕುತೂಹಲ ಹೆಚ್ಚಾಗಿದೆ. ಈ ಸಂಪುಟದ ಮೂವತ್ತೊಂದು ಲೇಖನಗಳನ್ನು ವಿವರವಾಗಿ ಓದಿ ಪ್ರಸ್ತಾವನೆಯಲ್ಲಿ ಚರ್ಚಿಸಿದ್ದೇನೆ. ಓದುಗರ ಹಾಗೂ ವಿಮರ್ಶಕರ ರಚನಾತ್ಮಕ ಸಲಹೆಗಳಿಗೆ ಸ್ವಾಗತವಿದೆ.

ಡಾ. ವಿಜಯಶ್ರೀ ಸಬರದ
ಸಂಪಾದಕರು

ಪ್ರಸ್ತಾವನೆ

ಅಕ್ಕಮಹಾದೇವಿ – ವಚನ ಚಳವಳಿಯಲ್ಲಿ ಕಾಣಿಸಿಕೊಳ್ಳುವ ದೊಡ್ಡ ಹೆಸರು. ಕನ್ನಡದ ಮೊದಲ ಮಹತ್ವದ ಕವಯತ್ರಿ. ಇಹ ಮತ್ತು ಪರಗಳ ಬಗೆಗೆ ಆಧ್ಯಾತ್ಮ ಮತ್ತು ಅನುಭಾವ ಕುರಿತು ಹೊಸ ಸಾಧ್ಯತೆಗಳನ್ನು ಕಂಡುಕೊಂಡ ಶರಣೆ. ಎಲ್ಲರೂ ಮೂರ್ತದಿಂದ, ಅಮೂರ್ತದೆಡೆಗೆ ಸಾಗಿದರೆ, ಲೌಕಿಕದಿಂದ ಅಲೌಕಿಕದೆಡೆಗೆ ಮುಖಮಾಡಿದರೆ; ಅಕ್ಕಮಹಾದೇವಿ ಅಮೂರ್ತದಲ್ಲಿ ಮೂರ್ತರೂಪ ಕಾಣುತ್ತಾಳೆ; ಅಲೌಕಿಕದಲ್ಲಿಯೇ ಲೌಕಿಕವನ್ನು ನೋಡುತ್ತಾಳೆ. ಹೀಗೆ ಇಹ–ಪರ, ಮೂರ್ತ–ಅಮೂರ್ತ, ಲೌಕಿಕ–ಅಲೌಕಿಕ ಇಂತಹ ಅನೇಕ ದ್ವಂದ್ವಗಳನ್ನು ಮೀರಿ ಬೆಳೆದ ಶರಣೆ ಅಕ್ಕಮಹಾದೇವಿ. ಅಕ್ಕನ ವಚನಗಳು ಕೇವಲ ಅನುಭಾವದಿಂದ ಮಾತ್ರವಲ್ಲ, ಪ್ರಸ್ತುತ ಸಂದರ್ಭದ ಆಧುನಿಕ ಕವಿಗಳಿಗೂ ಪ್ರೇರಣೆಯನ್ನು ನೀಡಿವೆ. ಹೀಗಾಗಿ ಅಕ್ಕನ ಬದುಕು–ಬರಹ ಇಂದಿಗೂ ಚರ್ಚೆಗೆ, ಹೊಸ ಚಿಂತನೆಗೆ ಕಾರಣವಾಗಿದೆ.

ಅಕ್ಕನನ್ನು ಕುರಿತಂತೆ ಈಗಾಗಲೆ ಅನೇಕ ಲೇಖನಗಳು, ಸಂಶೋಧನಾ ಕೃತಿಗಳು ಪ್ರಕಟವಾಗಿವೆ. ಪ್ರಸ್ತುತ ಕೃತಿಯ ಉದ್ದೇಶ ವಿಶಿಷ್ಟವಾಗಿದೆ. ವಚನ ಸಾಹಿತ್ಯದ ವಿಮರ್ಶೆ–ವಿಶ್ಲೇಷಣೆ ಚರ್ಚೆಗೆ ಸಂಬಂಧಿಸಿದಂತೆ ಇತ್ತೀಚಿನ ಮೂರು ದಶಕಗಳಲ್ಲಿ ಮಹತ್ವದ ಲೇಖನಗಳು ಪ್ರಕಟವಾಗಿವೆ. ಅಕ್ಕಮಹಾದೇವಿಯ ಬದುಕು–ಬರಹಕ್ಕೆ ಸಂಬಂಧಿಸಿದ ಎಲ್ಲ ಲೇಖನಗಳನ್ನು ಪ್ರಕಟಿಸಿದರೆ, ಸಾವಿರಕ್ಕೂ ಹೆಚ್ಚು ಪುಟಗಳಾಗುತ್ತವೆ. ಅಕ್ಕನನ್ನು ಕುರಿತು ಪ್ರಕಟವಾಗಿರುವ ಇದುವರೆಗಿನ ಲೇಖನಗಳಲ್ಲಿ ಕೆಲವು ಲೇಖನಗಳನ್ನು ಮಾತ್ರ ಇಲ್ಲಿ ಆಯ್ದುಕೊಳ್ಳಲಾಗಿದೆ. ಕೆಲವು ಹೊಸ ಲೇಖನಗಳನ್ನು ಬರೆಯಿಸಲಾಗಿದೆ. ಇನ್ನು ಕೆಲವು ಲೇಖನಗಳನ್ನು ಇಲ್ಲಿ ಆಯ್ಕೆ ಮಾಡಿಕೊಳ್ಳಬಹುದಾಗಿದ್ದರೂ ಪುಟಗಳ ಮಿತಿಯನ್ನು ಗಮನಿಸಿ, ನಮ್ಮ ಉದ್ದೇಶಕ್ಕನುಗುಣವಾಗುವಂತೆ ಲೇಖನಗಳನ್ನು ಆಯ್ಕೆ ಮಾಡಲಾಗಿದೆ.

ಈ ಸಂಪುಟದಲ್ಲಿ ಮೂರು ಭಾಗಿಗಳನ್ನಾಗಿ ಮಾಡಲಾಗಿದೆ. ಮೊದಲನೇ ಭಾಗದಲ್ಲಿ ಎಂಟು ಲೇಖನಗಳಿವೆ. ಎರಡನೇ ಭಾಗದಲ್ಲಿ ನಾಲ್ಕು ಲೇಖನಗಳಿವೆ. ಮೂರನೇ ಭಾಗದಲ್ಲಿ ಹತ್ತೊಂಬತ್ತು ಲೇಖನಗಳಿವೆ. ಮೊದಲನೇ ಭಾಗದಲ್ಲಿ ಅಕ್ಕನ ಜೀವನ ಹಾಗೂ ಆಕೆಯ ವ್ಯಕ್ತಿತ್ವವನ್ನು ಕಟ್ಟಿಕೊಡುವ ಸಂಶೋಧನಾತ್ಮಕ–ಲೇಖನಗಳಿವೆ. ಅದರೊಂದಿಗೆ ಜಾನಪದದಲ್ಲಿ ಶೂನ್ಯಸಂಪಾದನೆಗಳಲ್ಲಿ ಮತ್ತು ಶಿವಶರಣರ ದೃಷ್ಟಿಯಲ್ಲಿ ಅಕ್ಕ ಹೇಗೆ ಚಿತ್ರಿತಳಾಗಿದ್ದಾಳೆಂಬ ವಿಷಯವನ್ನು ಕುರಿತ ಕೆಲವು ಲೇಖನಗಳು ಇದೇ ಭಾಗದಲ್ಲಿವೆ. ಎರಡನೇ ಭಾಗದಲ್ಲಿ, ಅಕ್ಕಮಹಾದೇವಿಯನ್ನು ಇತರ ಅನುಭಾವಿ ಸಾಧಕಿಯರೊಂದಿಗೆ ಹೋಲಿಸುವ ತೌಲನಿಕ ಲೇಖನಗಳಿವೆ. ಮೂರನೇ ಭಾಗದಲ್ಲಿ ಅಕ್ಕನ ಬದುಕು–ಬರಹ ಕುರಿತಂತೆ, ವಿಮರ್ಶಾತ್ಮಕ

ಲೇಖನಗಳಿವೆ. ಒಟ್ಟು ಮೂವತ್ತೊಂದು ಲೇಖನಗಳ ಮೂಲಕ ಅಕ್ಕನ ಒಂದು ಸಮಗ್ರ ಚಿತ್ರಣವನ್ನು ಕಟ್ಟಿಕೊಡಲು ಪ್ರಯತ್ನಿಸಲಾಗಿದೆ.

ಅಕ್ಕಮಹಾದೇವಿ ಚರಿತ್ರೆಗೆ ಸಂಬಂಧಿಸಿದಂತೆ ಡಾ. ಎಂ. ಚಿದಾನಂದಮೂರ್ತಿ ಯವರು ಮಹತ್ವದ ವಿಚಾರಗಳನ್ನು ತಿಳಿಸಿದ್ದಾರೆ. ಅದು ಈ ಕೃತಿಯ ಪ್ರಾರಂಭದ ಲೇಖನವಾಗಿದೆ. ಕಸಪಯ್ಯನೇ ಕೌಶಿಕನಾಗಿದ್ದನೆಂದು ಹೇಳುವ ಡಾ. ಚಿದಾನಂದಮೂರ್ತಿ ಯವರು ಶಾಸನದ ಮೂಲಕ ಆ ವಿಷಯವನ್ನು ಸ್ಪಷ್ಟಪಡಿಸುತ್ತಾರೆ. ಕಸಪಯ್ಯನು ಕಳಚುರಿ ರಾಜ್ಯದಲ್ಲಿ ಬಲಿಷ್ಠ ನಾಗಿದ್ದ, ದುರ್ಮಂತ್ರಿಯಾಗಿದ್ದ ಅವನಿಂದ ರಾಜ್ಯಕ್ಕೆ ಕೇಡು ಒದಗಿತ್ತೆಂದು ಹೇಳುವ ಶಾಸನಾಧಾರದ ಮೂಲಕ ಅವರು ವಿಷಯಮಂಡನೆಗೆ ತೊಡಗುತ್ತಾರೆ. ಆ ಕಸಪಯ್ಯನೇ ಕೌಶಿಕನಾಗಿ–ಕಾಮುಕನಾಗಿ ಅಕ್ಕನನ್ನು ಕಾಡಿರುವ ವಿಷಯ ಅವರ ಲೇಖನದಲ್ಲಿ ಪ್ರಸ್ತಾಪ ವಾಗಿದೆ. ಡಾ. ಚಿದಾನಂದ ಮೂರ್ತಿಯವರು ಕಿನ್ನರಯ್ಯನ ಪ್ರಸಂಗವನ್ನು ಕುರಿತು ವಿವರಿಸುತ್ತ, ಅಕ್ಕನ ಅಂಕಿತದಲ್ಲಿರುವ ಅಪ್ರಕಟಿತ ಹಾಡೊಂದನ್ನು ಲೇಖನದಲ್ಲಿ ಬಳಸಿ ಕೊಂಡಿದ್ದಾರೆ. ಡಾ. ಜಿ.ಎಸ್. ಶಿವರುದ್ರಪ್ಪನವರು ಅಕ್ಕಮಹಾದೇವಿಯ ವೈಚಾರಿಕ ಬದುಕನ್ನು ಕಟ್ಟಿಕೊಟ್ಟಿದ್ದಾರೆ. ಅಕ್ಕನ ನಿಲುಗಡೆ ಕಲ್ಯಾಣವಲ್ಲ, ಅದು ಶ್ರೀಶೈಲವೆಂದು ಸ್ಪಷ್ಟಪಡಿಸಿದ್ದಾರೆ. ಅಕ್ಕ ಉಳಿದ ಶರಣರಿಗಿಂತ ಭಿನ್ನವಾಗಿ ಕಾಣಲು ಇರುವ ಕಾರಣವನ್ನು ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

ಜಿ.ಎಸ್.ಎಸ್. ಅವರಂತೆ, ಕೀರ್ತಿನಾಥ ಕುರ್ತಕೋಟಿಯವರು ಅಕ್ಕನ ವಾಸ್ತವ ಬದುಕಿನ ಬಗೆಗೆ ಚಿಂತಿಸಿದ್ದಾರೆ. ಅವಳಿಗೆ ಚೆನ್ನಮಲ್ಲಿಕಾರ್ಜುನನೊಡನಿರುವ ಪ್ರಣಯವೇ ಅವಳ ಭಕ್ತಿಯಾಗಿ ಕಾಣಿಸುತ್ತದೆ. ಜಿ.ಎಸ್.ಎಸ್ ಅವರು ಅಕ್ಕನ ಕೇಶಾಂಬರದ ಬಗೆಗೆ ಪ್ರಸ್ತಾಪಿಸುತ್ತಾ ಕರಿಯಕಂಬಳಿಯಿಂದ ಮಾಡಿದ ಉಡುಗೆಯನ್ನು ಧರಿಸಿದ್ದಳೆಂದು ಹೇಳಿದರೆ, ಕುರ್ತಕೋಟಿ ಯವರು ಅಕ್ಕನ ಭಕ್ತಿ ಉಳಿದವರಿಗಿಂತ ಭಿನ್ನವಾಗಿತ್ತೆಂದು ತಿಳಿಸಿದ್ದಾರೆ. ಈ ಮೂವರು ಹಿರಿಯ ವಿದ್ವಾಂಸರ ಲೇಖನಗಳು ಅಕ್ಕಮಹಾದೇವಿಯ ಬದುಕಿಗೆ ಸಂಬಂಧಿಸಿದಂತೆ ಮಹತ್ವದ ವಿಚಾರಗಳನ್ನು ತಿಳಿಸುತ್ತವೆ.

ಅಕ್ಕ ಆಧುನಿಕ ಕವಿಗಳಿಗೆ ಪ್ರೇರಣೆಯಾಗಿರುವಂತೆ, ಜಾನಪದರ ಮೇಲೂ ಪ್ರಭಾವ ಬೀರಿದ್ದಾಳೆ. ಅನೇಕ ಜನಪದ ಹಾಡುಗಳಲ್ಲಿ ಅಕ್ಕನ ಚಿತ್ರಣವಿದೆ. ಆ ಕುರಿತು ಪ್ರೊ. ಎಸ್.ಆರ್. ಗೌಡರ ವಿವರಿಸಿದ್ದಾರೆ. ಕೌಶಿಕ ಜೈನನಾಗಿದ್ದನೆಂದು ಈ ಜನಪದ ಹಾಡುಗಳಲ್ಲಿ ಪ್ರಸ್ತಾಪ ವಾಗಿದೆ. ಶೂನ್ಯ ಸಂಪಾದನೆಗಳಲ್ಲಿ ಚಿತ್ರಿತವಾಗಿರುವ ಅಕ್ಕಮಹಾದೇವಿಯ ಬಗೆಗೆ ಡಾ. ವಿಜಯಾ ದಬ್ಬೆ ತಮ್ಮ ಲೇಖನದಲ್ಲಿ ಕಂಡರಿಸಿದ್ದಾರೆ. ಶೂನ್ಯಸಂಪಾದನೆಗಳ ತೌಲನಿಕ ಅಧ್ಯಯನದ ಮೂಲಕ ಅಕ್ಕ ಹಾಗೂ ಕಿನ್ನರಯ್ಯನ ಪ್ರಸಂಗವನ್ನು ಡಾ. ದಬ್ಬೆಯವರು ಪ್ರಸ್ತಾಪಿಸಿದ್ದಾರೆ.

ಪ್ರಾಚೀನ ಕನ್ನಡ ಕವಿಗಳು ಅಕ್ಕಮಹಾದೇವಿಯನ್ನು ಹೇಗೆ ಚಿತ್ರಿಸಿದ್ದಾರೆಂಬುದನ್ನು ಡಾ. ಕೆ. ರವೀಂದ್ರನಾಥ ಅವರು ತೌಲನಿಕ ಅಧ್ಯಯನದಿಂದ ಕಂಡುಕೊಂಡಿದ್ದಾರೆ. ಹರಿಹರ, ಚಾಮರಸ, ಚೆನ್ನಬಸವಾಂಕ, ರಾಚಕವಿ ಹಾಗೂ ಶೂನ್ಯ ಸಂಪಾದನೆಕಾರರು ಅಕ್ಕಮಹಾದೇವಿ ಯನ್ನು ಹೇಗೆ ಕಂಡಿದ್ದಾರೆಂಬುದನ್ನು ಈ ಲೇಖನದಲ್ಲಿ ತಿಳಿಸಲಾಗಿದೆ. ಈ ಎಲ್ಲ ಕವಿಗಳಿಗಿಂತ ಹರಿಹರ ಶರಣರ ಕಾಲಕ್ಕೆ ಹೆಚ್ಚು ಹತ್ತಿರವಾದವನು. ಹೀಗಾಗಿ ಅಕ್ಕನ ಜೀವನ ಚರಿತ್ರೆಯನ್ನು ಕಟ್ಟಿಕೊಡುವಲ್ಲಿ ಉಳಿದ ಕವಿಗಳಿಗಿಂತ ಹರಿಹರ ತುಂಬ ಮುಖ್ಯವಾಗುತ್ತಾನೆ. ಈ ಎಲ್ಲ ವಿವರಗಳನ್ನು ಡಾ. ರವೀಂದ್ರನಾಥ ತಮ್ಮ ಲೇಖನದಲ್ಲಿ ಚರ್ಚಿಸಿದ್ದಾರೆ.

ಅಕ್ಕನ ಬದುಕನ್ನು ಕುರಿತು ವಿಶ್ಲೇಷಣೆ ಮಾಡಿರುವ ಡಾ. ಆರ್. ಪೂರ್ಣಿಮಾ ಅವರು, ಅಕ್ಕನನ್ನು ಆಧುನಿಕ ಸಂದರ್ಭದಲ್ಲಿಟ್ಟು ನೋಡಿದ್ದಾರೆ. ಅಕ್ಕ ಕನ್ನಡ ಸಾಹಿತ್ಯದ ಮೊದಲ ಬುದ್ಧಿ ಜೀವಿ ಹೆಣ್ಣು ಎಂದು ಹೇಳಿರುವ ಡಾ. ಪೂರ್ಣಿಮಾ ಅವರ ವಿಚಾರಗಳು, ಅಕ್ಕನನ್ನು ವರ್ತಮಾನದ ತುರ್ತಿನಲ್ಲಿಟ್ಟು ನೋಡುವ ಪ್ರಯತ್ನಗಳಾಗಿವೆ. ಚೆನ್ನಮಲ್ಲಿಕಾರ್ಜುನನೇ ಗಂಡನೆಂಬ ಭ್ರಮೆಯನ್ನು ಅಪ್ಪಿಕೊಳ್ಳುವುದು ಅವಳಿಗೆ ಅನಿವಾರ್ಯವಾಗಿತ್ತೋ ಏನೋ! ಎಂದು ಹೇಳಿರುವ ಲೇಖಕಿ ಅಕ್ಕನ ಅಂತರಂಗದ ವಿಚಾರಗಳನ್ನು ಕುರಿತು ಮುಕ್ತವಾಗಿ ಚರ್ಚಿಸಿದ್ದಾರೆ. ಅಕ್ಕನ ಹುಡುಕಾಟದಲ್ಲಿ ತೊಡಗಿದ ಡಾ. ಮೀನಾಕ್ಷಿ ಬಾಳಿಯವರು, ಅಕ್ಕ ಅನೇಕ ಪ್ರತಿಮೆಗಳಾಗಿ ಬೆಳೆದಿರುವುದನ್ನು ಗುರುತಿಸಿದ್ದಾರೆ. ಶೂನ್ಯಸಂಪಾದನೆಕಾರರಾದ ಶಿವಗಣಪ್ರಸಾದಿ, ಹಲಗೆಯಾರ್ಯ ಅವರ ರಚನೆಗಳಲ್ಲಿ ಅಕ್ಕ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿ ಕೊಂಡದ್ದನ್ನು ವಿಶ್ಲೇಷಿಸಿರುವ ಡಾ. ಮೀನಾಕ್ಷಿಯವರು ಕಿನ್ನರಿ ಬೊಮ್ಮಯ್ಯನ ಪ್ರಸಂಗ ಕುರಿತಂತೆ ತುಂಬ ಅರ್ಥಪೂರ್ಣವಾಗಿ ಚರ್ಚಿಸಿದ್ದಾರೆ. ಸ್ತ್ರೀವಾದಿ ಹಿನ್ನಲೆಯಲ್ಲಿ ಈ ಪ್ರಸಂಗವನ್ನು ಅರ್ಥೈಸುತ್ತ ಅಕ್ಕನ ಅನನ್ಯತೆಯನ್ನು ತಿಳಿಸಿದ್ದಾರೆ.

ಈ ಕೃತಿಯ ಎರಡನೇ ಭಾಗವನ್ನು ತೌಲನಿಕ ಅಧ್ಯಯನಕ್ಕಾಗಿ ಮೀಸಲಿಡಲಾಗಿದೆ. ಭಾರತದ ಬಹುಮುಖ್ಯ ಮಹಿಳಾ ಅನುಭಾವಿಗಳೊಂದಿಗೆ ಮಹಾದೇವಿಯಕ್ಕನ ಬದುಕು-ಬರಹಗಳ ಮೂಲಕ ಚರ್ಚಿಸಲಾಗಿದೆ. ತಮಿಳುನಾಡಿನ ತಿರುವಾಲಂಗಾಡಿನ ಸಾಧಕಿ ಕಾರಿಕಾಲಮ್ಮೆಯೊಂದಿಗೆ ಮಹಾದೇವಿಯಕ್ಕನನ್ನು ತೌಲನಿಕ ಅಧ್ಯಯನಕ್ಕೊಳಪಡಿಸಿ, ಡಾ. ಎಂ.ಎಸ್. ಲಠ್ಠೆ ಯವರು ಡಾಕ್ಟರೇಟ್ ಪದವಿ ಪಡೆದಿದ್ದರು. ಅವರ ಪಿಎಚ್.ಡಿ. ಮಹಾ ಪ್ರಬಂಧದ ತೌಲನಿಕ ಅಧ್ಯಯನದ ಅಧ್ಯಾಯವನ್ನು ಇಲ್ಲಿ ಸೇರಿಸಿಕೊಳ್ಳಲಾಗಿದೆ. ಕಾರಿಕಾಲಮ್ಮೆ ಒಳ್ಳೆಯ ಗೃಹಿಣಿಯಾಗಿದ್ದಳು; ನಂತರದಲ್ಲಿ ಗಂಡನನ್ನು ಬಿಟ್ಟು ಪಾರಮಾರ್ಥಿಕದತ್ತ ಸಾಗಿದವಳು. ಬಾಹ್ಯ ಸೌಂದರ್ಯವನ್ನು ಕುರೂಪಗೊಳಿಸಿಕೊಂಡು ಆಂತರಿಕ ಧ್ಯಾನಕ್ಕೆ ಮಹತ್ವ ನೀಡಿದವಳು. ಇವರಿಬ್ಬರ ಸಾಮ್ಯತೆ ಹಾಗೂ ಭಿನ್ನತೆಗಳನ್ನು ಕುರಿತು ಡಾ. ಲಠ್ಠೆಯವರು ಈ ಲೇಖನದಲ್ಲಿ ವಿವರಿಸಿದ್ದಾರೆ. ಅದೇ ರೀತಿ ಆಂಡಾಳ್ ಮತ್ತು ಅಕ್ಕಮಹಾದೇವಿಯನ್ನು ತೌಲನಿಕವಾಗಿ ಅಧ್ಯಯನ ಮಾಡಿದವರು ಶಾರದ ರಾಜಶೇಖರ್ ಅವರು. ಮಧುರೆಯ ಶ್ರೀ ವಿಳ್ಳಿ ಪುತ್ತೂರಿನ ಆಂಡಾಳ್ ಏಳನೇ ಶತಮಾನದ ಮಧ್ಯಭಾಗದಲ್ಲಿದ್ದ ಸಾಧಕಿ. ಶ್ರೀ ವಿಳ್ಳಿ ಪುತ್ತೂರಿನ ಪೆರಿಯಾಸ್‌ವಾರ್ ಅವರಿಗೆ ತುಳಸಿತೋಟದಲ್ಲಿ ಸಿಕ್ಕ ಹುಡುಗಿಯೇ ಆಂಡಾಳ್. ಆಂಡಾಳ್ ಕೃಷ್ಣಭಕ್ತೆ; ಕೃಷ್ಣನೇ ತನ್ನ ಪ್ರಿಯಕರನೆಂದು ನಂಬಿದವಳು. ಅಕ್ಕನ-ಚೆನ್ನಮಲ್ಲಿಕಾರ್ಜುನ, ಆಂಡಾಳ್‌ಳ-ಕೃಷ್ಣ ಈ ಆರಾಧ್ಯ ದೈವಗಳೊಂದಿಗಿನ ಮಧುರಭಕ್ತಿ ಗಮನಿಸುವಂತಿದೆ. ಆಂಡಾಳ್ ರಚಿಸಿರುವ 'ತಿರುಮೊಳಿ' ಕೃತಿಯೊಂದಿಗೆ ಅಕ್ಕನ ವಚನಗಳನ್ನಿಟ್ಟು ಅಧ್ಯಯನ ಮಾಡುವ ಅಗತ್ಯವಿದೆ. ಶಾರದಾ ರಾಜಶೇಖರ ಅವರು ತಮ್ಮ ಲೇಖನದಲ್ಲಿ ಆಂಡಾಳ್ ಮತ್ತು ಅಕ್ಕನ ಬದುಕು-ಬರಹಕ್ಕೆ ಸಂಬಂಧಿಸಿದಂತೆ ಸಂಕ್ಷಿಪ್ತವಾದ ಮಾಹಿತಿ ನೀಡಿದ್ದಾರೆ.

ಅಕ್ಕಮಹಾದೇವಿ ಮತ್ತು ರಬಿಯಾ ಕುರಿತಾದ ತೌಲನಿಕ ಅಧ್ಯಯನದ ಲೇಖನವನ್ನು ಶಿವಕುಮಾರ ಪಾವಟೆಯವರು ಬರೆದಿದ್ದಾರೆ. ಕ್ರಿ.ಶ. ೭೧೭ರಲ್ಲಿ ಇರಾಕಿನ ಬಾಸ್ರಾ ಎಂಬ ಊರಿನಲ್ಲಿ ಜನಿಸಿದ್ದ ರಬಿಯಾ ದರೋಡೆಕೋರರ ಕೈಗೆಸಿಕ್ಕು ಗುಲಾಮಗಿರಿಗೆ ತಳ್ಳಲ್ಪಡುತ್ತಾಳೆ. ನಂತರ ಈಕೆಯ ಯಜಮಾನ ಪಶ್ಚಾತ್ತಾಪಪಟ್ಟು ಈಕೆಯನ್ನು ಬಿಡುಗಡೆಗೊಳಿಸುತ್ತಾನೆ. ಆಗ

ರಬಿಯಾ ದೇವರನ್ನೇ ತನ್ನ ಗುರುವೆಂದು ತಿಳಿದು ಆಧ್ಯಾತ್ಮ ಸಾಧನೆಯಲ್ಲಿ ತೊಡಗುತ್ತಾಳೆ. ಅಕ್ಕಮಹಾದೇವಿಯಂತೆ ರಬಿಯಾ ಕೂಡ ವಚನಗಳನ್ನು ರಚಿಸಿದ್ದಾಳೆ. ಶಿವಕುಮಾರ ಪಾವಟೆ ಯವರು ಕೆಲವು ವಚನಗಳ ತೌಲನಿಕ ಅಧ್ಯಯನವನ್ನು ತಮ್ಮ ಲೇಖನದಲ್ಲಿ ನಿರೂಪಿಸಿದ್ದಾರೆ.

ಭಾರತದ ಬೇರೆ ಬೇರೆ ಮಹಿಳಾ ಅನುಭಾವಿಗಳೊಂದಿಗೆ ಅಕ್ಕನನ್ನು ತೌಲನಿಕವಾಗಿ ಅಧ್ಯಯನ ಮಾಡುವುದು ಒಂದು ರೀತಿಯಾದರೆ, ಅಕ್ಕನ ಸಮಕಾಲೀನ ಶರಣ-ಶರಣೆಯ ರೊಂದಿಗೆ ಅಕ್ಕನನ್ನು ಹೋಲಿಸಿ ನೋಡುವುದು ಮತ್ತೊಂದು ರೀತಿ. ಈ ಕಾರ್ಯವನ್ನು ಡಾ. ಬಿ.ಎನ್. ಸುಮಿತ್ರಾಬಾಯಿಯವರು 'ಶಿವಶರಣ-ಶರಣೆಯರು ಮತ್ತು ಅಕ್ಕ' ಎಂಬ ಲೇಖನದಲ್ಲಿ ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಅಕ್ಕ ಉಳಿದ ಶರಣೆಯರಿಗಿಂತ ಹೇಗೆ ಭಿನ್ನಳಾಗಿದ್ದಳೆಂಬುದನ್ನು ಇಲ್ಲಿ ವಿವರಿಸಲಾಗಿದೆ. ಸಮಕಾಲೀನ ಶರಣರು ಮತ್ತು ಶರಣೆಯರು ಅಕ್ಕನ ಬಗೆಗೆ ಅಪಾರ ಗೌರವ ಹೊಂದಿದ್ದರು. ಅಕ್ಕನ ಬದುಕು ಮತ್ತು ಬರಹ ಎರಡರ ಚರ್ಚೆಯೂ ಅಲ್ಲಿ ದಾಖಲಾಗಿದೆ. ಈ ವಿಷಯವನ್ನು ಲೇಖಕಿ ಡಾ. ಸುಮಿತ್ರಾ ಬಾಯಿಯವರು ಇಲ್ಲಿ ಚರ್ಚಿಸಿದ್ದಾರೆ. ವಚನಕಾರ್ತಿಯರಲ್ಲಿಯೇ ಪುನರಾವರ್ತನೆಯಾಗಿರುವ ವಚನಗಳ ಬಗೆಗೂ ಅವರು ಪ್ರಸ್ತಾಪಿಸಿದ್ದಾರೆ.

ಮೂರನೇ ಭಾಗದಲ್ಲಿ ಒಟ್ಟು ಹತ್ತೊಂಬತ್ತು ಲೇಖನಗಳಿವೆ. ಮೊದಲೆರಡು ಭಾಗಗಳಿಗಿಂತ ಮೂರನೇ ಭಾಗದಲ್ಲಿ ವಿಷಯ ವೈವಿಧ್ಯತೆಯಿದೆ. ಈ ಭಾಗದಲ್ಲಿ ಬರುವ ಹತ್ತೊಂಬತ್ತು ಲೇಖನಗಳು ಹೊಸ ಆಯಾಮಗಳನ್ನು ಪಡೆದುಕೊಂಡಿವೆ.

ಅಕ್ಕಮಹಾದೇವಿ ವಚನಗಳಲ್ಲಿ ಪ್ರಕಟವಾಗಿರುವ ಪ್ರಕೃತಿಪ್ರೇಮ ಹಾಗೂ ಪರಿಸರ ಕಾಳಜಿಯನ್ನು ಕುರಿತು ಮತ್ತು ಅಕ್ಕನ ಸೃಷ್ಟಿ ವಿಚಾರ ಕುರಿತು ಡಾ. ಬಸವರಾಜ ಸಬರದ ಹಾಗೂ ಡಾ. ಉಷಾ ಕಿರಣ ಅವರು ಮಹತ್ವದ ಚಿಂತನೆಗಳನ್ನು ಮುಂದಿಟ್ಟಿದ್ದಾರೆ. 'ಅಕ್ಕಮಹಾದೇವಿ ವಚನಗಳಲ್ಲಿ ಪ್ರಕೃತಿ' ಎಂಬ ಲೇಖನದಲ್ಲಿ ಡಾ. ಸಬರದ ಅವರು ಅಕ್ಕಮಹಾದೇವಿಯ ಆನ್ವಯಿಕ ಸಸ್ಯವಿಜ್ಞಾನದ ಹೊಸ ವಿಚಾರಗಳನ್ನು ಕಟ್ಟಿಕೊಟ್ಟಿದ್ದಾರೆ. ಪ್ರಕೃತಿಯಲ್ಲಿರುವ ಪಕ್ಷಿ ಸಂಕುಲದ ಮೂಲಕ ಚೆನ್ನಮಲ್ಲಿಕಾರ್ಜುನನ್ನರಸುವ, ಅಕ್ಕನ ವಿಶಿಷ್ಟತೆಯನ್ನು ಇಲ್ಲಿ ಹೇಳಲಾಗಿದೆ. ಈಳೆ-ನಿಂಬು-ಮಾವುಗಳಲ್ಲಿ ಹುಳಿಯಿದೆ; ಕಬ್ಬು-ಬಾಳೆ-ಹಲಸಗಳಲ್ಲಿ ಸಿಹಿಯಿದೆ. ಇವೆರಡೂ ವರ್ಗಗಳ ಸಸ್ಯಗಳಿಗೆ ಒಂದೇ ನೀರು-ಒಂದೇ ರೀತಿಯ ಬಿಸಿಲು ಒಂದೇ ಭೂಮಿಯಿದೆ. ಆದರೆ ರುಚಿಯಲ್ಲಿ ವ್ಯತ್ಯಾಸವಿದೆ. ಅಕ್ಕನ ಈ ವಚನವನ್ನೆತ್ತಿ ಕೊಂಡು ಡಾ. ಸಬರದ ಅವರು ವಿಶಿಷ್ಟ ರೀತಿಯ ಚರ್ಚೆಯನ್ನು ಪ್ರಾರಂಭಿಸಿದ್ದಾರೆ. ಸೃಷ್ಟಿಗೆ ಸಂಬಂಧಿಸಿದಂತೆ ಅಕ್ಕ ರಚಿಸಿರುವ ವಚನಗಳನ್ನು ಉದಾಹರಿಸುತ್ತ ಡಾ. ಉಷಾಕಿರಣ್ ಅವರು ಸೃಷ್ಟಿಗೆ ಸಂಬಧಿಸಿದಂತೆ ಶರಣರ ಪರಿಕಲ್ಪನೆಗಳು ಹೇಗಿದ್ದುವೆಂಬುದನ್ನು ವಿವರಿಸಿದ್ದಾರೆ. ಬೀಜದೊಳಡಗಿದ ವೃಕ್ಷದಂತೆ, ಜೀವಾತ್ಮನಲ್ಲಡಗಿರುವ ಪರಮಾತ್ಮನ ಸಾಕ್ಷಾತ್ಕಾರವನ್ನು ಹೇಳಿದ್ದಾರೆ. ಜತೆಗೆ ಮಾಯಾವಾದ ಕುರಿತಂತೆ ಸ್ಪಷ್ಟ ನಿಲುವುಗಳನ್ನು ತಾಳಿದ್ದಾರೆ.

ಅಕ್ಕಮಹಾದೇವಿ ವಚನಗಳಲ್ಲಿರುವ ಸಾಹಿತ್ಯಕ ಹಾಗೂ ಆಧ್ಯಾತ್ಮಿಕ ವಿಷಯಗಳ ಬಗೆಗೆ ಡಾ. ಶೈಲಜಾ ಉಡಚಣ, ಶ್ರೀ ಎ.ಬಿ. ಕಲಘಟಗಿ, ಲೀಲಾದೇವಿ ಆರ್. ಪ್ರಸಾದ, ಶ್ರೀ ಬಿ.ಸಿ. ವೀರಪ್ಪ, ಡಾ. ಸಂಗಮೇಶ ಸವದತ್ತಿಮಠ ಹಾಗೂ ಡಾ. ಚೆನ್ನಕ್ಕ ಪಾವಟೆ ಅವರು ಅಧ್ಯಯನಪೂರ್ಣ ಲೇಖನಗಳನ್ನು ನೀಡಿದ್ದಾರೆ.

ಅಕ್ಕಮಹಾದೇವಿಯ ವಚನಗಳಲ್ಲಿ ಉಪಮೆ, ದೃಷ್ಟಾಂತ, ರೂಪಕಗಳೊಂದಿಗೆ ಪ್ರತಿಮೆಗಳು ಹೇಗೆ ಪರಿಣಾಮಕಾರಿಯಾಗಿ ಮೂಡಿ ಬಂದಿವೆಯೆಂಬುದನ್ನು ಡಾ. ಉಡಚಣ ಅವರು ವಿವರಿಸಿದ್ದಾರೆ. ಶರಣಸತಿ–ಲಿಂಗಪತಿ ಪರಿಕಲ್ಪನೆಯ ಸಜೀವ ಪ್ರತೀಕವೇ ಮಹಾದೇವಿಯಕ್ಕ–ಎಂದು ಲೇಖಕಿ ಇಲ್ಲಿ ಅಕ್ಕನ ಕಾವ್ಯ ಸಂಪತ್ತನ್ನು ಕುರಿತು ವಿಶ್ಲೇಷಿಸಿದ್ದಾರೆ. ಅಕ್ಕಮಹಾದೇವಿ ವಚನಗಳಲ್ಲಿ ಬರುವ ಸೂಳ್ನುಡಿಗಳನ್ನು ಕುರಿತಂತೆ ಶ್ರೀ ಎ.ಬಿ. ಕಲಘಟಗಿಯವರು ಮಹತ್ವದ ಸೂಳ್ನುಡಿಗಳನ್ನಾಯ್ಕೆ ಮಾಡಿಕೊಂಡು ವಿಶ್ಲೇಷಣೆ ಮಾಡಿದ್ದಾರೆ. ಗಾದೆ–ಒಗಟುಗಳಂತೆ ಈ ಸೂಳ್ನುಡಿಗಳೂ ಕೂಡ ಹಿರಿಯರಿಂದ ಕಿರಿಯರಿಗೆ ಪಾರಂಪರಿಕವಾಗಿ ಮುಂದುವರೆದು ಕೊಂಡು ಬರುತ್ತವೆ. ಆದರೆ ಅಕ್ಕ ಹೇಳಿರುವ ಸೂಳ್ನುಡಿಗಳು ಪರಂಪರೆಯ ಜ್ಞಾನದ ಜತೆಗೆ ಅನುಭಾವದೆತ್ತರವನ್ನು ತಲುಪಿವೆ.

ಬೆಡಗಿನ ಶೈಲಿ ವಚನಕಾರರಲ್ಲಿ ವಿಶಿಷ್ಟ ಮಾಧ್ಯಮವಾಗಿ ಮೂಡಿಬಂದಿದೆ. ಅಕ್ಕನ ಬೆಡಗಿನ ವಚನವೊಂದನ್ನು ಆಯ್ದುಕೊಂಡು ಶ್ರೀಮತಿ ಲೀಲಾದೇವಿ ಆರ್. ಪ್ರಸಾದ ಅವರು ಪ್ರಾಯೋಗಿಕ ವಿಮರ್ಶೆ ಮಾಡಿದ್ದಾರೆ. “ಅತ್ತೆ ಮಾಯೆ, ಮಾವ ಸಂಸಾರಿ” ಎಂಬ ಈ ವಚನದಲ್ಲಿ ಸಂಸಾರ ಪ್ರತೀಕದ ಮೂಲಕ ಆಧ್ಯಾತ್ಮದ ಪ್ರತಿಪಾದನೆಯಿದೆ. ಅತ್ತೆಯೆಂದರೆ ಆಸೆಗಳು ಮಾವನೆಂದರೆ ಬಯಕೆಗಳೆಂದು ಲೇಖಕಿ ಇಲ್ಲಿ ವಿವರಿಸಿದ್ದಾರೆ.

ಅಕ್ಕಮಹಾದೇವಿಯ ಅನುಭಾವ ಸಂಪತ್ತನ್ನು ಕುರಿತು ಶ್ರೀ ಬಿ.ಸಿ. ವೀರಪ್ಪ ಅವರು ನಾಲ್ಕು ಭಾಗಗಳಲ್ಲಿ ವಿಂಗಡಿಸಿದ್ದಾರೆ. ಹುಟ್ಟಿನಿಂದ–ತಾರುಣ್ಯದವರೆಗಿನ ಘಟ್ಟ, ಬಲವಂತದ ಮದುವೆಯಾಗಿ ಒಲ್ಲದ ಗಂಡನೊಡನೆ ಬಾಳಿದ ಘಟ್ಟ, ಲೌಕಿಕ ಗಂಡನನ್ನು ತೊರೆದು ಕಾಮುಕರ–ಕ್ರೂರಿಗಳ ಕುಹಕ ಕಣ್ಣುಗಳಿಗೆ ಬಿದ್ದು ವೇದನೆಯನ್ನನುಭವಿಸಿದ ಮೂರನೇ ಘಟ್ಟ ಮತ್ತು ಕಲ್ಯಾಣದಿಂದ ಶ್ರೀಶೈಲದವರೆಗಿನ ಪಯಣದ ನಾಲ್ಕನೇ ಘಟ್ಟ. ಈ ನಾಲ್ಕೂ ಘಟ್ಟಗಳಲ್ಲಿ ಅಕ್ಕನಿಗೆ ವಿಶೇಷ ಅನುಭವಗಳಾಗಿವೆ. ಈ ಅನುಭವಗಳೇ ಅವಳಂತರಂಗದಲ್ಲಿ ಬೆಳೆದು ಅನುಭಾವದ ನುಡಿಗಳಾಗಿವೆಯೆಂದು ಲೇಖಕರು ವಿವರಿಸಿದ್ದಾರೆ. ಅನುಭಾವವೆಂದರೆ ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳುವದೆಂದು ಅನೇಕ ವಿದ್ವಾಂಸರು ಅನುಭಾವ ದರ್ಥವನ್ನು ವಿವರಿಸಿದ್ದಾರೆ. ಆದರೆ ಮಹರ್ಷಿ ಅರವಿಂದರು ಅನುಭಾವಪದದ ಅರ್ಥ ವ್ಯಾಪ್ತಿಯನ್ನು ವಿಸ್ತರಿಸಿದ್ದಾರೆ. ಸೃಷ್ಟಿಗೆ ಮೂಲವಾದ ಸತ್ಯದ ಸಾಕ್ಷಾತ್ಕಾರವೇ ಅನುಭಾವ ವೆಂದವರು ಹೇಳಿದ್ದಾರೆ. ತನ್ನ ಬದುಕಿನುದ್ದಕ್ಕೂ ಅಕ್ಕ ಸತ್ಯದನ್ವೇಷಣೆಯನ್ನೇ ಮಾಡಿದ್ದಾಳೆ.

ಅಕ್ಕನ ವಚನಗಳನ್ನು ಭಾಷಾ ವಿಜ್ಞಾನದ ನೆಲೆಯಲ್ಲಿ ಡಾ. ಸವದತ್ತಿಮಠ ಅವರು ಅಧ್ಯಯನ ಕ್ಕೊಳಪಡಿಸಿದ್ದಾರೆ. ಧ್ವನಿ–ಶಬ್ದ–ಅರ್ಥಗಳ ಸಾದೃಶ್ಯವೇ ಶಬ್ದಕಲ್ಪ ಇಂತಹ ಶಬ್ದಕಲ್ಪದ ಕುತೂಹಲ ಗಳನ್ನು ಈ ಲೇಖನದಲ್ಲಿ ನೋಡಬಹುದಾಗಿದೆ. ಮಹಾದೇವಿಯಕ್ಕ ತನ್ನ ವಚನಗಳಲ್ಲಿ ಬಳಸಿದ ಧ್ವನಿಗಳು ಸಾಮಾನ್ಯವೆಂಬಂತೆ ಕಂಡರೂ ಅದರಲ್ಲಿರುವ ಕೌಶಲತೆ ಗಮನಿಸುವಂತಹದ್ದಾಗಿದೆಯೆಂದು ಲೇಖಕರು ಹೇಳಿದ್ದಾರೆ.

ಅಕ್ಕಮಹಾದೇವಿ ವಚನಗಳ ಜತೆಗೆ ಸ್ವರವಚನಗಳನ್ನೂ ರಚಿಸಿದ್ದಾಳೆ. ಆದರೆ ಶರಣರು ರಚಿಸಿರುವ ಸ್ವರವಚನಗಳ ಬಗೆಗೆ ಹೆಚ್ಚಿನ ಚರ್ಚೆಗಳು ನಡೆದಿಲ್ಲ. ಡಾ. ಚೆನ್ನಕ್ಕ ಪಾವಟೆಯವರು ತಮ್ಮ ಲೇಖನದಲ್ಲಿ ಅಕ್ಕನ ಸ್ವರವಚನ ಸಾಹಿತ್ಯ ಕುರಿತು ವಿವರವಾಗಿ ಚರ್ಚಿಸಿದ್ದಾರೆ. ಶರಣರ ಸ್ವರವಚನಗಳು ಮೊದಲ ಕೀರ್ತನಗಳಾದರೆ, ಅಕ್ಕನ ಸ್ವರವಚನ ರಚನೆಗಳು ಮಹಿಳೆಯ

ಮೊದಲ ಕೀರ್ತನೆಗಳಾಗಿವೆ. ಸ್ವರವಚನ–ಕೀರ್ತನ–ತತ್ತ್ವಪದ ಇವು ಮೂರೂ ಹಾಡುಗಬ್ಬಗಳಾಗಿದ್ದು ಪಲ್ಲ–ಅನುಪಲ್ಲಗಳನ್ನು ಹೊಂದಿವೆ. ಅಕ್ಕನ ಸ್ವರವಚನಗಳಲ್ಲಿ ಬರುವ ಅನುಭಾವ, ಆತ್ಮಜಾಗೃತಿ, ನಿಷ್ಠಾಭಕ್ತಿ, ಕುರಿತು ಲೇಖಕಿ ಉಲ್ಲೇಖಿಸಿದ್ದಾರೆ. ಜತೆಗೆ ಷಟ್‌ಸ್ಥಲಗಳನ್ನು ಕುರಿತು ಅಕ್ಕ ತನ್ನ ವಚನಗಳಲ್ಲಿ ಹೇಗೆ ಪ್ರತಿಕ್ರಿಯಿಸಿದ್ದಾಳೆಂಬುದನ್ನೂ ಈ ಲೇಖನದಲ್ಲಿ ಕಾಣಬಹುದಾಗಿದೆ.

ವಚನಗಳು ಕಾಲದಿಂದ ಕಾಲಕ್ಕೆ ಬೇರೆ ಬೇರೆ ದೃಷ್ಟಿಕೋನಗಳ ಹಿನ್ನಲೆಯಲ್ಲಿ ಅಧ್ಯಯನ ಕ್ಕೊಳಪಟ್ಟಿವೆ. ಪ್ರಾರಂಭದಲ್ಲಿ ವಚನಗಳನ್ನು ಧರ್ಮ–ಶಾಸ್ತ್ರವೆಂದೇ ಭಾವಿಸಲಾಗಿತ್ತು. 'ವಚನ ಧರ್ಮಸಾರ' ಮತ್ತು 'ವಚನಶಾಸ್ತ್ರ ರಹಸ್ಯ'ದಂತಹ ಕೃತಿಗಳೇ ಇದಕ್ಕೆ ಸಾಕ್ಷಿಯಾಗಿವೆ. ನಂತರದ ದಶಕಗಳಲ್ಲಿ ವಚನವನ್ನು ಸಾಹಿತ್ಯವೆಂದು ಪರಿಗಣಿಸಿ ಗಂಭೀರವಾದ ಸಾಹಿತ್ಯಕ ಅಧ್ಯಯನಗಳು ನಡೆದವು. ದಲಿತ–ಬಂಡಾಯದ ಸಂದರ್ಭದಲ್ಲಿ ವಚನಗಳನ್ನು ಚಳವಳಿಯ ಹಿನ್ನಲೆಯಲ್ಲಿ ಸಮಾಜವಾದ–ಮಾರ್ಕ್ಸ್‌ವಾದದ ಚಿಂತನೆಯ ನೆಲೆಯಲ್ಲಿ ಅಧ್ಯಯನ ಮಾಡಲಾಯಿತು. ಕೆಲವು ಲೇಖಕರು ವಚನಗಳನ್ನು ವಿಜ್ಞಾನ–ವೈದ್ಯಕೀಯವೆಂದು ಪರಿಗಣಿಸಿ ಅಧ್ಯಯನ ಮಾಡಿದರು. ಇತ್ತೀಚಿನ ವರ್ಷಗಳಲ್ಲಿ ವಚನಗಳನ್ನು ಸಂಸ್ಕೃತಿ ಚಿಂತನೆಯ ನೆಲೆಯಲ್ಲಿ ಅಧ್ಯಯನ ಮಾಡಲಾಗುತ್ತಿದೆ. ಈ ಎಲ್ಲ ಅಧ್ಯಯನದ ಚರ್ಚೆಗಳನ್ನು ಈ ಸಂಪುಟ ಒಳಗೊಂಡಿದೆ.

ಅಕ್ಕನ ವಚನಗಳ ಸಾಹಿತ್ಯಕ–ಆಧ್ಯಾತ್ಮಿಕ ಅಧ್ಯಯನ ನಡೆದಂತೆ, ವಿಜ್ಞಾನ–ವೈದ್ಯಕೀಯದ ಅಧ್ಯಯನಗಳೂ ನಡೆದಿವೆ. ಡಾ. ಪಿ.ಎಸ್. ಶಂಕರರ ಪ್ರಸಿದ್ಧ ವೈದ್ಯರು ಹಾಗೂ ಪ್ರೊ. ಸವಣೂರ ಅವರು ವಿಜ್ಞಾನಿಗಳು. ಇವರ ಲೇಖನಗಳು ವಚನಗಳ ಹೊಸ ಸಾಧ್ಯತೆಗಳನ್ನು ಕಟ್ಟಿಕೊಟ್ಟಿವೆ. ದೀರ್ಘಾಯುಷ್ಯದ ಬಗೆಗೆ ಅಕ್ಕ ಹೇಳಿದ ವಚನವನ್ನಿಟ್ಟುಕೊಂಡು ಡಾ. ಪಿ.ಎಸ್. ಶಂಕರ್ ಅವರು ಅಕ್ಕನ ವೈದ್ಯಕೀಯ ವಿಚಾರಗಳನ್ನು ವಿಶ್ಲೇಷಿಸಿದ್ದಾರೆ. ವೈದ್ಯಕೀಯದಲ್ಲಿ ಬರುವ ವಂಶವಾಹಿಗಳ ಕಾರ್ಯಚಟುವಟಿಕೆ ಹಾಗೂ ಕೆಲೋರಿ ಸಂಬಂಧಗಳನ್ನು ಅಕ್ಕನ ವಚನಗಳಲ್ಲಿ ಅನ್ವಯಿಸುತ್ತ, ಅಲ್ಲಿರುವ ವೈದ್ಯಕೀಯ ಜ್ಞಾನವನ್ನು ಡಾ. ಶಂಕರ ಅವರು ಪರಿಚಯಿಸ್ಸಿದ್ದಾರೆ. 'ಆಹಾರ ಕಿರಿದು ಮಾಡಿರಣ್ಣಾ' ಎಂಬ ಅಕ್ಕನ ಈ ವಚನ ವೈದ್ಯಕೀಯ ವಿಶ್ಲೇಷಣೆಗೆ ಒಳಗಾಗಿರುವುದನ್ನಿಲ್ಲಿ ಕಾಣಬಹುದಾಗಿದೆ. ಅದೇ ರೀತಿ 'ಅಕ್ಕಮಹಾದೇವಿ ವಿಜ್ಞಾನಿಯೂ ಹೌದೆ?' ಎಂಬ ಪ್ರಶ್ನೆಯ ಮೂಲಕ ಪ್ರೊ. ಕೆ.ಎಸ್. ಸವಣೂರ ಅವರು ಅಕ್ಕನೊಳಗಡೆಯಿದ್ದ ವಿಜ್ಞಾನಿಯನ್ನು ಪರಿಚಯಿಸಿದ್ದಾರೆ. 'ಲೋಕದ ಚೇಷ್ಟೆಗೆ ರವಿಬೀಜ ವಾದಂತೆ' ಎಂಬ ವಚನವನ್ನಾಯ್ದುಕೊಂಡು ಅವರು ವಿಜ್ಞಾನದ ಸಂಗತಿಗಳನ್ನು ವಿವರಿಸಿದ್ದಾರೆ. ಪ್ರಸಿದ್ಧ ವಿಜ್ಞಾನಿ ಹ್ಯಾರಿಸನ್‌ರ ವಿಚಾರಗಳನ್ನಿಟ್ಟುಕೊಂಡು, ರವಿ ಹಾಗೂ ಪೃಥ್ವಿಗಳ ವೈಜ್ಞಾನಿಕ ವಿಶ್ಲೇಷಣೆಗಳನ್ನು ಇರಿಸಿಕೊಂಡು ಅಕ್ಕನ ವಚನದ ವೈಜ್ಞಾನಿಕ ಪ್ರಾಯೋಗಿಕ ವಿಮರ್ಶೆಗೆ ಪ್ರೊ. ಸವಣೂರ ತೊಡಗಿದ್ದಾರೆ. ಹೀಗೆ ವೈದ್ಯಕೀಯ ಮತ್ತು ವಿಜ್ಞಾನಕ್ಕೆ ಸಂಬಂಧಿಸಿದಂತೆ ಅಕ್ಕನ ಕೊಡುಗೆಯನ್ನು ಈ ಲೇಖಕರು ಗುರುತಿಸಿದ್ದಾರೆ.

ಅಕ್ಕನ ವಚನಗಳಲ್ಲಿ ಕಾಣಿಸುವ ಬಂಡಾಯ ಮನೋಭಾವ ಹಾಗೂ ಸ್ತ್ರೀವಾದಿ ಚಿಂತನೆ ಕುರಿತಂತೆ ಮೂರನೇ ಭಾಗದಲ್ಲಿ ಮಹತ್ವದ ಲೇಖನಗಳಿವೆ. ಡಾ. ಎಂ.ಎಸ್. ಆಶಾದೇವಿ, ಕೆ. ನೀಲಾ, ವೀಣಾ ಬನ್ನಂಜೆ, ಧರಿಣಿದೇವಿ ಮಾಲಗತ್ತಿ, ಸಿರಾಜ್ ಅಹಮದ್, ಚ.ಹ. ರಘುನಾಥ ಮತ್ತು ವಿಜಯಶ್ರೀ ಸಬರದ ಈ ಲೇಖಕರ ಲೇಖನಗಳನ್ನಿಲ್ಲಿ

ಉದಾಹರಿಸಬಹುದಾಗಿದೆ. ಜಾಗತೀಕರಣದ ಈ ಸಂದರ್ಭದಲ್ಲಿ ಅಕ್ಕ ಹೇಗೆ ಪ್ರಸ್ತುತಳಾಗುತ್ತಾಳೆಂಬ ಚರ್ಚೆಯೂ ಈ ಲೇಖನಗಳಲ್ಲಿದೆ.

"ಭಕ್ತಿಯಿಂದ ಬಂಡಾಯದವರೆಗೆ" ಎಂಬ ತಮ್ಮ ಲೇಖನದಲ್ಲಿ ಡಾ. ಆಶಾದೇವಿಯವರು ಅಕ್ಕನ ವಚನಗಳ ತಾತ್ವಿಕ ಸ್ವರೂಪ ಕುರಿತಂತೆ–ಮುಖ್ಯವಾದ ಚರ್ಚೆಯನ್ನು ಪ್ರಾರಂಭಿಸಿದ್ದಾರೆ. ಈ ಲೇಖಕಿಗೆ ಅಕ್ಕಮಹಾದೇವಿ ಆದಿಮ ಸ್ತ್ರೀವಾದದ ಪ್ರತೀಕವಾಗಿ ಕಂಡಿದ್ದಾಳೆ. ಆದಿಮ ಸ್ತ್ರೀವಾದದ ಅತಿರೇಕ, ದೌರ್ಬಲ್ಯ, ಶಕ್ತಿ ಈ ಎಲ್ಲದರ ರೂಪಕವಾಗಿ ಅಕ್ಕ ಕಂಡಿದ್ದಾಳೆ. "ಸಾವಿಲ್ಲದ ಸಂಗಾತಿಯನ್ನರಸುವ ಅಕ್ಕ" ಲೇಖನದಲ್ಲಿ ಕೆ. ನೀಲಾ ಅವರು ಅಕ್ಕನ ಲೌಕಿಕ ಸಂಗತಿಗಳ ಬಗೆಗೆ ಪ್ರಸ್ತಾಪಿಸಿದ್ದಾರೆ. ಸ್ತ್ರೀವಾದಿ ಚಿಂತನೆಗಳ ವಿಸ್ತೃತ ಕ್ಯಾನ್‌ವಾಸಿನ ಮೇಲೆ ಮಹತ್ವಪೂರ್ಣ 'ಮಾಸ್ಟರ್‌ಪೀಸ್' ಆಗಿ ಅಕ್ಕ ಕಾಣಿಸಿಕೊಂಡಿದ್ದಾಳೆ. ಲಿಂಗ, ವರ್ಣ, ವರ್ಗಭೇದಗಳನ್ನು ಖಂಡಿಸುವ ಅಕ್ಕನ ಹೋರಾಟವನ್ನು ಕುರಿತು ಲೇಖಕಿ ವಿವರಿಸಿದ್ದಾರೆ.

ಮಹಿಳೆಯರ ಅಸಾಂಪ್ರದಾಯಿಕ–ಸಾಹಸಗಳೊಂದಿಗೆ ಅಕ್ಕನ ವ್ಯಕ್ತಿತ್ವವನ್ನು ತುಲನೆ ಮಾಡಿನೋಡುವ ಪ್ರಯತ್ನವನ್ನು ವೀಣಾ ಬನ್ನಂಜೆ ತಮ್ಮ ಲೇಖನದಲ್ಲಿ ಮಾಡಿದ್ದಾರೆ. ಜೀವ ಬೆಳವಣಿಗೆಗೆ ಲಿಂಗದ ಮಿತಿ ಹೇಗೆ ಕಾಡುತ್ತದೆಂಬುದನ್ನು ವೀಣಾ ಈ ಲೇಖನದಲ್ಲಿ ಸೂಕ್ಷ್ಮವಾಗಿ ಅಭಿವ್ಯಕ್ತಿಸಿದ್ದಾರೆ. ಅಕ್ಕನನ್ನು ಬಿಟ್ಟರೆ ಇಲ್ಲಿಯವರೆಗೆ ಅಸಾಂಪ್ರದಾಯಿಕ ಸಾಹಸ ನಡೆದಿಲ್ಲವೆಂಬುದನ್ನು ಲೇಖಕಿ ಸ್ಪಷ್ಟಪಡಿಸಿದ್ದಾರೆ.

ಅಕ್ಕ ದ್ವಂದ್ವಗಳನ್ನು ಮೀರಿ ಬೆಳೆದವಳೆಂಬುದನ್ನು ಧರಣಿದೇವಿ ಮಾಲಗತ್ತಿ ತಮ್ಮ ಲೇಖನದಲ್ಲಿ ನಿರೂಪಿಸಿದ್ದಾರೆ. ಒಲ್ಲೆ ಎನಿಸಿದಾಗ ಒಲ್ಲೆನೆಂದು ಹೇಳುವ ಧೈರ್ಯ ಹಾಗೂ ಸ್ವಾತಂತ್ರ್ಯ ಇವತ್ತಿಗೂ ಹೆಣ್ಣಿಗೆ ಬಂದಿಲ್ಲವೆಂದು ಹೇಳುವ ಲೇಖಕಿ, ಅಕ್ಕನ ಸ್ವಾತಂತ್ರ್ಯದ ಪರಿಕಲ್ಪನೆಯನ್ನು ಇಲ್ಲಿ ಸ್ಪಷ್ಟಗೊಳಿಸುತ್ತ ಮೆಚ್ಚಿಕೊಂಡಿದ್ದಾರೆ. ದೈಹಿಕ ಮತ್ತು ಐಹಿಕಗಳೆರಡನ್ನೂ ಮೀರಿ ನಿಂತ ಅಕ್ಕನ ಸಾಮರ್ಥ್ಯದ ಬಗೆಗೆ ಮಾತನಾಡಿದ್ದಾರೆ. 'ಕದಳಿ' ಎಂಬುದು ಅಕ್ಕನ ಬದುಕಿನ ರೂಪಕವಾಗಿದೆಯೆಂಬುದನ್ನು ಸೊಗಸಾಗಿ ನಿರೂಪಿಸಿದ್ದಾರೆ.

ಅಕ್ಕನ ವಚನಗಳ ಓದನ್ನು ಮರುಪರಿಶೀಲನೆಗೊಳಪಡಿಸಿದ ಎಸ್. ಸಿರಾಜ್ ಅಹಮದ್ ಅವರು, ಅಕ್ಕನಿಗೆ ಸಂಬಂಧಿಸಿದಂತೆ ಈಗಾಗಲೇ ಬಂದಿರುವ ವಿಮರ್ಶೆಗೆ, ಸೂಕ್ತ ಪ್ರತಿಕ್ರಿಯೆ ನೀಡಿದ್ದಾರೆ. "ಅಕ್ಕ ಸ್ತ್ರೀವಾದಿಯಂತೆ ಕಂಡರೂ ಅವಳ ಚೆನ್ನಮಲ್ಲಿಕಾರ್ಜುನ ಅಂತಿಮವಾಗಿ ಒಬ್ಬ ಗಂಡನೇ ಅಲ್ಲವೇ?" ಎಂಬಂತಹ ಪ್ರಶ್ನೆಗಳನ್ನು ಕೆಲವು ವಿಮರ್ಶಕರು ಕೇಳಿದ್ದಾರೆ. ಅದಕ್ಕೆ ಸಿರಾಜ್ ಅಹಮದ್ ಅವರು ಹೀಗೆ ಉತ್ತರಿಸಿದ್ದಾರೆ." ಪುರುಷ ಎಂಬ ಸರಳ ಬೈನರಿ ವರ್ಗೀಕರಣದ ತೊಡಕಿನಲ್ಲಿ ನೋಡುವುದು ಅಪಾಯಕಾರಿ" ಎಂದಿದ್ದಾರೆ. ಇದು ಸೂಕ್ತವಾದ ಉತ್ತರವೇ ಆಗಿದೆ. ಶರಣಸತಿ–ಲಿಂಗಪತಿ–ಪರಿಕಲ್ಪನೆಯನ್ನು ಕೇವಲ ಹೆಣ್ಣು–ಗಂಡು ಎಂಬ ಲಿಂಗಾಧಾರಿತ ವಿಷಯವನ್ನಾಗಿ ನೋಡಬಾರದು. ಅದು ಮೇಲ್ನೋಟದ ಅರ್ಥ, ವಚನದ ಒಳಗೆ ಪ್ರವೇಶಿಸಿದಂತೆ ಮತ್ತೆ ಬೇರೆ ಅರ್ಥಗಳು ಬಿಚ್ಚಿಕೊಳ್ಳುತ್ತವೆ. ಇಲ್ಲಿ ಶರಣನಾಗುವದೆಂದರೆ ಹೆಣ್ಣಾಗುವುದು, ಹೆಣ್ಣಾಗುವದೆಂದರೆ ಅಂತಃಕರಣವುಳ್ಳವರಾಗುವುದು. ಇಲ್ಲಿ ಶರಣ ಎಂಬ ಪದ ಪ್ರಕೃತಿ ರೂಪಕ, ಲಿಂಗವೆಂಬ ಪದ (ಪುರುಷ) ದೈವ ರೂಪಕ. ಗಂಡಾಗಲಿ–ಹೆಣ್ಣಾಗಲಿ–ನಪುಂಸಕರಾಗಲಿ ಯಾವುದೇ ಲಿಂಗವಾದರೂ, ಶರಣನಾಗಬೇಕಾದರೆ ಮೊದಲು ಹೆಣ್ಣಾಗಬೇಕು. ಹೆಣ್ಣಾಗುವದೆಂದರೆ ಹೆಣ್ತನದ ಗುಣವನ್ನಳವಡಿಸಿಕೊಳ್ಳುವುದು, ತಾಯಿಯಂತೆ

ಕರುಣಾಮಯಿಯಾಗುವುದು. ಸಂಸಾರ ತೊರೆಯುವದರಿಂದ, ಸಂನ್ಯಾಸ ಸ್ವೀಕರಿಸುವದರಿಂದ, ತಪಸ್ಸು ಮಾಡುವದರಿಂದ ಶರಣನಾಗಲು ಸಾಧ್ಯವಿಲ್ಲ. ಹೆಣ್ಣಾದಾಗ–ತಾಯಿಯಾದಾಗ–ಸತಿಯಾದಾಗ–ಅಂತಃಕರಣಿಯಾದಾಗ ಮಾತ್ರ ಶರಣನಾಗಲು ಸಾಧ್ಯವೆಂದು ವಚನಕಾರರು ಹೇಳಿದ್ದಾರೆ. ಆದುದರಿಂದ ಇಲ್ಲಿ 'ಶರಣಸತಿ' ಎಂಬ ಪದಕ್ಕೆ ಲೌಕಿಕದ ಲಿಂಗದ ಅರ್ಥವನ್ನು ಹಚ್ಚಬಾರದು. ಅಕ್ಕನ "ರೂಹಿಲ್ಲದ–ಕೇಡಿಲ್ಲದ" ವಚನವನ್ನು ಮತ್ತೊಮ್ಮೆ ಓದಿಕೊಂಡಾಗ, ಸೂಕ್ಷ್ಮವಾಗಿ ಚಿಂತಿಸಿದಾಗ ಇಲ್ಲಿ ಬರುವ 'ಸತಿ' ಹೆಣ್ಣಲ್ಲ, 'ಪತಿ' ಗಂಡಲ್ಲ ಅದು ಪ್ರಕೃತಿ–ಪುರುಷದ ಸಂಕೇತ, ಜೀವ–ದೇವನ ಸಂಕೇತ, ವ್ಯಕ್ತಿ–ಸಮಾಜದ ಸಂಕೇತ ಎಂಬುದು ಸ್ಪಷ್ಟವಾಗುತ್ತದೆ. ವ್ಯಕ್ತಿಗಿಂತ ಸಮಾಜ ದೊಡ್ಡದು ಎಂದು ತಿಳಿದುಕೊಂಡಾಗ ನರ–ಹರನಾಗುವ ಪರಿಕಲ್ಪನೆ ಸ್ಪಷ್ಟವಾಗುತ್ತದೆ. ಶರಣಸತಿ–ಲಿಂಗಪತಿಯ ಅರ್ಥ ಸ್ಪಷ್ಟವಾಗುತ್ತದೆ.

ಚ.ಹ. ರುಘುನಾಥರು ತಮ್ಮ ಲೇಖನದಲ್ಲಿ, ಅಕ್ಕನ ಅಗ್ನಿದಿವ್ಯದ ಹಾದಿಯಲ್ಲಿ ಇಂದಿನ ತಳಮಳಗಳನ್ನು ನೆನಪಿಸಿಕೊಂಡಿದ್ದಾರೆ. ಹರೆಯ ಕಣ್ತೆರೆಯುವ ಸಮಯದಲ್ಲಿಯೇ ಎಲ್ಲ ಮದಗಳನ್ನು ತಿರಸ್ಕರಿಸಿ ಅರಮನೆಯಿಂದ ಅರಿವಿನ ದಾರಿಗೆ ನಡೆದ ಅಕ್ಕನ ಅಗ್ನಿದಿವ್ಯದ ಹಾದಿಯಲ್ಲಿಯೇ ಇಂದಿನ ಬಿಕ್ಕಟ್ಟುಗಳಿಗೆ ಪರಿಹಾರವಿದೆಯೆಂದು ಲೇಖಕರು ತಿಳಿಸಿದ್ದಾರೆ. ಇನ್ನು 'ಅಕ್ಕಮಹಾದೇವಿ ವಚನಗಳಲ್ಲಿ ಸ್ಫೋಟಗುಣ'ವೆಂಬ ನನ್ನ ಲೇಖನದ ಬಗೆಗೆ ಈಗಾಗಲೇ ವಿದ್ವಾಂಸರು ಒಳ್ಳೆಯ ಅಭಿಪ್ರಾಯ ಕೊಟ್ಟಿದ್ದಾರೆ. ನನ್ನ ಲೇಖನದ ಬಗೆಗೆ ನಾನೇ ಹೇಳಿಕೊಳ್ಳುವುದಕ್ಕಿಂತ ಓದುಗರ ಪ್ರತಿಕ್ರಿಯೆಗೆ ಬಿಡುತ್ತೇನೆ. ಹೀಗೆ ಈ ಮೂರನೇ ಭಾಗದಲ್ಲಿ ಪ್ರಸ್ತುತ ಸಂದರ್ಭದ ಹಿನ್ನೆಲೆಯಲ್ಲಿ ಅಕ್ಕನನ್ನು ಅಧ್ಯಯನ ಮಾಡಿದ ಲೇಖನಗಳೇ ಹೆಚ್ಚಾಗಿವೆ.

ಮೂರನೆ ಭಾಗದಲ್ಲಿಯೇ ಬರುವ ಇನ್ನೆರಡು ಲೇಖನಗಳು ಆನ್ವಯಿಕ ವಿಮರ್ಶೆಗೆ ಸಂಬಂಧಿಸಿದವುಗಳಾಗಿವೆ. ಡಾ. ಶಾಂತಾ ಇಮ್ರಾಪುರ ಅವರು, ಜನಪದರು ಕಂಡ ಅಕ್ಕ ಹೇಗಿದ್ದಾಳೆಂಬುದನ್ನು 'ಸಣ್ಣಾಟ' ಕೃತಿಯ ಮೂಲಕ ವ್ಯಕ್ತಪಡಿಸಿದರೆ, ಸಮಕಾಲೀನ ಕವಯತ್ರಿಯರು ಅಕ್ಕನನ್ನು ಹೇಗೆ ಚಿತ್ರಿಸಿದ್ದಾರೆಂಬುದನ್ನು ಡಾ. ಮಮತಾ ಸಾಗರ ತಮ್ಮ ಲೇಖನದಲ್ಲಿ ನಿರೂಪಿಸಿದ್ದಾರೆ.

ಅಕ್ಕಮಹಾದೇವಿ ಸಣ್ಣಾಟವನ್ನು ಸಂಪಾದಿಸಿ, ಪ್ರಕಟಿಸಿರುವ ಡಾ. ಶಾಂತಾ ಇಮ್ರಾಪುರ ಅವರು ಈ ಸಣ್ಣಾಟದ ಅಕ್ಕನನ್ನು ಕುರಿತು ತಮ್ಮ ಲೇಖನದಲ್ಲಿ ಪ್ರಸ್ತಾಪಿಸಿದ್ದಾರೆ. ಶಿವಾನಂದ ಕವಿ ೧೯೩೦–೪೦ರ ಸಂದರ್ಭದಲ್ಲಿ ಈ ಸಣ್ಣಾಟ ರಚಿಸಿದ್ದಾನೆಂದು ತಿಳಿಸಿರುವ ಲೇಖಕಿ ಈ ಸಣ್ಣಾಟದಲ್ಲಿ ಕಾಣುವ ಆಧುನಿಕತೆಯ ಪ್ರಭಾವವನ್ನೂ ಗುರುತಿಸಿದ್ದಾರೆ. ಈ ಸಣ್ಣಾಟ ವೀರಶೈವ ಧರ್ಮದ ಹಿರಿಮೆಯನ್ನು ಸಾರುವ ಮೂಲ ಆಶಯ ಹೊಂದಿದೆಯೆಂದು ಹೇಳಿದ್ದಾರೆ. ಈ ಸಣ್ಣಾಟದಲ್ಲಿ ಅಕ್ಕ ಕಲ್ಯಾಣಕ್ಕೆ ಹೋದುದನ್ನು ಪ್ರಸ್ತಾಪಿಸಿಲ್ಲ. ಆಕೆ ಉಡುತಡಿಯಿಂದ ನೇರವಾಗಿ ಶ್ರೀಶೈಲಕ್ಕೆ ಹೋಗುತ್ತಾಳೆ. ಆದರೆ ಸಣ್ಣಾಟದ ಮಂಗಲಪದದಲ್ಲಿ 'ಶ್ರೇಷ್ಠಕಲ್ಯಾಣಕ್ಕೆ ಹೋದಳೆಂಬ' ನುಡಿ ಬರುತ್ತದೆ. ಈ ಸಣ್ಣಾಟ, ಭಾಷೆ–ನುಡಿಗಟ್ಟು–ಗಾದೆಮಾತುಗಳಿಂದ ಗಮನ ಸೆಳೆಯುತ್ತದೆಂಬುದನ್ನು ಲೇಖಕಿ ನಿರೂಪಿಸಿದ್ದಾರೆ.

ಸಮಕಾಲೀನ ಮಹಿಳಾ ಕಾವ್ಯದ ಆಶಯಗಳ ಬೇರುಗಳನ್ನು ಮಹಾದೇವಿಯಕ್ಕನ ರಚನೆಗಳಲ್ಲಿ ಹುಡುಕುವ ಪ್ರಯತ್ನವನ್ನು ಡಾ. ಮಮತಾ ಸಾಗರ ತಮ್ಮ ಲೇಖನದಲ್ಲಿ ಮಾಡಿದ್ದಾರೆ.

ಆಧುನಿಕ ಕವಿಗಳು ಅಕ್ಕನನ್ನು ಕುರಿತು ಬರೆದ ಕವಿತೆಗಳ ಸಂಗ್ರಹ 'ಅಕ್ಕ' ಕೃತಿಯನ್ನು ನಾನು ೧೯೯೯ರಲ್ಲಿ ಪ್ರಕಟಿಸಿದ್ದೇನೆ. ಆ ಸಂಗ್ರಹದಲ್ಲಿ ಅನೇಕ ಮಹತ್ವದ ಕವಿತೆಗಳಿವೆ. ಆ ಕೃತಿಯನ್ನು ಡಾ. ಮಮತಾ ನೋಡಿದಂತಿಲ್ಲವೆನಿಸುತ್ತದೆ. ಹೀಗಾಗಿ ತಮ್ಮ ಲೇಖನದಲ್ಲಿ ಕೆಲವು ಕವಿತೆಗಳನ್ನು ಮಾತ್ರ ಉಲ್ಲೇಖಿಸಿದ್ದಾರೆ. ಸವಿತಾನಾಗಭೂಷಣ, ಸ.ಉಷಾ, ವೈದೇಹಿ, ಚ. ಸರ್ವಮಂಗಳಾ ಹೀಗೆ ಕೆಲವೇ ಕವಯತ್ರಿಯರ ಕವಿತೆಗಳ ತುಣುಕುಗಳನ್ನು ಈ ಲೇಖನದಲ್ಲಿ ಉಲ್ಲೇಖಿಸಲಾಗಿದೆ. ಆಧುನಿಕ ಮಹಿಳಾ ಕವಿಗಳು ಅಕ್ಕನ ಬದುಕು–ಬರಹಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಬಳಸಿಕೊಂಡಿದ್ದಾರೆಂದು ಡಾ. ಮಮತಾ ಅಭಿಪ್ರಾಯ ಪಟ್ಟಿದ್ದಾರೆ.

ಅಕ್ಕನನ್ನು ಕುರಿತು ಇನ್ನೂ ಅನೇಕ ಲೇಖನಗಳಿವೆ. ಅಕ್ಕನ ಸಮಗ್ರ ಲೇಖನಗಳನ್ನು ಪ್ರಕಟಿಸುವುದು ಈ ಯೋಜನೆಯ ಉದ್ದೇಶವಲ್ಲ. ಹೀಗಾಗಿ ಇಲ್ಲಿ ಪ್ರಾತಿನಿಧಿಕವಾಗಿ ಕೆಲವು ಲೇಖನಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗಿದೆ; ಕೆಲವು ಲೇಖನಗಳನ್ನು ಈ ಸಂಪುಟ ಕ್ಕಾಗಿಯೇ ಬರೆಸಲಾಗಿದೆ. ಈ ಕೃತಿ ಅಕ್ಕನನ್ನು ಕುರಿತು ಸಮಗ್ರವಾಗಿ ಚರ್ಚಿಸುತ್ತದೆಂದು ಹೇಳಲಾಗುವುದಿಲ್ಲ. ಪುರಾಣ–ಚರಿತ್ರೆ–ಜಾನಪದ–ಆಧುನಿಕತೆ–ಹೀಗೆ ಬೇರೆ ಬೇರೆ ಕ್ಷೇತ್ರಗಳಲ್ಲಿ ಅಕ್ಕ ಬೆಳೆದುನಿಂತ ಪರಿಯನ್ನು ಈ ಸಂಪುಟದಲ್ಲಿ ಕಟ್ಟಿಕೊಡಲಾಗಿದೆ. ಈ ಲೇಖನಗಳನ್ನು ಹೊರತುಪಡಿಸಿಯೂ, ಇನ್ನೂ ಮಹತ್ವದ ಲೇಖನಗಳು ಈ ಸಂಪುಟದ ಹೊರಗಡೆಯೇ ಉಳಿದುಕೊಂಡಿವೆ. ಪ್ರಾತಿನಿಧಿಕ ಸಂಗ್ರಹಗಳನ್ನು ತರುವಾಗ ಎದುರಿಸುವ ಬಿಕ್ಕಟ್ಟುಗಳು ಹಾಗೂ ಮಿತಿಗಳನ್ನು ಗಮನಿಸಿದಾಗ ನಾನು ಹೇಳಿದ ಮಾತು ಸ್ಪಷ್ಟವಾಗುತ್ತದೆ. ರಚನಾತ್ಮಕ ಪ್ರತಿಕ್ರಿಯೆಗೆ ಸದಾ ಸ್ವಾಗತವಿದೆ.

ಡಾ. ವಿಜಯಶ್ರೀ ಸಬರದ

ಸಂಪಾದಕರು

ಪರಿವಿಡಿ

ಭಾಗ – ೩

ಭಾಗ – ೧

೧. ಅಕ್ಕಮಹಾದೇವಿಯ ಚರಿತ್ರೆ ಕೆಲವು ಸಂಗತಿಗಳು

•

ಡಾ. ಎಂ. ಚಿದಾನಂದಮೂರ್ತಿ

ಅಕ್ಕಮಹಾದೇವಿ ಅಥವಾ ಮಹದೇವಿಯಕ್ಕ ಎಂದು ಪ್ರಸಿದ್ಧಳಾದ ಮಹಾ ಅನುಭಾವಿಯ ಜೀವಿತದ ಬಗ್ಗೆ ಇನ್ನೂ ಅನೇಕ ತೊಡಕುಗಳು ಉಳಿದುಕೊಂಡಿವೆ. ಅವಳಿಗೆ ವಾಸ್ತವವಾಗಿ ಮದುವೆಯಾಗಿತ್ತೇ ಇಲ್ಲವೇ ? ಮದುವೆಯಾಗಿ ಗೃಹಸ್ಥ ಜೀವನ ವನ್ನು ಅಥವಾ ಆ ಜೀವನದ ಹಿಂಸೆಯನ್ನು ಕೆಲಕಾಲವಾದರೂ ಅನುಭವಿಸಿದಳೇ ಇಲ್ಲವೇ ? ಇಂತಹ ಸಮಸ್ಯೆಗಳು ಕೆಲಕಾಲ ಜೀವಂತವಾಗಿದ್ದವು ಮತ್ತು ಈಗಲೂ ಇವೆ. ಅವಳು ತನ್ನ ಇಷ್ಟಕ್ಕೆ ವಿರುದ್ಧವಾಗಿ ಕೌಶಿಕನೆಂಬ ದೊರೆಯನ್ನು ಮದುವೆಯಾಗಿದ್ದಳೆಂದೂ ಅವನ ಅರಮನೆಯಲ್ಲಿ ಬಲವಂತದಿಂದ ಕೆಲಕಾಲ ಇದ್ದಳೆಂದೂ ಈಗ ಬಹುಮಟ್ಟಿಗೆ ಒಪ್ಪಿತವಾಗಿರುವ ಸಂಗತಿ.

ಆದರೆ 'ಕೌಶಿಕ' ಯಾರು ? ಅವನು ವಾಸ್ತವವಾಗಿ ದೊರೆಯೇ ? ಅವನನ್ನು ಇತಿಹಾಸದಲ್ಲಿ ಗುರುತಿಸಲು ಸಾಧ್ಯವೇ ? ಈ ಸಮಸ್ಯೆಗಳು ಇನ್ನೂ ಬಿಡಿಸದೆ ಉಳಿದುಕೊಂಡಿವೆ. ಇವನ್ನು ಬಿಡಿಸಲು ಅಂತಹ ಗಂಭೀರ ಪ್ರಯತ್ನಗಳೂ ವಿಶೇಷವಾಗಿ ನಡೆದಂತಿಲ್ಲ. ಕೌಶಿಕನ ಬಗ್ಗೆ ಐತಿಹಾಸಿಕವಾಗಿ ಏನೂ ತಿಳಿಯದೆಂದೇ ಬಹುತೇಕ ಜನರ ನಂಬಿಕೆಯಾಗಿದೆ.

ಈ ಸಮಸ್ಯೆಯನ್ನು ಎದುರಿಸಬೇಕಾದರೆ ಮೊದಲು ಅಕ್ಕಮಹಾದೇವಿಯ ಜನ್ಮಸ್ಥಳ ಯಾವುದು ಎಂಬುದು ನಿರ್ಣಯವಾಗಬೇಕು. ಹರಿಹರನ ಮಹಾದೇವಿಯಕ್ಕನ ರಗಳೆಯಲ್ಲಿ ಬರುವ 'ಉಡುತಡಿ'ಯು ಗುಲ್ಬರ್ಗಾ ಜಿಲ್ಲೆಯ ಮಹಾಗವ್ ಆಗಿರಬಹು ದೆಂಬ ಒಂದು ಊಹೆ ಇದ್ದು[೧] ಅದು ಪ್ರಸ್ತಾವನೆ ಪು. ೯).

ಅಕ್ಕಮಹಾದೇವಿಯ ಜೀವನಕ್ಕೆ ಸಂಬಂಧಿಸಿದಂತೆ ನಮಗೆ ದೊರಕುವ ಅತ್ಯಂತ ಪ್ರಾಚೀನ ಆಕರವೆಂದರೆ ಹರಿಹರನ (ಸು. ೧೨೦೦-೨೦) ಕೃತಿಯೇ. ಉಡುತಡಿ ಎಂಬ ಪಟ್ಟಣದ ದೇಶವನ್ನು ಆಳುತ್ತಿದ್ದವನು 'ಕೌಶಿಕ' ಎಂಬ ಹೆಸರಿನ 'ಮನ್ನೆಯ' ಎಂದು ಅಲ್ಲಿ ಹೇಳಿದೆ.[೨] ಅಲ್ಲಿ ಬರುವ 'ಮನ್ನೆಯ' (=ಮಾನ್ಯ a local chieftain or a governer) ಎಂಬುದು ಆ ಕೌಶಿಕ ಸ್ವತಂತ್ರ ದೊರೆಯಾಗಿರಲಿಲ್ಲವೆಂದೂ ಚಕ್ರವರ್ತಿಯ ಕೈ ಕೆಳಗೆ ಸಾಮಂತ ರಾಜನೋ ಮಂಡಲೇಶ್ವರನೋ ಆಗಿದ್ದ ವ್ಯಕ್ತಿಯಾಗಿದ್ದನೆಂಬುದನ್ನೂ ಸ್ಪಷ್ಟಪಡಿಸುತ್ತದೆ. ಅವನ ಕೈಕೆಳಗೆ ಮಂತ್ರಿಗಳಿದ್ದರೆಂದೂ ಅವನಿಗೆ ವಾಸಕ್ಕೆ 'ಅರಮನೆ' ಇದ್ದಿತೆಂದೂ ವರ್ಣನೆಗಳು ಅಲ್ಲಿ ಬರುತ್ತವೆ.

ಉಡುತಡಿ ಆ ರಾಜನ ರಾಜಧಾನಿಯೋ ಅಥವಾ ರಾಜಧಾನಿಯ ಭಾಗವೋ ಅಥವಾ ರಾಜಧಾನಿಗೆ ಸಮೀಪದ ಊರೋ ಆಗಿದ್ದರೆ, ಆಗಿನ ಉಡುತಡಿಯೇ ಈಗಿನ ಉಡುಗಣಿ–ತಡುಗಣಿ ಗ್ರಾಮಗಳಾಗಿದ್ದರೆ, ಮಹಾದೇವಿಯಕ್ಕನ ಕಾಲ ಸು. ಕ್ರಿ. ಶ. ೧೧೬೦–೬೫ ಎಂದು ನಂಬುವುದಾದರೆ (ಈ ಬಗ್ಗೆ ಮಾತ್ರ ಅನುಮಾನಕ್ಕೆ ಆಸ್ಪದವಿಲ್ಲ) ಆಗ 'ಕೌಶಿಕ' ಎಂಬ ದೊರೆ ಈಗಿನ ಉಡುಗಣಿ–ತಡುಗಣಿ ಗ್ರಾಮಗಳ ಪ್ರದೇಶದಲ್ಲಿ ಆಳುತ್ತಿದ್ದ ಯಾವನೋ ಸಾಮಂತ ದೊರೆಯೋ ಒಬ್ಬ ರಾಜನ ಮಟ್ಟದ ಪ್ರಧಾನ ಅಧಿಕಾರಿಯೋ ಆಗಿರಬೇಕು. ನಮಗೆ ಆ ಪ್ರದೇಶದಲ್ಲಿ ಆಳುತ್ತಿದ್ದ ಮನ್ನೆಯರು ಯಾರು ಎಂಬುದು ಗೊತ್ತಿದೆ ಶಾಸನಗಳ ಮೂಲಕ.

ಉಡುಗಣಿ–ತಡುಗಣಿ ಗ್ರಾಮಗಳು ಈ ದಿನ ಚಿಕ್ಕ ಊರುಗಳು. ಅಲ್ಲಿಗೆ ಸುಮಾರು ಮೂರು ಮೈಲಿ ದೂರದಲ್ಲಿರುವ ಬಳ್ಳಿಗಾವೆಯ ಬನವಸೆ ಪನ್ನಿರ್ಚ್ಛಾಸಿರ ಅಥವಾ ಬನವಾಸಿ–೧೨೦೦೦ ಎಂಬ ಪ್ರಾಂತದ ರಾಜಧಾನಿಯಾಗಿದ್ದು ಹನ್ನೆರಡನೆಯ ಶತಮಾನದ ಮಧ್ಯ ಕರ್ನಾಟಕದ ಅತಿ ಮುಖ್ಯ ಸಾಂಸ್ಕೃತಿಕ–ರಾಜಕೀಯ ಕೇಂದ್ರವಾಗಿದ್ದಿತು. ಬಳ್ಳಿಗಾವೆ ಈ ದಿನ ಒಂದು ಹಳ್ಳಿಯಾಗಿದ್ದರೂ ಹಿಂದೆ ಸಂಪದ್ಭರಿತ ಪಟ್ಟಣವಾಗಿದ್ದು ಚಾಲುಕ್ಯ ಸಾಮ್ರಾಜ್ಯದ ಮುಖ್ಯ ಕೇಂದ್ರಗಳಲ್ಲೊಂದೆನಿಸಿತ್ತು. ಅದನ್ನು ರಾಜಧಾನಿಯಾಗಿ ಮಾಡಿಕೊಂಡು ಚಾಲುಕ್ಯರ ಸಾಮಂತರ ದೊರೆಗಳು ಅಥವಾ ಮಾಂಡಲೀಕರು ಆಳುತ್ತಿದ್ದರು. ಉಡುಗಣಿ–ತಡುಗಣಿಗಳೂ ಬಳ್ಳಿಗಾವೆಯೂ ಎಷ್ಟು ಹತ್ತಿರದ ಊರುಗೆಂದರೆ ಆ ಎರಡು ಪ್ರದೇಶಗಳಲ್ಲಿ ಬೇರೆ ಬೇರೆ 'ಮನ್ನೆಯ'ರು ಆಳಲು ಬಹುಶಃ ಸಾಧ್ಯವಿಲ್ಲ. ಜೊತೆಗೆ ಹರಿಹರನಲ್ಲೇ ಉಡುತಡಿಯು ಕೌಶಿಕನೆಂಬ ಮನ್ನೆಯ ನೃಪನಿದ್ದ 'ಪಟ್ಟಣ ದೇಶದಲ್ಲಿದ್ದ' ಒಂದು ಪಟ್ಟಣವೆಂಬ ಮಾತು ಬಂದಿರುವುದನ್ನು ನೋಡಿದರೆ ಉಡುತಡಿ ಬೇರೆ, ಕೌಶಿಕನ ರಾಜಧಾನಿ ಬೇರೆ ಎಂಬ ಸೂಚನೆ ಹೊರಡುತ್ತದೆ. ಅದೇನೇ ಇರಲಿ, ಸು. ಕ್ರಿ.ಶ. ೧೬೦೦ರಲ್ಲಿ ಈ ಪ್ರದೇಶವು ಕಲ್ಯಾಣವನ್ನು ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದ ಚಾಲುಕ್ಯ ದೊರೆಗಳ ನಂತರ ಬಂದ ಕಲಚುರಿಗಳ ಆಡಳಿತಕ್ಕೆ ಸೇರಿತ್ತು. ಅದರ ಸಾಮಂತರು ಬನವಸೆ–೧೨೦೦೦ ನ್ನಾಡನ್ನು ಬಳ್ಳಿಗಾವೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದರು. ಹಾಗೆ ಆಳುತ್ತಿದ್ದ ಇಬ್ಬರು ಸಾಮಂತರೆಂದರೆ ಕೇಶಿಮಯ್ಯ ದಂಡನಾಯಕ ಮತ್ತು ಕಸಪಯ್ಯ ದಂಡನಾಯಕರು. ಹಿಂದಿನ ಉಡುತಡಿಯು ಈಗಿನ ಉಡುಗಣಿ–ತಡುಗಣಿಯೇ ಆಗಿದ್ದರೆ ಕೌಶಿಕನು ಈ ಇಬ್ಬರು ದಂಡನಾಯಕರಲ್ಲಿ ಒಬ್ಬ ಆಗಿರಬೇಕು; ಬಹುಶಃ ಬೇರೆ ಸಾಧ್ಯವೇ ಇಲ್ಲ.

ಕೇಶಿಮಯ್ಯ (ಕೇಶವ) ಮತ್ತು ಕಸಪಯ್ಯರ (ಕಸವ) ಅನೇಕ ಶಾಸನಗಳು ದೊರಕಿವೆ. (ಮುಂದೆ ನೋಡಿ), ಅವರಿಬ್ಬರೂ ಬಿಜ್ಜಳನ ಮಂತ್ರಿಗಳಾಗಿದ್ದರೆಂದೂ ಇತರ ಮಂತ್ರಿಗಳ ಜೊತೆ ಸೇರಿ ಬಸವಣ್ಣನ ವಿರುದ್ಧ ದೂರು ಹೇಳಿದರೆಂದೂ ಬಸವ ಪುರಾಣ (೧೧.೪) ಹೇಳುತ್ತದೆ.

ಕಾಳಿಮರಸಂ ಕರಿಯ ಕೇಶವ
ಚೋಳಿಯಣ್ಣಂ ಕುಂದತಮಿ ಭೂ
ಪಾಳ ಹೆಮ್ಮಾಡಿ* ಯುಗ್ರ ಚಂಡಿಯು ಕಸವ ಮಂತ್ರಿಗಳು।
ಮೇಳಿಗರಸನ ಸಹಿತ ತೊಮ್ಮೊಳು
ಮೇಳವಿಸಿ ಬಿಜ್ಜಳ ಮಹೀಶಗೆ
ಹೇಳಿದರು ದೂರಿದರು ಬಸವಣ ದಂಡನಾಯಕನ॥

ಇಲ್ಲಿ ಬರುವ ಮಂತ್ರಿಗಳು ರಾಜಧಾನಿ ಕಲ್ಯಾಣದಲ್ಲೇ ಸದಾ ಇದ್ದವರಲ್ಲ. ಇವರು ಮಂತ್ರಿಗಳಾಗಿದ್ದು ರಾಜನಿಗೆ ಆಡಳಿತ ವಿಚಾರದಲ್ಲಿ ಸಲಹೆಗಳನ್ನು ಕೊಡುತ್ತಿದ್ದವರು; ಇವರಲ್ಲಿ ಕೆಲವರು ಚಕ್ರವರ್ತಿ ಪ್ರತಿನಿಧಿಗಳಾಗಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಆಡಳಿತವನ್ನು ನೋಡಿಕೊಳ್ಳುತ್ತಿದ್ದವರು. ಇವರು ತಮ್ಮ ತಮ್ಮ ಪ್ರದೇಶಗಳನ್ನು 'ಸುಖ ಸಂಕಥಾ ವಿನೋದದಿಂದ' ಆಳುತ್ತಿದ್ದರು ಎಂದೇ ಶಾಸನಗಳಲ್ಲಿ ಉಕ್ತವಾಗಿದೆ. 'ಮನ್ನೆಯ'ರಾಗಿದ್ದ ಇವರ ಶಕ್ತಿಯೇ ಚಕ್ರವರ್ತಿಯ ಶಕ್ತಿಯಾಗಿತ್ತು.

ಬಿಜ್ಜಳನ ಪ್ರತಿನಿಧಿಗಳಾಗಿ ಬಳ್ಳಿಗಾವೆಯ ಪ್ರದೇಶವನ್ನು ಆಳುತ್ತಿದ್ದ ಕೇಶಿಮಯ್ಯ ಮತ್ತು ಕಸಪಯ್ಯ ನಾಯಕರಲ್ಲಿ ಒಬ್ಬನನ್ನು ಕೌಶಿಕನೊಡನೆ ಸಮೀಕರಿಸಬಹುದೆಂದು ಹಿಂದೆ ಊಹಿಸಲಾಯ್ತು. ಇಬ್ಬರೂ ಗಮನಾರ್ಹ ವ್ಯಕ್ತಿಗಳಾಗಿದ್ದರಿಂದ ಇಬ್ಬರ ಬಗ್ಗೆಯೂ ದೊರಕುವ ಸಂಗತಿಗಳನ್ನು ನೋಡಿ, ಯಾರ ಜೊತೆ ಕೌಶಿಕನನ್ನು ಸಮೀಕರಿಸಬಹು ದೆಂಬುದನ್ನು ನಂತರ ಪರಿಶೀಲಿಸೋಣ.

ಕೇಶಿಮಯ್ಯ ದಂಡನಾಯಕ

ಇವನ ಕೆಲವು ಶಾಸನಗಳು ಬಳ್ಳಿಗಾವೆ ಮತ್ತು ಸುತ್ತಮುತ್ತ ದೊರಕಿವೆ. ಅವುಗಳಲ್ಲಿ ಕೆಲವು ಹೀಗಿವೆ :

೧. ಬಳ್ಳಿಗಾವೆಯಲ್ಲೇ ಇರುವ ಬಿಜ್ಜಳನ ಕಾಲದ ಶಾಸನವೊಂದು[೩] ಇವನ ಬಗ್ಗೆ ಅನೇಕ ವಿವರಗಳನ್ನು ಕೊಡುತ್ತದೆ. ಇವನು ಬ್ರಾಹ್ಮಣ, 'ಚಮೂನಾಥ ಚೂಡಾಮಣಿ'ಯಾಗಿದ್ದ ಇವನು ಸ್ಫುರದ್ರೂಪಿಯೂ ಶೂರನೂ ಆಗಿದ್ದ. ಲಕ್ಷ್ಮೀದೇವಿ ಮತ್ತು ಸಿರಿದೇವಿ ಇವನ ಪತ್ನಿಯರು. ಇವನ ಕೈಕೆಳಗೆ ಐದು ಜನ 'ಮಹತ್ತರ'ರೂ ಅನೇಕ 'ರಾಜಾಧ್ಯಕ್ಷರ ಕರಣ'ಗಳೂ ಕೆಲಸ ಮಾಡುತ್ತಿದ್ದರು. ಇಲ್ಲಿ ಬರುವ ಮಾತುಗಳು ಹೀಗಿವೆ : "ಅಂತು ಸಮಸ್ತ ಧರ್ಮಾಧ್ಯಕ್ಷಂಗಳುಂ ರಾಜಾಧ್ಯಕ್ಷಂಗಳೆನಿಸಿದ ಕರಣಂಗಳ್ವೆರಸು ಶರಣಾಷ್ಟತರ ಕ್ಷಾಮಣಿಯುಂ ನಿಜವಂಶ ಚೂಡಾಮಣಿಯುವೆನಿಸಿದ ದಂಡನಾಯಕ ಕೇಶವದೇವಂ ಬನವಸೆಪನ್ನಿರ್ಚ್ಛಾಸಿರಮುಮಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳನದಿಂ ಪಾಳಿಸುತ್ತಂ ರಾಜಧಾನಿ ಬಲಿಪುರ (ಬಳ್ಳಿಗಾವೆ) ದೊಳಿರ್ದೊಂದು ದಿವಸವಾಸ್ಥಾನ ಮಂಡಳ ಮಧ್ಯಸ್ಥಿತನುಂ ಸಕಳ ಪ್ರಧಾನ ಪರಿಜನ ಪುರಜನ ಪರಿವೃತನಾಗಿರ್ಪುದಮಲ್ಲಿ". ಇಲ್ಲಿ ಬರುವ ಮಾತುಗಳನ್ನು ನೋಡಿದರೆ ಅವನು ಸಾಮಂತ ದೊರೆಗೆ ಸಮಾನ ಅಧಿಕಾರವನ್ನುಳ್ಳ ವ್ಯಕ್ತಿಯೆಂಬುದು ಸ್ಪಷ್ಟವಾಗುತ್ತದೆ. ಅವನು ಬಳ್ಳಿಗಾವೆಯಲ್ಲಿ ದತ್ತಿಗಳನ್ನು ಕೊಡುವಾಗ ಕಸಪಯ್ಯನ 'ಅನುಕೂಲತೆ'ಯನ್ನು ನೋಡಿ ಬಿಟ್ಟುಕೊಟ್ಟಂತೆ ವರ್ಣಿತವಾಗಿದೆ. ("ಧರ್ಮೋದ್ಧಾರಕಂ ಮಹಾಪ್ರಧಾನಂ ಕಸಪಯ್ಯ ನಾಯಕನನುಕೂಲತೆ ಯೊಳಂ") ಕಸಪಯ್ಯನನ್ನು 'ಮಹಾಪ್ರಧಾನ' ಎಂದು ಕರೆದಿರುವುದು, ಕೇಶಿಮಯ್ಯ ತನ್ನ ಆಸ್ಥಾನದಲ್ಲಿ ಸಕಳ ಪ್ರಧಾನರಿಂದ ಪರಿವೃತನಾಗಿದ್ದನೆಂಬ ಸಂಗತಿ ಇಲ್ಲಿ ಗಮನಾರ್ಹ. ಕೇಶವದಂಡನಾಯಕನಿಗೆ ಬಳ್ಳಿಗಾವೆಯ ಕೋಡಿಯ ಮಠದ ಕಳಾಮುಖ ಗುರು ವಾಮ ಶಕ್ತಿದೇವ ಎಂಬುವರು ಆರಾಧ್ಯರಾಗಿದ್ದರೆಂದು ಶಾಸನದಲ್ಲಿ ಉಕ್ತವಾಗಿದೆ.

೨. ಮೇಲಿನ ಶಾಸನಕ್ಕಿಂತ ಒಂದು ವರ್ಷದ ಹಿಂದಿನ ತಾಳಗುಂದ ಶಾಸನದಲ್ಲಿ[೪] ಇವನನ್ನು ಬಿಜ್ಜಳನ ಆಶ್ರಿತನೆಂದು ಕರೆದಿದೆ. ಇವನಿಗೆ 'ಮಹಾಪ್ರಧಾನ' ಎಂಬ ವಿಶೇಷಣವೂ ಅಲ್ಲಿ ಬಂದಿದೆ. "ಮಹಾಪ್ರಧಾನಂ ಕೇಶವದಂಡನಾಯಕಂ ಬನವಸೆ ಪನ್ನಿಛ್ಛಾಸಿರಮುಮಂ ದುಷ್ಟನಿಗ್ರಹ ಶಿಷ್ಟ ಪ್ರತಿಪಾಳನದಿಂದ ಪಾಳಿಸಿ ರಾಜಧಾನಿ ಬಲಿಪುರದೊಳಿರ್ದು..." ಎಂದು ಅಲ್ಲಿ ಹೇಳಿದೆ. ಇಲ್ಲಿಯೂ ಬ್ರಾಹ್ಮಣರಿಗೆ ದತ್ತಿ ಕೊಡುವಾಗ ಕಸಪಯ್ಯ ಮತ್ತು ವಾವಣಂ (ಇವನು ತಾಳಗುಂದದ ಅಧಿಕಾರಿ ಯಿರಬೇಕು) ಅವರ 'ಅನುಕೂಲತೆ'ಯನ್ನು ಪಡೆದ ಎಂಬ ಮಾತು ಬರುತ್ತದೆ.

೩. ಬಿಜ್ಜಳನ ಕಾಲದ ಈ ಶಾಸನದಲ್ಲಿ[೫] ಕೇಶಿಮಯ್ಯನನ್ನು 'ಬನವಸೆನಾಡ ಹೆಗ್ಗಡೆ' ಎಂದು ಕರೆದಿದೆ.

೪. ಕ್ರಿ. ಶ. ೧೧೬೮ರ ಬಳ್ಳಿಗಾವೆಯ ಶಾಸನ ಗಮನಾರ್ಹ.[೬] ಇದು ಬಿಜ್ಜಳನ ಆಳಿಕೆಯ ಕೊನೆಯ ವರ್ಷ ಮತ್ತು ಆ ವರ್ಷವೇ ಬಿಜ್ಜಳನು ರಾಜ್ಯ ತ್ಯಾಗ ಮಾಡಿ ಅವನ ಮಗ ರಾಯ ಮುರಾರಿ ಸೋವಿದೇವ ಪಟ್ಟಕ್ಕೆ ಬಂದದ್ದು. ಈ ಸೋವಿದೇವನ ಕಾಲಕ್ಕೆ ಸೇರಿದ ಈ ಶಾಸನದಲ್ಲಿ ಬರುವ 'ಬ್ಯಾಳಿಕೆ'ಯ ಕೇಶಿಮಯ್ಯನೂ ಹಿಂದೆ ಹೇಳಿದ ಕೇಶಿಮಯ್ಯನೂ ಅಭಿನ್ನರೆಂಬುದರಲ್ಲಿ ಸಂದೇಹವಿಲ್ಲ. ಇಲ್ಲಿ ಅವನನ್ನು 'ಸಮಧಿಗತ ಪಂಚ ಮಹಾಶಬ್ದ ಮಹಾಸಾಮಂತ' ಇತ್ಯಾದಿ ವಿಶ್ಲೇಷಿಸಲಾಗಿದೆ. ಇಲ್ಲಿ ತನ್ನ ಒಡೆಯನಿಗಾಗಿ ಅನೇಕ ದೇಶ ಗಳನ್ನು ಗೆದ್ದುಕೊಟ್ಟ ವಿಷಯವಿದೆ. ಆ ಕಾರಣದಿಂದಲೇ ಇರಬಹುದು – ಬಹುಶಃ ಅವನಿಗೆ 'ಸರ್ವಾಧಿಕಾರಿ' ಎಂಬ ಬಿರುದೂ ಇದೆ. ಈ ಶಾಸನದಿಂದ, ಅವನ ಪ್ರಭುತ್ವವು ಕೆಲವು ಕಾಲ ಬನವಸೆ–೧೨೦೦೦ ನಾಡಿನ ಮೇಲೆ ಮಾತ್ರವಲ್ಲದೆ ಹಾನುಗಲ್ಲು–೫೦೦೦ ಮತ್ತು ತದ್ದವಾಡಿ – ೧೦೦೦ ಮುಂತಾದ ಪ್ರದೇಶಗಳ ಮೇಲೂ ಇತ್ತೆಂಬ ವಿಷಯ ಗೊತ್ತಾಗುತ್ತದೆ.

೫. ಮುಂದಿನ ಅವನ ಅನೇಕ ಶಾಸನಗಳು ಕ್ರಿ.ಶ. ೧೧೭೯[೭], ಕ್ರಿ.ಶ. ೧೧೮೧[೮] ರವರೆಗೂ ದೊರಕುತ್ತದೆ. ಶಿಕಾರಿಪುರ ೧೧೯ರ ಶಾಸನದಲ್ಲಂತೂ ಅವನಿಗೆ ಬಿಜ್ಜಳನ ನಂತರ ಆಳಿಕೆಗೆ ಬಂದ ಅವನ ಮಕ್ಕಳಲೊಬ್ಬನಾದ ಆಹವಮಲ್ಲನು (ಸು. ೧೧೮೦–೮೩) ವಿಶೇಷವಾಗಿ 'ಬನವಸೆನಾಡ'ನ್ನು ಅದರ ತಂದೆಯಂತಿದ್ದು ಪಾಲಿಸೆಂದು ಕೊಡುತ್ತಾನೆ. ಗೌರವಾಸ್ಪದನಾಗಿದ್ದ ಅವನಿಗೆ ಈ ಹೊತ್ತಿಗೆ ವಯಸ್ಸು ಆಗಿತ್ತೆಂದು ಕಾಣುತ್ತದೆ. ಇವನಿಗೆ ಕೃಷ್ಣಕೇಶವ, ಕೃಷ್ಣವಿಭು ಕೇಶವದೇವ ಎಂಬ ಹೆಸರುಗಳೂ ಇದ್ದುವೆಂದು ಈ ಶಾಸನ ಹೇಳುತ್ತದೆ. ಬಿಜ್ಜಳನ ಕಾಲದ ಶಾಸನವೊಂದರಲ್ಲಿ ಇವನನ್ನು 'ಕರಿಯ ಕೇಶಿಮಯ್ಯ' ಎಂದು ಕರೆದಿದೆ.[೯] ಸು. ೧೧೭೦ರ ಶಾಸನದ ಪ್ರಕಾರ ಇವನಿಗೆ ಚೋಳಿಕ್ಯ ಕೇಸಿಮಯ್ಯ ಎಂಬ ಹೆಸರು ಇತ್ತೆಂದು ತಿಳಿದುಬರುತ್ತದೆ.* (ಹಿಂದಿನ ಶಾಸನವೊಂದರಲ್ಲಿ ಬರುವ 'ಬ್ಯಾಳಿಕೆಯ' ಎಂಬುದು 'ಚೋಳಿಕ್ಯ' ಎಂಬುದು ತಪ್ಪು ರೂಪವೆಂದು ತೋರುತ್ತದೆ. ಬಸವಪುರಾಣದಲ್ಲಿ ಬರುವ 'ಕರಿಯ ಕೇಶವ ಚೋಳಿಯಣ್ಣಂ' ಎನ್ನುವುದು ಒಂದೇ ಹೆಸರೆಂದು ಭಾವಿಸಿದರೆ ಅದು ಚೋಳಿಕೆಯ ಕರಿಯ ಕೇಶವದಂಡನಾಯಕನನ್ನು ಸೂಚಿಸುತ್ತದೆಯೆಂದು ಭಾವಿಸಬೇಕಾಗುತ್ತದೆ. ಈ ಕರಿಯ ಕೇಶವನು ಬನವಸೆ – ೧೨೦೦೦ ಪ್ರಾಂತವನ್ನು ಒಬ್ಬ ಹಿರಿಯ ಅಧಿಕಾರಿಯಂತೆ, ಸಾಮಂತ ದೊರೆಯಂತೆ ಸುಮಾರು ಕ್ರಿ.ಶ. ೧೧೫೮ರಿಂದ ಕ್ರಿ.ಶ. ೧೧೮೧ರವರೆಗೆ, ಎಂದರೆ ಇಪ್ಪತ್ತಮೂರು

ವರ್ಷಗಳಿಗೆ ಮೇಲ್ಪಟ್ಟು ಆಳಿದಂತೆ ಶಾಸನಗಳು ತಿಳಿಸುತ್ತವೆ. ಇವನ ಬಗ್ಗೆ ಯಾವುದೇ ಶಾಸನವೂ ವಿರೋಧದ ಮಾತನ್ನು ಆಡಿಲ್ಲ. ಇವನ ಪ್ರಾಮಾಣಿಕತೆಯನ್ನು ಶಂಕಿಸಿಲ್ಲ. ಒಂದೇ ಶಾಸನದಲ್ಲಿ[೧೦] ಅವನು ಒಂದು ಊರನ್ನು ನುಗ್ಗಿ ಅಲ್ಲಿಯ ತುರುಗಳನ್ನು ಅಪಹರಿಸಿ ಆ ಊರಿನ ಸ್ತ್ರೀಯರ ಉಡೆಯನ್ನು ಅಪಹರಿಸಿದ ಎಂಬ ಮಾತು ಬರುತ್ತದೆ. ಊರನ್ನು ನುಗ್ಗಿ ಸ್ತ್ರೀಯರ ಉಡೆ ಅಪಹರಿಸುವುದು ಒಂದು ಬಗೆಯ ಸವಾಲು ಇದ್ದಂತೆ, ಅದು ಶೌರ್ಯದ ಪ್ರತೀಕ. ಕೇಶಿಮಯ್ಯನ ಪರವಾಗಿ ಊರನ್ನು ವಶಪಡಿಸಿಕೊಂಡ ಸೈನಿಕರು ಅಕಸ್ಮಾತ್ ಒಂದು ವೇಳೆ ಅಚಾತುರ್ಯವನ್ನೇ ಮಾಡಿದ್ದರೂ ಅದು ಕೇಶೀಮಯ್ಯನ ವೈಯಕ್ತಿಕ ಚಾರಿತ್ರಕ್ಕೆ ಕಳಂಕವನ್ನು ತರುವಂತಹುದಲ್ಲ. ಅವನು ಏನಿಲ್ಲವೆಂದರೂ ಇಪ್ಪತ್ತ ಮೂರು ಇಪ್ಪತ್ತೈದು ವರ್ಷಗಳಿಗೆ ಮೇಲ್ಪಟ್ಟು ದೀರ್ಘಕಾಲ ಕಳಚುರ್ಯರ ಬಳಿ ಅಧಿಕಾರಿಯಾಗಿದ್ದು, ಬಿಜ್ಜಳನ ಸಾವಿನ ನಂತರ ಉಂಟಾಗಿರಬಹುದಾದ ಕ್ಷೋಭೆಯಲ್ಲಿ ಸ್ವತಂತ್ರವಾಗಲು ಹವಣಿಸಿದ ನಾಡುಗಳನ್ನು ಸೋಲಿಸಿ ಒಡೆಯ ಸೋವಿ ದೇವನಿಗೆ ವಶ ಮಾಡಿ ತನ್ನ ಶೌರ್ಯ ಪ್ರಾಮಾಣಿಕತೆಗಳನ್ನು ಮೆರೆದು ಎಲ್ಲರಿಂದಲೂ ಗೌರವಾರ್ಹನಾದ ಸಮರ್ಥವ್ಯಕ್ತಿ, ಒಳ್ಳೆಯ ಅಧಿಕಾರಿ ಎನ್ನಿಸಿಕೊಂಡ. ಬದುಕಿರುವಾಗಲೇ ಕೀರ್ತಿವಂತನಾಗಿದ್ದ.

ಕಸಪಯ್ಯ ನಾಯಕ

ನಮಗೆ ತಿಳಿದಂತೆ ಕಸಪಯ್ಯನ ಹೆಸರು ಹೇಳುವ ಶಾಸನಗಳಲ್ಲಿ ಮುಖ್ಯವಾದವು ಹೀಗಿವೆ:

೧. ಕ್ರಿ. ಶ. ೧೧೫೫ರ ಶಾನಸ ಕಾಲದಲ್ಲಿ[೧೧] ಚಾಲುಕ್ಯರ ನೂರ್ಮಡಿ ತೈಲ ಆಳುತ್ತಿದ್ದ, ಸಾಮಂತ ಬಿಜ್ಜಳನ ಕೀರ್ತಿ ಎಲ್ಲ ಕಡೆಗೂ ಹಬ್ಬಿದ್ದ ಕಾಲ. ಆಗ ಬಿಜ್ಜಳನ 'ಪಾದಪದ್ಮೋಪ ಜೀವಿ' ಯಾಗಿದ್ದ ಕಸಪಯ್ಯನು ಬನವಾಸಿ-೧೨೦೦೦ವನ್ನು ಆಳುತ್ತಿದ್ದಂತೆ ಈ ಶಾಸನವು ವರ್ಣಿಸುತ್ತದೆ.

೨. ಸು. ೧೧೬೦ರ ಹರಿಹರನ ಶಾಸನದಲ್ಲಿ[೧೨] ಅವನು ಬನವಾಸಿ ನಾಡನ್ನು ಆಳುತ್ತಿದ್ದಂತೆ ಹೇಳಿದೆ ಮತ್ತು ಅವನನ್ನು 'ಆ ಧರಣೀಶ್ವರ (ಬಿಜ್ಜಳ) ಪದ ಸೇವಾಧೀನ' ಎಂದು ವರ್ಣಿಸಿದೆ.

೩. ಅದೇ ಹರಿಹರನ ಇನ್ನೊಂದು ಶಾಸನದಲ್ಲಿ[೧೩] ಸಾಮಂತ ಬಿಜ್ಜಳನ ಪಾದಪದ್ಮೋಪ ಜೀವಿಯಾಗಿದ್ದ ಕಸಪಯ್ಯನನ್ನು ಬಹುವಾಗಿ ಹೊಗಳಿದೆ.

ಚತುರುಪದಾವಿಶುದ್ಧಮತಿ ಚಿತ್ತಭವಪ್ರತಿರೂಪ ಸುಂದರಾ|
ಕೃತಿ ಸುರಶೈಲಸನ್ನಿಭಮಹೋನ್ನತಿ ವಿಪ್ರಜನೇಷ್ಟದಾನ ಸಂ|
ಗತಿ ರಿಪುವೃಂದದುರ್ಮದನಿವಾರಣಕಾರಣ ಚಾರುಸಾಹಸ|
ಸ್ಥಿತಿ ಕಸಪಯ್ಯನಾಯಕನೊಳೆಯ್ದೆ ಜಗನ್ನುತಿವೆತ್ತು ತೋರುಗುಂ ||

ಇಲ್ಲಿ ಅವನನ್ನು ರಾಜ ಬಗೆಬಗೆಯಾಗಿ ಪರೀಕ್ಷಿಸಿ ಅಧಿಕಾರಕ್ಕೆ ತೆಗೆದುಕೊಂಡದ್ದು ('ಚತುರುಪಧಾವಿಶುದ್ಧ), ಅವನು ನೋಡಲು ಸುಂದರನಾಗಿದ್ದುದು, ಉದಾರಿಯೂ ಶೂರನೂ ಆಗಿದ್ದುದು ಸೂಚಿತವಾಗಿದೆ.

೪. ಕ್ರಿ.ಶ. ೧೧೬೨ರ ಬಳ್ಳಿಗಾವೆಯ ಶಾಸನವು ಬಹು ಮುಖ್ಯವಾದುದು[೧೪]. ಆ ವರ್ಷದ ಸರಿಸುಮಾರಿನಲ್ಲೇ ಕಲಚುರಿ ವಂಶದ ಸಾಮಂತ ಬಿಜ್ಜಳನು ತನ್ನ ಅಧಿರಾಜನಾಗಿದ್ದ ಚಾಲುಕ್ಯ ಚಕ್ರವರ್ತಿ ತೈಲಪನನ್ನು ಕೊಂದು ತಾನೇ ಚಕ್ರವರ್ತಿಯೆಂದು ಅಧಿಕೃತವಾಗಿ

ಘೋಷಿಸಿಕೊಂಡದ್ದು. ಆ ವರ್ಷ ಬಿಜ್ಜಳನು 'ದಕ್ಷಿಣ ದಿಗ್ಭಾಗ'ವನ್ನು ಸಾಧಿಸುವುದಕ್ಕಾಗಿ ಬಳ್ಳಿಗಾವೆಯ ಪ್ರದೇಶಕ್ಕೆ ಬಂದಾಗ, ಬಳ್ಳಿಗಾವೆಯಲ್ಲಿ ಸೇರಿದ್ದ ತುಂಬಿದ ಸಭೆಯಲ್ಲಿ ಕಸಪಯ್ಯ ಎದ್ದುನಿಂತು, ಆ ಪಟ್ಟಣದ ಕೇದಾರೇಶ್ವರ ಮಠದ ಮಹಿಮೆಯನ್ನು ಹೊಗಳಿ ಬಿಜ್ಜಳನಿಂದ ದತ್ತಿಗಳನ್ನು ಕೊಡಿಸುತ್ತಾನೆ. ಕ್ರಿ.ಶ. ೧೧೬೨ರ ಈ ಶಾಸನದ ಪ್ರಕಾರ, ಕಸಪಯ್ಯನ ಅನುಮತಿಯ ಮೇರೆಗೆ ಬನವಸೆ ನಾಡನ್ನು ಬಮ್ಮರಸ ಎಂಬುವನು ಆಳುತ್ತಿದ್ದ. ಈ ಶಾಸನವು ಕಸಪಯ್ಯನನ್ನು ಬಿಜ್ಜಳನ ಪಾದಪದ್ಮೋಪಜೀವಿಯೆಂದು, ಶಿವಭಕ್ತನೆಂದು, ಮಹಾನುಭಾವನೆಂದು ಹೊಗಳಿದೆ. ಇತರರು ಅಧಿಕಾರ ನಡೆಯಿಸಿ ಹಾಳು ಮಾಡಿದ ದೇಶವನ್ನು ತಾನು ಕೈಗೊಂಡು ಅದನ್ನು ಊರ್ಜಿತಪಡಿಸಬಲ್ಲವನು ಎಂದು ಶಾಸನವು ಹೊಗಳುವ ನೆಪದಲ್ಲಿ ಯಾವುದೋ ಮುಖ್ಯ ಐತಿಹಾಸಿಕ ಸಂಗತಿ ಯೊಂದನ್ನು ಸೂಚಿಸುವಂತೆ ತೋರುತ್ತದೆ.

೫. ಕ್ರಿ.ಶ. ೧೧೬೫ರ ಬಿಜ್ಜಳನ ಕಾಲದ ಶಾಸನದಲ್ಲಿ ಹೀಗಿದೆ[೧೫] "ತತ್ಪಾದೋಪಜೀವಿ ಕಸಪಯ್ಯ ನಾಯಕಂ ಬನವಸೆ ಪನ್ನಿರ್ಚ್ಛಾಸಿರಮುಮಂ ದುಷ್ಟನಿಗ್ರಹ ಶಿಷ್ಟ ಪ್ರತಿಪಾಳನ ದಿಂದ ಬಳ್ಳಿಗ್ರಾಮೆಯೊಳು ರಾಜ್ಯಂಗೆಯ್ಯುತ್ತಮಿರೆ..."

ಕಸಪಯ್ಯನು ಬಳ್ಳಿಗಾವೆಯಲ್ಲಿಯೇ ಇದ್ದ ಅಧಿಕಾರಿಯೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

೬. ಕಸಪಯ್ಯನ ಹೆಸರು ಕೇಶಿಮಯ್ಯ ದಂಡನಾಯಕನ ಎರಡು ಶಾಸನಗಳಲ್ಲಿ ಬರುವುದನ್ನೂ ಕೇಶಿಮಯ್ಯ ದಾನಗಳನ್ನು ಕೊಡುವಾಗ ಕಸಪಯ್ಯನ ಒಪ್ಪಿಗೆ ಪಡೆಯು ವುದನ್ನೂ ಆಗಲೇ ನೋಡಿದ್ದೇವೆ.

ಕಸಪಯ್ಯ ಮತ್ತು ಕೇಶಿಮಯ್ಯರಿಬ್ಬರೂ ಏಕಕಾಲಕ್ಕೆ ಬನವಸೆ–೧೨೦೦೦ ನಾಡನ್ನು ಆಳುವುದು ಹೇಗೆ ಎಂಬ ಪ್ರಶ್ನೆ ಉದ್ಭವಿಸುವುದು ತೀರಾ ಸಹಜವಾಗಿದೆ. ಅವರ ಕಾಲದಲ್ಲಿಯೇ ಮತ್ತೆ ಇಬ್ಬರು ಬನವಸೆ ನಾಡನ್ನು ಆಳುತ್ತಿದ್ದ ಸಂಗತಿ ಶಾಸನಗಳಿಂದ ತಿಳಿದುಬರುತ್ತದೆ. ಉದಾಹರಣೆಗೆ, ಕ್ರಿ.ಶ. ೧೧೬೫ರಲ್ಲಿ ಬಿಜ್ಜಳನ ಇಷ್ಟದ ಪ್ರಕಾರ ಬನವಸೆ ನಾಡನ್ನು ದುಷ್ಟನಿಗ್ರಹ, ಶಿಷ್ಟ ಪ್ರತಿಪಾಲನೆಯ ಮೂಲಕ ಶ್ರೀಮನ್ಮಹಾಪ್ರಧಾನ ಮಹಾದೇವ ದಂಡನಾಯಕ ಆಳುತ್ತಿದ್ದನು.[೧೬] ಕ್ರಿ.ಶ. ೧೧೫೬ರಲ್ಲಿ ಬನವಸೆ ನಾಡಿನ ವಡ್ಡರಾವುಳ ಹೆಜ್ಜುಂಕಗಳ ಹೆಗ್ಗಡೆಯಾಗಿ ದಂಡನಾಯಕ ಮಾಯಿದೇವರಸನು ರಾಜಧಾನಿ ಬಳ್ಳಿಗಾವೆಯಲ್ಲಿದ್ದ.[೧೭] ಸು. ೧೧೬೦ರಲ್ಲಿ ಬಿಜ್ಜಳ ಕಲ್ಯಾಣದಲ್ಲಿ ಆಳುತ್ತಿರುವಾಗ ಅವನ ಪಾದಪದ್ಮೋಪ ಜೀವಿ ಸೋವಿ ದೇವರಸ ಬನವಸೆ ಪನ್ನಿರ್ಚ್ಛಾಸಿರವನ್ನು ದುಷ್ಟನಿಗ್ರಹ ಶಿಷ್ಟ ಪರಿಪಾಲನಾ ಪೂರ್ವಕವಾಗಿ ಆಳುತ್ತಿದ್ದ.[೧೮] ಇವನು ಆಣಂದೂರನ್ನು ಅಗ್ರಹಾರವಾಗಿ ಪರಿವರ್ತಿಸಲು ರಾಜನ ಅಪ್ಪಣೆ ಪಡೆದು 'ಶ್ರೀಮದ್ದೇಶಾ ಧಿಕಾರಿಕ'ನಾದ ಕಸಪಯ್ಯನಾಯಕ ಸಹಿತವಾಗಿ ಅದನ್ನು ದಾನ ಮಾಡುತ್ತಾನೆ.

ಎಂದರೆ, ಏಕಕಾಲಕ್ಕೆ ಬನವಾಸಿ–೧೨೦೦೦ದಂತಹ ವಿಸ್ತಾರವಾದ ನಾಡಿಗೆ ಅನೇಕ ದೊಡ್ಡ ಅಧಿಕಾರಿಗಳು, ಶ್ರೀಮನ್ಮಹಾಪ್ರಧಾನರು ಇದ್ದಿರುವುದು ಆಶ್ಚರ್ಯವೇನೂ ಅಲ್ಲ. ಆ ನಾಡಿನ ಮುಖ್ಯ ರಾಜಧಾನಿ ಬಳ್ಳಿಗಾವೆಯಾಗಿದ್ದಿತ್ತೆಂಬುದರಲ್ಲಿ ಅನುಮಾನವಿಲ್ಲ. ಆ ಬೇರೆ ಬೇರೆ ಅಧಿಕಾರಿಗಳು ಆ ನಾಡಿನ ಬೇರೆ ಬೇರೆ ಭಾಗಗಳಲ್ಲಿ ಆಳುತ್ತಿದ್ದಿರಬಹುದು ಅಥವಾ ಬೇರೆ ಬೇರೆ ಖಾತೆಗಳನ್ನು ನೋಡಿಕೊಳ್ಳುತ್ತಿದ್ದಿರಬಹುದು. ಕೇಶಿಮಯ್ಯ ದಂಡನಾಯಕ ರಾಜಧಾನಿ ಬಳ್ಳಿಗಾವೆಯಲ್ಲಿದ್ದ ಎಂಬ ಮಾತು ಬಂದಿದೆಯೇ ಹೊರತು ಅದನ್ನು ರಾಜಧಾನಿಯಾಗಿ

ಮಾಡಿಕೊಂಡಿದ್ದ ಎಂಬ ಸಂಗತಿ ಸ್ಪಷ್ಟವಾಗಿ ಉಕ್ತವಾಗಿಲ್ಲ. ಆದರೆ ಕಸಪಯ್ಯ ಬಳ್ಳಿಗಾವೆಯಿಂದ ರಾಜ್ಯಭಾರ ಮಾಡುತ್ತಿದ್ದ ಎಂಬ ಮಾತು ಸ್ಪಷ್ಟವಾಗಿ ಬಂದಿದೆ. ಕೇಶಿಮಯ್ಯನಾಗಲೀ ಸೋಯಿದೇವನಾಗಲಿ ದತ್ತಿಗಳನ್ನು ಬಿಡುವಾಗ ಕಸಪಯ್ಯನ ಒಪ್ಪಿಗೆ ಪಡೆಯುತ್ತಾರೆಂಬುದು ಗಮನಿಸಬೇಕಾದ ಸಂಗತಿ. ಇವರೆಲ್ಲರೂ ಮಹಾಪ್ರಧಾನರು, ಬನವಸೆ ನಾಡನ್ನು ಆಳುತ್ತಿದ್ದವರು ಮತ್ತು ಬಹುಶಃ ಸಮಾನರು. ನಮಗೆ ಇವರಲ್ಲಿ ಯಾರ ಮೇಲು, ಯಾರು ಅಧೀನರು ಎಂಬುದು ಸದ್ಯಕ್ಕೆ ಅಪ್ರಮುಖ. (ಬಳ್ಳಿಗಾವೆಗೆ ಬಿಜ್ಜಳ ಬಂದಾಗ, ಎಲ್ಲರ ಪರವಾಗಿ ಕಸಪಯ್ಯ ಮಾತನಾಡಿದ ಎಂಬ ಸಂಗತಿ ಅವನಿಗಿದ್ದ ಪ್ರಾಮುಖ್ಯವನ್ನು ಸೂಚಿಸಬಹುದು). ಬಳ್ಳಿಗಾವೆ ಮತ್ತು ಅದರ ಸುತ್ತಮುತ್ತಣ ಪ್ರದೇಶಗಳು ಕಸಪಯ್ಯನ ನೇರ ಆಳಿಕೆಗೊಳಪಟ್ಟಿದ್ದುವೆಂಬುದು ನಮಗೆ ಪ್ರಸ್ತುತ ಸಂಗತಿ ಮತ್ತು ಬಹುಮುಖ್ಯ ಸಂಗತಿ.

ಕೇಶಿಮಯ್ಯ ಮತ್ತು ಕಸಪಯ್ಯರು ಆ ಪ್ರದೇಶದ ಪ್ರಬಲ ವ್ಯಕ್ತಿಗಳಾಗಿರುವುದರಿಂದ ಅವರ ವಿಷಯವನ್ನೇ ಇನ್ನೂ ಹೆಚ್ಚು ಆಳವಾಗಿ ಪರಿಶೀಲಿಸುವುದು ಅಗತ್ಯ. ಕೇಶಿಮಯ್ಯನಿಗೆ ವಿವಾಹವಾಗಿತ್ತು, ಅವನಿಗೆ ಇಬ್ಬರು ಹೆಂಡಿರು ಇತ್ಯಾದಿ ವೈಯಕ್ತಿಕ ಸಂಗತಿಗಳು ತಿಳಿದಿವೆ. ಅವನ ವಂಶವು ಸಾಕಷ್ಟು ಪ್ರಸಿದ್ಧವಾಗಿದ್ದಿತು. (ಅವನ ಹಿಂದಿನ ನಾಲ್ಕು ತಲೆಮಾರುಗಳ ವಂಶವೃಕ್ಷವನ್ನು ಶಾಸನವೊಂದು ಕೊಟ್ಟಿದೆ). ಕಸಪಯ್ಯನಿಗೆ ಸಂಬಂಧಿಸಿದಂತೆ ಇಷ್ಟು ವಿವರಗಳು ದೊರಕುವುದಿಲ್ಲ. ಕೊನೆಗೆ ಅವನು ವಿವಾಹಿತನೇ ಎಂಬ ಸಂಗತಿಯೂ ತಿಳಿಯದು. ಇದರಿಂದ ಅವನು ಅವಿವಾಹಿತನಾಗಿದ್ದ ಎಂಬ ತೀರ್ಮಾನಕ್ಕೆ ಬರುವುದು ಸ್ವಲ್ಪ ಅವಸರದ ತೀರ್ಮಾನವೆನ್ನಿಸಿಕೊಳ್ಳಬಹುದು. ಕೇಶಿಮಯ್ಯನ ಆಳಿಕೆ ಬಿಜ್ಜಳನ ಕಾಲವಾದ ಮೇಲೂ ಎಷ್ಟೋ ವರ್ಷ ಮುಂದುವರಿಯಿತು. ಇದು ಅವನ ಬಗ್ಗೆ ರಾಜರಿಗಿದ್ದ ವಿಶ್ವಾಸ, ಗೌರವಗಳ ಪ್ರತೀಕವಿರಬಹುದು. ಕಸಪಯ್ಯನ ಅಧಿಕಾರದ ಅವಧಿ ಸು. ೧೧೪೫ರಿಂದ ಕ್ರಿ.ಶ. ೧೧೬೫ರ ವರೆಗೆ, ಬಿಜ್ಜಳನ ಕೈಕೆಳಗೆ ಕೆಲಸ ಆರಂಭಿಸಿ ಅವನ ಕಾಲದಲ್ಲೇ ಅವನು ಅಧಿಕಾರದಿಂದ ಬಿಡುಗಡೆ ಹೊಂದಿದಂತೆ ತೋರುತ್ತದೆ. (ಏಕೆಂದರೆ ಬಿಜ್ಜಳನ ಕೊನೆಯ ತೇದಿ ಕ್ರಿ.ಶ. ೧೧೬೮. ಆದರೆ, ಕಸಪಯ್ಯನ ಕೊನೆಯ ತೇದಿ, ನನಗೆ ತಿಳಿದಂತೆ ೧೧೬೫). ಇದಕ್ಕೆ ಕಾರಣವೇನಿರಬಹುದು ಎಂಬುದನ್ನು ಊಹಿಸಲು ಬಿಜ್ಜಳನ ಮಗ ರಾಯಮುರಾರಿ ಸೋವಿದೇವನ ಕಾಲದ ಕ್ರಿ.ಶ. ೧೧೭೭ರ ಹರಸೂರ್ ಶಾಸನವು ಸಹಾಯ ಮಾಡುವಂತಿದೆ. ಅವನು ಎಂದರೆ ಕಸಪಯ್ಯನು ಕಳಚುರಿ ರಾಜ್ಯದಲ್ಲಿ ಬಲಿಷ್ಠನಾಗಿದ್ದ ದುರ್ಮಂತ್ರಿಯಾಗಿದ್ದನೆಂದೂ ಅವನಿಂದ ಆ ರಾಜ್ಯಕ್ಕೆ ಕೇಡು ಒದಗಿತ್ತೆಂದೂ ಶಾಸನವು ಸ್ಪಷ್ಟವಾಗಿ ಹೇಳುತ್ತದೆ.[೧೮]

ಕಳಚುರಿ ನೃಪಕುಳ ರಾಜ್ಯಂ
ಬಳವದ್ದುರ್ಮಂತ್ರಿ ಕಸಪಯಾದಿಗಳಿಂ।
ಗಳಕಾಳಮಾಗಿರೆ ನಿಜದೋ
ರ್ಬಳದಿಂದಳವಡಿಸಿ ಮಾಧವಂ ಪೆಸರ್ವಡೆದಂ॥

ಅದೆಂತೆನೆ॥
ಆಕ್ರಮಿಸಿ ರಾಜಲಕ್ಷ್ಮಿಯ
ನಕ್ರಮದಿಂದಾಳ್ದ ಕರ್ಣನಂ ಕೊಂದು ಧರಾ

ಚಕ್ರಮನಳವಡಿಸಿತ್ತನ
ನುಕ್ರಮದಿಂ ಸೋಮನೃಪನ ಭುಜಮಂಡಳದೊಳ್ ॥

ಕಸಪಯ್ಯ, ಬಿಜ್ಜಳ ರಾಜನಾಗಿರುವಾಗಲೇ ತನ್ನ ಅಧಿಕಾರವನ್ನು ಕಳೆದುಕೊಂಡಿರಬೇಕೆಂದು ಹಿಂದೆಯೇ ಸೂಚಿಸಲಾಗಿದೆ. ತಾನು ಅಧಿಕಾರ ಚ್ಯುತನಾದದ್ದಕ್ಕೆ ಪ್ರತೀಕಾರವನ್ನು ಸಾಧಿಸಲು ಮತ್ತು ತನ್ನ ಅಧಿಕಾರವನ್ನು ಮತ್ತೆ ಪಡೆದುಕೊಳ್ಳಲು ಅವನು ಹೊಂಚುಹಾಕುತ್ತಿದ್ದು, ಬಿಜ್ಜಳನ ರಾಜತ್ಯಾಗ (ಸು.೧೧೬೮) ಅದಕ್ಕೆ ಪ್ರಚೋದನೆ ನೀಡಿರಬೇಕು. ಬಿಜ್ಜಳನ ಆಳ್ವಿಕೆ ಆದ ಮೇಲೆ ಅವನ ಮೊದಲ ಮಗನಾದ ವಜ್ರದೇವನ ಮಗ ಕರ್ಣನನ್ನು ಎತ್ತಿಕಟ್ಟಿ ಅವನಿಂದ ರಾಜ್ಯಾಪಹಾರ ಮಾಡಿಸುವ ಪ್ರಯತ್ನವನ್ನು ಕಸಪಯ್ಯ ಮಡಿದಂತೆ ಮೇಲಿನ ಹರಸೂರ್ ಶಾಸನವು ಸೂಚಿಸುತ್ತದೆ.[೨೦] ಆ ಪ್ರಯತ್ನವನ್ನು ಮಾಧವನು ವಿಫಲಗೊಳಿಸಿ ರಾಜ್ಯವನ್ನು ಬಿಜ್ಜಳನ ಎರಡನೆಯ ಮಗ ರಾಯಮುರಾರಿ ಸೋವಿದೇವನಿಗೆ ಕೊಡಿಸಿಕೊಟ್ಟಂತೆ ಅದೇ ಶಾಸನವು ಹೇಳುತ್ತದೆ. ಬಿಜ್ಜಳನ ಕಾಲದಲ್ಲಿಯೇ ಕಸಪಯ್ಯ ಮಾಡಿರಬಹುದಾದ ಅನಪೇಕ್ಷಣೀಯವಾದ ಕಾರ್ಯವೆಂದರೆ ಅಕ್ಕಮಹಾದೇವಿಯನ್ನು ಬಲವಂತದಿಂದ ವಿವಾಹವಾದದ್ದು ಎಂದು ಸದ್ಯಕ್ಕೆ ನನ್ನ ಊಹೆಯಾಗಿದೆ. ಹರಸೂರ್ ಶಾಸನದ ಬಳಿಕ ಮತ್ತೆ ಕಸಪಯ್ಯನ ಹೆಸರು ಎಲ್ಲೂ ಕೇಳಿಬರುವುದಿಲ್ಲ. ಮಾಧವ ದಂಡ ನಾಯಕನಿಂದ ಅವನು ಹತನಾಗಿರಲೂ ಸಾಧ್ಯ. ಎಂದರೆ ಹರಿಹರನ ಮಹಾದೇವಿಯಕ್ಕನ ರಗಳೆಯಲ್ಲಿ ಬರುವ ಕೌಶಿಕನು ಶಾಸನಗಳಲ್ಲಿ ಬರುವ ಕಸಪಯ್ಯನೇ ಇರಬಹುದೆಂಬುದು ನನ್ನ ಸದ್ಯದ ನಂಬಿಕೆ ಎಂಬುದನ್ನು ಇನ್ನೊಮ್ಮೆ ಹೇಳಲು ಬಯಸುತ್ತೇನೆ.

ಬಳ್ಳಿಗಾವೆಯ ಪ್ರದೇಶ ಅನೇಕ ಶಿವಶರಣರ ನಾಡು. ಉದಾಹರಣೆಗೆ ಅಲ್ಲಮ ಬಳ್ಳಿಗಾವೆಯವನು (ಬಹುಶಃ ಅಕ್ಕಮಹಾದೇವಿ, ಕೌಶಿಕ ಅರ್ಥಾತ್ ಕಸಪಯ್ಯನ ವಿಷಮ ದಾಂಪತ್ಯಕ್ಕೆ ಮುನ್ನವೇ ಅವನು ಬಳ್ಳಿಗಾವೆ ಬಿಟ್ಟು ಹೋಗಿದ್ದಿರಬಹುದು). ಈಗಿನ ಉಡುಗಣಿ –ತಡುಗಣಿಗಳೇ ಹಿಂದಿನ ಉಡುತಡಿಯೆಂದು ಜನರಲ್ಲಿ ಪ್ರಬಲ ನಂಬಿಕೆಗಳಿವೆ. ಉಡುಗಣಿಯ ಊರ ಹೊರಗಿನ ಕೋಟೆ, ಪರದೇಶಿ ಮಲ್ಲಪ್ಪನ ಗುಡಿ ಇತ್ಯಾದಿಗಳೂ ಕೌಶಿಕ, ಅಕ್ಕಮಹಾದೇವಿ ಯವರಿಗೂ ಸಂಬಂಧ ಕಲ್ಪಿಸುತ್ತಾರೆ. ಅಕ್ಕಮಹಾದೇವಿಯ ಕಾಲ ಸು.೧೧೬೦–೬೫, ಆ ಕಾಲದಲ್ಲಿ ಅಲ್ಲಿ 'ಆಳು'ತ್ತಿದ್ದವನು ಕಸಪಯ್ಯನೇ ಆದುದರಿಂದ, ಅವನೇ ಕೌಶಿಕ ಎಂಬುದಕ್ಕೆ ಅದೇ ನನಗೆ ಪ್ರಬಲ ಆಧಾರ. ಬಿಜ್ಜಳನ ಬಲಗೈಯಂತೆ ಇದ್ದು, ಅವನ ರಾಜ್ಯಾಪಹರಣ ಕಾರ್ಯದಲ್ಲಿ ಪ್ರಮುಖ ಪಾತ್ರವನ್ನು ವಹಿಸಿ, ರಾಜನ ವಿಶ್ವಾಸ ಪಾತ್ರನಾಗಿ, ದರ್ಪದಿಂದ ಆಳುತ್ತ, ಬಹುಶಃ ಅವಿವಾಹಿತನಾಗಿದ್ದ ಅವನು ಅಕ್ಕಮಹಾದೇವಿಯನ್ನು ಬಯಸಿದುದರಲ್ಲಿ ಆಶ್ಚರ್ಯವೇನೂ ಇಲ್ಲ. ಸರ್ವಾಧಿಕಾರಿಯಾಗಿದ್ದ ಅವನು ಅವಳ ತಾಯ್ತಂದೆಯರ ಮೇಲೆ ಒತ್ತಾಯವನ್ನು ಹಾಕಿದ್ದೂ ಅಸಹಜವಾಗಿ ತೋರುವುದಿಲ್ಲ. ಅವಳ ತಾಯ್ತಂದೆಯರು ಶಿವಭಕ್ತರಾಗಿದ್ದರು; ಅವಳು ಹುಟ್ಟಿದಾಗ ಅವಳ ತಂದೆ 'ಶೈವಾಚಾರ್ಯ'ರಿಂದ ಗುರು ಕಾರುಣ್ಯವನ್ನು ಮಾಡಿಸಿದಂತೆ ಹರಿಹರ ಸೂಚಿಸುತ್ತಾನೆ. ಅವಳ ತಾಯ್ತಂದೆಯರ ಮನೆಗೂ ಮದುವೆಯಾದ ಮೇಲೆ ಅವಳ ಅರಮನೆಗೂ 'ಮಹಾಮಾಹೇಶ್ವರ'ರು ಬರುತ್ತಿದ್ದರಂತೆ. ಒಂದು ದಿನ ಅವಳ ಮನೆಗೆ ಬಂದ ಅವಳ (ವೀರಶೈವ) ಗುರುಗಳ ವರ್ಣನೆ ಹೀಗಿದೆ[೨೧]: "ನೀಳ್ದ ಕೆಂಜಡೆಗಳ ತಾಳ್ದ ಕರ್ಣಕುಂಡಲದ ಕಕ್ಷದೊಳ್ ಮೆಱೆವ ಶಿವಲಿಂಗದ ಸರ್ವಾಂಗ ಭಸಿತೋದ್ಧೂಳನದ ಉಟ್ಟ

ಧವಳಾಂಬರದ ತೊಟ್ಟ ರುದ್ರಾಕ್ಷಿಯ ಮೆಟ್ಟಿದ ಹಾವುಗೆಯ ಮುಂದಣ ಮಾಹೇಶ್ವರರ ಹಿಂದಣ ಶಿಷ್ಯವರ್ಗದ ವಿಳಾಸಂ ಪುಣ್ಯಲಾವಣ್ಯಮಂ ಪಸರಿಸೆ ಮಹಾದೇವಿಯಾರಾಧ್ಯರ್ ಭೋಂಕನೆ ಬರೆ..." ಬಳ್ಳಿಗಾವೆಯಲ್ಲಿ ಅನೇಕ ಶೈವ ಮಠಗಳಿದ್ದುವೆಂಬುದನ್ನೂ ಅವುಗಳಲ್ಲಿ ಒಂದಾದ ಕೋಡಿಯ ಮಠದ ಖ್ಯಾತಿ ಎಲ್ಲೆಡೆಗೂ ಹಬ್ಬಿತ್ತೆಂಬುದನ್ನೂ ಗಮನಿಸಿದಾಗ, ಅವಳ ತವರುಮನೆಯಾದ ಉಡುಗಣಿಯೂ ಗಂಡನ ಊರಾದ ಪಕ್ಕದ ಬಳ್ಳಿಗಾವೆಯಾಗಲೀ ಶೈವ ವಾತಾವರಣದಲ್ಲಿದ್ದಂಥವು ಎಂಬುದು ಸ್ಪಷ್ಟವಾಗುತ್ತದೆ. ಇದೂ ಕೂಡ ಉಡುಗಣಿಯ ಈಗಿನ ಉಡುಗಣಿ–ತಡುಗಣಿಯೇ ಎಂಬುದನ್ನು ಸಮರ್ಥಿಸುತ್ತದೆ.

ಕೌಶಿಕ (ಕಸಪಯ್ಯ)ನನ್ನು ತ್ಯಜಿಸಿದ ಅಕ್ಕಮಹಾದೇವಿ ಕಲ್ಯಾಣಕ್ಕೆ ಹೋದದ್ದರಲ್ಲಿ ಏನೋ ಅರ್ಥವೂ ಇರುವಂತೆ ಕಾಣುತ್ತದೆ. ಕಲ್ಯಾಣವು ಬಸವ, ಅಲ್ಲಮ, ಚನ್ನಬಸವರಿದ್ದ ಪಟ್ಟಣ; ಆ ಶಿವಶರಣರ ಮುಂದೆ ತನ್ನ ಕಾರ್ಯವನ್ನು ಸಮರ್ಥಿಸಿಕೊಳ್ಳುವ ಉದ್ದೇಶ ಅವಳಿಗಿರಬಹುದು (ಅವರ ದರ್ಶನ ಮಾಡುವ ಉದ್ದೇಶವಂತೂ ಸರಿಯೇ). ಆ ನಗರವು ಅಕ್ಕನಿಗೆ ಅನ್ಯಾಯ ಮಾಡಿದ ಕಸಪಯ್ಯನ (ಅಥವಾ ಅವಳಿಂದ ಅನ್ಯಾಯವನ್ನು ಅನುಭವಿಸಿದನೆಂದು ಲೋಕ ಭಾವಿಸಿರಬಹುದಾದ ಕಸಪಯ್ಯನ) ಅಧಿರಾಜನಾದ ಬಿಜ್ಜಳನ ರಾಜಧಾನಿಯೂ ಹೌದು. ಬಿಜ್ಜಳನ ಬಳಿ ದೂರು ಹೇಳುವುದಕ್ಕಾಗಿ ಹೋದಳು ಎಂಬ ಸೂಚನೆಯು ದೂರದ ಊಹೆಯಾಗುತ್ತದೆ. ಆದರೆ ವಾಸ್ತವ ಸಂಗತಿ ಏನು ಎಂಬುದು ರಾಜಧಾನಿಯವರಿಗೆ ತಿಳಿಯಲಿ ಎಂಬ ಸಹಜ ಉದ್ದೇಶ ಅವಳಿಗಿರಲಿಲ್ಲ ಎಂದು ಹೇಳುವುದು ಹೇಗೆ? ಅವಳಿಗಾದ ಅನ್ಯಾಯವು ಅವಳಿಂದಲ್ಲ ದಿದ್ದರೂ ಇತರ ಜನಗಳ ಮೂಲಕವಾಗಿಯಾದರೂ ಬಿಜ್ಜಳನಿಗೆ ಗೊತ್ತಾಗಿ ಕಸಪಯ್ಯನನ್ನು ಅಧಿಕಾರದಿಂದ ತೆಗೆದುಹಾಕಲು ಪ್ರಚೋದನೆ ನೀಡಿರಬಹುದು. ಮುಂದೆ ಕಸಪಯ್ಯ ಮತ್ತೆ ಅಧಿಕಾರವನ್ನು ಪಡೆಯಲು ಪ್ರಯತ್ನಿಸಿ ವಿಫಲನಾದ ಎಂಬುದನ್ನು ಆಗಲೇ ನೋಡಿದ್ದೇವೆ.

ಕಸಪಯ್ಯ ಎಂಬುದು ಹರಿಹರನ ಕಾಲಕ್ಕೆ 'ಕೌಶಿಕ' ಹೇಗಾಯಿತು ಎಂಬ ಪ್ರಶ್ನೆಗೆ ಉತ್ತರಿಸುವುದು ಕಷ್ಟವಾದರೂ ಅಸಾಧ್ಯವೇನೂ ಅಲ್ಲ. ಕಸಪ ಮಂತ್ರಿ> ಕಸವ ಮಂತ್ರಿ ಎಂಬುದಾಗಿರುವುದನ್ನು ಬಸವ ಪುರಾಣದಲ್ಲಿ ಬಂದಿರುವ ಉಲ್ಲೇಖ ಹೇಳುತ್ತದೆ.

ಕಸಪಯ್ಯನಾಯಕ > ಕಸವಯ್ಯನಾಯಕ > (ವರ್ಣಪಲ್ಲಟದಿಂದ, *'ಕಸವಯ್ಯ ನಾಯಕ[೨೨]* > ಕೌಸಿ (ನಾಯ)ಕ > ಕೌಶಿಕ.

ಅಕ್ಕಮಹಾದೇವಿ ಕಾಲಕ್ಕೂ ಹರಿಹರನ ಕಾಲಕ್ಕೂ ಸುಮಾರು ೫೦–೬೦ ವರ್ಷಗಳ ಅಂತರವಿದೆ. ಜೊತೆಗೆ ಕಸಪಯ್ಯ ನಾಯಕನ ಹೆಸರು ಜನತೆಯ ಬಾಯಲ್ಲಿ ಮಾರ್ಪಟ್ಟು, ಸಂಸ್ಕೃತೀಕರಣಗೊಂಡು 'ಕೌಶಿಕ' ಎಂದಾಗಿರಬಹುದು. ('ಕೌಶಿಕ' ಎಂದರೆ ಗೂಬೆ ಎಂಬ ಅರ್ಥವು ಸಂಸ್ಕೃತದಲ್ಲಿ ಇರುವುದು ತನ್ಮೂಲಕ ವ್ಯಂಗ್ಯ ತಿರಸ್ಕಾರಗಳನ್ನು ಧ್ವನಿಸುವುದು ಸಾಧ್ಯವಾಗುತ್ತದೆ). 'ಕೇಶೀಮಯ್ಯನಾಯಕ' ಎಂಬ ಹೆಸರು 'ಕೌಶಿಕ' ಎಂದಾಗಿರಬಹು ದೆಂಬುದನ್ನು ಇದ್ದುದರಲ್ಲಿ ಮೇಲಿನಷ್ಟು ಸಮರ್ಪಕವಾಗಿ ಸಾಧಿಸಿ ತೋರಿಸಲಾಗುವುದಿಲ್ಲ ವಾದ್ದರಿಂದ ಕೇಶಿಮಯ್ಯ ಮತ್ತು ಕೌಶಿಕರ ಸಮೀಕರಣೆಯನ್ನು ಆ ಕಾರಣದಿಂದಲೂ ಬಿಟ್ಟುಬಿಡಬಹುದು. ಕಸಪಯ್ಯ ನಾಯಕನೇ ಕೌಶಿಕ ಎಂಬುದನ್ನು ನಾವು ಸಮರ್ಥಿಸಲು ಸಾಧ್ಯವಿಲ್ಲದಿದ್ದರೆ, ಕೌಶಿಕ ಎಂಬುವನನ್ನು ಇತಿಹಾಸದಲ್ಲಿ ಗುರುತಿಸುವ ಪ್ರಯತ್ನವನ್ನು ಸದ್ಯಕ್ಕೆ ಕೈಬಿಡಬೇಕಾಗುತ್ತದೆ.

ಕೆಲವು ವರ್ಷಗಳ ಹಿಂದೆ ಕಸಪಯ್ಯ ನಾಯಕನೇ ಬಸವಣ್ಣ ಎಂಬ ಊಹೆಯು ಹೊರಟಿತ್ತು. ಈಗ ಅದು ನಿಂತುಹೋಗಿದೆ. ಮತ್ತೆ ಇಲ್ಲಿ ಕಸಪಯ್ಯ ನಾಯಕನ ಹೆಸರನ್ನು ಎತ್ತಿ ಹಿಡಿದಿರುವುದು ಕೆಲವರಿಗೆ ಅನಗತ್ಯವಾಗಿ ವಿಲಕ್ಷಣವಾಗಿ ತೋರಬಹುದು. ಕಸಪಯ್ಯನು ಬಸವಣ್ಣ ಆಗಿರದಿದ್ದರೆ, ಅವನು ಕೌಶಿಕ ಅಲ್ಲ ಎಂಬುದಕ್ಕೆ ಅದು ಸಮರ್ಥನೆ ಆಗುವುದಿಲ್ಲ. ಎಂದರೆ ಕಸಪಯ್ಯನೇ ಕೌಶಿಕ ಆಗಿರಬಹುದು ಎಂಬ ನನ್ನ ವಾದದ ಸತ್ಯಾಸತ್ಯತೆಯು ಅದರ ಗುಣ ಅಥವಾ ದೌರ್ಬಲ್ಯಗಳಿಂದಲೇ ತೀರ್ಮಾನವಾಗಬೇಕು ಎಂಬುದನ್ನು ಇಲ್ಲಿ ಸೂಚಿಸುವುದು ಅಗತ್ಯವಾಗಿದೆ.

---

೧. ಪ್ರಭುಲಿಂಗ ಲೀಲೆ (ಸಂ.ಶಿ.ಶಿ. ಬಸವನಾಳ, ಧಾರವಾಡ, ೧೯೫೬

೨. "ಕೌಶಿಕನೆನಿಪ್ಪ ಮನ್ನೆಯನಿಪ್ಪ ಪಟ್ಟಣದ, ದೇಶದೊಳಗೊಪ್ಪುವಡುತಡಿಯೆಂಬ ಪಟ್ಟಣದ" ಮಹಾದೇವಿಯಕ್ಕನ ರಗಳೆ, ಸಂ. ಶ್ರೀ ಚೆನ್ನಮಲ್ಲಿಕಾರ್ಜುನ, ೧೯೩೩. ಪು.೮

✶ (ಬಿಜ್ಜಳನ ಸಾಮಂತರಾಗಿದ್ದ ಪಾಂಡ್ಯರ ಪ್ರಧಾನಮಂತ್ರಿ ಹೆಮ್ಮಾಡಿ ದಂಡಾಧಿಪನ ಹೆಸರು ಹರಿಹರದ ಶಾಸನಸದಲ್ಲಿದೆ (EC.XI.Dg.1168 A.D.) ಇವನೇ ಬಸವಪುರಾಣದ ಹೆಮ್ಮಾಡಿಯಿರಬಹುದು.

೩. (EC. VII. Sk. 123, 1159 A.D.)

4. (EC.VII. Sk.185 A.D.)

5. (EC.VII. Sk.146 C.1160 A.D.)

6. (EC.VII. Sk.92.1168 A.D.)

7. (EC.VII. Sk.123, 1179 A.D.)

8. (EC.VII. Sk.119, 1181 A.D.; 144, 1181. A.D)

9. (EC.VII. Sk.161 C. 1160 A.D.)

* (EC.VII. Sk.181 C. 1170 A.D.)

10. (EC.VII. Sk.181. C. 1170 A.D.) 'ಬನವಸೆನಾಡ ಹೆಗ್ಗಡೆ ದಂಡನಾಯಕ ಚೋಳಿಕ್ಯ ಕೇಸಿಮಯ್ಯನು ಸಂತಳಿಗೆನಾಡ ಬಳಿಯ ಬಾಡದ 'ಅಳಹೂರನಿರಿದು ಪೆಂಡಿರ ಉಡೆ ಉಚ್ಚಿಕೊಂಡು ಹೋಹಲ್ಲಿ")

೧೧. (EC.VII. Sb.328, 1159 A.D.) (ಹುಡುಕಿದರೆ ಕಸಪಯ್ಯನ ಇನ್ನೂ ಹಿಂದಿನ ಶಾಸನಗಳು ದೊರಕಬಹುದು)

೧೨. (EC.XI. Dg. 35, C.1160 A.D.)

೧೩. (EC.XI. Dg.42 C.1162 A.D.)

14. (EC.VII. Sk. 102, 1162 A.D.)

15. (EC.VII. Sk. 277, 1165 A.D.)

16. (EC.VII. Sk. 108, 1164 A.D. EC.VIII.Sb.277,C.1165 A.D.)

17. (EC.VII. Sk. 104, 1156 A.D.)

18. (EC.VII. Sk. 346, 1160 A.D. ಇವು ಎರಡು ಬಗೆಯ ಸುಂಕಗಳು)

19. (P. B. Desai : Sri Basaveshvara and his Times. pp. 88.9)

೨೦. ಈ ಪ್ರಯತ್ನದಲ್ಲಿ ಅವನು ಸ್ವಲ್ಪ ಸಫಲನೂ ಆಗಿರಬಹುದು. ಏಕೆಂದರೆ ಬಿಜ್ಜಳನು ಆಳಿದ ಮೇಲೆ ಕರ್ಣನು ಪಟ್ಟಕ್ಕೆ ಬಂದಂತೆ ರಾಘವಾಂಕನ ಸಿದ್ಧರಾಮಚಾರಿತ್ರದಲ್ಲಿ ಹೇಳಿಕೆಯಿದೆ. (೯.೧-೨) ಈ ಕೃತಿಯ ಪ್ರಕಾರ ಕರ್ಣನು ಬಿಜ್ಜಳ ತಮ್ಮ, ತನಗೆ 'ಸ್ಥಿರಪಟ್ಟ'ವನ್ನು ಕಟ್ಟಲಿಕ್ಕಾಗಿ ಮಂತ್ರಿಗಳ ಮೂಲಕ ಸಿದ್ಧರಾಮನಿಗೆ ಹೇಳಿ ಕಳುಹಿಸುತ್ತಾನೆ. ಕರ್ಣ ಆಳಿದ್ದು ಬಹು ಸ್ವಲ್ಪಕಾಲ ಮಾತ್ರ ಎಂದು ಹರಸೂರ್ ಶಾಸನವೇ ಹೇಳುತ್ತದೆ.

೨೧. ಮಹಾದೇವಿಯಕ್ಕನ ರಗಳೆ (ಸಂ. ಚನ್ನಮಲ್ಲಿಕಾರ್ಜುನ) ಪು. ೫೪-೫

೨೨. ನಕ್ಷತ್ರ ಚಿಹ್ನೆಯು ಕಲ್ಪಿತರೂಪವೆಂಬುದನ್ನು ಸೂಚಿಸುತ್ತದೆ.

ಅನುಬಂಧ ೧

ಶಾಸನವೊಂದರಲ್ಲಿ ಹುಲುಮಠದ ಉಲ್ಲೇಖ

ಅಕ್ಕಮಹಾದೇವಿ ತನ್ನ ಗಂಡ ಕೌಶಿಕನನ್ನು ತ್ಯಜಿಸಿ ಶ್ರೀಶೈಲಕ್ಕೆ ಹೊರಟು ಬಂದಾಗ, ಅವಳನ್ನು ಅನುಸರಿಸಿಕೊಂಡು ಬಂದ ಅವನು ಶ್ರೀಶೈಲದ ಕಲುಮಠ ಮತ್ತು ಹುಲುಮಠಗಳ ಗುರುಗಳಿಗೆ ಲಂಚವನ್ನಿತ್ತು ಅಕ್ಕಮಹಾದೇವಿಯನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದಂತೆ ಹರಿಹರ ವರ್ಣಿಸಿದ್ದಾನೆ. (ಚೆನ್ನಬಸವಾಂಕ ತನ್ನ ಮಹಾದೇವಿಯಕ್ಕನ ಪುರಾಣದಲ್ಲಿ ನೋಡಿ: ೩.೨.೧ ಪಂಚಮಠ ಮತ್ತು ಪಂಚಗೃಹದಾರಾಧ್ಯರನ್ನು ಕಂಡಂತೆ ಹೇಳಿದ್ದಾನೆ). ಪುಲುಮಠ ಅಥವಾ ಹುಲುಮಠದ ಹೆಸರು ಶಾಸನವೊಂದರಲ್ಲಿ ಬರುತ್ತದೆ. ಹಿರೇಕೆರೂರು ತಾಲ್ಲೂಕು ಪರ್ವತ ಸಿದ್ಧಗೇರಿಯ (ಊರಿನ ಹೆಸರು ಗಮನಾರ್ಹ) ಕ್ರಿ.ಶ. ೧೨೬೫ರ ಶಾಸನದಲ್ಲಿ ಹೀಗಿದೆ :

"...ಸ್ವಸ್ತಿಭುವನಮಂಡ... ಮಣಿದೀಪಿಕಾಯಮಾನಾನೇಕ ಮಾಣಿಕ್ಯ ಶಿಲಾತಳ ಪ್ರಭಾವ ಪಟಲಜಟಿಲ ಶ್ರೀ ಶೈಲ ಶಿಖರಸಿಂಹಾಸನಾಸೀನ ಚತುರ್ದಶಭುವನಾಧೀಶ್ವರ ಶ್ರೀ ಶ್ರೀ ಪರ್ವತ ಶ್ರೀ ಸ್ವಯಂಭುಲಿಂಗ ಚಕ್ರವರ್ತಿ ಶ್ರೀಮನ್ಮಲ್ಲಿಕಾರ್ಜುನದೇವರ್ಗೆ ದಂಣಾಯಕರು ಸೋಮಯಾಜಿಗಳು. ಕಲಿ ದೇವದರ್ಶನವಾಗಿ ಶ್ರೀ ಮಲ್ಲಿಕಾರ್ಜುನ ದೇವರ ಸನ್ನಿಧಿಯಲ್ಲಿ ಶಕ ವರ್ಷ ೧೧೮೭ನೆಯ ಕ್ರೋಧನ ಸಂವತ್ಸರದ ವೈಶಾಖದ ಪೌರ್ಣಮಿ ಭೃಗುವಾರ ವಿಶಾಖಾ ನಕ್ಷತ್ರ ಶಿವಯೋಗಯುಕ್ತವಪ್ಪ ಪುಣ್ಯತಿಥಿಯಲ್ಲಿ ಶ್ರೀಪರ್ವತ...ದ ಪುಲುಮಠದ ಆಚಾರ್ಯರಪ್ಪ ಪರಿಪೂರ್ನ ಶಿವಾಚಾರ್ಯರ ಸಮಕ್ಷದಲು ಮಲ್ಲಿಕಾರ್ಜುನದೇವರ್ಗೆ..."

(ಮುಂದೆ ಸಿದ್ಧಗೇರಿಯನ್ನು ಆ ದೇವರಿಗೆ ದಾನವಾಗಿ ಕೊಟ್ಟ ವಿಷಯ ಬರುತ್ತದೆ). (Karnatak Inscriptions. Ed., B. R. Gopal, Vol. VI. No. 48) ಸಿದ್ಧಗೇರಿ ಎಂಬುದು ಊರಿನ ಮೊದಲ ಹೆಸರಾಗಿದ್ದುದು. ಮುಂದೆ ಪರ್ವತಸಿದ್ಧಗೇರಿ ಏಕಾಯಿತು ಎಂಬುದಕ್ಕೆ ಕಾರಣವೂ ಸ್ಪಷ್ಟವಾಗಿದೆ. 'ಪರ್ವತ'ದ ಮಲ್ಲಿಕಾರ್ಜುನನಿಗೆ ಕೊಟ್ಟ ಊರು ಆದ್ದರಿಂದ ಅದು ಪರ್ವತದ ಸಿದ್ಧಗೇರಿ ಆಯಿತು.

ಅಕ್ಕಮಹಾದೇವಿ ಶ್ರೀಶೈಲದಲ್ಲಿ ಹುಲುಮಠದ ಗುರುಗಳನ್ನು ಕಂಡ ಸಂಗತಿಯ ಐತಿಹಾಸಿಕತೆಯನ್ನು, ಕೊನೆಯ ಪಕ್ಷ ಹರಿಹರನ ಕಾಲಕ್ಕೆ ಶ್ರೀ ಶೈಲದಲ್ಲಿ ಹುಲ್ಲುಮಠವಿದ್ದ ಸಂಗತಿಯ ಐತಿಹಾಸಿಕತೆಯನ್ನು ಈ ಶಾಸನವು ಸಮರ್ಥಿಸುತ್ತದೆ. ಹರಿಹರನ ನಿರೂಪಣೆಯಲ್ಲಿ ವಾಸ್ತವಾಂಶದ ಹಲವು ಎಳೆಗಳಿವೆಯೆಂಬುದನ್ನು ಈ ಶಾಸನ ದೃಢಪಡಿಸುತ್ತದೆ. ಆ ಕಾಲದಲ್ಲಿ ಬಹು ಪ್ರಭಾವಶಾಲಿಯಾಗಿದ್ದ ಕೌಶಿಕ ದೊರೆ (ಅರ್ಥಾತ್ ಕಸಪಯ್ಯ ನಾಯಕ) ಅಕ್ಕಮಹಾದೇವಿಯನ್ನು ಶ್ರೀಶೈಲದವರೆಗೆ ಅನುಸರಿಸಿಕೊಂಡು ಹೋಗಿ ಅಲ್ಲಿನ ಧರ್ಮ ಗುರುಗಳ ಪ್ರಭಾವವನ್ನುಪಯೋಗಿಸಿಕೊಂಡು ಮತ್ತೆ ಅವಳನ್ನು ತನ್ನತ್ತ ತಿರುಗಿಸಿಕೊಳ್ಳುವ ಪ್ರಯತ್ನವನ್ನು ಮಾಡಿರಬಹುದು. ಆ ಪ್ರಯತ್ನ ವಿಫಲವಾದ್ದದ್ದರಿಂದ ಅಲ್ಲಿಗೆ ಅವನು ಅಕ್ಕಮಹಾದೇವಿಯನ್ನು ಪಡೆಯುವ ಆಶೆಯನ್ನು ಕೈಬಿಡುತ್ತಾನೆ.

ಅನುಬಂಧ ೨

'ಕಲ್ಲ ಹೊಕ್ಕರೆ ಕಲ್ಲ....' ವಚನದ ಸರಿಯಾದ ಪಾಠ

ಅಕ್ಕಮಹಾದೇವಿಯ ವಚನವೊಂದರ ಪಾಠ ಹೀಗಿದೆ :

ಕಲ್ಲ ಹೊಕ್ಕರೆ ಕಲ್ಲ ಬರಿಸಿದೆ
ಗಿರಿಯ ಹೊಕ್ಕರೆ ಗಿರಿಯ ಬರಿಸಿದೆ
ಭಾಪು ಸಂಸಾರವೇ, ಬೆನ್ನಿಂದ ಬೆನ್ನ ಹತ್ತಿ ಬಂದೆ
ಚೆನ್ನಮಲ್ಲಿಕಾರ್ಜುನಯ್ಯ, ಇನ್ನೇವೆನ್ನೀವೆ ?

ಇಲ್ಲಿಯ 'ಬರಿಸಿದೆ' ಎಂಬುದನ್ನು ಡಾ. ಎಲ್. ಬಸವರಾಜು ಅವರು 'ಬಿರಿಸಿದೆ' ಎಂದು ಊಹೆಯ ತಿದ್ದುಪಡಿ ಮಾಡಿಕೊಟ್ಟಿದ್ದಾರೆ (ಅಕ್ಕನ ವಚನಗಳು, ಸಂಖ್ಯೆ ೧೪), ಶ್ರೀ ಎಸ್. ಎಂ. ವೃಷಭೇಂದ್ರಸ್ವಾಮಿಯವರು ಅದು (ಬೆರೆಸಿದೆ) ಎಂದಿರಬೇಕೆಂದು ಊಹಿಸಿದ್ದಾರೆ. – ಅವರಿಗೆ ಆಧಾರ 'ಬರಿಸಿದೆ' ಎಂಬುದಕ್ಕಿರುವ ಬಱಸಿದೆ ಎಂಬ ಪಾಠಾಂತರ (ಪ್ರಬುದ್ಧ ಕರ್ಣಾಟಕ, ೫೦.೩ ಪ್.೯೩, ೧೦೩) ಮತ್ತು ಹರಿಹರನ ಮಹಾದೇವಿಯಕ್ಕನ ರಗಳೆಯಲ್ಲಿರುವ

ಗಿರಿಯನೇರಿದೊಡಿರದೆ ಗಿರಿಯನೇರಿತು ಮಾಯೆ
ಪರಿದಡವಿಯಂ ಪೊಕ್ಕೊಡನೆಯೆ ಪಕ್ಕುದು ಮಾಯೆ
ಬೆನ್ನ ಕೈಯಂ ಬಿಡದು ಭಾಪು ಸಂಸಾರವೇ
ಎನ್ನ ನಂಬಿಸಿತು ಮಝು ಪೂತು ಸಂಸಾರವೇ

ಎಂಬ ಸಾಲುಗಳೂ ಕೂಡ ತಮ್ಮ ಊಹೆಗೆ ಸಮರ್ಥನೆ ಕೊಡುತ್ತವೆ ಎಂದು ಭಾವಿಸಿದ್ದಾರೆ. 'ಬೆಱ(ರ)ಸು' ಎಂದರೆ ಬೆನ್ನುಹತ್ತು, ಹಿಂಬಾಲಿಸು, ರಮಿಸು, ಮೋಹಿಸು ಎಂದು ಅರ್ಥ ಎಂದಿದ್ದಾರೆ (ಪು. ೯೩). ಅವರು ಶಕಟರೇಫದ ಪಾಠವನ್ನು ಒಪ್ಪುತ್ತಾರೋ ಸಾಮಾನ್ಯ ರೇಫದ ಪಾಠವನ್ನು ಒಪ್ಪುತ್ತಾರೋ ಅವರ ಲೇಖನದಿಂದ ಸ್ಪಷ್ಟವಾಗುವುದಿಲ್ಲ. 'ಬೆಱೆ'ಗಾಗಲಿ, 'ಬೆರೆ'ಗಾಗಲಿ ಅವರು ಹೇಳಿದ ಯಾವ ಅರ್ಥವೂ ಇಲ್ಲ. 'ಬೆರೆ' ಎಂದರೆ ಸೇರು, ಒಂದಾಗು; ಬೆಱೆ ಎಂದರೆ ಗಟ್ಟಿಯಾಗು, ಒರಟಾಗು ಅಹಂಕಾರವನ್ನು ತೋರು ಎಂದರ್ಥ.

'ಬರಿಸು' ಎಂದರೆ ವರಿಸು, ಸ್ವೀಕರಿಸು, ತನ್ನಂತೆ ಮಾಡಿಕೋ, ಆಶ್ರಯಿಸು ಎಂಬರ್ಥಗಳನ್ನಿಟ್ಟು ಕೊಂಡರೆ ಆಗ 'ಬರಿಸಿದೆ' ಎಂಬ ಫ.ಗು. ಹಳಕಟ್ಟಿಯವರ ಪಾಠವನ್ನೇ ಒಪ್ಪಿಕೊಳ್ಳು ವುದರಲ್ಲಿ ಯಾವ ತೊಂದರೆಯೂ ಇಲ್ಲ. "ನಾನು ಕಲ್ಲನ್ನು ಹೊಕ್ಕರೆ, ಎಲೆ ಸಂಸಾರವೇ, ನೀನು ಕಲ್ಲನ್ನೇ ಆಶ್ರಯಿಸಿದೆ. ಗಿರಿಯನ್ನು ಹೊಕ್ಕರೆ ನೀನು ಗಿರಿಯನ್ನೇ ಆಶ್ರಯಿಸಿದೆ..." ಎಂಬ ಅರ್ಥ ತೀರ ಸಹಜವಾಗಿ ಹೊರಡುತ್ತದೆ ಮತ್ತು ಹರಿಹರನ ರಗಳೆಯ ಭಾಗಕ್ಕೂ ಅದೇ ಅರ್ಥವಿರುವುದನ್ನು ಗಮನಿಸಬಹುದು. (ಹರಿಹರ ಆ ಭಾಗವನ್ನು ಬರೆಯುವಾಗ ಮೇಲಿನ ಅಕ್ಕಮಹಾದೇವಿಯ ವಚನವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನೆಂಬುದು ನಿರ್ವಿವಾದ). "ಗಿರಿಯನ್ನು ಹತ್ತಿದರೆ ಮಾಯೆ ಗಿರಿಯನ್ನು ಹತ್ತಿತು, ಅಡವಿಯನ್ನು ಹೊಕ್ಕರೆ ಮಾಯೆ ಅಡವಿಯನ್ನೂ ಹೊಕ್ಕಿತು..." ಇದಕ್ಕೂ ಮೇಲಿನ ಅರ್ಥಕ್ಕೂ ಇರುವ ಸಾಮ್ಯ ಎದ್ದುಕಾಣುತ್ತದೆ. ಆದ್ದರಿಂದ ಮೇಲಿನ ವಚನದ ಪಾಠವನ್ನು ಯಾವುದೇ ಊಹೆಯ ಸಹಾಯದಿಂದಲೂ ತಿದ್ದುವ ಅಗತ್ಯವೇ ಇಲ್ಲವೆಂದು ತೋರುತ್ತದೆ.

ಈ ಹಿಂದೆ ನನ್ನ ಲೇಖನವೊಂದರಲ್ಲಿ (ಭಗವ ಮತ್ತು ಮಾಸಕಬ್ಬೆ'. ಸಂಶೋಧನ ತರಂಗ, ೨, ಪು. ೨೯೫) 'ಕಲ್ಲ ಬರಿಸಿದೆ' ಎಂಬುದೇ ಸರಿಯಾದ ಪಾಠವೆಂದು ಪ್ರತಿಪಾದನೆ ಮಾಡಿ, ಇಲ್ಲಿಯ 'ಕಲ್ಲ' ಎಂಬುದು ಚತುರ್ಥಿಗೆ ಬದಲು ಬಂದಿರುವ ದ್ವಿತೀಯೆಯೆಂದು ವಾದಿಸಿದ್ದೆ. ಅದಕ್ಕಿಂತ ಮೇಲಿನ ವಾದ ಹೆಚ್ಚು ತರ್ಕಸಮ್ಮತವಾಗಿದೆಯೆಂದು ಭಾವಿಸುತ್ತೇನೆ.

II. ಮಹಾದೇವಿಯಕ್ಕನ ಹೆಸರಿನ ಬಗ್ಗೆ ಒಂದು ಸಾಧಾರ ಕಲ್ಪನೆ

ಅಕ್ಕಮಹಾದೇವಿ ಅಥವಾ ಮಹಾದೇವಿಯಕ್ಕ ಎಂಬ ಹೆಸರಿನಲ್ಲಿರುವ 'ಅಕ್ಕ' ಎಂಬ ಭಾಗ ಆಮೇಲೆ ಸೇರಿದ್ದೆಂದೂ, ಅವಳ ನಿಜವಾದ ಹೆಸರು 'ಮಹಾದೇವಿ' ಎಂದೂ ಸುಲಭವಾಗಿ ಊಹಿಸಬಹುದು. ಹರಿಹರನ ರಗಳೆಯ ಕೃತಿ ಅದನ್ನೇ ಸಮರ್ಥಿಸುತ್ತದೆ. ಆ ಹೆಸರನ್ನು ಅವಳ ತಂದೆ–ತಾಯಿಗಳು ಇಡಲು ಕಾರಣವೇನು ? ಆ ಹೆಸರು ಅವರಿಗೆ ಏಕೆ ಹೊಳೆಯಿತು ಅಥವಾ ಅವರು ಆ ಹೆಸರನ್ನು ತಮ್ಮ ಮಗುವಿಗೆ ಇಡಲು ಏನಾದರೂ ಕಾರಣಗಳಿದ್ದುವೇ ? ಈ ಬಗ್ಗೆ ವಿಚಾರಿಸುವ ಮೊದಲು ಒಂದು ಸಣ್ಣ ಸಂಗತಿಯನ್ನು ಓದುಗರ ಗಮನಕ್ಕೆ ತರಬಹುದು. ಒಂದು ಮಗುವಿಗೆ ಹೆಸರಿಡುವಾಗ, ಅದಕ್ಕೆ ಹೆಸರನ್ನು ಆಯ್ಕೆ ಮಾಡುವಾಗ ಏನಾದರೂ ಕಾರಣಗಳು ಇದ್ದೇ ಇರುತ್ತವೆ. ಮನೆ ದೇವರ ಹೆಸರು, ಅಜ್ಜ ಅಜ್ಜಿಯ ಹೆಸರು ಅಥವಾ ಹೆಸರು ಚೆನ್ನಾಗಿದೆ ಎಂದು ಅನ್ನಿಸಿದ್ದು ಇತ್ಯಾದಿ ಹತ್ತಾರು ಕಾರಣಗಳಿರುತ್ತವೆ. ಇದು ಎಲ್ಲರಿಗೂ ತಿಳಿದಿರುವ ಸಂಗತಿಯಾದ್ದರಿಂದ ಇದನ್ನು ವಿಸ್ತರಿಸುವ ಅಗತ್ಯವಿಲ್ಲ.

ಮಹಾದೇವಿಯಕ್ಕನ ಬಗ್ಗೆ ಕೃತಿ ಬರೆದಿರುವ ಹರಿಹರ, ಅವಳನ್ನು ಕೈಲಾಸದಲ್ಲಿ ಪಾರ್ವತಿಯ ಜೊತೆ ಇದ್ದ 'ಮಹಾದೇವಿ' ಎಂಬ 'ರುದ್ರಕನ್ನಿಕೆ' ಎಂದು ಕಲ್ಪಿಸಿ ಶಾಪ ನಿಮಿತ್ತವಾಗಿ ಅವಳು ಇಳೆಗಿಳಿದು ಬಂದಳೆಂದು ವರ್ಣಿಸುತ್ತಾನೆ. ಈ ಭಾಗವನ್ನು ಇತಿಹಾಸದ ದೃಷ್ಟಿಯಿಂದ ಉಪೇಕ್ಷಿಸಬಹುದು. ಮುಂದೆ ಅವಳು ಉಡುತಡಿಯ ಶಿವಭಕ್ತರ ಮಗಳಾಗಿ ಹುಟ್ಟುವ ಮುನ್ನ, ಆ ಶಿವಭಕ್ತ ದಂಪತಿಗಳು ಶಿವದೇವಾಲಯಕ್ಕೆ ಹೋಗಿ, ಅಲ್ಲಿದ್ದ ಪಾರ್ವತಿಯನ್ನು ಕುರಿತು ತಮಗೆ ಮಗಳೊಬ್ಬಳನ್ನು ಅನುಗ್ರಹಿಸಬೇಕೆಂದು ಕೇಳಿಕೊಂಡು ಹಾಗೆ ಹುಟ್ಟಿದ ಮಗಳಿಗೆ ಅದೇ ದೇವಿಯ (ಪಾರ್ವತಿಯ) ಹೆಸರನ್ನು ಇಡುವುದಾಗಿ ಹರಸಿಕೊಳ್ಳುತ್ತಾರೆ.

ದೇವಿ ಎಮಗೊರ್ವ ಪುತ್ರಿಯನೀವುದೆಲೆ ತಾಯಿ
ನಾವು ನಿಮ್ಮಯ ಪೆಸರನಿಟ್ಟಪೆವು ಒಲಿದೀಯೆ[೧]

ಮುಂದೆ ಮಗು ಜನಿಸುತ್ತದೆ. ಆಗ ಆ ಮಗುವಿನ ತಂದೆಯೇ ಜಾತಕರ್ಮವನ್ನು ಮಾಡಿ "ಪಾರ್ವತಿಯ ಪೆಸರನಿಟ್ಟು ಮಹಾದೇವಿಯೆಂದು ಮೂಱು ಸೂಳ್ ಕಿವಿಯೊಳ್ ಕರೆ"[೨] ದನೆಂದು ಕವಿ ವರ್ಣಿಸುತ್ತಾನೆ. ಇದು ಗಮನಿಸಬೇಕಾದ ಸಂಗತಿ. ಪಾರ್ವತಿಗೆ ಹಲವಾರು ಹೆಸರುಗಳಿವೆ; ಅವುಗಳಲ್ಲಿ ಮಹಾದೇವಿ ಎಂಬುದೂ ಒಂದಿರಬಹುದು. 'ಮಹಾದೇವ' ಎಂಬುದು ಶಿವನ ಹೆಸರಾದರೆ 'ಮಹಾದೇವಿ' ಎಂಬುದು ಪಾರ್ವತಿಯ ಹೆಸರಾಗುತ್ತದೆ. ಇದರಲ್ಲಿ ವೈಶಿಷ್ಟ್ಯವೇನು ಎಂದು ಯಾರಾದರೂ ಪ್ರಶ್ನಿಸಬಹುದು. ಆದರೆ ಏನೋ ವೈಶಿಷ್ಟ್ಯವಿರುವಂತಿದೆ.

ಶಿವನ ದೇವಾಲಯವೇ ಆದರೂ ಆಯಾ ಶಿವ ದೇವಾಲಯದ ಮುಖ್ಯ ಪುರುಷ ದೈವಕ್ಕೆ ಒಂದು ಪ್ರತ್ಯೇಕ ಹೆಸರಿರುವಂತೆ, ಅದೇ ಶಿವದೇವಾಲಯದ ಮುಖ್ಯ ಸ್ತ್ರೀದೈವಕ್ಕೆ ಒಂದು ವಿಶಿಷ್ಟ ಹೆಸರಿರುತ್ತದೆ. ನಂಜನಗೂಡಿನ ಶಿವನಿಗೆ ನಂಜುಂಡ ಎಂಬ ಹೆಸರಿದ್ದರೆ, ಅವನ ಪತ್ನಿಗೆ

ದೇವೀರಮ್ಮ ಎಂಬ ಹೆಸರಿದೆ. ಹಾಗೆಯೇ ಇಂದು ಶ್ರೀಶೈಲದ ಶಿವಾಲಯದ ದೈವಕ್ಕೆ ಮಲ್ಲಿಕಾರ್ಜುನ ಎಂಬ ಹೆಸರಿದ್ದರೆ, ಸ್ತ್ರೀ ದೈವಕ್ಕೆ ಭ್ರಮರಾಂಬೆ ಎಂಬ ಹೆಸರಿದೆ. ಈ ಭ್ರಮರಾಂಬೆಗೆ ಹನ್ನೆರಡನೆಯ ಶತಮಾನದಲ್ಲಿ 'ಮಹಾದೇವಿ' ಎಂಬ ಹೆಸರಿತ್ತೆಂಬ ಸಂಗತಿ ಸಿದ್ಧರಾಮನ ಮೂರು–ನಾಲ್ಕು ವಚನಗಳಲ್ಲಿ ಉಕ್ತವಾಗಿದೆ.

೧. **"ತಾನು ಬ್ರಹ್ಮನಾಗಬೇಕೆಂಬಿಚ್ಛೆಯುಳ್ಳಡೆ ಜಪಿಸಿ ನೋಡಾ**
ಕಪಿಲಸಿದ್ಧಮಲ್ಲಿಕಾರ್ಜುನ – ಮಹಾದೇವಿಯ ಮಂತ್ರವ"[೩]

೨. **"....ಮಂತ್ರಮೂರ್ತಿಯಪ್ಪ ಮಹಾದೇವಿಯರ ಅಷ್ಟೈಶ್ವರ್ಯಕ್ಕಧಿಕಾರಿ**
ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ"[೪]

೩. **"ನಮಃಶಿವಾಯ ಎಂದಡೆ ಕೋಟಿಕೋಟಿ ನರಕಂಗಳನೀಡಾಡಿ**
ಮಹಾದೇವಿಯವರ ಮಂದಿರದ ಕೋಟೆಯನೇಜಿಸಿತ್ತು
ನೋಡಾ ಕಪಿಲಸಿದ್ಧಮಲ್ಲಿಕಾರ್ಜುನಾ"[೫]

೪. **"....."ಎರಡಱಿಲ್ಲಿ ಬಿಟ್ಟು ಮಹೇಶರು**
ಕಪಿಲಸಿದ್ಧ ಮಲ್ಲಿಕಾರ್ಜುನ, ಮಹಾದೇವಿಯ
ಸಂಗದಿಂದ ಹುಟ್ಟಿದವರು ಕಾಣಾ, ಯೋಗಿನಾಥಾ"[೬]

ಮೇಲಿನ ಉದಾಹರಣೆಗಳಲ್ಲಿ ಒಂದು ನಾಲ್ಕನೆಯದಂತೂ ತೀರಾ ಸ್ಪಷ್ಟವಾಗಿದೆ.

ಶ್ರೀಶೈಲದ ಮಲ್ಲಿಕಾರ್ಜುನ ದೈವದ ಹೆಂಡತಿ ಮಹಾದೇವಿ ಎಂದಿರುವುದೂ, ಅದೇ ಹೆಸರು ವಚನಕಾರ್ತಿಗೂ ಇರುವುದು ಕೇವಲ ಆಕಸ್ಮಿಕವೆಂದು ಅನ್ನಿಸುವುದಿಲ್ಲ. ಇದನ್ನು ಸೂಚಿಸುವುದೇ ಈ ನನ್ನ ಸಂಪ್ರಬಂಧದ ಉದ್ದೇಶ. ಶ್ರೀಶೈಲದ ಸ್ತ್ರೀ ದೈವಕ್ಕೆ 'ಮಹಾದೇವಿ' ಎಂಬ ಹೆಸರು ಇದ್ದಿತೆಂಬ ಗಟ್ಟಿ ಸಂಗತಿಯ ಜೊತೆ, ಹರಿಹರನು ಅಕ್ಕಮಹಾದೇವಿಗೆ ಪಾರ್ವತಿಯ ಹೆಸರಿಟ್ಟರು ಎಂದು ಹೇಳುವ ಸಂಗತಿಯನ್ನೂ ಸೇರಿಸಿಕೊಂಡು ಕಲ್ಪನೆಯನ್ನು ಸ್ವಲ್ಪ ಮುಂದುವರಿಸಬೇಕೆಂದು ಬಯಕೆಯಾಗುತ್ತದೆ. ಶ್ರೀಶೈಲದ ಮಲ್ಲಿಕಾರ್ಜುನನ ಭಕ್ತರಾಗಿದ್ದ ಮಹಾದೇವಿ ಯಕ್ಕನ ತಂದೆ–ತಾಯಿಗಳು ಮಗುವಿಗಾಗಿ ದೇವರನ್ನು ಹರಸಿ ಕೊಂಡರು. ತಮಗೆ ಹೆಣ್ಣು ಮಗುವಾದಾಗ ಮಲ್ಲಿಕಾರ್ಜುನನ ಹೆಂಡತಿಯ ಹೆಸರನ್ನೇ ಮಗುವಿಗೆ ಇಟ್ಟರು. (ತಮಗೆ ಹೆಣ್ಣು ಮಗುವೇ ಬೇಕೆಂದು ಅವರು ಹರಸಿಕೊಂಡರೆಂಬ ಹರಿಹರನ ಮಾತು ಅರ್ಧಸತ್ಯವನ್ನು ಒಳಗೊಂಡಿರಬಹುದು). ಅವರು ಶ್ರೀಶೈಲಕ್ಕೆ ಹೋಗಿ ಹರಸಿಕೊಂಡರೆಂದೇನೂ ಹರಿಹರ ಹೇಳುವುದಿಲ್ಲ. ಅವರು ಶಿವಾಲಯಕ್ಕೆ ಹೋದರು ಎಂದು ಮಾತ್ರ ಅವನು ಹೇಳುವುದರಿಂದ, ಅವನ ಅಭಿಪ್ರಾಯದಲ್ಲಿ ಉಡುತಡಿಯ ಶಿವಾಲಯ ವೆಂದಿರಬಹುದು. (ಉಡುತಡಿಯಲ್ಲಿ ಈಗಲೂ 'ಪರದೇಶಿ ಮಲ್ಲಪ್ಪ' ಗುಡಿ ಇದೆ) ಅದು ಶ್ರೀಶೈಲಕ್ಕೆ ಹೋಗಿರಲಿ ಅಥವಾ ತಮ್ಮ ಊರಿನ ದೇವಾಲಯದಲ್ಲೇ ಹರಸಿಕೊಂಡಿರಲಿ, ಅವರು ಮಗುವಿಗೆ ಹೆಸರಿಟ್ಟಿದ್ದು ಶ್ರೀಶೈಲದ ಮಹಾದೇವಿಯ ಹೆಸರನ್ನೇ.

ಶ್ರೀಶೈಲದ ಮಲ್ಲಿಕಾರ್ಜುನನ ಹೆಂಡತಿಯ ಹೆಸರನ್ನೇ ಹೊತ್ತ ಬಾಲಕಿಯನ್ನು ಶಿವಭಕ್ತರಾದ ಆಕೆಯ ತಂದೆ–ತಾಯಿಗಳು ತಮ್ಮ ಮಗು ಆ ದೈವಕ್ಕೆ ಮೀಸಲಾದುದು ಎಂಬ ಭಾವನೆಯಿಂದ ಅಥವಾ ಅಂತಹ ವಾತಾವರಣದಲ್ಲಿ ಬೆಳೆಸಿರಬಹುದು. ಅವರ ಮನಸ್ಸಿನಲ್ಲಿ ತಮ್ಮ ಮಗಳು ಮಲ್ಲಿಕಾರ್ಜುನನ ವಧುವಾಗಿಯೇ ಬೆಳೆಯಬೇಕೆಂಬ ಆಸೆ ಇದ್ದಿತು ಎಂದು

ಭಾವಿಸುವ ಅಗತ್ಯ ಖಂಡಿತ ಇಲ್ಲ. ಆದರೆ ತಮ್ಮ ಮಗಳು ಮಹಾದೇವಿಯ ಹೆಸರನ್ನು ಹೊತ್ತವಳು ಎಂಬ ಭಾವನೆ ಅವರ ಮನಸ್ಸಿನಲ್ಲಿ ನಿಚ್ಚಳವಾಗಿತ್ತು. ಇಂತಹ ಮನೆಯಲ್ಲಿ ಬೆಳೆದ ಅಕ್ಕಮಹಾದೇವಿಯ ಬಾಲ್ಯದಲ್ಲೇ ತಾನು ಮಲ್ಲಿಕಾರ್ಜುನನ ವಧು ಎಂಬ ಅಭಿಪ್ರಾಯ ಹೇಗೋ ಮನಸ್ಸಿನಲ್ಲಿ ಊರಿ, ಅದೇ ಬೀಜವಾಗಿ ಬೆಳೆದು ಅವಳ ತಾರುಣ್ಯದ ಹೊತ್ತಿಗೆ ಅದು ದೃಢವಾಗಿ ನಿಂತಿತೆಂದು ಕಾಣುತ್ತದೆ. ತಾನು ಬಲವಂತದಿಂದ ಕೈ ಹಿಡಿದ ಕೌಶಿಕನಿಂದ ಬಿಡುಗಡೆ ಹೊಂದಿದ ಮೇಲೆ ಅವಳು ಸಹಜವಾಗಿ ಹೊರಟಿದ್ದು ಶ್ರೀಶೈಲಕ್ಕೆ. ಹರಿಹರ ಇದನ್ನು ಹೇಳುವುದನ್ನು ಮರೆತಿಲ್ಲ.

ಆದರೆ ಒಂದು ವಿಷಯದಲ್ಲಿ ಹರಿಹರ ನಮ್ಮನ್ನು ನಿರಾಶೆಗೊಳಿಸುತ್ತಾನೆ. ಅವಳು ಮಲ್ಲಿಕಾರ್ಜುನನ ಭಕ್ತೆಯಾಗಿ ಬದುಕಿದವಳು ಎಂದು ವರ್ಣಿಸುತ್ತಾನೆಯೇ ಹೊರತು ಅವಳು ಅವನ ವಧುವಾಗಿ ಬದುಕಿದಳು ಎಂದು ಹೇಳುವುದಿಲ್ಲ. ಕೊನೆಗೆ ಅದನ್ನು ಧ್ವನಿಸುವುದೂ ಇಲ್ಲ. ವೈರಾಗ್ಯಪರಳಾಗಿದ್ದ ಅವಳು ಕೌಶಿಕನನ್ನು ಭವಿಯೆಂಬ ಕಾರಣಕ್ಕಾಗಿ ತಿರಸ್ಕರಿಸಿದಳು. ತಾನು ಶಿವನ 'ತೊತ್ತು', 'ಭತ್ಯೆ' ಎಂದು ನಂಬಿದ್ದಳು. ಕೊನೆಯಲ್ಲೂ ಅವಳು ಕೈಲಾಸದಲ್ಲಿ ಶಿವನು ಪಾರ್ವತಿಯ ಸೇವೆಯಲ್ಲಿದ್ದ 'ರುದ್ರಕನ್ನಿಕೆ'ಯೆಂದೇ ಸ್ವಾಗತಿಸುತ್ತಾನೆ. ಇದು ಹರಿಹರನಲ್ಲಿ ಬರುವ ಚಿತ್ರಣ. ಈ ದೃಷ್ಟಿಯಿಂದ ನೋಡಿದಾಗ, ಶೂನ್ಯಸಂಪಾದನೆಗಳು ಮಲ್ಲಿಕಾರ್ಜುನನ ವಧುವಾಗಿ ಅಕ್ಕಮಹಾದೇವಿಯ ಚಿತ್ರವನ್ನು ಹೆಚ್ಚು ಸಹಜವಾಗಿ ಕೊಡುತ್ತವೆ. ಅವಳ ವಚನಗಳಲ್ಲಂತೂ ಸರಿಯೇ ಸರಿ.

ಇನ್ನೊಂದು ಮಾತು : ಅಕ್ಕಮಹಾದೇವಿ, ಮಹಾದೇವಿಯಕ್ಕ ಎಂಬಲ್ಲಿ 'ಮಹಾದೇವಿ' ಎಂಬುದು ತಂದೆ–ತಾಯಂದಿರು ಇಟ್ಟ ಹೆಸರು. ಅಕ್ಕ –, (–ಅಕ್ಕ) ಎಂಬುದು ಜನ ಕೊಟ್ಟದ್ದು. ಹಾಗೆಯೇ ಬಸವ, ಅಲ್ಲಮ ಅವರವರ ತಂದೆ ತಾಯಿಗಳು ಇಟ್ಟ ಹೆಸರುಗಳು; – ಅಣ್ಣ, ಪ್ರಭು (ದೇವ) ಎಂಬುವು ಜನ ಕೊಟ್ಟಂಥವು. ಅಕ್ಕ, ಅಣ್ಣ, ಪ್ರಭು – ಈ ವಿಶೇಷಣಗಳು ಆಯಾ ವ್ಯಕ್ತಿಗಳ ಬಗ್ಗೆ, ಅವರ ಸ್ವಭಾವ ಸ್ವರೂಪಗಳ ಬಗ್ಗೆ ನಮ್ಮ ಜನ ತೋರಿಸಿದ ಪ್ರತಿಕ್ರಿಯೆ, ಇಟ್ಟುಕೊಂಡ ನಿಲುವುಗಳ ಸಂಕೇತವೆಂದೂ ಭಾವಿಸಬಹುದಲ್ಲವೇ ?

---

೧. ಉಡುತಡಿಯ ಮಹಾದೇವಿಯ ರಗಳೆ (ಸಂ. ಎಚ್. ದೇವೀರಪ್ಪ, ಬೆಂಗಳೂರು, ೧೯೭೫)

೨. ಉಡುತಡಿಯ ಮಹಾದೇವಿಯರ ರಗಳೆ : ಸಂ. ಎಚ್. ದೇವೀರಪ್ಪ, ಪು. ೧೨

೩. ಸಿದ್ಧರಾಮೇಶ್ವರ ವಚನಗಳು (ಸಂ. ಆರ್. ಸಿ.ಹಿರೇಮಠ, ಧಾರವಾಡ ೧೯೬೮) ವಚನ ೨೩೫.

೪. ಅದೇ, ವಚನ ೨೩೭.

೫. ಅದೇ, ವಚನ ೨೫೦

೬. ಅದೇ, ವಚನ ೪೪೦

III. ಮಹಾದೇವಿಯಕ್ಕನ ಬದುಕಿನ ರೂಪು ರೇಷೆಗಳು

ಮಹಾದೇವಿಯಕ್ಕನ ಬದುಕನ್ನು ನಾಲ್ಕು ಘಟ್ಟಗಳಲ್ಲಿ ಗ್ರಹಿಸಬಹುದು; ಹುಟ್ಟಿನಿಂದ ತಾರುಣ್ಯದವರೆಗೆ ಅವಳು ಸುಂದರ ಕನಸುಗಳನ್ನು ಕಾಣುತ್ತ ಹಕ್ಕಿಯಂತೆ ಬದುಕಿದ್ದ ಕಾಲ – ಇದು ಮೊದಲ ಘಟ್ಟ; ಬಲವಂತದ ಮದುವೆಗೆ ಒಳಗಾಗಿ ಕೆಲಕಾಲ ತನ್ನ ಒಲ್ಲದ ಗಂಡನೊಡನೆ ಬಾಳುವೆ ಮಾಡಿದ ಕಾಲ – ಇದು ಎರಡನೆಯ ಘಟ್ಟ; ಕೈಹಿಡಿದ ಗಂಡನ ಮನೆಯಿಂದ ಹೊರಬಂದರೂ ಏಕಾಂಗಿನಿಯಾಗಿ ಅಲೆದಾಡುತ್ತ ದುಷ್ಟರ, ಕಾಮುಕರ ಕ್ರೂರ ಕಣ್ಣಿಗೆ ಒಳಗಾಗಿ ವೇದನೆಗೆ ಒಳಗಾದ ಕಾಲ – ಇದು ಮೂರನೆಯ ಘಟ್ಟ; ಕಲ್ಯಾಣದಲ್ಲಿ ಬಸವ, ಅಲ್ಲಮರಂತಹ ಭಕ್ತರಿಂದ ಸಾಂತ್ವನ ಸಮಾಧಾನವನ್ನು ಪಡೆದು, ಮನಸ್ಸಿನ ಬೇಗುದಿಯನ್ನು ಕಳೆದುಕೊಂಡು, ಬಳಿಕ ಶ್ರೀಶೈಲಕ್ಕೆ ಬಂದು ತನ್ನ ಕೊನೆಯ ದಿನಗಳನ್ನು ಚನ್ನಮಲ್ಲಿಕಾರ್ಜುನನ ಸಾನಿಧ್ಯದಲ್ಲಿ ಶಾಂತವಾಗಿ ಕಳೆದುದು ನಾಲ್ಕನೆಯ ಘಟ್ಟ. ಈ ಸ್ಥೂಲ ವಿಭಜನೆ ನಮ್ಮ ಗ್ರಹಿಕೆಗೆ ಅನುಕೂಲವಾಗಲಿ ಎಂಬ ದೃಷ್ಟಿಯಿಂದ ಮಾಡಿದುದಾದರೂ ಇದಕ್ಕೆ ವಾಸ್ತವಿಕತೆಯ ಹಿನ್ನೆಲೆಯಿದೆ ಮತ್ತು ಅವಳ ಬದುಕಿನ ಘಟನೆಗಳ ಹಿನ್ನೆಲೆಯಲ್ಲಿ ಅವಳ ವ್ಯಕ್ತಿತ್ವ ವಿಕಾಸ ಹೊಂದುತ್ತ ಹೋದುದನ್ನು ಮಾಗಿ ಹಣ್ಣಾದುದನ್ನು ಅಂತಹ ವಿಭಜನೆ ತಾರ್ಕಿಕವಾಗಿ ತೋರಿಸುತ್ತದೆ. ಈ ಬಗೆಯ ಬದುಕಿನ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಅವಳ ವಚನಗಳ ಅರ್ಥವೂ ಹೆಚ್ಚು ವಿಶದವಾಗುತ್ತದೆ.

ಮಹಾದೇವಿಯಕ್ಕನ ಹುಟ್ಟಿದೂರು ಉಡುತಡಿ ಎಂದು ಹರಿಹರ ಕವಿ ಹೇಳುತ್ತಾನೆ. ಅದು ಗುಲ್ಬರ್ಗಾ ಜಿಲ್ಲೆಯ ಮಹಾಗಾಂವ್ ಎಂದು ಒಂದಿಬ್ಬರು ವಾದಿಸಿದ್ದರೂ[೧] ಅದು ಈಗಿನ ಉಡುಗಣಿ ಎಂದೇ ಜನಪ್ರತೀತಿ ಮತ್ತು ವಿದ್ವಾಂಸರ ನಂಬಿಕೆ. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕು ಶಿರಾಳಕೊಪ್ಪಕ್ಕೆ ನಾಲ್ಕು ಕಿಲೋಮೀಟರ್ ದೂರದಲ್ಲಿ ತಡಗಣಿಯೂ ಅದರ ಪಕ್ಕದಲ್ಲೇ ಉಡುಗಣಿಯೂ ಉಂಟು. 'ಉಡುತಡಿ' ಎನ್ನುವ ಹಿಂದಿನ ದೊಡ್ಡ ಗ್ರಾಮ ಉಡುಗಣಿ, ತಡಗಣಿ ಎಂದು ಎರಡಾಗಿ ಒಡೆಯಿತೆಂದಿಟ್ಟುಕೊಂಡರೂ 'ಉಡುತಡಿ' ಎನ್ನುವ ಊರ ಹೆಸರೂ ಎರಡಾಗಿ ಒಡೆದು 'ಗಣಿ' ಎಂಬ ಪ್ರತ್ಯಯ ಸಮೇತ ಉಡುಗಣಿ, ತಡುಗಣಿ ಎಂದಾಯಿತು ಎಂಬ ವಿವರಣೆಯನ್ನು ಸಮರ್ಥಿಸಿಕೊಳ್ಳುವುದು ಕಷ್ಟ. ಕಣಿ ಅಥವಾ ಗಣಿ ಎಂದು ಕೊನೆಯಾಗುವ ಊರ ಹೆಸರುಗಳೇನೋ ಆ ಭಾಗದಲ್ಲಿವೆ. (ಉದಾ: ಬೇಡಕಣಿ). ಉಡುಗಣಿಯ ಪಕ್ಕದಲ್ಲಿರುವ ಕೋಟೆ, ಅಗುಳುಗಳು ಈಚಿನವಂತೆ ಕಂಡು ಬಂದರೂ ಅದಕ್ಕಿಂತ ಹಿಂದೆ ಅವು ಇರಲಿಲ್ಲವೆಂದು ಹೇಳಲು ಸಾಧ್ಯವಿಲ್ಲ. ಆ ಊರಲ್ಲಿರುವ ಸುಂದರವಾದ ವಿಷ್ಣು ವಿಗ್ರಹವು ಆ ಊರು ಹನ್ನೊಂದು ಹನ್ನೆರಡನೆಯ ಶತಮಾನದಷ್ಟು ಪ್ರಾಚೀನವಾದು ದೆಂಬುದಕ್ಕೆ ಆಧಾರ. ಅದೇನೇ ಇರಲಿ, ಸದ್ಯಕ್ಕೆ ಉಡುಗಣಿಯೇ ಮಹಾದೇವಿಯಕ್ಕನ ಹುಟ್ಟೂರು ಎಂದು ನಂಬಬಹುದು. ತಂದೆ ನಿರ್ಮಲಸೆಟ್ಟಿ ತಾಯಿ ಸುಮತಿ ಎಂದು ಹರಿಹರ ಹೇಳಿದ್ದರೂ ಆ ಹೆಸರುಗಳು ಸಾಂಕೇತಿಕವಾಗಿರುವಂತೆ ತೋರುತ್ತದೆ. (ಉಡುಗಣಿಯು ಬಳ್ಳಿಗಾವೆಗೆ ಐದು ಕಿಲೋಮೀಟರ್ ದೂರದಲ್ಲಿದೆ).

ಮಹಾದೇವಿಯನ್ನು ಅವಳ ತಾಯ್ತಂದೆಯರು ಶ್ರೀಶೈಲದ ಮಲ್ಲಿಕಾರ್ಜುನನಿಗೆ ಹರಸಿ ಕೊಂಡು ಪಡೆದರೆಂಬುದಕ್ಕೆ ಸೂಚನೆಗಳಿವೆ. ಶಿಕಾರಿಪುರ ತಾಲ್ಲೂಕಿನ ಪಕ್ಕದ ಹಿರೇಕೆರೂರು

ತಾಲ್ಲೂಕಿನ ಪರ್ವತ ಸಿದ್ಧಗೇರಿಯ (ಹೆಸರನ್ನು ಗಮನಿಸಿ – 'ಪರ್ವತ' ಎಂದರೆ ಶ್ರೀಶೈಲ) ಕ್ರಿ. ಶ. ೧೨೬೫ರ ಒಂದು ಶಾಸನದಲ್ಲಿ ಹೀಗಿದೆ –

"ಸ್ವಸ್ತಿ ಸಮಸ್ತ ಭುವನ ಮಂಡ.... ಮಣಿದೀಪಿಕಾಯಮಾನಾನೇಕ ಮಾಣಿಕ್ಯ ಶಿಲಾತಳ ಪ್ರಭಾವ ಪಟಲ ಜಟಿಲ ಶ್ರೀಶೈಲ ಶಿಖರ ಸಿಂಹಾಸನಾಸೀನ ಚತುರ್ದಶಭುವನಾಧೀಶ್ವರ ಶ್ರೀ ಶ್ರೀ ಪರ್ವತ ರೀ ಸವಯಂಭುಲಿಂಗ ಚಕ್ರವರ್ತಿ ಶ್ರೀಮನ್ಮಲ್ಲಿಕಾರ್ಜುನ ದೇವರ್ಗೆ ದಂಣಾಯಕರು ಸೋಮಯಾಜಿಗಳು... ದಲಿ ದೇವದರ್ಶನವಾಗಿ ಶ್ರೀ ಮಲ್ಲಿಕಾರ್ಜುನ ದೇವರ ಸನ್ನಿಧಿಯಲ್ಲಿ ಶಕವರ್ಷ ೧೧೮೭ನೆಯ ಕ್ರೋಧನ ಸಂವತ್ಸರದ ವೈಶಾಖದ ಪೌರ್ಣಮಿ ಭೃಗುವಾರ ವಿಶಾಖಾ ನಕ್ಷತ್ರ ಶಿವಯೋಗ ಯುಕ್ತವಪ್ಪ ಪುಣ್ಯತಿಥಿಯಲ್ಲಿ ಶ್ರೀ ಪರ್ವತದ ಪುಲುಮಠದ ಆಚಾರ್ಯರಪ್ಪ ಪರಿಪೂರ್ಣ ಶಿವಾಚಾರ್ಯರ ಸಮಕ್ಷದಲು ಮಲ್ಲಿಕಾರ್ಜುನ ದೇವರ್ಗೆ....[೨]

ಆ ದೇವರಿಗೆ ಸಿದ್ಧಗೇರಿ ಎಂಬ ಊರನ್ನು ದಾನ ಮಾಡಲಾಗುತ್ತದೆ. ಮುಂದೆ ಆ ಊರಿಗೆ 'ಪರ್ವತ ಸಿದ್ಧಗೇರಿ' ಎಂಬುದು ಹೆಸರಾಗಿ ಪರಿಣಮಿಸುತ್ತದೆ.

ಈ ಶಾಸನದಲ್ಲಿ ಬರುವ ಕರ್ನೂಲ್ ಜಿಲ್ಲೆಯ ಶ್ರೀಶೈಲದ ಹುಲುಮಠದ ಹೆಸರನ್ನು ಹರಿಹರಕವಿ ತನ್ನ 'ಮಹಾದೇವಿಯಕ್ಕನ ರಗಳೆ'ಯಲ್ಲಿ ಹೇಳಿದ್ದಾನೆ. ಮಹಾದೇವಿಯಕ್ಕ ವೈರಾಗ್ಯಪರಳಾಗಿ ಶ್ರೀಶೈಲಕ್ಕೆ ಹೋದಾಗ, ಅವಳನ್ನು ಬಿಟ್ಟಿರಲಾರದ ಕೌಶಿಕ ದೊರೆ ಕಪಟ ಸನ್ಯಾಸಿ ವೇಷದಲ್ಲಿ ಶ್ರೀಶೈಲಕ್ಕೆ ಹೋಗಿ ಅಲ್ಲಿ 'ಕಲುಮಠ ಹುಲುಮಠ'ದ ಗುರುಗಳಿಗೆ ಲಂಚ ಕೊಟ್ಟು ಅವಳನ್ನು ಒಲಿಸಿಕೊಳ್ಳಲು ಯತ್ನಿಸಿದನಂತೆ! ಅದಿರಲಿ. ಮೇಲಿನ ಶಾಸನದಿಂದ ಬಳ್ಳಿಗಾವೆ ಪ್ರದೇಶದ ಜನರಿಗೆ ಶ್ರೀಶೈಲದ ಮಲ್ಲಿಕಾರ್ಜುನನು ಆರಾಧ್ಯ ದೈವವಾಗಿದ್ದುದು, ಅಲ್ಲಿಯ ಜನ ಆ ದೇವರಿಗೆ ದತ್ತಿಗಳನ್ನು ಬಿಡುತ್ತಿದ್ದುದು ಸೂಚಿತವಾಗುತ್ತದೆ. ಮಹಾದೇವಿಯ ತಂದೆ ತಾಯಿಗಳಿಗೆ ಶ್ರೀಶೈಲದ ಮಲ್ಲಿಕಾರ್ಜುನ ಮನೆದೇವರಾಗಿದ್ದಿರ ಬಹುದು. ಶಿವಭಕ್ತರಾದ ಆ ದಂಪತಿಗಳು ತಮ್ಮ ಮಗಳಿಗೆ ಮಹಾದೇವಿ ಎಂದು ಹೆಸರಿಡಲು ಒಂದು ಕಾರಣ ವಿರುವಂತಿದೆ. ಸಿದ್ಧರಾಮ ತನ್ನ ವಚನಗಳಲ್ಲಿ ನಾಲ್ಕಾರು ಕಡೆ ಶ್ರೀಶೈಲದ ಮಲ್ಲಿಕಾರ್ಜುನನ ಹೆಂಡತಿಯ ಹೆಸರು 'ಮಹಾದೇವಿ' ಎಂದು ಹೇಳಿದ್ದಾನೆ.[೩] ಮಲ್ಲಿಕಾರ್ಜುನ ದೈವದ ಹೆಂಡತಿ ಮಹಾದೇವಿ ಎಂದಿರುವುದೂ, ಮಹಾದೇವಿಯಕ್ಕನು ಮಲ್ಲಿಕಾರ್ಜುನನನ್ನು ತನ್ನ ಗಂಡನೆಂದು ಭಾವಿಸಿರುವುದೂ ಆಕಸ್ಮಿಕಗಳೆಂದು ಅನ್ನಿಸುವುದಿಲ್ಲ.[೪] ಎಚ್ಚರಿಕೆಯ ಊಹೆ ಯೊಂದನ್ನು ಮಾಡುವುದಾದರೆ, ಮಹಾದೇವಿಯಕ್ಕನ ತಂದೆ ತಾಯಿಗಳು ಶ್ರೀಶೈಲದ ಮಲ್ಲಿಕಾರ್ಜುನ ದೇವರಿಗೆ ಹರಸಿಕೊಂಡು ಹುಟ್ಟಿದ ಮಗುವಿಗೆ ಮಲ್ಲಿಕಾರ್ಜುನನ ಹೆಂಡತಿಯ ಹೆಸರಾದ 'ಮಹಾದೇವಿ' ಎಂಬ ನಾಮಕರಣವನ್ನೇ ಮಾಡಿರಬಹುದು. ಈ ಊಹೆಯನ್ನೇ ಸ್ವಲ್ಪ ಬೆಳಸುವು ದಾದರೆ, ಬಾಲ್ಯದಲ್ಲಿ ತಂದೆ ತಾಯಿಗಳು ಮತ್ತು ಇತರ ದೊಡ್ಡವರು "ನೀನು ಶ್ರೀಶೈಲದ ಮಲ್ಲಿಕಾರ್ಜುನನ ಹೆಂಡತಿ" ಎಂದು ತಮಾಷೆಯಾಗಿ ಆಡಿರಬಹುದಾದ ಮಾತೇ ಮಗುವಿನ ಮನಸ್ಸಿನಲ್ಲಿ ಉಳಿದು ಬಾಲ್ಯದಲ್ಲೇ ಆ ಮಗು ಚೆನ್ನಮಲ್ಲಿಕಾರ್ಜುನನನ್ನು ತನ್ನ ಗಂಡನನ್ನಾಗಿ ಮಾಡಿಕೊಳ್ಳಬೇಕೆಂಬ ಆಸೆ ಕನಸುಗಳು ದೊಡ್ಡವರಾದ ಮೇಲೂ ಬಲವಾಗಿ ಬೇರೂರುತ್ತವೆ ಎಂಬುದನ್ನು ಗಮನಿಸಿದರೆ ಮೇಲಿನ ಊಹೆಯ ಸಂಭಾವ್ಯತೆಯ ಅರಿವಾಗುತ್ತದೆ. ಮಹಾದೇವಿಯಕ್ಕ ತನ್ನ ಯೌವನದಲ್ಲಿ ಚನ್ನಮಲ್ಲಿಕಾರ್ಜುನನೇ ತನ್ನ ಗಂಡನೆಂದು ಭಾವಿಸಲು ಬಾಲ್ಯದ ಮೇಲಿನಂತಹ ಯಾವುದೋ ಸಂಗತಿ ನಿಮಿತ್ತ ಕಾರಣವಾಗಿರಬೇಕು.

ಇಷ್ಟು ಮಾತ್ರ ನಿಜ : ಬಳ್ಳಿಗಾವೆಯ ಭಕ್ತಿಮಯ, ಜ್ಞಾನಮಯ ಶೈವ ವಾತಾವರಣದಲ್ಲಿ ಹುಟ್ಟಿ ಬೆಳೆದ ಅವಳ ತಂದೆ ತಾಯಂದಿರು ತಮ್ಮ ಮನೆಯಲ್ಲೂ ಅದೇ ಶಿವಭಕ್ತಿಯ ವಾತಾವರಣದಲ್ಲಿ ಆ ಹುಡುಗಿಯನ್ನು ಬೆಳೆಸಿದರು. ಆ ಕಾಲಕ್ಕೆ ಬಳ್ಳಿಗಾವೆ ಒಂದು ಬಹುದೊಡ್ಡ ಸಾಂಸ್ಕೃತಿಕ ಕೇಂದ್ರವಾಗಿದ್ದಿತು. ಕಲ್ಯಾಣದ ಚಾಲುಕ್ಯರ 'ದಕ್ಷಿಣ ದಿಶಾಭಾಗ'ದ ರಾಜಧಾನಿಯೆಂದು ಪ್ರಸಿದ್ಧವಾಗಿದ್ದ ಅಲ್ಲಿ ಎಲ್ಲ ಮತಗಳ (ಶೈವ, ಬೌದ್ಧ, ಜೈನ, ವೈಷ್ಣವ) ಕೇಂದ್ರಗಳಿದ್ದವು. ಅದರಲ್ಲೂ ಅದು ಕಾಳಾಮುಖ ಪಾಶುಪತರ ಪ್ರತಿಷ್ಠಿತ ಕೇಂದ್ರವಾಗಿತ್ತು. ಆ ಊರ ತುಂಬ ಶಿವಮಂದಿರಗಳಿದ್ದವು. ಕೇದಾರೇಶ್ವರ ದೇವಾಲಯದ ಶಾಸನಗಳ ಪ್ರಕಾರ, ಶಿವಭಕ್ತಿಯ ರೋಮಾಂಚನದ ಬೆಳಸನ್ನು ಬೆಳೆಸುವ ಹೊಲದಂತಿದ್ದಿತು ಆ ಕ್ಷೇತ್ರ. ಭಾರತದ ನಾನಾ ಭಾಗಗಳಿಂದ ಏಕದಂಡಿ, ದ್ವಿದಂಡಿ, ಹಂಸ, ಪರಮಹಂಸ ಸಾಧುಗಳು ಸಂತರು ಜ್ಞಾನ ಪಿಪಾಸುಗಳಾದ ವಿದ್ಯಾರ್ಥಿಗಳು ಕಲಾವಿದರು ಬಳ್ಳಿಗಾವೆಗೆ ಕಿಕ್ಕಿರಿಯುತ್ತಿದ್ದರು; ಭಿಕ್ಷೆಗಾಗಿ ಉಳಿದುಕೊಳ್ಳುವುಕ್ಕಾಗಿ ಬಳ್ಳಿಗಾವೆಯ ಸುತ್ತಮುತ್ತಣ ಬಡಾವಣೆಗಳಿಗೆ ಹಳ್ಳಿಗಳಿಗೆ ಹರಡಿ ಕೊಳ್ಳುತ್ತಿದ್ದರು. ಮಹಾದೇವಿಯಕ್ಕ ಹುಟ್ಟಿ ಬೆಳೆದ ವಾತಾವರಣವೇ ಶಿವಭಕ್ತಿ ವೈರಾಗ್ಯಗಳಿಂದ ಆರ್ದ್ರವಾಗಿದ್ದಿತು. ಜೊತೆಗೆ, ಅದು ಕಾವ್ಯಮಯ ವಾತಾವರಣದಿಂದಲೂ ತುಂಬಿತ್ತು. ಶಾಂತಿನಾಥನಂತಹ ಚಂಪೂ ಕವಿಯ ಊರು ಅದಾಗಿತ್ತು ಮಾತ್ರವಲ್ಲ, ಸ್ವತಃ ವಚನಕಾರ ಅಲ್ಲಮನೇ ಆ ಊರಿನವನು ಎಂಬುದನ್ನು ಇಲ್ಲಿ ಜ್ಞಾಪಿಸಿಕೊಳ್ಳಬಹುದು.

ಏಕಮಾತ್ರ ಪುತ್ರಿಯಾಗಿ ಆರೈಕೆಗೊಂಡ ಆ ಮಗು ತಾರುಣ್ಯದಲ್ಲಿ ಆಕರ್ಷಕ ಸುಂದರಿಯಾಗಿ ಬೆಳೆದಳು. ಆ ವಯಸ್ಸಿಗೆ ಎಲ್ಲ ಸರಿವಯಸ್ಸಿನ ಹುಡುಗಿಯರು ಮದುವೆಯಾಗುವ ಸುಂದರ ಗಂಡನ ಕನಸನ್ನು ಕಾಣುತ್ತಿದ್ದರೆ ಅಕ್ಕಮಹಾದೇವಿಯೂ ಅಂತಹುದೇ ಕನಸನ್ನು ಕಾಣುತ್ತಿದ್ದಳು; ಇಷ್ಟೇ ವ್ಯತ್ಯಾಸ, ಆ ಗಂಡು ಶ್ರೀಶೈಲದ ಚೆನ್ನಮಲ್ಲಿಕಾರ್ಜುನನೇ ಆಗಿದ್ದ. ಲೌಕಿಕ ಗಂಡುಗಳ ಕಡೆ ಅವಳ ಮನಸ್ಸು ಹೋಗಲಿಲ್ಲ.

ಅಕ್ಕ ಕೇಳವ್ವ ಅಕ್ಕಯ್ಯ, ನಾನೊಂದು ಕನಸ ಕಂಡೆ
ಅಕ್ಕಿ ಅಡಕೆ ಓಲೆ ತೆಂಗಿನಕಾಯಿ ಕಂಡೆ.
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಬಂದುದನು ಕಂಡೆನವ್ವ
ಮಿಕ್ಕು ಮೀರಿ ಹೋಹವನ ಬೆಂಬೆತ್ತಿ ಕೈವಿಡಿದೆನು
ಚನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು.

ಇಂತಹ ವಚನಗಳು ಆ ಷೋಡಶ ವಯಸ್ಸಿನ ಹುಡುಗಿಯ ಸುಂದರ ಕನಸುಗಳನ್ನು ಸೂಚಿಸುತ್ತದೆ. ಈ ವಯಸ್ಸಿನಲ್ಲೇ ಅವಳು ಕೌಶಿಕ ಎಂಬ ದೊರೆಯ ಕಣ್ಣಿಗೆ ಬಿದ್ದು ಅವನ ಬಲವಂತಕ್ಕೆ ಮದುವೆಯಾಗಿ ಅವನ ಅಂತಃಪುರವನ್ನು ಸೇರಬೇಕಾಯಿತು. ಕೌಶಿಕನ ಕೈ ಹಿಡಿಯುವಂತೆ ಅವಳ ತಾಯಿಯೂ ಒತ್ತಾಯಪಡಿಸಿರುವುದಕ್ಕೆ ಮಹಾದೇವಿಯಕ್ಕನ ವಚನಗಳಲ್ಲೇ ಸೂಚನೆಯಿದೆ.

ಮನ ಮನ ತಾರ್ಕಣೆಯ ಕಂಡು ಅನುಭವಿಸಲು
ನೆನಹೆ ಘನವಹುದಲ್ಲದೆ ಅದು ಹವಣದಲ್ಲಿ ನಿಲ್ಲುವುದೆ
ಅಲೆ ಅವ್ವಾ, ನೀನು ಮರುಳವ್ವೆ

ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯಗೊಲಿದು ಸಲೆ ಮಾರುಹೋದೆನು
ನಿನ್ನ ತಾಯಿತನವನೊಲ್ಲೆ ಹೋಗಾ

ತನ್ನ ತಾಯಿಯ ಬಲವಂತ ಹೆಚ್ಚಾದಾಗ ಅವಳ ತಾಯ್ತನವನ್ನೇ ತಿರಸ್ಕರಿಸಲು ಸಿದ್ಧವಾಗಿರುವ ಮಹಾದೇವಿಯ ಮನಸ್ಸು ಚೆನ್ನಮಲ್ಲಿಕಾರ್ಜುನನಲ್ಲಿ ಎಷ್ಟು ತೀವ್ರವಾಗಿ ಸಿಲುಕಿತ್ತು ಎಂಬುದನ್ನು ಊಹಿಸಬಹುದು. ಮದುವೆಯ ಸಂದರ್ಭದಲ್ಲಿ ಮಹದೇವಿ ಮದುವಣಗಿತ್ತಿಯ ಅಲಂಕಾರಗಳನ್ನು ತಿರಸ್ಕಿರಿಸಿದಂತೆ ಕಾಣುತ್ತದೆ. ಚನ್ನಮಲ್ಲಿಕಾರ್ಜುನನ ವಧುವಾದ ತನಗೆ ಬೇರೆ ಶೃಂಗಾರ ಬೇಕಿಲ್ಲವೆಂದು ಒಂದೆಡೆ ಹೇಳಿಕೊಂಡಿದ್ದಾಳೆ :

ಗುರುಪಾದತೀರ್ಥವೇ ಮಂಗಳಮಜ್ಜನವೆನಗೆ
ವಿಭೂತಿಯೇ ಒಳುಗುಂದದರಿಶಿಣವೆನಗೆ
ದಿಗಂಬರವೆ ದಿವ್ಯಾಂಬರವೆನಗೆ
ಶಿವಭಕ್ತರ ಪಾದರೇಣುವೆ ಅನುಲೇಪವೆನಗೆ
ರುದ್ರಾಕ್ಷಿಯೆ ಮೈದೊಡಿಗೆಯೆನಗೆ
ಶರಣರ ಪಾದರಕ್ಷೆಯ ಶಿರದಲಿ ತೊಂಡಿಲು ಬಾಸಿಗವೆನಗೆ
ಚನ್ನಮಲ್ಲಿಕಾರ್ಜುನನ ಮದುವಳಿಗೆಗೆ
ಬೇರೆ ಶೃಂಗಾರವೇಕೆ ಹೇಳಿರೆ ಅವ್ವಗಳಿರಾ

ವಯಸ್ಸಿಗೆ ಮೀರಿದ ಮಾನಸಿಕ ಪಕ್ವತೆ ಇಂತಹ ವಚನಗಳಲ್ಲಿ ಹಲವೆಡೆ ಎದ್ದು ಕಾಣುತ್ತದೆ.

ಯಾರು ಈ 'ಕೌಶಿಕ ?' ಇತಿಹಾಸದಲ್ಲಿ ಗುರುತಿಸಲು ಸಾಧ್ಯವಾಗಿದೆ. ಕೌಶಿಕ ಯಾರು ಅಲ್ಲ – ಅಕ್ಕಮಹಾದೇವಿಯ ಕಾಲದಲ್ಲಿ ಬಳ್ಳಿಗಾವೆಯಲ್ಲಿ ಬಿಜ್ಜಳನ ಮನ್ನೆಯನಾಗಿ ಆಳುತ್ತಿದ್ದ ಕಸಪಯ್ಯ ನಾಯಕನೇ ಎಂಬುದನ್ನು ನಾನು ಈಗಾಗಲೇ ಸಾಧಾರವಾಗಿ ತೋರಿಸಿಕೊಟ್ಟಿದ್ದೇನೆ.[೫]

ಮಹಾದೇವಿಯಕ್ಕನ ವಿವಾಹ ನಿಜವಾಗಿಯೂ ನಡೆಯಿತೇ ಎಂಬುದು ಈಗ ಪ್ರಶ್ನೆಯೇ ಅಲ್ಲ. ಕಸಪಯ್ಯ ನಾಯಕನು ಅವಳನ್ನು ಬಲವಂತದಿಂದ ಮದುವೆಯಾದುದು ಮಾತ್ರವೇ ಅಲ್ಲ, ಅವಳ ದೇಹವನ್ನೂ ಅವನು ಪಡೆದಿದ್ದನೆಂಬುದಕ್ಕೆ ವಚನಾಧಾರಗಳೂ ಇವೆ: ಹರಿಹರನ ಆಧಾರವೂ ಇದೆ.

ಎಮ್ಮೆಗೊಂದು ಚಿಂತೆ, ಸಮ್ಮಗಾರಗೊಂದು ಚಿಂತೆ
ಧರ್ಮಿಗೊಂದು ಚಿಂತೆ, ಕರ್ಮಿಗೊಂದು ಚಿಂತೆ
ಎನಗೆ ಎನ್ನ ಚಿಂತೆ, ತನಗೆ ತನ್ನ ಕಾಮದ ಚಿಂತೆ
ಒಲ್ಲೆ ಹೋಗು, ಸೆರಗ ಬಿಡು ಮರುಳೆ
ಎನಗೆ ಚನ್ನಮಲ್ಲಿಕಾರ್ಜುನ ದೇವರು ಒಲಿವರೊ ಒಲಿಯರೋ ಎಂಬ ಚಿಂತೆ

ಕೌಶಿಕ (ಕಸಪಯ್ಯ ನಾಯಕ) ಅವಳನ್ನು ಕಾಮಕೇಳಿಗೆ ಕರೆದಾಗ ಮೂಡಿರಬಹುದಾದ ವಚನವಿದು. ಅವಳ ವಿರಸ ದಾಂಪತ್ಯದ ಚಿತ್ರವನ್ನು ಹಲವು ವಚನಗಳು ಕೊಡುತ್ತವೆ. "ಒಳಗಣ ಗಂಡನವ್ವಾ, ಹೊರಗಣ ಮಿಂಡನವ್ವಾ – ಎರಡನೂ ನಡೆಸಲು ಬಾರದವ್ವಾ, ಲೌಕಿಕ ಪರಮಾರ್ಥವೆಂಬೆರಡೂ ನಡೆಸಲು ಬಾರದವ್ವಾ" ಗಂಡನಾಗಬೇಕಾಗಿದ್ದ ಚನ್ನಮಲ್ಲಿಕಾರ್ಜುನನೇ ರಾಣಿವಾಸದಲ್ಲಿದ್ದ ಮಹಾದೇವಿಗೆ ಮಿಂಡನ ಜಾಗದಲ್ಲಿ ನಿಲ್ಲಬೇಕಾಗಿದೆ. ದೇಹವನ್ನು ಕಸಪಯ್ಯ ನಾಯಕನಿಗೆ ಒಪ್ಪಿಸಿದ ಮಹಾದೇವಿ ಆ ಬಳಿಕ ಅನುಭವಿಸಿರಬಹುದಾದ ಯಾತನೆ,

ಶಿವನೊಡನೆ ಕಲ್ಪನೆಯಲ್ಲಿ ಸೇರಿ ಆ ಯಾತನೆಯನ್ನು ಮರೆಯಲು ಯತ್ನಿಸಿದ್ದು ಇವೆಲ್ಲಾ ಅವಳ ವಚನಗಳಲ್ಲಿ ಅಭಿವ್ಯಕ್ತಗೊಂಡಿದೆ. "ಆತನನಪ್ಪಿ ಕೊಂಡು ತೆಳವೆಳಗಾದೆನು" – ಇಂತಹ ಮಾತುಗಳನ್ನು ಮನೋವಿಜ್ಞಾನದ ಬೆಳಕಿನಲ್ಲಿ ಸುಲಭವಾಗಿ ಅರ್ಥಮಾಡಿಕೊಳ್ಳಬಹುದು. ಅವಳ ಬಾಳನ್ನು ವ್ಯಾಪಿಸಿದ ವಿಷಮ ದಾಂಪತ್ಯದ ಯಾತನೆ ಅವಳಲ್ಲಿದ್ದ ಕವಿಯಿತ್ರಿಯನ್ನು ಹೊರಕ್ಕೆ ತಂದಿತು. ತನ್ನನ್ನು ತಾನು ಹಗುರಗೊಳಿಸಿಕೊಳ್ಳಲು ಅವಳಿಗೆ ಹಾಡು ಜೀವನದುದ್ದಕ್ಕೂ ಒಂದು ಸಾಧನವಾಯಿತು. ವಚನಕಾರರಲ್ಲಿ ಯಾರಿಗಾದರೂ ವಚನ ರಚನೆ ಅನಿವಾರ್ಯ ಕ್ರಿಯೆಯಾಗಿದ್ದರೆ ಅದು ಅಕ್ಕಮಹಾದೇವಿಗೆ. ಯಾವನೋ ಒಬ್ಬ ಗಂಡನನ್ನು ಕೈ ಹಿಡಿದ ಮೇಲೆ ಅವನ ದಾಸಿಯಂತೆ ಬದುಕಬೇಕೆಂಬ ಪಾರಂಪರಿಕ ವಾತಾವರಣದಲ್ಲಿ ಮಹಾದೇವಿ ತನ್ನ ಮನದ ಅಳಲನ್ನು ಯಾರಿಗೆ ಹೇಳಿ ಕೊಳ್ಳಲು ಸಾಧ್ಯ ? ಹೀಗಾಗಿ ಅವಳು ತನ್ನ ಜೊತೆ ತಾನು ಮಾತನಾಡಿಕೊಂಡು, ಕನಸು ಕಂಡು, ಹಾಡಿ ತನ್ನನ್ನು ತಾನು ಹಗುರಗೊಳಿಸಿಕೊಳ್ಳಬೇಕಿತ್ತು. ಸುಮ್ಮನಿದ್ದರೆ ಬಹುಶಃ ಹುಚ್ಚು ಹಿಡಿಯುವಂತಹ ಸನ್ನಿವೇಶ. ಅವಳು ಹಾಡಿ ಹಾಡಿ ತನ್ನನ್ನು ತಾನು ಹಗುರಗೊಳಿಸಿ ಕೊಂಡಳು. ಈ ಕಾರಣದಿಂದ ಸಹಜವಾಗಿಯೇ ಭಾವುಕ ಸ್ವಭಾವದ ಅವಳ ವಚನಗಳು ಬಹುತೇಕ ಆತ್ಮ ಚಾರಿತ್ರಾತ್ಮಕವೂ ಭಾವಗೀತಾತ್ಮಕವೂ ಆಗಿವೆ. "ಅಯ್ಯಾ, ನೀನು ಕೇಳಿದಡೆ ಕೇಳು, ಕೇಳದಡೆ ಮಾಣು, ಆನು ನಿನ್ನ ಹಾಡಿದಡಲ್ಲದೆ ಸೈರಿಸಲಾರೆನಯ್ಯಾ" ಎಂಬ ವಚನಭಾಗವನ್ನು ಇಲ್ಲಿ ಸ್ಮರಿಸಬೇಕು.

ಮದುವೆಯಾದ ಮೇಲೂ ಅವಳ ಮನೆಗೆ ಅವ್ಯಾಹತವಾಗಿ ಬರುತ್ತಿದ್ದ ಶಿವಭಕ್ತರ ಬಗ್ಗೆ ಕಸಪಯ್ಯ ನಾಯಕ ತಾಳಿದ ಧೋರಣೆ ಅವಳು ತನ್ನ ವಿರಸ ಸಂಸಾರದಿಂದ ಹೊರ ಬರಲು ಕಾರಣವಾಯಿತು. ಅವರಿಬ್ಬರೂ ಒಮ್ಮೆ ಏಕಾಂತದಲ್ಲಿರುವಾಗ ಅವಳನ್ನು ಕಾಣಲು ಶಿವಭಕ್ತರು ಬಂದುದು ಕಾರಣವಾಗಿ ಅವಳ ಗಂಡ ಸಿಡಿಮಿಡಿಗೊಂಡ – ಅಂತಹ 'ತಪ್ಪು' ಮೂರನೆಯ ಬಾರಿ ಆತನಿಂದ ನಡೆದಿರಬಹುದು. ಅದೇ ನೆಪವಾಗಿ ಮಹಾದೇವಿ ಹೊರಟಾಗ ಕಾಮವಶ ನಾಗಿದ್ದ ಅವನು ಅವಳ ವಸ್ತ್ರವನ್ನು ಸೆಳೆದು 'ನಿನಗೇಕೆ ವಸ್ತ್ರ' ಎಂದು ವ್ಯಂಗ್ಯೋಕ್ತಿ ಆಡಿದ್ದೇ ಕಾರಣವಾಗಿ ಅವಳು ದಿಗಂಬರೆಯಾಗಿ (ಕೇಶಾಂಬರೆಯಾಗಿ) ಮನೆ ಬಿಟ್ಟು ಹೊರಟಳು ಎಂಬ ನಿರೂಪಣೆಯೇನೋ ಹರಿಹರನಲ್ಲಿ ಸಿಗುತ್ತದೆ. ಅವಳ ದಿಗಂಬರತ್ವ ಹಲವು ಸಮಸ್ಯೆಗಳನ್ನೊಡ್ಡುತ್ತದೆ. ಅವಳು ಸಂಪೂರ್ಣ ನಗ್ನಳಾಗಿಯೇ ಬಳ್ಳಿಗಾವೆಯಿಂದ ಕಲ್ಯಾಣಕ್ಕೆ ಹೋದಳೆಂದು ಕಲ್ಪಿಸಿಕೊಳ್ಳುವುದು ತೀರಾ ಕಠಿಣ.

ಕೈಸಿರಿಯ ದಂಡವ ಕೊಳಬಹುದಲ್ಲದೆ
ಮೈಸಿರಿಯ ದಂಡವ ಕೊಳಲುಂಟೆ ?
ಉಟ್ಟಂತಹ ಉಡಿಗೆ ತೊಡಿಗೆಯನೆಲ್ಲ ಸೆಳೆದುಕೊಳ್ಳಬಹುದಲ್ಲದೆ
ಮುಚ್ಚಿರ್ದ ಮುಸುಕಿರ್ದ ನಿರ್ವಾಣವ ಸೆಳೆದುಕೊಳ್ಳಬಹುದೆ ?
ಚನ್ನಮಲ್ಲಿಕಾರ್ಜುನ ದೇವರ ಬೆಳಗನುಟ್ಟ ಲಜ್ಜೆಗೆಟ್ಟವಳಿಗೆ
ಉಡುಗೆ ತೊಡುಗೆಯ ಹಂಗೇಕೋ ಮರುಳೆ ?

ಇಂತಹ ಕಡೆ ತನ್ನ ಮೈಮೇಲಿನ ಒಡವೆ ಉಡುಪುಗಳನ್ನು ತನ್ನ ಗಂಡನೇ ಕಿತ್ತು ಕೊಂಡುದನ್ನು ಅವಳು ಸೂಚಿಸಿರುವಂತಿದೆ. 'ಕೇಶಾಂಬರ' ಎಂದರೆ ಉಣ್ಣೆಯಿಂದ ಮಾಡಿದ ವಸ್ತ್ರ, ಗೊಂಗಡಿ ಎಂದ ಶ್ರೀ ಎಚ್. ದೇವೀರಪ್ಪನವರು ಹರಿಹರನ ಕೇಶಿರಾಜ ದಣ್ಣಾಯಕನ

ರಗಳೆಯನ್ನವಲಂಬಿಸಿ ವಾದಿಸಿದ್ದರೂ^೬, ಮುಂದೆ ಕಲ್ಯಾಣದಲ್ಲಿ ಅಲ್ಲಮ ಎಲ್ಲರ ಮುಂದೆ ಅವಳ ದಿಗಂಬರತ್ವವನ್ನು ಪ್ರಸ್ತಾಪಿಸುವುದನ್ನು ಗಮನಿಸಿದರೆ ಸಮಸ್ಯೆ ಅಷ್ಟು ಸರಳವಲ್ಲವೆಂದು ಗೊತ್ತಾಗುತ್ತದೆ. ಬಟ್ಟೆಗಳ ಕಡೆ ಲಕ್ಷ್ಯ ಕೊಡದೆ, ಕನಿಷ್ಠ ಬಟ್ಟೆಗಳೊಡನೆ ಗಂಡನ ಮನೆಯಿಂದ ಹೊರಬಿದ್ದ ಮಹಾದೇವಿ ಮತ್ತೆ ತೌರುಮನೆಯತ್ತ ಕಾಲು ಹಾಕಲಿಲ್ಲ. ಸಾಂಪ್ರದಾಯಕ ಸಮಾಜದಲ್ಲಿ ಗಂಡನ ಮನೆಯಿಂದ ಹೊರಬಿದ್ದ ಹೆಣ್ಣಿಗೆ ತೌರಿನ ಬಾಗಿಲ ಕದವು ಮುಚ್ಚುವ ಸಾಧ್ಯತೆಗಳಿರುತ್ತದೆ. ಹೀಗಾಗಿ ಅವಳು ಸಹಜವಾಗಿ ಅದೇ ಕಾಲದಲ್ಲಿ ಸಾಮಾಜಿಕ ಆಂದೋಲನ ಮತ್ತು ಶಿವಭಕ್ತಿಗಳ ಕೇಂದ್ರವಾಗಿ ರೂಪುಗೊಂಡಿದ್ದ ಕಲ್ಯಾಣದತ್ತ ಹೆಜ್ಜೆ ಹಾಕಿದಳು.

ಗಂಡನನ್ನು ಬಿಟ್ಟು ಬೀದಿಗೆ ಬಂದ ಏಕಾಂಗಿನಿ ಸುಂದರಿ ತರುಣಿಯ ಬಗ್ಗೆ ಸಮಾಜ ವಾಗಲೀ, ದಾರಿಹೋಕರಾಗಲೀ ಹೇಗೆ ನಡೆದುಕೊಂಡಿರಬಹುದೆಂಬುದರ ಬಗ್ಗೆ ಹೆಚ್ಚು ಊಹೆಗಳ ಅಗತ್ಯವಿಲ್ಲ. ಅವಳೇನೋ,

ಹಸಿವಾದೊಡೆ ಊರೊಳಗೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆ ಹಳ್ಳ ಬಾವಿಗಳುಂಟು
ಅಂಗಶೀತಕ್ಕೆ ಬೀಸಾಟ ಅರಿವೆಗಳುಂಟು
ಶಯನಕ್ಕೆ ಹಾಳು ದೇಗುಲಗಳುಂಟು
ಚನ್ನಮಲ್ಲಿಕಾರ್ಜುನಯ್ಯ, ಆತ್ಮ ಸಂಗಾತಕ್ಕೆ ನೀನೆನಗುಂಟು.

ಬಹುಶಃ ಏಕಾಂಗಿನಿಯಾಗಿ ಹೊರಟ ಅವಳ ಜೊತೆ ಇದ್ದವನು ಆತ್ಮದೊಳಗಿದ್ದ ಚನ್ನಮಲ್ಲಿಕಾರ್ಜುನ ಮಾತ್ರ. ಭಿಕ್ಷೆಯಿಂದ ಪ್ರಾಣವನ್ನು ಉಳಿಸಿಕೊಂಡು, ಕೆರೆ, ಹಳ್ಳ ಬಾವಿಗಳ ನೀರನ್ನು ಕುಡಿಯುತ್ತ, ಜನ ಕರುಣೆಯಿಂದ ಕೊಟ್ಟ ಚಿಂದಿ ವಸ್ತ್ರಗಳನ್ನು ಧರಿಸಿ, ಹಾಳು ದೇಗುಲಗಳಲ್ಲಿ ಹಲವು ರಾತ್ರಿ ಕಳೆಯುತ್ತಾ ಅವಳು ಕಲ್ಯಾಣದತ್ತ ಹೊರಟಳು. ದಾರಿಯಲ್ಲಿ ಕಾಮುಕರು ಅವಳನ್ನು ಕೆಣಕಿರಲಾರರೇ ? ಕೆಣಕಿರದಿದ್ದರೆ ಆಶ್ಚರ್ಯ. ಜನ ಹುಚ್ಚಿಯೆಂದು ಹಾಸ್ಯ ಮಾಡಿರಲಾರರೇ ? ಹಾಸ್ಯ ಮಾಡದಿದ್ದರೆ ಆಶ್ಚರ್ಯ. ಅವಳು ಆಗ ಅನುಭವಿಸಿರ ಬಹುದಾದ ನೋವು ನಮ್ಮ ಊಹೆಗೂ ಮೀರಿದ್ದು. ದೈವದ ಮೇಲೆ ಇದ್ದ ನಿಷ್ಠೆ, ಪರವಶಳಾಗಿ ಹಾಡುತ್ತಿದ್ದ ಹಾಡು, ದಾರಿಯಲ್ಲಿನ ಊರುಗಳ ಕರುಣಾವಂತರಾದ ಶಿವಭಕ್ತ ಜನ ಅವಳಿಗೆ ಸಾಧ್ಯವಾದಷ್ಟು ರಕ್ಷಣೆಯನ್ನು ಒದಗಿಸಿದುವು.

ಅವಳಿಗೆ ಆದ ಕೊನೆಯ ನೋವಿನ ಅನುಭವ ಅತ್ಯಂತ ತೀವ್ರವಾದುದು ಮತ್ತು ಅದು ಅವಳ ಅಂತಹ ಹಲವು ನೋವುಗಳಿಗೆ ಕನ್ನಡಿ ಹಿಡಿಯುವಂತಹುದೂ ಆಗಿದೆ. ವಾಸ್ತವವಾಗಿ ಅವಳು ಹೊರಟಿದ್ದು, ತನ್ನ ನಿಜವಾದ ಗಂಡನ ಮನೆಗೆ, ಶ್ರೀಶೈಲಕ್ಕೆ, ದಾರಿಯಲ್ಲೇ ಕಲ್ಯಾಣ. ರಾಜಧಾನಿ ಕಲ್ಯಾಣಕ್ಕೆ ಅವಳು ಹೋಗುವಲ್ಲಿ ಬಸವನನ್ನು ನೋಡುವ ಉದ್ದೇಶವಿತ್ತು ಎಂಬುದು ಖಚಿತ. ಕಲ್ಯಾಣದ ಹೊರವಳಯದಲ್ಲಿ ಅವಳು ಬರುತ್ತಿರುವಾಗ ಅಲ್ಲಿಗೆ ಆಕಸ್ಮಿಕವಾಗಿ ಕಿನ್ನರಿ ಬೊಮ್ಮಯ್ಯನೆಂಬ ಸ್ಪುರದ್ರೂಪಿ, ಕಲಾವಿದ ಶಿವಶರಣ ಬರುತ್ತಾನೆ. ಆಕೆಯ ಸೌಂದರ್ಯಕ್ಕೆ ಮೋಹಿತನಾದ ಅವನು "ಆಕೆ ಲಿಂಗನುಭಾವ ಸಂಪನ್ನೆಯಾದರೆ ಗುರು ತಾಯಿ ಎಂದು ಶರಣೆಂಬೆನು; ಅಲ್ಲಾ, ದೇಹ ಲಜ್ಜಾಭಿಮಾನ ಉಳ್ಳಡೆ ಸ್ತ್ರೀಯಾಗಿ ಕೈವಿಡಿವೆನು" ಎಂದುಕೊಂಡು ಅವಳ ಹತ್ತಿರ ಬರುತ್ತಾನೆ. ಕಾಮುಕರು ಅವಳನ್ನು ಕೆಣಕಿದ್ದು ಅವಳಿಗೆ ಹೊಸ ಅನುಭವವೇನೂ ಆಗಿರಲಿಲ್ಲ. ಆದರೆ ಒಬ್ಬ ಶಿವಭಕ್ತ, ಬಸವಣ್ಣನಿಗೆ ಅತ್ಯಂತ ಆಪ್ತನೊಬ್ಬ ಹೀಗೆ ಬಂದು ಅವಳನ್ನು

ಬಯಸಿದುದು ಮಾತ್ರ ಹೊಸದಾಗಿತ್ತು. ಕಿನ್ನರಯ್ಯನ ಸಂಕಲ್ಪ ಮೊದಮೊದಲು ಅಸ್ವಾಭಾವಿಕವೂ ದುಷ್ಟವೂ ಆಗಿರಲಿಲ್ಲ. ಅವಳ ಜೊತೆ ಮಾತನಾಡಿ ಅವಳ ಭಕ್ತಿ ತೋರಿಕೆಯದಾಗಿದ್ದರೆ ಮಾತ್ರ ಅವಳ ಕೈ ಹಿಡಿಯುವ ಬಯಕೆ ಅವನದು. ಆ ಮೊದಲ ಸಂಕಲ್ಪ ಅವನಿಂದ ಮರೆಯಾಗುತ್ತದೆ. "ಚೆನ್ನಮಲ್ಲಿಕಾರ್ಜುನ ನಲ್ಲದೆ ಮಿಕ್ಕಿಹ ಪುರುಷರೆನಗೆ ಸಹೋದರ, ಛೀ ಹೋಗಾ ಮರುಳೆ" ಎಂಬ ಅವಳ ಛೇಡಿಕೆಯಾಗಲೀ "ಕಿನ್ನರಂತಪ್ಪ ಸೋದರನೆನಗೆ" ಎಂಬ ಆಪ್ತ ವಾಕ್ಯವಾಗಲೀ ಅವಳ ಒಳಗಿವಿಗೆ ಕೇಳಿಸದಷ್ಟು ಕಾಮಾಂಧನಾಗಿದ್ದ ಅವನು ಅವಳ ಕೈ ಹಿಡಿದು ಬಲಾತ್ಕರಿಸುತ್ತಾನೆ. ಅವನು ಆ ಕಾಲಕ್ಕೆ ಕಾಮುಕನಂತೆ ವರ್ತಿಸಿದರೂ ಶಿವಸಂಸ್ಕಾರವಿರುವ ವ್ಯಕ್ತಿಯೆಂದು ಬಹುಶಃ ತಿಳಿದ ಮಹಾದೇವಿ ತನ್ನನ್ನು ಅವನಿಗೆ ಒಪ್ಪಿಸಿಕೊಳ್ಳುತ್ತಾಳೆ. ಅವಳ ದೇಹದ ಯಾವುದೇ ಭಾಗವೂ ಲೈಂಗಿಕ ಕ್ರಿಯೆಗೆ ಪ್ರತಿಸ್ಪಂದಿಸದಿದ್ದುದನ್ನೂ ಅವಳ ಇಡೀ ದೇಹ ಶಿವಮಯವಾಗಿರುವುದನ್ನೂ ಕಿನ್ನರಯ್ಯ ಗುರುತಿಸುತ್ತಾನೆ; ತನ್ನ ತಪ್ಪಿನ ಅರಿವಾಗಿ ತೀವ್ರ ಪಶ್ಚಾತ್ತಾಪಕ್ಕೊಳಗಾಗುತ್ತಾನೆ. ಪಾಪಕ್ಕೆ ಪ್ರತಿಭಟನೆಯಿಲ್ಲದೆ ಒಪ್ಪಿಕೊಂಡು ಪಾಪವನ್ನು ಗೆದ್ದ ರೀತಿ ಅದು. ಅಕ್ಕಮಹಾದೇವಿ ಅವನಿಗೆ ಕಾಮಬಾಣದ ಸ್ವರೂಪವೇ ಹಾಗೆಂದು ಹೇಳಿ ಅವನ ನಡೆವಳಿಕೆಯಲ್ಲಿನ ಮನುಷ್ಯ ಸಹಜ ದೌರ್ಬಲ್ಯವನ್ನು ಅವನಿಗೆ ತೋರಿಸಿ ಕ್ಷಮಿಸುತ್ತಾಳೆ. ಕಿನ್ನರಯ್ಯನಂತೂ "ಮಹಾಲಿಂಗ ತ್ರಿಪುರಾಂತಕನೊಡ್ಡಿದ ತೊಡಕ ನೀವು ಬಿಡಿಸಿದಿರಾಗಿ ನಿಮ್ಮ ದಯದಿಂದ ನಾನು ಹುಲಿನೆಕ್ಕಿ ಬದುಕಿದೆನು ಶರಣಾರ್ತಿ ಶರಣಾರ್ತಿ ತಾಯೆ" ಎಂದು ತನಗೊದಗಿದ್ದ ಅಪಾಯ ಸ್ಥಿತಿ, ಅಲ್ಲಿಂದ ಆಶ್ಚರ್ಯಕರ ರೀತಿಯಲ್ಲಿ ಹೊರಬಂದುದನ್ನು ಧ್ವನಿಪೂರ್ಣವಾಗಿ ಹೇಳುತ್ತಾನೆ. ಹುಲಿ ಮನುಷ್ಯನನ್ನು ನೆಕ್ಕಿದರೆ ಅವನ ಕತೆ ಅಲ್ಲಿಗೆ ಮುಗಿದಂತೆಯೇ. ಕಾಮವನ್ನು ಹುಲಿಗೆ ಹೋಲಿಸಿರುವುದು ಗಮನಾರ್ಹವಾಗಿದೆ. ಹುಲಿ ನೆಕ್ಕಿಯೂ ಮನುಷ್ಯ ಬದುಕಿ ಬರುವುದು ಎಷ್ಟು ಆಶ್ಚರ್ಯಕರವೋ ಕಿನ್ನರಯ್ಯ ಮೇಲಿನ ಸಂದರ್ಭದಿಂದ ಪಾರಾಗಿಬಂದುದೂ ಅಷ್ಟೇ ಆಶ್ಚರ್ಯಕರ. 'ಹುಲಿನೆಕ್ಕಿ ಬದುಕು' ಎಂಬ ವಾಗ್ರೂಢಿಯು ಹನ್ನೆರಡನೆಯ ಶತಮಾನದಲ್ಲಿ ಬಳಕೆಯಲ್ಲಿದ್ದುದು ನಯಸೇನನ 'ಧರ್ಮಾಮೃತ'ದಿಂದ ಸಮರ್ಥನೆಗೊಳ್ಳುತ್ತದೆ.[೮] (ಕಿನ್ನರಯ್ಯನ ಈ ಪ್ರಸಂಗವು ಅಕ್ಕಮಹಾದೇವಿಯ ಹಾಡೊಂದರಲ್ಲಿಯೂ ಪ್ರಸ್ತಾಪಗೊಂಡಿದೆ – ನೋಡಿ, ಇದೇ ಸಂಪುಟದ 'ಅಕ್ಕಮಹಾದೇವಿಯ ಒಂದು ಹೊಸ ಹಾಡು ಮತ್ತು ಕಿನ್ನರಯ್ಯ').

ಮಹಾದೇವಿ ಮತ್ತು ಕಿನ್ನರಯ್ಯರು ಭೇಟಿಯಾದ ಪ್ರಸಂಗವು ಒಂದು ಶ್ರೇಷ್ಠ ನಾಟಕಕ್ಕೆ ವಸ್ತುವನ್ನು ಹುದುಗಿಸಿಕೊಂಡಿದೆ.

ಕಿನ್ನರಯ್ಯನನ್ನು ಕಂಡ ಬಳಿಕ ಅವಳು ಬಸವ, ಅಲ್ಲಮ, ಚನ್ನಬಸವ, ಮಡಿವಾಳ ಮಾಚಿದೇವ ಮೊದಲಾದ ಹಲವು ಶರಣರಿದ್ದ ಸಭೆಗೆ ಬರುತ್ತಾಳೆ. ಅವಳ ಬಗ್ಗೆ ಕಲ್ಯಾಣ ನಗರದಲ್ಲಿಯೂ ಶಿವಶರಣರ ವಲಯಗಳಲ್ಲಿಯೂ ಏನೇನೋ ಕತೆಗಳ; ಅವಳ ಬಗ್ಗೆ ಪ್ರಶಂಸೆ, ಕಟಕಿ, ವ್ಯಂಗ್ಯದ ಮಾತುಗಳು ಕೇಳಿಬಂದಿದ್ದವು. ಅವಳ ಭಕ್ತಿಯ ಸಾಚಾತನದ ಬಗ್ಗೆ ಸಂಪೂರ್ಣ ಅರಿವಿದ್ದರೂ ಅವಳ ಊರಿನವನೇ ಆದ ಮತ್ತು ತನ್ನ ಪ್ರಿಯೆ ಕಾಮಲತೆಯ ಸಾವಿನ ಬಳಿಕ ಆ ಪ್ರಣಯವನ್ನು ದೈವಭಕ್ತಿಯಾಗಿ ರೂಪಾಂತರಗೊಳಿಸಲು ಯತ್ನಿಸಿ ಯಶಸ್ವಿಯಾಗಿದ್ದ ಅಲ್ಲಮನೇ ಮುಂದಾಳಾಗಿ ನಿಂತು ತುಂಬಿದ ಸಭೆಯಲ್ಲಿ ಅವಳ ವಿವಾಹ, ಚನ್ನಮಲ್ಲಿಕಾರ್ಜುನನ ಬಗ್ಗೆ ಅವಳಿಗಿರುವ ನಿಷ್ಠೆ, ಅವಳ ದಿಗಂಬರತ್ವ ಇವುಗಳನ್ನು ಕುರಿತಾದ

ಮಾರ್ಮಿಕ ಪ್ರಶ್ನೆಗಳನ್ನು ಹಾಕುತ್ತಾನೆ. ಆ ಪ್ರಶ್ನೆಗಳು ಸಭೆಯ ಜನತೆಗೆ ಅವಳ ಭಕ್ತಿಯ ನಿರ್ಭರತೆಯನ್ನು ಪ್ರಮಾಣ ಮಾಡಿ ತೋರಿಸುವ ಉದ್ದೇಶದವಾಗಿದ್ದವು.

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂತೆ
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂತೆ ನಾನೊಲಿದೆನಯ್ಯ'
ಚೆನ್ನಮಲ್ಲಿಕಾರ್ಜುನ ಗಂಡನೆನಗೆ
ಮಿಕ್ಕಿದ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯ

ಗಂಡನನ್ನು ಬಿಟ್ಟು ಬಂದ ಅವಳ ಮೇಲೆ ಪ್ರಚಾರಗೊಂಡ ಆರೋಪಗಳೇನು ಎಂಬುದರ ಸುಳುಹು ಮೇಲಿನ ವಚನದಲ್ಲಿದೆ. ಅವಳ ಶೀಲದ ಬಗ್ಗೆಯೇ ಹಲವರಿಗೆ ಸಂಶಯ ಬಂದಿರಲೂಬಹುದು. ಅಲ್ಲಮನ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಮಹಾದೇವಿ ಕೊಟ್ಟು ತನ್ನದು ದೈವದ ಬಗ್ಗೆ ನಿಜವಾದ ನಿರ್ಭರ ಭಕ್ತಿ ಎಂಬುದನ್ನು ರುಜುವಾತು ಮಾಡಿ ತೋರಿಸುತ್ತಾಳೆ. ಎಲ್ಲರೂ ಅವಳ ಮಾತನ್ನು ಒಪ್ಪಿಕೊಳ್ಳುತ್ತಾರೆ – ಅಲ್ಲಮನಂತೂ ಹೊಸದಾಗಿ ಒಪ್ಪಿಕೊಳ್ಳುವ ಅಗತ್ಯವಿರಲಿಲ್ಲ.

ಕಲ್ಯಾಣದಲ್ಲಿ ಬಹುಕಾಲದ ಬಳಿಕ ಬಸವ ಮತ್ತು ಇತರ ಶರಣ ಶರಣೆಯರ ಆರೈಕೆಯಲ್ಲಿ ಅವಳು ಬಹುವಾದ ಶಾಂತಿ ಸಮಾಧಾನಗಳನ್ನು ಅನುಭವಿಸಿದಳು. ದೇಹಕ್ಕೂ ಮನಸ್ಸಿಗೂ ವಿಶ್ರಾಂತಿ ದೊರಕಿತ್ತು. ಅವಳು ಏರಿದ್ದ ಆಧ್ಯಾತ್ಮಿಕ ಔನ್ನತ್ಯದ ಬಗ್ಗೆ ಎಲ್ಲರಿಗೂ ಗೌರವ. ಕೊನೆಗೊಂದು ದಿನ ಅವಳು ಕಲ್ಯಾಣದಿಂದ ಶ್ರೀ ಶೈಲಕ್ಕೆ ಹೊರಡುವ ಕಾಲ ಬಂದಿತು. ಶರಣರೆಲ್ಲ ಸೇರಿ ಅವಳಿಗೆ ಚೆನ್ನಮಲ್ಲಿಕಾರ್ಜುನನ ಜೊತೆ ವಿದ್ಯುಕ್ತವಾಗಿ ಸಾಂಕೇತಿಕ ಮದುವೆಯನ್ನು ಮಾಡಿ, ಮಗಳನ್ನು ತವರುಮನೆಯಿಂದ ಗಂಡನ ಮನೆಗೆ ಕಳಿಸುವ ರೀತಿಯಲ್ಲಿ ದುಃಖದಿಂದ ಕಳಿಸಿಕೊಟ್ಟಂತೆ ಊಹಿಸಲೂ ಅವಕಾಶಗಳಿವೆ. ಕೆಳಗಿನ ವಚನ ಈ ಹಿನ್ನೆಲೆಯಲ್ಲಿ ಗಮನಾರ್ಹ :

ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ;
ಬೆಳೆದೆನು ಅಲ್ಪಸಂಖ್ಯಾತರ ಕರುಣದೊಳಗೆ,
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ
ಪರಮಾರ್ಥವೆಂಬ ಸಕ್ಕರೆಯನಿಕ್ಕಿದರು ನೋಡಾ
ಇಂತಪ್ಪ ತ್ರಿವಿಧಾಮೃತವನು ದಣಿಯಲೆರೆದು ಸಲಹಿದರೆನ್ನ
ವಿವಾಹವ ಮಾಡಿದಿರಿ, ಸಯವಪ್ಪ ಗಂಡಂಗೆ ಕೊಟ್ಟಿರಿ.
ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರೆಲ್ಲರೂ ನೆರೆದು ಬಂದಿರಿ.
ಬಸವಣ್ಣ ಮೆಚ್ಚಲು ಒಗೆತನವ ಮಾಡುವೆ
ಚೆನ್ನಮಲ್ಲಿಕಾರ್ಜುನನ ಕೈವಿಡಿದು
ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು
ಅವಧರಿಸಿ ನಿಮ್ಮಡಿಗಳೆಲ್ಲರೂ ಮರಳಿ ಬಿಜಯಂಗೈವುದು ಶರಣಾರ್ಥಿ.

ಕಲ್ಯಾಣದಿಂದ ಅವಳು ಶ್ರೀಶೈಲಕ್ಕೆ ಹೋದಾಗ ಅವಳನ್ನು ಏನಾದರೂ ಮಾಡಿ ಮತ್ತೆ ಪಡೆಯಬೇಕೆಂಬ ಆಸೆಯಿಂದ ಕಸಪಯ್ಯ ನಾಯಕನು ಕಳ್ಳ ಸನ್ಯಾಸಿಯ ವೇಷದಲ್ಲಿ ಬಂದು ಅಲ್ಲಿಯ ಕಲ್ಲುಮಠದ ಹುಲ್ಲುಮಠದ ಸ್ವಾಮಿಗಳಿಗೆ ಲಂಚ ಕೊಟ್ಟು ಅವಳ ಮೇಲೆ ಪ್ರಭಾವ

ಬೀರಲು ಯತ್ನಿಸುತ್ತಾನೆ. ಅವನು ಆ ಯತ್ನದಲ್ಲಿ ವಿಫಲನೂ ಆಗುತ್ತಾನೆ. (ಶ್ರೀ ಶೈಲದಲ್ಲಿ ಹುಲ್ಲುಮಠವಿದ್ದುದಕ್ಕೆ ಶಾಸನಾಧಾರವಿದೆ)[೯] ಮಹಾದೇವಿ ತನ್ನ ಹಲವು ವಚನಗಳಲ್ಲಿ ಶ್ರೀಶೈಲದಲ್ಲಿ ತನಗಾದ ಅನುಭವಗಳನ್ನು ಹೇಳಿಕೊಂಡಿದ್ದಾಳೆ. (ನೋಡಿ – "ಚಿಲಿಮಿಲಿ ಎಂದೋದುವ ಗಿಳಿಗಳಿರಾ, ನೀವು ಕಾಣಿರೇ ನೀವು ಕಾಣಿರೇ...") ಅಲ್ಲಿನ ಕಾಡೆಲ್ಲಾ ಕಲ್ಪತರುವಾಗಿ ಗಿಡವೆಲ್ಲ ಮರುಜೇವಣಿ ಕಡ್ಡಿಯಾಗಿ ನೀರೆಲ್ಲ ಅಮೃತವಾಗಿ ಕಲ್ಲೆಲ್ಲ ಸ್ಪರ್ಶ ಶಿಲೆಯಾಗಿ ಕಾಣಿಸಿತು. ಅವಳಿಗೆ ಶ್ರೀಶೈಲದಲ್ಲಿ ಎಲ್ಲೆಲ್ಲೂ ಚೆನ್ನಮಲ್ಲಿಕಾರ್ಜುನನೇ ಕಾಣಿಸುತ್ತಿದ್ದ.

ವನವೆಲ್ಲಾ ನೀನೇ, ವನದೊಳಗಣ ದೇವತರುವೆಲ್ಲಾ ನೀನೇ
ತರುವಿನೊಳಗಾಡುವ ಖಗಮೃಗವೆಲ್ಲ ನೀನೇ
ಚೆನ್ನಮಲ್ಲಿಕಾರ್ಜುನ ಸರ್ವಭರಿತನಾಗಿ ಎನಗೇಕೆ ಮುಖದೋರೆ ?

ಮಹಾದೇವಿ ಶ್ರೀ ಶೈಲದಲ್ಲಿ ಚನ್ನಮಲ್ಲಿಕಾರ್ಜುನ ದೇವಾಲಯದಲ್ಲಿ ದರ್ಶನವನ್ನು ಮಾಡಿದ್ದಕ್ಕೆ ಆ ದೇವಾಲಯದ ಪ್ರಾಕಾರದ ಒಂದು ಶಿಲ್ಪ ಸಾಕ್ಷಿಯಾಗಿದೆ. ಸಂಪೂರ್ಣ ನಗ್ನಳಾದ ಹೆಣ್ಣೊಬ್ಬಳು ಬರುತ್ತಿದ್ದಾಳೆ; ಶಿವಲಿಂಗದಿಂದ ಕೈಯೊಂದು ಮೇಲೆದ್ದು ಅಭಯವನ್ನು ನೀಡುತ್ತಿದೆ; ಈ ಚಿತ್ರ[೧೦] ಮಹಾದೇವಿಯಕ್ಕನದೆಂಬಲ್ಲಿ ಅನುಮಾನವಿಲ್ಲ. ಅವಳು ತನ್ನ ಕೊನೆಯ ದಿನಗಳನ್ನು ಶ್ರೀಶೈಲದ ಕದಳಿವನದಲ್ಲಿ ಕಳೆಯುತ್ತಾಳೆ ("ಚನ್ನಮಲ್ಲಿಕಾರ್ಜುನಯ್ಯನ ನಚ್ಚಿನ ಗಿರಿಯ ಸುತ್ತಿ ನೋಡುತ್ತ ಬಂದು ಕದಳಿಯ ಬನವ ಕಂಡೆ ನಾನು") ಕದಳಿಗೆ ಹೋಗಲು ಮಹಾದೇವಿಗೆ ಕಲ್ಯಾಣದಲ್ಲಿ ಅಲ್ಲಮನಿಂದಲೇ ಸೂಚನೆ ಬಂದಿತ್ತು. 'ಕದಳಿ'ಯು ನಾಥ ಸಂಪ್ರದಾಯದಲ್ಲಿ ಯೌಗಿಕ ಅರ್ಥಗಳನ್ನು ಪಡೆದುಕೊಂಡಿರುವ ಶಬ್ದ. ಅದು ದೇಹಕ್ಕೆ, ಆತ್ಮಕ್ಕೆ, ಯೋಗಸಾಧನೆಗೆ ಸಂಕೇತ. ಶ್ರೀಶೈಲದ ದುರ್ಗಮ ಕಣಿವೆಯೊಂದರ ಗುಹೆಗಳ ಪ್ರದೇಶವು ಯೋಗಿಗಳ ಸಾಧಕರ ಅನುಸಂಧಾನಕ್ಕೆ ಪ್ರಶಸ್ತ ಜಾಗವಾಗಿದ್ದು ಅಲ್ಲಿ 'ಕದಳಿ' ಹೆಸರಿಗೆ ಅನ್ವರ್ಥವಾಗಿ ಸಾವಿರಾರು ಬಾಳೆಯ ಗಿಡಗಳನ್ನು ಜನರು ಬೆಳಸಿದ್ದರು (ಅಥವಾ ತಾವೇ ಯಥೇಚ್ಛವಾಗಿ ಬಾಳೆಯ ಗಿಡಗಳು ಬೆಳೆದು ಯೋಗಿಗಳು ಅದನ್ನು ತಮ್ಮ ಸಾಧನೆಗೆ ಆರಿಸಿಕೊಂಡಿರಲೂಬಹುದು. ಮುಂದೆ ಅಲ್ಲಮನೂ ಅದೇ ಕದಳಿಗೆ ಹೋಗಿ ಕೊನೆಯ ದಿನಗಳನ್ನು ಕಳೆದ). ಈಗಲೂ ಶ್ರೀಶೈಲಕ್ಕೆ ಹೋದವರು ದುರ್ಗಮವಾದ ಕದಳಿ ವನವನ್ನೂ ವಿಶಾಲವಾದ ಗುಹೆಯನ್ನೂ ನೋಡಿಕೊಂಡು ಬರುತ್ತಾರೆ. ಅಲ್ಲೇ ಮಹಾದೇವಿ ತನ್ನ ಬದುಕಿನ ಸಾರ್ಥಕ್ಯವನ್ನು ಕಂಡದ್ದು. ಭಗವದ್ದರ್ಶನ ಅಲ್ಲಿ ಅವಳಿಗೆ ಆಯಿತು ("ಕದಳಿಯ ಬನದಲ್ಲಿ ಭವಹರನ ಕಂಡೆನು. ಭವ ಗೆದ್ದು ಬಂದ ಮಗಳೆ ಎಂದು ಕರುಣದಿಂ ತೆಗೆದು ಬಿಗಿಯಪ್ಪಿದಡೆ ಚನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು") ದೈವಸಾಕ್ಷಾತ್ಕಾರವನ್ನು ಪಡೆದ ಆಕೆ ಅಲ್ಲೇ ತನ್ನ ಕೊನೆಯುಸಿರೆಳೆದಳು.[೧೧]

ಕ್ರಿ.ಶ. ೧೧೬೫ರಲ್ಲಿ ಕಸಪಯ್ಯನು ತನ್ನ ಅಧಿಕಾರವನ್ನು ಕಳೆದುಕೊಂಡಂತೆ ತೋರುತ್ತದೆ. ಅವನ ಅಧಿಕಾರಾವಧಿ ಕ್ರಿ.ಶ. ೧೧೫೮–೬೫ ಎಂದು ಶಾಸನಗಳಿಂದ ತಿಳಿದುಬರುವು ದರಿಂದ ಅವನು ಸುಮಾರು ಕ್ರಿ. ಶ. ೧೧೬೧–೬೨ರ ಅವಧಿಯಲ್ಲಿ ಮಹಾದೇವಿಯನ್ನು ಒತ್ತಾಯದಿಂದ ಕೈ ಹಿಡಿದಿರಬಹುದು. ಮದುವೆಯ ಕಾಲಕ್ಕೆ ಅವಳಿಗೆ ವಯಸ್ಸು ಹದಿನಾರು ಅಥವಾ ಹದಿನೆಂಟು ಎಂದು ಭಾವಿಸಿದರೆ ಅವಳ ಜನನ ಸುಮಾರು ಕ್ರಿ. ಶ. ೧೧೪೪–೪೫ ಎಂದು ಊಹಿಸಬಹುದು. ಅವಳು ಶ್ರೀಶೈಲಕ್ಕೆ ಬಂದಾಗ ಅವಳಿನ್ನೂ ರೂಪವತಿಯಾಗಿದ್ದಳೆಂಬ

ಕಾರಣಕ್ಕಾಗಿ ಕಸಪಯ್ಯ ನಾಯಕ ಅವಳನ್ನು ಹಿಂಬಾಲಿಸಿಕೊಂಡು ಅಲ್ಲಿಗೂ ಬರುತ್ತಾನೆ. ಆಗ ಅವಳಿಗೆ ೨೫ ವರ್ಷ ವಯಸ್ಸಾಗಿತ್ತು ಎಂದು ಭಾವಿಸುವುದಾದರೆ ಆ ಘಟನೆ ನಡೆದುದು ಸುಮಾರು ಕ್ರಿ.ಶ. ೧೧೭೦ರಲ್ಲಿ. ಕ್ರಿ.ಶ. ೧೧೬೫ರಲ್ಲಿ ಪದವಿಯಿಂದ ಚ್ಯುತನಾದ ಕಸಪಯ್ಯ ನಾಯಕನು ಕ್ರಿ. ಶ. ೧೧೭೨ರಲ್ಲಿ ರಾಜದ್ರೋಹದ ಆಪಾದನೆಯನ್ನು ಹೊತ್ತು ಹತನಾದಂತೆ ಕಾಣುತ್ತದೆ. ಅಕ್ಕಮಹಾದೇವಿ ಸುಮಾರು ೧೧೭೦ರಿಂದ ಈಚೆ ಕೆಲವು ವರ್ಷ ಬದುಕಿ ಅಲ್ಲೇ ಕೊನೆಯುಸಿರೆಳೆದಳೆಂದು ತೋರುತ್ತದೆ. ತೇದಿ ಬೇಕು ಎಂದು ಬಯಸುವವರಿಗಾಗಿ ಮಾತ್ರ ಈ ಊಹೆಯ ತೇದಿಗಳು ಮತ್ತು ಇವು ನಿಜವಾದ ತೇದಿಗಳಿಗಿಂತ ಬಹುದೂರದವೇನೂ ಆಗಿರಲಾರವು.

ಇಷ್ಟು ಸದ್ಯಕ್ಕೆ ಮಹಾದೇವಿಯಕ್ಕನ ಬದುಕಿನ ವಿಶ್ವಾಸಾರ್ಹವಾದ ಐತಿಹಾಸಿಕ ಪುನಾರಚನೆ, ತುಂಬಬೇಕಾದ ಜಾಗಗಳು, ಬಿಡಿಸಬೇಕಾದ ಸಮಸ್ಯೆಗಳು, ಕೇಳಬೇಕಾದ ಪ್ರಶ್ನೆಗಳು ಈ ಪುನಾರಚನೆಯಲ್ಲಿವೆ ಎಂಬ ಬಗ್ಗೆ ಅನುಮಾನವಿಲ್ಲ.

---

೧. ಶಿ. ಶಿ. ಬಸವನಾಳ (ಸಂ) ಪ್ರಭುಲಿಂಗಲೀಲೆ, ಧಾರವಾಡ – ೧೯೫೬, ಪ್ರಸ್ತಾವನೆ ಪು. ೯

2. Karnatak Inscriptions. VI. Ed : B. R. Gopal, No. 48

೩. ಈಗ 'ಭ್ರಮರಾಂಭೆ' ಎಂಬ ಹೆಸರಿದೆ.

೪. ವಿವರಗಳಿಗೆ ನೋಡಿ, ಎಂ. ಚಿದಾನಂದ ಮೂರ್ತಿ : "ಮಹಾದೇವಿಯಕ್ಕನ ಹೆಸರಿನ ಬಗ್ಗೆ ಒಂದು ಸಾಧಾರ ಕಲ್ಪನೆ' (ಇದೇ ಸಂಪುಟದಲ್ಲಿನ ಲೇಖನ)

೫. ನೋಡಿ – 'ಅಕ್ಕಮಹಾದೇವಿಯ ಗಂಡ ಕೌಶಿಕನನ್ನು ಇತಿಹಾಸದಲ್ಲಿ ಗುರುತಿಸುವ ಒಂದು ಪ್ರಯತ್ನ' (ಇದೇ ಸಂಪುಟ)

೬. 'ಅಯ್ಯಾ, ನಿಮ್ಮ ಶರಣರ ಬರವಿಂಗೆ ಗುಡಿ ತೋರಣವ ಕಟ್ಟುವೆ; ಅಯ್ಯಾ, ನಿಮ್ಮ ಶರಣರ ಬರವಿಂತೆ ಮುಡುಹಿನಲ್ಲಿ ಪಟ್ಟವ ಕಟ್ಟುವೆ; ಅಯ್ಯಾ, ನಿಮ್ಮ ಶರಣರೆನ್ನ ಮನೆಗೆ ಬಂದಡೆ ಅವರ್ಥ ಶ್ರೀ ಪಾದವನೆನ್ನ ಹೃದಯದಲ್ಲಿ ಬಗಿದಿಟ್ಟುಕೊಂಬೆ ಕಾಣಾ ಚನ್ನಮಲ್ಲಿಕಾರ್ಜುನಾ"; "ಇಂದೆನ್ನ ಮನೆಗೆ ಒಡೆಯರು ಬಂದರೆ ಹರುಷದೊಡನೆ ನೋಡುವೆ, ಆನಂದದೊಡನೆ ಕುಣಿ ಕುಣಿದಾಡುವೆ, ಪರವಶದೊಡನೆ ಹಾಡುವೆ... ನಿಮ್ಮ ನಿಲುವ ತೋರಿದ ಗುರುವಿನಡಿಯಲ್ಲಿ ಅರಗಾಗಿ ಕರಗುವೆ"

೭. (ಸಂ) ಎಚ್. ದೇವೀರಪ್ಪ : ಉಡುತಡಿಯ ಮಹಾದೇವಿಯರ ರಗಳೆ, ಶಿವಕುಮಾರ ಪ್ರಕಾಶನ, ಬೆಂಗಳೂರು. ಪೀಠಿಕೆ ಪು. xxxvi

೮. ವಿವರಗಳಿಗೆ ನೋಡಿ – ಎಂ. ಚಿದಾನಂದಮೂರ್ತಿ : ಶೂನ್ಯಸಂಪಾದನೆಯನ್ನು ಕುರಿತು, ಮೈಸೂರು ೧೯೬೨. ಪು. ೯೪–೭. ಇಡೀ ಪ್ರಸಂಗ ಮಹಾದೇವಿಯ ಸಂಯಮದ ಸಂಕೇತ ಮಾತ್ರ; ಸ್ವಲ್ಪ ಉತ್ಪ್ರೇಕ್ಷಿತವಾಗಿ ಚಿತ್ರಣಗೊಂಡಿದೆ ಅಷ್ಟೇ.

೯. ಈ ಸಂಪುಟದ ಪು. ೨೬೬ ನೋಡಿ.

೧೦. ಬಿ.ಸಿ. ಜವಳಿಯವರ 'ಮಹಾದೇವಿಯಕ್ಕನವರ ಸಾಹಿತ್ಯ' ಕೃತಿಯ ಆರಂಭದಲ್ಲಿ ಈ ಚಿತ್ರ ಪ್ರಕಟವಾಗಿದೆ.

೧೧. ಶ್ರೀ ಶೈಲದ ಕದಳಿವನದ ಗುಹೆಯಲ್ಲಿ ಶಿಲ್ಪಗಳಿರುವುದು ಅದು ಯೋಗಿಗಳ ಸಾಧನ ಭೂಮಿಯಾಗಿತ್ತೆಂಬುದನ್ನು ದೃಢಪಡಿಸುತ್ತದೆ.

III. ಅಕ್ಕಮಹಾದೇವಿಯ (?)ಒಂದು ಹೊಸ ಹಾಡು ಮತ್ತು ಕಿನ್ನರಯ್ಯ

ಮಹಾದೇವಿಯಕ್ಕನು ಕೌಶಿಕನ[೧] ವೈವಾಹಿಕ ಸಂಬಂಧವನ್ನು ಕಡಿದುಕೊಂಡು ಕಲ್ಯಾಣಕ್ಕೆ ಬಂದು ಅಲ್ಲಿ ತುಂಬಿದ ಸಭೆಯಲ್ಲಿ ಶರಣರಿಂದ ಪರೀಕ್ಷಿತಳಾದ ಪ್ರಸಂಗವು 'ಶೂನ್ಯ ಸಂಪಾದನೆ'ಯ ನಾಲ್ಕು ಪಾಠಗಳಲ್ಲೂ ದೊರಕುತ್ತದೆ. 'ದಿಗಂಬರೆ' (ವಿರಳ ವಸ್ತ್ರಧಾರೆ)ಯಾಗಿ ಹೊರಟ ಆ ವಿರಕ್ತ ಸುಂದರ ತರುಣಿಗೆ ಹಲವರು ಮಾರುಹೋಗಿದ್ದಿರಬೇಕು, ಅನೇಕರು ಹುಚ್ಚಿ ಎಂದು ಕುತ್ಸಿತದ ಮಾತನಾಡಿರಬೇಕು, ಸಾಕಷ್ಟು ಹಿಂಸೆಯನ್ನೂ ಕೊಟ್ಟಿರಬೇಕು ಎಂಬುದು ಅವಳ ಅನೇಕ ವಚನಗಳಿಂದಲೇ ಧ್ವನಿತವಾಗುತ್ತದೆ. ಅವಳು ಅನುಭವಿಸಿದ ದೈಹಿಕ ಮತ್ತು ಮಾನಸಿಕ ಯಾತನೆಯ ಬಗ್ಗೆ ಹೆಚ್ಚಿನ ವಿವರಗಳು ಎಲ್ಲಿಯೂ ದೊರಕುವುದಿಲ್ಲ. ಆ ಎಲ್ಲ ಯಾತನೆಯು ನಿರೀಕ್ಷಿತವೇ ಆದ್ದರಿಂದ ಅದೆಲ್ಲವನ್ನೂ ತನ್ನ ಭಗವಂತ ನಲ್ಲನಿಗಾಗಿ ಸಹಿಸಿಕೊಂಡಳು. ಕೌಶಿಕನ ಅರಮನೆಯನ್ನು ತ್ಯಜಿಸಿ ಕಲ್ಯಾಣ ಸೇರುವ ಮುನ್ನ ಕಲ್ಯಾಣದ ಹೊರವಲಯದಲ್ಲಿ ನಡೆದ ಘಟನೆಗಳಲ್ಲಿ ಒಂದನ್ನು ಮಾತ್ರ 'ಶೂನ್ಯ ಸಂಪಾದನೆ'ಗಳು[೨] ವಿವರವಾಗಿ ಬಣ್ಣಿಸಿವೆ; ಅದೇ ಕಿನ್ನರಯ್ಯ ಅಥವಾ ಕಿನ್ನರಿ ಬೊಮ್ಮಯ್ಯನ ಪ್ರಸಂಗ.

ಅಕ್ಕಮಹಾದೇವಿ ಕಲ್ಯಾಣಕ್ಕೆ ಬರುತ್ತಿರುವಾಗ ಆ ಪಟ್ಟಣದ ಹೊರ ವಲಯದಲ್ಲಿ ಕಿನ್ನರಯ್ಯನನ್ನು ಸಂಧಿಸುತ್ತಾಳೆ. ಕಿನ್ನರಯ್ಯ ಅಲ್ಲಿಗೆ 'ಲೀಲಾವಿನೋದ'ಕ್ಕಾಗಿ ಬಂದಿದ್ದನೆಂದು ಎರಡನೆಯ ಶೂನ್ಯ ಸಂಪಾದನೆ ಹೇಳಿದರೆ, ಅವಳನ್ನು ಸ್ವಾಗತಿಸಲು ಕರೆತರಲು ಅಲ್ಲಮ ಮೊದಲಾದವರು ಅವನನ್ನು ಕಳುಹಿಸಿದ್ದರೆಂದು ಮೂರು ಮತ್ತು ನಾಲ್ಕನೆಯ ಶೂನ್ಯ ಸಂಪಾದನೆಗಳು ತಿಳಿಸುತ್ತವೆ. ಅದೇನೇ ಆಗಿರಲಿ 'ಲೌಕಿಕ ಲಜ್ಜಾಭಿಮಾನವನ್ನು' ತೊರೆದು ದೈವದಲ್ಲಿ ನಟ್ಟ ಮನಸ್ಸುಳ್ಳವನಾಗಿ ಬಂದ ಮಹಾದೇವಿಯಕ್ಕನನ್ನು ಸಂಧಿಸಿದ ಕಿನ್ನರಯ್ಯ ಅವಳ ಚೆಲುವಿಗೆ ಮಾರುಹೋಗಿ ಅವಳ ಕೈ ಹಿಡಿಯಲು ಬಯಸಿದನೆಂದೂ ಅವಳು ತಾನು 'ಅಂತರಂಗದ ಜ್ಞಾನಾಗ್ನಿ'ಯಿಂದ ಕಾಮನನ್ನು ಸುಟ್ಟು ಭಸ್ಮ ಮಾಡಿರುವುದನ್ನು ತೋರಿಸಿದಳೆಂದೂ ಮೊದಲ ಶೂನ್ಯ ಸಂಪಾದನೆಯಲ್ಲಿದೆ. ಎರಡನೆಯ ಶೂನ್ಯ ಸಂಪಾದನೆ ಆ ಪ್ರಸಂಗವನ್ನು ಸಾಕಷ್ಟು ವಿಸ್ತಾರವಾಗಿ ನಿರೂಪಿಸುತ್ತದೆ. ಕಿನ್ನರಿ ಬೊಮ್ಮಯ್ಯ ಅವಳ 'ದಿವ್ಯ ರೂಪಿನ ಲಾವಣ್ಯ'ವನ್ನು ಕಂಡು 'ಲಿಂಗಾನುಭವ ಸಂಪನ್ನೆಯಾದರೆ ಗುರು ತಾಯೆಂದೇ ಶರಣೆಂಬೆನು, ಅಲ್ಲಾ, ದೇಹ ಲಜ್ಜಾಭಿಮಾನ ಉಳ್ಳಡೆ ಸ್ತ್ರೀಯಾಗಿ ಕೈವಿಡಿವೆನು" ಎಂದು ಮನಸ್ಸಿನಲ್ಲಿ ಅಂದುಕೊಂಡು ಅವಳನ್ನು ಪರೀಕ್ಷಿಸುತ್ತಾನೆ. ಅವರಿಬ್ಬರಿಗೆ ನಡೆಯುವ ಸಂಭಾಷಣೆಯಲ್ಲಿ ಕಿನ್ನರಯ್ಯನ ಕಾತರ, ಅವನ ಆಸಕ್ತಿಯ ಬಗ್ಗೆ ಮಹಾದೇವಿಯ ಔದಾಸೀನ್ಯ ಮತ್ತು ಅವನು ಮುಂದುವರಿದು ದುಡುಕಿದರೂ ಅವನ ಬಗ್ಗೆ ತೋರಿದ ದೊಡ್ಡತನದ ಕ್ಷಮೆ – ಒಟ್ಟಿನಲ್ಲಿ ಅವಳ ಔನ್ನತ್ಯ ಎದ್ದುಕಾಣುತ್ತದೆ. ಅವನ ದುಡುಕು ಅವಳಿಗೆ ತಮಾಷೆಯಾಗಿ ಕಂಡಿದ್ದರೂ ಆಶ್ಚರ್ಯವಿಲ್ಲ. ಏಕೆಂದರೆ, ಅವಳಿಗೆ ದೇಹಸುಖ ಬೇಕಾಗಿದ್ದರೆ ಅವಳು ಕೌಶಿಕನ ಅರಮನೆಯಲ್ಲಿ ರಾಣಿಯಂತೆ ಮೆರೆಯಬಹುದಿತ್ತು. ಚೆನ್ನಮಲ್ಲಿಕಾರ್ಜುನನೇ ತನ್ನ ಪತಿಯೆಂದು ನಂಬಿ ಕೈಹಿಡಿದ ಗಂಡನನ್ನು ಬಿಟ್ಟುಬರುತ್ತಿರಲಿಲ್ಲ.[೩] ಅವಳು ದೇಹಾಭಿಮಾನವನ್ನು ಪೂರ್ತಿಯಾಗಿ ಗೆದ್ದುದು ಕಿನ್ನರಯ್ಯನ ಅರಿವಿಗೆ ಬಂದಿತು. ಆಗ ಅವನು ಪಶ್ಚಾತ್ತಾಪದಿಂದ ತನ್ನನ್ನು ಕ್ಷಮಿಸುವಂತೆ ಅವಳನ್ನು ಬೇಡಿಕೊಳ್ಳುತ್ತಾನೆ. ಅವಳು ಕಾಮನ ಬಾಣಕ್ಕೆ ಅವನಂತಹ

ವ್ಯಕ್ತಿಯೂ ಒಳಗಾದುದರಲ್ಲಿ ಆಶ್ಚರ್ಯವಿಲ್ಲವೆಂದು ಹೇಳಿ ಅವನನ್ನು ಮನಸಾರೆ ಕ್ಷಮಿಸುತ್ತಾಳೆ. ಅವಳ ಕ್ಷಮೆಯ ಮಾತಿನಲ್ಲಿ ಬರುವ 'ಅಣ್ಣಾ' ಎಂಬ ಸಂಬೋಧನೆ ಅತ್ಯಂತ ಹೃದಯ ಸ್ಪರ್ಶಿಯಾಗಿದೆ. ಕಿನ್ನರಯ್ಯ ಅವಳನ್ನು 'ಎಮ್ಮವ್ವೆ' ಎಂದು ಕರೆದು, "ನಿಮ್ಮ ದಯದಿಂದ ನಾನು ಹುಲಿನೆಕ್ಕಿ ಬದುಕಿದೆನು" ಎಂಬ ಉದ್ಗಾರದ ಮೂಲಕ ಆ ಅಗ್ನಿದಿವ್ಯದಿಂದ ಪಾರದ ತನ್ನ ಸ್ಥಿತಿಗೆ ಅಭಿವ್ಯಕ್ತಿ ನೀಡುತ್ತಾನೆ. ಹುಲಿಯು ನೆಕ್ಕಿದ ಮನುಷ್ಯ ಬದುಕುವುದು ಹೇಗೆ ಅತಿ ವಿರಳವೋ ಅಂತೆಯೇ ಅ ವಿಷಮ ಸನ್ನಿವೇಶದಿಂದ ತಾನು ಉಳಿದುಬಂದುದು ಕೇವಲ ಆಕಸ್ಮಿಕವೆಂದೂ ಅದು ಸಾಧ್ಯವಾದುದು ಅಕ್ಕಮಹಾದೇವಿಯ ಕೃಪೆಯಿಂದ ಎಂದೂ ಕೊಂಡಾಡುತ್ತಾನೆ. (ಕಾಮದ ಆಕರ್ಷಣೆಗೆ ಒಳಗಾಗುವುದೂ ಹುಲಿಯ ಬಾಯಿಗೆ ಸಿಗುವುದೂ ಒಂದೇ). ದಾರಿ ತಪ್ಪಿದಲ್ಲಿ ಕಿನ್ನರಯ್ಯನನ್ನು ಸರಿಯಾದ ದಾರಿಗೆ ತಂದ ಮಹಾದೇವಿ ಕಲ್ಯಾಣಕ್ಕೆ ಬರುತ್ತಾಳೆ.

ಮೇಲಿನದು ಎರಡನೆಯ ಶೂನ್ಯ ಸಂಪಾದನೆಯ ಚಿತ್ರಣ. ಮೂರನೆಯ ನಾಲ್ಕನೆಯ ಶೂನ್ಯ ಸಂಪಾದನೆಗಳು ಈ ಪ್ರಸಂಗವನ್ನು ತೇಲಿಸಿ ಚಿತ್ರಿಸಿವೆಯಾದರೂ ಅಲ್ಲಿಯೂ ಒಟ್ಟು ಧ್ವನಿ ಸ್ಪಷ್ಟವಾಗಿದೆ; ಕಿನ್ನರಯ್ಯ ಒಂದು ಕ್ಷಣಕ್ಕಾದರೂ ವಿವಶನಾದ, ಮಹಾದೇವಿ ಅವನನ್ನು ಉದ್ಧರಿಸಿದಳು.[೪]

ಮಹಾದೇವಿಯಕ್ಕನ ಬಗ್ಗೆ ನಮಗೆ ದೊರಕುವ ಪ್ರಾಚೀನ ಕತೆಯೆಂದರೆ ಹರಿಹರನ 'ಮಹಾದೇವಿಯಕ್ಕನ ರಗಳೆ'ಯದು. ಅಲ್ಲಿ ಅವಳು ಕಲ್ಯಾಣಕ್ಕೆ ಹೋದುದನ್ನು ಚಿತ್ರಿಸುವುದನ್ನೇ ಕವಿ ಕೈಬಿಟ್ಟಿದ್ದರೂ ಶ್ರೀಶೈಲದಲ್ಲಿ ಅವಳನ್ನು ಕಿನ್ನರಯ್ಯ ಬಂದು ಭೇಟಿ ಮಾಡಿದ್ದನೆಂಬ ಒಂದು ಮಾತಿದೆ. ಶೂನ್ಯ ಸಂಪಾದನೆಗಳಲ್ಲಿ ಇಡೀ ಪ್ರಸಂಗ ಚಿತ್ರಿತವಾಗಿರುವ ರೀತಿಯನ್ನು ನೋಡಿದರೆ ಮತ್ತು ಮುಂದೆ ಬಂದ ಚನ್ನಬಸವಾಂಕ ತನ್ನ 'ಮಹಾದೇವಿಯಕ್ಕನ ಪುರಾಣ'ದಲ್ಲಿ ಇದೇ ಪ್ರಸಂಗವನ್ನು ಚಿತ್ರಿಸಿರುವುದನ್ನು ಗಮನಿಸಿದರೆ, ಮೇಲಿನ ಘಟನೆಯಂತಹುದೊಂದು ವಾಸ್ತವವಾಗಿ ನಡೆದಿರುವುದು ಅಸಂಭವವೇನೂ ಅಲ್ಲ.

ಈ ಪ್ರಸಂಗದಲ್ಲಿ ಅಕ್ಕಮಹಾದೇವಿ ಜೀವನದುದ್ದಕ್ಕು ಎದುರಿಸಿಕೊಂಡೇ ಬಂದಿದ್ದ ತೊಂದರೆಗಳ ಸರಣಿಯಲ್ಲಿ ಇನ್ನೊಂದು ತೊಂದರೆಯನ್ನು ಎದುರಿಸಿದಂತಾಯಿತು; ಅವಳ ದೃಷ್ಟಿಯಿಂದ ಅಂತಹ ಪ್ರಕರಣ ಹೊಸ ಅನುಭವವೇನೂ ಅಲ್ಲ ಮತ್ತು ಅದನ್ನು ಸುಲಭವಾಗಿ ಗೆಲ್ಲಬಲ್ಲ ಚಿತ್ತಸ್ಥೈರ್ಯ ಅವಳಲ್ಲಿತ್ತು. ಆದರೆ ಕಿನ್ನರಯ್ಯನ ದೃಷ್ಟಿಯಲ್ಲಿ ಅದೊಂದು ಅತ್ಯಂತ ಉತ್ಕಟ, ಗಂಭೀರ ಸನ್ನಿವೇಶ; ಅದು ಅವನು ನೈತಿಕವಾಗಿ ಸತ್ತು ಬದುಕಿದ ಸನ್ನಿವೇಶ. ('ಹುಲಿ ನೆಕ್ಕಿ ಬದುಕಿದೆನು' ಎಂಬ ಆ ಕಾಲದ ಜನೋಕ್ತಿ ಅವನ ಬಾಯಲ್ಲಿ ಬರುವುದು ಎಷ್ಟು ಧ್ವನಿ ಪೂರ್ಣ!) ಈ ಇಡೀ ಸನ್ನಿವೇಶ ಮನುಷ್ಯನ ಸಹಜ ದೌರ್ಬಲ್ಯವನ್ನು ಪರಿಣಾಮ ಕಾರಿಯಾಗಿ ಚಿತ್ರಿಸುವುದಲ್ಲದೆ ಆ ದೌರ್ಬಲ್ಯ ಕಾಣಿಸಿಕೊಂಡ ಕಿನ್ನರಯ್ಯನನ್ನು ಹೆಚ್ಚು ಮಾನವೀಯವಾಗಿ ಮಾಡಿ ಅವನನ್ನು ನಮ್ಮ ಹತ್ತಿರಕ್ಕೆ ತರುತ್ತದೆ. ಆ ದೌರ್ಬಲ್ಯವನ್ನು ಗೆದ್ದುದು ಅವನ ಹಿರಿತನ. ಅವನಿಗೆ ಅದರಲ್ಲಿ ಸಹಾಯಕಳಾದ ಅಕ್ಕಮಹಾದೇವಿಯ ಹಿರಿಮೆ ಇನ್ನೂ ಮೇಲ್ಮಟ್ಟದ್ದು. ಈ ಸನ್ನಿವೇಶ ಮನುಷ್ಯನ ದೌರ್ಬಲ್ಯ ಹಿರಿತನಗಳೆರಡನ್ನೂ ಏಕಕಾಲಕ್ಕೆ ಚಿತ್ರಿಸುವ ಮಹಾ ಪ್ರಸಂಗವೇ ಸರಿ. ಹಲವು ಶಿವಶರಣರ ಬದುಕಿನಲ್ಲಿ ಕಾಣುವ ಇಂತಹ ಮನುಷ್ಯ ಸಹಜವಾದ ಅಪಜಯ ದೌರ್ಬಲ್ಯಗಳಿಂದ ಅವರು ನಮಗೆ ಹತ್ತಿರದವರಾಗುತ್ತಾರೆ; ಅವುಗಳನ್ನು ಅವರು ಗೆದ್ದುದರಿಂದ ನಮ್ಮ ಗೌರವಕ್ಕೂ ಪ್ರೀತಿಗೂ ಪಾತ್ರರಾಗುತ್ತಾರೆ.

ಮೇಲಿನ ಸಂದರ್ಭದಲ್ಲಿ ಅಕ್ಕಮಹಾದೇವಿ ಮತ್ತು ಕಿನ್ನರಯ್ಯ ಆಡಿರಬಹುದಾದ ವಚನ ರೂಪದ ಮಾತುಗಳು ಶೂನ್ಯ ಸಂಪಾದನೆಗಳಲ್ಲಿ ದೊರಕುತ್ತವೆ. ಆ ಪ್ರಸಂಗವನ್ನು ಸೂಚಿಸುವ ಅಕ್ಕಮಹಾದೇವಿಯ ಅಂಕಿತ ಸಮೇತವಾದ ಹಾಡೊಂದು ದೊರಕುತ್ತದೆ.[೫] ಅದರ ಪಾಠ ಹೀಗಿದೆ :

ಲಿಂಗದರಸಿ ನಿಲ್ಲು ಬಾ ನಿಲ್ಲು ನಿಲ್ಲೆನುತ ಕಿನ್ನರಯ್ಯನೆ ಕಂಡು
ಮೆಲ್ಲಮೆಲ್ಲನೆ ಬಂದು ಮಾತಾಡಿದ ಹೋ ॥ ಪಲ್ಲವಿ ॥

ಉಡಿಗೆ ಸಡಿಲಿ ಮೇಗಳುರದ ಸೆಱಗು ಹಾರಿ
ಕಡುಗಲಿತನದಿಂದ ಬರುವವಳೆ ಹೋ।
ಬಡನಡು ಬಳುಕುತ ಮೊಲೆಮುಡಿ ಒಲೆಪುತ
ಕಡುಲಜ್ಜೆ ನಾಚಿಕೆ ಜಱೆದವಳೆ ಹೋ ॥ ೧ ॥

ಮೊರವಾಳೆ[೬] ಕುಲದಂತೆ ಕರುಳೆಡಬಲದಲ್ಲಿ
ಸರಮಾಲೆಯಂತೆ ಸರಗೊಳುತಿಹಳೆ (ಳು) [ಹೋ][೭]
ಕರೆದರೆ ನುಡಿಯಳು ಕರವೆತ್ತಿ ಮುಗಿಯಳು
ಹರನೊಳು ವಿರಹದಿಂ ಬೆರೆದವಳೆ ಹೋ ॥ ೨ ॥

ಅಟ್ಟಿ ಅಡವಿಯಲಿ ಉಟ್ಟುದ ತೊಱೆದು
ನೆಟ್ಟನೆ ಹೋಗುವಳಿವಳಾರೆ (ಹೋ)
ದುಷ್ಟರು ಕಂಡರೆ ಮುಟ್ಟಲಮ್ಮರು ನಿನ್ನ
ದಿಟ್ಟತನವು ನಿನಗೇತಕ್ಕೆ ಹೆಣ್ಣೇ ॥ ೩ ॥

ಹುಟ್ಟುಗೆಟ್ಟವಳ ಬಟ್ಟೆಯ ಸೋಂಕರು
ದೃಷ್ಟವ[೮] ನುಡುವುದು ಇದು ಮತವೇ।
ನೆಟ್ಟನೆ ಶಿವಶಿವ ಎನುತ ಹೋಗುವಳಾ
ಮುಟ್ಟಲಮ್ಮರು ಕಾಣಿರೋ ಕಿನ್ನರಿಯಣ್ಣಾ
ಮುಟ್ಟಲಮ್ಮರು ಕಾಣಿರೋ ॥ ೪ ॥

ಎನ್ನ ನುಡಿಸುವರೆ ನಿನ್ನಳತೆ ಹೋ
ನಿನ್ನೊಗೆ (ತನದ ಮಾತೇ) ತಱಿದ ಮಾತೆಲವೋ[೯]
ಚೆನ್ನಮಲ್ಲಿಕಾರ್ಜುನಯ್ಯನಿಗೆ ಮನಸೋತೆ
ಎನ್ನ ಹಂಬಲು ಬೇಡ ಹೋಗೆಲವೊ ಹೋ ॥ ೫ ॥

ಈ ಅಪ್ರಕಟಿತ ಹಾಡು ಮಹಾದೇವಿಯಕ್ಕನ ಅಂಕಿತದಲ್ಲಿದೆಯಲ್ಲದೆ ಅವಳ ಜೀವನದಲ್ಲಿ ನಡೆದ ಒಂದು ಘಟನೆಗೆ ಸಂಬಂಧಿಸಿದೆ. ಹಾಡಿನ ಪಲ್ಲವಿಯು ಪೀಠಿಕಾರೂಪವಾಗಿದೆ. ಮೊದಲ

ಮೂರು ನುಡಿಗಳು (೧, ೨ ಮತ್ತು ೩) ಕಿನ್ನರಯ್ಯ ಹೇಳುವ ಮಾತುಗಳಾಗಿವೆ; ಬಳಿಕ ಬರುವ ಎರಡು ನುಡಿಗಳು (೪ ಮತ್ತು ೫) ಕಿನ್ನರಯ್ಯನ ಮಾತಿಗೆ ಅಕ್ಕಮಹಾದೇವಿ ತನ್ನನ್ನು ತಾನು ಶಿವನಿಗೆ ಒಪ್ಪಿಸಿಕೊಂಡವಳೆಂಬ ಸಂಗತಿ (ಲಿಂಗದರಸಿ) ತಿಳಿಯದ್ದೇನೂ ಇಲ್ಲ. (ಇದನ್ನೂ ಗಮನಿಸಿ–'ಹರನೊಳು ವಿರಹದಿಂ ಬೆರೆದವಳೆ'). ಉಡುಗೆ ತೊಡುಗೆಗಳಲ್ಲಿ ತೀರ ಅನಾಸಕ್ತಳಾಗಿ ಬರುತ್ತಿರುವ ಅವಳ ಜೊತೆ ಪ್ರೇಮ ಸಲ್ಲಾಪದಲ್ಲಿ ತೊಡಗಲು ಹವಣಿಸುತ್ತಾನೆ. ಅದಕ್ಕೆ ಮಹಾದೇವಿ ನೇರವಾಗಿ ಉತ್ತರ ಕೊಟ್ಟು ಅವನ ಪ್ರೇಮ ಸೂಚನೆಗಳನ್ನು ನಿರಾಕರಿಸುತ್ತ ಅವನ ಜೊತೆ ಸಂಸಾರಿಯಾಗಿ ಬದುಕಲು ತನ್ನಿಂದ ಸಾಧ್ಯವಿಲ್ಲವೆಂದೇ ಹೇಳಿಬಿಡುತ್ತಾಳೆ. (ನೋಡಿ – "ನಿನ್ನೊಗೆತನದ ಮಾತೇತಱದ ಮಾತೆಲವೋ") ಅವಳು ಚನ್ನಮಲ್ಲಿಕಾರ್ಜುನಯ್ಯನಿಗೆ ಮನಸೋತಿರುವಾಗ ಲೌಕಿಕರು ಅವಳ ಮನಸ್ಸಿಗೆ ಬಂದಾರೆಯೇ! ಅವಳ ನಿರಾಕರಣೆ ಸ್ಪಷ್ಟವಾಗಿದೆ – "ಎನ್ನ ಹಂಬಲ ಬೇಡ ಹೋಗೆಲವೋ ಹೋ".

ಹಾಡಿನ ಕೊನೆಯಲ್ಲಿ 'ಚೆನ್ನಮಲ್ಲಿಕಾರ್ಜುನ' ಎಂಬ ಅಂಕಿತವಿರುವುದರಿಂದ ಈ ಹಾಡನ್ನು ರಚಿಸಿದವಳು ಮಹಾದೇವಿಯಕ್ಕನೇ ಎಂದು ಹೇಳಬೇಕಾಗುತ್ತದೆ, ನಿಜ. ಆದರೆ, ಮಹಾದೇವಿಯಕ್ಕನೇ ರಚಿಸಿದ ಹಾಡಾಗಿದ್ದರೆ ಆಗ ಪೀಠಿಕೆಯಾಗಿ ಬರುವ ಪಲ್ಲವಿಯಲ್ಲಿ ಕಾಣಿಸುವ ಮಾತು ಅಲ್ಲಿ ಇರುತ್ತಿರಲಿಲ್ಲ. "ಕಿನ್ನರಯ್ಯ ಬಂದು ಮಾತನಾಡಿಸಿದ" ಎಂಬ ವಸ್ತುಸ್ಥಿತಿ ಹೇಳಿಕೆಯಾಗಲಿ, ಮುಂದೆ ಅವನು ಮಹಾದೇವಿಯನ್ನು ವರ್ಣಿಸುವುದಾಗಲಿ ಮಹಾದೇವಿಯಕ್ಕನ ರಚನೆಯಲ್ಲಿ ಬರುವುದು ಅಸಂಭವ. ಶೂನ್ಯ ಸಂಪಾದನೆಗಳಲ್ಲಿ ಬಂದಿರುವ ಮಹಾದೇವಿ, ಕಿನ್ನರಯ್ಯರ ಸಂಭಾಷಣೆಯನ್ನು ಓದಿ ಪ್ರಭಾವಿತನಾದ ಈಚಿನ ಕೃತಿಕಾರನೊಬ್ಬ ಅಲ್ಲಿನ ಎಷ್ಟೋ ಮಾತುಗಳನ್ನು ಬಳಸಿಕೊಂಡು ಮೇಲಿನ ಸುಂದರವಾದ ಹಾಡನ್ನು ಕಟ್ಟಿರುವಂತಿದೆ. ಕಿನ್ನರಯ್ಯ, ಮಹಾದೇವಿಯರ ಮಧ್ಯೆ ಸಂಭಾಷಣೆ ನಡೆದಂತೆ ಇಡೀ ಹಾಡು ರಚಿತವಾಗಿರುವುದು ಇಲ್ಲಿಯ ವಿಶೇಷ.

ಹಾಗೆ ನೋಡಿದರೆ, ವಚನಕಾರರ ಹೆಸರಲ್ಲಿ ದೊರಕುವ ಸ್ವರವಚನಗಳಲ್ಲಿ ಹಲವು ಈಚಿನವರು ಅವರ ವಚನಗಳಿಂದ ಪ್ರಭಾವಿತರಾಗಿ, ವಚನಗಳ ಮಾತನ್ನೇ ಎಷ್ಟೋ ಕಡೆ ಬಳಸಿಕೊಂಡು ರಚಿಸಿದ ಹಾಡುಗಳೆಂದು ನಾನು ಈಗಾಗಲೇ ಪ್ರತಿಪಾದಿಸಿದ್ದೇನೆ.[೧೦] ಮೇಲಿನ ಹಾಡೂ ಕೂಡ ಅನ್ಯಕರ್ತೃಕವಾಗಿದ್ದರೂ ತನ್ನಷ್ಟಕ್ಕೆ ತಾನು ಸುಂದರವೂ ಧ್ವನಿಪೂರ್ಣವೂ ಆಗಿದ್ದು, ಕಿನ್ನರಿ ಬೊಮ್ಮಯ್ಯನು ಮಹಾದೇವಿಗೆ ಮಾರುಹೋಗಿದ್ದ ನೆಂಬುದನ್ನೂ ಅವನಿಗೆ ಯಾವುದೇ ಪ್ರತಿಭಟನೆಯಿಲ್ಲದೆ ತನ್ನನ್ನು ತಾನು ಒಪ್ಪಿಕೊಳ್ಳುವ ಮೂಲಕ ಅವನ ತಪ್ಪನ್ನು ಅವನ ಅರಿವಿಗೆ ತಂದುಕೊಟ್ಟಳೆಂಬುದನ್ನೂ ಚಾರಿತ್ರಿಕ ಸತ್ಯಗಳಾಗಿ ಪ್ರತಿಪಾದಿಸುವುದಕ್ಕೆ ಈ ಹಾಡು ಇನ್ನಷ್ಟು ಪುಷ್ಟಿಯನ್ನು ಒದಗಿಸುತ್ತದೆ. ಹಸಿದು ಬಂದ ಹೆಬ್ಬುಲಿಗೆ ತನ್ನನ್ನು ತಾನು ಆಹಾರವಾಗಿ ಒಪ್ಪಿಸಿಕೊಳ್ಳುವ ಮತ್ತು ತನ್ನ ಸತ್ಯನಿಷ್ಠೆಯನ್ನು ಉಳಿಸಿಕೊಳ್ಳುವ ಮೂಲಕ ಪುಣ್ಯಕೋಟಿ ಹಸು ಹೆಬ್ಬುಲಿಯ ಮೇಲೆ 'ಧರ್ಮವಿಜಯ'ವನ್ನು (ಇದು ಅಶೋಕ ಚಕ್ರವರ್ತಿಯ ಮಾತು) ಸಾಧಿಸುತ್ತದೆ. ಪಾಪವನ್ನು ನೇರವಾಗಿ ಪ್ರತಿಭಟಿಸದೆ, ಅದರ ನೋವಿಗೆ ವ್ಯಕ್ತಿ ನಗುನಗುತ್ತಾ ತನ್ನನ್ನು ತಾನು ಒಡ್ಡಿಕೊಂಡೂ ಪಾಪಿಯನ್ನು ಅದೇ ಸಮಯದಲ್ಲಿ ಪ್ರೀತಿಸುವುದು ಮತ್ತು ಆ ಮೂಲಕ ಪಾಪಿಯ ಮನಃ ಪರಿವರ್ತನೆಯನ್ನು ಮಾಡುವುದು ಹಲವು ಮಹಾತ್ಮರ ಬದುಕಿನಲ್ಲಿ ನಡೆದಿರುವ ಘಟನೆಗಳು. ಪಾಪವನ್ನು ಪ್ರೀತಿಯಿಂದ ಗೆಲ್ಲುವ

ಮಾರ್ಗ ಇದು. ಅದರ ಸಾಂಕೇತಿಕತೆ 'ಗೋವಿನ ಹಾಡು' ಕೃತಿಯಲ್ಲಿ ಬಂದಿರುವುದು ಈಗಾಗಲೇ ಶ್ರೀ ಪು.ತಿ.ನರಸಿಂಹಾಚಾರ್ಯರು ಒಂದು ಲೇಖನದಲ್ಲಿ ಅತ್ಯಂತ ಸಮರ್ಥವಾಗಿ ಪ್ರಕಟಿಸಿದ್ದಾರೆ. ನಿನ್ನ ಬಲಗೆನ್ನೆಗೆ ಹೊಡೆದರೆ ಎಡಗೆನ್ನೆಯೆನ್ನು ಒಡ್ಡು ಎಂಬ ಏಸುವಿನ ಮಾತು, ಗಂಗಾದೇವಿಯ ಒಂದು ಕಿವಿಯೋಲೆಯನ್ನು ಕಳ್ಳ ಕದ್ದಾಗ ಇನ್ನೊಂದನ್ನೂ ಬಸವಣ್ಣ ಕೊಡಿಸಿದ್ದು, ಗಾಂಧೀಜಿ ಬ್ರಿಟಿಷರ ಬಗ್ಗೆ ತಾಳಿದ ಧೋರಣೆ ಮತ್ತು ಅವರ ಸತ್ಯಾಗ್ರಹದ ಕಲ್ಪನೆ ಇಂತಹ ಎಷ್ಟೋ ಘಟನೆಗಳ ಹಿನ್ನೆಲೆಯಲ್ಲಿ ಮಹಾದೇವಿಯಕ್ಕನ ವರ್ತನೆಯನ್ನು ವ್ಯಾಖ್ಯಾನಿಸುವುದು ಸಾಧ್ಯ. ಮಹಾದೇವಿಯಕ್ಕನ ವರ್ತನೆ ಅಸಾಧಾರಣವಾದುದು. ಅವಳು ಇತರ ಕಾಮುಕರ ಬಗ್ಗೆಯೂ ಹೀಗೆಯೇ ನಡೆದುಕೊಂಡಳೇ ಎಂಬ ಪ್ರಶ್ನೆ ಅಪ್ರಸ್ತುತ. ಆದರೆ ಶರಣನೂ ಸಾಧಕನೂ ಆಗಿದ್ದ ಕಿನ್ನರಿ ಬೊಮ್ಮಯ್ಯ ಯಾವುದೇ ಕ್ಷಣದ ದೌರ್ಬಲ್ಯಕ್ಕೆ ಒಳಗಾಗದ, ಅವನಿಗೆ ತನ್ನ ಇಡೀ ದೇಹವನ್ನು ಒಪ್ಪಿಸಿ, 'ನೀನು ಏನು ಬೇಕಾದರೂ ಮಾಡಿಕೋ' ಎಂದು ಮಹಾದೇವಿಯಕ್ಕ ಹೇಳಿದ್ದು, ಕಲ್ಪನೆಗೂ ಎಟುಕಲಾರದ ಧೀರ ಅಸಾಮಾನ್ಯ ನಡತೆ, ಮೂಲಭೂತವಾಗಿ ಶಿವಭಕ್ತನಾಗಿದ್ದ ಕಿನ್ನರಯ್ಯನಿಗೆ ಅವಳ ಮನಸ್ಸು ಮಾತ್ರವೇ ಅಲ್ಲ, ಇಡೀ ದೇಹವೂ ಶಿವಮಯವಾಗಿರುವ ಅನುಭವವಾಯಿತು. ಅದನ್ನು ಅರಿಯುವ ಸಂಸ್ಕಾರವೂ ಅವನಿಗಿತ್ತು ಮತ್ತು ಮಹಾದೇವಿಗೆ ಈ ಸಂಗತಿ ಗೊತ್ತಿತ್ತು. ಅವನ ವ್ಯಾಮೋಹ ತೀರಾ ಸ್ವಾಭಾವಿಕವೂ ಮಾನುಷವೂ ಆಗಿದ್ದರೆ ಮಹಾದೇವಿಯಕ್ಕನ ವರ್ತನೆ ಅಸಾಧಾರಣವೂ ದೈವಿಕವೂ ಆಗಿದೆ. ಮನೋವಿಜ್ಞಾನದ ದೃಷ್ಟಿಯಿಂದಲೂ ವಿಶ್ಲೇಷಿಸಬಹುದಾದ ಘಟನೆ ಇದು ಎಂಬಲ್ಲಿ ಅನುಮಾನವಿಲ್ಲ.

---

೧. ಈ ಕೌಶಿಕ ಬೇರೆ ಯಾರೂ ಅಲ್ಲ, ಉಡುತಡಿಯ (ಈಗಿನ ಉಡುಗಣಿಯ) ಪಕ್ಕದ ಬಳ್ಳಿಗಾವೆ ರಾಜಧಾನಿಯಲ್ಲಿ ಅವಳ ಕಾಲದಲ್ಲಿ ಆಳುತ್ತಿದ್ದ ಕಸಪಯ್ಯ ದಂಡನಾಕನೇ ಅವನು ಎಂಬುದನ್ನು ಸ್ಪಷ್ಟಾಧಾರಗಳಿಂದ ಅನ್ಯತ್ರ ಸಾಧಿಸಿ ತೋರಿಸಿದ್ದಾನೆ (ಬಳ್ಳಿಗಾವೆ ಈಗ ಶಿಕಾರಿಪುರ ತಾಲ್ಲೂಕಿನ ಒಂದು ಚಿಕ್ಕ ಹಳ್ಳಿ)

೨. 'ಶೂನ್ಯ ಸಂಪಾದನೆ'ಗಳು ನಾಲ್ಕು : ಶಿವಗಣಪ್ರಸಾದಿ ಮಹಾದೇವಯ್ಯ, ಹಲಗೆಯ ದೇವ, ಗುಮ್ಮಳಾಪುರದ ಸಿದ್ಧಲಿಂಗಯತಿ ಮತ್ತು ಗೂಳೂರು ಸಿದ್ಧವೀರಣ್ಣೊಡೆಯರು ಆ ನಾಲ್ಕು ಕೃತಿಗಳ ಕರ್ತೃಗಳು. ಇವುಗಳ ಕಾಲ ಸ್ಥೂಲವಾಗಿ ಕ್ರಿ.ಶ. ೧೪೦೦ ರಿಂದ ಕ್ರಿ.ಶ. ೧೫೫೦. ಇವುಗಳನ್ನು ಈ

ಲೇಖನದಲ್ಲಿ ಅನುಕ್ರಮವಾಗಿ ಒಂದನೆಯ, ಎರಡನೆಯ, ಮೂರನೆಯ, ನಾಲ್ಕನೆಯ ಶೂನ್ಯ ಸಂಪಾದನೆಗಳೆಂದು ಕರೆದಿದೆ. ಇವುಗಳಲ್ಲಿ ಹಲಗೆಯ ದೇವನದನ್ನು ಬಿಟ್ಟು ಉಳಿದ ಮೂರೂ ಅಚ್ಚಾಗಿವೆ. ಹಲಗೆಯದೇವನ ಹಸ್ತಪ್ರತಿ ಮೈಸೂರಿನಲ್ಲಿದ್ದು (ಕನ್ನಡ ಅಧ್ಯಯನ ಸಂಸ್ಥೆ) ಅದರಿಂದ ಟಿಪ್ಪಣಿ ಮಾಡಿಕೊಂಡಿದ್ದೇನೆ. (ಹಲಗೆಯ ದೇವನದೂ ಪರಕವಾಗಿದೆ ಈಗ).

೩. ಎರಡನೆಯ ಶೂನ್ಯ ಸಂಪಾದನೆಯಲ್ಲಿ ಕಿನ್ನರಯ್ಯ ಅವಳನ್ನು ನಾನಾ ವಿಧವಾಗಿ ಪರೀಕ್ಷಿಸಿದ ಪ್ರಸಂಗದ ಚಿತ್ರಣ ಸ್ವಲ್ಪ ಅತಿಯಾಯಿತೆಂದು ಕೆಲವರಿಗೆ ಅನ್ನಿಸಿದರೂ ಆಶ್ಚರ್ಯವಿಲ್ಲ.

೪. ಈ ಪ್ರಸಂಗ ಎಲ್ಲ ನಾಲ್ಕೂ ಶೂನ್ಯ ಸಂಪಾದನೆಗಳಲ್ಲಿ ಹೇಗೆ ಬಂದಿದೆಯೆಂಬುದನ್ನು ಮೂಲ ಪಾಠದಲ್ಲಿ ನೋಡಬಯಸುವವರು ಡಾ॥ ಎಲ್. ಬಸವರಾಜು ಅವರು ಸಂಪಾದಿಸಿರುವ 'ಶಿವಗಣ ಪ್ರಸಾದಿ ಮಹಾದೇವಯ್ಯನ ಶೂನ್ಯ ಸಂಪಾದನೆ' ಕೃತಿಯ (ಚಿತ್ರದುರ್ಗ, ೧೯೬೯) ಪು.೧೫೫–೧೬೫ರ ಮೇಲ್ಭಾಗ ಮತ್ತು ಅಡಿಟಿಪ್ಪಣಿಗಳನ್ನೂ ನೋಡಬಹುದು. ಈ ಪ್ರಸಂಗದ ತೌಲನಿಕ ವಿವೇಚನೆಗೆ, ನೋಡಿ– ಎಂ. ಚಿದಾನಂದಮೂರ್ತಿ, ಶೂನ್ಯ ಸಂಪಾದನೆಯನ್ನು ಕುರಿತು, ಮೈಸೂರು. ೧೯೬೨. ಪು. ೯೪–೭

೫. ಇದರ ಪ್ರತಿ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ಹಸ್ತಪ್ರತಿ ಭಂಡಾರ ದಲ್ಲಿತ್ತು. ಅಕ್ಷರಗಳು ಚಎನ್ನಾಗಿಲ್ಲ ಮತ್ತು ಭಾಷೆ ಅಶುದ್ಧ. ಶಕಟರೇಫದ ಬಳಕೆಯಲ್ಲಿದೆ. ಈ ಹಾಡಿನ ಕಡೆ ನನ್ನ ಗಮನ ಸೆಳೆದವರು ಶ್ರೀ ಎಸ್. ಶಿವಣ್ಣನವರು.

೬. ಇದು ಮರವಾಳೆ ಇರಬಹುದು : ಕಾಡಿನಲ್ಲಿ ಬೆಳೆಯುವ ಬಾಳೆಯ ಒಂದು ಪ್ರಭೇದವಿರಬಹುದು.

೭. ( ) ಈ ಚಿಹ್ನೆಯು ಹಸ್ತಪ್ರತಿಯಲ್ಲಿರುವ ಅಪಲಿಖಿತವನ್ನೂ [ ] ಈ ಚಿಹ್ನೆಯು ಊಹೆಯಿಂದ ಹೊಸದಾಗಿ ಸೇರಿಸಿದ್ದನ್ನೂ ಹೇಳುತ್ತದೆ. (ಹೋ) ಎಂದು ಹೊಸದಾಗಿ ಸೇರಿಸಲು ಕಾರಣ ಹಾಡಿನ ಛಂದಸ್ಸು ಮತ್ತು ಧಾಟಿ.

೮. 'ದೃಷ್ಟ' ಎಂದರೆ ಪ್ರತ್ಯಕ್ಷ ಎಂದರ್ಥವಾಗುವುದರಿಂದ ಅದು ನಿಜವಾದ ಪಾಠವಾಗಿರಲಾರದು. ಬ ಬಹುಶಃ ಅದು 'ದುಷ್ಟ' ಎಂದಿದ್ದಿರಬಹುದು. 'ದುಷ್ಟವ ನುಡಿವುದು' ಎಂದರೆ ಕಟ್ಟ ಮಾತನಾಡ್ಡುವುದು ಎಂದು ಅರ್ಥೈಸಬಹುದು ಅಥವಾ ಅದು 'ಧೃಷ್ಟ' ಎಂದಿರಲೂಬಹುದು. ಆಗ ಅದರ ಅರ್ಥ – 'ಲಜ್ಜಾವಿಹೀನವಾದ ಮಾತು' ಎಂದೋ 'ಕಾಮುಕತನದ ಮಾತು' ಎಂದೋ ಆಗಬಹುದು.

೯. ಓಲೆಗರಿಯಲ್ಲಿ 'ನಿನ್ನೊಗೆತಱ ಮಾತೆಲವೊ' ಎಂದು ಸ್ವಲ್ಪ ಕಷ್ಟಪಟ್ಟು ಓದಲು ಸಾಧ್ಯ. ಉಳಿದ ಪಾದಗಳಿಗೆ ಹೋಲಿಸಿದರೆ ಇದು ಬಹು ಚಿಕ್ಕದಾಗುವುದಲ್ಲದೆ ಅರ್ಥವೂ ಆಗುವುದಿಲ್ಲವಾದ ಕಾರಣ, ಕೆಲವು ಮಾತುಗಳು ಬಿಟ್ಟುಹೋಗಿರಬಹುದು. ಅರ್ಥಾತ್ ಸದೃಶಾಕ್ಷರಲೋಪವಾಗಿರ ಬಹುದು. ಬಹುಶಃ ಮೂಲಪಾಠ 'ನಿನ್ನೊಗೆತನದ ಮಾತೇತಱದ ಮಾತೆಲವೋ' ಎಂದಿರಬಹುದು. ಲೇಖನದ ಅವಸರದಲ್ಲಿ (ತನದ ಮಾತೇ) ಎಂಬ ಇಡೀ ಭಾಗ ಬಿಟ್ಟು ಹೋಗಿರಬಹುದು. ಈ ಭಾಗದ ಮುಂದಿನ ಅಕ್ಷರಗಳನ್ನು ಗಮನಿಸಿ. ನನ್ನ ಊಹಾತ್ಮಕ ಪರಿಷ್ಕರಣದ ಪ್ರಕಾರ ಆ ಸಾಲಿನ ಅರ್ಥ ಹೀಗಿದೆ – "ನಿನ್ನ ಜೊತೆ ಒಗೆತನ ಅಥವಾ ಸಂಸಾರ ಮಾಡುವ ಮಾತು ಎಂತಹ ಮಾತು" – ಈ ಅರ್ಥ ಅಲ್ಲಿಗೆ ಸರಿಯಾಗಿದೆ.

೧೦. ನೋಡಿ – ಎಂ. ಚಿದಾನಂದಮೂರ್ತಿ : ವಚನಸಾಹಿತ್ಯ (ಪ್ರ. ಬೆಂಗಳೂರು ವಿ.ವಿ.)

೨. ಅಕ್ಕಮಹಾದೇವಿ

●

ಡಾ. ಜಿ. ಎಸ್. ಶಿವರುದ್ರಪ್ಪ

ಹನ್ನೆರಡನೆಯ ಶತಮಾನದಷ್ಟು ಹಿಂದೆಯೇ ಕನ್ನಡ ನಾಡಿನ ಪರಿಸರದಲ್ಲಿ ತನ್ನ ವೈಚಾರಿಕತೆ ಹಾಗೂ ಆತ್ಮ ಪ್ರತ್ಯಯದ ಮೂಲಕ ಹೆಣ್ಣಿನ ವ್ಯಕ್ತಿತ್ವಕ್ಕೆ ಒಂದು ಘನತೆ, ಗೌರವವನ್ನು ತಂದುಕೊಟ್ಟ ಅಕ್ಕಮಹಾದೇವಿ, ಅಂದು ಬಸವಣ್ಣನವರ ವ್ಯಕ್ತಿ ಕೇಂದ್ರದಲ್ಲಿ ರೂಪುಗೊಂಡ ಶರಣ ಚಳುವಳಿಯ ಮೇಲೆ ಹಾದುಹೋದ ಒಂದು ಉಜ್ವಲವಾದ ಮಿಂಚಿನ ಗೆರೆಯಂತೆ ತೋರುತ್ತಾಳೆ. ಈ ಹೊತ್ತು ನಾವು ಅಕ್ಕಮಹಾದೇವಿಯ ವ್ಯಕ್ತಿತ್ವವನ್ನು ಹನ್ನೆರಡನೆಯ ಶತಮಾನದ ಸಾಮಾಜಿಕ, ಧಾರ್ಮಿಕ ಸ್ವರೂಪದ ವಚನ ಚಳುವಳಿಯೊಂದಿಗೆ ಗುರುತಿಸುತ್ತೇವೆ ಯಾದರೂ, ಆಕೆಗೂ ಈ ಚಳುವಳಿಗೂ ಇದ್ದ ಸಂಬಂಧ ಕೇವಲ ಆಗಂತುಕವೂ, ತಾತ್ಕಾಲಿಕವೂ ಆದದ್ದೆಂಬುದು ಮಾತ್ರ ನಿಜ. ಹಾಗೆ ನೋಡಿದರೆ ಈ ಸಂದರ್ಭದ ಮಹಾ ಅನುಭಾವಿಯಾದ ಅಲ್ಲಮನ ಸಂಬಂಧ ಕೂಡಾ, ಈ ಚಳುವಳಿ ಯೊಂದಿಗೆ, ಇದೇ ಸ್ವರೂಪದ್ದೇ. ಆದರೆ ಅಲ್ಲಮ ಈ ಚಳುವಳಿಯಲ್ಲಿ ವಹಿಸಿದ ಪಾತ್ರ, ಅಕ್ಕನದಕ್ಕಿಂತ ಭಿನ್ನವಾದುದು ಹಾಗೂ ಮಹತ್ವದ್ದು. ಆತ 'ಅನುಭವ ಮಂಟಪ'ದ ಅಧ್ಯಕ್ಷನಾಗಿ, ಗುರುವಾಗಿ, ಮಾರ್ಗದರ್ಶಕನಾಗಿ, ವಿಮರ್ಶಕನಾಗಿ 'ಪ್ರಭು' ಎನ್ನುವ ಗೌರವಕ್ಕೆ ಪಾತ್ರನಾಗಿ, ಈ ಚಳುವಳಿಯೊಂದಿಗೆ ಹೆಚ್ಚು ಗಾಢವಾದ ಸಂಬಂಧವನ್ನು ಹೊಂದಿ ಕೆಲವು ಕಾಲವಾದರೂ ಜೊತೆಗೆ ಇದ್ದವನು. ಆದರೆ ಮಹಾದೇವಿ ಉಡುತಡಿಯಿಂದ ಶ್ರೀಶೈಲ ಶಿಖರಕ್ಕೆ ಬಿಟ್ಟ ಬೆಳಕಿನ ಬಾಣದಂತೆ ನೇರವಾಗಿ ಹೊರಟ ಹಾದಿಯಲ್ಲಿ, ಕಲ್ಯಾಣದ ಈ ಶರಣ ಕಿರಣ ಕೇಂದ್ರದಿಂದ ಆಕರ್ಷಿತಳಾಗಿ ಸ್ವಲ್ಪ ಕಾಲ ನಿಂತವಳು. ತನ್ನ ವ್ಯಕ್ತಿತ್ವ ಹಾಗೂ ಅನುಭಾವಿಕ ನಿಲುವುಗಳಿಂದ ಶರಣ ಸಮೂಹವನ್ನು ಬೆರಗುಗೊಳಿಸಿದಳು. ತನ್ನ ವೈರಾಗ್ಯ ಮತ್ತು ವೈಚಾರಿಕತೆಯ ಪರಿಣತಿಯಿಂದ 'ಅಕ್ಕ' ಎಂದು ಕರೆಯಿಸಿಕೊಳ್ಳುವ ಗೌರವಕ್ಕೆ ಪಾತ್ರಳಾದವಳು.[೧] ತನ್ನ ಆಧ್ಯಾತ್ಮಿಕ ಸಂವಾದದಿಂದ ಶರಣ ಚಳುವಳಿಯ ಪ್ರಮುಖರ ಪ್ರಶಂಸೆಯನ್ನು ಗಳಿಸಿಕೊಂಡವಳು.[೨]

ಆದರೆ ಅಕ್ಕಮಹಾದೇವಿ ಕಲ್ಯಾಣಕ್ಕೆ ಬರುವ ಮುನ್ನವೇ ಅವಳ ತಾತ್ವಿಕ ನಿಲುವುಗಳ ಹಾಗೂ ಜೀವನ ವಿಧಾನದ ಪರಿಕಲ್ಪನೆಗಳೂ ಬಹುಮಟ್ಟಿಗೆ ಸಿದ್ಧವಾಗಿದ್ದವು ಮತ್ತು ಅಖೇಐಧೂ ತನ್ನ ವೈಚಾರಿಕತೆ ಹಾಗೂ ನಿರ್ಭಯವಾದ ನಿಲುವು ಮತ್ತು ನಡೆಗಳಿಂದಾಗಿ

ಸಾಕಷ್ಟು ಹೆಸರಾಗಿದ್ದಳೆಂದು ತೋರುತ್ತದೆ. ತನ್ನ ಪಯಣದ ಹಾದಿಯಲ್ಲಿ ಶರಣ ಚಳುವಳಿಯೊಳಗೆ ಬಂದ ಈಕೆ, ಇಲ್ಲಿ ಎಷ್ಟು ಕಾಲ ಇದ್ದಳೆಂಬ ಬಗ್ಗೆ ಖಚಿತವಾಗಿ ಹೇಳಲುಬಾರದು. ಆದ್ದರಿಂದ ಆಕೆ ಇಲ್ಲಿದ್ದದ್ದು ಕೆಲವೇ ಕಾಲದ ಮಟ್ಟಿಗೆ ಎಂಬುದರಲ್ಲಿ ಸಂದೇಹವಿಲ್ಲ. ಏಕೆಂದರೆ, ಅವಳ ನಿಲುಗಡೆ ಕಲ್ಯಾಣವಲ್ಲ; ಶ್ರೀಶೈಲ. ಸ್ವತಂತ್ರವಾಗಿ ತನ್ನದಾರಿ ಹಾಗೂ ಗುರಿಗಳನ್ನು ಸ್ಪಷ್ಟವಾಗಿ ಕಂಡುಕೊಂಡ ಈಕೆ ತಾತ್ವಿಕವಾಗಿ ಹಾಗೂ ವೈಚಾರಿಕವಾಗಿ ವಚನ ಚಳುವಳಿಗೆ ಋಣಿಯಾಗಿರುವುದು ತೀರಾ ಕಡಿಮೆ ಎಂದೇ ತೋರುತ್ತದೆ. ಈ ಚಳುವಳಿಯ ಅನೇಕ ಶರಣ ಶರಣೆಯರ ವ್ಯಕ್ತಿತ್ವ ಹಾಗೂ ಆಲೋಚನಾ ವಿಧಾನ ಮತ್ತು ಅವರವರ ಅಭಿವ್ಯಕ್ತಿಯ ಕ್ರಮಗಳು ರೂಪುಗೊಂಡದ್ದು ಕಲ್ಯಾಣ ಕೇಂದ್ರಿತ ವಚನ ಚಳುವಳಿಯಿಂದಲೇ. ಆದರೆ ಮಹಾದೇವಿಯಕ್ಕನ ವಿಚಾರದಲ್ಲಿ ಈ ಮಾತನ್ನು ಹೇಳುವ ಹಾಗಿಲ್ಲ. ಹೇಗೆಂದರೆ ಎತ್ತರದ ನಿಲುವನ್ನು ಗಳಿಸಿಕೊಂಡ ಅಂದಿನ ಶರಣ ಚಳುವಳಿಯ ವ್ಯಕ್ತಿತ್ವಗಳ ಪ್ರಭಾವ ಆಕೆಯ ಮೇಲೆ ಆಗಲಿಲ್ಲ ಎಂದಾಗಲೀ, ವಚನಕಾರರನೇಕರ ಸಹವಾಸ ಹಾಗೂ ಸಂವಾದ ಅವಳ ಅಭಿವ್ಯಕ್ತಿಗೆ ನೆರವಾಗಲಿಲ್ಲವೆಂದಾಗಲೀ ಈ ಮಾತಿನ ಅರ್ಥವಲ್ಲ. ಆದರೆ ಅಕ್ಕ ಈ ಶರಣ ಸಮುದಾಯಕ್ಕೆ ಬರುವ ವೇಳೆಗಾಗಲೇ ಶರಣ ಧರ್ಮದ ತಾತ್ವಿಕ ನಿಲುವುಗಳೂ, ಸಾಮಾಜಿಕ ದೃಷ್ಟಿಕೋನಗಳೂ ಒಂದು ರೀತಿಯಲ್ಲಿ ಸಿದ್ಧವಾಗಿದ್ದು, ಇದರ ಚೌಕಟ್ಟಿನೊಳಗಿನ ಎಷ್ಟೋ ಸಂಗತಿಗಳೊಂದಿಗೆ ಆಕೆಯ ಅಭಿಪ್ರಾಯಗಳು ಸಂಗತವಾಗದೆ ಹೋದವೆಂಬುದು ಗುರುತಿಸಿಕೊಳ್ಳಬೇಕಾದ ಅಂಶವಾಗಿದೆ. ಈ ದೃಷ್ಟಿಯಿಂದ ಅಕ್ಕಮಹಾದೇವಿಯು ಈ ವಚನ ಚಳುವಳಿಯಲ್ಲಿ ಇತರರಿಗಿಂತ ಬೇರೆಯೇ ಆಗಿ ನಿಲ್ಲುತ್ತಾಳೆ ಮತ್ತು ವೈಯಕ್ತಿಕ ನೆಲೆಯಲ್ಲಿ ಈ ಚಳುವಳಿಗೆ ಆಕೆ ತೋರುವ ಪ್ರತಿಕ್ರಿಯೆಗಳು ಗಮನಾರ್ಹವಾಗಿವೆ.

ಭಗವತ್ಪರವಾದ ವ್ಯಾಕುಲತೆ, ಎಲ್ಲ ಅನುಭಾವಿಗಳಂತೆ ಪುಸ್ತಕ ಹಾಗೂ ಶಾಸ್ತ್ರ ಜ್ಞಾನಗಳ ಬಗ್ಗೆ ಅವಳಿಗಿದ್ದ ತಿರಸ್ಕಾರ, ಪರಂಪರಾಗತವಾಗಿ ಜಾತಿ ಹಾಗೂ ವರ್ಣಭೇದಗಳನ್ನು ಪ್ರತಿಪಾದಿಸುತ್ತಿದ್ದ ವೇದ–ಪುರಾಣ–ಆಗಮಗಳ ನಿರಾಕರಣೆ ಇತ್ಯಾದಿಗಳ ವಿಚ್ಚಾರದಲ್ಲಿ ಅವಳಿಗೆ ವಚನ ಚಳುವಳಿಯೊಂದಿಗೆ ಸಹಮತವಿದ್ದರೂ, ಮಾಯೆಯನ್ನು ಕುರಿತ ಅವಳ ವ್ಯಾಖ್ಯಾನ ಮಾತ್ರ ತೀರಾ ವಿಶಿಷ್ಟವಾದುದಾಗಿದೆ. ಹಾಗೆ ನೋಡಿದರೆ ಭಾರತೀಯ ತತ್ವಜ್ಞಾನದ ಪ್ರಕಾರ 'ಮಾಯೆ' ಎಂದರೆ ಸತ್ಯವಲ್ಲದ, ಆದರೆ ಸತ್ಯದ ಹಾಗೆ ಭಾಸವಾಗುವ ಈ ಜಗತ್ತಿನ ತೋರಿಕೆ ಮತ್ತು ಅನೇಕ ವಿಧವಾದ ಆಸೆ–ಆಮಿಷಗಳಿಂದ ಜಗತ್ತಿನೊಂದಿಗೆ ಜೀವನವನ್ನು ಬಂಧಿಸುವ ಒಂದು ಅವಿದ್ಯೆಯ ಉಪಕರಣ, ಹಾಗೆ ಮನುಷ್ಯನನ್ನು ಹಿಡಿದು ಕಟ್ಟುವ ಈ ಮಾಯೆಯನ್ನು 'ಹೆಣ್ಣು–ಹೊನ್ನು–ಮಣ್ಣು' ಎಂದು ವರ್ಣಿಸಲಾಗಿದೆ. ಸ್ವಲ್ಪ ವಿಚಾರ ಮಾಡಿ ನೋಡಿದರೆ ಈ ವ್ಯಾಖ್ಯಾನ ಮುಖ್ಯವಾಗಿ ಸಾಧಕನಾದ ಹಾಗೂ ಮುಮುಕ್ಷುವಾದ ಪುರುಷನ ದೃಷ್ಟಿಕೋನದಿಂದ ಹುಟ್ಟಿಕೊಂಡದ್ದು. ಆದರೆ ಅಕ್ಕಮಹಾದೇವಿ ಈ ಪರಿಕಲ್ಪನೆಯನ್ನು ಮೊಟ್ಟ ಮೊದಲಿಗೆ ಸ್ತ್ರೀಪರವಾಗಿ ವ್ಯಾಖ್ಯಾನಿಸಿರುವ ಕ್ರಮವು ತೀರಾ ವಿಶಿಷ್ಟವಾದುದಾಗಿದೆ. ಆಕೆ ಹೇಳುತ್ತಾಳೆ :

ಪುರುಷನ ಮುಂದೆ ಮಾಯೆ
ಸ್ತ್ರೀ ಎಂಬ ಅಭಿಮಾನವಾಗಿ ಕಾಡಿತ್ತು ನೋಡಾ
ಸ್ತ್ರೀಯ ಮುಂದೆ ಮಾಯೆ
ಪುರುಷನೆಂಬ ಅಭಿಮಾನವಾಗಿ ಕಾಡಿತ್ತು ನೋಡಾ[೩]

ಹೆಣ್ಣಿಗೆ ಗಂಡು ಮಾಯೆ
ಗಂಡಿಗೆ ಹೆಣ್ಣು ಮಾಯೆ[೪]

ಈ ಮಾತುಗಳಲ್ಲಿ, ಹೆಣ್ಣು ಗಂಡಿನ ಪಾಲಿಗೆ 'ಮಾಯೆ'ಯಾಗುವುದಾದರೆ, ಗಂಡು ಹೆಣ್ಣಿನ ಪಾಲಿಗೆ ಯಾಕೆ ಮಾಯೆ ಅಲ್ಲ ? ಎಂಬ ದೃಷ್ಟಿಕೋನ, ಮಹಿಳಾಪರವಾದ ಒಂದು ಪ್ರತಿಕ್ರಿಯೆ ಯಾಗಿದೆ. ಹಾಗೆಯೇ ಕಟ್ಟಿಕೊಂಡ ಹೆಂಡತಿಯ ಗಂಡ ಆಧ್ಯಾತ್ಮ ಸಾಧನೆಯ ನೆಪದಿಂದ ಬಿಟ್ಟು ಹೋಗುವುದೂ 'ವೈರಾಗ್ಯ'ದ ಲಕ್ಷಣವಾಗುವುದಾದರೆ, ಕಟ್ಟಿಕೊಂಡ ಗಂಡನನ್ನು ತನ್ನ ಅಧ್ಯಾತ್ಮ ಸಾಧನೆಗಾಗಿ ಹೆಣ್ಣು ಬಿಟ್ಟು ಹೋಗುವುದೂ ವೈರಾಗ್ಯ ಯಾಕೆ ಆಗುವುದಿಲ್ಲ ಎನ್ನುವುದನ್ನು ಆಕೆ ಕೌಶಿಕನನ್ನು ಬಿಟ್ಟು ಹೊರಟ ಸಂದರ್ಭವು ಸಾಂಕೇತಿಸುತ್ತದೆ ಎಂದು ಭಾವಿಸುವುದು ತಪ್ಪೇನೂ ಆಗುವುದಿಲ್ಲ.

ವಚನ ಚಳುವಳಿಯ ಶರಣ ಧರ್ಮದೊಂದಿಗೆ ಸಂಗತವಾಗಲಾರದ ಆಕೆಯ ದೃಷ್ಟಿಕೋನಗಳೂ, ವಿಚಾರಗಳೂ ಸ್ವಾರಸ್ಯವಾಗಿವೆ :

ವಚನ ಚಳುವಳಿ ಲೌಕಿಕ ದಾಂಪತ್ಯ ಜೀವನವನ್ನು ಅಧ್ಯಾತ್ಮ ಸಾಧನೆಯ ನೆಲೆಗಟ್ಟನ್ನಾಗಿ ಒಪ್ಪಿಕೊಂಡಿತ್ತು. ಹಾಗೆಯೇ ಈ ಲೋಕ ಜೀವನವನ್ನೂ ಒಪ್ಪಿಕೊಂಡಿತ್ತು. 'ಸತಿ ಪತಿ ಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಗೆ' ಎಂಬ ಜೇಡರದಾಸಿಮಯ್ಯನ ಮಾತು 'ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟವಯ್ಯ' ಎಂಬ ಬಸವಣ್ಣನವರ ಮಾತೂ, ಆ ನಿಲುವಿಗೊಂದು ನೆಲೆಗಟ್ಟನ್ನು ಹಾಕಿದ್ದವು. ಸಂಸಾರದಲ್ಲಿದ್ದೂ ಶಿವಯೋಗವನ್ನು ಸಾಧಿಸ ಬಹುದು ಎಂಬ ಈ ಧರ್ಮಸೂತ್ರವೇ ಬಹುಶಃ ಬಹುಜನರನ್ನು ಈ ಚಳುವಳಿಯೊಳಕ್ಕೆ ಆಕರ್ಷಿಸಿರಬಹುದು. ಹಾಗೆ ನೋಡಿದರೆ ಈ ಶರಣ ಧರ್ಮದ ಚಳುವಳಿಯಲ್ಲಿ ಪಾಲ್ಗೊಂಡ ವರೆಲ್ಲ ಬಸವಣ್ಣನವರಿಂದ ಮೊದಲ್ಗೊಂಡು, ಸಂಸಾರಿಗಳೇ, ಗೃಹಸ್ಥರೇ ಮತ್ತು ಗೃಹಸ್ಥರಲ್ಲದ ಇತರ ಹಿರಿಯರು ಯಾರೂ ಗೃಹಸ್ಥನಾಗಿರುವುದು ಅಧ್ಯಾತ್ಮ ಸಾಧನೆಗೆ ಒಂದು ಆತಂಕವೆಂಬ ಮಾತನ್ನು ಹೇಳಿದವರಲ್ಲ. ಹೀಗಿರುವಾಗ ಲೌಕಿಕ ದಾಂಪತ್ಯದ ಮೂಲವಾದ ಮದುವೆಯ ಕಲ್ಪನೆಯನ್ನು ಮಹಾದೇವಿ ಪ್ರಶ್ನಿಸಿದಳು ಮತ್ತು ಸಂದರ್ಭದ ಒತ್ತಡದಿಂದ ತಾನು ಮದುವೆ ಯಾಗಬೇಕಾಗಿ ಬಂದ ಗಂಡನನ್ನೇ ಬಿಟ್ಟುಬಂದ ಈ ಹೆಣ್ಣು ಮಗಳ ನಡೆವಳಿಕೆ, ಲೌಕಿಕ ದಾಂಪತ್ಯವನ್ನು ಮೂಲಮಾನವಾಗಿ ಒಪ್ಪಿಕೊಂಡ ವಚನ ಚಳುವಳಿಯ ನಿಲುವಿಗೆ ವಿರೋಧ ವಾಗುವುದಿಲ್ಲವೆ – ಎಂಬ ಪ್ರಶ್ನೆ ಇಲ್ಲಿ ಸಹಜವಾಗಿಯೇ ಉದ್ಭವಿಸುತ್ತದೆಯಲ್ಲದೆ ಅಕ್ಕನ ಈ ನಡೆವಳಿಕೆ ಹೇಗೆ ಈ ವಚನ ಚಳುವಳಿಯಲ್ಲಿ ಪಾಲ್ಗೊಂಡ ಮಹಿಳೆಯರಿಗೆ ಮಾದರಿಯಾದೀತು ಎಂಬ ಸಂಶಯಕ್ಕೆ ಅವಕಾಶ ಮಾಡಿಕೊಡುತ್ತದೆ. ಆದರೂ ಅಕ್ಕನ ನಿಲುವನ್ನು ಅಂದಿನ ಶರಣರು ಒಪ್ಪಿಕೊಂಡರು, ಗೌರವಿಸಿದರು, ಅವಳನ್ನು 'ಅಕ್ಕ' ಎಂದು ಪೂಜ್ಯಭಾವದಿಂದ ಹೊಗಳಿದರು. ಯಾಕೆ ?

ಏಕೆಂದರೆ, ಅಕ್ಕ 'ಮದುವೆ'ಯನ್ನು ನಿರಾಕರಿಸಿದವಳಲ್ಲ; ಮದುವೆ ಎಂಬ ವ್ಯವಸ್ಥೆಯನ್ನು ಪ್ರಶ್ನಿಸಿದಳು, ಪ್ರತಿಭಟಿಸಿದಳು, 'ಮದುವೆ'ಯಲ್ಲಿ ಹೆಣ್ಣಿನ ಆಯ್ಕೆಯ ಸ್ವಾತಂತ್ರ್ಯವನ್ನು ತಿರಸ್ಕರಿಸುವ ಪ್ರವೃತ್ತಿಯನ್ನು ವಿರೋಧಿಸಿದಳು. ಅಲ್ಲದೆ ಅವಳ ಮದುವೆಯ ಕಲ್ಪನೆ ಲೌಕಿಕವಾದದ್ದಲ್ಲ; ಅನುಭಾವಿಕವಾದದ್ದು. ಅಂದರೆ ತಾನು 'ಹೆಣ್ಣು' ತನ್ನ ಬದುಕಿನ ಗಮ್ಯವಾದ ಆ ದೈವ 'ಗಂಡು' ಎನ್ನುವ ಭಾವನೆ ಅದು. ವೀರಶೈವ ಪರಿಭಾಷೆಯಲ್ಲಿ ಹೇಳುವುದಾದರೆ 'ಮಧುರಭಾವ'.

ಈ ಭಾವ ಹೆಣ್ಣಿಗೆ ಸಹಜವಾದಷ್ಟು, ಅನುಕೂಲವಾದಷ್ಟು, ಗಂಡಿನ ವಿಚಾರಕ್ಕೆ ಹೊಂದಲಾರದು. ಅಂದರೆ ಶರಣರೆಲ್ಲರೂ, ಅವರು ಗಂಡಾಗಲಿ, ಹೆಣ್ಣಾಗಲಿ ತಾವೆಲ್ಲ ಸತಿಯರು, ಆ ದೇವರು ಅಥವಾ ಶಿವನೊಬ್ಬನೇ ನಿಜವಾದ ಗಂಡು ಎಂಬ ಈ 'ಶರಣ ಸತಿ ಲಿಂಗ ಪತಿ' ಎಂಬ ಕಲ್ಪನೆಯು ಲೌಕಿಕ ದಾಂಪತ್ಯ ಜೀವನವನ್ನು ಮೌಲಿಕವಾದ ಒಂದು ನೆಲೆ ಎಂದು ಅಂಗೀಕರಿಸಿದ ವೀರಶೈವ ಧರ್ಮದ ಆಚರಣೆಯಲ್ಲಿ ಎಷ್ಟರಮಟ್ಟಿಗೆ ಒಂದು ತಾತ್ವಿಕ ನಿಲುವಾಗಿ ಸಲ್ಲಬಲ್ಲದೋ ಎಂಬ ಬಗ್ಗೆ ನನಗೆ ತೀರಾ ಅನುಮಾನಗಳಿವೆ.* ಅದರ ಬದಲು ಭಕ್ತ ಭಗವಂತ ಅಥವಾ ಶರಣ ಮತ್ತು ಲಿಂಗ ಈ ಸಂಬಂಧವೇ ಇಲ್ಲಿ ಹೆಚ್ಚು ಸುಗಮ ವಾಗುವಂತೆ ತೋರುತ್ತದೆ. ಆದರೂ ಪ್ರಾಸಂಗಿಕವಾಗಿ ಭಕ್ತನಾದವನು ಸತಿಭಾವವನ್ನು ಆರೋಪಿಸಿಕೊಂಡು ಸಾಧನೆಯಲ್ಲಿ ತೊಡಗಿದ ನಿದರ್ಶನಗಳು ಉಂಟು. ಬಸವಣ್ಣ ನವರಲ್ಲಿಯೂ ಅವರು ಈ ಭಾವದಲ್ಲಿ ನಿಂದ ಮನಃಸ್ಥಿತಿಯನ್ನು ಉಲ್ಲೇಖಿಸುವ ಒಂದೆರಡು ವಚನಗಳುಂಟು.[೫] ಉರಿಲಿಂಗ ದೇವ, ಗಜೇಶ ಮಸಣಯ್ಯ ಇಂಥ ಕೆಲವರು 'ಶರಣಸತಿ ಲಿಂಗಪತಿ' ಭಾವದಲ್ಲಿಯೆ ತಮ್ಮ ವ್ಯಕ್ತಿತ್ವವನ್ನು ನಿಲ್ಲಿಸಿ ಕೊಂಡುಬರೆದ ವಚನಗಳು ಇವೆ. ಆದರೆ ವಾಸ್ತವವಾಗಿ 'ಶರಣಸತಿ ಲಿಂಗಪತಿ' ಎಂಬ ನಿಲುವು ಈಗಾಗಲೇ ಹೇಳಿದಂತೆ ಹೆಣ್ಣಿನ ವ್ಯಕ್ತಿತ್ವ ಹಾಗೂ ಮನಃಸ್ಥಿತಿಗೆ ಹೆಚ್ಚು ಅನುಕೂಲಕರವಾದದ್ದು. ಈ ದೃಷ್ಟಿಯಿಂದ ಅಕ್ಕಮಹಾದೇವಿಗೆ ಈ ನಿಲುವು ಸಹಜವಾಗಿದೆ. ಅನೇಕ ಶಿವಶರಣೆಯರ ನಡುವೆ ಈಕೆಯೊಬ್ಬಳೇ ತಾನು ಸತಿ, ಲಿಂಗವೇ ಪತಿ ಎಂಬ ಭಾವದಲ್ಲಿ ನಿಂದವಳು. ಇದು ಅವಳ ಅನುಭಾವಕ್ಕೆ ಉಚಿತವಾಗಿದೆ. ಏಕೆಂದರೆ, ಲೌಕಿಕ ದಾಂಪತ್ಯದ ಕಲ್ಪನೆಯನ್ನು ನಿರಾಕರಿಸಿ ತನ್ನ ಅನುಭಾವದ ಗಮ್ಯವಾದ 'ಗಂಡನ' ಅನ್ವೇಷಣೆಯಲ್ಲಿ ಹೊರಟವಳು ಅವಳು. ಇದರಿಂದಾಗಿ ತನ್ನ ಹಾಗೂ ಚೆನ್ನಮಲ್ಲಿಕಾರ್ಜುನನ ಸಂಬಂಧವೇ ಅವಳ ಅನುಭಾವದ ಮೂಲನೆಲೆಯಾಗಿದೆ. ಈ ಸಂಬಂಧ, ಈ ಹೊತ್ತಿನದಲ್ಲ. ನಿನ್ನೆಯದಲ್ಲ. ಅನಂತಕಾಲದ್ದು. ಇದು 'ಹರನೇ ನೀನೆನಗೆ ಗಂಡನಾಗಬೇಕೆಂದು ಅನಂತ ಕಾಲ ತಪಿಸಿದ್ದೆ ನೋಡಾ' ಎಂಬ ಅವಳ ಉಕ್ತಿಯಲ್ಲಿ ಸೂಚಿತ ವಾಗಿದೆ. ತಾತ್ವಿಕವಾಗಿ ನೋಡಿದರೆ, ಜೀವ ಹಾಗೂ ದೇವರ ಸಂಬಂಧ ಸನಾತನವಾದದ್ದು. ಅಕ್ಕ ಈ ತಾತ್ವಿಕ ನೆಲೆಯ ಜೀವಂತ ವ್ಯಾಖ್ಯಾನದಂತೆ ಇದ್ದಾಳೆ. ಈ ದೃಷ್ಟಿಯಿಂದ ಮಹಾದೇವಿ ಹರನ ಸನಾತನ ಸಂಗಾತಿಯ ಪ್ರತೀಕವಾಗಿದ್ದಾಳೆ. ಯಾವಾಗ ಈಕೆ ತನ್ನ ಹಾಗೂ ತನ್ನ ದೇವ ಪತಿಯ ಸನಾತನ ಸಂಬಂಧವನ್ನು ಗುರುತಿಸಿ ಕೊಳ್ಳುತ್ತಾಳೆಯೋ ಆಗ ಸಹಜವಾಗಿಯೇ ಈ ಲೋಕದ ಸಾಂಪ್ರದಾಯಿಕ ವೈವಾಹಿ ಸಂಬಂಧದ ಮೂಲಕ ಏರ್ಪಡುವ ದಾಂಪತ್ಯ ಅರ್ಥಹೀನವಾಗುತ್ತದೆ. 'ಇಹಕ್ಕೊಬ್ಬ ಗಂಡನೆ ಪರಕ್ಕೊಬ್ಬ ಗಂಡನೆ ?' (ವ.೯೧) ಎಂಬ ಅವಳ ಪ್ರಶ್ನೆ ಈ ನಿಲುವಿಗೆ ಸಹಜವಾಗಿಯೇ ಇದೆ. ಈ ಲೋಕದ ಗಂಡರು 'ಸಾವಕೆಡುವ' ಗಂಡರಾಗಿ ಕಾಣುತ್ತಾರೆ. ಇದಕ್ಕೆ ಬದಲಾಗಿ ಆಕೆ ತನ್ನ ಸನಾತನ ಪತಿಯಾದ 'ಸಾವಿಲ್ಲದ ಕೇಡಿಲ್ಲದ' ಪುರುಷನಿಗಾಗಿ ಹಂಬಲಿಸುತ್ತಾಳೆ. ಆದ ಕಾರಣವೇ ಸಂದರ್ಭದ ಬಲದಿಂದ ಕೌಶಿಕನೊಂದಿಗೆ ಒದಗಿದ ಅವಳ ಒಲ್ಲದ ಮದುವೆ ಅವಳ ಪಾಲಿಗೆ ಹರಿಹರನು ವರ್ಣಿಸುವಂತೆ 'ವಿಷಮ ಸುಖ ಸಂಪತ್ ಸಂಯೋಗ ಸನ್ನಿಧಿ'ಯಾಗಿ ಮುರಿದುಬಿತ್ತು.[+]

ಅಕ್ಕ ತನ್ನ ಹಲವಾರು ವಚನಗಳಲ್ಲಿ ಅನುಭಾವಿಕ ನೆಲೆಯಲ್ಲಿ ತನಗೆ ಆಗಲೇ ಮದುವೆ ಯಾಗಿರುವ ಸಂಗತಿಯನ್ನು ಹೇಳಿಕೊಂಡಿದ್ದಾಳೆ.[೬] ಚೆನ್ನಮಲ್ಲಿಕಾರ್ಜುನನೆಂಬ ಗಂಡನೊಡನೆ ಎಂದೋ ಮದುವೆಯಾದ ಈ ಹೆಣ್ಣು, ಈ ಭವದ ಹಾದಿಯಲ್ಲಿ ತನ್ನ ಗಂಡನನ್ನು ಹುಡುಕಿ

ಕೊಂಡು ಆತನಿರುವಲ್ಲಿಗೆ ಹೊರಟಿದ್ದಾಳೆ. ತಾನು ಅನಂತ ಕಾಲದಿಂದ ಒಲಿದ ಹಾಗೂ ಮದುವೆಯಾದ ಗಂಡನನ್ನು ಹುಡುಕಿಕೊಂಡು ಹೊರಟ ರೀತಿಯೇ ಅಕ್ಕನ ಅನುಭಾವಿಕ ಅನ್ವೇಷಣೆಯ ಒಂದು ಪ್ರತೀಕವಾಗಿದೆ. ಪರಿಸ್ಥಿತಿ ಹೀಗಿರುವಾಗ ಆಕೆ ದಾಂಪತ್ಯ ಲೌಕಿಕ ಜೀವನದ ಲೌಕಿಕ ಕಲ್ಪನೆಯನ್ನು ನಿರಕರಿಸಿದ್ದು ತೀರ ಸಹಜವಾಗಿದೆ. ಆದರೆ 'ಸತಿಪತಿ ಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ' ಎನ್ನುತ್ತಾ ಲೌಕಿಕ ದಾಂಪತ್ಯ ಜೀವನವನ್ನು ಆಧ್ಯಾತ್ಮ ಸಾಧನೆಗೆ ವಿರೋಧವಲ್ಲವೆಂದು ಒಪ್ಪಿಕೊಂಡ ಅಂದಿನ ಶರಣ ಧರ್ಮದ ಸಾಮಾಜಿಕ ನಿಲುವಿಗೆ ಅಕ್ಕನ ನಿಲುವು ಒಂದು ವ್ಯಕ್ತಿನಿಷ್ಠವಾದ ಪ್ರತಿಕ್ರಿಯೆಯೋ ಎಂಬಂತೆ, ಪ್ರತ್ಯೇಕ ವಾಗಿಯೇ ಎದ್ದುಕಾಣುತ್ತದೆ. ಆದರೆ ಆ ಕಾರಣಕ್ಕೆ ಅಕ್ಕ ಲೌಕಿಕ ಸಾಂಸಾರಿಕ ಜೀವನ ವಿಧಾನವನ್ನು ಹಗುರವಾಗಿ ನೋಡುವುದಿಲ್ಲ. ಆಕೆ ಹೇಳುತ್ತಾಳೆ –

ಹಾವಿನ ಬಾಯ ಹಲ್ಲ ಕಳೆದು
ಹಾವನಾಡಿಸಬಲ್ಲಡೆ ಹಾವಿನ ಸಂಗವೇ ಲೇಸು ಕಂಡಯ್ಯ

..

ಚೆನ್ನಮಲ್ಲಿಕಾರ್ಜುನ ನೀನೊಲಿದವರು

ಕಾಯಗೊಂಡಿದ್ದರೆನ ಬೇಡ (ವ ೧೫೭. ಎಲ್. ಬಸವರಾಜು)

ಎಂದರೆ ಸಂಸಾರ ಎನ್ನುವುದು ತ್ಯಾಜ್ಯವೇನಲ್ಲ. ಆದರೆ ಅದು ವಿಷದ ಹಲ್ಲುಗಳಿರುವ ಸರ್ಪವೆಂಬ ಅರಿವಿರಬೇಕು. ಈ ಹಾವಿನ ಬಾಯ ಹಲ್ಲುಗಳನ್ನು, ಅಂದರೆ ಕಾಮಕ್ರೋದಾದಿ ಗಳನ್ನು, ಕಿತ್ತುಹಾಕಿ ಬದುಕುವುದಾದರೆ ಹಾವಿನ ಸಂಗವೇ ಲೇಸು. ಆದರೆ ಸಂಸಾರವನ್ನು ಹೀಗೆ ಗೆದ್ದು ಬದುಕಲು ಚೆನ್ನಮಲ್ಲಿಕಾರ್ಜುನನ ಒಲುಮೆ ಅಗತ್ಯ. ಆದ ಕಾರಣ ನಿಜವಾದ ಭಕ್ತನಾಗಿ ಸಂಸಾರದಲ್ಲಿ ಬದುಕುವವರೂ ಗೌರವಾರ್ಹರೇ ಎಂಬುದು ಅಕ್ಕನ ನಿಲುವು. ಮತ್ತು ತನ್ನ ದಾರಿಯೆ ಬೇರೆ ಎಂಬುದನ್ನು ಕಂಡುಕೊಂಡ ಅಕ್ಕ, ತಾನು ಹಿಡಿದ ದಾರಿಯೇ ಸರಿ, ಆದ ಕಾರಣ ಉಳಿದವರು ಅದನ್ನು ಅನುಸರಿಸಬೇಕೆಂದು ಎಂದೂ ಹೇಳಲಿಲ್ಲ. ಏಕೆಂದರೆ ಆಧ್ಯಾತ್ಮ ಸಾಧನೆ ಎಂಬುದು ಮೂಲತಃ ವೈಯಕ್ತಿಕವಾದದ್ದು.

ತನ್ನ ಇಷ್ಟ ದೈವವನ್ನು ತನ್ನ ಗಂಡನೆಂದು ಭಾವಿಸಿದ ಅಕ್ಕನ ದೈವದ ಕಲ್ಪನೆ ಅಂದಿನ ವೀರಶೈವ ಧರ್ಮದ 'ಲಿಂಗ'ದ ಕಲ್ಪನೆಯಿಂದ ಭಿನ್ನವಾಗಿದೆ. ಆಕೆಯ ದೈವವಾದ ಚೆನ್ನಮಲ್ಲಿಕಾರ್ಜುನ ಪರಮ ಸಾಕಾರ ಸುಂದರಮೂರ್ತಿ. ಅಕ್ಕ ಆಗಾಗ 'ರೂಹಿಲ್ಲದ ಚೆಲುವ'ನೆಂದು ಅವನನ್ನು ವರ್ಣಿಸಿದರೂ ಅವಳ ಕಣ್ಣಿಗೆ ಮುಖ್ಯವಾಗಿ ಆತ ಸೌಂದರ್ಯದ ಮೂರ್ತಿಯೇ ಹೊರತು, ವೀರಶೈವದ 'ಇಷ್ಟಲಿಂಗ' ಪ್ರತಿನಿಧಿಸುವ ನಿರಾಕಾರಕ್ಕೆ ಸಮೀಪವಾದ ಸಂಕೇತವಲ್ಲ. ಏಕೆಂದರೆ ದೈವವನ್ನು ಗಂಡೆಂದು ಅಥವಾ ಗಂಡನೆಂದು ಕಲ್ಪಿಸಿಕೊಂಡ ಅಕ್ಕನ ಕಣ್ಣಿಗೆ, ಆತ ಸರ್ವೇಂದ್ರಿಯ ಸಾಕಾರ ಸುಂದರನಾಗಿಯೇ ಕಾಣುತ್ತಾನೆ.[೭] ಆತನೊಂದಿಗೆ ಈಕೆ ಒಂದಾಗುವ ಸ್ಥಿತಿ ಕೇವಲ 'ಬಯಲ' ಅಥವಾ ಬೆಳಕಿನ ಅಥವಾ ಕೇವಲ ಜ್ಯೋತಿಯ ಸ್ಥಿತಿ ಮಾತ್ರವಾಗದೆ ಅದು ಉತ್ಕಟವಾದ ಪ್ರಣಯಾನುಭವವಾಗಿದ್ದು, ಶೃಂಗಾರದ ರೂಪಕಗಳ ಮೂಲಕವಾಗಿಯೇ ವರ್ಣಿತವಾಗಿದೆ.

ಅಕ್ಕನ ಅನುಭಾವ ಚೆನ್ನಮಲ್ಲಿಕಾರ್ಜುನನನ್ನು ಕುರಿತ ಕನಸು, ಹಂಬಲ ಹಾಗೂ ತಳಮಳಗಳ ರೂಪದ ಅನ್ವೇಷಣೆಯ ಸ್ಥಿತಿಯಾಗಿರುವುದರಿಂದ, ಮುಖ್ಯವಾಗಿ ಆಕೆಯದು

ಗಾಢವಾದ ಅಂತರ್ಮುಖ ಪ್ರವೃತ್ತಿಯಾಗಿದೆ. ಬಸವಣ್ಣನವರದು ಮುಖ್ಯವಾಗಿ ಸಮಾನ ಕ್ಷೇಮ ಕಾತರವಾದ ಬಹಿರ್ಮುಖ ಪ್ರವೃತ್ತಿ; ಅಲ್ಲಮನದಾದರೋ ಇದ್ದೂ ಇಲ್ಲದಂತಹ ನೆಲೆಯಲ್ಲಿ ಸಂಚರಿಸುತ್ತಾ, ಈ ಎಲ್ಲವನ್ನೂ ಮೀರಿದ ಒಂದು ಊರ್ಧ್ವಮುಖ ಪ್ರವೃತ್ತಿ ಅಕ್ಕನದು ಅಂತರ್ಮುಖ ಪ್ರವೃತ್ತಿಯಾದುದರಿಂದ ಸಮಾಜ ಸುಧಾರಣಾ ಪರವಾದ ಕಾಳಜಿಗಳು ಅವಳಲ್ಲಿ ಅಷ್ಟಾಗಿ ಕಾಣಿಸುವುದಿಲ್ಲ. ಆಕೆ ತನ್ನೊಂದಿಗೆ ತಾನು ಮಾತನಾಡಿಕೊಂಡಿದ್ದೇ ಅದ್ಭುತವಾದ ಭಾವಗೀತೆಯ ಗುಣವನ್ನು ಪ್ರಕಟಿಸುತ್ತದೆ. ಆಗಾಗ ಆಕೆ ಲೋಕದೊಂದಿಗೆ ಮಾತನಾಡಿದರೂ ಅದು ತನ್ನ ಧೈರ್ಯಕ್ಕೆ, ಸಮಾಧಾನಕ್ಕೆ ಹಾಗೂ ತನ್ನ ನಡೆವಳಿಕೆಯ ಸಮರ್ಥನೆಗೆ, ತಾನೊಲಿದ ಗಂಡನೊಂದಿಗೆ ತನಗೆ ಒದಗಿದ ವಿರಹ ಹಾಗೂ ಆತನೊಂದಿಗೆ ತಾನು ಒಂದಾಗುವ ಉತ್ಕಟವಾದ ಹಂಬಲದ ಪ್ರಯಾಣದ ಉದ್ದಕ್ಕೂ ಅವಳ ಆಡು ಮಾತೆಲ್ಲ ಭಾರತೀಯ ಪ್ರೇಮ ಕಾವ್ಯದ ವಿರಹಗೀತೆಗಳ ಮಾದರಿಗಳಂತಿವೆ.[೮] ಅವಳ ವಚನಗಳಲ್ಲಿ ಉತ್ಕಟವಾದ ಶೃಂಗಾರಭಾವದ ಅನೇಕ ಕ್ಷಣಗಳು ದಾಖಲಾಗಿವೆ. ಈ ಅರ್ಥದಲ್ಲಿ ಅಕ್ಕಮಹಾದೇವಿ ಕನ್ನಡದ ಮೊದಲ ಹಾಗೂ ಮೊದಲ ದರ್ಜೆಯ ಕವಯಿತ್ರಿಯಾಗಿದ್ದಾಳೆ.

ಅಕ್ಕ ಏಕಾಂಗಿಯಾದ, ಆದರೆ ನಿಜವಾಗಿಯೂ ಧೀರಳಾದ ಹೆಣ್ಣು.[೯] ಲೋಕದ ನಿಂದೆ, ಅಪವಾದ ಇತ್ಯಾದಿಗಳ ಬಗ್ಗೆ ಒಂದಿಷ್ಟೂ ತಲೆಕೆಡಿಸಿಕೊಂಡವಳಲ್ಲ. ನಿಜವಾದ ಆಧ್ಯಾತ್ಮ ಸಾಧಕರಲ್ಲಿ ಕಂಡುಬರುವ ನಿರ್ಭಯತೆ ಆಕೆಯ ವ್ಯಕ್ತಿತ್ವದ ಲಕ್ಷಣವಾಗಿದೆ. ಆದರೆ ಆಕೆಯ ಈ ಧೈರ್ಯ ಲೋಕದ ಲಜ್ಜೆಯ ಗಡಿಯನ್ನು ದಾಟುವ ದಿಗಂಬರತ್ವ ಅಥವಾ ಬತ್ತಲೆತನ ವನ್ನು ಕೈಗೊಳ್ಳುವಷ್ಟು ಮುಂದುವರಿದಿತ್ತೆ ಅಥವಾ ಬೇರೆ ಮಾತಿನಲ್ಲಿ ಹೇಳುವುದಾದರೆ ಅನೇಕರು ಭಾವಿಸಿರುವಂತೆ ಅಕ್ಕ ಬಟ್ಟೆಯ ಹಂಗನ್ನು ಕಿತ್ತೊಗೆದು, ಕೇಶರಾಶಿಯಿಂದ ದಿಗಂಬರತ್ವವನ್ನು ಮರೆಮಾಡಿಕೊಂಡು ಸಂಚರಿಸಿದಳೆ ಎನ್ನುವ ಸಂಗತಿ ತುಂಬ ವಿಲಕ್ಷಣವಾದುದು ನಮ್ಮ ಮಟ್ಟಿಗೆ ಹೇಳುವುದಾದರೆ ಇದೊಂದು ತೀರಾ ಅಸಂಭಾವ್ಯವೂ, ಅಸಂಬದ್ಧವೂ ಆದ ಕಲ್ಪನೆ ಯಾಗಿದೆ. ಹನ್ನೆರಡನೆಯ ಶತಮಾನದಷ್ಟು ಹಿಂದಿನ ಆ ಪರಿಸರದಲ್ಲಿ ಹೆಣ್ಣೊಬ್ಬಳು ಅವಳೆಂಥ ಅನುಭಾವಿಯಾಗಿದ್ದರೂ, ಬೆತ್ತಲೆಯಾಗಿ, ಕೂದಲನ್ನು ಮರೆಮಾಡಿಕೊಂಡು ಸಂಚರಿಸಿದಳೆಂಬುದು ಅತ್ಯಂತ ಅಸಂಗತವೂ, ಅನುಚಿತವೂ ಆದ ಭ್ರಮಾಕಲ್ಪನೆಯಾಗಿ ಮಾತ್ರ ತೋರುತ್ತದೆ. ಈ ನಡೆವಳಿಕೆ ವೀರಶೈವ ಧರ್ಮಕ್ಕೆ ಸಂಪೂರ್ಣ ವಿರುದ್ಧ ಮಾತ್ರವಲ್ಲದೆ ವೈಯಕ್ತಿಕವಾಗಿ ಮತ್ತು ಸಾಮಾಜಿಕವಾಗಿ ಕೂಡ ಹೆಣ್ಣಿಗೆ ಕ್ಷೇಮಕರವಾದದ್ದಲ್ಲ.

ಈ ಕುರಿತು ಮೊದಲು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾದುದು ಅಂಥ ಸಮಕಾಲೀನ ವಚನಕಾರ್ತಿಯರ ಪ್ರತಿಕ್ರಿಯೆಗಳನ್ನು ಅಕ್ಕನ ಸಮಕಾಲೀನರಾದ ಯಾವ ವಚನಕಾರ್ತಿಯರ ಯಾವ ವಚನಗಳಲ್ಲಿಯೂ ಈ ಕುರಿತು ಒಂದಾದರೂ ಪ್ರತಿಕ್ರಿಯೆ ದಾಖಲಾಗಿಲ್ಲವಲ್ಲ! ಹಾಗೆಯೇ ಇತರ ಅನೇಕ ವಚನಕಾರರ ವಚನಗಳಲ್ಲಿ ಅವಳ ಬತ್ತಲೆತನದ ಬಗ್ಗೆ ಒಂದಾದರೂ ಉಲ್ಲೇಖಗಳಿಲ್ಲವಲ್ಲ.*

ಅಕ್ಕನ ಸಮಕಾಲೀನರಾದ ಪ್ರಮುಖ ವಚನಕಾರರ ಹಾಗೂ ವಚನಕಾರ್ತಿಯರ ಅನಂತರ ಅಕ್ಕನ ಬದುಕನ್ನು ಕುರಿತು ಮೊಟ್ಟ ಮೊದಲ 'ಮಹಾದೇವಿಯಕ್ಕಗಳ ರಗಳೆ' ಎಂಬ ಕಾವ್ಯವನ್ನು ಬರೆದ ಹರಿಹರನು ಕೂಡ ಆಕೆ ಬತ್ತಲೆಯಾಗಿ ನಡೆದಳೆಂದು ಹೇಳಿಲ್ಲ. ಆದಿ ಹರಿಹರನೊಬ್ಬನ ಹೊರತು ಮುಂದಿನವರೆಲ್ಲರೂ ಆಕೆ ದಿಂಗಬರಳಾಗಿದ್ದಳೆಂದೂ, ಕೂದಲಿನಿಂದ ತನ್ನ

ಮೈಯನ್ನು ಮರೆ ಮಾಡಿಕೊಂಡಿದ್ದಳೆಂದೂ ವರ್ಣಿಸಿದ್ದಾರೆ. ಆದರೆ ಈ ಸಂಗತಿಯನ್ನು ಕುರಿತು ಹರಿಹರನ ಕಾವ್ಯದ ಸಂದರ್ಭವೇ ಈ ಬಗೆಯ ತಪ್ಪು ಗ್ರಹಿಕೆಗೆ ಆಸ್ಪದವನ್ನು ಕಲ್ಪಿಸುವಷ್ಟು ಸಂದಿಗ್ಧವಾಗಿದೆ ಎಂಬುದನ್ನು ತಳ್ಳಿಹಾಕುವಂತಿಲ್ಲ. ಅಕ್ಕ ಮೂರು ಷರತ್ತುಗಳ ಮೇರೆಗೆ ಕೌಶಿಕನನ್ನು ಮದುವೆಯಾಗಿ, ಅವನೊಡನೆ ಅರಮನೆಯಲ್ಲಿ ಕೆಲವು ಕಾಲ ಇದ್ದಳೆಂದು ಚಿತ್ರಿಸುವ ಹರಿಹರ, ಮೂರೂ ಷರತ್ತುಗಳನ್ನೂ ಉಲ್ಲಂಘಿಸಿದ ಕೌಶಿಕನ ಸಹವಾಸವನ್ನು ಮಹಾದೇವಿ ಬಿಟ್ಟು ಹೊರಟ ಸಂದರ್ಭವನ್ನು ಕುರಿತು ಹೀಗೆ ವರ್ಣಿಸಿದ್ದಾನೆ: ಒಂದು ದಿನ ಅರಮನೆಗೆ ಮಹಾದೇವಿಯ ಆರಾಧ್ಯ ದೇವರಾದ ಗುರುಗಳು ಬಂದಾಗ, ಸೆಜ್ಜೆ ಮನೆಯಿಂದ ಸಂಭ್ರಮದಿಂದ ನಮಸ್ಕರಿಸಲು ಧಾವಿಸಿದ ಮಹಾದೇವಿಗೆ ಗುರುಗಳು 'ಮಗಳೇ ದುಕೂಲಮಂ ಬಾಸಣಿಸಿಕೊಳ್' (ಮಗಳೆ ಬಟ್ಟೆಯನ್ನುಟ್ಟುಕೋ) ಎನ್ನಲಾಗಿ, ಆಕೆ ತನ್ನ ವಸ್ತ್ರಗಳ ಕಡೆ ಕೈಚಾಚಿದಾಗ ಕೌಶಿಕನು 'ತೆಗೆ ತೆಗೆ ನಿನಗೇನ್ ಅತ್ಯಂತ ಭಕ್ತೆಗೆ, ಮೀರಿದ ವಿರಕ್ತೆಗೆ ಸೀರೆಯೇಕೆಂದು ಕೈಯ್ಯ ದುಕೂಲಮಂ ಸೆಳೆಯಲು, ಹಾ ಮೂರು ತಪ್ಪು ತೀರ್ದುದು ಎನ್ನಿಚ್ಛೆ ಸಾರ್ದುದು, ಭವಿಸಂಗವೊಳಸೋರ್ದುದು ವಿರಕ್ತಿ ನಿಮಿರ್ದುದು ನಿಷ್ಠೆಯುಳಿದುದು ಬರ್ದುಂಕಿದೆನ್ ಬರ್ದುಂಕಿದೆನ್ ಎನ್ನುತ್ತೆ ಆಶಾರಹಿತೆ ಕೇಶಾಂಬರಿಯಾಗಿ ತಿರುಗಿ ಬಂದು ಧವಳಾರದೊಳಗಿರ್ದ ಚೆನ್ನಮಲ್ಲಿಕಾರ್ಜುನನ ಕರಸ್ಥಳದೊಳ್ ಬಿಜಯಂಗೆಯ್ಸಿಕೊಂಡು... ಮಹಾದೇವಿ ಪುರಮಂ ಪೊರಮಟ್ಟು ಶ್ರೀ ಪರ್ವತಾಭಿಮುಖಿಯಾದಳ್[೧೦]

ಹರಿಹರನ ಅನಂತರ ಶರಣರ ವಚನಗಳ ಆಧಾರದಿಂದ ಶೂನ್ಯ ಸಂಪಾದನೆಯನ್ನು ಕಟ್ಟುವ ಅದ್ಭುತ ನಾಟಕೀಯ ತಂತ್ರವನ್ನು ಆವಿಷ್ಕಾರ ಮಾಡಿದ, ಮೊದಲ 'ಶೂನ್ಯ ಸಂಪಾದನಕಾರ'ನಾದ ಶಿವಗಣ ಪ್ರಸಾದಿ ಮಹದೇವಯ್ಯನು (ಸು. ೧೪೬೦) ಅಕ್ಕಮಹಾದೇವಿಯು ಕಲ್ಯಾಣಕ್ಕೆ ಬಂದ ಸಂದರ್ಭವನ್ನು ಚಿತ್ರಿಸುತ್ತ –

> **'ದಿಗಂಬರದುಡಿಗೆಯನುಟ್ಟು ಕೇಶವೆಂಬ ಅಂಬರವಂ ಮುಸುಕಿಟ್ಟು**
> **ಕರಸ್ಥಳದೊಳಿರ್ಪ ಇಷ್ಟಲಿಂಗದೊಳು ದೃಷ್ಟಿನಟ್ಟು, ಭಾವಕಱಿ**
> **ಗೊಂಡು ಲೌಕಿಕದ ಲಜ್ಜಾಭಿಮಾನಮಂ ತೊಱೆದು**
> **ಭವಸಾಗರಮಂ ದಾಂಟಿ ಚೆನ್ನಮಲ್ಲಿಕಾರ್ಜುನನ**
> **ವಿಕಳಾವಸ್ಥೆಯೊಳು ತನ್ನ ಮಱೆದು**[೧೧]

ಎಂದು ವರ್ಣಿಸುತ್ತಾನೆ. ಹರಿಹರನಲ್ಲಿ ಆಕೆ ಶಯ್ಯಾಗೃಹದಲ್ಲಿ ಬೆತ್ತಲೆಯಾಗಿದ್ದುದು, ಅನಂತರ ಕೌಶಿಕ ತೆಗೆತೆಗೆ ನಿನಗೆ ಸೀರೆಯೇಕೆ ಎಂದದ್ದು ಆಮೇಲೆ ಆಕೆ 'ಕೇಶಾಂಬರಿಯಾಗಿ ತಿರುಗಿ ಬಂದು' ಇಷ್ಟಲಿಂಗವನ್ನು ಕೈಗೆತ್ತಿಕೊಂಡು ಪುರವನ್ನು ಬಿಟ್ಟು ಶ್ರೀಶೈಲಾಭಿಮುಖವಾಗಿ ಹೊರಟಿದ್ದು ಇದೆಲ್ಲವೂ, ಶಿವಗಣ ಪ್ರಸಾದಿ ಮಹಾದೇವಯ್ಯನ ಗ್ರಹಿಕೆಯಲ್ಲಿ ತಪ್ಪಾಗಿ ಭಾವಿತನಾಗಿ, ಅಕ್ಕ 'ದಿಗಂಬರದುಡಿಗೆಯನುಟ್ಟು ಕೇಶವೆಂಬ ಅಂಬರಮಂ ಮುಸುಕಿಟ್ಟು' ಬಂದಳೆಂಬ ವರ್ಣನೆಯಾಗಿ ಮಾರ್ಪಟ್ಟು ಮುಂದಿನ ಕೃತಿಕಾರರನ್ನು ದಾರಿ ತಪ್ಪಿಸಿತೆಂದು ತೋರುತ್ತದೆ. ಮುಂದಿನ ಎಲ್ಲರೂ ಅಕ್ಕ ದಿಗಂಬರೆಯಾಗಿ, ಕೇಶ ಮುಸುಕಿ ಸಂಚರಿಸಿದಳೆಂದೇ ಚಿತ್ರಿಸಿದರು. ಮುಂದಿನ ಶೂನ್ಯ ಸಂಪಾದನಕಾರರು ಕಲ್ಯಾಣದ ಅನುಭವ ಮಂಟಪಕ್ಕೆ ಹೀಗೆ ದಿಗಂಬರೆಯೂ ಕೇಶಾಂಬರೆಯೂ ಆಗಿ ಬಂದ ಅಕ್ಕನನ್ನು, ... ನಾನಾ ಬಗೆಯಲ್ಲಿ ಪ್ರಶ್ನೆ ಮಾಡಿ, ನೀನು ನಿಜವಾಗಿಯೂ ಅನುಭಾವಿಯಾದ ಪಕ್ಷದಲ್ಲಿ ಹೀಗೆ ಕೂದಲನ್ನು ಏಕೆ

ಮರೆಮಾಡಿದ್ದೀಯ ಎಂದು ಕೇಳಿದಂತೆಯೂ ಅದಕ್ಕೆ ಅಕ್ಕ ಸಮರ್ಪಕವಾದ ಉತ್ತರವನ್ನು ಕೊಟ್ಟಂತೆಯೂ ಅದ್ಭುತವಾದ ನಾಟ್ಯಮಯ ಸಂದರ್ಭವನ್ನು ಚಿತ್ರಿಸಿದ್ದಾರೆ. ಮುಂದೆ ಜನ ಮನದಲ್ಲಿ ಅಕ್ಕನನ್ನು ಕುರಿತು ಈ 'ಕೇಶಾಂಬರೆ'ಯಾದ ಚಿತ್ರವೇ ಸ್ಥಾಯಿಯಾಗಿ ಉಳಿದು ಬಂದಿದೆ; ಚಿತ್ರಕಾರರು ಅಕ್ಕಮಹಾದೇವಿಯನ್ನು ಹೀಗೆಯೇ ಚಿತ್ರಿಸಿದ್ದಾರೆ. ಆದರೆ ಹೆಣ್ಣೊಬ್ಬಳು ಈ ಬಗೆಯ 'ಅವಸ್ಥೆ'ಯಲ್ಲಿ ಇದ್ದಳೆಂಬುದು ಎಷ್ಟು ಸಂಭಾವ್ಯ ಹಾಗೂ ಉಚಿತ ಎಂಬುದರ ಬಗ್ಗೆ ಬಹುಜನ ಗಂಭೀರವಾಗಿ ವಿಚಾರ ಮಾಡಿದಂತೆ ತೋರುವುದಿಲ್ಲ.

ಈ ಹಿನ್ನೆಲೆಯಲ್ಲಿ ದಿವಂಗತ ಶ್ರೀ ಎಚ್. ದೇವೀರಪ್ಪನವರು ಕೆಲವು ವರ್ಷಗಳ ಹಿಂದೆ ಬರೆದ 'ಕೇಶಾಂಬರೆಯ ದಿಗಂಬರೆಯೆ' ಎಂಬ ಸಂಶೋಧನ ಬರಹವೊಂದರ ವಿಚಾರ ಸರಣಿಯನ್ನು ಗಮನಿಸುವುದು ಅಗತ್ಯವಾಗಿದೆ.[೧೩] ಅವರು ಮುಖ್ಯವಾಗಿ ಹರಿಹರನಲ್ಲಿ ಬರುವ 'ಕೇಶಾಂಬರೆ' ಎಂಬ ಮಾತನ್ನು ಅರ್ಥೈಸಿರುವ ಕ್ರಮವು ತರ್ಕಬದ್ಧವಾಗಿದೆ ಎಂಬುದು ನಮ್ಮ ಅಭಿಪ್ರಾಯವೂ ಕೂಡ. ಅಕ್ಕಮಹಾದೇವಿ ಕೌಶಿಕನ ಅರಮನೆಯನ್ನು ಬಿಟ್ಟು ಹೋಗುವುದು 'ಕೇಶಾಂಬರಿಯಾಗಿ ತಿರುಗಿ ಬಂದು, ಪರ್ವತಾಭಿಮುಖಿಯಾಗಿ ನಡೆತಂದಳ್' ಎಂಬ ವರ್ಣನೆಯಿದೆಯಷ್ಟೆ. ಕೌಶಿಕನನ್ನು ಕೊಟ್ಟ ಕೊನೆಯದಾಗಿ ತಿರಸ್ಕರಿಸಿದಾಗ, ಆಕೆ ಕೇಶಾಂಬರೆಯಾಗಿ 'ತಿರುಗಿಬಂದು' (ಅಂದರೆ ಅರಮನೆಯ ಒಂದು ಭಾಗದಿಂದ ಕೇಶಾಂಬರೆಯಾಗಿ ಹಿಂದೆ ಪೂಜಾಗೃಹಕ್ಕೆ ಬಂದು) 'ಚೆನ್ನಮಲ್ಲಿಕಾರ್ಜುನನಂ ಕರಸ್ಥಲದೊಳ್ ಬಿಜಯಂಗೈಯ್ಸಿಕೊಂಡು' ಪುರವನ್ನು ಬಿಟ್ಟು ಹೊರಟಳೆಂಬುದು ಇಲ್ಲಿನ ಉಲ್ಲೇಖವಾಗಿದೆ. 'ಕೇಶಾಂಬರೆ' ಎಂಬ ಪದಕ್ಕೆ ಕೇಶದಿಂದ ಮಾಡಿದ ಬಟ್ಟೆಯನ್ನು ಧರಿಸಿದವಳು ಎಂದು ಅರ್ಥ ಮಾಡಬೇಕಾಗುತ್ತದೆ ಎನ್ನುತ್ತಾರೆ ದೇವೀರಪ್ಪನವರು. ಇದೇ ಪದವನ್ನು ಬಳಸಲಾದ ಇನ್ನೂ ಒಂದೆರಡು ಉಲ್ಲೇಖಗಳ ಕಡೆ ಅವರು ಗಮನವನ್ನು ಸೆಳೆದಿದ್ದಾರೆ. ಹರಿಹರನ 'ಅಕ್ಕಮಹಾದೇವಿಯ ರಗಳೆ'ಯಲ್ಲಿಯೇ ಏಳನೆಯ ಸ್ಥಳದಲ್ಲಿ

ಬರುತಿರ್ದಳತಿಭಕ್ತೆಯುಡುತಡಿಯ ಮಹಾದೇವಿ
ಪರಮ ವೈರಾಗ್ಯ ರಸವೆಯ್ದೆ ತನುವಂ ತೀವಿ
ನಿಷ್ಠೆ ಪಾದದ ರಕ್ಷೆಯಾಗುತಿರೆ ನಡೆಯುತುಂ
ಉಟ್ಟ ಕೇಶಾಂಬರಂ ದಟ್ಟಯಿಸಿ ಮರೆಯುತುಂ

ಎಂಬಲ್ಲಿ 'ಉಟ್ಟ ಕೇಶಾಂಬರಂ' ಎಂಬ ಮಾತನ್ನು ಗಮನಿಸಬೇಕು. ಹಾಗೆಯೇ ಹರಿಹರನ ಕೇಶಿರಾಜ ದಂಡನಾಯಕನ ರಗಳೆ'ಯಲ್ಲಿಯೂ, ಆತ ಮಂತ್ರಿ ಪದವಿಯನ್ನು ತ್ಯಜಿಸಿ ಹೊರಟ ಸಂದರ್ಭವನ್ನು ಚಿತ್ರಿಸುವಾಗ –

ಆಸೆಗೆಡಗೊಡದೆ ತನ್ನಯ ವಸ್ತ್ರಮಂಬಿಟ್ಟು
ಆಶಾಂಬರನ ಸುತಂ ಕೇಶಾಂಬರವನುಟ್ಟು

ಎಂಬ ವರ್ಣನೆಯಿದೆ ಈ ಎರಡೂ ಸಂದರ್ಭಗಳಲ್ಲಿಯೂ 'ಕೇಶಾಂಬರ' ಎಂದರೆ ಕೇಶದಿಂದ ಅಂದರೆ, ಉಣ್ಣೆಯ ನೂಲಿನಿಂದ ಮಾಡಿದ ಬಟ್ಟೆ ಅಥವಾ ಗೊಂಗಡಿ ಅಥವಾ ಕರಿಯ ಕಂಬಳಿಯ ನಿಲುವಂಗಿ ಎಂದು ಅರ್ಥವೇ ಹೊರತು, ಕೂದಲನ್ನು ಮರೆ ಮಾಡಿಕೊಂಡ ಬೆತ್ತಲೆಯ ಸ್ಥಿತಿ ಎಂದು ಅರ್ಥವಾಗುವುದಿಲ್ಲವೆಂದು ದೇವೀರಪ್ಪನವರು ವ್ಯಾಖ್ಯಾನಿಸುತ್ತಾರೆ. ಈಗಲೂ ಹಿಮಾಲಯದ ಪರಿಸರದಲ್ಲಿ ಕರಿಯ ಕಂಬಳಿಯ ನಿಲುವಂಗಿ ತೊಟ್ಟ ಸಾಧು

ಗಳಿದ್ದಾರೆ. 'ಕಾಳಿ ಕಂಬಳಿವಾಲಾ' ಅನ್ನುವ ಸನ್ಯಾಸಿಯ ಹೆಸರು ಇಂದಿಗೂ ಪ್ರಸಿದ್ಧವಾಗಿದೆ. ಈ ಹಿನ್ನೆಲೆಯಿಂದ ನೋಡಿದಾಗ 'ತೆಗೆ ತೆಗೆ ನಿನಗೇನು ? ಅತ್ಯಂತ ಭಕ್ತೆಗೆ, ಮೀರಿದ ವಿರಕ್ತೆಗೆ ಸೀರೆಯೇಕೆ' ಎಂದು ಕೌಶಿಕನು ವ್ಯಂಗ್ಯವಾಗಿ ಮೂದಲಿಸಿದಾಗ, ಆಕೆಗೆ ಎಲ್ಲ ವಸ್ತ್ರಗಳ ಬಗೆಗೂ ಜುಗುಪ್ಸೆಯುಂಟಾಗಿ, 'ಕೇಶಾಂಬರ'ವನ್ನು ಎಂದರೆ ಕರಿಯ ಕಂಬಳಿಯಿಂದ ಮಾಡಿದ ಉಡುಗೆಯನ್ನು ಧರಿಸಿ* ಅರಮನೆ ಹಾಗೂ ನಗರವನ್ನು ಬಿಟ್ಟು ಹೊರಟು ಬಂದಿರಬೇಕು. ಆದಕಾರಣ ಮಹಾದೇವಿ 'ಕೇಶಾಂಬರೆ'ಯಾಗಿದ್ದಳೆಂದರೆ, ತನ್ನ ಉದ್ದವಾದ ತಲೆ ಕೂದಲನ್ನು ಮರೆ ಮಾಡಿಕೊಂಡು ಬೆತ್ತಲೆಯ ಸ್ಥಿತಿಯಲ್ಲಿ ಇದ್ದಳೆಂದು ಅರ್ಥ ಮಾಡುವುದು ಸಾಂಕೇತಿಕವಾಗಿ ಗ್ರಹಿಸುವುದೂ ಅಗತ್ಯವಾಗಿದೆ.

'ಎಳೆಯಂದಿನಲ್ಲಿ ತಂದೆ ತಾಯಂದಿರ, ಯೌವನದಲ್ಲಿ ಕೈಹಿಡಿದ ಗಂಡನ, ಮುಪ್ಪಿನಲ್ಲಿ ಮಕ್ಕಳ ರಕ್ಷಣೆಯಲ್ಲಿ ಇರಬೇಕಾದ ಹೆಣ್ಣು, ಸ್ವಾತಂತ್ರ್ಯಕ್ಕೆ ಅರ್ಹಳಲ್ಲ" ಮನು ಧರ್ಮಸೂತ್ರವು ನಿಯಂತ್ರಿಸಿದ ಸಾಂಸಾರಿಕ ಚೌಕಟ್ಟನ್ನು ದಾಟಿ, ಹೆಣ್ಣಿಗೆ ಇದರಿಂದಾಗಿ ಬೇರೊಂದು ಅಸ್ತಿತ್ವವೂ ವ್ಯಕ್ತಿತ್ವವೂ ಉಂಟು ಎಂಬುದನ್ನು ತನ್ನ ವೈಚಾರಿಕತೆ ಹಾಗೂ ದಿಟ್ಟತನದ ನಡೆವಳಿಕೆಯ ಮೂಲಕ ಸಾಧಿಸಿ ತೋರಿಸಿದ ಅಕ್ಕಮಹಾದೇವಿ, ಹನ್ನೆರಡನೆಯ ಶತಮಾನದ ಶರಣರ ಚಳುವಳಿಯ ನಡುವೆ ಒಂದು ವಿಶಿಷ್ಟವೂ ವಿಭಿನ್ನವೂ ಆದ ನಿಲುವಿನ ಹೆಣ್ತನದ ಘನತೆ ಗೌರವಗಳ ಪ್ರತೀಕವಾಗಿದ್ದಾಳೆ.

---

೧. ಅಜಕೋಟಿಕೋಟಿ ವರುಷದವರೆಲ್ಲರೂ ಹಿರಿಯರೆ ?
ಹುತ್ತೇರಿ ಬೆತ್ತ ಬೆಳೆದ ತಪಸ್ವಿಗಳೆಲ್ಲರೂ ಹಿರಿಯರೆ ?
ನಡುಮುರಿದು ಗುಡುಗೂರಿ ತಲೆನಡುಗಿದವರೆಲ್ಲರೂ ಹಿರಿಯರೆ ?
ನೆರೆತರೆ ಹೆಚ್ಚಿ ಒಂದನಾಡ ಹೋಗಿ ಒಂಬತ್ತನಾಡುವ ಅಜ್ಞಾನಿಗಳೆಲ್ಲ ಹಿರಿಯರೆ ?
ಅರಿತವರು ಘನವ ಬೆರಸಿ ಹಿರಿದು ಕಿರಿದೆಂಬ ಭೇದವ ಮರೆತು
ಕೂಡಲ ಸಂಗಯ್ಯನಲ್ಲಿ ಬೆರೆಸಿ ಬೇರಿಲ್ಲದಿಪ್ಪ ಹಿರಿಯತನ ನಮ್ಮ ಮಹದೇವಿಯಕ್ಕಂಗಾಯಿತ್ತು (ವ.೩೪೦)

೨. ಆದ್ಯರ ಅರುವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ.
ಅಜಗಣ್ಣನ ಐದು ವಚನಕ್ಕೆ ಮಹದೇವಿಯ ಒಂದು ವಚನ ನಿರ್ವಚನ ಕಾಣಾ
ಕೂಡಲ ಚೆನ್ನಸಂಗಮದೇವ.... (ವ.೫೪೬)
–ಚೆನ್ನಬಸವಣ್ಣನವರ ವಚನಗಳು: ಸಂ. ಡಾ. ಆರ್.ಎಸ್. ಹಿರೇಮಠ. ಕ.ವಿ.ವಿ. ಧಾರವಾಡ

೩. ಡಾ. ಎಲ್. ಬಸವರಾಜು : ಅಕ್ಕನ ವಚನಗಳು (೧೯೭೨) ವ. ೧೪೭

೪. ಅಲ್ಲೇ. ವ. ೨೨೭

*. 'ಶರಣಸತಿಲಿಂಗಪತಿ' ಎಂಬ ಈ ಮಾತು ವೀರಶೈವ ಧರ್ಮದ ಭಕ್ತಿಯ ಸ್ವರೂಪವನ್ನು ಹೇಳುವ ಅಲಂಕಾರಿಕವಾದ ಉಕ್ತಿಯಾಗುವುದಾದರೆ ತೊಂದರೆಯಿಲ್ಲ. ಆದರೆ ಎಲ್ಲ ಶರರೂ ಗಂಡಾಗಲಿ

ಹೆಣ್ಣಾಗಲಿ ತಾವೆಲ್ಲ ಸತಿಯರೇ ಎಂಬ ಭಾವದಲ್ಲಿ ನಿಲ್ಲುವುದು ಮುಖ್ಯ ಎಂಬ ಅಭಿಪ್ರಾಯವನ್ನು ಇದು ಸೂಚಿಸುವುದಾದರೆ ಸ್ವಲ್ಪ ಗೊಂದಲಕ್ಕೆ ಕಾರಣವಾಗುತ್ತದೆ. ಈ ನುಡಿಗಟ್ಟು ವಚನ ವಾಙ್ಮಯದಲ್ಲಿ ಎಷ್ಟು ಸಲ ಬರುತ್ತದೆ ಎಂಬುದನ್ನು ಲೆಕ್ಕ ಹಾಕಿದರೆ, ಇದು ವಾಸ್ತವವಾಗಿ ಈ ಧರ್ಮದ ಮುಖ್ಯ ತಾತ್ವಿಕ ನಿಲುವು ಹೌದೇ ಅಲ್ಲವೇ ಎಂಬುದು ತಿಳಿಯುತ್ತದೆ. ಅಕ್ಕನ ವಚನಗಳಲ್ಲಿಯೇ ಕಾನಿಸುವ 'ಶರಣಸತಿ ಲಿಂಗಪತಿ' ಎಂಬ ಮತು (ವಚನ ಸಂಖ್ಯೆ ೪೭;೧೧೧. ಎಲ್. ಬಸವರಾಜು; ವಚನ ಸಂಖ್ಯೆ ೨೪೪, ಡಾ.ಆರ್.ಸಿ. ಹಿರೇಮಠ) ಇರುವ ವಚನಗಳೆಲ್ಲ ಶೂನ್ಯ ಸಂಪಾದನೆಯಿಂದ, ಲಿಂಗಚಿದಮೃತ ಬೊಧೆ ಇತ್ಯಾದಿಗಳಿಂದ ಎತ್ತಿಕೊಂಡವು. ಇನ್ನು ನಾನು ಸುಮ್ಮನೆ ಕಣ್ಣಾಡಿಸಿದ ಶಿವಶರಣೆಯರ ವಚನಗಳಲ್ಲಿ (ಅಕ್ಕನಾಗಮ್ಮನ ಒಂದು ವಚನವನ್ನು ಬಿಟ್ಟರೆ ವ ೧೬೦. ಡಾ. ಆರ್.ಸಿ. ಹಿರೇಮಠ)ಈ ನುಡಿಗಟ್ಟು ನನಗೆ ದೊರೆಯಲಿಲ್ಲ. ಸತಿಪತಿಭಾವವನ್ನು ಸ್ಥಾಯಿಯನ್ನಾಗಿಸಿಕೊಂಡ ಉರಿಲಿಂಗದೇವನಲ್ಲೂ ಇಲ್ಲ. ಆದರೆ ಬಸವಣ್ಣನವರ ವಚನ ಸಂಖ್ಯೆ ೫೦೪ ಮತ್ತು ೭೦೪ರಲ್ಲಿ (ಶಿ.ಶಿ.ಬಸವನಾಳ) ಚೆನ್ನಬಸವಣ್ಣನವರ ವಚನ ಸಂಖ್ಯೆ ೩೭೯, ೩೩೨, ೧೦೬೧, ೧೧೪೬, ೧೨೪೨, ೧೨೫೩ (ಡಾ. ಆರ್. ಸಿ. ಹಿರೇಮಠ) ಇವುಗಳಲ್ಲಿ 'ಶರಸತಿ ಲಿಂಗಪತಿ' ಎಂಬ ನುಡಿಗಟ್ಟು ಕಾಣುತ್ತದೆ.

೫. ೧) ಆರಿಸಿನವನೆ ಮಿಂದು
ಹೊಂದೊಡಿಗೆಯನೆ ತೊಟ್ಟು
ಪುರುಷನ ಒಲವಿಲ್ಲದ ಲಲನೆಯಂತಾಗಿರ್ದೆನಯ್ಯ.ವ. ೨೬೯
೨. ಗಿಳಿಯ ಹಂಜರವಿಕ್ಕಿ ಸೊಡರಿಗೆಣ್ಣೆಯನೆರೆದು
ಬರವ ಹಾರೈಸುತ್ತಿದ್ದೆನೆಲಗವ್ವಾ
ತರಗೆಲೆ ಗಿರುಕೆಂದೊಡೆ ಹೊರಗನಾನಾಲಿಸುವೆ
ಅಗಲಿದನಂದೆನ್ನ ಮನ ಧಿಗಿಲಿಂದಿತ್ತೆಲಗವ್ವಾ (೩೭೪ ವ)
(ಡಾ. ಆರ್. ಸಿ. ಹಿರೇಮಠ, ಬಸವಣ್ಣನವರ ವಚನಗಳು)

*. 'ಮಹಾದೇವಿಗೆ ಮದುವೆಯಾಯಿತೆ ಅಥವಾ ಇಲ್ಲವೇ ಎನ್ನುವ ಬಗ್ಗೆ ಅವಳನ್ನು ಕುರಿತು ಬಂದ ಬರೆಹಗಳಲ್ಲಿ ಭಿನ್ನವಾದ ನಿಲುವುಗಳಿವೆ : ಅಕ್ಕನನ್ನು ಕುರಿತು ಮೊದಲಕೃತಿ ಹರಿಹರನದು. ಆತ ಮಹದೇವಿಗೆ ಮದುವೆಯಾಯಿತೆಂದೇ ಹೇಳುತ್ತಾನೆ – ಅದು ಕೌಶಿಕನು ಮೂರು ಷರತ್ತುಗಳನ್ನು ಪಾಲಿಸಬೇಕೆಂಬ ಆಕೆಯ ಮಾತಿನ ಮೇರೆಗೆ, ಕೌಶಿಕ ಈ ಷರತ್ತನ್ನು ಮುರಿದಾಗ ಆಕೆ ಆತನನ್ನು ಬಿಟ್ಟು ಹೋಗುತ್ತಾಳೆ. ಚೆನ್ನಬಸವಾಂಕ, ಕೆಂಚವೀರಣ್ಣೊಡೆಯರ ಶೂನ್ಯ ಸಂಪಾದನೆಗಳು ಇದನ್ನೇ ಹೇಳುತ್ತವೆ.

ಆದರೆ ಚಾಮರಸನ 'ಪ್ರಭುಲಿಂಗಲೀಲೆ'ಯಿಂದ ಮೊದಲ್ಗೊಂಡು, ವಿರೂಪಾಕ್ಷ ಪಂಡಿತ ಎಳಂದೂರು ಹರೀಶ್ವರ, ಪಾಲ್ಕುರಿಗೆ ಸೋಮನಾಥ, ಹಲಗೆಯದೇವ ಹಾಗೂ ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯ ಸಂಪಾದನೆಗಳು– ಆಕೆಗೆ ಮದುವೆಯಾಗಲಿಲ್ಲವೆಂದು ಹೇಳುತ್ತವೆ.

ಈ ಎರಡೂ ಪಕ್ಷಗಳಿಗೆ ಸಮಾನವಾದ ಸಂಗತಿಯೆಂದರೆ, ಆಕೆ ಕೆಲವು ಕಾಲವಾದರೂ ಬಲವಂತ ದಿಂದ ಕೌಶಿಕನ ಅರಮನೆಯಲ್ಲಿದ್ದಳು ಎನ್ನುವುದು. ನಮ್ಮ ಮಟ್ಟಿಗೆ ಆಕೆಗೆ ಮದುವೆಯಾಯಿತೆ ಇಲ್ಲವೆ ಎಂಬುದು ಮುಖ್ಯವಾದ ಸಮಸ್ಯೆ ಅಲ್ಲ. ಅವಳು ಮದುವೆಯಾದಳೋ ಬಿಟ್ಟಳೋ ಎಂಬುದು ಅವಳ ವ್ಯಕ್ತಿತ್ವದ ಮಹತ್ವವನ್ನು ಗುರುತಿಸಲು ಮಾನದಂಡವೇನಲ್ಲ.

೬. ೧) ಪಚ್ಚೆಯ ನೆಲೆಗಟ್ಟು ಕನಕದ ತೋರಣ
ವಜ್ರದ ಕಂಬ ಪವಳದ ಚಪ್ಪರವನ್ನಿಕ್ಕಿ ಮದುವೆ ಮಾಡಿದರು
ನಮ್ಮವರೆನ್ನ ಮದುವೆಯ ಮಾಡಿದರು
ಕಂಕಣ ಕೈದಾರಗಟ್ಟಿ, ಸ್ಥಿರಸೇಸೆಯನಿಟ್ಟು
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು (ವ.೭೬.ಬ)

೨) ಚೆನ್ನಮಲ್ಲಿಕಾರ್ಜುನಯ್ಯನೆ ಗಂಡ, ಅನು ಚೆನ್ನಮಲ್ಲಿಕಾರ್ಜುನಂಗೆ ಮದವಳಿಗೆ (ವ ೭೮)

೩) ಕಂಗಳೊಳಗೆ ತೊಳಗಿ ಬೆಳಗುವ ದಿವ್ಯರೂಪವನು ಕಂಡು ಮಱಮರೆದೆನವ್ವ
ಇಂತಾಗಿ ಚೆನ್ನಮಲ್ಲಿಕಾರ್ಜುನೆನ್ನ ಮದುವಣಿಗ ಅನು ಮದುವಣುಗಿ ಕಳು ತಾಯೆ
(ವ.೧೦೧ ಬ)

೪) ಗುರುವೇ ತೆತ್ತಿಗನಾದ ಲಿಂಗವೇ ಮದುವಳಿಗನಾದೆ
ನಾನು ಮದುವಳಿಗೆಯಾದೆನು. ಇದು ಕಾರಣ ಚೆನ್ನಮಲ್ಲಿಕಾರ್ಜುನ
ಗಂಡನಾದ ಬಳಿಕ ಮಿಕ್ಕಿನ ಲೋಕದ ಗಡರ ಸಂಬಂಧ ಎನಗಿಲ್ಲವಯ್ಯಾ (ವ. ೨೫೮ ಬ)

೭. ೧) ಹೊಳೆವ ಕೆಂಜೆಡೆಗಳ ಮಏಲೆ ಎಳೆವೆಳುದಿಂಗಳು
ಫಣಿಮಣಿ ಕರ್ಣಕುಂಡಲದವನು ನೋಡವ್ವಾ
ರುಂಡಮಾಲೆಯ ಕೊರಳವನ ಕಂಡರೆ ಒಮ್ಮೆ ಬರಹೇಳವ್ವಾ (ವ.೮೬. ಬ)

೨) ಅಕ್ಕ ಕೇಳವ್ವ ನಾನೊಂದ ಕನಸ ಕಂಡೆ
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲಗೊರವನು
ಭಿಕ್ಷಕ್ಕೆ ಬಂದುದ ಕಂಡೆ (ವ.೮೭.ಬ)

೩) ಕಂಗೊಳಗೆ ತೊಳಗಿ ಬೆಳಗುವ ದಿವ್ಯ ರೂಪನ ಕಂಡು ಮಱರೆದೆನವ್ವ
ಮಣಿ ಮಕುಟದ ಫಣಿಕಂಕಣದ ನಗೆಮೊಗದ
ಸುಲಿಪಲ್ಲ ಸೊಬಗನ ಕಂಡು ಮನಸೋತೆನವ್ವಾ (ವ ೧೦೧.ಬ)

೪) ಹೊಳವೆ ಕೆಂಜಡೆಗಳ ಮಣಿಮಕುಟದ
ಒಪ್ಪುವ ಸುಲಿಪಲ್ಲ ನಗೆಮೊಗದ
ಕಂಗಳ ಕಾಂತಿಯಿಂ ಈರೇಳು ಭುವನಮಂ ಬೆಳಗುವ
ದಿವ್ಯ ಸ್ವರೂಪವ ಕಂಡೆ ನಾನು,
ಕಂಡೆನ್ನ ಕಂಗಳ ಬರ ಹಿಂಗಿತ್ತಿಂದು (ವ ೬೮.ಬ)

೮. ೧) ಚಿಲಿಪಿಲಿ ಎಂದೋದುವ ಗಿಳಿಗಳಿರಾ
ನೀವು ಕಾಣೀರೆ ನೀವು ಕಾಣಿರೆ
ಸರವೆತ್ತಿ ಪಾಡುವ ಕೋಗಿಲೆಗಳಿರಾ
ನೀವು ಕಾಣಿರೆ, ನೀವು ಕಾಣಿರೆ
ಸರವರದೊಳಗಾಡುವ ಹಂಸಗಳಿರಾ
ನೀವು ಕಾಣಿರೇ ನೀವು ಕಾಣಿರೆ
ಎರಗಿ ಬಂದಾಡುವ ತುಂಬಿಗಳಿರಾ
ನೀವು ಕಾಣಿರೆ ನೀವು ಕಾಣಿರೆ (ವ. ೭೩)

೨) ಅಳಿಸಂಕುಳವೇ ಮಾಮರನೇ ಬೆಳದಿಂಗಳೇ
ನಿಮ್ಮೆಲ್ಲರನು ಒಂದ ಬೇಡುವೆ
ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವ ಕಂಡರೆ ಕರೆದು ತೋರಿರೆ (ವ.೭೪)

೩) ಕಳವಳದ ಮನವು ತಲೆಕೆಳಗಾದುದೆವ್ವಾ
ಸುಳಿದು ಬೀಸುವ ಗಾಳಿ ಉರಿಯಾಯಿತವ್ವ
ಬಿಸಿಲು ಬೆಳದಂಗಳಾಯಿತ್ತು ಕೆಳದಿ (ವ. ೩೨೧)

೪) ಹಿಂಡನಗಲಿ ಹಿಡಿವಡೆದ ಕುಂಜರ ತನ್ನ ವಿಂಧ್ಯವ ನೆನೆವಂತೆ
ನೆನೆವೆನಯ್ಯ (ವ. ೩೧೩)

೫) ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆನವ್ವ
ಏರಿಲ್ಲದ ಗಾಯದಲ್ಲಿ ನೊಂದೆನವ್ವ (ವ. ೬೮)

(ಅಕ್ಕನ ವಚನಗಳು : ಡಾ. ಎಲ್. ಬಸವರಾಜು)

೯) ಹಸಿವಾದೊಡೆ ಭಿಕ್ಷಾನ್ನಗಳುಂಟು
ತೃಷೆಯಾದೊಡೆ ಕೆರೆ ಹಳ್ಳ ಬಾವಿಗಳುಂಟು
ಶಯನಕ್ಕೆ ಹಾಳುದೇಗುಲ ಉಂಟು
ಚೆನ್ನಮಲ್ಲಿಕಾರ್ಜುನಾ ಆತ್ಮ ಸಂಗಾತಕ್ಕೆ ನೀನೆನಗುಂಟು (ವ. ೨೨೬)
–ಆರೂ ಇಲ್ಲದವಳೆಂದು ಆಳಿಗೊಳಲು ಬೇಡ ಕಂಡಯ್ಯ
ಏನ ಮಾಡಿದರೂ ನಾನಂಜುವವಳಲ್ಲ
ತರಗೆಲೆಯ ಮೇಲೊರಗಿ ನಾನಿಹೆನು
ಸುರಗಿಯ ಮೊಲರಗಿ ನಾನಿಹೆನು (ವ. ೬೪)

* ಅಕ್ಕನ ಬತ್ತಲೆತನದ ಉಲ್ಲೇಖ ಮಾಡುವ ಇತ್ತೀಚಿನ ವಚನಗಳ ಬಗ್ಗೆ ಮುಂದೆ ಚರ್ಚಿಸಲಾಗಿದೆ. ಅಷ್ಟೇ ಅಲ್ಲ, ಅಕ್ಕನ ವಚನಗಳಲ್ಲಿಯೇ ತನ್ನ ಬತ್ತಲೆತನದ ಬಗ್ಗೆ ಉಲ್ಲೇಖಗಳಿಲ್ಲ. ನನ್ನ ಗಮನಕ್ಕೆ ಬಂದ ಎರಡು ಮೂರು ವಚನಗಳು ಇದಕ್ಕೆ ಸಾಕ್ಷಿಯಾಗಿವೆ. 'ಚೆನ್ನಮಲ್ಲಿಕಾರ್ಜುನನ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ ಉಡುಗೆ ತೊಡುಗೆಯ ಹಂಗೇಕೋ (ವ. ೧೨೪) ಎಂಬ ಉಕ್ತಿ, ಆಕೆಗೆ ಉಡುಗೆ–ತೊಡುಗೆಗಳ ಬಗ್ಗೆ ಇದ್ದ ತಿರಸ್ಕಾರವನ್ನು ಸೂಚಿಸುತ್ತದೆಯೇ ಹೊರತು ಆಕೆ ಬತ್ತಲೆಯಾಗಿದ್ದಳೆಂಬ ಅರ್ಥವನ್ನು ಕೊಡುವುದಿಲ್ಲ. 'ನಾನು ಸೀರೆಯನುಡುವ ಮುನ್ನವೇ ಜಂಗಮ ದೇವಾಂಗವ ನುಡಿಸುವೆ' (ವ. ೨೧೫) ಎಂಬ ಮಾತು ಆಕೆಯ ಜಂಗಮ ಭಕ್ತಿಯನ್ನಷ್ಟೇ ಸೂಚಿಸುತ್ತದೆ. 'ಉಡು ನಾನು ಲಿಂಗಕ್ಕೆಂದು ತೊಡುವೆ ನಾನು ಲಿಂಗಕ್ಕೆಂದು' (ವ. ೨೮೨) ಎಂಬ ಮಾತಂತೂ, ತಾನು ಉಡುವುದು ತೊಡುವುದು ಕೂಡ ಲೋಕಕ್ಕಾಗಿ ಅಲ್ಲ, ಲಿಂಗಕ್ಕೆ ಅಥವಾ ದೇವರಿಗಾಗಿ ಮಾತ್ರವೇ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಈ ಎಲ್ಲವೂ ಉಡುಗೆ ತೊಡುಗೆಗಳ ಬಗ್ಗೆ ಆಕೆಗೆ ಇದ್ದ ನಿರ್ಲಕ್ಷ್ಯವನ್ನು ಸೂಚಿಸುವ ಮಾತುಗಳ ಹೊರತು, ನಿರಾಕರಣೆಯ ಮಾತುಗಳಲ್ಲ. (ವಚನಗಳ ಉಲ್ಲೇಖ : ಡಾ. ಎಲ್. ಬಸವರಾಜು ಅವರ 'ಅಕ್ಕನ ವಚನಗಳು' ಕೃತಿಯಿಂದ)

೧೦. ಮಹದೇವಿಯಕ್ಕನ ರಗಳೆ : ಹರಿಹರನ ನೂತನ ಪುರಾತನರ ರಗಳೆಗಳು. ಸಂ. ಡಾ. ಎಂ.ಎಸ್. ಸುಂಕಾಪುರ, (ಕ.ವಿ.ವಿ. ಧಾರವಾಡ), ಪು. ೧೩೮–೧೫೯

೧೧. ಪ್ರಭುದೇವರ ಶೂನ್ಯ ಸಂಪಾದನೆ, ಸಂ. ೧. ಸಂ. ಡಾ. ಎಲ್. ಬಸವರಾಜು, ಪು. ೧೫೯

೧೨. ಅಕ್ಕನ ದಿಗಂಬರತ್ವವನ್ನು ಕುರಿತ ಚರ್ಚೆ–ಪ್ರತಿಚರ್ಚೆಯನ್ನು ಬೆಳೆಯಿಸಿದ 'ಶೂನ್ಯ ಸಂಪಾದನೆ'ಗಳಲ್ಲಿ ಬಂದಿರುವ ಅಲ್ಲಮನ ಹಾಗೂ ಅಕ್ಕನ ಉಕ್ತಿಗಳು (ವಚನಗಳು) ಈ ಸಂದರ್ಭದ ನಾಟ್ಯಮಯತೆಗಾಗಿ ನಿರ್ಮಿತಿಯಾದವುಗಳೇ ಹೊರತು, ಅವು ಅಲ್ಲಮ ಹಾಗೂ ಅಕ್ಕನ 'ಮೂಲವಚನ'ಗಳಾಗಿರಲಾರವು. ಶೂನ್ಯ ಸಂಪಾದನೆಯೇ ಮೂಲ ವಚನ ವಾಙ್ಮಯದಿಂದ ಆದ ಅನುಸೃಷ್ಟಿ. ಶಿವಗಣ ಪ್ರಸಾಧಿ ಮಹಾದೇವಯ್ಯನೇ ಮೊದಲ ಶೂನ್ಯ ಸಂಪಾದನೆಯಲ್ಲಿ ಹೇಳಿ ಕೊಂಡಿರುವಂತೆ 'ಅಲ್ಲಮ ಪ್ರಭುದೇವರು, ಬಸವರಾಜ ದೇವರು ಮುಖ್ಯವಾದ ಅಸಂಖ್ಯಾತ ಮಹಾಗಣಂಗಳೊಡನೆ ಮಹಾನುಭವ ಪ್ರಸಂಗಮಂ ಮಾಡಿ ಶೂನ್ಯ ಸಂಪಾದನೆಯ ಸದ್ಗೋಷ್ಠಿ ಕಥಾಪ್ರಸಂಗಮಂ ಮುಕ್ತಕಮಾಗಿರ್ದ ಶಿವಾದ್ವೈತ ವಚನಂಗಳನು ಉತ್ತರ–ಪ್ರತ್ಯುತ್ತರವಾದ ನಾಟ್ಯಮಯ ಸಂದರ್ಭ ನಿರ್ಮಾಣದಲ್ಲಿ 'ಕೊಂಡಿ'ಯಾದ ಅನೇಕ ವಚನಗಳನ್ನು ಶೂನ್ಯ ಸಂಪಾದನಾಕಾರರು ಸೃಷ್ಟಿಸಿರುವ ಸಾಧ್ಯತೆಯಿದೆ. ಹೀಗೆ ಸೃಷ್ಟಿಯಾಗಿ ಸೇರಿಕೊಂಡಿರುವ ಇಂಥ ವಚನಗಳೂ ಎಷ್ಟು ಸೃಜನಶೀಲವಾಗಿವೆಯೆಂದರೆ, ಅವು ಆಯಾ ಸಂದರ್ಭದ ವ್ಯಕ್ತಿತ್ವದೊಂದಿಗೆ ಸಲೀಸಾಗಿ ಹೊಂದಿಕೊಳ್ಳುತ್ತದೆ. ಈ ದೃಷ್ಟಿಯಿಂದ ಶೂನ್ಯ ಸಂಪಾದನಾಕಾರರ 'ಅನುಸೃಷ್ಟಿ ಪ್ರತಿಭೆ' ಅದ್ಭುತವಾದುದು.

೧೩. ಎಚ್. ದೇವೀರಪ್ಪ : ಕೇಶಾಂಬರೆಯೆ ದಿಗಂಬರೆಯೇ ? ಸಂಶೋಧಕರ ಸಂಪುಟ (೧೯೮೪), ಪು. ೪೪೯–೪೫೨, ಶಿವಕುಮಾರ ಪ್ರಕಾಶನ, ವಿಜಯನಗರ, ಬೆಂಗಳೂರು – ೫೬೦ ೦೪೦.

* ಮಹಾದೇವಿಯಕ್ಕನ ಮತ್ತು ಕೊಂಡಗುಳಿ ಕೇಶಿರಾಜನ ರಗಳೆಯಲ್ಲಿ ಬರುವ 'ಉಟ್ಟ ಕೇಶಾಂಬರಂದಟ್ಟಯಿಸಿ ಮರೆವುತುಂ', 'ಆಶಾಂಬರನ ಸುತಂ ಕೇಶಾಂಬರವನುಟ್ಟು' ಎಂಬ ಎರಡು ಪ್ರಯೋಗಗಳಲ್ಲಿ 'ಕೇಶಾಂಬರ'ವನ್ನು 'ಉಟ್ಟ', 'ಉಟ್ಟು' ಎಂಬ ಪದಗಳೂ ವಸ್ತ್ರ ವಿಶೇಷವನ್ನೇ ಸೂಚಿಸುತ್ತದೆ.

೩. ಅಕ್ಕಮಹಾದೇವಿ (ಕ್ರಿ.ಶ.ಸು. ೧೧೫೦)

●

ಕೀರ್ತಿನಾಥ ಕುರ್ತಕೋಟಿ

ಅಲ್ಲಮಪ್ರಭುವಿನ ಒಂದು ವಚನ ಹೀಗಿದೆ :

ಸೆರಗನು ಹಿಡಿದು ಸೀರೆಯ ಹರಿದ ! ಹುಟ್ಟು ಮುರಿದ ಕಂದಲನೊಡೆದ !
ಭಂಡನವ್ವಾ, ಅಚ್ಚ ಭಂಡನವ್ವಾ, ಕಂಡರೆ ನುಡಿಸದಿರೆಲೆ ಮಾಯಾದೇವಿ,
ಆಯುಷ್ಯವು ಹಿರಿದು, ಭಾಷೆ ಕಿರಿದು, ಭವಗೆಟ್ಟುಹೋದ ಗೋಗೇಶ್ವರಲ್ಲಯ್ಯಂಗೆ ಮೂಗಿಲ್ಲ ತಂಗಿ.

(೮೬೬ – ಅಲ್ಲಮನ ವಚನ ಚಂದ್ರಿಕೆ)

ಗೊಹೇಶ್ವರನ ಅನುಗ್ರಹದಿಂದ ತನ್ನ ಹುಟ್ಟು ಕೆಟ್ಟು ಹೋದದ್ದನ್ನು ಅಲ್ಲಮ ಒಂದು ಶಕ್ತಿಯುತವಾದ ರೂಪಕದ ಮೂಲಕವಾಗಿ ಬಣ್ಣಿಸಿದ್ದಾನೆ. ಬಲಾತ್ಕಾರದ ಹಾದರಕ್ಕೆ ಒಳಗಾದ ಹೆಣ್ಣು ತನ್ನ ಸೌಭಾಗ್ಯದೊಂದಿಗೆ ತನ್ನ ಜಾತಿ ಮತ್ತು ಸಾಮಾಜಿಕ ಪ್ರತಿಷ್ಠೆಗಳನ್ನು ಕಳೆದುಕೊಳ್ಳುವಂತೆ ಗೊಹೇಶ್ವರನ ಭಕ್ತಿಯಿಂದಾಗಿ ತನ್ನ ಮುನ್ನಿನ ಭವ ಕೆಟ್ಟುಹೋಯಿತೆಂದು ಅಲ್ಲಮ ಹೇಳುತ್ತಾನೆ. ವಚನದ ಅರ್ಥದೊಡನೆ ಆ ಅರ್ಥವನ್ನು ಪ್ರಕಟಿಸುವ ರೀತಿಯೂ ನಮಗೆ ತಿಳಿದುಕೊಳ್ಳುವ ಅಗತ್ಯವಿದೆ. ಭಕ್ತಿಯ ತೀವ್ರತೆಯನ್ನು ಕಾಮದ ತೀವ್ರತೆಯೊಂದಿಗೆ ಹೋಲಿಸಿ ಹೇಳುವ ಪರಿಪಾಠ ಉಪನಿಷತ್ತಿನಷ್ಟು ಹಳೆಯದಾಗಿದೆ. ಅಲ್ಲಮ ಇಲ್ಲಿ ಬಣ್ಣಿಸುವುದು ಕೇವಲ ಕಾಮವನ್ನಲ್ಲ, ನೀತಿ ಬಾಹಿರವಾದ ಹಾದರವನ್ನು. 'ಭಂಡನವ್ವಾ, ಅಚ್ಚ ಭಂಡನವ್ವಾ' ಎಂದು ದೇವರನ್ನು ಕುರಿತು ಹೇಳುವಾಗ ಈ ಧ್ವನಿ ಇದೆ. ಆದರೆ ಹಾದರಕ್ಕೆ ಈಡಾದ ವ್ಯಕ್ತಿ ಇಲ್ಲಿ ಗಂಡಾಗಿರುವುದರಿಂದ ಅಲ್ಲಮ ಇಲ್ಲಿ ರೂಪಕವನ್ನು ಉಪಯೋಗಿ ಸುತ್ತಾನೆಂದು ಗೊತ್ತಾಗುವಂತಿದೆ. ದೇವರೊಡನೆ ನಡೆಸಿದ ಸಂಬಂಧ ಈ ಲೋಕದ್ದಲ್ಲ, ಅಂದ ಮೇಲೆ ಇಲ್ಲಿಯ ನೀತಿ ನಿಯಮಗಳು ಅದಕ್ಕೆ ಅನ್ವಯಿಸುವುದಿಲ್ಲ.

ಅಕ್ಕಮಹಾದೇವಿಯ ಭಕ್ತಿ ಇದಕ್ಕಿಂತ ಭಿನ್ನವಾದದ್ದೆಂದು ತೋರುತ್ತದೆ. ಅವಳಿಗೆ ಚೆನ್ನಮಲ್ಲಿಕಾರ್ಜುನನೊಡನೆ ಇರುವ ಪ್ರಣಯವೇ ಅವಳ ಭಕ್ತಿಯಾಗಿದೆ. ಆ ಭಕ್ತಿಯ ಉದಯವನ್ನು ಕುರಿತು ಅವಳು ಹೇಳುವುದು ಹೀಗೆ.

ಅಕ್ಕ ಕೇಳವ್ವ, ಅಕ್ಕಯ್ಯ, ನಾನೊಂದು ಕನಸ ಕಂಡೆ. ಅಕ್ಕಿಯಡಕೆ ತೆಂಗಿನಕಾಯಿ, ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವ ಭಿಕ್ಷಕ್ಕೆ ಬಂದುದ ಕಂಡೆನವ್ವ. ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು. ಚನ್ನಮಲ್ಲಿಕಾರ್ಜುನನ ಕಂಡು ಕಣ್ದೆರೆದೆನು.

ಅಕ್ಕನ ಕನಸಿನಲ್ಲಿ ಕಂಡದ್ದು ಅಕ್ಕಿ, ಅಡಕೆ, ತೆಂಗಿನಕಾಯಿ ಮತ್ತು ಭಿಕ್ಷಕ್ಕೆ ಬಂದ ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವ. ಅಕ್ಕಿ ಅಡಕೆ ಮತ್ತು ತೆಂಗಿನಕಾಯಿಗಳನ್ನು ಭಿಕ್ಷೆಯಲ್ಲಿ ಹಾಕಬಹುದು ಮತ್ತು ಅವುಗಳನ್ನು ಮದುವೆಗೂ ಬಳಸಬಹುದು. ಕನಸು ಆಯ್ಕೆಯನ್ನು ಕನಸುಗಾರನಿಗೇ ಬಿಟ್ಟುಬಿಡುತ್ತದೆ. ಭಿಕ್ಷಕ್ಕೆ ಬಂದ ಗೊರವನಿಗೆ ಚಿಕ್ಕ ಚಿಕ್ಕ ಜಡೆಗಳು ಸುಲಿಪಲ್ಲು ಇಲ್ಲದಿದ್ದರೆ ಅವನಿಗೆ ಭಿಕ್ಷೆ ಹಾಕಿ ಕಳಿಸಬಹುದಿತ್ತು. ಆದರೆ ಅವನು ಚೆಲುವ, ಅಲ್ಲದೆ, ಮಿಕ್ಕು ಮೀರಿ ಹೋಗುವವನು. ಭಿಕ್ಷಕ್ಕೆ ಬಂದ ಗೊರವನಲ್ಲಿ ಚೆನ್ನಮಲ್ಲಿಕಾರ್ಜುನನ ರೂಪವನ್ನು ಗುರುತಿಸಿ ಅಕ್ಕ ಕಣ್ತೆರೆಯುತ್ತಾಳೆ. ಕನಸು ಮನಸ್ಸುಗಳಲ್ಲಿ ಚೆನ್ನಮಲ್ಲಿಕಾರ್ಜುನ ತುಂಬಿಕೊಂಡ ಮೇಲೆ ಕನಸಿನಲ್ಲಿಯ ಇಂಥ ಸನ್ನಿವೇಶ ಸಾಮಾನ್ಯವೇ. ಅಲ್ಲಮನ ರೂಪಕ ಎಷ್ಟೇ ಶಕ್ತಿಯುತ ವಾಗಿದ್ದರೂ ಅಲ್ಲಮ ತನ್ನ ಮನದ ಕೊನೆಯಲ್ಲಿ ಕಂಡದ್ದು ಗೊಹೇಶ್ವರನ 'ಅಂಗವಿಲ್ಲದ ರೂಪ'. ಆದರೆ ಅಕ್ಕ ಕಾಣುವುದು ಚಲುವ ಚನ್ನಮಲ್ಲಿಕಾರ್ಜುನನನ್ನು. ಆದರೂ ಚನ್ನಮಲ್ಲಿಕಾರ್ಜುನನ ರೂಪ ಸಾಮಾನ್ಯವಲ್ಲವೆನ್ನುವುದೂ ಅವಳಿಗೆ ಗೊತ್ತು. ದೇವರು ಸಾವಿಲ್ಲದ, ಕೇಡಿಲ್ಲದ, ರೂಹಿಲ್ಲದ ಚೆಲುವ; ಎಡೆಯಿಲ್ಲದ, ತಡೆಯಿಲ್ಲದ, ಕುರುಹಿಲ್ಲದ, ತೆರಹಿಲ್ಲದ ಚೆಲುವ. ಸಾಮಾನ್ಯ ರೂಪವನ್ನು ಮೀರಿಸುವ ಅಸಾಮಾನ್ಯವಾದ ರೂಪವನ್ನು ಮಹದೇವಿಯಕ್ಕ ಹೀಗೆ ನಿರೂಪಿಸುತ್ತಾಳೆ.

> **ಹೊಳೆವ ಕೆಂಜೆಡೆಗಳು, ಮಣಿಮುಕುಟದ, ಒಪ್ಪುವ ಸುಲಿಪಲ್ಲ, ನಗೆಮೊಗದ, ಕಂಗಳ ಕಾಂತಿಯಿ ಈರೇಳು ಭುವನಂಗಳಂ ಬೆಳಗುವ, ದಿವ್ಯಸ್ವರೂಪನ ಕಂಡೆ ನಾನು. ಕಂಡೆನ್ನ ಕಂಗಳ ಬರ ಹಿಂಗಿತ್ತಂದು ಗಂಡಗಂಡರನೆಲ್ಲ ಹೆಂಡ ಹೆಂಡಿರಾಗಿ ಆಳುವ ಗರುವನ ಕಂಡೆ ನಾನು. ಜಗದಾದಿ ಶಕ್ತಿಯೊಳು ಬೆರಸಿ ಒಡನಾಡುವ ಪರಮಗುರು ಚನ್ನಮಲ್ಲಿಕಾರ್ಜುನನ ನಿಲುವ ಕಂಡು ಬದುಕಿದೆನು**

ಚನ್ನಮಲ್ಲಿಕಾರ್ಜುನನ ನಿಲುವು ಸಗುಣವೋ ನಿರ್ಗುಣವೋ ಎಂಬ ಪ್ರಶ್ನೆ ಇಲ್ಲಿ ಅಪ್ರಸ್ತುತ ವಾಗುತ್ತದೆ. ಚನ್ನಮಲ್ಲಿಕಾರ್ಜುನನಿಗೆ ರೂಪವಿದೆ, ಆದರೆ ಅದು ಸಾಮಾನ್ಯರಾದ 'ಸಾವ, ಕೆಡುವ ಗಂಡರ' ರೂಪ ಅಲ್ಲ. ಚನ್ನಮಲ್ಲಿಕಾರ್ಜುನ ಗಂಡ ಹೌದು. ಆದರೆ ಅವನು ಗಂಡ ಗಂಡರನ್ನೆಲ್ಲ ಹೆಂಡ ಹೆಂಡಿರಾಗಿ ಆಳುವ ಗರುವ. ದ್ವೈತ ಭಕ್ತಿಯ ಪರಿಕಲ್ಪನೆಯಲ್ಲಿ ಈ ರೀತಿಯ ವಿರೋಧ ಅನಿವಾರ್ಯವಾಗುತ್ತದೆ. ಆಕಾಶದ ಎತ್ತರವನ್ನು ಮೀರುವ ದೇವರ ಶ್ರೀಮುಕುಟ, ಪಾತಾಳದ ಆಳಕ್ಕಿಂತ ಕೆಳಗಿರುವ ದೇವರ ಶ್ರೀಚರಣ ಎಂಬ ಎರಡು ಕೊನೆಯ ಅನಂತವನ್ನು ಪ್ರತಿನಿಧಿಸುತ್ತವೆ. ರೂಪವೆನ್ನುವುದು ಪರಿಮಿತಿ, ಆದರೂ ಅಂಥ ಪರಿಮಿತಿಯೇ ಅಪ್ರಮೇಯವನ್ನು ನಿರೂಪಿಸುತ್ತದೆ. ಒಮ್ಮೆ ಇದನ್ನು ಒಪ್ಪಿಕೊಂಡ ಮೇಲೆ ಚನ್ನಮಲ್ಲಿಕಾರ್ಜುನ ಕರಸ್ಥಳಕ್ಕೆ ಬಂದು 'ಚುಳುಕಾ'ದ ಮೇಲೆ ಚನ್ನಮಲ್ಲಿಕಾರ್ಜುನನೊಡನೆ ಪ್ರಣಯ ಪ್ರಾರಂಭ ವಾಗುತ್ತದೆ. ಅವನು 'ಚಿಕ್ಕ ಚಿಕ್ಕ ಜಡೆಗಳ' ಗೊರವನಾಗಿ ಕನಸಿನಲ್ಲಿ ಕಾಣುತ್ತಾನೆ. ಕಂಗಳ ಬರ ಹಿಂಗಿಸುವ ಅವನ ರೂಪು ಮರುಳು ಮಾಡುತ್ತದೆ. ತನ್ನವರೆಲ್ಲ ಕೂಡಿಕೊಂಡು ಮದುವೆ ನಡೆಸುತ್ತಾರೆ. ಶರಣರಾದವಳು ದೇವರ ಸತಿಯಾಗುತ್ತಾಳೆ. ಈ ದಾಂಪತ್ಯದ ನೀತಿಯೂ ಅಷ್ಟೇ ಕಠೋರವಾದದ್ದು. ಗಂಡನ ಎಡೆಯಿಲ್ಲದ, ತಡೆಯಿಲ್ಲದ, ಕುರುಹಿಲ್ಲದ, ತೆರಹಿಲ್ಲದ, ಸಾವಿಲ್ಲದ, ಕೇಡಿಲ್ಲದ ವ್ಯಕ್ತಿತ್ವವನ್ನು ತಿಳಿದುಕೊಳ್ಳುವುದೊಂದೇ ವ್ರತವಾಗುತ್ತದೆ.

ರೂಪವೆಂದರೆ ಕಣ್ಣಿನ ಬದುಕು, ಅಕ್ಕಮಹಾದೇವಿಯ, ಈಗಾಗಲೇ ಉದ್ಧೃತವಾಗಿರುವ ವಚನದಲ್ಲಿರುವ ಕ್ರಿಯಾಪದವೆಂದರೆ 'ಕಂಡೆ' ಎಂಬುದು. ಹೊಳವೆ ಕಂಜೆಡೆಗಳೂ, ಮಣಿ ಮುಕುಟ, ಸುಲಿಪಲ್ಲು ಮೊದಲಾದವನ್ನಂತೂ ಕಾಣಬಹುದು. ಆದರೆ ಸಾವಿಲ್ಲದ, ರೂಹಿಲ್ಲದ ಗಂಡನನ್ನು ಕಾಣುವುದು ಹೇಗೆ? ಅಕ್ಕಮಹಾದೇವಿ ನಿಷೇಧಾತ್ಮಕವಾದದ್ದನ್ನು ಕಣ್ಣಿನ ಬದುಕಾಗಿ ಮಾಡಲು ಪ್ರಯತ್ನಿಸುತ್ತಿದ್ದಾಳೆ. ದೇವರ ಅಸ್ತಿತ್ವವನ್ನು ಕಣ್ಣು ಕಾಣುವುದು ಸಾಧ್ಯವಿಲ್ಲ. ಏಕೆಂದರೆ ಆ ಅಸ್ತಿತ್ವ ದೃಶ್ಯವಾಗಿರುವುದಿಲ್ಲ. ಆದರೂ, ಅದೃಶ್ಯದ ಅಸ್ತಿತ್ವದ ಬಗ್ಗೆ ನಂಬಿಕೆ ಹುಟ್ಟಿದರೆ ಅಸ್ತಿತ್ವವನ್ನು ದೃಶ್ಯವನ್ನಾಗಿ ಮಾಡಬಹುದು. ನಿರಾಕಾರಕ್ಕೆ ನಿರಾಕಾರದ ಆಕಾರವನ್ನೇ ಕೊಡಬಹುದು. ಅಕ್ಕಮಹಾದೇವಿಯ ಭಾಷೆ ಇದೇ ಕೆಲಸವನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸುತ್ತದೆ. ಒಮ್ಮೆ ದೃಶ್ಯವಾದ ವಸ್ತು ಇನ್ನೊಮ್ಮೆ ಅದೃಶ್ಯವಾಗುತ್ತದೆ. ನಂಬಿಕೆ ಪ್ರತಿಭೆಯಂತೆ ಸೃಜನಶೀಲವಾದದ್ದು. ನಂಬಿಕೆ ಅಸಾಮಾನ್ಯವಾದ ರೂಪವನ್ನು ಸೃಷ್ಟಿಸಬಲ್ಲದು. ನಂಬಿಕೆ ಕಣ್ಣು ಮುಚ್ಚಿದರೆ ಒಮ್ಮೆ ಕಂಡ ದೃಶ್ಯ ಅದೃಶ್ಯವಾಗುತ್ತದೆ. ಕನಸಿನಲ್ಲಿ ಕಂಡ ಚಿಕ್ಕ ಚಿಕ್ಕ ಜಡೆಗಳ ಗೊರವ ಮರೆಯಾಗುತ್ತಾನೆ. ಅವನ ವಿರಹದ ದುಃಖ ಅಸಹನೀಯ ವಾಗುತ್ತದೆ. 'ಚಿಲಿಮಿಲಿ ಎಂದೋದುವ ಗಿಳಿಗಳಿರ ನೀವು ಕಾಣಿರೇ' ಎಂದು ಸೃಷ್ಟಿಯ ಚರಾಚರ ವಸ್ತುಗಳನ್ನೆಲ್ಲ ಅವನ ಬಗ್ಗೆ ಕೇಳಬೇಕಾಗುತ್ತದೆ. ಅವನ ವಿರಹದ ದುಃಖ ಅವುಗೆಯ ಬೆಂಕಿಯಂತೆ ಸುಡತೊಡಗುತ್ತದೆ. ರೂಪದ ಸ್ವಭಾವವೆಂದರೆ ಅದು ದೃಶ್ಯವಾಗುವಂತೆ ಅದೃಶ್ಯವೂ ಆಗಬಲ್ಲದು. ಅಕ್ಕಮಹಾದೇವಿಯ ಹಂಬಲವೆಲ್ಲ ಈ ರೂಪದ ಬಗ್ಗೆ.

ಅಯ್ಯ, ದೂರದಲ್ಲಿರ್ದಹೆಯೆಂದು ಬಾಯಾರಿ ಬಳಲುತ್ತಿದ್ದೆನಯ್ಯ ನಾನು
ಅಯ್ಯ, ಸಾರಿ ಬಂದು, ನೀನೆನ್ನ ಕರಸ್ಥಲದಲ್ಲಿ ಮೂರ್ತಿಗೊಂಡರೆ, ಇನ್ನು
ಆ ರತಿಯೆಲ್ಲವೂ ಲಿಂಗ. ಆಲಿ ನಿಮ್ಮಲ್ಲಿ ನೆಟ್ಟವು ನೋಡಯ್ಯ
ಚನ್ನಮಲ್ಲಿಕಾರ್ಜುನಯ್ಯ, ನಿಮ್ಮನ್ನೆನ್ನ ಕರಸ್ಥಲದಲ್ಲಿ ನೋಡಿ ನೋಡಿ
ಕಂಗಳೇ ಪ್ರಾಣವಾಗಿದ್ದೆನಯ್ಯ

ಶರಣ ಜ್ಞಾತೃವಾದರೆ ದೇವರ ಜ್ಞೇಯ ನಿಜ. ಆದರೆ ತಿಳಿವಳಿಕೆಯ ಶಾಸ್ತ್ರದಲ್ಲಿ ಜ್ಞಾತೃ ಬುದ್ಧಿವಂತನಾಗಿದ್ದರೆ ಜ್ಞೇಯ ಕೇವಲ ಬುದ್ಧಿಗಮ್ಯವಾದ ವಸ್ತು. ಆದರೆ ಜ್ಞೇಯ ಜ್ಞಾತೃವಿಗಿಂತ ಹೆಚ್ಚು ಚೈತನ್ಯಮಯನಾಗಿದ್ದರೆ ಈ ತಿಳಿವಳಿಕೆಯ ಶಾಸ್ತ್ರ ಸಂಪೂರ್ಣವಾಗಿ ಭಿನ್ನವಾಗಲೇ ಬೇಕು. ದೇವರ ರೂಪ ಶರಣನ ಕಣ್ಣಿಗೆ ಕಾಣುತ್ತದೆ, ಅಂದರೆ ಕಣ್ಣಿಗಿರುವ ಬುದ್ಧಿ ರೂಪಕ್ಕಿಲ್ಲ. ಆದರೆ ಶರಣನಿಗೆ ಗೊತ್ತಿದೆ, ದೇವರು ನೋಡುತ್ತಾನೆ ಅಥವಾ ದೇವರ ರೂಪ ನೋಡುತ್ತದೆ. ಬಸವಣ್ಣ ಮತ್ತು ಅಕ್ಕಮಹಾದೇವಿಯಂಥವರು ಇದೇ ಕಾರಣಕ್ಕೆ ತಮ್ಮ ಸರ್ವಸ್ವವನ್ನೂ ದೇವರಿಗೆ ಸಮರ್ಪಿಸಿಕೊಳ್ಳುತ್ತಾರೆ. 'ಆಲಿ ನಿಮ್ಮಲ್ಲಿ ನೆಟ್ಟವು ನೋಡಯ್ಯ' ನೋಡಿ ನೋಡಿ ಕಂಗಳೇ ಪ್ರಾಣವಾಗಿದ್ದೆನಯ್ಯ' ಉಳಿದ ವಚನಗಳಲ್ಲಿಯಂತೆ ಇಲ್ಲಿಯೂ ಕಣ್ಣು ಮತ್ತು ಕಾಣುವ ಕ್ರಿಯೆ ಹೆಚ್ಚು ಮಹತ್ವದ ಪಾತ್ರವನ್ನು ವಹಿಸುತ್ತದೆ. ಆದರೆ ಇದೆಲ್ಲ ಕ್ರಿಯೆಯ ಹಿಂದಿರುವ ನಂಬಿಕೆಯೆಂದರೆ ದೇವರು ತನ್ನನ್ನು ನೋಡುತ್ತಾನೆಂಬುದೇ.

ನಾನು ನಿನಗೊಲಿದೆ, ನೀನು ಎನಗೊಲಿದೆ, ನೀನೆನ್ನಗಲದಿಪ್ಪೆ, ನಾನಿನ್ನ
ಗಲದಿಪ್ಪೆನಯ್ಯ. ನಿನಗೆ ನನಗೆ ಬೇರೊಂದು ಠಾವುಂಟೆ ? ನೀನು ಕರುಣೆ

ಎಂಬುದ ನಾನು ಬಲ್ಲೆನು ನೀನಿರಿಸಿದ ಗತಿಯೊಳಗೆ ಇಪ್ಪವಳಾನಯ್ಯ. ನೀನೇ ಬಲ್ಲೆ ಚನ್ನಮಲ್ಲಿಕಾರ್ಜುನಾ

'ನಿನಗೆ ನನಗೆ ಬೇರೊಂದು ಠಾವುಂಟೆ ?' ಚನ್ನಮಲ್ಲಿಕಾರ್ಜುನ ಇದ್ದಲ್ಲಿ ಮಹಾದೇವಿ ಮತ್ತು ಮಹಾದೇವಿ ಇದ್ದಲ್ಲಿ ಚನ್ನಮಲ್ಲಿಕಾರ್ಜುನ. ಇವರಿಬ್ಬರ ಅವಿಭಾಜ್ಯ ಸಂಬಂಧ ಭಕ್ತಿಯಿಂದ ಹುಟ್ಟಿದ್ದು ಹಾಗೆಯೇ ಅನುಗ್ರಹದಿಂದಲೂ ಹುಟ್ಟಿದ್ದು. ಈ ಸ್ಥಿತಿಯಲ್ಲಿ ದೇವರನ್ನು ತಾನು ನೋಡುವುದಕ್ಕೂ ದೇವರು ತನ್ನನ್ನು ನೋಡುವುದಕ್ಕೂ ಏನೂ ಅಂತರವಿಲ್ಲ. ಬಸವಣ್ಣನವರ ಮಹಾಮನೆಯ ಶರಣಗೋಷ್ಠಿಯಲ್ಲಿ ಮಹಾದೇವಿಯಕ್ಕ ಪ್ರಭುದೇವರ ಪ್ರಶ್ನೆಗಳನ್ನು ಎದುರಿಸಬೇಕಾಗುತ್ತದೆ. ಅಕ್ಕಮಹಾದೇವಿ ಕೂಡ ಒಡಲಿಂದ ಕೂಡಿದ ಒಬ್ಬ ವ್ಯಕ್ತಿ. ಅವಳಿಗೊಂದು ರೂಪವಿದೆ. ಆ ರೂಪವನ್ನು ಶರಣರು ಕಣ್ಣಾರೆ ಕಾಣುತ್ತಿದ್ದಾರೆ. ಚನ್ನಮಲ್ಲಿಕಾರ್ಜುನನೇ ತನ್ನ ಗಂಡನೆಂದು ಅವಳು ಹೇಳುವುದನ್ನು ಕೇಳಿದ್ದಾರೆ. ಅಲ್ಲಮನ ಪ್ರಶ್ನೆಯೆಂದರೆ ಇಷ್ಟೇ; 'ರೂಪು ನಿರೂಪವನೊಡಗೊಂಡ ಪರಿಯೆಂತು ಹೇಳಾ'. ವಾಸ್ತವವಾಗಿ ಇದು ಅಶಕ್ಯ. ಅಕ್ಕಮಹಾದೇವಿ ಅದಕ್ಕೆ ಕೊಡುವ ಉತ್ತರ ಇಷ್ಟೇ. ತಾನು ದೇಹವಾಗಿ ಕಾಣುತ್ತಿದ್ದರೂ ದೇಹಧರ್ಮ ತನಗಿಲ್ಲ. ತಾನು ಬೆಂದ ನುಲಿಯಂತೆ. ಈಗ ಮಾತನಾಡು ತ್ತಿರುವ ನನ್ನನ್ನು ಕಂಡೆನೆಂದು ಹೇಳಿದರೂ ನೋಡುವವನು ಅವನೇ. ತಿಳುವಳಿಕೆಯ ಶಾಸ್ತ್ರ ಭಿನ್ನವಾಗುವುದು ಹೀಗೇ. 'ಶೂನ್ಯ ಸಂಪಾದನೆ'ಯಲ್ಲಿಯ ಒಂದು ವಚನದ ಪ್ರಕಾರ ಮಹಾದೇವಿಯಕ್ಕ ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಒಂದು ಮಾತು ಹೇಳುತ್ತಾಳೆ. ತನ್ನ ಮಾತೆಂದರೆ ಚನ್ನಮಲ್ಲಿಕಾರ್ಜುನನನ್ನು ಕೊಂದು ತಾನು ಸಾವ ಭಾಷೆ. ಅಂದರೆ ನಿಷೇಧಾತ್ಮಕವಾಗಿರುವುದನ್ನು ಅಸ್ತಿತ್ವದಲ್ಲಿ ತಂದು ನಿಲ್ಲಿಸುವ ಭಾಷೆ. ಎಲ್ಲ ಪ್ರಮುಖ ವಚನಕಾರರೂ ಮಾಡಿದ್ದು ಇದನ್ನೇ ಎಂದು ತೋರುತ್ತದೆ.

ಅಕ್ಕಮಹಾದೇವಿಯ ವಚನಗಳ ಮೂಲಕವಾಗಿ ಅವಳ ಜೀವನವೃತ್ತಾಂತದ ಕೆಲವು ಘಟನೆಗಳಾದರೂ ತಿಳಿದುಬರುತ್ತವೆ. ಉಡುತಡಿಯ ಅಕ್ಕಮಹಾದೇವಿ ಲೌಕಿಕವಾದ ಮದುವೆಯನ್ನು ತಿರಸ್ಕರಿಸಿ, ದಿಗಂಬರೆಯಾಗಿ ಅಲ್ಲಿಂದ ಹೊರಟು ಕಲ್ಯಾಣಕ್ಕೆ ಬ್ಬಂದು, ಅಲ್ಲಿಯ ಶರಣರ ಗೋಷ್ಠಿಯಲ್ಲಿ ಭಾಗವಹಿಸಿ, ಪ್ರಭುವಿನ ಆದೇಶದಂತೆ ಮುಂದೆ ಶ್ರೀಶೈಲದ ಕದಳಿಯ ಬನದಲ್ಲಿ ಚನ್ನಮಲ್ಲಿಕಾರ್ಜುನನೊಡನೆ ಐಕ್ಯವಾಗಿ ಹೋಗುತ್ತಾಳೆ. ಆದರೆ ಅಕ್ಕನ ವಚನಗಳೆಂದರೆ ಅವಳ ಜೀವನ ಚರಿತ್ರೆಯಲ್ಲ. ಕನಸಿನಲ್ಲಿ ಕಂಡ ಗೊರವನ ರೂಪ, ಚನ್ನಮಲ್ಲಿಕಾರ್ಜುನನೊಡನೆ ಅವಳ ಪ್ರಣಯ ಮತ್ತು ಮದುವೆ, ಅವಳು ದಿಗಂಬರೆಯಾಗಿ ಅಡ್ಡಾಡುವುದು ಮತ್ತು ಕದಳಿಯಲ್ಲಿ ಬಯಲಾಗಿ ಹೋಗುವುದು ಮೊದಲಾದ ಅಂತರಂಗದ ಘಟನೆಗಳು ವಾಸ್ತವವೋ ಅವಾಸ್ತವವೋ ಎಂಬ ಪ್ರಶ್ನೆ ಕೂಡ ಅಪ್ರಸ್ತುತವಾಗುತ್ತದೆ. ವಚನಕಾರರೆಲ್ಲ ವಾಸ್ತವ ಸತ್ಯದ ಸ್ವರೂಪವನ್ನೇ ಪ್ರಶ್ನಿಸಿದವರು. ಅಂತಿಮ ಸತ್ಯವೆನ್ನುವುದು ಬಚ್ಚ ಬಯಲಿನ ಕಣ್ಣು ಕುಕ್ಕುವ ಬೆಳಕಾದರೂ ಆಗಬಹುದು ಅಥವಾ ಶ್ರೀಗಿರಿಯ ಕದಳಿಯಲ್ಲಿಯ ಅಭೇದ್ಯವಾದ ಕತ್ತಲೆಯಾದರೂ ಆಗಬಹುದು. ಈ ಬೆಳಕು ಅಥವಾ ಕತ್ತಲೆಯಲ್ಲಿ ವಚನಕಾರರ ಸತ್ಯದ ಸ್ವರೂಪಗಳು ಹುಟ್ಟಿ ಮಾಯವಾಗುತ್ತವೆ. ವಚನಕಾರರು ಐತಿಹಾಸಿಕ ವ್ಯಕ್ತಿಗಳಾಗಿದ್ದರೂ ಕೇವಲ ಐತಿಹಾಸಿಕತೆ ಅವರ ವ್ಯಕ್ತಿತ್ವದ ರಹಸ್ಯಗಳನ್ನು ಬಿಚ್ಚಿ ತೋರಿಸುವುದಿಲ್ಲ. ಜಗವೆಲ್ಲ ಕಣ್ಣಾದ ಮಲ್ಲಿಕಾರ್ಜುನ ನೋಡುತ್ತಿರುವಾಗ ಮುಚ್ಚಿ ಮರೆಸುವುದು ಹೇಗೆ ಎಂದು ಅಕ್ಕಮಹಾದೇವಿ ದಿಗಂಬರೆಯಾಗಿ ಹೊರಟಳು ಎಂಬ

ಘಟನೆಯನ್ನು ಐತಿಹಾಸಿಕ ವಾಸ್ತವಿಕ ದೃಷ್ಟಿಯಿಂದ ವಿಚಾರಿಸಿದರೆ ಹೊಳೆಯುವ ಅರ್ಥ ಘನವಾದದ್ದೇನೂ ಅಲ್ಲ. ಹಾಗೆಂದು ಅದನ್ನು ಕೇವಲ ಒಂದು ಪ್ರತೀಕವೆಂದು ಗ್ರಹಿಸಿದ್ದರೂ ಅದರ ಅರ್ಥ ಅಷ್ಟೇನೂ ದೊಡ್ಡದಲ್ಲ. ವಾಸ್ತವಿಕತೆಗೆ ಹೊಂದಿಕೆ ಆಗದಿದ್ದಾಗ ಪ್ರತೀಕದ ನೆರವು ಬೇಡುವುದೆಂದರೆ ನಮ್ಮ ದೃಷ್ಟಿಯಲ್ಲಿಯೇ ಅರೆಕೊರೆ ಇದೆಯೆಂದು ಅರ್ಥವಾಗುತ್ತದೆ. ಅಕ್ಕಮಹಾದೇವಿಗೆ ಅಲ್ಲಮ ಕದಳಿಯಲ್ಲಿ ಐಕ್ಯವನ್ನು ಹೊಂದಲು ಆದೇಶ ನೀಡುತ್ತಾನೆ. ಆ ಕದಳಿಯನ್ನು ಅಲ್ಲಮ ಬಣ್ಣಿಸುವುದು ಹೀಗೆ.

ನೀ ನಾನೆಂಬುಭಯ ಸಂಗವಳಿದು
ತಾನು ತಾನಾದ ತ್ರಿಕೂಟವೆಂಬ ಮಹಾಗಿರಿಯ
ತುಟ್ಟತುದಿಯ ಮೆಟ್ಟಿ ನೋಡಲು
ಬಟ್ಟಬಯಲು ಕಾಣಬಹುದು ನೋಡಾ
ಆ ಬಯಲ ಬೆರಸುವರೆ
ತ್ರಿಕೂಟವೆಂಬ ಗಿರಿಯೊಳಗೊಂದು ಕಾಣಬಾರದ ಕದಳಿಯುಂಟು ನೊಡಾ
ಕದಳಿಯ ಕಳೆದಲ್ಲಿ ಒಳಹೊಕ್ಕು ನೋಡಲು
ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ
ನಡೆಯಲ್ಲಿಗೆ ತಾಯೆ
ಗೊಹೇಶ್ವರ ಲಿಂಗದಲ್ಲಿ ಪರಮ ಪದವಿ
ನಿನಗೆ ಸ್ವಯವಹುದು ನೋಡಾ ಶೂನ್ಯ ಸಂಪಾದನೆ ಪು. ೨೯೪

ಕದಳಿಯ ಬನದ ಭೌಗೋಳಿಕ ವಿವರಗಳು ಇಲ್ಲಿವೆ. ಶ್ರೀಶೈಲದ ಶಿಖರದಲ್ಲಿ ನಿಂತು ನೋಡಲು ಕಾಣುವ ಬಟ್ಟಬಯಲಿನ ನಡುವೆ ಇರುವ ಬಾಳೆಯ ಬನ ಅದಾಗಿದೆ. ಆದರೆ ಅದು ಕಾಣಬಾರದ ಕದಳಿ. ಕದಳಿಯ ಕತ್ತಲೆಯಲ್ಲಿ ತೊಳಗಿ ಬೆಳಗುವ ಜ್ಯೋತಿ. ಆ ಜ್ಯೋತಿಯಲ್ಲಿ ಅಕ್ಕಮಹಾದೇವಿ ನಿಜವನ್ನೈದಬೇಕು. ಅಲ್ಲಮನ ಈ ವರ್ಣನೆಯಲ್ಲಿ ಭೌಗ್ಲೋಳಿಕ ವಿವರಗಳೊಡನೆ ಯೌಗಿಕ ವಿವರಗಳು ಸೇರಿಹೋಗಿವೆ. ಆದರೆ ಭೌಗೋಳಿಕ ವಿವರ ಯೌಗಿಕ ಅನುಭವದ ಪ್ರತೀಕವಾಗಿಲ್ಲ. ಹಾಗೆಂದು ಒಂದನ್ನು ಬಿಟ್ಟು ಇನ್ನೊಂದಿಲ್ಲ. ಭೌಗೋಳಿಕತೆಯಂತೆ ಶರಣರ ಜೀವನದ ಐತಿಹಾಸಿಕತೆ ಕೂಡ ಅವರ ಅನುಭಾವದೊಡನೆ ಸೇರಿ ಹೋಗುತ್ತದೆ. ಇದನ್ನು ಅರ್ಥಮಾಡಿಕೊಳ್ಳುವುದು ಹೇಗೆ? ಅರ್ಥ ಮಾಡಿಕೊಳ್ಳಲು ಇರುವ ತೊಡಕೆಂದರೆ ನಮ್ಮ ಐತಿಹಾಸಿಕ ವಾಸ್ತವ ದೃಷ್ಟಿ. ಶರಣರು ದೇವರ ಕಣ್ಣು ತಮ್ಮನ್ನು ಯಾವಾಗಲೂ ನೋಡುತ್ತಿರುವುದರಿಂದ ಅದರ ಎಚ್ಚರದಲ್ಲಿ ತಮ್ಮ ಜೀವನವನ್ನು ರೂಪಿಸಿಕೊಂಡರು. ದೇವರ ಕಣ್ಣರಿಕೆಯಲ್ಲಿ ನಡೆದ ಜೀವನಕ್ಕೆ ತನ್ನದೇ ಆದ ತಾರ್ಕಿಕತೆ ಇದೆ. ಅದರ ಕೊನೆ ಶ್ರೀಶೈಲದ ಕಾಣಬಾರದ ಕದಳಿಯಲ್ಲಿ ಅಥವಾ ಕಪ್ಪಡಿ ಸಂಗಮದ ನೀರಿನ ಹರಹಿನಲ್ಲಿ, ಅಲ್ಲಿಯ ಅನುಭವ ನಮ್ಮ ಅಳತೆಗೆ ಮೀರಿದ್ದೆಂದೇ ಹೇಳಬೇಕು.

೪. ಜನಪದರ ದೃಷ್ಟಿಯಲ್ಲಿ ಅಕ್ಕ

•

ಪ್ರೊ. ಎಸ್. ಆರ್. ಗೌಡರ

ಅಕ್ಕಮಹಾದೇವಿಯನ್ನು ಕುರಿತು ಸಮಕಾಲೀನ ವಚನಕಾರರು, ನಂತರ ಬಂದ ಅನೇಕ ಕವಿಗಳು ಹೊಸಗನ್ನಡ ಕವಿಗಳು, ಕಾದಂಬರಿಕಾರರು, ನಾಟಕಕಾರರು ಹೀಗೆ ಅನೇಕರು ತಮ್ಮ ಕೃತಿಗಳಿಗೆ ಅಕ್ಕನ ಜೀವನ–ಸಾಧನೆ–ಸಿದ್ಧಿಗಳನ್ನು ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ. ಹಾಗೆಯೇ ಅನೇಕ ಜನಪದ ಕವಿಗಳು ಶರಣ ಶರಣೆಯರನ್ನು ಕುರಿತು, ಅವತಾರಿ ಪುರುಷರನ್ನು ಕುರಿತು ಹಾಡುಕಟ್ಟಿ ಹಾಡಿರುವುದನ್ನು ಅಲ್ಲಲ್ಲಿ ಕಾಣುತ್ತೇವೆ. ಬಸವಣ್ಣ, ಚನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಿದೇವ ಮುಂತಾದವರನ್ನು ಕುರಿತು ವೆಗ್ಗಳವಾಗಿ ಹಾಡಿರುವುದನ್ನು ಕಾಣುತ್ತೇವೆ. ನೀಲಲೋಚನೆ, ಅಕ್ಕನಾಗಮ್ಮ, ಅಕ್ಕಮಹಾದೇವಿಯರನ್ನು ಪ್ರಾಸ್ತಾವಿಕವಾಗಿ ಅಲ್ಲಲ್ಲಿ ನೆನೆದಿರುವುದನ್ನು ಕಾಣುತ್ತೇವೆ.

ಜನಪದ ಸಾಹಿತ್ಯದ ಭೂಮಿಯನ್ನು ಅಗಿಯುತ್ತ ಹೋದಂತೆ ಅಲ್ಲಲ್ಲಿ ಅಕ್ಕಮ್ಮಹಾದೇವಿ (ಮಹಾದೇವಿಯಕ್ಕ)ಯನ್ನು ಕುರಿತು ನಮ್ಮ ಅದೃಶ್ಯ ಕವಿ–ಕವಯಿತ್ರಿಯರು ಆಗಾಗ ಹಾಡಿರುವುದನ್ನು ಕಾಣುತ್ತೇವೆ. 'ಕನ್ನಡ ನಾಡಿನ ಜನ ಜೀವನವನ್ನೂ ಅದರ ಸಂಸ್ಕೃತಿಯನ್ನೂ ಸಂಪೂರ್ಣವಾಗಿ ತಿಳಿಯಬೇಕೆನ್ನುವವರು ಜಾನಪದ ಸಾಹಿತ್ಯವನ್ನೇ ಆಶ್ರಯಿಸಬೇಕಾಗುತ್ತದೆ' ಜನಪದ ಸಾಹಿತ್ಯ, ಸಾಮಾನ್ಯ ಜನತೆಯ ವೇದ. ಸಂಸಾರ ಕಷ್ಟ ಸುಖಗಳನ್ನು ತನಗೆ ಅವಕಾಶ ಸಿಕ್ಕಾಗ ಹಾಡಿ (ತೋಡಿ)ಕೊಳ್ಳುವುದನ್ನು ಕಂಡೇ ಇದನ್ನು 'ಸಂಸಾರ ಸಂಹಿತೆ' ಎಂದು ಕರೆದಿದ್ದಾರೆ.

ಕುಟ್ಟುವಾಗ, ಬೀಸುವಾಗ, ಹತ್ತಿ ಬಿಡಿಸುವಾಗ, ತನಗೆ ಬೇಜಾರಾದಾಗ ದಣಿವಾರಿಸಿ ಕೊಳ್ಳಲು ನಮ್ಮ ಹಳ್ಳಿಯ ಹೆಣ್ಣು (ಗಂಡು) ಮಕ್ಕಳು ಹಾಡಿಕೊಳ್ಳುವುದುಂಟು. 'ಸಾಹಿತ್ಯವೆಂದರೆ ಬೇಜಾರಾಕ್ಕೆ ಭೇಷಜವಿದ್ದಂತೆ ಎಂಬ ಮಾತು ಬಂದದ್ದು ಇದಕ್ಕಾಗಿಯೇ. ನಮ್ಮ ಗರತಿಯ ಕಾರ್ಯ ಪ್ರಾರಂಭವಾಗುವುದು ನಸುಕಿನಲ್ಲಿಯೇ. ಈಗಿನಂತೆ ಗಿರಣಿಗಳಿಲ್ಲದ ಆ ಕಾಲದಲ್ಲಿ ಹೆಣ್ಣು ಮಕ್ಕಳು ಎದ್ದ ಕೂಡಲೇ ಬೀಸುವುದಕ್ಕೆ ಕೂಡ್ರುತ್ತಿದ್ದರು. ಬೀಸುವ ಕಲ್ಲು– ಕೇವಲ ಕಲ್ಲಲ್ಲ, ಅದು ದೇವತೆ, ದೇವಿ ಆಗ ಅನೇಕ ದೇವರನ್ನು ನೆನೆಯುತ್ತಿದ್ದರು. ಅಷ್ಟೇ ಅಲ್ಲ, 'ಎಳ್ಳು ಜೀರಿಗಿ ಬೆಳೆಯೋಳೆ ಭೂಮಿ ತಾಯಿ ಎದ್ದೊಂದು ಗಳಿಗಿ ನೆನೆದೇನ' ಎಂದು ಭೂಮಿತಾಯಿಯ

ಸ್ತೋತ್ರ ಮಾಡಿ, ಬಸವಣ್ಣ, ಸರಸೋತಿ, ಮಾರುತಿ, ಮಾದೇವಿ, ಮಾದೇವ ಪಾರೋತಿ ಮುಂತಾದವರ ಜೊತೆಗೆ ಶರಣ-ಶರಣೆಯರನ್ನು ಕುರಿತು ಮನದುಂಬಿ ಹಾಡುತ್ತಿದ್ದರು. ದಣಿವರಿಯದೆಯೇ ಹಾಡುತ್ತಿದ್ದರು. 'ಕಾಯಕವೇ ಕೈಲಾಸ'ವೆಂಬಂತೆ ತಮ್ಮ ದಿನನಿತ್ಯದ ಆ ಕಾಯಕದಲ್ಲಿ ಸ್ವರ್ಗವನ್ನೇ ಕಾಣುತ್ತಿದ್ದರು ಆ ಮುಗ್ದರು.

ಶರಣರ ನೆನೆದರ ಸರಗಿ* ಇಟ್ಟಂಗ
ಹವಳ ಮಲ್ಲೀಗಿ ಮುಡಿದಂಗ ! ಕಲ್ಯಾಣ
ಶರಣರ ನೆನೆಯೋ ನನಮನವೆ

ಮಾನವ ನಿರ್ಮಿತ ಆಭರಣಗಳನ್ನೇನು ತಾನೆ ಮಾಡಬೇಕು ? ಘನ ಶರಣರ ಕಲ್ಯಾಣದ ಶರಣರ ನೆನಪೇ ಸರಗಿ*ಯನ್ನು ಧರಿಸಿದಂತೆ' ಎಂಬ ಅವಳ ಭಾವನೆಯನ್ನು ನೋಡಿದರೆ ಶರಣರಿಗಿರುವ ಸ್ಥಾನಮಾನ ವೇದ್ಯವಾಗುತ್ತದೆ. ಹವಳ, ಮಲ್ಲಿಗಿ, ಸರಗಿ ಇವಾವೂ ಶರಣರ ಸ್ಮರಣೆಗೆ ಸರಿಯಾಗಲಾರವು ಎಂದು ಗರತಿ ಹಾಡಿದ್ದಾಳೆ.

ಶರಣೆಂದೆ ಶಿವನಿಗೆ ಶರಣೆಂದೆ ಗುರುವಿಗೆ
ಶರಣೆಂದೆ ಶಿವನ ಮಡದಿಗೆ । ಗೌರಮಗೆ
ಶರಣೆಂದೆ ಕಲ್ಲ ಹಿಡದೇನ''

ಅಕ್ಕನ ನೆನೆದರ ಗಕ್ಕನೆ ಪದಬರಲಿ
ಅಕ್ಕವ್ವೆ ಗಂಗೆ ದಡದಲ್ಲಿ । ಸರಸೋತಿ
ಅಕ್ಕಿ ಹೂದವಳಾ । ಕರೆತನ್ನಿ

'ಸರಸ್ವತಿ' ವಿದ್ಯಾಧಿದೇವತೆ, ಅವಳನ್ನು ನೆನೆದರೆ ಪದಗಳಿಗೆ ಬರವಿಲ್ಲ. ಅಕ್ಕ ಮಹಾದೇವಿಯೂ ಸರಸೋತಿಗೆ ಸಮಾನಳೆ, ಅವಳನ್ನು ನೆನೆಯುವುದರಿಂದಲೂ ಹಾಡುಗಳ ಹೊಳೆಯೇ ಹರಿದು ಬರುತ್ತಿದೆ ಎಂಬುದು ನಮ್ಮ ಗರತಿಯ ಬಯಕೆ. ಆದ್ದರಿಂದಲೇ,

ಶರಣೆಂದೆ ಮಲ್ಲಯ್ಯಗೆ ಶರಣಂದೆ ಗುರುವೀಗೆ
ಶರಣಂದೆ ಮಲ್ಲಯ್ನ ಮಡದೀಗೆ । ಮಾದೇವ್ಗಿ
ಶರಣಂದು ಕಲ್ಲು ಹಿಡಿದೇನು

ಮಲ್ಲಯ್ಯ ನಿನನಾಮ ಎಲ್ಲರೂ ಮಾಡ್ಯಾರ
ಮಲ್ಲಯ್ನ ಮಡದಿ ಅಕ್ಕನ ನೆನದರ
ಎಲ್ಲಿಲ್ದ ಹಾಡು ಹರಿದಾವ
ಕಲ್ಲೀಗಿ ಮುಕ್ಕಾಕಿ ಎಲ್ಲ ದೇವರ ನೆನೆದೆ
ಅಕ್ಕಮಾದೇವಿಯ ಅರಸರ ಮಲ್ಲಯ್ಯನ
ಮುಕ್ಕಾಲು ಮೊದಲೇ ನೆನದೇನ

---

* ಸರಗಿ = ಒಂದು ಬಗೆಯ ಕಂಠಾಭರಣ

ಇಲ್ಲಿ ಬಂದಿರುವ ಭಾವ-ಭಾಷೆಗಳನ್ನು ನೋಡಿದರೆ ಬೀಸುವ ಕಲ್ಲಿಗೆ ಮುಕ್ಕಾಕುವಾಗ ಎಲ್ಲ ದೇವರನ್ನು ನೆನೆಯುತ್ತಾಳೆ. ಏಕೆಂದರೆ ಬಾಳಿನಲ್ಲಿ ದಿನನಿತ್ಯ ಬರುವ ಕಷ್ಟ ಸಂಕಟಗಳನ್ನು ದೂರು ಮಾಡುವ ದೇವರುಗಳು ಅವೆಲ್ಲ. ಆದರೆ ಕಲ್ಲಿಗೆ ಮುಕ್ಕಾಕುವುದಕ್ಕಿಂತ ಮೊದಲೇ ನೆನೆದದ್ದು 'ಅಕ್ಕಮಹಾದೇವಿಯರ ಅರಸ ಮಲ್ಲಯ್ಯನ' ಎಂಬಲ್ಲಿ ಮಲ್ಲಯ್ಯನಲ್ಲಿ ಅವಳಿಟ್ಟ ಭಕ್ತಿಯನ್ನು ಮೆಚ್ಚಬೇಕು.

ಮತ್ತೊಬ್ಬ ಗರತಿ ಕುಟ್ಟುವಾಗ ನೆನೆಯುವ ರೀತಿಯನ್ನು ನೋಡಿ :

ಅಕ್ಕಿಹೊರಳಿಗೆ ಹುಯ್ದು ಅಪ್ಪ ನಿಮ್ಮ ನೆನೆದೆನು
ಅಕ್ಕಮಹಾದೇವಿ ಗಿರಿಜಯ । ಕೆಂಚಮ್ಮನ
ಮಕ್ಕಳೈವರ ನೆನೆದೆನು

ಹೀಗೆ ಕುಟ್ಟುವಾಗ, ಬೀಸುವಾಗ ಅಕ್ಕಮಹಾದೇವಿಯನ್ನು ಅಲ್ಲಲ್ಲಿ ನೆನೆದಿರುವುದನ್ನು ಕಾಣುತ್ತೇವೆ. "ಈ ಹಾಡುಗಳು ಒಂದೊಂದು ಬಿಡಿ ಪದ್ಯಗಳಾಗಿ ಯಾವುದಾದರೂ ಒಂದು ಭಾವವನ್ನೋ, ಸನ್ನಿವೇಶವನ್ನೋ ತಿಳಿಸುವುದೇ ಹೆಚ್ಚು"[೧]. ಆದರೆ ಮಾತು ಹಸಿಗೋಡೆಯಲ್ಲಿ ಹರಳು ನಟ್ಟಂತೆ ಕೇಳುಗರ ಮನಸ್ಸಿನಲ್ಲಿ ನಾಟಿ ನಿಲ್ಲುತ್ತವೆ; ಅಚ್ಚಳಿಯದೆ ಉಳಿಯುತ್ತವೆ. ಶರನರ ನಡೆ-ನುಡಿ, ವಿಭೂತಿ, ಲಿಂಗ, ರುದ್ರಾಕ್ಷಿ, ಮಂತ್ರ-ಮಾಟ ಎಲ್ಲವೂ ಚಂದ ಈ ಗರತಿ ಗಂಗವ್ವನಿಗೆ. ಆದ್ದರಿಂದಲೇ ಅವರನ್ನು ಕುರಿತು ಅನೇಕ ವಿಧದಿಂದ ಹಾಡಿದ್ದಾಳೆ. 'ಶರಣರನ್ನು ನೆನೆದರೆ ಸರಗೀಯ ಇಟ್ಟಂಗ' ಎಂದು ಹಾಡಿದ ಅವಳೆ ಮತ್ತೊಮ್ಮೆ –

ನಂಜನಗೂಡು ಚೆಂದ । ನಗುವರ ಬಾಯಿ ಚಂದ
ಲಿಂಗಕಟ್ಟಿದೋರ ಎದಿಚೆಂದ । ಊಬತ್ತಿ*
ಧರಿಸೀದ ಅಕ್ಕಮ್ನ ಹಣೀಚಂದ

ಇಲ್ಲಿ ನಂಜನಗೂಡಿನ ನಂಜುಂಡೇಶ್ವರ (ಮಲ್ಲಯ್ಯ) ಅವನ ಪತ್ನಿ ಅಕ್ಕಮಹಾದೇವಿ ಯೆಂದು ಊಹಿಸಿಕೊಂಡಿದ್ದಾಳೆ. ವಿಭೂತಿ ಧರಿಸಿದ ಹಣೆ ಎಷ್ಟೊಂದು ಸುಂದರ! ಲಿಂಗ, ವಿಭೂತಿಯ ಮಹಿಮೆಯನ್ನು ಈ ಹಾಡು ಎತ್ತಿ ಹೇಳುತ್ತದೆ.

ಮತ್ತೊಬ್ಬ ಬಡವಿಗೆ ಮನೆಯಲ್ಲಿ ಊಟಕ್ಕೆ ಅನ್ನವಿಲ್ಲ. ಪ್ರತಿನಿತ್ಯ ಅರ್ಧ ಊಟ ಮಾಡುತ್ತಾಳೆ. ಆದರೆ ತಾನು ಉಪವಾಸ ಎಂದು ಹೇಳಿಕೊಳ್ಳದೆ 'ವಪ್ಪತ್ತು' (ಒಂದೇ ಊಟ) ಇದ್ದೇನೆಂದು ಹೇಳಿಕೊಳ್ಳುವ ಅವಳ ಸ್ಥೈರ್ಯ, ಮನೋವಿಶಾಲತೆಯನ್ನು ಕಂಡು ಮೆಚ್ಚಲೇಬೇಕು. ನೋಡಿ ಬಡತನದ ಚಿತ್ರವನ್ನು

ವಪ್ಪತ್ತು ಕಾಣೆ ಅಪ್ಪನಂಜಯ್ಯಗೆ
ಅಕ್ಕದೇವೀರ ಪುರಸಾಗೆ । ನಂಜಯ್ಯಗೆ
ವಪ್ಪತ್ತು ನಮ್ಮಲ್ಲಿ ಅನುಗಾಲ

ಇಲ್ಲಿ ಬಳಸಿರುವ 'ಅನುಗಾಲ' ಎಂದರೆ ಸದಾಕಾಲ ಪದದಲ್ಲಿ ಧ್ವನಿತವಾಗಿರುವ ಅರ್ಥ ವಿಶಾಲತೆ ಕಂಡು ಅವಳ ಕಷ್ಟದ ಜೀವನಕ್ಕೆ ಮರಮರ ಮರಗುತ್ತೇವೆ.

---

* ಊ ಬತ್ತಿ = ಈ ಬತ್ತಿ (ವಿಭೂತಿ)

ತುಂಬಿದೇರ ಮ್ಯಾಲೆ ಒಂಬೈನೂರು ಗುರುಗಳು
ಮುಂದೆ ಬರುವೋರು ನನಗುರವೆ। ಅಕ್ಕಯ್ಯ (ಮ್ಮ)
ಮುಂಜರುಗನಾಸಿ ಶರಣೆಂದೋ

ಮನೆಗೆ ಗುರುಗಳು ಬಂದರೆ ಅವರಿಗೆ ಮಡಿ ಬಟ್ಟೆಯನ್ನು ಹಾಸಿ ಸ್ವಾಗತಿಸುತ್ತಾರೆ. ಇಲ್ಲಿ ಗರತಿ ತನ್ನ ತಲೆಯ ಮೇಲಿನ (ಮುಂದಿನ) ಸೆರಗನ್ನೇ ಹಾಸಿ ಸ್ವಾಗತಿಸುತ್ತಾಳೆ.

* * *

ಶಿವಶರಣರ ಅಗಾಧ ಚರಿತೆಗಳನ್ನು ಕೇಳಿದ ಈ ಹಳ್ಳಿಯ ಕಬ್ಬಿಗರು ಭಕ್ತಿಯಿಂದ ಅವರ ಹಿರಿಮೆಯನ್ನು ಅನೇಕ ಸನ್ನಿವೇಶಗಳಲ್ಲಿ ಹಾಡಿದ್ದಾರೆ. ಈ ಜಾನಪದ ಕವಿಗೆ ಈ ಮುಗ್ಧ ಶರಣರ ಹಾಡಂದರೆ ಪಂಚಪ್ರಾಣ. ಪ್ರಪಂಚದಲ್ಲಿ ತೊಳಲಾಡುವ ಮಾನವನಿಗೆ ಶಿವಭಕ್ತಿಯನ್ನು ಸಾಧಿಸುವುದು ಅಸಾಧ್ಯ. ಆದ್ದರಿಂದ ಕವಿಯು ಮುಗ್ಧ ಶರಣರ ಹಾಡನ್ನಾದರೂ ಈ ಜೀವವು ಹಾಡಿ ಮುಕ್ತಿಯನ್ನು ಹೊಂದಲೆಂದು ಹಾಡಿದ್ದಾರೆ.[೨]

ಮುಗ್ಧ ಶರಣರ ಹಾಡು ಸಿದ್ಧಿ ಮಂತ್ರವು ನೋಡು
ಸಿದ್ದಾಗು ಹಾಡ ಹಾಡುದಕೆ। ಎಲೆ ಜೀವ
ಶುದ್ಧಾಗಿ ಹೊಂದು ಶಿವಪದವ[೩]

ಶಿವ ಶರಣೆ ನಿನಹಾಡು ಭವದೊಳಗೆ ಹಾಡುವುದು
ಶಿವ ಪದಕೆ ಮಿಗಿಲು ನಿತ್ಯದಲಿ। ಕೊನೆಯುಂಟೆ
ಶಿವ ಭಕ್ತಿ ಸಾರ ಗಳಿಸುದಕೆ

ಇಲ್ಲಿ ಶಿವಶರಣೆ ಮಹಾದೇವಿಯ ಹಾಡು ಶಿವಪದಕ್ಕೆ ಮಿಗಿಲಾಗಿದೆ. ಶಿವ ಭಕ್ತಿಸಾರ ತಿಳಿಸುವುದಕ್ಕೆ ಕೊನೆಯೇ ಇಲ್ಲವೆಂದು ಕವಿಯು ಹೇಳಿಬಿಟ್ಟಿದ್ದಾನೆ.

* * *

ಜಾನಪದ ಸಾಹಿತ್ಯದ ಒಂದು ಅಂಗವಾದ ಕೋಲು ಪದಗಳಲ್ಲಿ ಶರಣ-ಶರೆಯರನ್ನು ಕುರಿತು ಹಾಡಿರುವುದನ್ನು ಕಾಣುತ್ತೇವೆ. ಹಳ್ಳಿಗಳಲ್ಲಿ ನಡೆಯುವ ಅನೇಕ ಉತ್ಸವಗಳಲ್ಲಿ ಹಳ್ಳಿಗರು ಹೊಯ್ಯುತ್ತ ಕುಣಿಯುತ್ತಾರೆ. ಆಗ ಹಾಡುವ ಹಾಡುಗಳೇ ಕೋಲು ಪದಗಳು.

'ಅರ್ಜುನ ಜೋಗಿಯ ಹಾಡುಗಬ್ಬ'ದಲ್ಲಿ ಬರುವ – ಕೋಲೆನ್ನ ಕೋಲ ॥ಪ॥
ಅಕ್ಕನ ಬಲಗೊಂಡೆ ಅಕ್ಕಮ್ಮನ ಬಲಗೊಂಡೆ
ಅಕ್ಕಮಾದೇವಿ ಬಲಗೊಂಡೆ। ಕೋ। ಕೆರೂರ
ಅಕ್ಕದ್ಯಾಮವ್ವ ಬಲಗೊಂಡೆ। ಕೋ।
ಸತ್ತಿಕ ಶರಣರ ಕಥೆಯ ಹಚ್ಚಿದರೆಂಬುದನ
ಕೇಳಿ ಕೈಕಷ್ಟ ಹತಮಾಡಿ। ಕೋ। ಕೇಳಿದವರ
ಪಲ್ಲಕ್ಕಿ ಪದವಿ ದೊರೆಯಾದ। ಕೋ।[೪]

ಸತ್ಯಶರಣರ ಕಥೆ ಕೇಳಿದರೆ ಕಷ್ಟಗಳು ಪರಿಹಾರವಾಗುವುದರ ಜೊತೆಗೆ ಅವರಿಗೆ ಪಲ್ಲಕ್ಕಿ ಪದವಿ ದೊರೆಯುತ್ತದೆಂದು ಕಾವ್ಯ ಪ್ರಯೋಜನಗಳನ್ನು ಆ ಕವಿ ಹೇಳುತ್ತಾನೆ.

ಎಲ್ಲೆಲ್ಲಿ ಅಲ್ಲಮ ಪ್ರಭುವಿನ ಚರಿತ್ರೆ ಬರುತ್ತದೆಯೋ ಅಲ್ಲೆಲ್ಲ ಪಾರ್ವತಿಯ ತಾಮಸ ಕಳೆಯ ರೂಪಾದ ಮಾಯೆ; ಹಾಗೂ ಪಾರ್ವತಿಯ ಸಾತ್ವಿಕ ಕಳೆಯಾದ ವಿಮಳೆ (ಮಾದೇವಿ)ಯ ಚರಿತ್ರೆ ಬರುತ್ತದೆ. ಜೀವನ ಜೋಕಾಲಿ (ಭಾಗ ೮) ಕೋಲು ಪದ"ದಲ್ಲಿ ಪ್ರಭುದೇವರ ಕೋಲು ಪದದಲ್ಲಿ ಬರುವ ಅಕ್ಕಮಾದೇವಿಯನ್ನು ಕುರಿತು ಹಾಡಿರುವ ರೀತಿ ಹೀಗಿದೆ:

ಮಾಯೆ ಅಲ್ಲಮನಿಗೆ ಸೋತು ಪಾರ್ವತಿಯ ಬಳಿಗೆ ಬಂದಾಗ –

ಬರಲು ಪಾರ್ವತಿ । ನಯದಿ । ಹರನ ಪಾದಕೆ
ಶರಣ ಮಾಡುತ । ನಿಮ್ಮ । ಶರಣರಾಟವು ೨೩೯
ತಿಳಿಯದೀಗಲು । ಎಂದು । ಚಳಕದಿಂದಲಿ
ಮುಳಿದು ಮಾಯೆಗೆ । ನೀನು । ಇಳೆಗೆ ಜನಿಸೆನೆ ೨೪೦
ಭಕ್ತಿಯಿಂದಲಿ । ನೀನು । ಶಕ್ತಳಾಗುವಿ
ರಕ್ತವಿರಹಿತ । ಅಲ್ಲಮ । ಯುಕ್ತಳಾಗು ವಿ ೨೪೧
ವರಕಲ್ಯಾಣದಿ । ನೀನು । ಶರಣ ನಿಚಯದಿ
ಗುರುವು ಪ್ರಭುವಿನ । ನಿಜವ । ಅರಿದು ಬಾರೆನೆ ೨೪೨
ಎಂದು ಪೇಳುತ । ಜ್ಞಾನ । ದಿಂದ ಬೋಧಿಸೆ
ಬಂದಳಿಳೆಯೊಳು । ಮಾಯೆ । ಚಂದದಿಂದಲಿ ೨೪೩
ಉಡತಡಿಯೊಳಗೆ । ಚೆಲ್ವ । ನುಡಿವ ಹೆಸರಿಲಿ
ನಡೆದು ಬಂದಳು । ಭಕ್ತಿ । ಚಂದದಿಂದಲಿ ೨೪೪
ಅಕ್ಕಮಾದೇವಿ । ಎಂಬ । ಚೊಕ್ಕ ಹೆಸರಿಲಿ
ಅಕ್ಕರಿಂದಲಿ । ಭಕ್ತಿ । ಉಕ್ಕಿಬಂದಳು ೨೪೫
ಬರುತಲಾ ಕ್ಷಣ। ಕಲ್ಯಾಣ । ಪುರಕೆ ಬರುತಲಿ
ಶರಣ ನಿಚಯದಿ । ಪ್ರಭುವ । ಕುರುಹನೇಳುತ ೨೪೬
ಜ್ಞಾನಬೋಧೆಯ । ತಾನು । ಮಾನದಿಂದಲಿ
ಕೂನ* ತಿಳಿವ್ರತ । ತಾನು ಲೀನವಾದಳು ೨೪೭
ಸಕಲ ರಚನೆಯ । ಮರೆದು । ಯುಕುತಿಯಿಂದಲಿ
ಸಕಳೆ ನಡೆದಳು । ಮೇಲೆ । ಪ್ರಕರ ಭವನಕೆ ೨೪೮
ಆರುಸ್ಥಲವನು ಹತ್ತಿ । ಮೀರಿ ರಂಧ್ರವ
ಸೇರಿ ನಿಂತಳು । ಪಚಿ । ದ್ವಾರ ನಿಲಯದಿ ೨೪೯
ರಣ ಸಮುಹವು । ಈಕೆ । ಪರಿಯನೋಡುತ
ಬೆರಗು ವಡುತಲಿ । ಈಕೆ ಸ್ಥಿರವ ಹೊಕ್ಕಳು[೫] ೨೫೦

ಇಲ್ಲಿ ಬಂದಿರುವ ಅಕ್ಕಮಹಾದೇವಿಯ ಜೀವನ ಚರಿತ್ರೆ ಸಂಕ್ಷಿಪ್ತವಾಗಿದ್ದರೂ ಬಹು ಸ್ಫುಟವಾಗಿ ವ್ಯಕ್ತಿತ್ವ ಎದ್ದುಕಾಣುತ್ತದೆ. ನಿರಾಕಾರನಾದ (ರಕ್ತವಿರಹಿತ) ಅಲ್ಲಮನನ್ನು ಒಲಿಸಿ ಕೊಳ್ಳಲು ನೀನು ಶಕ್ತಳು, ಯುಕ್ತಳು ಎಂದು ಪಾರ್ವತಿ ಹೇಳುತ್ತಾಳೆ. "ಕಲ್ಯಾಣಕ್ಕೆ ಹೋಗಿ

---

* ಕೂನ = ಗುರುತು

ಅಲ್ಲಮ ಪ್ರಭುವಿನ ನಿಜವ ಅರಿದು ಬಾ" ಎಂದು ಆಜ್ಞಾಪಿಸುತ್ತಾಳೆ. ಪಾರ್ವತಿಯ ಆಜ್ಞೆಯ ಮೇರೆಗೆ ಉಡುತಡಿ ಈಗಿನ ಶಿಕಾರಿಪುರ ತಾಲ್ಲೂಕಿನಲ್ಲಿ ಜನಿಸಿ ಕಲ್ಯಾಣಕ್ಕೆ ಬಂದು ಶರಣ ನಿಚಯದಲ್ಲಿರುವ ಪ್ರಭುವಿಗೆ ತನ್ನ ಕುರುಹು ಹೇಳುತ್ತ ಕೂನು (ಗುರುತು) ತೋರಿಸುತ್ತ ಲಿಂಗದಲ್ಲಿ ಲೀನವಾದಳು. ಭಕ್ತ, ಮಾಹೇಶ ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಎಂಬ ಆರು ಸ್ಥಲವನು ಏರಿ ಮೀರಿ ನಿಂತಳು. ಸ್ಥಿರವ ಹೊಕ್ಕಳು. ಆಗ ಎಲ್ಲ ಶರಣರೂ ಬೆರಗಾಗಿ ನೋಡುತ್ತಿದ್ದರು. ಈ 'ಕೋಲು ಪದ'ದಲ್ಲಿ ಬಂದಿರುವ ಭಾಷೆ ಸರಳವೂ ಸುಂದರವೂ ಆಗಿದೆ. ಇನ್ನಷ್ಟು ಕೇಳಬೇಕು ಕೇಳಬೇಕು ಎನ್ನಿಸುತ್ತದೆ.

ಕಾಪಸೆ ರೇವಪ್ಪನವರ ಸಂಗ್ರಹಿಸಿದ 'ಮಲ್ಲಿಗೆ ದಂಡೆ'ಯಲ್ಲಿ 'ಅಕ್ಕಮಹಾದೇವಿಯ ಹಾಡು' ಎಂಬ ಒಂದು ಕೋಲು ಪದ ಇದೆ. ಇದಕ್ಕೆ 'ಜೈನರ ಹಾಡು' ಎಂದೂ ಕರೆದಿದ್ದಾರೆ.

ಅಂಕ ಬಂಕ ದವನ। ಟೊಂಕದ ಮ್ಯಾಲೆ ಕೈ ಯಿಟ್ಟು।
ಡೊಂಕ ನಿಂತಾನ ಇವನ್ಯಾರ। ಕೋಲೆಣ್ಣ ಕೋಲ ॥ ೧ ॥

ಅವ ನನ್ನ ಅಣ್ಣನ। ಅವ ನನ್ನ ತಮ್ಮನ
ಅವನನ್ನ ಊರ ಒಡಿಯನ। ಕೋ ॥ ೨ ॥

ಅವ ನನ್ನ ಊರ ಒಡಿಯನ। ನನ್ನ ಮಗಳ
ಅವನಿಗಿ ನಿನಗ ಕೊಡತೀನ। ಕೋ ॥ ೩ ॥

ನೀವು ಜಯನರು। ನಾವು ನಿಂಗೊಂತರು
ಕೊಟ್ಟರೊಲ್ಲೆನ ಜಯನರಿಗೆ। ಕೋ ॥ ೪ ॥

ಹೀಗೆ ಪ್ರಾರಂಭವಾಗುವ ಈ ಕೋಲು ಪದ 'ಅಕ್ಕಮಹಾದೇವಿಯ ಕಥೆಯೊಡನೆ ಬಹಳವಾಗಿ ಹೋಲುತ್ತಿರುವುದರಿಂದ ನಾವು ಇದಕ್ಕೆ 'ಅಕ್ಕಮಹಾದೇವಿಯ ಹಾಡು' ಎಂಬ ಹೆಸರನ್ನು ಕೊಟ್ಟಿದ್ದೇವೆ. ನಮ್ಮ ಊಹೆಯು ಬಹಳಮಟ್ಟಿಗೆ ಸರಿಯಾಗಿದೆಯೆಂದು ತೋರುತ್ತದೆ. ಹಾಗಿದ್ದುದಾದರೆ ಈ ಹಾಡಿಗೆ ಐತಿಹಾಸಿಕ ಮಹತ್ವವು ಅತಿಶಯವಾಗಿ ಉಂಟು"[೬] ಎಂಬ ಸಂಗ್ರಹಕಾರರ ಮಾತು ಅಷ್ಟೇನೂ ಸಮಂಜಸವಾಗಿ ತೋರುವುದಿಲ್ಲ. 'ಅವ ನನ್ನ ಊರ ಒಡೆಯನು' ಎನ್ನುವ ಮಾತು ಕೌಶಿಕ ಮಹಾರಾಜನಿಗೆ ಒಪ್ಪುತ್ತದೆ. ಅವನು ಜೈನರವನು ಆದರೆ 'ಅವ ನನ್ನ ತಮ್ಮ ಅವನ ನನ್ನ ಅಣ್ಣ' ಎನ್ನುವ ಮಾತು ಹೇಗೆ ತಾನೇ ಒಪ್ಪುತ್ತದೆ.

ಅಕ್ಕಮಹಾದೇವಿಯ ತಾಯಿ 'ಸುಮತಿ' ಇಲ್ಲವೇ 'ಲಿಂಗಮ್ಮ' ಇವಳು ಜೈನಳಲ್ಲ, ಈ ಕೋಲು ಪದದಲ್ಲಿ ಬಂದಿರುವ ತಾಯಿ ಸಂತೋಷದಿಂದ ಮಗಳನ್ನು ಮದುವೆಗೆ ಶೃಂಗರಿಸುತ್ತಾಳೆ. ಇದು ಅಕ್ಕನ ಜೀವನದಲ್ಲಿ ನಡೆದಿಲ್ಲ. ತಂದೆ ತಾಯಿಗಳಿಗೆ ಧೈರ್ಯ ಹೇಳಿ ತಾನೇ ಕೌಶಿಕನ ಅರಮನೆಗೆ ಹೋಗುತ್ತಾಳೆ. ಒಟ್ಟಿನಲ್ಲಿ ಇದಕ್ಕೆ 'ಅಕ್ಕಮಹಾದೇವಿಯ ಹಾಡು' ಎನ್ನುವುದಕ್ಕಿಂತ 'ಜೈನರ ಹಾಡು' ಎಂಬ ಹೆಸರೇ ಯೋಗ್ಯವಾಗಿದೆ.

ಬಸವಣ್ಣ, ಚನ್ನಬಸವಣ್ಣ, ಅಲ್ಲಮಪ್ರಭು ಮುಂತಾದವರು ತಮ್ಮ ಹಾಡುಗಳಲ್ಲಿ ಅಲ್ಲಲ್ಲಿ 'ಅಕ್ಕ'ನನ್ನು ನೆನೆದಿರುವುದನ್ನು ಕಾಣುತ್ತೇವೆ.

ಅಣ್ಣನ ಬಳಗದ ಹಿನ್ನೆಲೆಯಾಗಿ ಅಕ್ಕನ ಬಳಗವ ಕೂಡ್ಸಿಹನ
ಅಕ್ಕಮಹಾದೇವಿ ಹೊನ್ನಮ್ಮ ಲಕ್ಕಮ್ಮ ಜ್ಞಾನವಂತ ಶರಣೆಯರನ್ನ"
"ಜೋ ಎಂದು ತೂಗುವೆ ಆದಿ ಬಸವಣ್ಣ" – ಎಂಬ ಹಾಡಿನಲ್ಲಿ

"ಸತ್ಯಕ್ಕ ಚೋಳಕ್ಕ ಸುಗ್ಗಲಾದೇವಿ
ನಿತ್ಯ ಸೇವೆಯ ಮಾಳ್ಪ ಶಿವ ಮಹಾದೇವಿ
ಸತ್ಯ ಸದ್ಗುಣಿಯು ಅಕ್ಕಮಹಾದೇವಿ
ಹೀಂಗ ಪ್ರೀತಿಯಿಂದಲಿ ಬಂದಳು ದಾನಮ್ಮದೇವಿ ಜೋ ಜೋ ॥ ೧೦ ॥
ಶರಣ ಶರಣೆಯರು ಕೂಡಿದರಲ್ಲಿ
ಪರಮಾರ್ಥ ತತ್ವ ಅನುಭವದಲ್ಲಿ
ಸಾಧನ ಮಾರ್ಗ ಶಿವನ ಕಥೆಯಲ್ಲಿ
ಆಗ ಶೋಧಿಸಿದರನುಭವ ಮಂಟಪದಲ್ಲಿ ಜೋ ಜೋ"[೭] ॥ ೧೧ ॥

ಹೀಗೆ ಅನುಭವಮಂಟಪದ ಶರಣ-ಶರಣೆಯರು ಸಾಧಿಸಿದ ಸಾಧನ ಮಾರ್ಗ, ಪಾರಮಾರ್ಥ ತತ್ವ, ಜೀವನ ಸಿದ್ಧಿಗಳನ್ನು ನೆನೆಯುವಲ್ಲೆಲ್ಲಾ 'ಅಕ್ಕ'ನ ಹೆಸರು, ನಾಮ ಸ್ಮರಣೆ ಬರಲೇಬೇಕು. ಅಕ್ಕನ ಜ್ಞಾನ, ಪಾಂಡಿತ್ಯ, ಬಹುಶೃತತ್ವ ಅವಳು ಏರಿದ ಎತ್ತರ ಬಿತ್ತರಕ್ಕೆ ಈ ನಿರಕ್ಷರ ಕುಕ್ಷಿಗಳ ಸರಳ ಸುಂದರ ಮಾತುಗಳೇ ಸಾಕ್ಷಿ.

ಆಧುನಿಕ ಜನಪದ ಕವಿಗಳು ಕಂಡ 'ಅಕ್ಕ'

ಆಧುನಿಕರಲ್ಲಿ ಪ್ರಥಮ ಸ್ಥಾನ ದಿ. ಜಯದೇವಿ ತಾಯಿ ಲಿಗಾಡೆಯವರಿಗಿದೆ. ಇವರು ಸೊಲ್ಲಾಪುರದಲ್ಲಿ ನೆಲೆಸಿ, ಸಿದ್ಧರಾಮನ ಭಕ್ತಳಾಗಿ ಕನ್ನಡ ಸಾಹಿತ್ಯ ಸೇವೆಯನ್ನು ಮಾಡಿದ್ದಾರೆ. ಈ ಕವಿಯಿತ್ರಿ 'ಸಿದ್ಧರಾಮೇಶ್ವರ ಪುರಾಣ'ವನ್ನು ತ್ರಿಪದಿ ಛಂದಸ್ಸಿನಲ್ಲಿ ನಾಲ್ಕು ಸಾವಿರ ಪದ್ಯಗಳ ಮಹಾಕಾವ್ಯ ರಚಿಸಿದ್ದಾರೆ.

"ಮಹಿಳಾ ಹೃದಯದ ರಸಾನುಭಾವ ತನ್ನ ಸಂಪತ್ತನ್ನೆಲ್ಲಾ ಈ ಕೃತಿಯಲ್ಲಿ ಸೂರೆ ಮಾಡಿಕೊಂಡಿದೆ. ಹಿಂದೆ ಅನಾಮಧೇಯವಾಗಿ ತನ್ನ ದುಃಖ-ಸುಖ-ಭಕ್ತಿಗಳನ್ನು ಜಾನಪದ ತ್ರಿಪದಿಯಲ್ಲಿ ತೋಡಿಕೊಂಡ ತಾಯಿಯ ಹೃದಯ ಇಂದು ಪ್ರಜ್ಞಾಪೂರ್ವಕವಾಗಿ ಅದೇ ಸೊಗಸಿನ ಹಾಡನ್ನು ಹಾಡಿದೆ. ಜಯದೇವಿ ತಾಯಿಯವರ ಈ ಕೃತಿ ಘನವಾದುದು. ಅದಕ್ಕೂ ಘನತರವಾಗಿ ಅದರ ಹಿಂದೆ ಅವರ ಚಾರಿತ್ರ್ಯ ನಿಂದಿದೆ"[೮] ಇದಲ್ಲದೆ 'ತಾಯಿಯ ಪದಗಳು' ಎಂಬ ಕೃತಿ ಒಂದು ಸಾವಿರ ತ್ರಿಪದಿಗಳನ್ನು ಒಳಗೊಂಡಿದೆ. ಈ ಎರಡೂ ಕೃತಿಗಳಲ್ಲಿ ಅಕ್ಕಮಹಾದೇವಿಯನ್ನು ಕುರಿತು ಮನದುಂಬಿ ಹಾಡಿದ್ದಾರೆ. ಮೊದಲನೆಯದಾಗಿ ಅವರ 'ಸಿದ್ಧರಾಮೇಶ್ವರ ಪುರಾಣ'ದಲ್ಲಿ ಬರುವ ಅಕ್ಕನನ್ನು ಕುರಿತ ಪದಗಳನ್ನು ನೋಡುವಾ

"ಅಕ್ಕ ನಾಗಲ ತಾಯಿ । ಅಕ್ಕಮಹಾದೇವಿಯೇ
ಮಿಕ್ಕೀದ ನೀಲಮ್ಮ ಗಂಗಮ್ಮ – ಸಂಗವ್ವೆ
ಚಿಕ್ಕಮಗಳಾನು ಸಲುಹಿರಿ" ಎಂದು ಪ್ರಾರ್ಥಿಸುತ್ತಾಳೆ.

ನಮ್ಮಮ್ಮ ಮಹಾದೇವಿ । ನಮ್ಮಯ್ಯ ಅಜಗಣ್ಣ
ನಮ್ಮೊಡೆಯ ಅಲ್ಲಮ ಪ್ರಭುದೇವ – ನಿಮ್ಮನು
ಒಮ್ಮನದಿಂದ ನೆನೆಯುವೆ.

ಅಕ್ಕಮಹಾದೇವಿ । ಲಕ್ಕಮ್ಮ ಸತ್ಯಕ್ಕ
ಮಿಕ್ಕೀದ ಚೋಳಕ್ಕ । ನಂಬಿಯಕ್ಕ ಚಂಗಳವ್ವೆ

ಚಿಕ್ಕಮಗನೆಂದು ಸಲಹಿರಿ
ಹರನೆ ಗಂಡನೆಂದು । ವರಸಿದೆ ನನ್ನಕ್ಕ
ಶರಣಸತಿ ಲಿಂಗಪತಿ ಎಂಬ । ಶಿವತತ್ವ
ವೆರಸಿ ತೋರಿದೆ ವರವಾಗು
ಒಂದೊಂದು ನುಡಿಯಲಿ । ಅಂದಾದ ನಡೆತುಂಬಿ
ನಿಂದ ನಿಜಾನಂದದನುಭಾವ – ಪೊಂದಿದೆ
ವಂದಿಪೆ ಅಕ್ಕಗೆ ಮನದುಂಬಿ
ಅಕ್ಕಮಹಾದೇವಿಯು । ಗಕ್ಕನೆ ಮಣಿದಳು
ಮಿಕ್ಕಿಮೀರದ ಬೆಳಗಿನ – ಮಾಬೆಳಗೆ
ಅಕ್ಕರದ ಬೆಳೆಯಾಗಿ ನಿಂತಿರುವಿ[೭]

ಶರಣರು ಅನುಭಾವ ಮಂಟಪದಲ್ಲಿ ಗಂಡು–ಹೆಣ್ಣೆಂಬ ಭೇದ ಮರೆತ ಇಬ್ಬರೂ ಸರಿ ಸಮಾನರು, ಜ್ಞಾನಕ್ಕೆ ಹಿರಿದು–ಕಿರಿದು ಇಲ್ಲ. ಬುದ್ಧಿವಂತರೇ ಹಿರಿಯರೆಂದು ಚಿಕ್ಕವರನ್ನೂ ಗೌರವಿಸುತ್ತಿದ್ದರು. "ಗಣಾಃ ಪೂಜಾ ಸ್ಥಾನಂ ಗುಣಿಷು ನ ಚ ಲಿಂಗಂ ನ ಚ ವಯಃ" ಎಂಬ ಕವಿ ಭವಭೂತಿಯ ವಾಣಿಯಂತೆ ಅಕ್ಕಮಹಾದೇವಿಗೆ ಎಂತಹ ಸ್ಥಾನವಿತ್ತೆಂಬುದಕ್ಕೆ ಈ ಕೆಳಗಿನ ಪದಗಳೇ ಸಾಕ್ಷಿ.

ಕಣ್ಣು ಕಾಣದವರು । ಹೆಣ್ಣು ಕೀಳವೆಂದು
ಅಣ್ಣಗಳೆ ಉಸಿರಬೇಡಿರೆಂದು – ಉನ್ನತ
ತಾಣಗೊಟ್ಟು ಮನ್ನಣೆಯಿತ್ತರು
ನರೆಗೂದಲಾಗಲು । ಹಿರಿಯರೆಂದೆನ್ನದೆ
ಕಿರಿಯರ ಜ್ಞಾನಕ್ಕೆ ಹಿರಿತನ ಕೊಟ್ಟರು
ಶರಣರು (ಅಕ್ಕನ) ಗೌರವಿಸಿದರು"
ಅಕ್ಕಮಹಾದೇವಿ । ಮಿಕ್ಕೀದ ಯೋಗಿಣಿ
ಮುಕ್ಕಣ್ಣ ವಾಸಿಪ ಕದಳಿಗೆ । ಹೊರಟಳು
ಪೊಕ್ಕು ಬೆರೆಯಲು ಲಿಂಗದೊಳು[೮]

ಹೆಣ್ಣು ಗಂಡುಗಳೆಂಬ । ಸಂಣತನವಳಿಯುತ
ಹೆಣ್ಣೀನ ಮನ್ನಣೆ ಸಾರುವುದು – ಈ ನಾಡು
ಪುಣ್ಯದ ನೆಲವೆಂದರು ಸಿದ್ದೇಶ[೯]

ಕೊನೆಯದಾಗಿ ಕವಿಯಿತ್ರಿ ತನ್ನ ಕೃತಜ್ಞತೆಗಳನ್ನು ಹೀಗೆ ಸಲ್ಲಿಸುತ್ತಾಳೆ.

ಜಯಮಹಾದೇವಿಯೆ । ಜಯ ರುದ್ರಾಂಬಿಕೆ
ಜಯ ಅತ್ತೆ ಪ್ರಯಾಗ ತಾಯಿಯೆ – ಸಂಗಮ್ಮ
ದಯಮಾಡಿ ಎನ್ನ ಸಲಹಿದಿರಿ[೧೦]

ತಾಯಿ ಜಯದೇವಿ ಅವರ 'ತಾಯಿಯ ಪದಗಳು' ಕೃತಿಯಲ್ಲಿ 'ಅಕ್ಕ'ನನ್ನು ಕುರಿತು ಹಾಡಿರುವ ಬಗೆ ಇನ್ನೊಂದು ರೀತಿಯದು. ಅದರ ಸವಿಯನ್ನು ಈಗ ಸವಿಯೋಣ.

'ನೇರವಾಗಿ ಹೃದಯದಿಂದ ಹೃದಯವನ್ನು ಪ್ರವೇಶಿಸುವುದೇ ಉತ್ತಮ ಸಾಹಿತ್ಯ'ವಾಗುವ ಪಕ್ಷಕ್ಕೆ ಈ ಜನಪದ ಸಾಹಿತ್ಯವೂ ಈ ಗುಂಪಿಗೆ ಸೇರಲರ್ಹವಾಗಿದೆ. ಪ್ರೌಢ ಪದಗಳ ಸರಣಿ ಇಲ್ಲದಿರಬಹುದು, ಅಲಂಕಾರಗಳ ಗೊಡ್ಡು ಆಡಂಬರವಿಲ್ಲದಿರಬಹುದು, ಉಕ್ತಿ ವೈಚಿತ್ರ್ಯಗಳ ಕಪಟ ನಟನೆಯಿಲ್ಲದಿರಬಹುದು; ಆದರೂ ಅಲ್ಲಿಯ ಮಾತಿನಲ್ಲೊಂದು ಶಕ್ತಿಯಿದೆ, ದನಿಯಿದೆ, ಸೌಂದರ್ಯವಿದೆ; ಪದ ಬಂಧದ ಶೈಥಿಲ್ಯದಲ್ಲೊಂದು ಸೊಬಗಿದೆ; ಏಕೆಂದರೆ ಅವು ಹೃದಯದ ಭಾವ ತರಂಗವನ್ನು ಸುಸ್ಪಷ್ಟವಾಗಿ, ನಿಷ್ಕಪಟವಾಗಿ ಹೊತ್ತು ಬರುತ್ತದೆ. ಹಾಡಬೇಕೆಂದು ಹಾಡಿದ ಹಾಡಲ್ಲವದು. ತನಗೆ ತಾನೇ ಸ್ವಭಾವ ಸಿದ್ಧವಾಗಿ, ಹಾಡುತ್ತೇನೆಂಬ ಪರಿವೆಯೇ ಇಲ್ಲದೆ, ಬುದ್ಧಿಭಾವಕ್ಕೆ ಸೆರೆಯಾದಾಗ ಹಾಡಿದ ಹಾಡದು"[೧೧] ಎಂಬ 'ದೇಜಗೌ' ಅವರ ಮಾತು ಮನನೀಯವಾಗಿದೆ, ಯಥಾಯೋಗ್ಯವಾಗಿದೆ.

ತನು ಮನ ಧನಗಳು ಮಾನವನನ್ನು ಹಾಳು ಮಾಡುತ್ತವೆ. ಈ ಜೀವ ಅನೇಕ ಬಾರಿ ಹುಟ್ಟಿ ಬರುತ್ತದೆ. ಇದಕ್ಕೆ ಹೇಸಿಗೆಯೇ ಇಲ್ಲವೆಂಬುದನ್ನು –

ಏಸೇಸು ಕಟಗೊಂಡಿ ಏಸೇಸು ಬಿಟಗೊಂಡಿ
ಬ್ಯಾಸರಿಲ್ಲದೆ ದೇಹವ – ಹೇ ಜೀವ
ಹೇಸಿಕಿ ನಿನಗೆ ತುಸು ಇಲ್ಲ

ಈ ಹಾಡು ಅಕ್ಕನ 'ಒಂದಲ್ಲ ಎರಡಲ್ಲ, ಮೂರಲ್ಲ, ನಾಲ್ಕಲ್ಲ, ಎಂಭತ್ನಾಲ್ಕು ಲಕ್ಷ್ಯ ಯೋನಿಯೊಳಗೆ ಬಂದೆ ಬಂದೆ. ಬಾರದ ಭವಂಗಳ ನುಂಡೆ ನುಂಡೆ..." ವಚನವನ್ನು ನೆನಪಿಗೆ ತರುತ್ತದೆ.

ಕದಳೀಯ ಬನದಾಗ ಬದುಕು ಬಾಳೆವ ಮಾಡಿ
ಕದಲ್ಯಾಗ ಕಾಲ ತೊಡಕ್ಯಾವ – ಪ್ರಭುದೇವ
ಮದಳಿ ಬಾರಿಸಿ ತೊಡಕ ಬಿಡಿಸಯ್ಯ ಎಂದು

ವೀರ ವಿರಾಗಿಣಿ ಅಕ್ಕ ಬೇಡುತ್ತಾಳೆ. 'ಹರಕೀಯ ಕೊಡು ತಾಯಿ ವಿರತೀಲಿ ಹಿರಿಯಾಕಿ' ಎಂಬ ಮಾತು ವೈರಾಗ್ಯ ನಿಧಿ ಅಕ್ಕ ಎಂಬುದನ್ನು ನೆನಪಿಗೆ ತರುತ್ತದೆ. 'ಚೆನ್ನಮಲ್ಲೇಶನ ಮಡದಿ ಎಂದು ಹೃದಯ ತುಂಬಿ ಹಾಡಿದ್ದಾಳೆ. 'ಬೇಡಿ ಬೇಡಿ ನಾನು ಭವಿಯ ಆಗೆನು ಹಾಡಿ ಆಗಲಾರೆ ಭುವಿಯೊಳಗೆ' ಎಂದೂ 'ಮುದ್ದು ಶರಣರ ಸಂಸ್ಮರಣದಿಂದ ನಾ ಗೆದ್ದೆನು ಭವದ ಬಂಧನವನೆಂದೂ ಹಾಡಿದ್ದಾಳೆ.

'ಶರಣ ಸತಿ ಲಿಂಗ ಪತಿ'ಯೆಂದು ಸಾರಿದ ಅಕ್ಕ ಸಾವ ಕೆಡುವ ಈ ಲೋಕದ ಗಂಡರನೊಯ್ದು ಒಲೆಯಲ್ಲಿಕ್ಕು' ಎಂದೂ ಚೆನ್ನಮಲ್ಲಿಕಾರ್ಜುನನೇ ತನಗೆ ಗಂಡನೆಂದೂ ಸಾರಿ ಸಾರಿ ಹೇಳಿರುವುದನ್ನೇ ಇಲ್ಲಿ 'ಹಮ್ಮಳಿದು ನಿಮ್ಮವಳೇ ಆಗಿದ್ದೇನೆಂದೂ ಸಂಸಾರ ಈಸಾಡಿ ಬಂದಿರುವೆನೆಂದೂ,

'ಮಂಗಳ ಮೂರುತಿ ಕಂಗಳ ಕಡು ಚೆಲುವ
ಅಂಗಯ್ಯದೊಳಗ ಬೆಳಗ್ಯಾನ । ಮಹಾಲಿಂಗ
ಅಂಗಾಂಗದೊಳಗೆ$ ತುಂಬ್ಯಾನ'

ಮೆಟ್ಟೀದ ಮೂರಕ್ಕ ಆರಕ್ಕ ಎಂಟಕ್ಕ
ದಾಟೀದ ದಟ್ಟ ಕದಳೀಯ । ಬನದಾಗ
ಬಟ್ಟಬಯಲಾಗ ಬೆರೆತೇನ

ಅಕ್ಕನ ಆಧ್ಯಾತ್ಮದ ಎತ್ತರ ಬಿತ್ತರಕ್ಕೆ ಈ ಹಾಡು ಸಾಕ್ಷಿಯಾಗಿದೆ. ಮೂರು ಗುಣ (ಸತ್ವ, ರಜ, ತಮ) ಆರು (ಅರಿಷಡ್ವರ್ಗ – ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ); ಎಂಟು (ಅಷ್ಟ) ಮದಗಳು ಇವನ್ನೆಲ್ಲ ಗೆದ್ದು ಕದಳೀ ಬನದಾಗ ಬಯಲಾದಳು ಎಂಬುದನ್ನು ಸೂಚಿಸುತ್ತದೆ.

ಮಾಯಾ ಜಾಲವು ತನು ಬಂದಂತೆ ಹರಿದೋಯ್ತು
ಮಹಾಲಿಂಗ ಬಂದೆನ್ನ ಅಂಗದೊಳು ಬೆರತಾನ' ಎಂದೂ ತನ್ನ ಗಂಡ
"ಎಲ್ಲರ ಅಂಥವ ಅಲ್ಲವ್ವ ನನ್ನವ
ಬಲ್ಲನವ್ವ ಎನ್ನೆಲ್ಲ ಅವಗುಣ ಬದಿಗಿಟ್ಟು
ಮೆಲ್ಲನೆ ತನ್ನೊಳುಽ ಬೆರೆಸ್ಯಾನ"
ಮಾತು ಮಂತ್ರವಾಗಿ ಜಾತ ಪುನೀತವಾಗಿ
ಆನೆ ಗಂಡಾಗಿಽ ಕೂಡಿಕೊಂಡ – ಚಿಲ್ಲಿಂಗ
ಸತಿ–ಪತಿ ಭಾವದಿ ಬೆಸಗೊಂಡ
ಅಂಗಯ್ಯ ಲಿಂಗಕ್ಕ ಸಂಗಯ್ಯ ಅಂದೇನ
ಭಂಗತರಬ್ಯಾಡೋ ಭವಹರನೆ – ಅಂಗವು
ಲಿಂಗದೊಳು ಬೆರೆತುಽ ಬಯಲಾಯ್ತು"

'ಅಕ್ಕ'ನನ್ನು ಕುರಿತು ದಣಿವರಿಯದೇ ಹಾಡಿದ ಜಯದೇವಿ ತಾಯಿ ಅವರು ಹೆಣ್ಣು ಜೀವಕ್ಕೆ ಅಕ್ಕ ಹೊಸಕಣ್ಣು ಕೊಟ್ಟಳೆಂದೂ, ಅಕ್ಕನ ನುಡಿ (ವಚನ)ಗಳು ದಿಕ್ಕು ದಿಕ್ಕಿಗೆ ಹೊಸ ಬೆಳಕನ್ನುಂಟುಮಾಡಿದವೆಂದೂ ಶರಣರನ್ನು ಅಗಲಿ ಇರುವುದಕ್ಕಿಂತ ಮರಣವೇ ಲೇಸೆಂದು ಹಾಡಿದ್ದಾಳೆ. ಅಕ್ಕನ ವಚನಗಳ ಅನಿರ್ವಚನೀಯ ಆನಂದವನ್ನುಂಡ ತಾಯಿ ಜಯದೇವಿ ಅವರಿಗೆ ಅಕ್ಕ, ಅಕ್ಕನ ವಚನಗಳೆಂದರೆ ರೋಮಾಂಚನ, ಮೈಯುಬ್ಬಿ ಹಾಡುತ್ತಾರೆ.

ಕಿರಿಕಿರಿ ಬ್ಯಾಡಂತ ಗಿರಿ ಏರಿ ಕುಂತರ
ಬರುವುದೂ ಬಿಡರು ಭಕ್ತರು ಅಕ್ಕವ್ವ
ವರವ ನೀಡೆಂದು ಬೇಡ್ಯಾರು.
ಅಕ್ಕನ ಜೀವನ ಚೊಕ್ಕಚಿನ್ನದಂತೆ
ಪಕ್ವಾದ ಮಾವೀನ ಫಲದಂತೆ। ಅಕ್ಕವ್ವ
ಮಿಕ್ಯಾಳ ಮೂರು ಲೋಕವ
ಅಕ್ಕವ್ವ ನೀ ನಿನ್ನ ಚಿಕ್ಕತನದಾಗ
ಮುಕ್ಕಣ್ಣಗ ಒಲಿಸಿ ಮದಿವ್ಯಾದಿ ಶರಣರ
ಅಕ್ಕಾಗಿ ಹಿರಿತನ ಪಡಕೊಂಡಿ
ಅಕ್ಕನ ಅರಿಲಾಕ ಭಾವ ಪಕ್ವಾಗಬೇಕು
ಮಿಕ್ಕಿ ಮೀರಿದ ಮಹಿಮಳ – ನನ್ನಕ್ಕ
ಪೊಕ್ಕಾಳ ಕದಳೀಯಽ ಬನದಾಗ[೨]

ಅಕ್ಕನ ಅನುಭಾವವನ್ನು ಅರಿಯಬೇಕಾದರೆ ನಮ್ಮ ಭಾವ ಪಕ್ವವಾಗಬೇಕು. ಹಾಗಾಗದ ಹೊರತು ಅದು ಅಸಾಧ್ಯವೆಂಬುದು ಸುವೇದ್ಯ. ಅಕ್ಕ – "ಲಿಂಗವೆನ್ನಿ ಲಿಂಗೈಕ್ಯವೆನ್ನಿ; ಸಂಗವೆನ್ನಿ ಸಮರಸವೆನ್ನಿ ಆಯಿತೆನ್ನಿ ಆಗದೆನ್ನಿ; ನಾಯೆನ್ನಿ, ನೀಯೆನ್ನಿ ಶ್ರೀ ಚನ್ನಮಲ್ಲಿಕಾರ್ಜುನನಲ್ಲಿ

ಐಕ್ಯಳಾದಳು. ಆದರೆ ಅಕ್ಕ ಸ್ತ್ರೀ ಕುಲಕ್ಕೆ ರತ್ನ, ಶಿರೋಮಣಿ, ಅಂತ ಮಹಾ ಮಹಿಮಳ ಹುಟ್ಟು ಮತ್ತಾವಾಗೋ ಏನೋ ! ಡಾ. ಎಸ್. ಎಸ್. ಕೋತಿನ ಅವರು ಅಕ್ಕನ ಜೀವನವನ್ನು ಕುರಿತು 'ಗಿರಿಯ ಪರಂಜ್ಯೋತಿ' ಎಂಬ ಕಾವ್ಯವನ್ನು ಜಾನಪದ ಮಾದರಿಯ 'ತ್ರಿಪದಿ'ಯಲ್ಲಿ ರಚಿಸಿದ್ದಾರೆ. ಇದರಲ್ಲಿ ೪೪೧ ತ್ರಿಪದಿಗಳಿವೆ. ಇದುವರೆಗೆ ಅಕ್ಕನ ಜೀವನದಲ್ಲಿ ಕಾಣದೆ ಇದ್ದ ಯಾವುದೋ ಹೊಸತನ, ಆಕೆಯ ಜೀವನವನ್ನು ಕಾಣುವ ಹೊಸ ದೃಷ್ಟಿಕೋನ ಇದರಲ್ಲಿಲ್ಲ. ಎಲ್ಲ ಪರಿಚಿತವಾದ ಕತೆಯೇ ಆಗಿದೆ. 'ಜಾನಪದ ಜೀವನ ಕಾವ್ಯಗಳು ಇಂದು ಎಂದಿಲ್ಲದಷ್ಟು ನಾಗರಿಕ ಜನಮನವನ್ನು ಸೆಳೆಯುತ್ತಿರುವುದು ಸಂತೋಷದ ಸಂಗತಿಯಾಗಿದೆ. ಪಿಂಡ ಖರ್ಜೂರದ ರುಚಿಗೆ ಬೇಸೆತ್ತು ಅರಗಿಳಿ ಹುಣಸೆಹಣ್ಣಿಗೆ ಆಸೆ ಪಟ್ಟಂತೆ ಎಂದು ಕಾಳಿದಾಸ ವಿನೋದವಾಗಿ ಹೇಳಿದಂತೆ ನಾಗರಿಕ ಜೀವನ ನಡೆ ನುಡಿಗಳಲ್ಲಿಯ ಚರ್ವಿತ ಚರ್ವಣಕ್ಕೆ ಬೇಸತ್ತೋ, ಸುಶಿಕ್ಷಿತ ಸುಸಂಸ್ಕೃತ ಸಮಾಜಕ್ಕೆ ಬಹು ಆಕರ್ಷಣೀಯವಾಗುತ್ತಲಿದೆ. ಇದರ ಪ್ರತಿಫಲವಾಗಿ ಜಾನಪದ ಧಾಟಿ, ಭಾಷಾ ಶೈಲಿಯಲ್ಲಿ ಕಾವ್ಯ ರಚಿಸುವ ಹವ್ಯಾಸ ಹಲವಾರು ಕವಿಗಳಲ್ಲಿ ಬೆಳೆದು ಬರುತ್ತಲಿದೆ. ಅಂತಹ ಕವಿಗಳೂ ಜನಪ್ರಿಯ ವಾಗುತ್ತಿದ್ದಾರೆ. ಇದು ಜಾನಪದ ಜೀವನ ಸಂಪ್ರದಾಯ ಹಾಗೂ ಸಾಹಿತ್ಯದ ನವೋದಯದ ಚಿನ್ನವೆನ್ನಬೇಕು"[೧೩] ಈ ಮಾತು ಮನನೀಯವಾಗಿದೆ. ಆಧುನಿಕ ಜನಪದ ಕವಿಗಳಿಗೆ ಪ್ರೋತ್ಸಾಹ ನೀಡುತ್ತದೆ. ಜಾನಪದ ಪ್ರಜ್ಞೆಯನ್ನು ಹೊಂದಿದ ಕೋತಿನ ಅವರು ಜಾನಪದ ಶೈಲಿಯಲ್ಲಿ ಕಾವ್ಯವನ್ನು ಚೆನ್ನಾಗಿ ಹಣೆದಿದ್ದಾರೆ. ಜಾನಪದ ಕಾವ್ಯ ಗಂಗೆ ಓತ ಪ್ರೋತವಾಗಿ ಹರಿದಿದ್ದಾಳೆ.

ಅಕ್ಕ ನಿನ್ನಯ ಲೀಲೆ ಹೊಕ್ಕು ನನ್ನೆದೆಯೊಳಗ
ಮಿಕ್ಕು ತುಳುಕಾಡಿ ಹೊರಸೂಸೆ । ಹಾಡುವೆನು
ನಕ್ಕು ಹರಸುವುದು ಶರಣೆಂಬೆ

ಕವಿ ಸಂಪ್ರದಾಯಬದ್ಧವಾಗಿ ಅಕ್ಕನನ್ನು ಪ್ರಾರ್ಥಿಸುತ್ತಾಳೆ.

ಕನ್ನಡ ನಾಡಿನ ಸಣ್ಣ ಒಳನಾಡಾಗಿ
ಉನ್ನತಿಯ ಪಡೆದು ಮೆರೆಯುವುದು । ಉಡುತಡಿ
ಗಣ್ಯ ನಾಡೊಳಗೆ ಒಂದಾಗಿ

ತಂದೆ ಓಂಕಾರ ಶೆಟ್ಟಿ, ತಾಯಿ ಲಿಂಗವ್ವ ಇವರಿಗೆ ಬಹುದಿನದವರೆಗೆ ಮಕ್ಕಳಾಗದಿದ್ದಾಗ ಲಿಂಗಮ್ಮ ಮಕ್ಕಳಿಗಾಗಿ ಹಂಬಲಿಸುತ್ತಾಳೆ. ಪಾರ್ವತಿಯೇ ಲಿಂಗಮ್ಮನ ಕನಸಿನಲ್ಲಿ ಬಂದು 'ನಾ ನಿನಗೆ ಮಗಳಾಗಿ ಹುಟ್ಟುವೆನು' ಎಂದು ಹೇಳುತ್ತಾಳೆ. ಪಾರ್ವತಿಯ ಸಾತ್ವಿಕ ಕಳೆಯೇ ಅಕ್ಕನಾಗಿ ಹುಟ್ಟುತ್ತಾಳೆ. ಹುಟ್ಟಿದಾಗ ಅವಳ ಸೌಂದರ್ಯ ದೃಷ್ಟಿ ಬರುವಂತಿತ್ತು.

"ಹುಟ್ಟುತಲಿ ನೋಡಯ್ಯ ದಟ್ಟ ಕೂದಲರಾಗಿ
ದಿಟ್ಟ ನಡುವಂಥ ಮುಖ ಮಾಟ । ದಿನಬೆಳಗು
ದಿಟ್ಟ ಮುರಿಯುವಳು ಲಿಂಗವ್ವ

ಮೆಟ್ಟುದಕ ಮಾಯೆಯನು ಹುಟ್ಟಿದೆನು ಲೋಕದೊಳು
ಮೆಟ್ಟುವೆನು ಹೀಂಗ ಮಾಯೆಯನು । ಎನುವಂಗ
ದಟ್ಟಡಿ ಇಟ್ಟು ನಡೆದಾಳ

ಒಟ್ಟಿನಲ್ಲಿ ಅಕ್ಕನ ಆಟ, ಪಾಠ, ಊಟ, ನೋಟ, ಶಿವಪೂಜೆ ಎಲ್ಲವೂ ಚೆನ್ನಾಗಿತ್ತು. 'ಬೆಳೆಯ ಸಿರಿ ಮೊಳಕೆಯಲ್ಲಿ' ಅಲ್ಲವೇ ?

ಗುರುವೆ ನಿಮ್ಮಯ ದಯದಿ ಹರ ನನಗೆ ಪತಿಯಾದ
ಸರಿಯಾಗಿ ಹೊಂದಿ ಬಾಳುತಲಿ । ಅವನೊಡನೆ
ತರುವೆ ತಪ್ಪದಲೆ ಕೀರುತಿಯ

ಅಕ್ಕನ ವಚನಗಳನ್ನು ಸ್ವಲ್ಪವೂ ಭಾವಕೆಡದಂತೆ ತ್ರಿಪದಿಗಳ ರೂಪಕ್ಕೆ ತಂದಿರುವುದು ಬಹು ಸೊಗಸಾಗಿದೆ. ಇದೊಂದು ಬೆಡಗಿನ ವಚನ.

ಹರಿವ ಜಲ ಮಂಟಪದಿ ಉರಿವ ಚಪ್ಪರವ ಹಾಕಿ
ಹಿರಿ ಆಲ ಕಲ್ಲ ಹಸೆ ಮಾಡಿ । ಕೊಟ್ರೆ ಹಿರಿ
ಶಿರವಿರದ ಚೆಲುವ ಗಂಡಗ

ಹೀಗಿರುತ್ತಿರುವಾಗ ಒಮ್ಮೆ ಕೌಶಿಕನ ದೃಷ್ಟಿಗೆ ಬಿದ್ದ ಮಹಾದೇವಿ ಅವನನ್ನು ಧಿಕ್ಕರಿಸಿ ಬರುತ್ತಾಳೆ. ಇದೊಂದು ಅವಳ ಜೀವನದಲ್ಲಿ ಪರೀಕ್ಷಾ ಸಮಯ. ಇದೊಂದು ತಿರುವು ಅವಳು ಕೊಡುವ ದಿಟ್ಟ ಉತ್ತರವನ್ನು ನೋಡಿ.

ಹರಣ ಹಾರಿದರೇನು ಶರಣರಂಜುವರೇನು
ಹರಣ ಹರನಲ್ಲಿ ಒಂದಾಗಿ । ಎಲೆ ಭವಿಯೆ
ಮರಣ ತಪ್ಪುವುದು ಕೊನೆ ತನಕ

ಗಿರಿಯಲ್ಲಲ್ಲದೆ ನವಿಲು ಮೊರಡಿಯೊಳಗಾಡುವದೆ
ಹರನನ್ನು ಬಿಟ್ಟು ನರನಾದ । ಅರಸನನು
ಸರಿಯೇನೋ ಕೂಡಿ ಬಾಳುವುದು

ಅದಲ್ಲದೆ ಕಾಮಜ್ವರ ಪೀಡಿತನಾದ ಕೌಶಿಕನಿಗೆ ಪರಿಪರಿಯಿಂದ ಬುದ್ಧಿ ಹೇಳುತ್ತಾಳೆ. 'ಮಾಯೆಯ ತುಳಿತದಲಿ ಸಾಯುವುದು ಸರಿಯಲ್ಲ'ವೆಂದೂ ಮಾಯೆಯ ಸಂಗ ಬೇಡವೆಂದೂ ತಿಳಿಸುತ್ತಾಳೆ. ಇನ್ನು ಮುಂದುವರೆದು –

ಕುಡಿಕೆ ಉಚ್ಚಿಯದಯ್ಯ ಮಡಿಕೆ ಮಾಂಸದ್ದಯ್ಯ
ಹಡಿಕೆ ಕೀವಿನದು ಈ ದೇಹ । ಇದಕಾಗಿ
ತಡಬಡಿಸಿ ನಾಯಿ ಆಗುವುದೇ

ಇದಕ್ಕೆ ಪ್ರೇರಣೆ. ಅಕ್ಕನ ಈ ವಚನ –

"ಅಮೇಧ್ಯದ ಹಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ, ಕೀವಿನ ಹಡಿಕೆ, ಸುಡಲೀ ದೇಹವ ಒಡಲುವಿಡಿದು ಕೆಡದಿರು, ಚನ್ನಮಲ್ಲಿಕಾರ್ಜುನನರಿಮರುಳೇ"[೮] ಎಂದು ಸಂಸಾರವು ಹೇಯವಾದದ್ದೆಂದು ತಿಳಿ ಹೇಳುತ್ತಾಳೆ. ಬತ್ತಲೆಯಾಗಿ ಅರಮನೆಯಿಂದ ಹೊರಡುತ್ತಾಳೆ. ಆಗ ಮುಗ್ಧನಾದ ಕೌಶಿಕನು ಓಡಿ ಬಂದು ಅವಳ ಪಾದಕ್ಕೆ ಬಿದ್ದು ಅವಳಲ್ಲಿ ಕ್ಷಮೆ ಬೇಡುತ್ತಾನೆ.

ದುರುಳ ಪಪಿಯು ನಾನು ಅರಸನೆಂದೆನಬೇಡ
ಕೆರವು ನಾನವ್ವ ನಿನ್ನಡಿಗೆ । ಎಲೆ ತಾಯಿ
ನೆರೆ ಅಪ್ಪಿ ಕ್ಷಮಿಸು ಮಗನೆಂದು

ಅಕ್ಕ ಅಲ್ಲಿಂದ ಹೊರಟು ಕಲ್ಯಾಣಕ್ಕೆ ಬರುತ್ತಾಳೆ. ಅನುಭವ ಮಂಟಪದಲ್ಲಿ ಮತ್ತೊಂದು ಸತ್ವ ಪ್ರಸಂಗವನ್ನೆದುರಿಸುತ್ತಾಳೆ. ತನ್ನ ವೈರಾಗ್ಯದ ಸ್ವರೂಪ ದರ್ಶನವನ್ನು ಮಾಡಿಕೊಟ್ಟು 'ವೀರ ವಿರಾಗಿಣಿ'ಯೇ ಆಗುತ್ತಾಳೆ. ಜಗತ್ತಿನಲ್ಲಿ ಯಾವ ಸಾಹಿತ್ಯದಲ್ಲಿಯೂ ಕಾಣದ, ಕೇಳದ ಸನ್ನಿವೇಶ ಇದು. ಅಕ್ಕನ ನಿರ್ಮಲ ಜೀವನಕ್ಕೆ ಹಿಡಿದ ಕನ್ನಡಿಯಾಗಿದೆ.

ತನ್ನ ನೀಳವಾದ ಕೂದಲಿನಿಂದ ಮುಚ್ಚಿದ ದೇಹ, ಹಣೆಯಲ್ಲಿ ವಿಭೂತಿ, ರುದ್ರಾಕ್ಷಿಯ ಕಂಕಣಧಾರಿಯಾಗಿ ಬಿಸಿಲಿನಲ್ಲಿ ನಡೆಯುತ್ತ ಬಂದಳು. ಆಗ ಲೋಕವೆಲ್ಲ ಅವಳನ್ನು 'ಹುಚ್ಚಿ' ಎಂದು ಕರೆಯಿತು. 'ಲೋಕದ ಮಾಯೆಗೆ ಶರಣ ಚಾರಿತ್ರ್ಯ ಮರುಳು' ಅಲ್ಲವೇ ?

ಅನುಭವ ಮಂಟಪದಲ್ಲಿ ಪ್ರಭುವಿಗೂ, ಅಕ್ಕನಿಗೂ ವಾಗ್ವಾದ ನಡೆದು ಅಕ್ಕನೇ ಗೆಲ್ಲುತ್ತಾಳೆ.

"ಬತ್ತಲೆಯ ಚಲುವಿ ನೀ ಇತ್ತಲೇತಕೆ ಬಂದೆ
ಸುತ್ತಲಿರುವಂಥ ಶರಣರನು । ಕಾಡುವ
ಗತ್ತೇನು ಹೇಳ ಮಾದೇವಿ

ಎಂದು ಪ್ರಭು ಕೇಳುವ ಪ್ರಶ್ನೆಗೆ ಅಕ್ಕ ಮಾರ್ಮಿಕ ಉತ್ತರವನ್ನೇ ಕೊಡುತ್ತಾಳೆ ನೋಡಿ.

"ಸೀರೆಯೊಳು ಸೇರಿದ ಕೂರಿ ಜಂತುಗೆ ಪ್ರಭುವೇ
ನಾರಿಯ ದೇಹ ಬತ್ತಲೆಯು । ನನ ತಂದೆ
ಕೂರಿ ಜಂತೇನೋ ಶರಣರು

ಎನ್ನುತ್ತಾಳೆ. ಕೊನೆಗೆ ಅಲ್ಲಮ 'ನಿನ್ನ ನಲ್ಲನ ಹೆಸರನು ಹೇಳಿದರೆ ನಿಲ್ಲಿಲ್ಲಿ; ಇಲ್ಲವಾದರೆ ತೊಲಗವ್ವ' ಎಂದಾಗ ಮಲ್ಲಯ್ಯನೇ ತನ್ನ ಗಂಡನೆನ್ನುತ್ತಾಳೆ. ಆಗ ಪ್ರಭು ಹಾಗಾದರೆ ದೇಹಕ್ಕೆ ಕೂದಲಿನ ಮರೆಯೇಕೆ ? ಎಂದಾ –

"ಕಾಮ ಮುದ್ರೆಯ ಕಂಡು ಕಾಮಾರಿ ಭಕುತರಿಗೆ
ಕಾವಾದಿತೆಂದು ಪ್ರಭುದೇವ । ಶರಣರನು
ಕಾದೆ ಕೂದಲದಿ ಮರೆಮಾಡಿ

ಎಂದು ಜಾಣತನದ ಉತ್ತರ ಕೊಡುತ್ತಾಳೆ. ಆಗ ಅನುಭವ ಮಂಟಪದ ಎಲ್ಲ ಶರಣ ಶರಣೆಯರು ಶಿವ ಮತಕೆ ಹೆಮ್ಮೆಯ ಶರಣಿ' ನೀನೆಂದು ಹೊಗಳುತ್ತಾರೆ.

'ಕಾಯದ ಕದಳಿಯೊಳು ಮಾಯದ ಕದಳಿಯೊಳು
ತಾಯಿ ನಿನ್ನಾತ್ಮ ಕರ್ಪುರವು । ಜಗಕೆಲ್ಲ
ಮಾಯೆಯನು ಕೊಂದು ತಾಯಾದಿ'

ಎಂದು ಚನ್ನಬಸವಣ್ಣ ಹೊಗಳುತ್ತಾನೆ. ಇಲ್ಲಿ 'ಅಕ್ಕ'ನ ಅನೇಕ ವಚನಗಳು 'ತ್ರಿಪದಿ'ಗಳಾಗಿ ಬಂದಿವೆ. ಅರಿವಿಂಗೆ ಹಿರಿದು ಕಿರಿದುಂಟೆ ? ಇಲ್ಲ. ಎಲ್ಲ ಹಿರಿಯರು, ಕಿರಿಯರು, ಶರಣರು, ಸಿದ್ಧರು ಅಕ್ಕನ ಮಹಿಮೆಗೆ ಬೆರಗಾಗಿ ಶರಣು ಹೋಗುವರು. ಕಲ್ಯಾಣವನ್ನು ಬಿಟ್ಟು, ಎಲ್ಲ ಶರಣರನ್ನು ಬೀಳ್ಕೊಟ್ಟು ಶ್ರೀಶೈಲಕ್ಕೆ ಬರುತ್ತಾಳೆ :

ಕರಸ್ಥಲದ ಲಿಂಗದೊಳು ಕರಗಿ ಹೋಗಲು ಮನವು
ಮರೆತು ಭವಲೋಕ ಮಾದೇವಿ । ಬೆರೆತಾಳ
ರವಿ ಕೋಟಿ ಶಶಿಯ ಬೆಳಕಿನೊಳು
ಕದಳಿಯೆಂಬುವ ತನುವ ಕದಳಿಯೆಂಬುವ ಮನವ

ಕದಳಿಯೆಂಬುವ ಭವಕಾಂಡ ಸುಡುವುದಕ
ಕದಳಿಯೊಳು ಬಯಲ ಬೆರತಾಳ[೧೪]

ಎಂದು ಹಾಡಿದರೆ ದಿ. ಡಾ॥ ಗದ್ದಗಿ ಮಠ ಅವರು ಅಕ್ಕನನ್ನು ಕುರಿತು,

"ಮಾಡುವೆ ಶರಣ ಮಾಡುವೆ । ಪ ।
ನಮ್ಮ ಕೂಡಲ ಸಂಗನ ಶರಣರ ಪಾದಕ್ಕ
ಬೇಡುವೆ ವರವ ಬೇಡುವೆ

ಬತ್ತಲೆ ಕದಳಿ ಹೊಕ್ಕ ಮಾದೇವಿಗೆ
ಮಾಡುವೆ ಶರಣ ಮಾಡುವೆ[೧೬]
ಹಂತಿ ಬಿಡುವಾಗ ರೈತ ಹೇಳುವ ಈ ಹಾಡು
ಶರಣು ಶರಣೆಂಬುವೆವು ಹರಣ ಹಾರುವ ತನಕ
ಕರುಣಿಸಿರಿ ಶರಣೆ ಮಾದೇವಿ । ನಮಗಿನ್ನು
ಹರಸರಿ ಹುಲುಸು ಹುಲ್ಲುಲ್ಲಿ ಗೋ

ರೈತನ ರಾಸಿಗೆ ಹುಲುಸು (ಹೆಚ್ಚಳ) ಬರಲೆಂದು ಅಕ್ಕನನ್ನು ಪ್ರಾರ್ಥಿಸುತ್ತಾರೆ. ಸಾಯುವ ವರೆಗೂ 'ಶರಣಿ'ಗೆ ಶರಣೆಂಬುವೆ ಎನ್ನುವುದನ್ನು ಕೇಳಿದಾಗ ಮನಸ್ಸು ಆನಂದ ತುಂದಿಲ ವಾಗುತ್ತದೆ. ಕೋಲುಪದ ಹೇಳುವವರು ಕೊನೆಗೆ

'ಇಲ್ಲಿಗೆ ಹರಹರ ಇಲ್ಲಿಗೆ ಶಿವಶಿವ
ಇಲ್ಲಿಗೆ ಶೋಭಾನ ನಿಲ್ಲಿ । ಕೋ । ಶರಣೆಂಬು
ಸಬುದ ನಲಿಯಲಿ ಸಬದಾಗ । ಕೋ।[೧೭]

ಪ್ರಸ್ತುತ ಪ್ರಬಂಧದಲ್ಲಿ ಅಕ್ಕನನ್ನು ಕುರಿತ ವೈವಿಧ್ಯಮಯ ಹಾಡುಗಳನ್ನು ಸಂಕಲಿಸಲಾಗಿದೆ. ಅವು ವೈವಿಧ್ಯಮಯ ಛಂದಸ್ಸನ್ನು ಒಳಗೊಂಡಿವೆ. ಹೆಣ್ಣು ಮಕ್ಕಳ ಹಾಡು ಸಾಮಾನ್ಯವಾಗಿ ತ್ರಿಪದಿಯಲ್ಲಿ ರಚನೆಗೊಂಡರೆ, ಕೋಲುಪದ, ಲಾವಣಿ, ಗೀ ಗೀ ಪದ ಮುಂತಾದ ಗಂಡಸರ ಹಾಡುಗಳು ಸಂಕೀರ್ಣ ಛಂದಸ್ಸನ್ನೊಳಗೊಂಡಿವೆ.

ಜಾನಪದ ಕಾವ್ಯದ ವೈಶಿಷ್ಟ್ಯ ಅಲ್ಲಿಯ ಪ್ರಾಸನುಪ್ರಾಸ. ಕೆಲವು ಹಾಡುಗಳಲ್ಲಿ ಆದಿ ಇಲ್ಲವೇ ಅಂತ್ಯಪ್ರಾಸ, ಒಮ್ಮೊಮ್ಮೆ ಅವೆರಡೂ ಏಕಕಾಲದಲ್ಲಿ ಬಳಕೆಯಾಗಿದೆ. ಉಪಮೆ, ರೂಪಕ, ದೃಷ್ಟಾಂತ ಮುಂತಾದ ಅಲಂಕಾರಗಳು ಹಾಡಿನಲ್ಲಿ ಸಾಕಷ್ಟು ಸಿಗುತ್ತವೆ. ಈ ಹಾಡುಗಳಲ್ಲಿ ಬಳಸಿರುವ ಭಾಷೆ ಸರಳ-ಸುಂದರ ಮನೋಜ್ಞವಾಗಿದೆ. ಪಂಡಿತರಲ್ಲದ ಪಾಮರರಾದ ಜನಪದ ಕವಿಗಳು ಅಕ್ಕಮಹಾದೇವಿಯ ಜೀವನ ಚಿತ್ರವನ್ನು ಅಶ್ಲೀಲ, ಅಸಭ್ಯತೆಗೆ ಆಸ್ಪದ ಕೊಡದಂತೆ 'ವೀರ ವಿರಾಗಿಣಿಯನ್ನಾಗಿ, ಆದರ್ಶನಾರಿಯನ್ನಾಗಿ, ಹೆಣ್ಣು ಕುಲಕ್ಕೆ ಹೆಮ್ಮೆ ತರುವಂಥ ಸ್ತ್ರೀ ರತ್ನವನ್ನಾಗಿ, ಸುಂದರವಾಗಿ ಚಿತ್ರಿಸಿರುವುದನ್ನು ನೋಡಿದರೆ ಆನಂದವಾಗುತ್ತದೆ.

ಅಕ್ಕನಿಗೆ ಗೆಲುವಕ್ಕೆ । ಅಕ್ಕಮಹಾದೇವಿಗೆ ಗೆಲುವಕ್ಕೆ
ವೀರ ವಿರಾಗಿಣಿಗೆ ಗೆಲುವಕ್ಕೆ । ಸಾರುವ ಸಂದೇಶಕ್ಕೆ ಗೆಲುವಕ್ಕೆ.

೧. ಗರತಿಯ ಹಾಡು ಪು. ೭

೨. ಕನ್ನಡ ಜಾನಪದ ಗೀತೆಗಳು – ಡಾ. ಬಿ.ಎಸ್. ಗದ್ದಗಿಮಠ, ಪು. ೧೯೨

೩. ಕನ್ನಡ ಜಾನಪದ ಗೀತೆಗಳು – ಡಾ. ಬಿ.ಎಸ್. ಗದ್ದಗಿಮಠ, ಪು. ೧೯೨

೪. ಕನ್ನಡ ಜಾನಪದ ಗೀತೆಗಳು – ಡಾ. ಬಿ.ಎಸ್. ಗದ್ದಗಿಮಠ, ಪು. ೩೨೪

೫. ಜೀವನ ಜೋಕಾಲಿ, ಕೋಲುಪದ, ಡಾ. ಎಂ.ಎಸ್. ಸುಂಕಾಪುರ ೩೯

೬. ಮಲ್ಲಿಗೆ ದಂಡೆ – ಸಂ. ಕಾಪಸೆ ರೇವಪ್ಪ, ಪು. ೧೩೮

೭. ಬಸವಣ್ಣ ನಿನ ಹೆಸರು ದೆಸೆದೆಸೆಗೆ ಶಿವಮಂತ್ರ, ಸಂ. ಡಾ. ಗುಬ್ಬಣ್ಣವರ, ಪು. ೧೧೭

೮. ವಿ.ಕೆ. ಗೋಕಾಕ ಅವರ ಅಭಿಪ್ರಾಯ

೯. ಸಿದ್ಧರಾಮೇಶ್ವರ ಪುರಾಣ, ಪು. ೬

೧೦. ಅದೇ, ಪು. ೮೧೩

೧೧. ಜಾನಪದ ಸೌಂದರ್ಯ – ದೇ.ಜ.ಗೌ., ಪು. ೧೨೩

೧೨. ತಾಯಿಯ ಪದಗಳು, ಜಯದೇವಿ ತಾಯಿ

೧೩. ಗಿರಿಯ ಪರಂಜ್ಯೋತಿ, ಪು. ೨,

೧೪. ಗಿರಿಯ ಪರಂಜ್ಯೋತಿ,

೧೫. ಕನ್ನಡ ಜಾನಪದ ಗೀತೆಗಳು, ಪು. ೩೬೨

೫. 'ಅಕ್ಕನ ಸಂಪಾದನೆ'ಗಳು : ಒಂದು ಪರಿಶೀಲನೆ

●

ಡಾ. ವಿಜಯಾ ದಬ್ಬೆ

ವಚನಗಳನ್ನೇ ಮೂಲ ಸಾಮಗ್ರಿಯನ್ನಾಗಿಟ್ಟುಕೊಂಡು ವಚನಗಳು ಹುಟ್ಟಿಬಂದ ಐತಿಹಾಸಿಕ ಸಂದರ್ಭವನ್ನು ಪುನರ್‌ರಚಿಸಿ ದಾಖಲಿಸುವ, ವಚನಗಳನ್ನು ಸಂಪಾದಿಸುವ, ವ್ಯಾಖ್ಯಾನಿಸುವ ಕೆಲಸವನ್ನು ಹದಿನೈದರಿಂದ ಹದಿನೇಳನೆಯ ಶತಮಾನಗಳ ಅವಧಿಯಲ್ಲಿ ಶೂನ್ಯ ಸಂಪಾದನಕಾರರು ಮಾಡಿದರು. ೧೨ನೆಯ ಶತಮಾನದ ಆ ಸಂದರ್ಭವನ್ನು ಹಿಡಿಯುವ ಪ್ರಯತ್ನ ಶೂನ್ಯ ಸಂಪಾದನೆಗಳಿಗೆ ಹಿಂದೆಯೂ ಅನಂತರವೂ ನಡೆದು, ನಡೆಯುತ್ತಿದ್ದು ಈ ಸಂಪ್ರದಾಯಕ್ಕೆ ನಿಡಿದಾದೊಂದು ಪರಂಪರೆ ನಿರ್ಮಿತವಾಗಿದೆ. ಈ ಪರಂಪರೆಯ ಮಹತ್ವದ ಸಾಧನೆಗಳು ಶೂನ್ಯ ಸಂಪಾದನೆಗಳು. ಚರಿತ್ರೆಯನ್ನು ಕಟ್ಟುವ ಕಾಯಕದಲ್ಲಿ ಅವರ ದೃಷ್ಟಿ ಮತ್ತು ಗುರಿಗಳು ಶುದ್ಧ ಚಾರಿತ್ರಿಕವಲ್ಲದಿದ್ದರೂ ಇಂದು ನಮಗೆ ಅವರ ಕೃತಿಗಳು ಚಾರಿತ್ರಿಕವಾಗಿಯೂ ಮುಖ್ಯವಾಗಿವೆ. ಚರಿತ್ರೆಯ ಸಂಗತಿಗಳು ಎಲ್ಲೆಲ್ಲಿ ಹೇಗ್ಹೇಗೆ ನುಸುಳಿ ಯಾವ ಆಕಾರಗಳನ್ನು ಚರಿತ್ರೆಯಲ್ಲಿ ಪಡೆಯುತ್ತವೆ ಎಂಬುದನ್ನು ನೋಡಬಯಸುವ ಆಸಕ್ತರಿಗಂತೂ ಸಂಪಾದನೆಗಳು ಮುಖ್ಯವಾದ ಕೃತಿಗಳು. ವಚನಕಾರರ ಇತಿಹಾಸವನ್ನು ಕರಾರುವಾಕ್ಕಾಗಿ ಒದಗಿಸದಿರುವುದರಲ್ಲಿಯೂ ಸಂಪಾದನಾಕಾರರ ಕಾಲದ ಚರಿತ್ರೆ, ಆ ಯುಗಗಳ ಮೌಲಿಕತೆಯ ಸ್ವರೂಪ ಬಿಚ್ಚಿಕೊಳ್ಳುತ್ತದೆ. ಸಂಪಾದನೆಗಳ ವಿಶದವಾದ ತೌಲನಿಕ ಅಧ್ಯಯನವು ಚರಿತ್ರೆಯು ಚರಿತ್ರೆಯ ಮೂಲಕ ಸಾಗಿಬರುವ ಪ್ರಕ್ರಿಯೆಯ ಸ್ವರೂಪವನ್ನು ಕಾಣಿಸಿ ಕೊಡುವಲ್ಲಿ ಲಾಭದಾಯಕವಾದ ಅಧ್ಯಯನ. ಶೂನ್ಯ ಸಂಪಾದನೆಯ ಮುಖ್ಯ ಭಾಗಗಳಲ್ಲೊಂದಾದ ಅಕ್ಕನ ಸಂಪಾದನೆಯ ಕೆಲವು ಮುಖ್ಯ ಮಜಲುಗಳನ್ನೂ, ಪ್ರಶ್ನೆಗಳನ್ನೂ ಇಲ್ಲಿ ಗಮನಿಸಿದೆ.

ಕೊನೆಯಲ್ಲಿ ಅಕ್ಕ ಶರಣರ ಸಮೂಹದಲ್ಲಿ ಸ್ವೀಕೃತಳಾದಳು, ಶರಣರ ಮೆಚ್ಚುಗೆ, ಸ್ತುತಿಗೆ ಪಾತ್ರಳಾದಳು. ಒಂದೆರಡು ಅಪವಾದಗಳ ಹೊರತಾಗಿ ವಚನಕಾರ್ತಿಯರು ಆಕೆಯ ಬಗ್ಗೆ ಹೆಚ್ಚು ಕಡಿಮೆ ಮೌನವಾಗಿರುವಂತೆ ತೋರಿದರೂ ಅನೇಕ ವಚನಕಾರರು ತುಂಬು ಮನಸ್ಸಿನಿಂದ ಆಕೆಯ ಎತ್ತರವನ್ನು ಒಪ್ಪಿದ್ದಾರೆ, ಗೌರವಿಸಿದ್ದಾರೆ. ಹೀಗೆ ಆದರ ಪಡೆದು ಶರಣರ ಸಮೂಹದಲ್ಲಿ ಉನ್ನತಸ್ಥಾನ ಪಡೆದು ಅಂದು ರಕ್ಷಣೆ, ಅಪಾಯಗಳೆರಡಕ್ಕೂ ಒಳಗಾದ ಅಕ್ಕ

ಕಲ್ಯಾಣವನ್ನು ಹೊಕ್ಕ ಬಗೆ ಎಂತು ? ಹೊಗುವ ಮುನ್ನ ಅವಳು ಸಾಗಿ ಬಂದ ದಾರಿಯ ಕಲ್ಲು ಮುಳ್ಳುಗಳೆಂತಹುವು ? ಶಿವನತ್ತ ಸರಿದ ಮನಸ್ಸು ಶಿವಪರವಲ್ಲದ ಪರಿಸರದಲ್ಲಿ ಪಡೆದ ಸ್ಪಂದನ, ಪರಿಪಾಕದ ಪ್ರಕ್ರಿಯೆ ಎಂಥದು ? ಕಲ್ಯಾಣವನ್ನು ಪ್ರವೇಶಿಸುವ ವರೆಗಿನ ಹಾದಿಯಲ್ಲಿ ಆಕೆ ಹಾಯ್ದು ಬಂದ ದಿವ್ಯವೆಂಥದು ? ಅಕ್ಕನ ಜೀವನವನ್ನು ಕುರಿತು ಚಿಂತಿಸುವಾಗ ಈ ಎಲ್ಲಾ ಪ್ರಶ್ನೆಗಳೂ ಇತಿಹಾಸಕ್ಕೆ ನಿಷ್ಠವಾದ, ಹೆಚ್ಚು ಹತ್ತಿರವಾದ ಉತ್ತರಗಳಿಗೆ ಹಂಬಲಿಸುವುದು ಸಹಜ. ಈ ನಿಟ್ಟಿನಲ್ಲಿ ಶೂನ್ಯ ಸಂಪಾದನಾಕಾರರ ಗ್ರಹಿಕೆ, ಆಸಕ್ತಿಗಳನ್ನು 'ಮಹಾದೇವಿಯಕ್ಕಗಳ ಸಂಪಾದನೆ'ಯಲ್ಲಿ ಕಾಣಬಹುದು.

ಕಲ್ಯಾಣಾಭಿಮುಖಿಯಾಗಿ ಹೊರಟ ಅಕ್ಕನ ಅದುವರೆಗಿನ ಬದುಕಿನ ಬಗ್ಗೆ, ಆ ಸಿದ್ಧಿಯ ನೆಲೆಗೆ ಆಕೆ ತಲುಪುವ ಮೊದಲಿನ ಜೀವನದ ಬಗ್ಗೆ, ಸಂಪಾದನೆಗಳು ಕೊಡುವ ಚಿತ್ರದಲ್ಲಿ ಆಕೆಯ ಅನುಭಾವಿಕ ವ್ಯಕ್ತಿತ್ವ ವಿಕಸಿಸಿದ ಪರಿಯಾಗಲೀ, ಭಕ್ತಸ್ಥಲದ ಅನೇಕ ಕೋಟಲೆ ಹೋರಾಟ ಗಳಾಗಲೀ ಹೆಚ್ಚಿನ ಅವಕಾಶವನ್ನು ಪಡೆದಿಲ್ಲ. ಶಿವಗಣ ಪ್ರಸಾದಿಗಳ ಪ್ರಕಾರ ರುದ್ರಕನ್ನಿಕೆ ಮರ್ತ್ಯದಲ್ಲಿ ಉಡುತಡಿಯ ಮಹಾದೇವಿಯಕ್ಕನಾಗಿದ್ದಾಳೆ, ಭವಿಯ ಸಂಗವನ್ನು ತೊರೆದು, ಶಿವಪರವಶೆಯಾಗಿ 'ದಿಗಂಬರದುಡಿಗೆಯನುಟ್ಟು ತನ್ನ ಕೇಶವೆಂಬಂಬರಮಂ ಮುಸುಕಿಟ್ಟು', ಕರಸ್ಥಲದ ಇಷ್ಟಲಿಂಗದಲ್ಲಿ ದೃಷ್ಟಿಯಿಟ್ಟು, ಭಾವ 'ಕಱಿಗೊಂಡು ಲೌಕಿಕ ಲಜ್ಜಾಭಿಮಾನವನ್ನು ತೊಱೆದು' ವಿಕಳಾವಸ್ಥೆಯಲ್ಲಿ ತನ್ನ 'ಮಱೆದು' 'ಇತರಮಂ ಪಱೆದು' ದೇಶಾಂತರ ಮುಖದಲ್ಲಿ ಸಂಚರಿಸಿ ಬರುತ್ತಾಳೆ.

ರುದ್ರಕನ್ನಿಕೆ ಮರ್ತ್ಯಕ್ಕೆ ಬರಬೇಕಾಗಿ ಬರುವ ಪ್ರಸಂಗ ಹಲಗೆಯಾರ್ಯರಲ್ಲಿ ಇನ್ನಷ್ಟು ವಿವರವಾಗಿದೆ. 'ಭವಿಗೆ ಮಧುವಾಗಿ ಬಾ' ಎಂಬ ನಿರೂಪವನ್ನು ಪಡೆದೇ ಆಕೆ ಇಲ್ಲಿ ಬಂದಿದ್ದಾಳೆ. ಇಲ್ಲಿ ಆಕೆಗೆ ಪಂಡಿತಾರಾಧ್ಯರಿಂದ ದೀಕ್ಷೆಯಾಗಿದ್ದು, ಯೌವನದಲ್ಲೇ ಅವಳು ದಿವ್ಯಜ್ಞಾನಿಯಾಗಿದ್ದಾಳೆ.

ಸಿದ್ಧಲಿಂಗದೇವರ ಸಂಪಾದನೆಯಲ್ಲಿ ಶಿವಗಣ ಪ್ರಸಾದಿಗಳ ಸಂಪಾದನೆಯಲ್ಲಿಯಂತೆ 'ಭವಿಯ ಸಂಗ'ವನ್ನು ತೊರೆಯುವ ಪೂರ್ವದ ಆಕೆಯ ಬದುಕಿನ ಬಗ್ಗೆ ಹೆಚ್ಚಿನ ವಿವರ ಗಳಿಲ್ಲ. ಒಡೆಯರ ಸಂಪಾದನೆಯೂ ಈ ಹಂತದ ಬದುಕಿನ ಬಗ್ಗೆ ಹೇಳುವಲ್ಲಿ ಶಿವಗಣ ಪ್ರಸಾದಿಗಳನ್ನೂ ಸಿದ್ಧಲಿಂಗದೇವರನ್ನೂ ಅನುಸರಿಸಿದೆ, ಸಂಕ್ಷಿಪ್ತವಾಗಿದೆ. ಅಕ್ಕನ ಮರ್ತ್ಯದ ಹುಟ್ಟಿನ ಪೂರ್ವದ ವೃತ್ತಾಂತ, ಹುಟ್ಟು ಬಾಲ್ಯ ಯೌವನಗಳನ್ನು ಕುರಿತು ಕೆಲವು ವಿವರಗಳನ್ನು ಹಲಗೆಯಾರ್ಯರು ನೀಡಿದ್ದರೂ ಐತಿಹಾಸಿಕ ದೃಷ್ಟಿಯಿಂದ ನೋಡುವವರಿಗೆ ಅಲ್ಲಿ ವಿಶೇಷ ಮಾಹಿತಿಗಳೇನೂ ಲಭ್ಯವಾಗದು. ಅಕ್ಕ ಯೌವನದಲ್ಲೇ 'ಪೂರ್ವಪರವನರಿದು ಪರಮ ದಾಸೋಹಿ'ಯಾಗಿದ್ದಾಳೆ. ಅಕ್ಕ 'ಅಂಗಸಂಗ'ವನ್ನೋ, 'ಭವಿಯ ಸಂಗವನ್ನೋ' ತೊರೆಯುವ ಸ್ಥಿತಿ ತಲುಪಲು ಬೇಕಾಗುವ ಒಂದು ಆಲೋಚನೆಯನ್ನಿಟ್ಟು ಬೆಳೆದು ಬರುವ ಪರಿ ಹಲಗೆಯಾರ್ಯೇತರ ಸಂಪಾದನೆಗಳಲ್ಲೂ ಕಾಣುವುದಿಲ್ಲ.

'ಭವಿಯ' ಸಂಗವನ್ನು ತೊರೆದಳೆಂದು ಶಿವಗಣ ಪ್ರಸಾದಿಗಳು ಹೇಳಿದ್ದನ್ನು ಹಲಗೆ ಯಾರ್ಯರು ವಿವರಿಸಿದ್ದಾರೆ. ಈ 'ಭವಿ' ಕೌಶಿಕನೆಂಬ 'ರಾಯ', ಅಕ್ಕ 'ವಧುವಾಗಿ' ಬಂದು ಸಂಸಾರದೊಳಗಿದ್ದರೂ 'ನೀರು ತಾವರೆ'ಯಂತೆ, 'ಕಣ್ಣು ಕಾಡಿಗೆ'ಯಂತೆ ಇದ್ದು 'ಚರಲಿಂಗ'ದಲ್ಲಿ 'ಪರಮ ದಾಸೋಹ'ದಲ್ಲಿ ಭಕ್ತಿಯನ್ನು ಮಾಡುತ್ತಿದ್ದಳು. ಈ ರಾಯನ ಸಂಗವನ್ನು ಆಕೆ

ತೊರೆದ ಪ್ರಸಂಗ ಹಲಗೆಯಾರ್ಯರಲ್ಲಿ ಹೀಗಿದೆ : 'ಆತ ಕೊಟ್ಟ ಭಾಷೆಗೆ ಉತ್ತರಮಂ ಮಾಡಿ ಹೋಗುತ್ತಿರೆ, ಸೀರೆಯ ಪಿಡಿದೆಳೆಯೆ' ದಿಗಂಬರೆಯಾಗಿ ಬಂದಳು. ಸಿದ್ಧಲಿಂಗದೇವರ ಸಂಪಾದನೆಯಲ್ಲಿ ಆಕೆ ತೊರೆದದ್ದು 'ಭವಿಯ ಸಂಗ'ವಲ್ಲ 'ಅಂಗಸಂಗ'. ಒಡೆಯರ ಸಂಪಾದನೆಯಲ್ಲೂ ಆಕೆ ಅಂಗಸಂಗವನ್ನು ತೊರೆದು ಬಂದಳೆಂದಿದ್ದರೂ ಲಿಂಗಧಾರಣವಾಗ ಲೊಲ್ಲೆನೆಂದ ಭವಿಯಂ ಸೋಂಕದೆ' ಎಂಬ ವಿವರಣೆ ಸೇರಿದೆ. 'ಭವಿ' ಯೊಡನೆ ಅಕ್ಕನ ಜೀವನ ಹೇಗಿದ್ದಿತೆಂಬ ಬಗ್ಗೆ ವಿವರಗಳನ್ನು ಶಿವ ಗಣಪ್ರಸಾದಿಗಳು ಕೊಡದಿದ್ದರೂ ಆಕೆ ಆ ಸಂಗವನ್ನು ತೊರೆಯುವ ಮುನ್ನ ಒಡನೆ ಬದುಕಿದ್ದಿರಬೇಕೆಂಬುದನ್ನು ಸೂಚಿಸಿದ್ದಾರೆ. ಸಿದ್ಧಲಿಂಗದೇವರಲ್ಲಿ ಅಕ್ಕ 'ಅಂಗಸಂಗ'ವನ್ನು ತೊರೆದಳೆಂದು ಹೇಳಿರುವು ದರಿಂದ ಈ ಚರ್ಚೆಯ ವರ್ತುಲಕ್ಕೆ ಅವರ ವಿವರ ಸೇರುವುದಿಲ್ಲ. 'ವಿಷಯೇಚ್ಛೆ'ಯನ್ನು ಆಕೆ ತೊರೆದಿದ್ದಾಳೆಂದಷ್ಟೇ ಈ ವಿವರವನ್ನು ಅರ್ಥೈಸಬಹುದು. ಆಕೆ ಭವಿಯೊಡನೆ ಬದುಕಿದಳೋ ಇಲ್ಲವೋ ಯಾರೊಡನಾದರೂ ಬದುಕುವ ಪ್ರಮೇಯ ಆಕೆಗೆ ಬಂತೋ ಇಲ್ಲವೋ ಇಲ್ಲಿ ಸ್ಪಷ್ಟವಾಗುವುದಿಲ್ಲ. ಹಲಗೆಯಾರ್ಯರು ಅಕ್ಕನ ವೈವಾಹಿಕ ಜೀವನದ ಬಗ್ಗೆ ಇವರೆಲ್ಲರಿಗಿಂತ ಹೆಚ್ಚು ವಿವರಗಳನ್ನು ನೀಡಿದ್ದಾರೆ. ಅವರ ಪ್ರಕಾರ ಆಕೆ ವಧುವಾಗಿ ಬಂದು ಸಂಸಾರ ದೊಳಗಿದ್ದಳು. ಆದರೆ ಆ ಸಂಸಾರಕ್ಕೆ ಆಕೆ ಅಂಟಿಕೊಂಡಿರಲಿಲ್ಲ. ಈ ಅಂಟನ್ನು ಮಾನಸಿಕ ವಾದ್ದೆಂದು ಅರ್ಥೈಸಿ, ಆಕೆ ಪೂರ್ಣಾರ್ಥದಲ್ಲಿ ವೈವಾಹಿಕ ಜೀವನದೊಳಗಿದ್ದರೂ ಅವರೊಂದಿಗೆ ಮನಸಿಕ ತಲ್ಲೀನತೆ ಇರಲಿಲ್ಲವೆಂದೂ ತಿಳಿಯಲು ಸಾಧ್ಯ. ಆದರೆ ಒಡೆಯರ ಬರಹದಲ್ಲಿ ಅಕ್ಕನಿಗೆ 'ಭವಿ'ಯೊಂದಿಗೆ ವೈವಾಹಿಕ ಸಂಬಂಧವಿರಲಿಲ್ಲವೆಂಬುದನ್ನು ಸ್ಪಷ್ಟ ಪಡಿಸುವ ಆಶಯ ಇರುವಂತೆ ತೋರುತ್ತದೆ. ಭವಿಯನ್ನು ಸೋಕದೆ ಅಕ್ಕ ಅಂಗಸಂಗವನ್ನು ತೊರೆದಳು ಎಂಬ ಸ್ಪಷ್ಟನೆ ನೀಡಿದ್ದಾರೆ. ಕಾಲ ಸರಿದಂತೆಲ್ಲ ಅಕ್ಕ ವೈವಾಹಿಕ ಜೀವನವನ್ನು ನಡೆಸಿದ್ದಳೆಂಬ ಸಂಗತಿ ಅಪ್ರಿಯವಾಗುತ್ತಾ ಬಂದಂತೆ ತೋರುತ್ತದೆ. ಶರಣನಲ್ಲದ ಪತಿಯೊಂದಿಗಿದ್ದಿರಬಹುದಾದ ಸಂಬಂಧ ಅಕ್ಕನ ಘನತೆಗೆ ಕುಂದು ತಂದೀತೆಂಬ ಹೆದರಿಕೆಯನ್ನು ಆಂದೋಲನೋತ್ತರ ಶರಣಸಮಾಜ ಸೃಷ್ಟಿಸಿತೆ ?

'ಭವಿ'ಯನ್ನೋ 'ಅಂಗಸಂಗ'ವನ್ನೋ ತೊರೆದು ಬರುವಾಗ ಅಕ್ಕ ವಸ್ತ್ರವನ್ನೂ ತೊರೆದು ಬಂದಳೆಂಬುದನ್ನು ಎಲ್ಲ ಸಂಪಾದನೆಗಳೂ ಹೇಳುತ್ತವೆ. 'ದಿಗಂಬರದುಡಿಗೆಯ ನುಟ್ಟು ತನ್ನ ಕೇಶವೆಂಬಂಬರಮಂ ಮುಸುಕಿಟ್ಟು' ಎಂದು ಶಿವಗಣ ಪ್ರಸಾದಿಗಳ ಸಂಪಾದನೆ ಈ ಸಂದರ್ಭವನ್ನು ವಿವರಿಸಿದರೆ ಹಲಗೆಯಾರ್ಯರಲ್ಲಿ '....ದಿಗಂಬರೆಯಾಗಿ ದಿಗಂಬರನ ನೆನವುತ್ತ ಮಸ್ತಕದ ಚಿತ್ಕಲೆಯೆ ಸರ್ವಾಂಗಾವೃತೆಯೆಂಬಂತೆ ಕೆದರಿದ ಕೇಶವ ಪೊದೆದು' ಅಕ್ಕ ಹೋಗುತ್ತಿರುವುದನ್ನು ಕಾಣುತ್ತೇವೆ. ಸಿದ್ಧಲಿಂಗದೇವರು ಮತ್ತು ಒಡೆಯರಲ್ಲಿ ಕ್ರಮವಾಗಿ ಹೀಗಿದೆ : 'ವಿರತಿಯಿಂದ ದಿಗಂಬರೆಯಾಗಿ ಕಾಮಾರಿಯಾಗಿ' 'ದಿಗಂಬರ ದುಡಿಗೆಯ ನುಟ್ಟು ತನ್ನ ಕೇಶವೆಂಬಂಬರಮಂ ಮುಸುಕಿಟ್ಟು' ಆಕೆ ಬರುತ್ತಿದ್ದಳು. ಸಿದ್ಧಲಿಂಗದೇವರಲ್ಲಿ ಮಾತ್ರ 'ಕೇಶವೆಂಬಂಬರದ' ಪ್ರಸ್ತಾಪವಿಲ್ಲ.

ಅಕ್ಕನ ವಚನಗಳಲ್ಲಿ ಹಾಗೂ ಅಕ್ಕನನ್ನು ಕುರಿತು ಬೇರೆಯವರ ವಚನಗಳಲ್ಲಿ ದಿಗಂಬರತ್ವದ ಪ್ರಸ್ತಾಪ ಮತ್ತು ಸಮರ್ಥನೆಯಿದೆ. 'ಮರೆಯ ನಲು ಸರಿಯೆ...' 'ಕೈ ಸಿರಿಯ ದಂಡವ ಕೊಳ ಬಹುದಲ್ಲದೆ...." ಮೊದಲಾದ ಅಕ್ಕನ ವಚನಗಳ ಹಿಂದೆ ಅವಳ ಜೀವನದ ಈ ದಿಗಂಬರತ್ವದ

ಘಟನೆಯಿರಬೇಕು. 'ಚೆನ್ನಮಲ್ಲಿಕಾರ್ಜುನ ದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ ಉಡಿಗೆ ತೊಡಿಗೆಯ ಹಂಗೇಕೋ ಮರುಳೇ' ಎಂಬ ಸ್ಪಷ್ಟ ಮಾತೂ ಇದೆ.

ವಸ್ತ್ರತ್ಯಾಗವನ್ನು ಸಾಂಪ್ರದಾಯಿಕವಾಗಿಯೋ ಸ್ವಯಿಚ್ಛೆಯಿಂದಲೋ ಮಾಡಿದ, ಮಾಡುವ ಅನೇಕ ಅನುಭಾವಿಗಳು, ಧಾರ್ಮಿಕರೂ ಇದ್ದಾರೆ. ಲೌಕಿಕವಾಗಿ ನಡಾವಳಿ, ದೃಷ್ಟಿಕೋನಗಳು ಅನುಭಾವಿಗಳದ್ದಾಗಿರಬೇಕಿಲ್ಲ. ಆಗಿರುವುದಿಲ್ಲವಾದ್ದರಿಂದ ವಸ್ತ್ರಧಾರಣೆಗೆ ಲೌಕಿಕದಲ್ಲಿರುವ ಮಹತ್ವ, ಒತ್ತಡ ಅನುಭಾವಿಗಳ ಪ್ರಪಂಚದಲ್ಲಿಲ್ಲದಿರುವುದು ಸಹಜ. ಈ ಸಹಜ ವಿರಕ್ತಿ ಚಿಮ್ಮಲು ಕಾರಣವಾದ ಸಂದರ್ಭವು ಅಕ್ಕನ ಜೀವನದಲ್ಲಿ ಒದಗಿದ್ದು ಆಕೆ ವಸ್ತ್ರ ತ್ಯಜಿಸಿರಬೇಕು. ಆದರೆ ಕೊನೆಯವರೆಗೆ ಆಕೆ ಹಾಗೆಯೇ ಉಳಿದಳೆ ಅಥವಾ ಯಾವುದೋ ಒಂದು ಹೊತ್ತಿನ ಮನಃಸ್ಥಿತಿ ಮತ್ತು ಸ್ಥಿತಿಯ ಸೂಚನೆಗಳನ್ನು ವಚನಗಳಿಂದ ಪಡೆದು ಸಂಪಾದನಕಾರರು ಉಡುತಡಿಯಿಂದ ಕಲ್ಯಾಣದವರೆಗೆ ಹಾಗೆ ಬಂದಳೆಂಬುದನ್ನು ಕಲ್ಪಿಸಿಕೊಂಡರೆ ?

ಅಕ್ಕನ ದಿಗಂಬರತ್ವದಲ್ಲಿನ ಐತಿಹಾಸಿಕತೆಯ ಪ್ರಮಾಣ, ಸ್ವರೂಪ ಎಷ್ಟೇ ಇರಲಿ ಏನೇ ಇರಲಿ, ಸಂಪಾದನೆಗಳಲ್ಲಿ ಅಕ್ಕನ ಪ್ರಸಂಗದ ಒಂದು ಮುಖ್ಯ ಅಂಶ ಇದಾಗಿದೆ. ಒಡೆಯರ ಸಂಪಾದನೆಯಲ್ಲಿ ಶರಣರ ಗೋಷ್ಠಿಯಲ್ಲಾಗುವ ಅಕ್ಕನ ಸತ್ವಪರೀಕ್ಷೆಯಲ್ಲಿ ಪತಿಯನ್ನು ತೊರೆದ ಸಂಗತಿಯಂತೆ ವಸ್ತ್ರವನ್ನು ತೊರೆದ ಸಂಗತಿಯೂ ಚರ್ಚೆಯ ಕೇಂದ್ರ ಬಿಂದು ಗಳಲ್ಲೊಂದಾಗಿದೆ. ಅನುಭಾವೇತರ, ವೀರಶೈವೇತರ ವಲಯಗಳಲ್ಲಿ ಅಸ್ವೀಕೃತವಾಗಬಹುದಾದ ಅಸಾಂಪ್ರದಾಯಿಕವಾದ ಈ ಎರಡು ಸಂಗತಿಗಳನ್ನು ವಿವರಿಸುವ, ಸಮರ್ಥಿಸುವ ಕೆಲಸ ಮುಂದಿನವರಿಗೆ ಅಗತ್ಯವಾಗಿ ಕಂಡಿತೆ ?

ಸಂಪಾದನೆಗಳ ಚೌಕಟ್ಟಿನಲ್ಲಿ ನಿರೂಪಿತವಾದ ಅಕ್ಕನ ಜೀವನದ ಪ್ರಸಂಗಗಳಲ್ಲಿ ಮುಖ್ಯವಾದ ಮತ್ತೊಂದು ಪ್ರಸಂಗ ಕಿನ್ನರಿ ಬೊಮ್ಮಯ್ಯಗಳ ಪ್ರಸಂಗ. ಕಲ್ಯಾಣ ಪ್ರವೇಶದ ಪೂರ್ವದಲ್ಲಿ ಜರುಗಿದ ಈ ಘಟನೆ ಮುಂದೆ ಆಕೆ ಎದುರಿಸಿದ ಪರೀಕ್ಷೆಗೊಂದು ವೇದಿಕೆ ಯಾಗಿದೆ. ಶಿವಗಣ ಪ್ರಸಾದಿಗಳಲ್ಲಿ ಕಿನ್ನರಿ ಬೊಮ್ಮಿಗಳು ಅಕ್ಕನನ್ನು ಕಾಣುವ ವೇಳೆಗಾಗಲೇ ಆಕೆ ಭಾವ 'ಕಜೆ'ಗೊಂಡವಳು. ಚೆನ್ನಮಲ್ಲಿಕಾರ್ಜುನನ ವಿಕಳಾವಸ್ಥೆಯಲ್ಲಿ ತನ್ನನ್ನು ಮರೆತಿರು ವವಳು. ಇಂಥ ಅಕ್ಕನನ್ನು ಬೊಮ್ಮಿಗಳು ಸಂಧಿಸಿದ ಪ್ರಸಂಗ ತುಂಬ ಸಂಕ್ಷಿಪ್ತವಾಗಿ ಹೀಗಿದೆ : "ಕಿನ್ನರಿ ಬೊಮ್ಮಿ ತಂದೆಗಳು ಕಂಡು ಹರುಷಿಸಿ (>ಪರುಷಿಸಿ>ಸ್ಪರ್ಶಿಸಿ ಅಥವಾ ಪರೀಕ್ಷಿಸಿ) ನೋಡಲು ಅಂತರಂಗದ ಜ್ಞಾನಾಗ್ನಿಯೊಳ್ ಕಾಮನಂ ಸುಟ್ಟು ಭಸ್ಮಮಂ ಮಾಡಿ' ಅವರನ್ನು ಬೀಳ್ಕೊಂಡು ಕಲ್ಯಾಣದತ್ತ ನಡೆದಳು. ಶಿವಗಣ ಪರಸಾದಿಗಳ ಈ ಸೂಚನೆಗಳು ಹಲಗೆ ಯಾರ್ಯರಲ್ಲಿ ವಿಪರೀತವಾಗಿ ಬೆಳೆದಿವೆ. ಇಲ್ಲಿ 'ಲೀಲಾ ವಿನೋದ'ದಿಂದ ಬಂದ ಬ್ರಹ್ಮಯ್ಯಗಳು ಲಿಂಗಾನುಭವ ಸಂಪನ್ನೆಯಾದರೆ ಗುರುತಾಯಿಯೆಂದು ಶರಣಾಗಲೂ ಸಿದ್ಧ ದೇಹ ಲಜ್ಜಾಭಿಮಾನವಿದ್ದರೆ 'ಸ್ತ್ರೀಯಾಗಿ' ಕೈ ಹಿಡಿಯಲೂ ಸಿದ್ಧ. ಆಕೆಯನ್ನು 'ಒರೆದೊರೆದು' ನೋಡುತ್ತಾರೆ. 'ಭಾವದಲ್ಲಿ ಬಚ್ಚಬರಿಯ ಹೆಂಗುಸಾಗಿ ತೋರಿತ್ತೆನೆಗೆ ಎಂದು ಹೇಳುತ್ತಾ ತ್ರಿಪುರಾಂತಕನು ಒಡ್ಡಿರುವ ಮಾಯೆಯನ್ನು 'ನಿನ್ನ ಸಮಸುಖಕೂಟದೊಳಿದ್ದು ಶಿವಭಾವ ಭಕ್ತಿಯಿಂದ ಗೆಲುವೆನು ಬಾರೌ ಹೆಣ್ಣೆ' ಎಂಬ ಆಹ್ವಾನವನ್ನು ಕೊಟ್ಟ ಬೊಮ್ಮಯ್ಯಗಳನ್ನು ಮಹಾದೇವಿ ಜರೆದು ಝುಂಕಿಸಿ ವಿಡಂಬಿಸುತ್ತಾಳೆ. 'ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿದ ಪುರುಷನು ನಮಗಾಗದ ಮೋರೆ' ಎಂಬುದಾಗಲಿ ಆಕೆ ಸೂಚಿಸುವ ಸೋದರ ಭವವಾಗಲೀ

ಕಿನ್ನರಯ್ಯಗಳ ಮನಸ್ಸನ್ನು ಹೊಗಲಿಲ್ಲ. 'ಬರಿಯ ಮಾತಿನ ಬನ್ನಣೆಯ ಪಸರಿಸೆ ನಾನು ಬಿಡುವೆನೇ ಬಾರೆಂದು ತುಡುಕಿ' ಹಿಡಿದಾಗ 'ನೀನಿಂತು ಮುಂದುಗೆಡುವರೆ ನನ್ನ ತನುವನೊಪ್ಪಿಸಿಹೆನು' ಎಂದು ದೇಹವನ್ನು ಒಪ್ಪಿಸಿದಾಗ 'ಸರ್ವಾಂಗ ಸ್ಥಾನಮಾನಂಗಳಂ ಪುರುಷಿಸಿ' ನೋಡು 'ದೇಹಾಭಿಮಾನಗಳಿಲ್ಲ'ದಿರುವುದನ್ನು ಕಂಡು ಮಹಾದೇವಿಯಕ್ಕನ ನಿಲವನ್ನರಿಯದೆ ತನು 'ಅಳುಪಿ ಕೆಟ್ಟು'ದಕ್ಕೆ ಪರಿತಪಿಸಿದಾಗ ಮಹಾದೇವಿಯೇ ಆತನನ್ನು ಸಂತೈಸಿದಳು. ನಿಮ್ಮ ದಯದಿಂದ ನಾನು 'ಹುಲಿನೆಕ್ಕಿ ಬದುಕಿದೆನು' ಎಂದು ಕಿನ್ನರಯ್ಯಗಳು ಶರಣಾಗುವಲ್ಲಿಯವರೆಗೆ ಈ ಪ್ರಸಂಗ ಹರಡಿದೆ.

ಸಿದ್ಧಲಿಂಗದೇವರ ಸಂಪಾದನೆಯಲ್ಲಿ ಕಿನ್ನರಯ್ಯ ಅಕ್ಕನನ್ನು ಬಂದು ಕಂಡದ್ದು ಅಲ್ಲಮ ಕಳುಹಿಸಿದ್ದರಿಂದ. ಹಾಗೆ ಕಿನ್ನರಯ್ಯಗಳನ್ನು ಕಳುಹಲು ಕಾರಣವಿತ್ತು. ಮಹಾದೇವಿ ಕಾಮ ಸಂಸಾರಿ ಎಂಬುದನ್ನು ಪ್ರತ್ಯಕ್ಷವಾಗಿ ತೋರಬೇಕೆಂಬುದೇ ಆ ಕಾರಣ. ಕಿನ್ನರಯ್ಯ ನಾದರೋ 'ಪರಮಜ್ಞಾನಿ' 'ದಳದಳನೆ ಇದಿರಿನಲ್ಲಿ ಬಂದು ಕಂಡು ಭಕ್ತಿಭಾವದಿಂದ ಪರೀಕ್ಷಿಸಿ ನೋಡಲು' ಅಕ್ಕ 'ಅಂತರಂಗದ ಜ್ಞಾನಾಗ್ನಿಯೊಳ್ಕಾಮನಂ ಸುಟ್ಟು ಭಸ್ಮಮಂ ಮಾಡಿ' ತೋರುತ್ತಾಳೆ.

ಒಡೆಯರ ಸಂಪಾದನೆ ಸಿದ್ಧಲಿಂಗದೇವರ 'ಪರೀಕ್ಷಿಸಿ ನೋಡಲು' ಎಂಬ ವಾಕ್ಯ ಭಾಗಕ್ಕಿಂತ ಹೆಚ್ಚಿನ ಸ್ಥಳವನ್ನೇನೋ ಕಿನ್ನರಯ್ಯಗಳ ಪರೀಕ್ಷೆಗೆ ಕೊಟ್ಟಿದೆ. 'ಒರೆದು ನೋಡುವ ಪ್ರಸ್ತಾವ'ದಲ್ಲಿ ಹಲಗೆಯಾರ್ಯರಲ್ಲಿ ಬಳಕೆಯಾದ 'ಕಾಮದಲ್ಲಿ ಕಳವಳವಿರಲು' ಎಂಬ ವಚನ ಬಳಕೆಯಾಗಿದೆ. ಅಲ್ಲಮ ಕೇಳಿದ ರೀತಿಯ ಪ್ರಶ್ನೆಗಳು ಇಲ್ಲೇ ಪ್ರಾರಂಭವಾಗಿವೆ. ಸಿದ್ಧಲಿಂಗ ದೇವರ ಸಂಪಾದನೆಯಲ್ಲಿಯಂತೆ 'ಅಂಗದ ಭಂಗವ ಲಿಂಗ ಸುಖದಿಂದ ಗೆಲಿದೆ' ಎಂಬ ವಚನದಿಂದ 'ಕಾಮನಂ ಸುಟ್ಟು ಭಸ್ಮಮಂ ಮಾಡಿದ' ಪ್ರಸಂಗವನ್ನು ನಿರ್ವಹಿಸಿದೆ. ಈ ಪರೀಕ್ಷೆಯ ನಂತರದಲ್ಲಿ '...ಎನ್ನಂತೆ ಭಾಗ್ಯಂಗೆಯ್ದುವರುಂಟೆ ಕಿನ್ನರನಂತಪ್ಪ ಸೋದರನೆನಗೆ' ಎಂಬ ವಚನವನ್ನು ಇರಿಸಿದೆ. ಸಿದ್ಧಲಿಂಗದೇವರ ಸಂಪಾದನೆಯಲ್ಲಿ ಬಳಕೆಯಾದುದಕ್ಕಿಂತ ಎರಡು ವಚನಗಳು ಹೆಚ್ಚಾಗಿ ಈ ಪ್ರಸಂಗದಲ್ಲಿ ಬಳಕೆಯಾಗಿದ್ದರೂ ಒಟ್ಟು ಪ್ರಸಂಗದ ನಿರ್ವಹಣೆಯಲ್ಲಿ ಸಿದ್ಧಲಿಂಗದೇವರ ಅನುಸರಣೆಯೇ ಇದೆ.

'ಜವ್ವನದ ಹೊಱಮಿಂಚಿನಲ್ಲಿ ನಿಮ್ಮ ಕಣ್ಣಿಂಗೆ ತೋಱುವ ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯ' ಎಂಬ ಅಕ್ಕನ ವಚನದ ಭಾಗವೇ ಈ ಪ್ರಸಂಗದ ಕಲ್ಪನೆಗೆ ಪ್ರೇರಣೆ ನೀಡಿತೆ ಎಂಬ ಸಂದೇಹ ಮೂಡುತ್ತದೆ. ಈ ಪ್ರಸಂಗ ಮೊದಲ ಸಂಪಾದನೆಯಲ್ಲಿ ಸೂಚ್ಯ ವಾಗಿದ್ದು ಹಲಗೆಯಾರ್ಯರಲ್ಲಿ ಕಾಮವನ್ನು ಭಸ್ಮವಾಗಿಸಿದ ಸಂಗತಿ ಶಬ್ದಶಃ ಸಾಕಾರ ಗೊಂಡು ನಿಡಿದಾಗಿ ಲಭಿಸಿದೆ. ಇಂಥ ವಿವರಗಳು ಅಕ್ಕನ ಮತ್ತು ಕಿನ್ನರಯ್ಯನ ಚಾರಿತ್ರ್ಯದ ದೃಷ್ಟಿಯಿಂದ ಅನಪೇಕ್ಷಣೀಯವೆಂದು ಮುಂದಿನವರಿಗೆ ಅನ್ನಿಸಿ ಅನೇಕ ವಿವರಗಳನ್ನು ಕೈಬಿಟ್ಟಿರಬಹುದು. ಆದರೆ ಅಷ್ಟೇ ಸಾಲದೆನಿಸಿ ಕೆಲವಾದರೂ ಪರ್ಯಾಯ ಸೂಚನೆಗಳನ್ನು ಕೊಟ್ಟು ಹಲಗೆಯಾರ್ಯರ ಈ ಪ್ರಸಂಗದ ನಿರೂಪಣೆ ಉಂಟುಮಾಡಬಹುದಾದ ತಿಳುವಳಿಕೆಯ ಸ್ವರೂಪವನ್ನು ಬದಲಾಯಿಸುವ ಉದ್ದೇಶವನ್ನು ಹೊಂದಿರುವಂತೆ ತೋರುತ್ತದೆ. ಅಂತೆಯೇ ಕಿನ್ನರಯ್ಯ 'ಲೀಲಾವಿನೋದ'ದಿಂದ ಬಂದು ಅಕ್ಕನನ್ನು ಕೆಣಕುತ್ತಿಲ್ಲ. ಬದಲಿಗೆ ಬಸವಾದಿಗಳು ಅಕ್ಕನ ವೈರಾಗ್ಯವನ್ನು ಹೊರಜಗತ್ತಿಗೆ ಕಾಣಿಸುವ ಉದ್ದೇಶದಿಂದ ಆತನನ್ನು ಕಳಿಸಿದ್ದಾರೆ. ಆತನಾದರೋ 'ಪರಮಜ್ಞಾನಿ'. ಹಲಗೆಯಾರ್ಯೋತ್ತರ ಸಂಪಾದನೆಗಳಲ್ಲಿ ಕಿನ್ನರಯ್ಯಗಳು

'ಭಕ್ತಿ ಭಾವದಿಂದ ಸರ್ವಾಂಗಮಂ ಪರೀಕ್ಷಿಸಿ' ನೋಡಿದ್ದಾರೆ. ಇದು ಹಲಗೆ ಯಾರ್ಯರ ಕಿನ್ನರಯ್ಯ 'ತುಡುಕಿ' ಹಿಡಿದು 'ಪರುಕಿಸಿ' ನೋಡಿದ್ದಕ್ಕಿಂತ ಭಿನ್ನ. ನಂತರದ ಸಂಪಾದನೆಗಳು ಕಿನ್ನರಯ್ಯ ಅಕ್ಕನನ್ನು ಕಂಡ, 'ಪರೀಕ್ಷಿಸಿ'ದ ಅಕ್ಕ ಆ ಪರೀಕ್ಷೆಯಲ್ಲಿ ಗೆದ್ದ ಘಟನೆಗಳಲ್ಲಿ ಯಾವುದನ್ನೂ ಕೈಬಿಟ್ಟಿಲ್ಲ. ಆದರೆ ಘಟನೆಗಳ ಹೆಚ್ಚಿನ ವಿವರಗಳನ್ನು ಬಿಟ್ಟು ಈ ಘಟನೆಗಳ ಹಿಂದೆ ಇದ್ದದ್ದು ಉದ್ದೇಶಿತ ಸತ್ತ್ವಪರೀಕ್ಷೆ ಎಂಬುದರ ಮೇಲೆ ಒತ್ತುಕೊಟ್ಟು, ಕಿನ್ನರಯ್ಯಗಳ ಚಾರಿತ್ರ್ಯಕ್ಕೊಂದು ಹೊಸ ತಿರುವನ್ನು ಕೊಡಲು ಯತ್ನಿಸಿವೆ. ಮುಂದೆ ಶರಣರ ಗೋಷ್ಠಿಯಲ್ಲಿ 'ನುಡಿಸಿ' ನೋಡಿದ ಪರೀಕ್ಷೆಗೆ ಅಕ್ಕ ಒಳಗಾಗಿದ್ದರೆ ಇಲ್ಲಿ 'ಪರೀಕ್ಷೆ'ಯ ದಿವ್ಯದ ಮೂಲಕ ನೇರವಾಗಿ ಹಾದು ಬಂದಿದ್ದಾಳೆ.

ಕಿನ್ನರಯ್ಯಗಳ ಪ್ರಸಂಗ ಸಂಪಾದನೆಯಿಂದ ಸಂಪಾದನೆಗೆ ಬದಲಾಗುತ್ತಾ ಹಿಗ್ಗುತ್ತಾ, ಕುಗ್ಗುತ್ತಾ ಹೋಗುವ ಪರಿ ಕುತೂಹಲಕಾರಿಯಾದದ್ದು. ಸೇರಿಸಿದ್ದು, ಕೈಬಿಟ್ಟಿದ್ದನ್ನು ಕಳೆದರೂ ಉಳಿಯುವ ಪ್ರಸಂಗದ ಒಟ್ಟು ಚೌಕಟ್ಟು ಸೂಚಿಸುವಂಥ ಸನ್ನಿವೇಶ ಅಥವಾ ಸನ್ನಿವೇಶ ಗಳನ್ನು ಅಕ್ಕ ಎದುರಿಸಬೇಕಾಗಿ ಬಂತೆನ್ನುವುದು ಅಸಂಭವವಲ್ಲ. ಉಡುತಡಿಯಿಂದ ಕಲ್ಯಾಣದವರೆಗಿನ ದಾರಿಯಲ್ಲಿ ಅನೇಕರ 'ಭಾವದಲ್ಲಿ ಬಚ್ಚ ಬರಿಯ ಹೆಂಗುಸಾಗಿ ತೋರಿ' ಬಂದಿದ್ದರೆ ಆಶ್ಚರ್ಯವಿಲ್ಲ. 'ಹರುಷಿಸಿ' ನೋಡುವುದರಿಂದ ಹಿಡಿದು 'ಸ್ಪರ್ಶಿಸಿ' ಪರೀಕ್ಷಿಸುವ ವರೆಗಿನ ಯಾವ ಹಂತದ ಚಿತ್ರವಾದರೂ ಹಲವು ಕಿನ್ನರಯ್ಯಗಳ ಮುಂದೆ ಸುಳಿದೇ ಇಲ್ಲವೆನ್ನುವುದು ಹೇಗೆ ? ಅವರ 'ಕಣ್ಣಿಗೆ ತೋರುವ ಕಾಮನ' ಹಣೆಬರಹವನ್ನು ಆಕೆ ತೊಡೆಯಬಲ್ಲಳು ಎಂಬುದನ್ನು ಕಾಣುವುದು ಆಕೆಯ 'ಜವ್ವನದ ಹೊರಮಿಂಚ'ನ್ನು ನೋಡಿ ಮಬ್ಬಾದ ಕಣ್ಣುಗಳಿಗೆ ಅಸಾಧ್ಯವಾಗಿರಲೂಬಹುದು. ಇಂಥ ವ್ಯಕ್ತಿತ್ವದ ಅಭಿವ್ಯಕ್ತಿ ತಾನೇ ನಮ್ಮ ಸಮಾಜಕ್ಕೆ ಎಲ್ಲಿ ರೂಢಿಯಾಗಿತ್ತು ? ನಮ್ಮ ಇತಿಹಾಸದಲ್ಲಿ ಅಂದಿನವರೆಗೆ (ಇಂದಿನವರೆಗೂ) ಮಹಿಳೆಯ ವ್ಯಕ್ತಿತ್ವದಲ್ಲಿ 'ಲೈಂಗಿಕತೆ', 'ಮಾತೃತ್ವ'ದ ಮೇಲೆಯೇ ಬಹುತೇಕ ಎಲ್ಲ ಒತ್ತೂ ಬಿದ್ದು ಅಕ್ಕನಂಥ ಒಬ್ಬ 'ಆಧ್ಯಾತ್ಮಿಕ ಹಂಬಲ ಪ್ರಧಾನ'ವಾದ ವ್ಯಕ್ತಿತ್ವದ ಅಭಿವ್ಯಕ್ತಿ ಹೊಸದಾಗಿತ್ತು. ಅಂಥ ಮಹಿಳೆಯರಿದ್ದಿರಬಹುದಾದರೂ ಅವರಿಗೆ ದಾರಿಗಳೆಲ್ಲಿದ್ದವು ? ಮಹಿಳೆಯರ 'ಬೌದ್ಧಿಕ', ಆಧ್ಯಾತ್ಮಿಕ ಮತ್ತಿತರರ ಮುಖಗಳು ಸಮಾಜಕ್ಕೆ ಎಷ್ಟು ಪರಿಚಿತವಾಗಿದ್ದವು ? ಈ ಹಿನ್ನೆಲೆಯಲ್ಲಿ ಸಂಪಾದನೆಗಳ ಈ ಭಾಗದಲ್ಲಿ ಅಕ್ಕನ ಸತ್ತ್ವ ಪರೀಕ್ಷೆಗೇ ಎಲ್ಲ ಒತ್ತೂ ಬಿದ್ದಿರುವುದು ಅರ್ಥ ಮಾಡಿಕೊಳ್ಳಬಹುದಾದ ಸಂಗತಿ. ಈ ಪ್ರಸಂಗ ಕಾಲ್ಪನಿಕವಾಗಿದ್ದರೂ ಇಲ್ಲಿನ ಅಕ್ಕನ ಈ ಪರೀಕ್ಷೆಗಳು ಮಹಿಳೆಯ ಹೊಸ ಕ್ಷೇತ್ರದಲ್ಲಿನ ಸ್ಥಾಪಿಸಿಕೊಳ್ಳುವಿಕೆಯ ಪ್ರಾರಂಭಿಕ ಪ್ರಯತ್ನಗಳು ನಡೆದ ಪರಿಸರವನ್ನು ನಮ್ಮ ಸಾಂಸ್ಕೃತಿಕ ಇತಿಹಾಸದಲ್ಲಿ ದಾಖಲಿಸುತ್ತವೆ. ಕಿನ್ನರಯ್ಯನ ಪರೀಕ್ಷೆಯಿಂದ ಹಿಡಿದು ಅಲ್ಲಮಾದಿಗಳ ಪರೀಕ್ಷೆಯವರೆಗೆ ನಮ್ಮ ಕಿವಿಗಳಲ್ಲಿ ಮತ್ತೆ ಮತ್ತೆ ಅನುರಣಿಸುವ ಪ್ರಶ್ನೆ 'ಈ ಅಕ್ಕನ ಹೆಣ್ಣು ದೇಹದೊಳಗೆ ದೈಹಿಕ ಕಾಮನೆಗಳು ಸುತ್ತು ಹೆಣ್ಣು ಇದುವರೆಗೆ ಯಾವುದರ ಸಂಕೇತ ವಾಗಿದ್ದಳೋ ಅದನ್ನು ದಾಟಿ ಹೊಸ ಲೋಕವೊಂದನ್ನು ಪ್ರತಿನಿಧಿಸುತ್ತಿದ್ದಾಳೆಯೇ ? ಇಲ್ಲಿ ಅಕ್ಕನ ಮೂಲಕ ಸ್ತ್ರೀ ದೇಹದೊಳಗಿನ ಚೈತನ್ಯವೊಂದು ಈ ಪ್ರಶ್ನೆಗಳಿಗೆ ಉತ್ತರಿಸದೆ, ನಮ್ಮ ಸಾಂಸ್ಕೃತಿಕ ಇತಿಹಾಸದ ಹೊಸ ಹಾಳೆಗಳನ್ನು ತೆರೆಯುತ್ತಿದೆ. ಹೀಗಾಗಿ ಕಲ್ಯಾಣಾಭಿ ಮುಖಿಯಾದ ಅಕ್ಕನ ಪಯಣದಲ್ಲಿನ ಅನುಭವಕ್ಕೆ ಕಿನ್ನರಿ ಬೊಮ್ಮಯ್ಯಗಳ ಪ್ರಸಂಗ ಒಂದು ಸಂಕೇತ. ಚರಿತ್ರೆಯಲ್ಲಿ ಮಹಿಳೆಯ ಒಂದು ಹೊಸ ಹೆಜ್ಜೆಯ ಸಂಕೇತ.

ಅಕ್ಕನ ಸತ್ತ್ವಪರೀಕ್ಷೆ ಕಲ್ಯಾಣದಲ್ಲಿ ಮುಂದುವರಿಯಿತು. ಬಸವಾದಿ ಶರಣರ ಸಮ್ಮುಖದಲ್ಲಿ ಆಕೆಯ ಒಳಸತ್ತ್ವವು ಒರೆಗೆ ಹಚ್ಚಲ್ಪಟ್ಟಿತು. ಈ ಸಂದರ್ಭದಲ್ಲಿ ಸಂಪಾದನೆಗಳು ಮುಖ್ಯವಾಗಿ ಮೂರು ಸಂಗತಿಗಳ ಸುತ್ತ ವಿವಾದವನ್ನು ಹರಡಿವೆ. ಮೊದಲನೆಯದು ಆಕೆಯ ದಿಗಂಭರತ್ವ, ಎರಡನೆಯದು 'ಪತಿಯ ಕುಱುಹಿನ' ಪ್ರಶ್ನೆ. ಮೂರನೆಯದು ಅಥವಾ ಇವೆರಡು ಸಂಗತಿಗಳ ಚರ್ಚೆಯ ಮೂಲದಲ್ಲಿ ಇರುವಂಥದು ಲೌಕಿಕವಾಗಿ ಅಸಾಮಾನ್ಯವಾದ ಈ ಘಟನೆಗಳನ್ನು ಸಾಧ್ಯವಾಗಿಸಿದ ವಿರಕ್ತ ಮೂಲದ ಅಕ್ಕನ ವ್ಯಕ್ತಿತ್ವದ ಪ್ರಕಟಣೆ.

ಬಸವಣ್ಣ ಅಕ್ಕನನ್ನು ನೋಡಿ ಪ್ರಭುವಿಗೆ 'ತೋಱೆ ನುಡಿದ' ವಚನದಲ್ಲಿಯೇ ಆಕೆಯ ದಿಗಂಬರತ್ವ ಮತ್ತು 'ಪತಿ'ಯ ಬಗ್ಗೆ ಇತ್ಯಾತ್ಮಕವಾದ ಸೂಚನೆಗಳಿವೆ. ಆದರೂ ಅಲ್ಲಮನ ಮೊದಲ ಪ್ರಶ್ನೆಯೇ ಪತಿಯ 'ಕುರುಹ'ನ್ನು ಕುರಿತದ್ದು. ಲೌಕಿಕ ನೆಲೆಯಲ್ಲಿ ಪತಿಯನ್ನು ತೊರೆದು ಬಂದಳೆನ್ನಲಾದ ಅಕ್ಕನ ಜೀವನದ ವಿಶಿಷ್ಟ ಹಿನ್ನೆಲೆಯಲ್ಲಿ ಈ ಪ್ರಶ್ನೆಯನ್ನು ಕೇಳಿಸಿ ಅದಕ್ಕೆ ಸಮರ್ಥನೆ ನೀಡುವುದು ಹಾಗೂ ಹಗೆ ಮಾಡುವಲ್ಲಿನ ಆಕೆಯ ಅಲೌಕಿಕ ನೆಲೆಯ ಎತ್ತರ ಮತ್ತು ಸ್ಥಿರತೆಯನ್ನು ಎತ್ತಿ ಹೇಳುವುದು ಸಂಪಾದನಕಾರರ ಉದ್ದೇಶವಾಗಿರಬಹುದು. ಬಹುಶಃ ವಚನಕಾರರ, ಸಂಪಾದನಕಾರರ ಕಾಲದಲ್ಲೂ ಈ ಅಂಶ ಹೆಚ್ಚಿನ ಚರ್ಚೆಗೆ ಒಳಗಾಗಿರಲೂಬಹುದು. ಈ ಹಿನ್ನೆಲೆಯಲ್ಲಿ ಅಲ್ಲಮನ ಮೂಲಕ ಇಂಥ ಪ್ರಶ್ನೆಗಳು ಮೂಡಿ ಬರುವಂತೆ ಮಾಡುವುದು ಅಗತ್ಯವಾಗಿದ್ದಿರಬಹುದು. 'ಸತಿಯೆಂದರೆ ಮುನಿಯರು ನಮ್ಮ ಶರಣರು. ನಿನ್ನ ಪತಿಯ ಕುಱುಹ ಹೇಳಿದರೆ ಬಂದು ಕುಳ್ಳಿರು. ಅಲ್ಲದೊಡೆ ತೊಲಗು ತಾಯೆ' ಎಂಬ ಅಲ್ಲಮನ ಮಾತಿನ ಹಿಂದೆ ಈ ಆಂದೋಲನ ಎದುರಿಸಿದ ಒಂದು ಪ್ರಾಯೋಗಿಕ ನೆಲೆಯ ಹೊಸ ಸಮಸ್ಯೆಯಾಗಿ ಅಕ್ಕ ತಲೆದೋರಿದ್ದು ಆಕೆಯನ್ನು ಸಮಂಜಸವಾಗಿ ಸಮರ್ಥಿಸ ಬೇಕಾದ ಅಗತ್ಯವಿದ್ದೀತು. ಅಂಥ ಅಸಮರ್ಥನೆಗೆ ಈ ಸಂದರ್ಭ ಸರಿಯಾದುದೆಂದು ಸಂಪಾದನಕಾರರಿಗೆ ತೋರುವಂತಿದೆ. ಗಂಡನ ಗುರುತು ಹೇಳಿಯೇ ಪ್ರವೇಶಿಸಬೇಕಾದ ಸಂಗತಿ ನಮ್ಮ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭದಲ್ಲಿ ವಿಚಿತ್ರವಾಗೇನೂ ತೋರುವುದಿಲ್ಲ. ಮಹಿಳೆಯನ್ನು ಅವಳ ಗಂಡನ ಮೂಲಕ ಮಾತ್ರ ಗುರುತಿಸುವುದು ಸಾಧ್ಯವಿದ್ದ, ಸಾಧ್ಯವಿರುವ ಪರಿಸ್ಥಿತಿಯಲ್ಲಿ ಈ ಸಂದರ್ಭ ಜಾಗತಿಕ ನೆಲೆಯಲ್ಲಿ ಮಹಿಳೆ ಸಂಪೂರ್ಣವಾಗಿ ಹಿನ್ನೆಲೆಗೆ ಸರಿಯ ಬೇಕಾಗಿಬಂದದ್ದರ ಸಂಕೇತ. ಅವಳು ಅವಳಾಗಿ ಏನೂ ಅಲ್ಲ. ಅವಳ ಗಂಡನ ಮೂಲಕ ಅವಳಿಗೂ ಒಂದು ನೆಲೆ, ಒಂದು ವ್ಯಕ್ತಿತ್ವ ಎಂಬುದೇ ಸಾಮಾನ್ಯ ತಿಳಿವಳಿಕೆ ಯಾಗಿದ್ದಾಗ ಅದಕ್ಕಿಂತ ಬೇರೆಯಾದ ಒಂದು ಸ್ಥಿತಿಯನ್ನು ಸ್ಥಾಪಿಸಲು ಇದೊಂದು ನಿಕಷವಾಗಿದೆ. ಇಲ್ಲಿ ಮಹಾದೇವಿ ಅಲೌಕಿಕ ಪತಿಯನ್ನು ಆಶ್ರಯಿಸಿ ಲೌಕಿಕ ಪತಿಯ ಸಂಬಂಧವನ್ನು ನಿರಾಕರಿಸುತ್ತಾಳೆ. ಆಧ್ಯಾತ್ಮಿಕ ಸಾಧನೆ ವ್ಯಕ್ತಿಗೆ ಕೊಡುವ ವಿಶ್ವಾಸ, ಧೈರ್ಯಗಳು ಸಾಮಾಜಿಕ ಬದಲಾವಣೆಗಳನ್ನೂ ಹೇಗೆ ಸಾಧ್ಯವಾಗಿಸುತ್ತವೆ, ಆ ಬದಲಾವಣೆಗಳು ಸ್ವೀಕಾರವಾಗುವಂತೆ ಮಾಡುತ್ತವೆ ಎಂಬುದಕ್ಕೆ ಇದೂ ಒಂದು ನಿದರ್ಶನ.

'ನೀನು ಕೌಶಿಕನೆಂಬ ಭವಿಯ ಮೇಲೆ ಲಿಂಗಧಾರಣವಾಗದ ತಪ್ಪ ಹೊಱಿಸಿ ಬರುವಲ್ಲಿ' ಎಂಬ ವಿವರಣೆಯೊಂದಿಗೆ 'ತಪ್ಪ ಹೊಱಿಸಿ ಹೊರಟಿಹೆಯೆಂಬುದು ಸತ್ಯವೇ ?' ಎಂಬ ಅಲ್ಲಮನ ಪ್ರಶ್ನೆಯನ್ನು ಒಡೆಯರ ಸಂಪಾದನೆ ಅಕ್ಕನ ಮುಂದಿಟ್ಟಿದೆ. ಇದಕ್ಕೆ ನೇರವಾದ ಉತ್ತರವನ್ನು ಹೇಳದಿದ್ದರೂ ಲೌಕಿಕ ಗಂಡನ ಸಂಬಂಧವನ್ನು ಅಲ್ಲಗಳೆದ ಅಕ್ಕ ಅಲೌಕಿಕ ಪತಿಯೊಂದಿಗಿನ

ತನ್ನ ಮದುವೆಯನ್ನೇ ಒತ್ತಿ ಹೇಳಿ 'ಚೆನ್ನಮಲ್ಲಿಕಾರ್ಜುನ ಗಂಡನೆನಗೆ ಮಿಕ್ಕಿದ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯಾ' ಎನ್ನುತ್ತಾಳೆ. ಆದರೆ ಈ ಮಾತನ್ನು ಶರಣರು, ಅದರಲ್ಲಿಯೂ ಅಲ್ಲಮ ಹಾಗೆ ಒಪ್ಪಲಿಲ್ಲ. 'ರೂಪ ನಿರೂಪನೊಡಗೊಡುವ ಪರಿ'ಯನ್ನು ಆಕೆ ಹೇಳುವಲ್ಲಿ ವ್ಯಕ್ತವಾದ ಆಕೆಯ ಸತ್ತ್ವದ ಎತ್ತರವನ್ನು ಕಂಡ ಮೇಲೆ ಒಪ್ಪಿದರು. ಆ ಸತ್ವಕ್ಕೆ ತಲೆಬಾಗಿದರು.

ಒಡೆಯರ ಸಂಪಾದನೆಯಲ್ಲಿ ಈ ಸಂದರ್ಭದಲ್ಲಿ ಒತ್ತು ಪಡೆದ ಮತ್ತೊಂದು ಅಂಶ ಅಕ್ಕನ ದಿಗಂಬರತ್ವ ಅಥವಾ ಅರೆದಿಗಂಬರತ್ವ. ಈ ಸಂಬಂಧವಾದ ಚರ್ಚೆಯೂ ಅಕ್ಕನ ಒಳಸತ್ತ್ವವನ್ನು ಕೆದಕಿ, ಒರೆದು ತೋರಲು ಹವಣಿಸಿದೆ. ಈ ಸಂವಾದ ಪ್ರಾರಂಭವಾಗುವ ಮೊದಲೇ ಆಕೆ 'ಭಾವಂ ಕಱಿಗೊಂಡು ಲೌಕಿಕ ಲಜ್ಜಾಭಿಮಾನವನ್ನು ತೊಱೆ'ದಳೆಂಬುದನ್ನು ಹೇಳಿ ಈ ಮಾನಸಿಕ ಹದದಲ್ಲಿ ವಸ್ತ್ರತ್ಯಾಗ ಸಹಜವೆಂಬಂಥ ವಿವರಗಳನ್ನು ಕೊಡಲಾಗಿದೆ. 'ದಿಗಂಬರಂಗೆ ಒಲಿದವರಿಗೆ ಕೌಪೀನದ ಹಂಗುಂಟೆ' ಮುಂತಾದ ಸಮರ್ಥನೆಯೊಂದಿಗೇ ಬಸವಣ್ಣ ಪ್ರಭುವಿಗೆ ಅಕ್ಕನನ್ನು ತೋರಿ ನುಡಿದಿರುವುದು ಎಲ್ಲ ಸಂಪಾದನೆಗಳಲ್ಲೂ ಕಾಣುವ ಸಾಮಾನ್ಯಾಂಶ. ಬಸವಣ್ಣನ ವ್ಯಕ್ತಿತ್ವಕ್ಕೆ ಭಕ್ತರನ್ನು ಕುರಿತ ಈ ಸಹಜ, ತಡೆರಹಿತ ಮೆಚ್ಚು ಹೊಂದುವಂಥದು. ಆದರೆ ಇದಕ್ಕಿಂತ ಭಿನ್ನವಾದ ಅಲ್ಲಮ 'ಅಕ್ಕನ ಅನುಭಾವ ಶುಖಮುಖ ದಿಂದ ನುಡಿಯಿಸಲು' ಪ್ರಶ್ನಿಸುವುದು ಸಹಜ. ಬಸವಣ್ಣ ತೋರಿ ನುಡಿಯುವಲ್ಲಿ ದಿಗಂಬರತ್ವದ ಸಮರ್ಥನೆಗೇ ಎಲ್ಲ ಒತ್ತೂ ಬಿದ್ದಿದ್ದರೂ ಅಲ್ಲಮನ ಮೊದಲ ಪ್ರಶ್ನೆಯ ದಿಕ್ಕು ಬೇರೆ. ಮೊದಲು ಪತಿಯ ಕುರುಹಿನ ಪ್ರಸ್ತಾಪ ಬಂದಿದೆ. ಶಿವಗಣ ಪ್ರಸಾದಿಗಳಲ್ಲಿ ಅಷ್ಟಕ್ಕೇ ಅಲ್ಲಮನ ಪ್ರಶ್ನೆಗಳು ಸಂಬಂಧಿಸಿವೆ. ಒಡೆಯರಲ್ಲಿ ಪತಿಯ 'ಕುರುಹ'ನ್ನು ಹೇಳಿದ ನಂತರ 'ನೀನು ಕೌಶಿಕನೆಂಬ ಭವಿಯ ಮೇಲೆ ಲಿಂಗಧಾರಣವಾಗದ ತಪ್ಪ ಹೊಱಿಸಿ ನಿರ್ವಾಣವಾಗಿ ಬಹಲ್ಲಿ ಕೇಶ ಮಱೆಯಾದರೆ ಅಭಿಯಾನ ಹರಿಯದು' ಎಂಬಲ್ಲಿ ಈ ದಿಗಂಬರತ್ವದ, ಅರೆ ದಿಗಂಬರತ್ವದ ಚರ್ಚೆ ತೊಡಗಿದೆ. 'ತನು ಸೀರೆಯನಳಿದು ನಿರ್ವಾಣವಾದಲ್ಲಿ, ಮನದ ಭ್ರಾಂತು ನಿಶ್ಚಯ ವಾಗದು', 'ಕೇಶವೆಂಬ ಸೀರೆ ಅಂಗಕ್ಕೆ ಮಱೆಯಾಯಿತು. ಅಪಮಾನವೆಂತು ಹಱೆಯಿತ್ತು' ಎನ್ನುವಲ್ಲಿ ಕೇಶವೆಂಬ ಸೀರೆ ತಾನೆ ಯಾಕೆ ? ಎಂಬುದು ಅಲ್ಲಮನ ಪ್ರಶ್ನೆಯ ಕೇಂದ್ರ. ಆದರೆ ಅಕ್ಕನ ಉತ್ತರ ಈ ಕೇಂದ್ರ ಪ್ರಶ್ನೆಗೆ ಉತ್ತರವಾಗಿಲ್ಲ. ಮತ್ತೆ ಅದೇ ಪ್ರಶ್ನೆ 'ಭಾವ ಶುದ್ಧವಾದಲ್ಲಿ ಸೀರೆಯನಳಿದು ಕೂದಲ ಮಱೆಸಲೇತಕ್ಕೆ ?' ಕೊನೆಗೆ ಅಕ್ಕನ ಮನಸ್ಸಿನಲ್ಲಿದ್ದುದು ಈಚೆ ಬಂದಂತಿದೆ 'ಫಳ ಒಳಗೆ ಪಕ್ವವಾಗಿ ಯಲ್ಲದೆ ಹೊಱಗಣ ಸಿಪ್ಪೆ ಒಪ್ಪಗೆಡದು ಕಾಮನ ಮುದ್ರೆಯ ಕಂಡು ನಿಮಗೆ ನೋವಾದೀತೆಂದು ಆ ಭಾವದಿಂದ ಮುಚ್ಚಿದೆ, ಇದಕ್ಕೆ ನೋವೇಕೆ ? ಕಾಡದಿರಣ್ಣಾ ಚೆನ್ನಮಲ್ಲಿಕಾರ್ಜುನ ದೇವರ ದೇವನ ಒಳಗಾದವಳಾ', ತನ್ನ ಸ್ಥಿತಿಯನ್ನು ವಿವರಿಸುವ ಮೊದಲ ಭಾಗವೇನೋ ಸರಿ. ಆದರೆ 'ಕಾಯದ ಲಜ್ಜೆಯ ಕಲ್ಪಿತವ ಕಳೆದು ಕೊಂಡವರು' ಎಂಬ ನಂಬಿಕೆ ಗೌರವ ಈ ಶರಣರ ಬಗ್ಗೆ ಅಕ್ಕನಿಗಿರುವಾಗ ಬೇರೆಯವರಿಗೆ 'ಕಾಮದ ಮುದ್ರೆ'ಯಾಗಿ ಕಾಣುವಂಥದು ಅಲ್ಲಮಾದಿ ಶರಣರಿಗೂ ಹಾಗೆ ಕಾಣುತ್ತದೆಂದು ಯೋಚಿಸಲು ಸಾಧ್ಯವೇ ? ಅದನ್ನು ಮೀರಿದವಗೆ ಅದನ್ನು ಕಂಡು ನೋವಾಗುವುದು ಹೇಗೆ ? ಎಂಬ ಪ್ರಶ್ನೆ ಉಳಿಯುತ್ತದೆ. 'ಕಾಡದಿರಣ್ಣಾ...' ಎಂದು ಹೇಳುತ್ತಾ ದಾರ್ಶನಿಕತೆ, ಆನುಭಾವಿಕತೆಯ ಆಳಕ್ಕೆ ಒಯ್ಯಬಹುದಾಗಿದ್ದ ಚರ್ಚೆಗೆ ಒಂದು ಅಸಹಾಯಕವಾದ, ಭಾವನಾಪ್ರಾಧಾನ್ಯತೆಯ ತಡೆಯನ್ನು ಒಡ್ಡಿ ಅಕ್ಕನೇ ಚರ್ಚೆಗೊಂದು ಸೀಮಾರೇಖೆಯನ್ನು ಎಳೆಯುತ್ತಿರುವಂತೆ ಒಡೆಯರ ಸಂಯೋಜನೆ ಇದೆ.

ಅಕ್ಕನ ದಿಗಂಬರತ್ವದ ಪ್ರಸ್ತಾವವನ್ನೆತ್ತಿ ವಿಶದಗೊಳಿಸ ಹೊರಟ ಸಂಪಾದನೆಯ ಉದ್ದೇಶವು ಏನಾಗಿತ್ತು? ಅಕ್ಕನ ದಿಗಂಬರತ್ವವನ್ನು ತಾತ್ತ್ವಿಕವಾಗಿ ಸಮರ್ಥಿಸಿ, ವಿಶದ ಪಡಿಸುವುದ ರೊಂದಿಗೆ 'ಕೇಶಸೀರೆ'ಯ ಮೇಲೆ ಹೆಚ್ಚು ಒತ್ತುಕೊಟ್ಟು ಆ ದಿಗಂಬರತ್ವ ದೊಳಗೇ ಒಂದು 'ಅಂಬರತ್ವ'ವಿತ್ತೆಂದು ಒತ್ತಿಹೇಳುವುದಾಗಿತ್ತೆ? ಹಾಗೆ ಹೇಳುವ ಉತ್ಸಾಹದಲ್ಲಿ ಅಲ್ಲಮನಿಂದ ಪ್ರಶ್ನೆಗಳನ್ನು ಮೂಡಿಸಿದರೂ ಅಕ್ಕನಿಂದ ಸಮರ್ಪಕವಾಗಿ ಉತ್ತರ ಕೊಡಿಸಲಾಗದೆ ಹೋಯಿತೇ? ಅಕ್ಕ ಕೊಡುವ ಉತ್ತರ ಅಲ್ಲಮನಂಥ ಅನುಭಾವಿಯ ಅನುಭಾವಿಕತೆಯ ಸತ್ತ್ವವನ್ನು ತಕ್ಕ ರೀತಿಯಲ್ಲಿ ನೋಡದೆ ಹೋಗಬಹುದಾದ ಸಾಧ್ಯತೆಯನ್ನು ಗಮನಿಸಲಿಲ್ಲವೇ?

ಅಕ್ಕನಂಥ ಒಬ್ಬ ಅನುಭಾವಿನಿ ಬೇರೊಂದು ಕಾಲದಲ್ಲಿ ಜನಿಸಿದ್ದರೆ ಏನಾಗುತ್ತಿತ್ತೋ. ಕಾಶ್ಮೀರಿ ಅನುಭಾವಿ, ಕವಯಿತ್ರೀ ಲ್ಲಾದೀದಿ ಅನುಭವಿಸಿದಂತೆ ನಿರಂತರವಾದ ವಿರೋಧ, ಹಿಂಸೆಗಳನ್ನು ಎದುರಿಸಿ ಹುಚ್ಚಿ ಎನ್ನಿಸಿಕೊಳ್ಳಬೇಕಾಗಿತ್ತೋ ಏನೋ. ಇಂಥ ವಿರೋಧ, ಪ್ರತಿಭಟನೆಯನ್ನು ವಿಶೇಷವಾಗಿ ಮೊದಲ ಹಂತದಲ್ಲಿ ಆಕೆ ಎದುರಿಸಿರಬೇಕು. ಆದರೆ ಕಲ್ಯಾಣ ದಲ್ಲಾದರೂ ಒಂದು ಸಮೂಹ ಆಕೆಯನ್ನು ವಿಶೇಷ ಗೌರವದಿಂದ ಕಂಡಿತು. ಅಂತೆಯೇ ಶರಣರನ್ನು ಕುರಿತ ಮನತುಂಬಿದ ಕೃತಜ್ಞತೆ ಶೂನ್ಯ ಸಂಪಾದನೆಯ ಒಳ ಹೊರಗಿನ ವಚನಗಳಲ್ಲಿ ತುಂಬಿ ನಿಂತಿವೆ. 'ಬಸವಣ್ಣನ ಪಾದವ ಕಂಡೆನಾಗಿ ಎನ್ನಂಗ ನಾಸ್ತಿಯಾಯಿತ್ತು. ಪ್ರಭುವೇ ನಿಮ್ಮ ಶ್ರೀ ಚರಣಕ್ಕೆ ಶರಣೆಂದೆನಾಗಿ ಎನ್ನ ಅಜಿವು ಸ್ವಯವಾಯಿತ್ತು. ಚೆನ್ನಮಲ್ಲಿಕಾರ್ಜುನ ದೇವಯ್ಯ, ನಿಮ್ಮ ಶರಣರ ಕರುಣವ ಪಡೆದೆನಾಗಿ ಎನಗೆ ಮತ್ತಾವು ದಿಲ್ಲವಯ್ಯಾ ಪ್ರಭುವೇ' 'ಇಂತೀ ಅಸಂಖ್ಯಾತರೆಲ್ಲರೂ ತಮ್ಮ ಕರುಣದ ಕಂದನೆಂದು ತಲೆದಡಹಿ ರಕ್ಷಿಸಿದ ಕಾರಣ ಚೆನ್ನಮಲ್ಲಿಕಾರ್ಜುನನ ಪಾದಕ್ಕೆ ಯೋಗ್ಯಳಾದೆನು'.... ಇತ್ಯಾದಿ ಅಂತೆಯೇ ಅಕ್ಕನನ್ನು ಕುರಿತು ಶರಣರ ಗೌರವ ಮೆಚ್ಚುಗೆಗಳೂ ವ್ಯಕ್ತವಾಗಿವೆ.

ಶೂನ್ಯಸಂಪಾದನೆಗಳಲ್ಲಿನ 'ಅಕ್ಕಗಳ ಸಂಪಾದನೆ'ಗಳು ಅಕ್ಕನ ಜೀವನದ ಹಿನ್ನೆಲೆ, ಅನುಭಾವಿಕತೆಯನ್ನು ಆ ನಂತರದ ಶತಮಾನಗಳು ಗ್ರಹಿಸಿದ, ಅರ್ಥೈಸಿದ ಕೆಲವು ರೀತಿಗಳನ್ನು ಕಾಣಿಸುತ್ತವೆ. ಆಯಾ ಸಂಪಾದನಾಕಾರರ ಸಂದರ್ಭ, ದೃಷ್ಟಿಕೋನ, ಶಕ್ತಿ, ಆಸಕ್ತಿಗಳಿಗನುಗುಣವಾಗಿ ಈ ಪ್ರಸಂಗದಲ್ಲಿ ಲೋಪ, ಪ್ರಕ್ಷೇಪ, ವ್ಯತ್ಯಾಸಗಳು ಆಗಿವೆ. ಮೇಲೆ ಸೂಚಿಸಿದಂಥ ಅನೇಕ ಪ್ರಶ್ನೆಗಳನ್ನೂ ಈ ಪ್ರತಿಪಾದನೆಗಳು ಚಿಮ್ಮಿಸುತ್ತವೆ (೧೯೮೫).

೬. ಪ್ರಾಚೀನ ಕನ್ನಡ ಕವಿಗಳು ಕಂಡ ಅಕ್ಕಮಹಾದೇವಿ

•

ಡಾ. ಕೆ. ರವೀಂದ್ರನಾಥ

ಹತ್ತನೆಯ ಶತಮಾನದ ಚಂಪೂ ಸಾಹಿತ್ಯ ಭಾರತೀಯ ಸಾಹಿತ್ಯಕ್ಕೆ ಕೊಡುಗೆ ನೀಡಿದರೆ, ಹನ್ನೆರಡಯೆ ಶತಮಾನದ ವಚನ ಸಾಹಿತ್ಯ ಇಡೀ ಜಾಗತಿಕ ಸಾಹಿತ್ಯಕ್ಕೆ ತನ್ನ ಕೊಡುಗೆಯನ್ನು ನೀಡುವುದರ ಮೂಲಕ ಸಾಮಾಜಿಕ, ಧಾರ್ಮಿಕ, ರಾಜಕೀಯ ರಂಗದಲ್ಲಿ ವೈಚಾರಿಕ ಕ್ರಾಂತಿಯನ್ನು ಮಾಡಿತು. ಕನ್ನಡ ಸಾಹಿತ್ಯದಲ್ಲಿ ತವನಿಧಿಯಾಗಿ ಸುವರ್ಣ ಯುಗವನ್ನೇ ನಿರ್ಮಿಸಿತು. ಈ ಸುವರ್ಣ ಯುಗದ ಪ್ರವರ್ತಕರೇ ಕನ್ನಡ ನಾಡಿನ ಶಿವಶರಣರು. ಕೇವಲ ಶಿವಶರಣರು ಎಂದಷ್ಟೇ ಹೇಳಿದರೆ ವಚನ ಸಾಹಿತ್ಯಕ್ಕೆ ಅನ್ಯಾಯ ವೆಸಗಿದಂತಾದೀತು. ಶರಣರ ಜೊತೆಗೆ ಅನೇಕ ಶರಣೆಯರು ಕೃಷಿ ಮಾಡಿ ವಚನ ಸಾಹಿತ್ಯದ ಬೆಳೆಯನ್ನು ಹುಲುಸಾಗಿ ಬೆಳೆಸುವಲ್ಲಿ ಕಾರಣೀಭೂತರಾದರು. ಇವರಲ್ಲಿ ಎದ್ದುಕಾಣುವ ಹೆಸರು ಮಹಾದೇವಿಯಕ್ಕನದು.

ಪ್ರಾಚೀನ ಕನ್ನಡ ಕವಿಗಳಾದ ಹರಿಹರ (೧೨೦೦), ಚಾಮರಸ (೧೪೩೦), ಚೆನ್ನವ್ವಸವಾಂಕ (೧೫೬೦), ರಾಚಕವಿ (೧೬೦೦), ಶೂನ್ಯ ಸಂಪಾದನಾಕಾರರು ಅಕ್ಕನ ಜೀವನ ಚರಿತ್ರೆಯನ್ನು ತಮ್ಮ ಕಾವ್ಯಗಳಲ್ಲಿ ಚಿತ್ರಿಸಿದ್ದಾರೆ. ಈ ಕಾವ್ಯಗಳ ಮೂಲಕ ಅವರು ಅಕ್ಕನನ್ನು ಕಂಡ ರೀತಿಯನ್ನು ನೋಡುವುದಕ್ಕಿಂತ ಪೂರ್ವದಲ್ಲಿ ಈ ಕವಿಗಳ ಧೋರಣೆಯನ್ನು ನೋಡುವುದು ಸೂಕ್ತವೆನಿಸಿದೆ.

ಅಕ್ಕನನ್ನು ಕಂಡ ಕವಿಗಳ ಧೋರಣೆ

ಕನ್ನಡ ಸಾಹಿತ್ಯದಲ್ಲಿ ಕವಿಗಳ ಪ್ರೇರಣೆ ರಾಜಾಶ್ರಯ ಧಿಕ್ಕಾರ. ಜನಾಶ್ರಯ ಸ್ವೀಕಾರವಾಗಿ ಜನ ಬದುಕಬೇಕೆಂದೇ ಕಾವ್ಯ ಬರೆಯತೊಡಗಿದರು. ಆದ್ದರಿಂದ ಜನರ ಮನದಲ್ಲಿ, ಮನೆಯಲ್ಲಿ ನೆಲೆಯೂರಿ ನಿಂತ ಧರ್ಮವನ್ನು, ಧಾರ್ಮಿಕ ಪುರುಷರನ್ನು ಕಾವ್ಯದ ನಾಯಕರನ್ನಾಗಿಸಿ ಕೊಂಡು ಶ್ರೀಸಾಮಾನ್ಯರ ಬದುಕಿಗೆ ಮಹಾನುಭಾವರ ಚರಿತ್ರೆಯನ್ನು ಹೇಳುವುದರ ಮೂಲಕ ಮಾರ್ಗದರ್ಶನ ಗೈದರು. ಅಂತೆಯೇ ಬದುಕಿನಿಂದ ದೂರವಾಗಿ ಶ್ರೀಸಾಮಾನ್ಯರಿಗೆ ನಿಲುಕದ ಸಾಹಿತ್ಯವನ್ನು ಬದಿಗಿರಿಸಿ ಬದುಕಿಗೆ ಹತ್ತಿರವಾದ ಸಾಹಿತ್ಯ ನಿರ್ಮಾಣದಲ್ಲಿ ತೊಡಗಿದರು. ವಸ್ತು–ವಿಷಯದ ದೃಷ್ಟಿಯಿಂದ ಸಮಾಜದಲ್ಲಿ ತುಳಿತಕ್ಕೊಳ ಗಾದವರ ಬಗ್ಗೆ, ಅಂತ್ಯಜರ ಬಗ್ಗೆ, ಕೃತಿ ರಚಿಸುವುದರ ಮೂಲಕ ಅಲೋಕ ಚರಿತ್ರೆಯಿಂದ ಲೋಕ ಚರಿತ್ರೆಯ ಕಡೆಗೆ ದಿಟ್ಟ ಹೆಜ್ಜೆ

ಹಾಕಿದರು. ಇದಕ್ಕೆ ಹರಿಹರನ ರಗಳೆಗಳೇ ಸಾಕ್ಷಿ. ಹರಿಹರ ಶಿವಕವಿ, ಶಿವಭಕ್ತ ಕವಿ, ಶಿವನ ಅಂತೆಯೇ "ಮನುಜರ ಮೇಲೆ ಸಾವುವುವರ ಮೇಲೆ ಕಾವ್ಯ ಬರೆಯಬೇಡ, ಬರೆದು ಕೆಡಬೇಡ, ಬರೆಯುವುದಾದರೆ ಶಿವನ ಬಗ್ಗೆ, ಶಿವಶರಣರ ಬಗ್ಗೆ ಕಾವ್ಯ ಬರೆಯೆಂದು"[೧] ಹೇಳಿ ಶಿವಶರಣರ ದಿವ್ಯ ಚರಿತ್ರೆಯನ್ನು ಬರೆದು ಶಿರಪಾರಮ್ಯವನ್ನು ಕೊಂಡಾಡಿ ಭಕ್ತಿ ಪ್ರಚಾರ ಮಾಡುವ ಉದ್ದೇಶವನ್ನು ಸ್ಪಷ್ಟಪಡಿಸಿದ್ದಾನೆ. ಅದಕ್ಕೂ ಮುಂದೆ ಹೋಗಿ "ಬಿತ್ತಿ ಬೆಳೆವೆಂ ಶಿವನ ಸದ್ಭಕ್ತಿ ಸಸಿಗಳಂ ಕಿತ್ತು ಕಳೆವೆಂ ಮೊಳೆವ ಪಾಪಾದಿ ಕಳೆಗಳಂ"[೨] –ಎನ್ನುವ ಹರಿಹರನ ಶಿವನ ಸದ್ಭಕ್ತಿಯ ಸಸಿಗಳಾದ ಶಿವಶರಣ–ಶಿವಶರಣೆಯರ ಚರಿತ್ರೆ ಬರೆಯಲು ನಾಂದಿಹಾಡಿ ಭಕ್ತಿಯ ಮಹಾಪೂರವನ್ನೇ ಹರಿಸಿದ್ದಾನೆ. ಮಹಾದೇವಿಯಕ್ಕನ ಪುರಾಣ ಬರೆದ ಚೆನ್ನಬಸವಾಂಕನೂ ಇದಕ್ಕೆ ಹೊರತಾಗಿಲ್ಲ.

ನೂರೊಂದು ಮಂದಿ ವಿರಕ್ತರಲ್ಲಿ ಚಾಮರಸನೂ ಒಬ್ಬ. ಹೀಗಾಗಿ ನಿರ್ಮಮತೆಯ ಗುಣವನ್ನು, ವೈರಾಗ್ಯಭಾವದ ಸಂಪತ್ತನ್ನು ಈ ದಾರ್ಶನಿಕ ಕವಿಯಲ್ಲಿ ಕಾಣಬಹುದು. ಜಗತ್ತಿನ ವಿಚಾರ ಕ್ರಾಂತಿಯ ಮಹಾಪೂರಕ್ಕೆ ಜ್ಞಾನ–ವೈರಾಗ್ಯಗಳ ನಿಯಂತ್ರಣವನ್ನು ನಿರ್ಮಿಸುವ, ಮಾಯಾ ನಿರಸನ ಮಾಡಿ ಧರ್ಮಬೋಧನೆ ಮಾಡುವ ಸಲುವಾಗಿ ಸಾತ್ವಿಕ ರೂಪದ ಪ್ರಭುಲಿಂಗ ಲೀಲೆಯಂತಹ ಕಾವ್ಯವನ್ನು ರಚಿಸಿದನು. ಈ ಕಥೆ ಅವನ ದೃಷ್ಟಿಯಲ್ಲಿ;

ಸತ್ತವರ ಕಥೆಯಲ್ಲ ಜನನದ
ಕುತ್ತದಲಿ ಕುದಿಕುದಿದು ಕರ್ಮದ
ಕತ್ತಲೆಗೆ ಸಿಲುಕುವವರ ಸೀಮೆಯ ಹೊಲಬು ತಾನಲ್ಲ.
ಹೊತ್ತು ಹೋಗದ ಪುಂಡರಾಲಿಪ
ಮತ್ತ ಮತಿಗಳ ಗೋಷ್ಠಿಯಲ್ಲಿದು
ಸತ್ಯ ಶರಣರು ತಿಳಿವುದೀ ಪ್ರಭುಲಿಂಗಲೀಲೆಯನು"[೩]

ಎಂದು ಸಾರುವಲ್ಲಿ ಲಿಂಗಾಂಗ ಸಾಮರಸ್ಯ ಬೇಡುವ, ಸತಿ–ಪತಿ ಭಾವದ ಸದ್ಭಕ್ತರು ಜಗದ ಜಂಜಾಟವನ್ನು ಹರಿದೊಗೆದ ಜಂಗಮರು ನಿತ್ಯ ಸತ್ಯಾನಂದರು ಕೇಳಬೇಕಾದ ಈ ಕಥೆ ಪುಂಡರ ಮಂದಮತಿಗಳು ಹರಟೆ ಹೊಡೆಯುವ ಗೋಷ್ಠಿಯಿದಲ್ಲ. ಕಬ್ಬಿನ ತೋಟದಲ್ಲಿ ಮೇಲೆ ಮೇಲೆಯೇ ಗರಿಯನ್ನು ತಿನ್ನುವ ಆಡುಗಳಾಗದೆ ಕಬ್ಬಿನ ರಸವನ್ನು ಸವಿಯುವ ಆನೆಗಳಾಗಿ ಕಾವ್ಯದ ಆಧ್ಯಾತ್ಮ ಜ್ಞಾನ ಪಡೆಯುವ ಸತ್ಯ ಶರಣರು ಕೇಳಬೇಕು ಎಂದು ಸಾರಿ ಜ್ಞಾನಸಾರವನ್ನು ಬೆಳಗುತ್ತಾನೆ. ಆಧ್ಯಾತ್ಮ ಜೀವನದ ಕಥೆಗೆ ನಾಂದಿ ಹಾಡುತ್ತಾನೆ. ಉಳಿದ ಕವಿಗಳೂ ಸಹ ಇಂತಹದ್ದೇ ಹಲವು ಕೆಲವು ಧೋರಣೆಗಳನ್ನು ಇಟ್ಟುಕೊಂಡೇ ಕಾವ್ಯ ಬರೆದರು. ಇವರು ಕಂಡ ದೃಷ್ಟಿಯಂತೆ ಅಕ್ಕನ ಜೀವನ ಚರಿತ್ರೆಯ ಸೃಷ್ಟಿಯಾಗಿದೆ.

ಕವಿಗಳು ಕಂಡ ಅಕ್ಕನ ಐತಿಹಾಸಿಕ ಚರಿತ್ರೆ

ನಡೆದ ಸಂಗತಿಗಳನ್ನು ಪ್ರಾಮಾಣಿಕವಾಗಿ ರಚಿಸುವುದರಿಂದ ಸತ್ಯ ಸಂಗತಿಯ ದರ್ಶನವಾಗುತ್ತದೆ. ಇದರ ಕೊರತೆ ನಮ್ಮ ಪ್ರಾಚೀನರಲ್ಲಿದೆ. ಇತಿಹಾಸ ಬರೆಯುವ ಪ್ರವೃತ್ತಿ ಅಷ್ಟಕ್ಕಷ್ಟೆ.

---

೧. ಪಂಪ ಶತಕ, ಪು. ೮೭

೨. ಇಳಿಯಾಡ ಗುಡಿಮಾರನ ರಗಳೆ, ಪು. ೫೪, ಚರಣ ೨೦

೩. ಪ್ರಭುಲಿಂಗ ಲೀಲೆ, ಗತಿ ೧, ಪ. ೧೩, ಸಂ. ಡಾ. ಎಂ.ಎಸ್. ಸುಂಕಾಪುರ

ಪರಶಿವನ ಭಕ್ತನಾದ ಹರಿಹರ, ವಿವರಿಸುವುದೀ ಲೀಲೆಯನು ಹೇಳುವನು ದಿಟ ನಾನಲ್ಲ ಮಿಗೆ ಕೇಳುವವರು ಮಾನವರಲ್ಲ, ಎಂದ ಚಾಮರಸ ವೀರನಾರಾಯಣನೆ ಕವಿ ಲಿಪಿಕಾರ ಮಾತ್ರ ನಾನು ಎಂದ ಕುಮಾರವ್ಯಾಸರಂಥ ಕವಿಗಳು ಚರಿತ್ರೆಯನ್ನೇ ಹೇಳಲಿಲ್ಲ. ಆದರೂ ಸಹ "ಬಸವರಾಜ ದೇವರ ರಗಳೆಯನ್ನು ಹರಿಹರ, ಹರಿಹರನ ಮಹತ್ವವನ್ನು ರಾಘವಾಂಕ, ರಾಘವಾಂಕನ ಚಾರಿತ್ರ್ಯವನ್ನು ಸಿದ್ಧನಂಜೇಶ – ಮೊದಲಾದವರು ಬರೆಯುವುದರ ಮೂಲಕ ವೀರಶೈವ ಕವಿಗಳು ಚಾರಿತ್ರಿಕ ಸಾಹಿತ್ಯ ನಿರ್ಮಾಣದ ಹೊಸ ಹೆಜ್ಜೆ ತುಳಿದರೂ ಅಲ್ಲಿ ಅಲ್ಲಿ ಅರ್ಧ ಹಾಲು, ಅರ್ಧ ನೀರು ಸಾಲುದುದಕ್ಕೆ ಆ ಮತಮುಗ್ಧರು ಸುಳ್ಳು ಕಥೆಗಳ ಮುಳ್ಳು ಮರವನ್ನೇ ಬಿತ್ತಿದರು. ಹೀಗಾಗಿ ಕನ್ನಡಿಗರ ಸತ್ಯಕಥೆ ಕಟ್ಟು ಕಥೆಯಲ್ಲಿ ಕರಗುತ್ತ ಬಂತು"[೪] ಮಹಾದೇವಿಯಕ್ಕನಿಗೆ ಸಂಬಂಧಿಸಿ ಪ್ರಾಚೀನ ಕವಿಗಳು ಕಾವ್ಯ ರಚಿಸಿದ್ದಾರೆ. ಅವುಗಳಿಂದ ಅಕ್ಕನ ಜೀವನದ ಐತಿಹಾಸಿಕ ಚರತ್ರೆಯನ್ನು ಸ್ಥೂಲವಾಗಿ ಹೀಗೆ ನೋಡಬಹುದು.

ಕವಿಗಳು ಕಂಡ ಅಕ್ಕನ ಜನನ

ಅಕ್ಕಮಹಾದೇವಿಯ ಚರಿತ್ರೆಯನ್ನು ಮೊದಲು ಬರೆದ ಕವಿ ಹರಿಹರ. ತನ್ನ ಮಹಾದೇವಿಯಕ್ಕನ ರಗಳೆಯಲ್ಲಿ 'ಸಕಲ ದೇವತೆಗಳಿಂದ ಶೋಭಿಸುತ್ತಿರುವ ಕೈಲಾಸದಲ್ಲಿ ಶಿವನು ಗುಪ್ತ ಗಣನಾಥನನ್ನು; ಕರೆದು 'ಪಾರ್ವತಿ ದೇವಿಯ ಸಮಯವನು ನೋಡಿ ಬಾರಲೆ ಮಗನೆ' ಎಂದುದಕ್ಕೆ ಗುಪ್ತ ಗಣನಾಥ ಪಾರ್ವತೀದೇವಿಯರಲ್ಲಿಗೆ ಬಂದು 'ತಾಯೆ ಜಗನ್ಮಾತೆ ಶಂಕರಂ ಕಳುಹಿದಂ' ಎಂದು ನಮಸ್ಕರಿಸುವಾಗ ಅವನ ಕಾಲು ಹಿಂದೆ ಕುಳಿತ ಭಕ್ತಗೆ ತಾಕುತ್ತದೆ. ಅವಳೇ "...ದೇವಿಯರ ಪೆಸರಪ್ಪ ಮಹಾದೇವಿಯೆಂಬ ರುದ್ರಕನ್ನಿಕೆ ಯನಾತ ಕಾಲು ಸೋಂಕೆ ಪೊರವೇಷಮಮಂ ಕಾಣದೆ ಗುಪ್ತ ಮಹೇಶ್ವರನೆಂದು ಅರಿಯದೆ ಎಲೆಯಲೆ ಶಿವಭಕ್ತಿಹೀನ ಎಲೆಲೇ ಭವಿಯೇ ನೋಡಿ ಪೊಡಮಡೆಂದು ನಿರೋಧದಿಂ ನುಡಿಯಲ್... ಗುಪ್ತ ಗಣೇಶ್ವರನ ವಿರೋಧದಿಂ ನಿನಗೊಂದು ಮರ್ತ್ಯ ಜನ್ಮವಾದುದು ಆತನ ಭವಿಯೆಂದುದರಿಂ ಭಕ್ತರ ಗರ್ಭದಲಿ ಹುಟ್ಟಿ ಭವಿಗೆ ಹೆಂಡತಿಯಾಗಿರ್ದು, ಶಿವಭಕ್ತರ್ಗೆ"[೫] ಬೆಸಕೈದು ಬಳಿಕ ಶ್ರೀ ಪರ್ವತ ದ್ವಾರದಿಂದಿಲ್ಲಿಗೆ ಬರ್ಪುದೆಂದು ದೇವಿಯರ್ ಕಳುಪೆ ಎಂದು ತಿಳಿಸಿ ಪಾರ್ವತಿಯ ಶಾಪದಿಂದ ಅಕ್ಕಮಹಾದೇವಿ ಭೂಲೋಕದಲ್ಲಿ ಉಡುತಡಿಯ ಶಿವಭಕ್ತ– ಶಿವಭಕ್ತೆ ಎಂಬ ದಂಪತಿಗಳಿಗೆ ಜನಿಸಿದಳೆಂದು ಹೇಳುತ್ತಾನೆ.

ಚಾಮರಸ ಕವಿ ಪ್ರಭುಲಿಂಗ ಲೀಲೆಯಲ್ಲಿ ಅಕ್ಕನ ಜನನವನ್ನು ಮಾಯೆಯ ಅವತಾರದಲ್ಲಿ ಕಂಡಿದ್ದಾನೆ. ಒಂದು ದಿನ 'ಪಾರ್ವತಿ ಒಡ್ಡೋಲಗದಲ್ಲಿ ಶಿವನಿಗೆ ಇಲ್ಲಿ ಕುಳಿತಿರುವಾಗ ಪ್ರಮಥ ಗಣರು ನಿತ್ಯ ಮುಕ್ತರೇ ? ಎಂದು ಕೇಳಿದಳು. ಭವಕೆ ಬಾರದೆ ಅವರಿಗೆ ಮುಕ್ತಿಯಿಲ್ಲ ಎಂದು ಶಿವ ಹೇಳಿದ. ಭೂಲೋಕದಲ್ಲಿ ಮೋಕ್ಷ ಪಥವ ತೋರುವವರಾರು ಎಂದು ಪಾರ್ವತಿ ಕೇಳಿದಾಗ ಅಲ್ಲಮ ಎಂಬುವನಿಂದ ಸಕಲರಿಗೂ ಮೋಕ್ಷ ಸಿಗುತ್ತದೆಂಬ ಶಿವನ ಉತ್ತರ, ಆಗ ಪಾರ್ವತಿ ಅವನನ್ನು ನಾ ಬಲ್ಲೆ ಅವನಿಂದ ಮೋಕ್ಷ ಸಾಧ್ಯವಿಲ್ಲ, ನನ್ನ ಮಾಯೆಗೆ ಅವನು ಮೀರಿದವನಲ್ಲ" ಎಂದು ಹೇಳಿ,

---

೪. ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ : ಡಾ. ಎಂ. ಎಂ. ಕಲಬುರ್ಗಿ, ಪು. ೩

೫. ಉಡುತಡಿಯ ಮಹಾದೇವಿಯಕ್ಕನ ರಗಳೆ – ಕಥಾಗರ್ಭ ಸ್ಥಲ : ೧, ಪು.೧

ಬಳಿಕಲಂಬಿಕೆ ತನ್ನ ತಾಮಸ
ಕಳೆಯ ಮೂರುತಿಯಾದ ಮಾಯೆಯ
ನಿಳೆಯೊಳುದಯಿಸಿಯಲ್ಲಮನ ನೀನಜೆದು ಬಾರೆನಲು[೬]

ಮಾಯೆ ಪಾರ್ವತಿಯ ತಾಮಸ ಕಳೆಯ ಪ್ರತಿನಿಧಿಯಾಗಿ ಜನಿಸಿ, ಅಲ್ಲಮನನ್ನು ಗೆಲ್ಲಲಾರದೆ ಸೋಲನ್ನನುಭವಿಸಿ ಪಾರ್ವತಿಯಲ್ಲಿಗೆ ಹೋದಾಗ ಪಾರ್ವತಿ ಚಿಂತೆಗೊಳಗಾದಳು. ಆಗ ಶಿವನು ತನ್ನ ತಾಮಸ ಕಳೆಯನ್ನು ಕಳೆದು ಸಾತ್ವಿಕಾಂಶಗಳನ್ನು ಭೂಲೋಕಕ್ಕೆ ಕಳಿಸು ಅಲ್ಲಿ ಅಲ್ಲಮನ ಅನುಗ್ರಹ ಉಂಟಾಗಿ ಶಿವತತ್ವದ ಮಹತ್ವ ತಿಳಿಯಲಿ ಎಂಬುದಕ್ಕೆ

ಇಳೆಯಲುಡುತಡಿಯೆಂಬ ಪಟ್ಟಣ
ದೊಳಗೆ ವೀರಶಿವಾಗಮಿಕ ನಿ
ರ್ಮಳನ ವಲ್ಲಭೆಯೆನಿಪ ಸುಮತಿಯ ಗರ್ಭಶುಕ್ತಿಯಲಿ
ಚೆಲುವೆಯಾದ ಕುಮಾರಿಯೆಂಬ
ಗ್ಗಳದ ಮುತ್ತುದಯಿಸಿತು ಧರಣೀ
ತಳದೊಳಗೆ ಪಾರ್ವತಿಯ ಸಾತ್ವಿಕ ಗುಣವೇ ರೂಪಾಗಿ[೭]

ಅಕ್ಕನು ಜನಿಸಿದಳು ಎಂದು ಹೇಳುವ ಚಾಮರಸ, ಪಾರ್ವತಿಯ ಸಾತ್ವಿಕ ಗುಣದಲ್ಲಿ ಅಕ್ಕನ ಜನನವನ್ನು ಕಂಡಿದ್ದಾನೆ.

ಚೆನ್ನಬಸವಾಂಕನು ಹರಿಹರ ಕವಿಯಿಂದ ಪ್ರಭಾವಿತನಾಗಿ ಮಹಾದೇವಿಯಕ್ಕನ ಪುರಾಣ ಬರೆದಿರುವೆನೆಂದು (ಸ್ಥಲ ೧ ಪದ್ಯ ೧೯) ತಿಳಿಸಿ ಅಕ್ಕನ ಜನನವನ್ನು ಹರಿಹರನಿಗಿಂತ ಭಿನ್ನವಾಗಿ ತಿಳಿಸುತ್ತಾನೆ. "ಶಿವನು ನಂದಿಯನ್ನು ಕರೆದು ನನ್ನ ಸಭೆಗೆ ಪ್ರೀತಿಯಿಂದ ಬಂದವರಾರು ಬರದೆ ನಿಂದವರಾರು ? ಎಂದು ಪ್ರಶ್ನಿಸುವನು. ನಂದಿಯು ಸಭೆಯನ್ನು ನಿಟ್ಟಿಸಿ ನೋಡಿ ಎಲ್ಲರೂ ಬಂದಿರುವರು. ಆದರೆ ಹಿಮಗಿರಿ ನಂದನೆ ಮಾತ್ರ ಇನ್ನೂ ಬಂದಿಲ್ಲವೆನ್ನುವನು (ಸ್ಥಲ ೧ ಪದ್ಯ ೪೨) ಗಿರಿಜೆಯನ್ನು ಸಭೆಗೆ ಕರೆಯಲು ಶಿವನು ನಂದಿಗೆ ಆಜ್ಞೆ ಮಾಡಿದಾಗ ನಂದಿ ಗುಪ್ತಗಣನಾಥನನ್ನು ಗಿರಿಜೆಯಲ್ಲಿಗೆ ಕಳುಹಿಸುತ್ತಾನೆ. ಪತಿ ಕಳಿಸಿದ ಕಾರಣವೇನೆಂದು ಗಿರಿಜೆ ಮನದಲ್ಲಿ ನೆನೆದಾಗ ಹಿಂದೆ ತನ್ನ ತಾಮಸ ಕಳೆಯಾದ ಮಾಯೆಯನ್ನು ಭೂಲೋಕಕ್ಕೆ ಕಳುಹಿಸಿ ನಿರ್ಮಾಯನಾದ ಅಲ್ಲಮನನ್ನು ಗೆಲ್ಲಲಾರದೆ ತಾನು ಖಿನ್ನಳಾದುದರಿಂದ ತನ್ನೊಡೆಯನ ಸಲಹೆಯಂತೆ ತನ್ನ ಸಾತ್ವಿಕಾಂಶದ ಮಹಾದೇವಿಯನ್ನು ಭೂಲೋಕಕ್ಕೆ ಕಳುಹಿಸಿ ಶಿವನನ್ನು ಓಲೈಸಿ ದುದನ್ನು ನೆನೆದಳು"[೮] ಎಂದು ಹೇಳುವಲ್ಲಿ ಹರಿಹರನಂತೆ ಮಹಾದೇವಿ ಪಾರ್ವತಿಯ ಶಾಪದಿಂದ ಜನಿಸದೆ ಚಾಮರಸನಂತೆ ಪಾರ್ವತಿಯ ಸಾತ್ವಿಕ ಕಳೆಯೇ ಅಕ್ಕನಾಗಿ ಜನಿಸಿದಳು ಎನ್ನುತ್ತಾನೆ.

ರಾಚಕವಿ ತನ್ನ ಮಹಾದೇವಿಯಕ್ಕನ ಸಾಂಗತ್ಯದಲ್ಲಿ ಅಕ್ಕನು ಸಾಮಾನ್ಯ ಸ್ತ್ರೀಯಲ್ಲ, ಪಾರ್ವತಿಯ ಆತ್ಮ ಎಂದರಿತು ಚಾಮರಸನ ಹೇಳಿಕೆಯಂತೆ ಪಾರ್ವತಿಯ ಸಾತ್ವಿಕ ಕಳೆಯೇ

---

೬. ಪ್ರಭುಲಿಂಗ ಲೀಲೆ, ಗತಿ ೨, ಪ. ೪೧, ಸಂ. ಡಾ. ಎಂ.ಎಸ್. ಸುಂಕಾಪುರ
೭. ಪ್ರಭುಲಿಂಗ ಲೀಲೆ, ಗತಿ ೨, ಪ. ೨, ಸಂ. ಡಾ. ಎಂ.ಎಸ್. ಸುಂಕಾಪುರ
೮. ಮಹಾದೇವಿಯಕ್ಕನ ಸಾಂಗತ್ಯ : ಸಂ. ಡಾ. ಎಸ್. ವಿದ್ಯಾಶಂಕರ, ಪು. xxviii

ಅಕ್ಕನಾಗಿ ಜನಿಸಿದಳೆಂದು ಹೇಳಿ ಭಕ್ತರು ಗಿರಿಯ ಮಲ್ಲಿಕಾರ್ಜುನನನ್ನು ಮಕ್ಕಳಿಗಾಗಿ ಬೇಡಿಕೊಂಡಾಗ ಪಾರ್ವತಿಯ ಮಂದಾರ ಮಾಲೆಯೇ ಅಕ್ಕನಾಗಿ ಜನಿಸಿದಳು ಎಂದು ತಿಳಿಸುತ್ತಾನೆ.

ಇನ್ನು ವಿರೂಪಾಕ್ಷ ಪಂಡಿತ (೧೫೮೪) ಚೆನ್ನಬಸವ ಪುರಾಣದಲ್ಲಿ 'ಮೃಡ ನರಸಿಂಯಶವೇ ಧರಣಿಯೊಳಗೊಪ್ಪುತಿರ್ಪುದುಡುತಡಿಯೆನಿಪ್ಪ ಪಟ್ಟಣದಲ್ಲಿ ಜನಿಸಲ್"[೯] ಎನ್ನುವಲ್ಲಿ ಪಾರ್ವತಿಯ ಅಂಶದಿಂದಲೇ ಅಕ್ಕನ ಜನನವನ್ನು ಕಂಡಿದ್ದಾನೆ.

ಶೂನ್ಯ ಸಂಪಾದನೆಕಾರರು 'ಪರಮೇಶ್ವರನ ನಿರೂಪದಿಂದ ಒಬ್ಬ ರುದ್ರಕನ್ನಿಕೆ ಮರ್ತ್ಯದಲ್ಲೊಗೆದು ಉಡುತಡಿಯ ಮಹಾದೇವಿಯಕ್ಕನೆಂಬ ನಾಮವಂ ಧರಿಸಿ"[೧೦] ಶಿವನ ನಿರೂಪದಿಂದ ಕೈಲಾಸದ ರುದ್ರಕನ್ಯೆ ಭೂಲೋಕದಲ್ಲಿ ಮಹಾದೇವಿಯಾಗಿ ಜನಿಸಿದಳು ಎಂದಿದ್ದಾರೆ.

ಏಳಂದೂರು ಹರೀಶ್ವರ (೧೫೫೦) ಕವಿ ಪ್ರಭುದೇವರ ಪುರಾಣದಲ್ಲಿ "ಮಾಯಾಂಗನೆಯ ಪ್ರತಿಜನನದಿಂದ ಇಂದು ಶೇಖರ ಭಕ್ತ ನಿರ್ಮಲಂ ಸುಮತಿಯರ ಸೌಂದರ್ಯ ಗರ್ಭಶಕ್ತಿಯಲ್ಲಿ ಸುಪ್ವಾಣಿ ಮತ್ತು ಉದಯಿಸಿದಂತೆ"[೧೧] ಅಕ್ಕ ಜನಿಸಿದಳೆಂದು ಚಾಮರಸನ ಜಾಡನ್ನೇ ಹಿಡಿದಿದ್ದಾಳೆ.

ಒಟ್ಟಿನಲ್ಲಿ ಹರಿಹರ ಹಾಗೂ ಶೂನ್ಯ ಸಂಪಾದನೆಕಾರರು ಪಾರ್ವತಿಯ ಶಾಪದಿಂದ ಅಕ್ಕನ ಜನನವನ್ನು ಕಂಡಿದ್ದರೆ ಚಾಮರಸ ಮೊದಲಾದ ಕವಿಗಳು ಪಾರ್ವತಿಯ ಸಾತ್ವಿಕಾಂಶದಿಂದಲೇ ಮಹಾದೇವಿಯ ಜನನವನ್ನು ಕಂಡಿದ್ದಾರೆ. ಗುಪ್ತ ಗಣನಾಥನಿಗೆ ಭವಿಯೆಂದು ನುಡಿದ ತಪ್ಪಿಗಾಗಿ ಭವಿಸಂಗವನ್ನೇ ಮಾಡಿಬರಬೇಕೆಂದು ಹರಿಹರ ಕವಿಯ ತೀರ್ಮಾನ ವಾದರೆ, ಚಾಮರಸ ಮೊದಲಾದ ಕವಿಗಳು ಪ್ರಭುವಿನ ಮಾರ್ಗದರ್ಶನದಿಂದ ಲಿಂಗಾಂಗ ಸಾಮರಸ್ಯ ಪಡೆದು ಶಿವಸಾಕ್ಷಾತ್ಕಾರ ಮಾಡಿಕೊಳ್ಳುವ ಸಲುವಾಗಿ ಪಾರ್ವತಿಯ ಸಾತ್ವಿಕಾಂಶದಿಂದ ಜನಿಸಿದಳೆಂಬ ತೀರ್ಮಾನಕ್ಕೆ ಬರುತ್ತಾರೆ. ಅಂದರೆ 'ಸುವಿಖ್ಯಾತ ಶರಣರನ್ನು ಕೀರ್ತಿಸುವಲ್ಲಿ ಅವರು ಕೈಲಾಸದಲ್ಲಿದ್ದ ಶಿವಗಣಗಳೆಂದೂ ಪ್ರಸಂಗವಶಾತ್ ಪ್ರಮಾದವನ್ನೆಸಗಿ ಶಿವನ ಆಜ್ಞೆಯನ್ನೋ, ಪಾರ್ವತಿಯ ಆಜ್ಞೆಯನ್ನೋ ಪಾಲಿಸಲೆಂದು ಭೂಲೋಕಕ್ಕೆ ಬಂದರೆಂದು" ನಿರೂಪಿಸುವುದು ಹರಿಹರನ ಗುಣವಾದರೆ, ಉಳಿದ ಕವಿಗಳು ಈ ಗುಣಕ್ಕೆ ಭಿನ್ನರಾಗಿದ್ದಾರೆ.

ಕವಿಗಳು ಕಂಡ ಅಕ್ಕನ ಮದುವೆ

ಅಕ್ಕನ ಜನನದ ಬಗ್ಗೆ ಭಿನ್ನಾಭಿಪ್ರಾಯಗಳಿದ್ದಂತೆ ಮದುವೆಯ ವಿಷಯದಲ್ಲಿಯೂ ನಮ್ಮ ಪ್ರಾಚೀನ ಕವಿಗಳಲ್ಲಿ ಭಿನ್ನಾಭಿಪ್ರಾಯಗಳಿವೆ. ಅಕ್ಕನಿಗೆ ಕೌಶಿಕನೊಡನೆ ಮದುವೆ ಯಾಗಿತ್ತೆಂದು ಕೆಲವರು, ಆಗಿಲ್ಲವೆಂದು ಕೆಲವರು ಹೇಳುತ್ತಾರೆ. ಲಗ್ನವಾಗಿತ್ತೆಂದು ಹೇಳುವ ಪ್ರಾಚೀನ ಕವಿಗಳೆಂದರೆ ಹರಿಹರ, ಚೆನ್ನಬಸವಾಂಕ, ಕೆಂಚವೀರಣ್ಣೊಡೆಯ. ಮದುವೆಯಾಗಿಲ್ಲವೆಂದು ಹೇಳುವವರೆಂದರೆ ಚಾಮರಸ, ವಿರೂಪಾಕ್ಷ ಪಂಡಿತ, ರಾಚಕವಿ, ಏಳಂದೂರು ಹರೀಶ್ವರ, ಶೂನ್ಯ ಸಂಪಾದನಾಕಾರರಾದ ಗುಮ್ಮಳಾಪುರದ ಸಿದ್ಧಲಿಂಗ (೧೫೫೦), ಶಿವಗಣ ಪ್ರಸಾದಿ ಮಹಾದೇವಯ್ಯ (೧೪೭೦) ಗೂಳೂರು ಸಿದ್ಧವೀರಣ್ಣೊಡೆಯರು.

---

೯. ಚನ್ನಬಸವ ಪುರಾಣ : ಸಂಧಿ ೫೭, ಪ. ೬೩

೧೦. ಶೂನ್ಯ ಸಂಪಾದನೆ : ಸಂ. ಸಂ.ಶಿ. ಭೂಸನೂರಮಠ, ಪು. ೩೨೧

೧೧. ಪ್ರಭುದೇವರ ಪುರಾಣ : ಸಂಧಿ ೮, ಪದ್ಯ ೧೯

ಹರಿಹರ ಅಕ್ಕನಿಗೆ ಮದುವೆಯಾಗಿತ್ತೆಂದು ತಿಳಿಸುತ್ತಾ 'ವೈಹಾಳಿಯಿಂದ ಬರುತ್ತಿದ್ದ ಕೌಶಿಕ ಅಕ್ಕನನ್ನು ಕಂಡು ಮೋಹಿತನಾಗಿ ಮಹಾದೇವಿಯನ್ನು ಮದುವೆಯಾಗುವೆನೆಂದು ಶಿವಭಕ್ತ ದಂಪತಿಗಳಿಗೆ ಹೇಳಿ ಕಳುಹಿಸಿವನು.

ಧರ್ಮಸಂಕಟದಲ್ಲಿ ಸಿಲುಕಿ ಶಿವಭಕ್ತರು ಮಗಳನ್ನು ಮದುವೆಗೆ ಒಪ್ಪಿಸುತ್ತಾರೆ.

ಅರಸ ಕೌಶಿಕನೊಡನೆ ಸಮಸುಖದೊಳಿರು ಮಗಳೆ

ಹಿರಿದಪ್ಪ ಸಂಪದವ ನಿನಗೀವನಲೆ ಮಗಳೆ [೧೨]

ಎನ್ನುವ ತಂದೆ ತಾಯಿಗಳು ಲೌಕಿಕ ವ್ಯವಹಾರ ವ್ಯಕ್ತಪಡಿಸಿದರೆ,

ಅನೇಕ ಭವಿಯೇಕೆ ಭಕ್ತರೀ ಮಾತೇಕೆ

ಏನೆಂದೊಡಂ ಭವಿಯನೊಲ್ಲೆನೀ ಮಾತೇಕೆ[೧೩]

ಎನ್ನುವ ಮಹಾದೇವಿ ಪಾರಮಾರ್ಥಿಕ ವ್ಯವಹಾರ ವ್ಯಕ್ತಪಡಿಸುತ್ತಾಳೆ. ಕೊನೆಗೆ ತಂದೆ ತಾಯಿ ಗಳಿಗೆ ಅರಸ ಬೆದರಿಕೆ ಹಾಕಿದಾಗ "ಭೂಲೋಕದಲ್ಲಿ ಬಾಳಿದ ಪುರಾತನ ಸ್ತ್ರೀಯರನ್ನು ಉದಾಹರಿಸಿ, ಲೌಕಿಕದಿ ಕೌಶಿಕನ ಸಂಗಮಂ ಮಾಡವ್ವ" ಎನ್ನುತ್ತಾರೆ. ನಿರುಪಾಯಳಾದ ಅಕ್ಕ,

ಎನ್ನಿಚ್ಚೆಯೊಳು ಶಿವನ ಪೂಜೆಯೊಳು ನಲಿದಿಪ್ಪೆ

ಎನ್ನಿಚ್ಚೆಯೊಳು ಮಹೇಸ್ವರರ ಗೋಷ್ಠಿಯೊಳಿಪ್ಪೆ

ಎನ್ನಿಚ್ಚೆಯೊಳು ಗುರುವಿನಂಘ್ರಿ ವೇವೆಯೊಳಿಪ್ಪೆ[೧೪]

ಎಂದು ಮೂರು ಕರಾರಿನೊಂದಿಗೆ ಮದುವೆಗೆ ಒಪ್ಪಿಗೆ ಸೂಚಿಸಿ, ಈ ಕರಾರನ್ನು ಮೀರಿದರೆ ನಿನ್ನನ್ನು ಬಿಟ್ಟು ಹೋಗುವೆನೆಂದು ಅಕ್ಕ ತಿಳಿಸುತ್ತಾಳೆ. ವಿಷಯ ಸುಖ ಸಂಪತ್ ಸಂಯೋಗ ಸನ್ನಿಧಿಯಲ್ಲಿ ದಾಂಪತ್ಯ ಜೀವನ ನಡೆಸುತ್ತಾಳೆ.

ದೇವಿ ಸುಖನಿದ್ದೆಯಲ್ಲಿದ್ದಾಗ ಬಂದ ಮಹೇಶ್ವರನಿಗೆ ಸಮಯವಿಲ್ಲವೆಂದು ನಿಂದನೆ ಮಾಡಿ ಕಳಿಸುತ್ತಾನೆ ಕೌಶಿಕ. ಅವನು ಮಾಡಿದ ಮೊದಲನೆಯ ತಪ್ಪು. ಶಿವಲಿಂಗ ಪೂಜೆ ಯಲ್ಲಿದ್ದಾಗ ಕಾಮಾತುರದಿಂದ ಕೌಶಿಕ ಮಹಾದೇವಿಯನ್ನು ಅಪ್ಪಿಕೊಳ್ಳಲು ಹೋದುದು ಕೌಶಿಕನ ಎರಡನೇ ತಪ್ಪು. ಮಧ್ಯರಾತ್ರಿಯಲ್ಲಿ ಬಂದ ಗುರುವನ್ನು ಎದಿರುಗೊಳ್ಳಲು ದಿಗಂಬರೆಯಾಗಿ ಅಕ್ಕ ಬಂದಾಗ "ದುಕೂಲಮಂ ಧರಿಸಿ ಬಾರಮ್ಮ ಎಂಬ ಗುರುವಾಜ್ಞೆ ಕೇಳಿ ಮಂಚದ ಮೇಲಿನ ಸೀರೆ ತೆಗೆದುಕೊಳ್ಳಲು ಮಹಾದೇವಿ ಹೋದಾಗ "ತೆಗೆ ತೆಗೆ ನಿನಗೇನತ್ಯಂತ ಭಕ್ತಿಗೆ ಮೀಜಿದ ವಿರಕ್ತೆಗೆ ಸೀಜೆಯೇತಕೆ ? ಎಂದು ಅಕ್ಕನ ಕೈಯಿಂದ ಸೀರೆಯನ್ನು ಕಸಿದು ಕೊಂಡದ್ದು ಕೌಶಿಕನ ಮೂರನೆಯ ತಪ್ಪು. "ಆಹಾ ಮೂಱು ತಪ್ಪು ತೀರಿದವು. ಎನ್ನಿಚ್ಚೆ ಈಡೇರಿತು ವಿರಕ್ತಿ ಕೈಗೂಡಿತು, ಭಕ್ತಿ ಬೆಳೆಯಿತು ಎಂದು ಕೇಶಾಂಬರಿಯಾಗಿ ಅಕ್ಕ ಶ್ರೀಗಿರಿಯತ್ತ ನಡೆದಳು. ಈ ಅಭಿಪ್ರಾಯವನ್ನೇ ಚೆನ್ನಬಸವಾಂಕನು ಮಹಾದೇವಿಯಕ್ಕನ ಪುರಾಣದಲ್ಲಿ ತಿಳಿಸುತ್ತಾನಾದರೂ "ಶಿವಭಕ್ತರಲ್ಲದವರೊಂದಿಗೆ ನಂಟುತನ ಮಾಡುವುದಿಲ್ಲ. ಶಿವನಲ್ಲಿ ಭಕ್ತಿ ಒಲವಿಲ್ಲದವರು ನರಕಿಗಳೆಂದು ಆಗಮ ತಿಳಿಸುತ್ತದೆ. ಆದ್ದರಿಂದ ನಾವು ಮಗಳನ್ನು ಕೊಡುವುದಿಲ್ಲವೆಂದು

---

೧೨. ಮಹಾದೇವಿಯಕ್ಕನ ರಗಳೆ : ಸ್ಥಲ ೩, ಚರಣ ೧೧೦

೧೩. ಮಹಾದೇವಿಯಕ್ಕನ ರಗಳೆ : ಸ್ಥಲ ೩, ಚರಣ ೧೧೦

೧೪. ಮಹಾದೇವಿಯಕ್ಕನ ರಗಳೆ : ಸ್ಥಲ ೩, ಚರಣ ೧೧೦

ಅಕ್ಕನ ಪಾರಮಾರ್ಥಿಕ ವಿಚಾರವನ್ನು ತಂದೆ ತಾಯಿಗಳಿಂದಲೇ ವ್ಯಕ್ತ ಪಡಿಸುತ್ತಾನೆ. ಕೆಂಚವೀರಣ್ಣೊಡೆಯರು ಶೂನ್ಯ ಸಂಪಾದನೆಯಲ್ಲಿ "ದೇವಿಯರಿತ್ತ ಅವಧಿ ಬರೆ ಕೌಶಿಕನೆಂಬ ರಾಯಂಗೆ ವಧುವಾಗಿ, ನೀರು ತಾವರೆಯಂತೆ, ಕಣ್ಣು ಕಾಡಿಗೆಯಂತೆ, ನೆಯ್ಯನಾಲಗೆಯಂತೆ ಗಾಳಿ ಧೂಳಿನಂತೆ ಆ ಸಂಸಾರದೊಳಗಿದ್ದು ಇಲ್ಲದೆ ತನುವ ಸಂಸಾರಕ್ಕೆ ಎರವಾಗಿ ಕೊಟ್ಟು ಮನಮೆಚ್ಚಿ ಲಿಂಗದಲಿದ್ದು ಗುರುಚರಲಿಂಗದಲಿ ಪರಮ ದಾಸೋಹದಲ್ಲಿ ಭಕ್ತಿ ಮಾಡುವಲ್ಲಿ ಆತ ಕೊಟ್ಟ ಭಾಷೆಗೆ... ಉತ್ತರಮಂ ಮಾಡಿ ಹೋಗುತ್ತಿರೆ ಸೀರೆಯಂ ಪಿಡಿದೆಳೆಯೆ"[೧೫] ಆಗ ಕೌಶಿಕನನ್ನು ಬಿಟ್ಟು ದಿಗಂಬರೆಯಾಗಿ ಹೋಗುತ್ತಾಳೆ ಎಂದಿದ್ದಾನೆ.

ಅಕ್ಕನಿಗೆ ಕೌಶಿಕನೊಡನೆ ಮದುವೆಯಾಗಿಲ್ಲವೆಂದು ಹೇಳುವ ಚಾಮರಸ ಕವಿಯು "ಕೌಶಿಕನು ಮದುವೆಯಾಗುವೆನೆಂದು ಹೇಳಿ ಕಳಿಸಿದಾಗ ಅಕ್ಕನ ತಂದೆ ತಾಯಿಗಳು "ಭವಿಯೊಡನೆ ಶರೀರ ಸಂಬಂಧ ಸಾಧ್ಯವಿಲ್ಲ. ಅವಳನ್ನೇ ವಿಚಾರಿಸಿ ಎಂದಾಗ ಕೌಶಿಕನೇ ಅಕ್ಕನಲ್ಲಿಗೆ ಬಂದು (ಇಲ್ಲಿ ರಾಜನಿಗಿಂತ ಶರಣೆ ಅಕ್ಕ ದೊಡ್ಡವಳಾಗಿ ಕಂಡಿದ್ದಾಳೆ ಚಾಮ ರಸನಿಗೆ) ವಿಚಾರಿಸುತ್ತಾನೆ. ಅರಮನೆಗೆ ಕರೆದೊಯ್ಯುತ್ತಾನೆ. "ಏನು ಮಾಡಬೇಕು ಹೇಳಲೇ ಮಾನಿನಿಯೇ" ಎಂದು ಕೇಳುತ್ತಾನೆ. "ನೀನು ಸಲೆ ಶಿವಭಕ್ತನಾದೊಡೆ ಕೂಡುವೆನು ನಿನ್ನ ನೀನು ಭವಿಯಾಗಿರ್ದಡೊಲ್ಲೆನು"[೧೬] ಎಂದಳು. ಅದಕ್ಕೆ ಕೌಶಿಕ ನಮಗೆ ಶಿವಭಕ್ತೆಯನು ಮಾಡುವ ಸಮಯವಳವಡದೆನಲು ಅದಕ್ಕೆ ಪ್ರತಿಯಾಗಿ "ನಮಗೆ ನಿಮ್ಮಯ ಸಂಗವಳ ವಡದು" ಎಂದು ತಿಳಿಸಿದ ಅಕ್ಕ ಉಟ್ಟ ಉಡಿಗೆ, ತೊಟ್ಟ ತೊಡಿಗೆಯನ್ನು ಅರಸನಿಗಿತ್ತು ಹೊರಟಳು. "ಮೀಸಲಿಳಿಯಿತು ಬಯಕೆ ಮನದಭಿಲಾಷೆ ಜಾರಿತು. ಕಾಮದಾತುರ ಒಸರಿ ವಿವೇಕ ವರ್ಧಿಸಿ ನಿರಾಸೆಯಿಂದ ಹೋಗಲು ಬಿಟ್ಟನು ಕೌಶಿಕರಾಜ; ಅಂದರೆ ಅಕ್ಕ ಮದುವೆ ಯಾಗದೆ ಅರಮನೆಯನ್ನು ಬಿಟ್ಟು ಪ್ರಭುವಿನ ಗುರುಮನೆಯನ್ನು ಸೇರಿದಳೆಂದು ಚಾಮರಸ ಕಂಡಿದ್ದಾನೆ. ಇದೇ ಅಭಿಪ್ರಾಯವನ್ನು ಎಳಂದೂರು ಹರೀಶ್ವರನ ಪ್ರಭುದೇವರ ಪುರಾಣದಲ್ಲಿ ಕಾಣಬಹುದು. ಸಾಂಗತ್ಯ ಬರೆದ ರಾಚಕವಿ ಈ ಅಭಿಪ್ರಾಯವನ್ನೇ ಎತ್ತಿಕೊಂಡಿದ್ದರೂ ಸಹ "ನಾವು ಪಂಚಮರು–ಅರಸ ಜೈನ" ಸಂಬಂಧ ಸಾಧ್ಯವಿಲ್ಲವೆಂಬ ಲೋಕರೂಢಿಯ ಕುಲ ಸಂಬಂಧವನ್ನು ಮುಂದೆ ಮಾಡುತ್ತಾನೆ. ಮಹಾದೇವಿ ಅರಸನಿಗೆ ಎಷ್ಟೇ ವಿಧದಲ್ಲಿ ತನ್ನ ಮನೋವಿಚಾರವನ್ನು ಹೇಳಿದರೂ ಕಾಮ ಪಿತ್ತ ನೆತ್ತಿಗೇರಿದ ಅರಸನಿಗೆ ಅಕ್ಕನ ತಾತ್ತ್ವಿಕ ವಿಚಾರ ಅರ್ಥವಾಗದೇ ಹೋಗುತ್ತದೆ. ದುಡುಕುತ್ತಾನೆ, "ಬಿಡೆನು ನಿನ್ನವನೆಂದು ಹಿಡಿದನು ಶರಗನು" ಇದರಿಂದ ಕುಪಿತಳಾದ ಅಕ್ಕ ದಿಗಂಬರೆಯಾಗಿ ಕಲ್ಯಾಣದ ಕಡೆಗೆ ನಡೆಯುತ್ತಾಳೆ.

ಶೂನ್ಯ ಸಂಪಾದನೆಕರರಾದ ಶಿವಗಣ ಪ್ರಸಾದಿ ಮಹಾದೇವಯ್ಯ, ಗುಮ್ಮಳಾಪುರದ ಸಿದ್ಧಲಿಂಗದೇವರು ಗೂಳೂರು ಸಿದ್ಧವೀರಣ್ಣೊಡೆಯರು ಅಕ್ಕನ ಮದುವೆಯ ಬಗ್ಗೆ ಅಷ್ಟಾಗಿ ಚರ್ಚಿಸದೆ, "ಪರಮಾತ್ಮನ ನಿರೂಪದಿಂದ ಒಬ್ಬ ರುದ್ರಕನ್ನಿಕೆ ಮರ್ತ್ಯದಲ್ಲಿ ಮಹಾದೇವಿಯೆಂಬ ಹೆಸರಿನಲ್ಲಿ ಹುಟ್ಟಿ ಲಿಂಗಾಧಾರಣವಾಗಲೊಲ್ಲೆನೆಂದ ಭವಿಯಂ ಮುಟ್ಟದೆ ಅಂಗದ ಸಂಗವಂ ತೊರೆದು ಲಿಂಗ ಸಂಗವನು ಬಯಸಿ... ಸರ್ವ ಇಂದ್ರಿಯಗಳನ್ನು ಅರಿವಿಗೆ ಆಹುತಿ ಮಾಡಿ

---

೧೫. ಪ್ರಬುದ್ಧ ಕರ್ನಾಟಕ : ಸಂ. ೨೨, ಸಂ. ೩, ಪು. ೨೦, ೧೯೪೨

೧೬. ಪ್ರಭುಲಿಂಗಲೀಲೆ : ಗತಿ ೧೦, ಪ . ೨೨, ಸಂ. ಡಾ. ಎಂ. ಎಸ್. ಸುಂಕಾಪುರ

ದಿಗಂಬರದ ಉಡಿಗೆ ತೊಟ್ಟು ಕೇಶಾಂಬರದ ಮುಸುಕಿಟ್ಟು... ಭವಸಾಗರ ದಾಟಿ ಚೆನ್ನಮಲ್ಲಿಕಾರ್ಜುನ ವಿಕಳಾವಸ್ಥೆಯೊಳು ತನ್ನ ಮರೆದು ವೈರಾಗ್ಯಮಂ ಬೀರುತ್ತಾ"[೧೭] ಕಲ್ಯಾಣದ ಕಡೆಗೆ ಸಾಗುತ್ತಾಳೆ ಎಂದಿದ್ದರೆ, ಚೆನ್ನಬಸವ ಪುರಾಣ ಬರೆದ ವಿರೂಪಾಕ್ಷ ಪಂಡಿತ "ಪೊಡವೀಶ ಕೌಶಿಕಂ ಪಿಡಿದೊಡೊಲ್ಲದೆ ದಿಗಂಬರೆಯಾಳಾಗಿ ಹೋದಳೆಂದು ಹೇಳಿ ಲಗ್ನವಾಗಿಲ್ಲವೆಂದು ತಿಳಿಸುತ್ತಾನೆ.

ಒಟ್ಟಿನಲ್ಲಿ ಅಕ್ಕನಿಗೆ ಮದುವೆಯಾಗಿದೆ ಎಂಬ ಅಭಿಪ್ರಾಯಕ್ಕೆ ಬಂದು ನಿಂತವರಲ್ಲಿ ಮೊದಲಿಗನೆಂದರೆ ಹರಿಹರ. ಈತ ಶರಣರ ವಿಚಾರವಾದ "ಶುಚಿಯಾದ ಇಹಲೋಕದ ಜೀವನವನ್ನು ಅನುಭವಿಸಿ ನಂತರ ಸಾತ್ವಿಕ ಭಕ್ತಿಯನು ಪ್ರಕಟಿಸುವುದರ ಮೂಲಕ ಪ್ರವೃತ್ತಿ ಮಾರ್ಗದಿಂದ ನಿವೃತ್ತಿ ಮಾರ್ಗದೆಡೆಗೆ ಅಕ್ಕನನ್ನು ಕರೆದುಕೊಂಡು ಹೋಗಿದ್ದಾನೆ. "ಲಗ್ನವಾದಾಗ ಹೆಣ್ಣು ಬಾಳುವುದು ಕಠಿಣ ಇದು ಜನವಾಣಿ. ಮದುವೆಯಾಗದೆ ಹಿಂದೂ ಧರ್ಮದ ಹೆಣ್ಣಿಗೆ ಮೋಕ್ಷವಿಲ್ಲ ಇದು ಧರ್ಮವಾಣಿ"[೧೮] ಹೀಗಾಗಿ ಅಕ್ಕನಿಗೆ ಮದುವೆ ಮಾಡುವುದರ ಮೂಲಕ ಜನವಾಣಿಯನ್ನು ಧರ್ಮವಾಣಿಯನ್ನು ನಿಜಮಾಡಿ ತೋರಿಸಿ ದಂತಿದೆ ಹರಿಹರನ ಕವಿವಾಣಿ. ಅಲ್ಲದೆ ಭವಿಗೆ ಹೆಂಡತಿಯಾಗಿ ಎಂಬ ಪಾರ್ವತಿಯ ಶಾಪವನ್ನು ಈಡೇರಿಸು ವುದಕ್ಕಾಗಿ ಅಕ್ಕನಿಗೆ ಕೌಶಿಕನೊಡನೆ ಮದುವೆ ಮಾಡಿದಂತಿದೆ ಹರಿಹರ. ಇನ್ನು ಮದುವೆ ಯಾಗಿಲ್ಲವೆಂದು ಹೇಳುವ ಚಾಮರಸ ಮೊದಲಾದ ಕವಿಗಳು ದಾರ್ಶನಿಕ ಕವಿಗಳು, ಅದರಲ್ಲೂ ಚಾಮರಸ ವಿರಕ್ತ ಕವಿ. ಮಾಯೆಯನ್ನು ಗೆದ್ದ ಅಲ್ಲಮನ ಲೀಲೆಯನ್ನು ಬರೆದ ಚಾಮರಸ ಅಕ್ಕನನ್ನು ಪುರುಷನೆಂಬ ಮಾಯೆಯನ್ನು ಗೆದ್ದ ವಿರಾಗಣಿಯನ್ನಾಗಿ ಕಂಡು ಅಸಾಮಾನ್ಯಳಾದ ಅಕ್ಕನು ಪಾರ್ವತಿಯ ಸಾತ್ವಿಕಾಂಶವಾದ್ದರಿಂದ ಅವಳ ಪತಿ ಮಲ್ಲಿಕಾರ್ಜುನನೇ ಹೊರತು ಕೌಶಿಕನಲ್ಲ ಎಂಬ ಉದ್ದೇಶದಿಂದ ಹೀಗೆ ಚಿತ್ರಿಸಿರಲೂಬಹುದು.

ಕವಿಗಳು ಕಂಡ ಪ್ರಭು-ಪತಿಯಲ್ಲಿ ಅಕ್ಕ

ಅರಮನೆಯಿಂದ ದಿಗಂಬರಳಾಗಿ ಕೇಶಾಂಬರಿಯಾಗಿ ಅಕ್ಕನನ್ನು ಕೆಲವು ಕವಿಗಳು ಕಲ್ಯಾಣದ ಮಹಾಮನೆಯ ಪ್ರಭುವನ್ನು ಕಾಣಲು ಹೋದಳೆಂದೂ, ಮತ್ತೆ ಕೆಲವರು ನೇರವಾಗಿ ಶ್ರೀಗಿರಿಯ ಪತಿ ಮನೆಗೆ ಹೋದಳೆಂದೂ ಹೇಳುತ್ತಾರೆ. ಹರಿಹರ ಕವಿ ನೇರವಾಗಿ ಅರಮನೆ ಯಿಂದ ಪುರದ ಪುಣ್ಯಂ ಸ್ತ್ರೀರೂಪಿಂದ ಹೋದಂತೆ ಶ್ರೀ ಪರ್ವತಾಭಿಮುಖಿಯಾದಳೆಂದು ತಿಳಿಸಿ "ಮನದಲ್ಲಿ ಮಹಾದೇವ, ಬನದೋಳ್ ಮಹಾದೇವ ಎಂದು ನೆನೆಯುತ್ತಾ ಹೊರಟ ಅಕ್ಕನನ್ನು ಕೌಶಿಕನು ಹಿಂಬಾಲಿಸಿ ಭಕ್ತನಾದೆ ಮಹಾದೇವಿ ಕರುಣಿಸೆಂದು ಬೇಡಿದರೂ ನಿನ್ನ ಪುಣ್ಯದ ಬೆಳಸು ನಿನಗಿಲ್ಲ ಕೌಶಿಕನೆ ಎನ್ನ ಭಾಗ್ಯದ ಫಲವ ಈಶ್ವರಂ ತಪ್ಪುವನೆ ಇನ್ನೇಕೆ ನಿನ್ನ ಸಂಗ ಬೇಡ ಬೇಡೆನಗೆ" ಎಂದು ಧಿಕ್ಕರಿಸಿ "ನಂದೀಶ್ವರನ ಬಾಗಿ ಲೊಳು ಇಳಿದು ಅರ್ಧನಾರೀಶ್ವರನಿಗೆ ಎರಗಿದಳು" ಗಿರಿಜೆ ಬಲ್ಲ ನಮ್ಮ ರುದ್ರ ಕನ್ನಿಕೆಯೀಕೆ ವರಗುಪ್ತ ಗಣನಾಥ

---

೧೭. ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯ ಸಂಪಾದನೆ : ಸಂ. ಸಂ.ಶಿ. ಭೂಸನೂರಮಠ, ಪು. ೨೨೧-೨೨

೧೮. ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮೆ : ಡಾ. ಎಂ. ಎಸ್. ಲಠ್ಠೆ. ಪು. ೭೬

ನಿಂದಿಳಿಗೆ ಪೋದಾಕೆ, ನಿನ್ನನುಜ್ಞೆಯಂ ಹೊತ್ತು ನಡೆದವರುಂಟೆ, ನಿನ್ನ ಶಾಪವನಿಳೆಯೊಳನು ಭವಿಸಿದವರುಂಟೆ ಪದವಿಯಂ ರಾಜ್ಯಮಂ ಬಿಸುಟು ಹೋದವರುಂಟೆ ಅದಿರದೇ ಶ್ರೀಶೈಲದೊಳು ಪೊಕ್ಕವರುಂಟೆ ಎಂದು ಶಿವ ಪಾರ್ವತಿಗೆ ಹೇಳಿ ಅಕ್ಕನಿಗೆ ಗಣ ಪದವಿ ನೀಡುತ್ತಾನೆಂದು ತಿಳಿಸುವ ಹರಿಹರ "ಕೊಲುವೆನೆಂಬ ಭಾಷೆ ಶಿವನದಾದರೆ ಗೆಲುವೆನೆಂಬ ಭಾಷೆ ಭಕ್ತನದಾಗಬೇಕು" ಎನ್ನುವ ಹಾಗೆ ಶಿವನ ಪರೀಕ್ಷೆಯಲ್ಲಿ ಗೆದ್ದ ಅಕ್ಕನನ್ನು ಚಿತ್ರಿಸಿದ್ದಾನೆ.

ಆದರೆ ಶಿವನ ಪರೀಕ್ಷೆಗಿಂತ ಶಿವಶರಣರ ಪರೀಕ್ಷೆಯಲ್ಲಿ ಜಯಿಸಬೇಕೆಂಬ ಹಾಗೂ "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ" ಎಂಬ ಶರಣರವಾಣಿಯನ್ನು ನಿಜಮಾಡಿ ತೋರಿಸುವ ಆಕಾಂಕ್ಷೆಯಿಂದ ಅಕ್ಕನನ್ನು ಕೆಲ ಕವಿಗಳು ಕಲ್ಯಾಣಕ್ಕೆ ಕರೆದೊಯ್ದಿದ್ದಾರೆ. ಅವರಲ್ಲಿ ಚಾಮರಸ, ಚೆನ್ನಬಸವಾಂಕ, ರಾಚಕವಿ, ಶೂನ್ಯ ಸಂಪಾದನಾಕಾರರು, ಎಳಂದೂರು ಹರೀಶ್ವರ ಮೊದಲಾದವರು. ಚಾಮರಸನಲ್ಲಿ "ಲಿಂಗವಿಡಿದು ವಿಭೂತಿ ಧರಿಸಿ ಮುಡಿಗೆಯ ಹೊದಿಕೆಯನ್ನುಟ್ಟು ಕಡು ವಿರಕ್ತಿಯ ವೇಶದಲ್ಲಿ ನಡೆದಳು. ಅಲ್ಲಮಪ್ರಭು ಗುರು ಗುಹೇಶ್ವರನನ್ನು ಅರಸುತ್ತಾ ಕಲ್ಯಾಣದ ಕಡೆಗೆ "ವೇದತತಿ ಕೈನೀಡಿದರೆ ಮೈನಿಲುಕದಾತನ ಅಲ್ಲಮನ ಕಂಡು ವಂದಿಸಿ ಭಕ್ತಿ ಬೇಟದ ವ್ಯಸನದಲ್ಲಿ ಮೈಮರೆತು ಲಜ್ಜೆಯ ಹೆಸರ ಹೆಮ್ಮೆಯನಳಿಸಿ ತನು ಮೋಹವನ್ನು ಹರಿದೊಗೆದು ದಿಗಂಬರೆಯಾಗಿ ಬಂದ ಅಕ್ಕನನ್ನು ಪ್ರಭುದೇವರ ಮೂಲಕ ಕವಿ ಚಾಮರಸನೇ ಕಂಡಿದ್ದಾನೆ. ನಾನಾ ರೀತಿಯ ಪರೀಕ್ಷೆ ನಡೆದು ವೀರವಿರಾಗಿಣಿಯಾದ ಅಕ್ಕನು ಶರಣರಿಂದ ಹೊಗಳಿಸಿಕೊಂಡು ಶ್ರೀಗಿರಿಗೆ ನಡೆಯುತ್ತಾಳೆ. ನಿತ್ಯ ಸುಖಿಯಾಗಿ ಅಚಲ ಪದವಿಯ ಪಡೆದಳಾ ಮಹಾದೇವಿ ಎಂದು ಹೇಳುವ ಚಾಮರಸ ವಿರಾಗಿಣಿ ಅಕ್ಕನ ವಿರಾಟ್ ಸ್ವರೂಪದ ದರ್ಶನವನ್ನೇ ಮಾಡಿದ್ದಾನೆ.

ಕವಿಗಳು ಕಂಡ ಕಿನ್ನರಯ್ಯನ ಪರೀಕ್ಷೆಯಲ್ಲಿ ಅಕ್ಕ

ಹರಿಹರ ಕವಿ ಕಿನ್ನರಯ್ಯನ ಬಗ್ಗೆ ಹೆಚ್ಚಾಗಿ ಹೇಳದೆ "ಬಂದ ಕಿನ್ನರ ಬೊಮ್ಮಿ ತಂದೆಯಂ ಕಾಣುತಂ ಅಂದಂದಿನುಚಿತಕೆ ಗೀತಮಂ ಪಾಡುತಂ"[೧೯] ಎಂದು ಮಟುಕುಗೊಳಿಸಿದರೆ ಶೂನ್ಯಸಂಪಾದನಾಕಾರರ ಪ್ರಕಾರ ಕಲ್ಯಾಣಕ್ಕೆ ಹೋಗುವ ಹಾದಿಯಲ್ಲಿ ಅಕ್ಕ ಕಿನ್ನರಯ್ಯಗಳ ಪರೀಕ್ಷೆಗೆ ಗುರಿಯಾಗುತ್ತಾಳೆ ಎಂದು ತಿಳಿಸುತ್ತಾರೆ. ಆ ಸನ್ನಿವೇಶ ಹೀಗಿದೆ : "ಕಲ್ಯಾಣಕ್ಕೆ ಸಕಲ ಲೋಕಗಳನ್ನು ಪಾವನ ಮಾಡುತ್ತ ಸಕಲ ಜನರನ್ನು ಕೃತಾರ್ಥರನ್ನಾಗಿ ಮಾಡುತ್ತಾ ಬರುತ್ತಾಳೆ. ಇದನ್ನರಿತ ಬಸವಣ್ಣ ಎನ್ನ ಹೆತ್ತ ತಾಯಿ ವಿರಕ್ತಿಯಿಂದ ದಿಗಂಬರೆಯಾಗಿ ಕಾಮಾರಿಯಾಗಿ ಬರುತ್ತಿದ್ದಾಳೆಂದು ಪ್ರಭುವಿಗೆ ತಿಳಿಸುತ್ತಾನೆ. "ಪ್ರಭುದೇವರು ನೆರೆದ ಪ್ರಮಥರಿಗೆ 'ಕಾಮ ಸಂಹಾರಿ' ಎಂಬುದನ್ನು ತೋರಿಸಲು ಕಿನ್ನರಯ್ಯನನ್ನು ಕಳಿಸುತ್ತಾರೆ. "ಕಾಯಕದಲಿ ಕಳವಳವಿದೆ. ಪ್ರಾಣದಲ್ಲಿ ಮಾಯೆಯಿದೆ, ಆದ್ದರಿಂದ ನೀನು ಸಂಸಾರಿಯೇ ಹೊರತು ಸಜ್ಜನೆಯಲ್ಲ. ನಿನ್ನ ಕೈ ಹಿಡಿವೆನೆಂದಾಗ ಅಕ್ಕ ಈ ರೀತಿ ಹೇಳುತ್ತಾಳೆ.

ಅಂಗದ ಭಂಗವ ಲಿಂಗ ಸುಖದಿಂದ ಗೆಲಿದೆ
ಮನದ ಭಂಗವ ಅರುಹಿನ ಮುಖದಿಂದ ಗೆಲಿದೆ
ಜೀವದ ಭಂಗವ ಶಿವಾನುಭವದಿಂದ ಗೆಲಿದೆ

---

೧೯. ಮಹಾದೇವಿಯಕ್ಕನ ರಗಳೆ : ಸ್ಥಲ ೭, ಚರಣ ೧೯೦

ನಿಂದಿಳಿಗೆ ಪೋದಾಕೆ, ನಿನ್ನನುಜ್ಞೆಯಂ ಹೊತ್ತು ನಡೆದವರುಂಟೆ, ನಿನ್ನ ಶಾಪವನಿಳೆಯೊಳನು ಭವಿಸಿದವರುಂಟೆ ಪದವಿಯಂ ರಾಜ್ಯಮಂ ಬಿಸುಟು ಹೋದವರುಂಟೆ ಅದಿರದೇ ಶ್ರೀಶೈಲದೊಳು ಪೊಕ್ಕವರುಂಟೆ ಎಂದು ಶಿವ ಪಾರ್ವತಿಗೆ ಹೇಳಿ ಅಕ್ಕನಿಗೆ ಗಣ ಪದವಿ ನೀಡುತ್ತಾನೆಂದು ತಿಳಿಸುವ ಹರಿಹರ "ಕೊಲುವೆನೆಂಬ ಭಾಷೆ ಶಿವನದಾದರೆ ಗೆಲುವೆನೆಂಬ ಭಾಷೆ ಭಕ್ತನದಾಗಬೇಕು" ಎನ್ನುವ ಹಾಗೆ ಶಿವನ ಪರೀಕ್ಷೆಯಲ್ಲಿ ಗೆದ್ದ ಅಕ್ಕನನ್ನು ಚಿತ್ರಿಸಿದ್ದಾನೆ.

ಆದರೆ ಶಿವನ ಪರೀಕ್ಷೆಗಿಂತ ಶಿವಶರಣರ ಪರೀಕ್ಷೆಯಲ್ಲಿ ಜಯಿಸಬೇಕೆಂಬ ಹಾಗೂ "ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ" ಎಂಬ ಶರಣರವಾಣಿಯನ್ನು ನಿಜಮಾಡಿ ತೋರಿಸುವ ಆಕಾಂಕ್ಷೆಯಿಂದ ಅಕ್ಕನನ್ನು ಕೆಲ ಕವಿಗಳು ಕಲ್ಯಾಣಕ್ಕೆ ಕರೆದೊಯ್ದಿದ್ದಾರೆ. ಅವರಲ್ಲಿ ಚಾಮರಸ, ಚೆನ್ನಬಸವಾಂಕ, ರಾಚಕವಿ, ಶೂನ್ಯ ಸಂಪಾದನಾಕಾರರು, ಎಳಂದೂರು ಹರೀಶ್ವರ ಮೊದಲಾದವರು. ಚಾಮರಸನಲ್ಲಿ "ಲಿಂಗವಿಡಿದು ವಿಭೂತಿ ಧರಿಸಿ ಮುಡಿಗೆಯ ಹೊದಿಕೆಯನ್ನುಟ್ಟು ಕಡು ವಿರಕ್ತಿಯ ವೇಶದಲ್ಲಿ ನಡೆದಳು. ಅಲ್ಲಮಪ್ರಭು ಗುರು ಗುಹೇಶ್ವರನನ್ನು ಅರಸುತ್ತಾ ಕಲ್ಯಾಣದ ಕಡೆಗೆ "ವೇದತತಿ ಕೈನೀಡಿದರೆ ಮೈನಿಲುಕದಾತನ ಅಲ್ಲಮನ ಕಂಡು ವಂದಿಸಿ ಭಕ್ತಿ ಬೇಟದ ವ್ಯಸನದಲ್ಲಿ ಮೈಮರೆತು ಲಜ್ಜೆಯ ಹೆಸರ ಹೆಮ್ಮೆಯನಳಿಸಿ ತನು ಮೋಹವನ್ನು ಹರಿದೊಗೆದು ದಿಗಂಬರೆಯಾಗಿ ಬಂದ ಅಕ್ಕನನ್ನು ಪ್ರಭುದೇವರ ಮೂಲಕ ಕವಿ ಚಾಮರಸನೇ ಕಂಡಿದ್ದಾನೆ. ನಾನಾ ರೀತಿಯ ಪರೀಕ್ಷೆ ನಡೆದು ವೀರವಿರಾಗಿಣಿಯಾದ ಅಕ್ಕನು ಶರಣರಿಂದ ಹೊಗಳಿಸಿಕೊಂಡು ಶ್ರೀಗಿರಿಗೆ ನಡೆಯುತ್ತಾಳೆ. ನಿತ್ಯ ಸುಖಿಯಾಗಿ ಅಚಲ ಪದವಿಯ ಪಡೆದಳಾ ಮಹಾದೇವಿ ಎಂದು ಹೇಳುವ ಚಾಮರಸ ವಿರಾಗಿಣಿ ಅಕ್ಕನ ವಿರಾಟ್ ಸ್ವರೂಪದ ದರ್ಶನವನ್ನೇ ಮಾಡಿದ್ದಾನೆ.

ಕವಿಗಳು ಕಂಡ ಕಿನ್ನರಯ್ಯನ ಪರೀಕ್ಷೆಯಲ್ಲಿ ಅಕ್ಕ

ಹರಿಹರ ಕವಿ ಕಿನ್ನರಯ್ಯನ ಬಗ್ಗೆ ಹೆಚ್ಚಾಗಿ ಹೇಳದೆ "ಬಂದ ಕಿನ್ನರ ಬೊಮ್ಮಿ ತಂದೆಯಂ ಕಾಣುತಂ ಅಂದಂದಿನುಚಿತಕೆ ಗೀತಮಂ ಪಾಡುತಂ"[೧೯] ಎಂದು ಮಟುಕುಗೊಳಿಸಿದರೆ ಶೂನ್ಯಸಂಪಾದನಾಕಾರರ ಪ್ರಕಾರ ಕಲ್ಯಾಣಕ್ಕೆ ಹೋಗುವ ಹಾದಿಯಲ್ಲಿ ಅಕ್ಕ ಕಿನ್ನರಯ್ಯಗಳ ಪರೀಕ್ಷೆಗೆ ಗುರಿಯಾಗುತ್ತಾಳೆ ಎಂದು ತಿಳಿಸುತ್ತಾರೆ. ಆ ಸನ್ನಿವೇಶ ಹೀಗಿದೆ : "ಕಲ್ಯಾಣಕ್ಕೆ ಸಕಲ ಲೋಕಗಳನ್ನು ಪಾವನ ಮಾಡುತ್ತ ಸಕಲ ಜನರನ್ನು ಕೃತಾರ್ಥರನ್ನಾಗಿ ಮಾಡುತ್ತಾ ಬರುತ್ತಾಳೆ. ಇದನ್ನರಿತ ಬಸವಣ್ಣ ಎನ್ನ ಹೆತ್ತ ತಾಯಿ ವಿರಕ್ತಿಯಿಂದ ದಿಗಂಬರೆಯಾಗಿ ಕಾಮಾರಿಯಾಗಿ ಬರುತ್ತಿದ್ದಾಳೆಂದು ಪ್ರಭುವಿಗೆ ತಿಳಿಸುತ್ತಾನೆ. "ಪ್ರಭುದೇವರು ನೆರೆದ ಪ್ರಮಥರಿಗೆ 'ಕಾಮ ಸಂಹಾರಿ' ಎಂಬುದನ್ನು ತೋರಿಸಲು ಕಿನ್ನರಯ್ಯನನ್ನು ಕಳಿಸುತ್ತಾರೆ. "ಕಾಯಕದಲಿ ಕಳವಳವಿದೆ. ಪ್ರಾಣದಲ್ಲಿ ಮಾಯೆಯಿದೆ, ಆದ್ದರಿಂದ ನೀನು ಸಂಸಾರಿಯೇ ಹೊರತು ಸಜ್ಜನೆಯಲ್ಲ. ನಿನ್ನ ಕೈ ಹಿಡಿವೆನೆಂದಾಗ ಅಕ್ಕ ಈ ರೀತಿ ಹೇಳುತ್ತಾಳೆ.

ಅಂಗದ ಭಂಗವ ಲಿಂಗ ಸುಖದಿಂದ ಗೆಲಿದೆ
ಮನದ ಭಂಗವ ಅರುಹಿನ ಮುಖದಿಂದ ಗೆಲಿದೆ
ಜೀವದ ಭಂಗವ ಶಿವಾನುಭವದಿಂದ ಗೆಲಿದೆ

---

೧೯. ಮಹಾದೇವಿಯಕ್ಕನ ರಗಳೆ : ಸ್ಥಲ ೭, ಚರಣ ೧೯೦

> **ಕರುಕತ್ತಲೆಯ ಬೆಳಗನುಟ್ಟು ಗೆಲಿದೆ**
> **ಜವ್ವನದ ಹೊರಮಿಂಚಿನಲಿ ನಿಮ್ಮ ಕಣ್ಣಿಗೆ ತೋರುವ ಕಾಮನ**
> **ಸುಟ್ಟುರುಹಿದ ಭಸ್ಮವ ನೋಡಯ್ಯ**[೨೦]

ಎಂದು ತಿಳಿಸಿ ಕಾಮ ಸುಟ್ಟು ಭಸ್ಮವಾಗಿ ಲಿಂಗವೇ ಪುರುಷವಾಗಿ, ನೀವೇ ಒಡಹುಟ್ಟಿದವರಾದಿರಿ ಎನ್ನುತ್ತಾಳೆ. ಇದರಿಂದ ಕಿನ್ನರಯ್ಯ ತೃಪ್ತಿ ಹೊಂದಿ ಅಕ್ಕನಿಗೆ ಎರಗುತ್ತಾನೆ. ಇಲ್ಲಿ ಸಂಪಾದನಾಕಾರರು ಅಕ್ಕನ ವೈರಾಗ್ಯಕ್ಕೆ ಬೆಲೆ ಕೊಟ್ಟಂತಿದೆ.

ಸಾಂಗತ್ಯ ಬರೆದ ರಾಚಕವಿಯಲ್ಲಿ "ಅರಮನೆ ಬಿಟ್ಟು ಹೊರಟ ಅಕ್ಕನಿಗೆ ಪರಮಾತ್ಮ ಹದಿಹರೆಯದ ವೇಷದಲ್ಲಿ ಬಂದು ನಾನಾ ರೀತಿಯಾಗಿ ಒರೆದು ನೋಡುತ್ತಾನೆ. ನಂತರ ಮಹಾದೇವಿಯನ್ನು ಕೈಲಾಸಕ್ಕೆ ಕರೆಯುತ್ತಾನೆ. ಅದಕ್ಕೊಪ್ಪದ ಅಕ್ಕ ಪ್ರಭುದೇವರನ್ನು ಕಂಡು ಬರುವುದಾಗಿ ತಿಳಿಸುತ್ತಾಳೆ. ಇಲ್ಲಿ ರಾಚಕವಿಯ ನಿರೂಪಣೆ ವಿಶೇಷವಾಗಿದೆ. ಶಿವ-ಮಹಾದೇವಿಯರ ಸಂಭಾಷಣೆ ಬೇರಾವ ಕವಿಗಳ ಕಾವ್ಯದಲ್ಲಿ ಬರದೆ ಇರುವುದೊಂದು ಗಮನಾರ್ಹ ಸಂಗತಿ. ಅಲ್ಲದೆ ಸಾಕ್ಷಾತ್ ಶಿವನೇ ಕೈಲಾಸಕ್ಕೆ ಕರೆದರೆ ಪ್ರಭುವನ್ನು ಕಂಡು ಬರುತ್ತೇನೆನ್ನುವಲ್ಲಿ 'ಶಿವನಿಗಿಂತ ಶಿವಶರಣರು ಹೆಚ್ಚು' ಎಂದು ಪ್ರತಿಪಾದಿಸಿದ್ದಾನೆ ರಾಚಕವಿ. ನಂತರದಲ್ಲಿ ಕಿನ್ನರಯ್ಯನ ಪರೀಕ್ಷೆ! ಕಿನ್ನರಯ್ಯ ಅಕ್ಕನನ್ನು ಮಾತನಾಡಿಸಿದ್ದೇ ತಡ ಅಕ್ಕನು ಬ್ರಹ್ಮಯ್ಯನ ಮೇಲೆ ಕೆಂಗಣ್ಣು ಬಿಡುತ್ತಾಳೆ. ತಕ್ಷಣವೇ ಕಿನ್ನರಯ್ಯನ ಮೇಲೆ ಮೆಟ್ಟುಗಳು ಉರುಳುವುವು ಕಿನ್ನರಯ್ಯ ತಂತಿ ಹರಿದು ಬ್ರಹ್ಮಯ್ಯ ತಲೆಬಾಗುತ್ತಾನೆ ಅಕ್ಕನಿಗೆ. ನಂತರ ಪ್ರಭುವಿನ ಪರೀಕ್ಷೆಯೊಡನೆ ಶ್ರೀ ಗಿರಿಯಲ್ಲಿ ಐಕ್ಯಳಾಗುವಳು.

ಕವಿಗಳು ಕಂಡ ಅಕ್ಕನ ವೈರಾಗ್ಯ ಸಂಪತ್ತು

ಕೌಶಿಕನೊಡನೆ ಮದುವೆಯಾಗುವುದನ್ನು ನಿರಾಕರಿಸಿದ ಅಕ್ಕನ ವೈರಾಗ್ಯ ಸಂಪತ್ತು ಬೆಳೆಯುತ್ತಾ ಹೋಗುತ್ತದೆ. ಶೈವ ಸುಖ ಪ್ರಸಂಗಕ್ಕೆ ಕಂಟಕಂ ಬರ್ಪತೆ ಕೌಶಿಕನ ವಿಳಾಸಿನಿಯರ್ ಬರಲು ಮಹಾದೇವಿಯರ ಮನದನುರಾಗವಿಳಿವಂತೆ ಪ್ರಭಾಕರಂ ಪಶ್ಚಿಮ ವಾರ್ಧಿಯೊಳಿಳಿಯೆ ಮನದುಮ್ಮಳಂ ಕವಿವಂತೆ ತಮ ಕವಿಯೆ ಶರಣರಂ ಪಿಂಗಲಾರ ದಂಗಲಾಚಿ ಸಂಸಾರಕ್ಕೆ ಸುರುಳ್ದು ಕಾಮಕ್ಕೆ ಕೆರಳ್ದು ಅಲ್ಪಸುಖಕ್ಕೆ ತೆರಳ್ದು ಕರ್ರನೆ ಕಂದಿ ಸುರ್ರನೆ ಸುಯ್ದು ಸುಮ್ಮಾನ ವುಡಿಗಿ ನಡೆವುತಯ್ಯ ಶಿವನೆ ಏನಂ ಪೇಳ್ವನೀಲಜ್ಜೆಯ ಮಾತನೆಂದು ಮಲ್ಲಿಕಾರ್ಜುನನಂತೆ ಮೊರೆಯಿಟ್ಟು ಮುಳಿದು ಗೀತಮಂ ಪಾಡುತ್ತೆ ಭಂಡಾರದ ಮನೆಯಲ್ಲಿ ಬಂದು ಆಭರಣಮಂ ತೆಗೆದು ಬಿಸಾಗಿ ಮೈಲಿಗೆಯನುಟ್ಟು ದುಮ್ಮಾನ ತೊಟ್ಟು ನಿರ್ವೇದಂ ಮುಂದಿಟ್ಟು ಸಿಂಗಾರಕ್ಕೆ ಸಲ್ಲದ ತಾಂಬೂಲಮನೊಲ್ಲದೆ ಪರಿಮಳದೋಳಂ ನಿಲ್ಲದೆ... ಧವಳದಲ್ಲಿದ್ದ ಲಿಂಗವನ್ನು ಕೈಯಲಿಡಿದು ಆಭರಣಗಳನ್ನು ಭಕ್ತರಿಗೆ ಕೊಟ್ಟು ಅಶನ ದಾಸೆಯಂ ವಿಷಯ ತೃಷೆಯಂ ಬೆಸನದ ಬೇಗೆಯಂ ತಾಪತ್ರಯದ ಕಲ್ಪನೆಗಳ ಗೆಲಿದೆ ಚೆನ್ನಮಲ್ಲಿಕಾರ್ಜುನ ನಿನಗಂಜೆನಂಜೆನೆಂದು ಗೀತೆಯನ್ನು ಹಾಡಿ ಸಪ್ತಾಂಗ ರಾಜ್ಯವನ್ನು ಒದೆದು ನೆರೆದ ಜನರನ್ನು ಲೆಕ್ಕಿಸದೆ, ಪುರಜನರನ್ನು ಕೇಳದೆ ಭೋಗಮಂ ಸಾಗಿಸದೆ ಆಸೆಯನ್ನು ಉಲ್ಲಂಘಿಸಿ ಭಕ್ತಿ ಜ್ಞಾನ ವೈರಾಗ್ಯ ಶೈವಸಾಮ್ರಾಜ್ಯ

---

೨೦. ಗೂಳೂರು ಸಿದ್ಧವೀರಣ್ಣೊಡೆಯರ ಶೂನ್ಯ ಸಂಪಾದನೆ : ಸಂ. ಸಂ.ಶಿ. ಭೂಸನೂರಮಠ, ಪು. ೩೨೩

ನಿಧಿಯಾದ ಅಕ್ಕಪುರದ ಪುಣ್ಯದ ಸ್ತ್ರೀರೂಪವಾಗಿ ಹೋದಂತೆ ಶ್ರೀಗಿರಿಗೆ ಹೋದುದನ್ನು"[೨೧] ಹರಿಹರ ಕಂಡಿದ್ದಾನೆ ತನ್ನ ರಗಳೆಯಲ್ಲಿ ಚಾಮರಸನ ಕಾವ್ಯದಲ್ಲಿ "ಗೋಮುಖವ್ಯಾಘ್ರಂಗಳಂದದ ಕಾಮ ಮೊದಲಾದಳ ವಿಷಯ ಸ್ತೋಮವನು ಮುರಿದಿಕ್ಕಿ ಮುಂಬರಿದಂತರಂಗದಲಿ ಆ ಮಹಾಶಿವಲಿಂಗಸಂಗ ಪ್ರೇಮಿಯಾದ ಅಕ್ಕನು ಶಿವಭಕ್ತಿಯ ಮಾಡುವ ಸಮಯವಳವಡದ ಕೌಶಿಕನಿಗೆ ಭವಿಯಾದ ನಿನಗೆ ನನ್ನ ಸಂಗವಳವಡದು ಎಂದು ಹೇಳಿ ಲಿಂಗವಿಡಿದು ವಿಭೂತಿ ಧರಿಸಿ ಮುಡಿಯ ಹೊದಿಕೆಯನುಟ್ಟು ಕಡುವಿರಕ್ತಿವೇಷದಿ ಹೊರಟಳೆಂದು ಹೇಳುತ್ತಾನೆ."[೨೨]

ರಾಚಕವಿಯ ಸಾಂಗತ್ಯದಲ್ಲಿ "ಕ್ರೂರದೃಷ್ಟಿಯ ಕಾಣ ಕಾರುಣ್ಯ ಮುಗುಳ್ನಗೆ ತೋರ ಕುಚದ ನುಣ್ಣೊಡೆಗಳ ವೀರಶೈವಾಗಮ ಮುಕ್ತಿ ವೈರಾಗ್ಯ ಕರ್ಪೂರ ಗೌರಿಯನು ಕಂಡ, ಹಿಡಿದ ಹಸ್ತದಲಿ ಇಷ್ಟಲಿಂಗ, ಬೆರಳಬಾಯಬಿಡದ ನಿರ್ವಾಣ ವಿರಕ್ತೆಯನ್ನು ಬಸವಣ್ಣ ಕಂಡರೆ, ಭಕ್ತರ ಬಾಲೆ, ವಿರಕ್ತರ ಕೈವಲ್ಯ ಕಾಮನ ವೈರಿ ಕಾಮವ ಸುಟ್ಟು ಕ್ರೋಧವ ನಿಟ್ಟೊರೆಸಿ ಲೋಭ ಮೋಹಗಳನ್ನು ಕಿತ್ತೊಗೆದು, ತಾಮಸ, ಮದ ಹಮ್ಮುಗಳನ್ನು ಅಳಿಸಿ ಮಚ್ಚರವಿಲ್ಲದ ಮಾನಿ ಮುಕ್ತಿ ವೈರಾಗ್ಯ"[೨೩] ಎಂದು ವೈರಾಗ್ಯದ ಕರ್ಪೂರದ ಮೂರ್ತಿಯನ್ನು ಕಂಡಿದ್ದಾನೆ.

ಶೂನ್ಯ ಸಂಪಾದನಾಕಾರರು ಲಿಂಗಧಾರಣವಾಗಲೊಲ್ಲೆನೆಂದ ಭವಿಯನ್ನು ಮುಟ್ಟದೆ, ಅಂಗದ ಸಂಗವನ್ನು ತೊರೆದು, ಲಿಂಗದ ಸಂಗವನ್ನು ಬಯಸಿ ಸರ್ವ ಇಂದ್ರಿಯಗಳನ್ನು ಅರಿವಿಗೆ ಆಹುತಿ ಮಾಡಿ ದಿಗಂಬರ ಉಡಿಗೆ ತೊಟ್ಟು ಕೇಶಾಂಬರ ಮುಸುಕಿಟ್ಟು, ಕೈಯಲ್ಲಿನ ಲಿಂಗದಲಿ ದೃಷ್ಟಿಯಿಟ್ಟು ಲೌಕಿಕದ ನಾಚಿಕೆ, ಅಭಿಮಾನ ತೊರೆದು ಭವಸಾಗರ ದಾಟಿ ಮಹಾ ವೈರಾಗ್ಯಮಂ ಬೀರುತ್ತ ಬರುವ ಅಕ್ಕನ ವೈರಾಗ್ಯ ಸಂಪತ್ತು ಹಾಗೂ ಕಿನ್ನರಯ್ಯನ ಪರೀಕ್ಷೆಯಿಂದ ಕಾಮ ಸುಟ್ಟು ಮತಿವಂತಳಾದ ಅಕ್ಕ "ಶಿವನು ಮನ್ಮಥನನ್ನು ಸುಟ್ಟನಾದರೂ ಅವನನ್ನು ಅನಂಗನನ್ನಾಗಿ ಉಳಿಸಿ ಮನಸಿಜನನ್ನಾಗಿ ಮಾಡಿದನು. ಆದರೆ ನಾನು ಮನಸಿನ ಹಣೆಯ ಬರಹವನ್ನೇ ಕೆಡಿಸಿಹಾಕಿದ್ದೇನೆ ಎಂದು ಹೇಳುವಲ್ಲಿ"[೨೪] ಅಕ್ಕನ ವೈರಾಗ್ಯ ಸಂಪತ್ತು ಬಿಂಬಿತವಾಗಿದೆ.

ಹೀಗೆ ಅಕ್ಕನ ವೈರಾಗ್ಯ-ಸಂಪತ್ತನ್ನು ಮನದುಂಬಿ, ಮೈದುಂಬಿ ಹಾಡಿದ್ದಾರೆ ಪ್ರಾಚೀನ ಕವಿಗಳು.

ಕವಿಗಳು ಕಂಡ ಅಕ್ಕನ ಗುಣ ಸೌಂದರ್ಯ

ಬೆಳೆವ ಸಿರಿ ಮೊಳಕೆಯಲ್ಲಿ ಎಂಬಂತೆ ಅಕ್ಕನ ಗುಣವನ್ನು ಕವಿಗಳು ಕಂಡಿದ್ದಾರೆ. ಹರಿಹರ ಕವಿಯು ಬಾಲ್ಯದಲ್ಲಿಯೇ

'ತಾಯ ಮಗ್ಗುಲ ತಂಪಿನೊಳಂ ಮೊಲೆವಾಲಿಂಪಿನೊಳಂ
ರಾಗಿಸುವರ ಜೋಗುಳದೊಳಂ ಸಾಗಿಸುವರ ಸೋಗಿಲೋಳಂ
ಎತ್ತಿಕೊಂಬರಳ್ತಿಯೊಳಂ, ಮುಟ್ಟುವರ ಮೋಹದೊಳಂ...
ಉತ್ಪಲದಲ್ಲಿ ಸಿಲ್ಕಿದ ಪೆಣ್ದುಂಬಿ ಜಿನುಗುವಂತೆ ಒಮ್ಮೊಮ್ಮೆ ಅಳುತ್ತಂ

---

೨೧. ಮಹಾದೇವಕ್ಕನ ರಗಳೆ : ಸ್ಥಲ ೬
೨೨. ಪ್ರಭುಲಿಂಗಲೀಲೆ : ಗರಿ ೧೦, ಸಂ. ಡಾ. ಎಂ. ಎಸ್. ಸುಂಕಾಪುರ
೨೩. ಮಹಾದೇವಿಯಕ್ಕನ ಸಾಂಗತ್ಯ: ಸಂ. ಡಾ. ಎಸ್. ವಿದ್ಯಾಶಂಕರ, ಸ. ೫, ಪ. ೧೬
೨೪. ಶೂನ್ಯ ಸಂಪಾದನಕಾರರು

ಕಮಲ ಕಟ್ಮಲವರಳ್ವಂತೆ ನಗುತಂ
ಕುಮುದುಂ ಮುಗಿವಂತೆ ಕಣ್ಮುಚ್ಚುತಂ
ಶಿವಭಕ್ತಿಯ ಮುಚ್ಚಳಂದೆಗೆವಂತೆ ಕಣ್ದೆರೆವುತಂ"[೨೫]

ಇರುವ ಮಗುವಿಗೆ ತಂದೆ ತಾಯಿಗಳು ಅಂದಚಂದದ ಆಭರಣಗಳನ್ನಿಟ್ಟುನೋಡಿ ನಲಿಯುತ್ತಿದ್ದರು ಎನ್ನುವಲ್ಲಿ ಅಕ್ಕನ ಬಾಲಲೀಲೆಯನ್ನು ಶಿವಲೀಲೆಯೆಂದು ಕಂಡಿದ್ದಾನೆ. "ಇಂತುತ್ತರೋತ್ತರ ಲಾವಣ್ಯ ರಸಭರಿತ ಸುಕುಮಾರಾವಯವಂಗಳ ವಿಳಾಸಂದಳೆದು ತುಳುಕಂದದ ಪೂರ್ಣಸುಖದಂತೆ, ಮೀಸಲಳಿಯದ ಮನೋರಥದಂತೆ, ಬಾಸಣಿಸದ ಅಮೃತದಂತೆ ಮುದ್ರಿಸಿದ ಪುಣ್ಯದಂತೆ ಮಾಡಿದ ಭಕ್ತಿಯಂತೆ, ಕೂಡಿದ ಪೂಜೆಯಂತೆ, ಕಾಮನ ಬಾಣದಂತೆ, ಸೋಮನ ಕಿರಣದಂತೆ, ವಸಂತನ ವಶೀಕರಣದಂತೆ, ವನಲಕುಮಿಯ ಭಾಗ್ಯದಂತೆ, ಮಳಯಾನಿಳನ ಮದದಂತೆ, ಯೌವನ ಮದೋನ್ಮತ್ತ ವಿಳಾಸ ವಿಭ್ರಮ ಕಳಾ ಪರಿಪೂರ್ಣ ಶರೀರೆಯಾಗಿರ್ದ ಮಹಾದೇವಿ ಯೌವ್ವನದಲ್ಲಿ ಕಂಡ ಸೌಂದರ್ಯವಿದು. ಅಷ್ಟೇ ಅಲ್ಲ ಲಿಂಗಪ್ರಾಣಿ, ಸದಾ ಸನ್ನಿಹಿತೆ, ಭಕ್ತಿ ಚರಿತೆ, ಶಿವಜ್ಞಾನಸಂಪನ್ನೆ, ಅಂಬಿಕೆಯ ಚಿತ್ಕಳೆ, ಭಾವಕಿಯ ಭಕ್ತಿ ಚರಿತೆ, ತಂಪಿನ ಸಂಜೀವಿನಿ, ಸಾಹಿತ್ಯ ನಿಧಿ, ಶೀತಳ ಜ್ಯೋತಿ, ಸಾಮರ್ಥ್ಯ ಯುಕ್ತ ಅರಿವಿನ ಅವಯವ, ಮುಕ್ತಿಯ ಮರಿ; ಸರ್ವಾಗ ಸೌಂದರ್ಯನಿಧಿ, ಉನ್ನತ ಜ್ಞಾನಿ, ಅಭಿಮಾನಿ, ಶಾಂತಿಯುಕ್ತೆ, ನಿತ್ಯ ಪ್ರಕಾಶಿತೆ, ಬೆಳಗು, ತಂಪು ತಿಳಿವು ಶಶಿ ಎಂದು ಮುಂತಾಗಿ ಹರಿಹರದೇವ ಅಕ್ಕನ ಗುಣ ಸೌಂದರ್ಯವನ್ನು ಗುಣಗಾನ ಮಾಡುತ್ತಾನೆ. ಚೆನ್ನಬಸವಾಂಕ ಕವಿ ನೋಡುವವರ ಕಣ್ಣು ಪುಣ್ಯಂ ಪಾಡುವವರ ನಾಲಗೆ ಅಮೃತ, ಎತ್ತಿ ಮುದ್ದಾಡುವರ ಮುದ, ಆಡಿಸುವವರ ಅವಯವದ ಚೇತನವನ್ನು ಅಕ್ಕನ ಬಾಲಲೀಲೆಯಲ್ಲಿ ಕಂಡಿದ್ದಾನೆ.

"ಇತ್ತಲೀ ಮಾದೇವಿ ಮಿಗೆ ಬಳೆ
ವುತ್ತಲಿದ್ದಳು ಜವ್ವನ ಕಳೆ
ವೆತ್ತು ಭರದಲಿ ಪುಟವನಿಕ್ಕಿ ಮಿಸುನಿಯಂದದಲಿ
ತುಂಬಿಲಿಂಗದ ನಿಷ್ಠೆಯೊಡನೆ ನಿ
ತಂಬ ಮೊಲೆ ಮುಡಿ ಹೆಚ್ಚಿ ಬೆಳೆದವು
ಶಂಭುವಿನ ಸತ್ಕರ್ಮ ಭಕ್ತಿಜ್ಞಾನವೆಂಬಂತೆ
ಶಂಬರಾರಿಯ ಶಸ್ತ್ರಹತಿಯ ವಿ
ಡಂಬನೆಯ ಧಿಕ್ಕರಿಸಿ ತೋರುವೆ
ನೆಂಬ ಭರದಲ್ಲಿ ಜವ್ವನವ ಹೇರಿದಳೆಂದು"[೨೬]

ಚಾಮರಸ ಅಕ್ಕನ ಯೌವ್ವನದ ಗುಣ ಸೌಂದರ್ಯ ವರ್ಣಿಸಿದ್ದಾನೆ.

ರಾಚಕವಿಯಲ್ಲಿ ಕಾಲಲಂದುಗೆ ಗೆಜ್ಜೆ ಕರ್ಣಕುಂಡಲ, ಹಸ್ತಶೀಲಕಂಕಣ ಸರಗಳ ಬಾಲದೊಡಿಗೆಯಪ್ಪೆ ಬಸವಶಂಕರಿಗೆ ವಿಶಾಲವಾದ ಕಣ್ಣು ವರವದನ ಎಂದು ಮಗುವಿನ ವರ್ಣನೆ ಮಾಡಿದ್ದಾನೆ. ಇಂಥ ಬಾಲಕಿಯನ್ನು ಕಂಡ ತಂದೆ-ತಾಯಿಗಳು "ಸುತೆಯಲ್ಲ

---

೨೫. ಮಹಾದೇವಿಯಕ್ಕನ ರಗಳೆ : ಸ್ಥಲ ೨, ಚರಣ ೬೭-೭೧

೨೬. ಪ್ರಭುಲಿಂಗಲೀಲೆ : ಗತಿ ೧೦, ಪ. ೩

ವಿವಳು ಸದ್ಗತಿ ಮುಕ್ತಿಮಾನಿನಿ ಪೆಣ್ಣಲ್ಲ! ಎಂದು ಉದ್ಗಾರ ತೆಗೆದಿದ್ದಾರೆ. ಶೂನ್ಯ ಸಂಪಾದನಾಕಾರರಲ್ಲಿ "ನಿಶ್ಚಲ ಬುದ್ಧಿಯಿಂದ, ಭಕ್ತಿಯ ಭಾಗ್ಯ, ಮುಕ್ತಿಯ ತವರುಮನೆಯಾದ, ಶಿವಭಾವ ಸಂಪನ್ನೆಯಾದ ಪ್ರಸಾದದ ಮೇರು ಪರ್ವತವಾದ ತತ್ವಶಿಖಾಮಣಿಯಾದ ಪುಣ್ಯದ ಪುಂಜೆಯಾದ ಸತ್ಯದ ಸದನ, ಶಾಂತಿಯ ನಿಧಿ ಚಿದಂಬರ ಸಂಯುತೆ, ಸ್ವಾನುಭಾವದ ಸಾಗರೆ, ನಿತ್ಯದ ನಿವಾಸೆಯಾಗಿ ಗೋಚರಿಸುವ"ಳೆಂದು ಅಕ್ಕನ ಗುಣ ಸೌಂದರ್ಯ ಮಾಡಿದ್ದಾರೆ.

ಸಮಾರೋಪ

ಅಕ್ಕಮಹಾದೇವಿಯ ಚರಿತ್ರೆಯನ್ನು ಬರೆಯುವಲ್ಲಿ ಪ್ರಾಚೀನ ಕವಿಗಳಿಗೆ ತೋರಿದ ಭಾವನೆಗಳು ಹಲವಾರು. ನಾರಿಯೊಬ್ಬಳನ್ನು ತಮ್ಮ ಕಾವ್ಯದ ದಾರಿಯನ್ನಾಗಿ ಮಾಡಿಕೊಂಡ ಈ ಶಿವ ಕವಿಗಳಿಗೆ ಶಿವಶರಣರ ಕ್ರಾಂತಿಯ ಗಾಢ ಪ್ರಭಾವ ಆದಂತಿದೆ. ಶರಣರ ದೃಷ್ಟಿಯಲ್ಲಿ ಹೆಣ್ಣು ಮಾಯೆಯಲ್ಲ. ಅವಳು ಸಾಕ್ಷಾತ್ ಕಪಿಲಸಿದ್ಧ ಮಲ್ಲಿಕಾರ್ಜುನ ಎಂದು ಹೇಳಿ "ಸ್ತ್ರೀಯೆಂದರೆ ನರಕದ ದಾರಿಗೆ ಮಾರ್ಗ ತೋರಿಸುವ ದೀಪದ ಕಂಬವಿದ್ದಂತೆ" ಎಂದು ಹೇಳಿದ ಹೇಮಚಂದ್ರನ ಮಾತನ್ನು ಅಲ್ಲಗಳೆದು ಇವಳಿಗೂ ಆತ್ಮವಿದೆ. ಆಧ್ಯಾತ್ಮ ಜ್ಞಾನವಿದೆ ಎಂಬುದನ್ನರಿತು ಸ್ತ್ರೀಗೆ ಆಧ್ಯತೆ ನೀಡಿದರು. ಅನುಭವಮಂಟಪದಲ್ಲಿ ಸ್ಥಾನಕೊಟ್ಟರು. ಇದರಿಂದಾಗಿ ಸ್ತ್ರೀ ದೈಹಿಕವಾಗಿ, ಮಾನಸಿಕವಾಗಿ ಬೆಳೆಯಲಾರಂಭಿಸಿದಳು. ಸಾಹಿತ್ಯ ರಚನೆಗೂ ಕೈಹಾಕಿದಳು. ಅಕ್ಕನಂಥ ಮಹಿಳಾ ರತ್ನ ಆ ಯುಗದಲ್ಲಿ ಜನಿಸಿತು. ತೇಜಸ್ಸನ್ನು ಬೀರಿತು. ಸ್ತ್ರೀ ಸಮಾಜಕ್ಕೆ ಸತ್ ಕೀರ್ತಿ ತಂದ ಮಹಾದೇವಿಯನ್ನು ಕಾವ್ಯದ ನಾಯಕಿಯನ್ನಾಗಿ ಮಾಡಿಕೊಂಡ ಕವಿಗಳು ಭಕ್ತೆ, ವಿರಕ್ತೆ, ವಿರಾಗಿಣಿಯಾಗಿ ಕಂಡಿದ್ದರೂ ಸಹ ಅಕ್ಕನ ನಿಜವಾದ ವ್ಯಕ್ತಿತ್ವ ಮೂಡಿ ಬಂದಿಲ್ಲವೆನ್ನಬೇಕಾಗುತ್ತದೆ. "ಕೌಶಿಕನೊಡನೆ ವಿರಸ ದಾಂಪತ್ಯ ಹಾಗೂ ಚೆನ್ನಮಲ್ಲಿಕಾರ್ಜುನನೊಡನೆ ಸತಿ ಪತಿ ಭಾವದ ಭಕ್ತಿಯನ್ನು ಕವಿಗಳು ಶರಣ ಸತಿ–ಲಿಂಗ ಪತಿ ಆಧಾರದ ಮೇಲೆ ಚಿತ್ರಿಸಿರುವುದರಿಂದ ಅಕ್ಕನ ಭಕ್ತಿ ಮತ್ತು ವೈರಾಗ್ಯ ಗುಣಕ್ಕೆ ಮೆರಗುಬಂದಿದೆ." ಹರಿಹರ ಕವಿಯು ಹಲವಾರು ಪ್ರಸಂಗಗಳಲ್ಲಿ ಗಿರಿಜಾ ಕಲ್ಯಾಣದ ಪ್ರಸಂಗಗಳನ್ನೇ (ಉದಾ: ಅಕ್ಕನ ಮದುವೆ ಸನ್ನಿವೇಶ) ತಿಳಿಸಿದ ಕಾರಣ ಅಕ್ಕನನ್ನು ಶರಣೆಯೆಂದು ತಿಳಿಯದೆ ಪಾರ್ವತಿಯನ್ನಾಗಿ ಕಂಡಿದ್ದಾನೆ. ರಾಚಕವಿ ಚಿತ್ರಿಸಿದ ಅಕ್ಕ ವೀರಳಾಗಿ ಕಂಡುಬಂದರೆ ಶೂನ್ಯ ಸಂಪಾದಕರ ಅಕ್ಕ ಕಾಮ ಸಂಹಾರಿಯಾಗಿ ಗೋಚರಿಸುತ್ತಾಳೆ. ಚಾಮರಸನಂತೂ "ಬತ್ತಲೆ, ವೈರಾಗ್ಯ ಲಿಂಗಪ್ರೇಮಗಳ ವಿಕಟ ಪರೀಕ್ಷೆಯಿಲ್ಲದೆ ಸರ್ವರ ಕರುಣೆಯನ್ನು ಪಡೆದ ಲಿಂಗಸಾಧಕಿಯನ್ನಾಗಿ ರೂಪಿಸಿದ್ದಾನೆ. ಪೈಜೆಯ ಪೈಜಣವಾದ ಮಾಯೆಯನ್ನು; ಭಂಗಿಸಿದ ಪ್ರಭುದೇವ ಮಹಾದೇವಿಯನ್ನು ಭಕ್ತಿಯ ಕಾಲುಂಗುರವಾಗಿ ಮಾಡಿದ್ದು ಅರ್ಥಪೂರ್ಣ, ತತ್ವಪೂರ್ಣ,"[೨೭] ಹರಿಹರನಲ್ಲಿ ಸಾತ್ವಿಕ ಭಕ್ತಿಸಂಪನ್ನೆಯಂತೆ ಕಾಣದೆ, ರಾಜಸ ಗುಣದ ಹಟಯೋಗಿನಿಯಂತೆ ಕಾಣುತ್ತಾಳೆ; "ಮೋಹಕ್ಕಿಂತ ತ್ಯಾಗಕ್ಕೆ, ರಾಗಕ್ಕಿಂತ ವಿರಾಗಕ್ಕೆ ಅಹಂಕಾರಕ್ಕಿಂತ ವಿನಯಕ್ಕೆ ತಾಮಸಕ್ಕಿಂತ ಸಾತ್ವಿಕತೆಗೆ ಗೆಲುವಾಗುತ್ತದೆಂದು"[೨೮] ಚೆನ್ನಬಸವಾಂಕನು ಕಂಡ ಅಕ್ಕನಲ್ಲಿ

೨೭. ಕನ್ನಡ ಸಾಹಿತ್ಯದಲ್ಲಿ ಅಲ್ಲಮಪ್ರಭು : ಡಾ. ಎಂ. ವೃಷಭೇಂದ್ರ ಸ್ವಾಮಿ, ಪು. ೧೯೮

೨೮. ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ: ಸಂ. ೪, ಭಾಗ ೨, ಪು. ೨೮೫

ತಿಳಿಯಬಹುದು. ಕವಿಗಳ ದೃಷ್ಟಿಕೋನ ಬೇರೆ ಬೇರೆಯಾದರೂ ಅಕ್ಕಮಹಾದೇವಿ ರಾಜ್ಯ ತೊರೆದು ಮಣ್ಣಿನ ಪೊರೆ ಕಳಚಿಕೊಂಡಳು, ರಾಜನನ್ನು ತೊರೆದು ಮಣ್ಣಿನ ಪೊರೆ ಕಳಚಿಕೊಂಡಳು, ರಾಜನನ್ನು ತೊರೆದು ಪುರುಷನ ಪೊರೆ ಕಳಚಿಕೊಂಡಳು. ತನ್ನನ್ನೇ ಮಲ್ಲಿಕಾರ್ಜುನನಿಗೆ ಅರ್ಪಿಸಿಕೊಂಡು ಅಭಿಮಾನದ ಪೊರೆ ಕಳಚಿಕೊಂಡು ಪರಿಪೂರ್ಣ ಭಕ್ತಳಾದಳೆಂಬುದನ್ನು ಎಲ್ಲ ಪ್ರಾಚೀನ ಕವಿಗಳಲ್ಲಿ ಕಾಣಬಹುದಾಗಿದೆ.

ಕಲ್ಪನೆಯ ಕುದುರೆಯನ್ನೇರದೆ ವೈಚಾರಿಕ ಅಧ್ಯಯನದಿಂದ ಅಕ್ಕನ ಚರಿತ್ರೆಯನ್ನು ಹುಡುಕುವುದಾದರೆ ಇಡೀ ಸ್ತ್ರೀ ಸಮಾಜಕ್ಕೆ ಮಹಾ ಉಪಕಾರ ಮಾಡಿದಂತಾಗುತ್ತದೆ. ಈ ನಿಟ್ಟಿನಲ್ಲಿ ಸಂಶೋಧನೆ ಮಾಡುವುದು ಅವಶ್ಯವಿದೆ.

೭. ಅಕ್ಕನ ಬದುಕು – ಒಂದು ವಿಶ್ಲೇಷಣೆ

•

ಡಾ. ಆರ್. ಪೂರ್ಣಿಮಾ

ಕನ್ನಡ ಸಾಹಿತ್ಯದಲ್ಲಿ, ವಚನಸಾಹಿತ್ಯ ಒಂದು ದ್ವೀಪವಿದ್ದ ಹಾಗೆ. ವಚನ ಸಾಹಿತ್ಯದ ವೈಶಿಷ್ಟ್ಯಗಳು, ಅದರ ಹಿಂದಿನ ಸಾಹಿತ್ಯಕ್ಕೂ ಇರಲಿಲ್ಲ; ಮುಂದಿನ ಸಾಹಿತ್ಯಕ್ಕೂ ಬರಲಿಲ್ಲ. ರಾಜಾಸ್ಥಾನಗಳಲ್ಲಿ ವಿರಾಜಿಸುತ್ತಿದ್ದ ಸಾಹಿತ್ಯರಚನೆ ಮೊದಲ ಬಾರಿಗೆ ಜನಸಾಮಾನ್ಯರ ಬಳಿಗೆ ಬಂದಿತು. ಚರಿತ್ರೆಯಲ್ಲಿ ಇದೊಂದು ಮಹತ್ವದ ಘಟನೆ ಎಂಬುದು ನಿರ್ವಿವಾದ. ಸಾಮಾಜಿಕ ಶ್ರೇಣಿಯಲ್ಲಿ ತೀರಾ ಕೆಳಗಿದ್ದವರಿಗೆ, ಕಾಯಕದಿಂದ ಜೀವಿಸುತ್ತಿದ್ದವರಿಗೆ, ವಚನ ಚಳವಳಿ ಬಾಯಿ ತೆರೆಯುವ ಅವಕಾಶ ಕೊಟ್ಟಿತು. ವಚನ ಚಳವಳಿಯ ಮಹತ್ವ ಇನ್ನೂ ಹೆಚ್ಚಿನದೆನ್ನಿಸುವುದು ಅದು ಹೆಣ್ಣುಮಕ್ಕಳಿಗೆ ದನಿ ಕೊಟ್ಟಿತು ಎಂಬ ಕಾರಣಕ್ಕೆ. ನಮ್ಮ ಸಮಾಜದ ಇತಿಹಾಸದಲ್ಲಿ ಶೂದ್ರರಿಗೂ ಹೆಂಗಸರಿಗೂ ಹೆಚ್ಚು ವ್ಯತ್ಯಾಸ ಕಂಡುಬರುವುದಿಲ್ಲ. ಶೂದ್ರರ ಹಾಗೇ ಹೆಂಗಸರೂ ಎಲ್ಲ ಅವಕಾಶಗಳಿಂದ ವಂಚಿತರಾದವರು ಮತ್ತು ಹಲವು ಬಗೆಯ ದಬ್ಬಾಳಿಕೆಗೆ ತುತ್ತಾದವರು. ಹೀಗೆ ಸಮಾಜದ ತಾತ್ಸಾರಕ್ಕೆ ಗುರಿಯಾಗಿದ್ದ ಎರಡೂ ಗುಂಪುಗಳಿಗೆ ದನಿ ಕೊಟ್ಟದ್ದು ವಚನ ಚಳವಳಿಯ ಮಹತ್ವದ ಸಾಧನೆ ಅನ್ನುವುದನ್ನು ಈಗಾಗಲೇ ಗುರುತಿಸಲಾಗಿದೆ.

ಈ ದೇಶದ ಸ್ತ್ರೀಯರ ಇತಿಹಾಸದ ದೃಷ್ಟಿಯಿಂದ ಗಮನಿಸು ವುದಾದರೆ, ವಚನ ಚಳವಳಿ ಸ್ತ್ರೀಯರಿಗೆ ಕೊಟ್ಟ ಅವಕಾಶವನ್ನು ನಾವು ನಿಬ್ಬೆರಗಿನಿಂದ ಅದ್ಭುತ ಎಂಬಂತೆ ನೋಡ ಬೇಕಾಗುತ್ತದೆ. ಕನ್ನಡ ಸಾಹಿತ್ಯದ ಮಟ್ಟಿಗಂತೂ ಇದೊಂದು ಹೆಮ್ಮೆಯ ಘಟನೆ. ಭಾರತೀಯ ಸಮಾಜದಲ್ಲಿ ಹೆಣ್ಣಿನ ಸ್ಥಿತಿಗತಿಯ ಚರಿತ್ರೆಯನ್ನು ಬಲ್ಲವರಿಗೆ ಇದರ ಮಹತ್ವ ಅರಿವಾಗುತ್ತದೆ. ವೇದಕಾಲೀನ ಸಮಾಜದಲ್ಲಿ ಶಿಕ್ಷಣ ಪಡೆಯಲು ಹೆಣ್ಣಿಗೆ ದೊರೆತ ಅವಕಾಶ ಬಿಟ್ಟರೆ, ಕಾಲ ಕಳೆದಂತೆ ಅವಳ ಬೌದ್ಧಿಕ ಚಟುವಟಿಕೆಗಳ ದಾಖಲೆ, ಕುರುಹುಗಳೇ ಕಾಣಸಿಗುವುದಿಲ್ಲ. ಧರ್ಮ ಶಾಸ್ತ್ರಗಳ ದಬ್ಬಾಳಿಕೆಯಲ್ಲಿ ಹೆಣ್ಣು ಮನೆಯೊಳಗೇ ಬಂಧಿತಳಾಗಿ ಅಕ್ಷರಜ್ಞಾನದಿಂದ ಕೂಡ ವಂಚಿತಳಾದಳು. ಅಕ್ಷರ ದೊಂದಿಗೆ ಕಡಿದುಹೋದ ಸಂಪರ್ಕ ಮತ್ತೆ ಬೆಸೆದುಕೊಳ್ಳಲು ಎಷ್ಟೋ ಶತಮಾನಗಳ ಕಾಲ ಕಾಯಬೇಕಾಯಿತು. ಈ ಹಿನ್ನೆಲೆಯಲಿ ವಚನ ಚಳವಳಿ ಹೆಣ್ಣಿಗೆ ದನಿಕೊಟ್ಟ ಐತಿಹಾಸಿಕ ಘಟನೆ, ಯಾವ ದೃಷ್ಟಿಯಿಂದ ನೋಡಿದರೂ ವಿನೂತನವಾಗಿ ಅಪಾರ ಮಹತ್ವವುಳ್ಳದ್ದಾಗಿ ಕಾಣುತ್ತದೆ.

'ಗಂಡಸಿ'ನಂತೆ ಹೆಣ್ಣು ಕೂಡ ಮಾತನಾಡಲು ತೊಡಗಿದ್ದಾಳೆ. ಈ ಐತಿಹಾಸಿಕ ಬೆಳವಣಿಗೆಯ ಮಹತ್ವದ ಪ್ರತೀಕವಾಗಿ ಅಕ್ಕಮಹಾದೇವಿ ಕಾಣಿಸುತ್ತಾಳೆ.

ಅಕ್ಕನ ಬದುಕನ್ನು ಇತಿಹಾಸದ ಚೌಕಟ್ಟಿನಲ್ಲಿಟ್ಟು ವಿಶ್ಲೇಷಿಸಿದಾಗ ಅದು ತುಂಬ ವಿಶಿಷ್ಟವಾಗಿ, ಅರ್ಥಪೂರ್ಣವಾಗಿ ಕಾಣುತ್ತದೆ. ಆ ಕಾಲಮಾನದ ದೃಷ್ಟಿಯಿಂದಂತೂ ಆಶ್ಚರ್ಯವೆನಿಸುವಷ್ಟು ಸ್ವತಂತ್ರವಾಗಿದೆ. ಅಕ್ಕ ತನ್ನ ವೈಯಕ್ತಿಕ ಬದುಕು, ಸಾರ್ವಜನಿಕ ಬದುಕು ಎರಡರಲ್ಲೂ ಅವಳು ತುಂಬ ವೈಶಿಷ್ಟ್ಯವನ್ನು ಮೆರೆಯುತ್ತಾಳೆ. ಹಾಗೆ ನೋಡಿದರೆ 'ಸಾರ್ವಜನಿಕ ಬದುಕು' ಪಡೆದ ಭಾರತೀಯ ಸ್ತ್ರೀಯರ ಬೆರಳೆಣಿಕೆಯ ಸಾಲಿಗೆ ಅಕ್ಕನೂ ಸೇರಿದ್ದಾಳೆ. ಮನೆಯೊಳಗೆ ದುಡಿಯುವ ಭಾರತೀಯ ಹೆಣ್ಣಿಗೆ, ಮನೆಯ ಹೊರಗೆ ಸಾಮಾಜಿಕ, ಸಾರ್ವಜನಿಕ ಅಸ್ತಿತ್ವ ವೆಂಬುದೇ ಇರಲಿಲ್ಲ. ಅಕ್ಕನ ಬದುಕು ಈ ವೈಶಿಷ್ಟ್ಯವನ್ನು ಪಡೆದ ಅಪರೂಪದ ಬದುಕು. ಅಕ್ಕನ ವೈಯಕ್ತಿಕ ಬದುಕು, ಸಾರ್ವಜನಿಕ ಬದುಕು ಎರಡರ ನಡುವಿನ ಗೆರೆ ತೀರಾತೆಳು. ಏಕೆಂದರೆ ಯಾವುದೋ ಒಂದು ತತ್ವ, ಶ್ರದ್ಧೆ ನಂಬಿಕೆಗಾಗಿ ಅವಳು ತನ್ನ ಬದುಕನ್ನು ತೆತ್ತುಕೊಂಡವಳು.

ಚಾರಿತ್ರಿಕ ವ್ಯಕ್ತಿಗಳ ಬದುಕನ್ನು ಎಷ್ಟೋ ಶತಮಾನಗಳ ನಂತರ ಇಂದು ಕುಳಿತು ವಿಶ್ಲೇಷಿಸುವುದು ಕಷ್ಟದ ಕೆಲಸ. ತತ್ವ, ಧರ್ಮವಾಗಿ ಬದಲಾಗಿರುವಾಗಲಂತೂ ಇದು ಇನ್ನೂ ಕಷ್ಟದ ಕೆಲಸ. ಮನುಷ್ಯರೆಲ್ಲ ದೇವರುಗಳಾಗಿ, ಅವರು ಮಾತನಾಡಿದ್ದೆಲ್ಲ ದೇವವಾಣಿ ಯಾಗಿ ಬದಲಾಗಿರುತ್ತದೆ. ಪವಾಡ, ದಂತಕಥೆ, ಪುರಾಣ ಕಲ್ಪನೆಗಳು ವಾಸ್ತವವನ್ನು ಮೂಲೆಗೆ ತಳ್ಳಿರುತ್ತವೆ. ಅಕ್ಕನ ಬದುಕು ಕೂಡ ಇದಕ್ಕೆ ಹೊರತಲ್ಲ. ಅವಳ ಬದುಕಿನ ವಿವರಗಳೇನೋ ನಾನಾ ಮೂಲಗಳಿಂದ ಸಿಗುತ್ತವೆ. ಆದರೆ ಯಾವುದು ಎಷ್ಟು ನಿಜ ಎಂಬುದು ಮಾತ್ರ ಖಚಿತವಲ್ಲ. ಅವಳ ಸಮಕಾಲೀನರು ಹತ್ತಿರದವರು ಕೂಡ ಪೌರಾಣಿಕ ಕನ್ನಡಕ ಹಾಕಿಕೊಂಡೇ ಅವಳನ್ನು ಕಂಡಿದ್ದಾರೆ. ಅಷ್ಟಾದರೂ ಅಕ್ಕನ ಬದುಕಿನ ಬಗ್ಗೆ ಅವರು ಕೊಟ್ಟಿರುವ ವಿವರಗಳು ಆಧುನಿಕರಾದ ನಮ್ಮನ್ನೂ ಬೆಚ್ಚಿಬೀಳಿಸುತ್ತವೆ. ಇವೆಷ್ಟು ಆಧುನಿಕವಾಗಿವೆ ಎಂದರೆ ಇಂದಿನ ದಿನಗಳಲ್ಲೂ ಧಾರ್ಮಿಕ ಶ್ರದ್ಧೆಯುಳ್ಳವರು, ಸನಾತನಿಗಳು ಇವುಗಳನ್ನು ಒಪ್ಪಿಕೊಳ್ಳಲು ನಿರಾಕರಿಸುತ್ತಾರೆ!

ಹೆಂಡತಿಯಾದವಳಿಗೆ ಗಂಡನೇ ಪರಮದೈವ, ಅವನು ಎಂಥವನಾದರೂ ಸಹಿಸಿಕೊಂಡು ಬದುಕಬೇಕು ಎಂಬ ಪತಿವ್ರತಾಧರ್ಮ ಬೋಧಿಸಿದ ದೇಶ ಇದು. ಪ್ರಾಚೀನ ಕಾಲದಿಂದ ಇವತ್ತಿನವರೆಗೂ ಇದು ಹೆಣ್ಣಿನ ಆದರ್ಶವಾಗಿಯೇ ಉಳಿದಿದೆ. ಆದರೆ ಇದನ್ನು ಅಕ್ಕಮಹಾದೇವಿ ಒಪ್ಪಿಲ್ಲವೆಂಬುದೇ ವಿಶೇಷ. ತಂದೆ ತಾಯಿಗಳ ಮಾತನ್ನು ಮೀರಲಾರದೆ ಅಕ್ಕಮಹಾದೇವಿ ಕೌಶಿಕನನ್ನು ಮದುವೆಯಾದಳು. ಆದರೆ ಅವನೊಡನೆ ಇರುವುದು ಸರಿಕಾಣದೆ ಅವನ ಮನೆಯಿಂದ ಹೊರಬಂದಳು. ನಂತರ ಅನುಭವ ಮಂಟಪವನ್ನು ಸೇರಿಕೊಂಡಳು – ಎಂಬ ವಿವರಗಳು ಅವಳ ಬದುಕಿನ ಬಗ್ಗೆ ದೊರೆಯುತ್ತವೆ. ಇದು ನಿಜವೇ ಆಗಿರುವುದಾದರೆ, ಹನ್ನೆರಡನೆಯ ಶತಮಾನದ ಕಾಲಕ್ಕೆ ಒಬ್ಬ ಹೆಂಡತಿ ಧೈರ್ಯ ದಿಂದ ತನ್ನ ಗಂಡನನ್ನು ತೊರೆಯುವ ನಿರ್ಧಾರ ತಳೆಯುವುದು ಅದ್ಭುತ ವಿಚಾರವೇ ಸರಿ. ಅಕ್ಕ ಹೀಗೆ ಗಂಡನನ್ನು ಬಿಟ್ಟು ಬರುವ ಧೈರ್ಯ ಮಾಡಿದ್ದೂ ದೊಡ್ಡದು. ಗಂಡನನ್ನು ಬಿಟ್ಟು ಬಂದವಳನ್ನು ತನ್ನ ಅಂಗವಾಗಿ ಒಪ್ಪಿಕೊಂಡ ವಚನ ಚಳವಳಿಯ ಆದರ್ಶವೂ ದೊಡ್ಡದು. ಇದೇ ರೀತಿ ಅಕ್ಕ ನಾಗಮ್ಮ ಮತ್ತು ಅವಳ ಮಗುವನ್ನು ತಮ್ಮ ಗುಂಪಿಗೆ ಸೇರಿಸಿಕೊಂಡದ್ದು ಕೂಡ ಒಂದು ಕ್ರಾಂತಿಕಾರಕ ವಿಚಾರವೇ.

ವಚನ ಚಳವಳಿಯಲ್ಲಿ ಭಾಗವಹಿಸಿದ ಸ್ತ್ರೀಯರ ಪೈಕಿ ಬಹುಪಾಲು ಮಂದಿ ತಮ್ಮ ಗಂಡಂದಿರನ್ನು ಅನುಸರಿಸಿಕೊಂಡು ಚಳವಳಿಗೆ ಬಂದವರು. ಚಳವಳಿಗಳಲ್ಲಿ ಸ್ತ್ರೀಯರ ಪಾಲ್ಗೊಳ್ಳುವಿಕೆ ತೀರಾ ವಿರಳ ಅಥವಾ ಇರುವುದೇ ಇಲ್ಲ. ಆದರೆ ವಚನ ಚಳವಳಿಯಲ್ಲಿ ಅನೇಕ ಮಂದಿ ಹೆಂಗಸರು ಪಾಲ್ಗೊಂಡು ವಚನಗಳನ್ನು ರಚಿಸಿದ್ದಾರೆ. ವಚನಕಾರ್ತಿಯರಲ್ಲಿ ಬಹುಪಾಲು ಮಂದಿ ಯಾರಾದರೊಬ್ಬ ವಚನಕಾರನ 'ಪುಣ್ಯಸ್ತ್ರೀ'ಯರಾಗಿದ್ದಾರೆ. ಇಲ್ಲಿ ಸ್ತ್ರೀಯರು ತಮ್ಮ ಗಂಡಂದಿರನ್ನು ಅನುಸರಿಸಿಕೊಂಡು ಬಂದದ್ದಕ್ಕೂ ಕಾರಣವಿದೆ. ವಚನ ಚಳವಳಿ ಪ್ರಮುಖವಾಗಿ ಕಾಯಕ ಜೀವಿಗಳ ಚಳವಳಿ. ಕಾಯಕಜೀವಿಗಳ ವೃತ್ತಿಯಲ್ಲಿ ಗಂಡು ಹೆಣ್ಣು ಇಬ್ಬರೂ ಪಾಲ್ಗೊಳ್ಳುವುದು ಅನಿವಾರ್ಯ. ಕುಂಬಾರ, ನೇಕಾರ, ಸಮಗಾರ ಮುಂತಾದ ವೃತ್ತಿಜೀವಿಗಳ ಕುಟುಂಬದಲ್ಲಿ ಹೆಣ್ಣು-ಸುಮ್ಮನೆ ಕೂಡಲು ಸಾಧ್ಯವಿಲ್ಲ. ಗಂಡಸಿನ ಜೊತೆ ಅವಳೂ ಸಮನಾಗಿ ದುಡಿಯಬೇಕು. ಕಾಯಕಜೀವಿಗಳೇ ತುಂಬಿದ್ದ ಈ ಸಂಘಟನೆ ವೃತ್ತಿಜೀವಿ ಪುರುಷನ ಜೊತೆ ವೃತ್ತಿಜೀವಿ ಹೆಣ್ಣನ್ನೂ ಒಳಗೊಂಡಿದ್ದು ತೀರ ಸಹಜವೆನ್ನಿಸುತ್ತದೆ. ಗಂಡ ಈ ಚಳವಳಿಯತ್ತ ಆಕರ್ಷಿತನಾದಾಗ ಹೆಂಡತಿಯೂ ಸಹಜವಾಗಿ ಆಕರ್ಷಿತಳಾದಳು. ಗಂಡ ಒಪ್ಪಿದ ತತ್ವವನ್ನು, ದೇವರನ್ನು ಒಪ್ಪದಿದ್ದರೆ, ಅವಳು ಮಾತು ಕೇಳಬೇಕಾಗಿತ್ತು. "ಗಂಡ ಶಿವದೇವರ ಭಕ್ತ, ಹೆಂಡತಿ ಮಾರಿ ಮಸಣಿಯ ಭಕ್ತೆ" ಎಂಬ ಹೀಗಳಿಕೆ ಅವಳ ಪಾಲಿಗೆ ದೊರೆಯುತ್ತಿತ್ತು. ತನಗೆ ಬೇಕಾದ ದೈವವನ್ನು ನಂಬುವ ತನಗೆ ಬೇಕಾದುದನ್ನು ಆಚರಿಸುವ ಸ್ವಾತಂತ್ರ್ಯ ಅವಳಿಗಿರಲಿಲ್ಲ. ಗಂಡ ಒಪ್ಪಿಕೊಂಡ ದೇವರನ್ನು ಮತ್ತು ಧರ್ಮವನ್ನು ಹೆಂಡತಿಯೂ ಒಪ್ಪಿಕೊಳ್ಳಬೇಕು. ಅದೇ ಅವಳ ಸತೀಧರ್ಮ ಎಂದು ವಚನಕಾರರೂ ನಂಬಿದ್ದರು. ಆದರೆ ಈ ನಿಯಮ ಅಕ್ಕಮಹಾದೇವಿಗೆ ಅನ್ವಯಿಸಿಲ್ಲ. ಧರ್ಮ ಮತ್ತು ತತ್ವಾನುಸರಣೆಯ ವಿಚಾರದಲ್ಲಿ ಅವಳು ಗಂಡನನ್ನು ಅನುಸರಿಸದ ಸ್ವತಂತ್ರೆ. ಅವಳು ಯಾವೊಬ್ಬ ವಚನಕಾರನ 'ಪುಣ್ಯ ಸ್ತ್ರೀ' ಆಗಿಲ್ಲ. ಅಷ್ಟೇ ಅಲ್ಲ. ಅವಳ ಬದುಕಿನ ಕಥೆ ನಂಬುವುದಾದರೆ, ಶಿವಭಕ್ತನಲ್ಲ ಎಂಬ ಕಾರಣಕ್ಕೆ ಗಂಡನನ್ನೇ ಬಿಡುತ್ತಾಳೆ.

ಇಂಥದೊಂದು ತಾತ್ವಿಕ ಕಾರಣಕ್ಕೆ ಗಂಡನನ್ನು ತೊರೆದ ಸ್ತ್ರೀಯರ ಉದಾಹರಣೆ ನಮ್ಮ ಇತಿಹಾಸದಲ್ಲಿ ಅಪರೂಪ. ಗಂಡನ ನೆರಳಾಗಿ ಬಾಳಲು ಇಚ್ಛಿಸದೆ. ತಾನು ನಂಬಿದ್ದನ್ನು ಅನುಸರಿಸಲು ಹೊರಟ ಹೆಣ್ಣಿನ ಉದಾಹರಣೆ ಬಹುಶಃ ಇದೇ ಮೊದಲನೆಯದಿರಬೇಕು. ನಮ್ಮ ದೇಶದ ಇತಿಹಾದಲ್ಲಿ ದಿಟ್ಟ ನಿಲುವಿನ ಹೆಣ್ಣುಗಳು ಕಾಣಸಿಗುವುದು ಅಪರೂಪ. ನಮ್ಮ ಪುರಾಣೇತಿಹಾಸಗಳು ತುಂಬಿರುವುದು ಪತಿವ್ರತೆಯರಿಂದ. ಅಷ್ಟೆಲ್ಲ ಭಂಗ ಅನುಭವಿಸಿದರೂ ದ್ರೌಪದಿಗೆ ಗಂಡಂದಿರನ್ನು ಬಿಡಲು ಆಗಲಿಲ್ಲ. ಅವಳಿಗಿಂತ ಸೀತೆಯೇ ಕೊಂಚ ವಾಸಿ. ಭಂಗ ಅನುಭವಿಸಿ ಸಾಕಾಗಿ ಕೊನೆಗೆ ವಾಲ್ಮೀಕಿ ಆಶ್ರಮದಲ್ಲಿದ್ದು ಹೊರಟು ಹೋಗುತ್ತಾಳೆ. ರಾಮನಿಲ್ಲದೆ ವಾಲ್ಮೀಕಿ ಆಶ್ರಮದಲ್ಲಿ ಸ್ವತಂತ್ರವಾಗಿ ಬಾಳಲು ಇಚ್ಛಿಸದಿದ್ದರೂ ರಾಮನನ್ನೂ ನಿರಾಕರಿಸುವಷ್ಟರ ಮಟ್ಟಿಗೆ ಅವಳದು ದಿಟ್ಟ ನಿಲುವು. ಗಂಡಬಿಟ್ಟರೂ ಅಥವಾ ಗಂಡನನ್ನು ಬಿಟ್ಟರೂ ಸ್ವತಂತ್ರವಾಗಿ ಬಾಳಿ ಬದುಕುವ ದಿಟ್ಟತನ ಎಷ್ಟು ಮಂದಿಗಿತ್ತು? ಅಕ್ಕನಿಗೆ ಇದಕ್ಕೆ "ಮಾಡೆಲ್"ಗಳು ಯಾರೂ ಇರಲಿಲ್ಲ. ದಿಟ್ಟ ನಿಲುವಿನ ಅಕ್ಕ ಹೆಣ್ಣಿನ ಸ್ವತಂತ್ರ ಮನೋಭಾವದ ಸಂಕೇತವಾಗಿ ಕಾಣುತ್ತಾಳೆ.

ವೈಯಕ್ತಿಕ ಬದುಕಿನಲ್ಲಿ ಇಂಥ ನಿರ್ಧಾರ ತೆಗೆದುಕೊಂಡ ಅಕ್ಕಮಹಾದೇವಿ ಮುಂದೆ ಬಸವಣ್ಣ ಮುಂತಾದವರ ಬೆಂಗಾವಲಿನಲ್ಲಿ ಇರುತ್ತಾಳೆ. ಗಂಡು-ಹೆಣ್ಣು ಸೇರಿದರೆ ಬರೀ ಪ್ರೇಮ

ಕಾಮು ಎಂಬ ಮಾತನ್ನು ಸುಳ್ಳಾಗಿಸಿ ಸಮಾನ ಮನೋಧರ್ಮದ ಸ್ನೇಹಿತೆಯಾಗಿ ಅವಳು ಆ ಪುರುಷರೆಲ್ಲರ ಜೊತೆ ವಚನಚಳವಳಿಯಲ್ಲಿ ಸಾಗಿದ್ದಾಳೆ. ಹೆಣ್ಣು, ಗಂಡಸಿನ ಪ್ರೇಯಸಿಯಾಗದೆ ಸಮಾನ ಸ್ಪಂದನವಿರುವ ಸ್ನೇಹಿತೆಯಾಗಿರುವ ಉದಾಹರಣೆ ಮಹಾಭಾರತದ ಶ್ರೀಕೃಷ್ಣ–ದ್ರೌಪತಿಯರ ಸಂಬಂಧದಲ್ಲಿ ಕಾಣುತ್ತದೆ. ಅಕ್ಕ ಅನುಭವ ಮಂಟಪದ ಪುರುಷ ಸದಸ್ಯರ ಜೊತೆ ಬೌದ್ಧಿಕ ಸಂವಾದ ನಡೆಸುತ್ತಾ ಅಲ್ಲಿ ತನ್ನ ವ್ಯಕ್ತಿತ್ವವನ್ನು ಹದಗೊಳಿಸಿ ಕೊಂಡಿದ್ದಾಳೆ. ಅಲ್ಲಿಯೂ ಅವಳಿಗೆ ಭರ್ತ್ಸನೆ, ಪರೀಕ್ಷೆಗಳು ಇಲ್ಲದೇ ಹೋಗಿಲ್ಲ. ಆದರೂ ಬಸವಾದಿಗಳು ತನ್ನನ್ನು ಚೆನ್ನಾಗಿ ನಡೆಸಿಕೊಂಡದ್ದರ ಬಗ್ಗೆ ಅವಳಿಗೆ ಅಪಾರ ಕೃತಜ್ಞತೆಯಿದೆ. ತಾನು ಅವರೆಲ್ಲರ ಮನೆಯ ತೊತ್ತಿನ ಮಗಳು ಎಂದು ಅಕ್ಕ ಹೇಳಿಕೊಳ್ಳುತ್ತಾಳೆ. "ಭವಿಯ ಸಂಗವ ತೊರೆದು ಭವ ಬಾಧೆ ಹರಿದಳು" ಎಂದು ಅವಳ ನಿರ್ಧಾರವನ್ನು ಪುರುಷರು ಮೆಚ್ಚಿದ್ದಾರೆ.

ಅಕ್ಕನ ಒಂಟಿ ಬದುಕು ಅವಳಿಗೆ ಸಾಕಷ್ಟು ತೊಂದರೆಯನ್ನು ಕೊಟ್ಟಿರಬಹುದು. ಅವಳ ಬಗ್ಗೆ ಇಲ್ಲಸಲ್ಲದ ಮಾತು ಬಂದಿರಬಹುದು. ಅಂಥವರಿಗೆ ಉತ್ತರಿಸುವ ಹಾಗೆ ಅವಳು "ಶೀಲ ಶೀಲ ಎಂತೆಂಬಿರಯ್ಯ ಶೀಲದ ನೆಲೆಯ ಬಲ್ಲೆಡೆ ಹೇಳೀರೋ" ಎಂದು. "ಹಣ್ಣ ಮೆದ್ದ ಬಳೀಕ ಆ ಮರನ ಆರು ತರಿದರೇನು? ಹೆಣ್ಣ ಬಿಟ್ಟ ಬಳಿಕ ಆಕೆಯನಾರು ಕೂಡಿಕೊಂಡರೇನು?" ಎಂದು ನಮ್ಮ ಸಮಾಜದ ಕಡು ವ್ಯಸನವಾದ ಹೆಣ್ಣಿನ ಶೀಲದ ಚಿಂತೆಯನ್ನು ಟೀಕಿಸಿ ಸವಾಲು ಹಾಕಿದ್ದಾಳೆ. ಶೀಲದ ಬಗ್ಗೆ ಹೆಣ್ಣಿನ ಬಾಯಲ್ಲಿ ಬಂದ ಮಾತುಗಳಿವು ಎಂಬುದು ಗಮನಾರ್ಹ. ಒಂಟಿ ಹೆಣ್ಣಾಗಿ ಅವಳು ಬೇರೆ ಗಂಡಸರಿಂದ ಕಾಟವನ್ನೂ ಅನುಭವಿಸರಬೇಕು. ಅದರ ಬಗ್ಗೆ ಅವಳು ತನ್ನ ವಚನಗಳಲ್ಲಿ ನೋವು ತೋಡಿಕೊಂಡಿದ್ದಾಳೆ. "ಮುಡಿಬಿಟ್ಟು ಮೊಗಬಾಡಿ ತನು ಕರಗಿದವಳ ಎನ್ನನೇಕೆ ನಡಿಸುವಿರಿ ಅಣ್ಣಗಳಿರಾ? ಎನ್ನನೇಕೆ ಕಾಡುವಿರಿ ಎಲೆ ತಂದೆಗಳಿರಾ? ಬಲುಹಳಿದು ಭವಗೆಟ್ಟು ಛಲವಳಿದು ಭಕ್ತೆಯಾಗಿ ಚೆನ್ನಮಲ್ಲಿಕಾರ್ಜುನನ ಕೂಡಿ ಕುಲವಳಿದವಳ" ಎಂದು ಕಾಡುವ ಗಂಡಸರನ್ನು ಕುರಿತು ಕೇಳುತ್ತಾಳೆ. "ಬಟ್ಟಹ ಮೊಲೆಯ ಭರವ ಜವ್ವನದ ಚೆಲುವ ಕಂಡು ಬಂದಿರಣ್ಣಾ, ಅಣ್ಣಾ ನಾನೂ ಹೆಂಗೂಸಲ್ಲ, ಅಣ್ಣಾ ನಾನು ಸೂಳೆಯಲ್ಲ, ಅಣ್ಣಾ ಮತ್ತೆ ನನ್ನ ಕಂಡು ಆರೆಂದು ಬಂದಿರಣ್ಣ? ಚೆನ್ನಮಲ್ಲಿಕಾರ್ಜುನನಲ್ಲದ ಮಿಕ್ಕಿನ ಪುರುಷರು ನಮಗಾಗದ ಮೋರೆ ನೋಡಣ್ಣಾ" ಎನ್ನುವ ಅವಳ ನೋವಿನ ಅಳಲು ಹೆಂಗಸರಾದ ನಮಗೆ ಹೆಚ್ಚು ಚೆನ್ನಾಗಿ ಅರ್ಥವಾಗುತ್ತದೆ. ಈ ಕಾಡುವ ಅಣ್ಣಂದಿರಿಂದ ತನ್ನನ್ನು ರಕ್ಷಿಸಿಕೊಳ್ಳಲು ಅವಳಿಗೆ ಚೆನ್ನಮಲ್ಲಿಕಾಜುನನೇ ಗತಿ, ತಾನು ಅವನಿಗೆ ಸೇರಿದವಳು, ಅವನೊಬ್ಬನೇ ನನ್ನ ಗಂಡ ಎಂದು ಸಾರಿ ಅವಳು ಈ ಲೋಕದ ಗಂಡಸರನ್ನು ನಿವಾರಿಸಿಕೊಳ್ಳುತ್ತಾಳೆ. ಗಂಡಸರನ್ನು ದೂರವಿಡಲು, ದೇವರೇ ಗಂಡನೆಂಬ ಭ್ರಮೆಯನ್ನು ಅಪ್ಪಿಕೊಳ್ಳುವುದು ಅವಳಿಗೆ ಅನಿವಾರ್ಯವಾಗಿತ್ತೋ ಏನೋ!

ಅಕ್ಕನ ಬದುಕು ಒಟ್ಟಿನಲ್ಲಿ ಸಮಾಜ ಹೆಣ್ಣಿಗೆ ವಿಧಿಸುವ ಚೌಕಟ್ಟಿಗೆ ಒಳಪಡುವುದಿಲ್ಲ. ದಿಟ್ಟನಿಲುವು ತಳೆಯುವ ಹೆಣ್ಣು ಏನೇನು ಕಷ್ಟ ಅನುಭವಿಸುತ್ತಾಳೋ ಅದೆಲ್ಲವನ್ನೂ ಅವಳು ಅನುಭವಿಸಿದ್ದಾಳೆ. ಆದರೆ ಇದನ್ನು ಎದುರಿಸುವ ಧೈರ್ಯವೂ ಅವಳಿಗಿದೆ. "ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯ... ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದನೆಗಳು ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು" ಎನ್ನುವಂತಹದ ಮನಃಸ್ಥಿತಿಯನ್ನು ಅವಳು ಪ್ರದರ್ಶಿಸುತ್ತಾಳೆ. ಇದು ಒಬ್ಬ ಹೆಣ್ಣಿನ ಮಾತು

ಎನ್ನುವುದು ತುಂಬಾ ಮುಖ್ಯ. ಸದಾ ಗಂಡನಿಗೆ ಅಂಜಿ, ಅತ್ತೆಮಾವಂದಿರಿಗಂಜಿ, ಸುತ್ತೇಳು ನೆರೆಗಂಜಿ, ಸಮಾಜಕ್ಕೆ ಅಂಜಿ ಬದುಕುವುದೇ ಹೆಣ್ಣಿನ ಹಣೆಬರಹ. ಅಂತಹುದರಲ್ಲಿ ನಾನು ಇದಕ್ಕೆಲ್ಲ ಹೆದರುವುದಿಲ್ಲ ಎಂದು ಅಕ್ಕ ಹೇಳುತ್ತಾಳೆ. ಅವಳು ಯಾವುದಕ್ಕೂ "ಕೇರ್" ಮಾಡಿಲ್ಲ. "ಹಸಿವಾದರೆ ಊರೊಳಗೆ ಭಿಕ್ಷಾನ್ನಂಗಳುಂಟು, ತೃಷೆಯಾದರೆ ಕೆರೆಬಾವಿ ಹಳ್ಳಂಗಳುಂಟು, ಶಯನಕ್ಕೆ ಹಾಳುದೇಗುಲವುಂಟು, ಚೆನ್ನಮಲ್ಲಿಕಾರ್ಜುನ ಆತ್ಮಸಂಗಾತಕ್ಕೆ ನೀನೆನಗುಂಟು" ಎಂದು ಒಬ್ಬ ಹೆಣ್ಣು ಹೇಳಬೇಕಾದರೆ ಅವಳಿಗೆಷ್ಟು ಧೈರ್ಯ ಇರಬೇಕು! ಮನೆ, ಕುಟುಂಬ ಇಲ್ಲದೆ ಹೆಣ್ಣಿಗೆ ಅಸ್ತಿತ್ವವೇ ಇಲ್ಲ ಎಂದು ಭಾವಿಸಿದ್ದ ಮತ್ತು ಭಾವಿಸುತ್ತಿರುವ ಸಮಾಜದಲ್ಲಿ ಇಂಥ ನಿಲುವು ತೀರ ಅಪರೂಪ.

ಅಕ್ಕನ ವೈಯಕ್ತಿಕ ಬದುಕಿನಲ್ಲಿ ತಳೆದ ಈ ದಿಟ್ಟ ನಿಲವು ಅವಳ ಸಾಮಾಜಿಕ ದೃಷ್ಟಿಕೋನವಾಗಿ ಗಟ್ಟಿಗೊಳ್ಳದಿರುವುದಕ್ಕೆ ಕಾಲ ಹೇರಿದ ಮಿತಿಗಳೇ ಕಾರಣವಿರಬೇಕು. ಅವಳ ವಚನಗಳನ್ನು ಓದಿದಾಗ ಕೆಲವೆಡೆ ಗಂಡಸಿನ ವಿಚಾರಧಾರೆಯೇ ಪುನರುಚ್ಚಾರ ಗೊಂಡಿದೆ ಎಂದು ಅನ್ನಿಸುತ್ತದೆ. ಅಕ್ಕನ ದೃಷ್ಟಿಯಲ್ಲಿ ಹೆಣ್ಣು ಹೊನ್ನು, ಮಣ್ಣುಗಳು ಸಾಧನೆಗೆ ಅಡ್ಡಿ, ಯೋಗಿಗೆ ಯೋಗಿಣಿಯಾಗಿ ಕಾಡುವ ಹೆಣ್ಣಿನ ಮಾಯೆಯ ಬಗ್ಗೆ ಅವಳೂ ಹೇಳುತ್ತಾಳೆ. ಸಂಸಾರ ಬಿಟ್ಟು ಬಂದಿದ್ದರೂ ಈ ಸಂಸಾರ ಸಾಗರ, ಭವಬಂಧನಗಳ ಬಗ್ಗೆ ಹಲುಬುತ್ತಾಳೆ. ಅಕ್ಕನ ವಚನಗಳಲ್ಲಿ ಸಾಮಾಜಿಕ ಬದುಕಿನ ನೋಟಗಳು ಸಿಗುವುದು ಕಡಿಮೆ. ಪುರುಷ ವಚನಕಾರರಂತೆ ಅವಳೂ ತತ್ವಗಳ ಬಗ್ಗೆ ಮಾತನಾಡಿದ್ದಾಳೆಯೇ ಹೊರತು ಹೆಣ್ಣಾಗಿ ಸಾಮಾಜಿಕ ವಿಚಾರಗಳ ಬಗ್ಗೆ ಹೆಚ್ಚಿಗೇನನ್ನೂ ಹೇಳುವುದಿಲ್ಲ. ಭವ ಬಂಧನ, ಮಾಯೆ, ಭಕ್ತಿ, ಧರ್ಮಬಿಟ್ಟರೆ ಅವಳ ವಚನಗಳನ್ನು ತುಂಬಿಕೊಂಡಿರುವುದು ಚೆನ್ನಮಲ್ಲಿಕಾರ್ಜುನನಿಗೆ ಮೊರೆಯಿಡುವ ಆರ್ತಭಾವ. "ವೇದಶಾಸ್ತ್ರಾಗಮ ಪುರಾಣಂ ಗಳೆಂಬುವ ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು ಕಾಣಿಭೋ ಅವ ಕುಟ್ಟಲೇಕೆ? ಅತ್ತಲಿತ್ತ ಹರಿವ ಮನದ ಶಿರವನರಿಯ ಬಲ್ಲಡೆ ಬಚ್ಚ ಬರಿಯ ಬಯಲು ಚೆನ್ನಮಲ್ಲಿಕಾರ್ಜುನ" ಎಂಬಂಥ ಚೂಪಾದ ಮಾತು, ಪರಂಪರೆಯ ವಿರೋಧ ಅವಳ ಇತರ ವಚನಗಳಲ್ಲಿ ಕಾಣುವುದಿಲ್ಲ. ಸಾಮಾಜಿಕ ಅನ್ಯಾಯಗಳ ಬಗ್ಗೆ ಹರಿತವಾಗಿ ಟೀಕಿಸುವ ಬಸವಣ್ಣನ ವಚನಗಳ ನೆಲೆಗಿಂತ ಅಕ್ಕನದು ತೀರಾ ಭಿನ್ನ.

ಅಕ್ಕ ಕಾಯಕತತ್ವವನ್ನು ಕುರಿತೂ ಮಾತನಾಡುವುದಿಲ್ಲ. ಇದಕ್ಕೆ ಅವಳು ಇತರ ವಚನಕಾರ್ತಿಯರಂತೆ ವೃತ್ತಿಜೀವಿ ಕೆಳವರ್ಗಕ್ಕೆ ಸೇರಿಲ್ಲದಿರುವುದೇ ಕಾರಣವಾಗಿರಬಹುದು. ಅಕ್ಕ ಉಡಲು ತೊಡಲು ಅನುಕೂಲವಿದ್ದ ಮನೆಯಲ್ಲಿ ಹುಟ್ಟಿದವಳಿರಬಹುದಾದ್ದರಿಂದ ಅವಳ ವಚನಗಳಲ್ಲಿ ವೃತ್ತಿ ಅಥವಾ ಕಾಯಕದ ಸೂಚನೆಗಳೇನೂ ಕಾಣುವುದಿಲ್ಲ. ಕಾಯಕ ತತ್ತ್ವಗಳನ್ನು ಬೋಧಿಸಿದ ವಚನ ಚಳವಳಿಯಲ್ಲಿ ಹಾಗಾದರೆ ಅಕ್ಕನ ಸ್ಥಾನ ಏನು? ಅವಳು ಮುಖ್ಯವಾಗಿ ಒಬ್ಬ ಬುದ್ಧಿಜೀವಿ. ಬಸವ, ಅಲ್ಲಮ ಮುಂತಾದವರಿಗೆ ಸರಿಸಾಟಿಯಾಗಿ ಆಲೋಚಿಸುವ, ಚರ್ಚಿಸುವ ಅರ್ಹತೆ ಅವಳಿಗಿದ್ದಿರಬೇಕು. ಇತರ ವಚನಕಾರ್ತಿಯರಿಗಿಂತ ಅಕ್ಕನದು ಹೆಚ್ಚಿನ ಬೌದ್ಧಿಕ ಸ್ತರ. ಹಾಗೆ ನೋಡಿದರೆ ಅವಳು ಕನ್ನಡ ಸಾಹಿತ್ಯದ ಮೊತ್ತ ಮೊದಲ ಬುದ್ಧಿ ಜೀವಿಹೆಣ್ಣು. ಅವಳ ಬುದ್ಧಿಮತ್ತೆ, ಶಿವತತ್ವದಲ್ಲಿ ಅಚಲ ನಿಷ್ಠೆ ಇವೆಲ್ಲವನ್ನೂ ಇತರ ವಚನಕಾರರು ಮುಕ್ತವಾಗಿ ಪ್ರಶಂಸೆ ಮಾಡಿದ್ದಾರೆ. ಅವಳ ಒಂದು ವಚನ ಇತರರ ಹತ್ತಿಪ್ಪತ್ತು ವಚನಕ್ಕಿಂತ ಶ್ರೇಷ್ಠ ಎನ್ನಲಾಗಿದೆ. "ಮಹಾದೇವಿಯಕ್ಕನ ನಿಲವಿಂಗೆ ಶರಣೆಂದು ಶುದ್ಧ"

ರಾದವರಿದ್ದಾರೆ. "ಬೇರಿಲ್ಲದಿಪ್ಪ ಹಿರಿಯತನ ನಮ್ಮ ಮಹಾದೇವಿಯಕ್ಕಂಗಾಯಿತ್ತು" ಎಂದು ಅವಳನ್ನು ಹೊಗಳಲಾಗಿದೆ. ಮಹಾದೇವಿಯಕ್ಕನ ಪಾದವ ನೆನೆದು ನಾನು ಬದುಕಿದೆನು" ಎಂದು ಇನ್ನೊಬ್ಬರು ಹೇಳುತ್ತಾರೆ. ನಮ್ಮ ಪುರಾಣಶಾಸ್ತ್ರ, ಇತಿಹಾಸ ಇವುಗಳನ್ನು ಎಷ್ಟು ಜಾಲಾಡಿದರೂ ಒಬ್ಬ ಹೆಣ್ಣನ್ನು ಇಷ್ಟು ಮಂದಿ ಗಂಡಸರು ಒಪ್ಪಿ ಹೊಗಳಿರುವ ಮತ್ತೊಂದು ಉದಾಹರಣೆ ಸಿಗುವುದಿಲ್ಲ. ಹೆಣ್ಣಿನ ಬಗ್ಗೆ ತಿರಸ್ಕಾರವೇ ತುಂಬಿದ್ದ ಸಮಾಜದಲ್ಲಿ ಗಂಡಸರಿಂದ ಸೈ ಅನ್ನಿಸಿಕೊಂಡು ಮನ್ನಣೆ ಪಡೆದ ಮೊದಲ ಹೆಣ್ಣು ಅವಳೆನ್ನಬಹುದು. ಈ ಗೌರವ ಮತ್ತಾವ ವಚನಕಾರ್ತಿಗೂ ದೊರೆತಿಲ್ಲ.

ಹೇಳುವುದನ್ನು ಶಕ್ತವಾಗಿ, ಸುಂದರವಾಗಿ ಹೇಳುವ ಅಕ್ಕ ತೀವ್ರ ಸಂವೇದನೆಯುಳ್ಳ ಕವಿಯತ್ರಿ ಎಂಬುದನ್ನು ಯಾರಾದರೂ ಒಪ್ಪುತ್ತಾರೆ. ಜೊತೆಗೆ ಅವಳು ದಿಟ್ಟ, ಸ್ವತಂತ್ರ ನಿಲುವಿನ ಹೆಣ್ಣೂ ಆಗಿರುವುದು ನಿಜಕ್ಕೂ ವಿಶೇಷ. ಅವಳಂತೆ ಚಳವಳಿಗೆ ಬದ್ಧವಾದ ನಿಲುವುಳ್ಳ ಹೆಣ್ಣು ಮನೋಧರ್ಮವನ್ನು ಕಾಣಲು ಎಷ್ಟೋ ಶತಮಾನಗಳನ್ನು ದಾಟಬೇಕು. ಅದೇ ಅವಳ ಬದುಕಿನ ವಿಶೇಷ.

೮. ಅಕ್ಕನ ಹುಡುಕಾಟದಲ್ಲಿ

●

ಡಾ. ಮೀನಾಕ್ಷಿ ಬಾಳಿ

೧೨ನೇ ಶತಮಾನದ ವಚನ ಚಳವಳಿ ಸಂದರ್ಭದಲ್ಲಿ ಚಾರಿತ್ರಿಕ ವ್ಯಕ್ತಿಯಾಗಿದ್ದ 'ಅಕ್ಕ' ತದನಂತರ ಸಾಂಸ್ಕೃತಿಕ ವಲಯಕ್ಕೆ ಮತ್ತೆ ಮತ್ತೆ ಚರ್ಚೆಗೊಳಗಾಗಬೇಕಾದ ಪ್ರಮೇಯವಾಗಿ ಕಾಣಿಸಿಕೊಳ್ಳುತ್ತಿರುವುದಕ್ಕೆ ತುಂಬಾ ಸಂಕೀರ್ಣವಾದ ಕಾರಣಗಳಿವೆ. ಅವುಗಳಲ್ಲಿ ಪ್ರಧಾನವಾದ ಕಾರಣವೆಂದರೇ ಅಕ್ಕ ಸ್ತ್ರೀತ್ವ ಮತ್ತು ಸ್ತ್ರೀವಾದದ ಪ್ರಮೇಯಕ್ಕೆ ಆಕೃತಿಯಾಗಿ ಒದಗಿ ಬರುತ್ತಿರುವುದೇ ಆಗಿದೆ. ಎಂತಲೇ ವಚನೋತ್ತರ ಕಾಲದ ಪ್ರತಿಯುಗವೂ ತನ್ನ ಸಮಕಾಲೀನ ಜೀವನ ವಿಧಾನ ಮತ್ತು ಕಾಣ್ಕೆಗಳನ್ನು ಅನುಸರಿಸಿ ಅಕ್ಕನನ್ನು ಅರ್ಥೈಸಿಕೊಳ್ಳಬೇಕೆಂಬ ಹಟಕ್ಕೆ ಒಳಗಾದಂತೆ ತೋರುತ್ತದೆ. ಈ ಕಾರಣವಾಗಿಯೇ ಇಂದು ನಮ್ಮ ಎದುರು ಹಲವು ಅಕ್ಕಗಳ ಪ್ರತಿಬಿಂಬಗಳು ಕಾಣಿಸತೊಡಗಿವೆ.

ವಚನಗಳ ಮೂಲಕ ತನ್ನನ್ನು ತಾನು ಸಾದರಪಡಿಸಿಕೊಳ್ಳುತ್ತಿರುವ ಚಾರಿತ್ರಿಕ ಅಕ್ಕ ಒಬ್ಬಳಾದರೆ, ನಂತರದ ಹರಿಹರ ಚಾಮರಸಾದಿಗಳ ಪುರಾಣ ಕಾವ್ಯ ಪರಂಪರೆಯ ಪೌರಾಣಿಕ ಅಕ್ಕ ಮಗದೊಬ್ಬಳು. ೧೫, ೧೬ನೇ ಶತಮಾನದ ಶೂನ್ಯ ಸಂಪಾದನೆಗಳ ತಾತ್ವಿಕ ಭಿತ್ತಿಯ ಆಧ್ಯಾತ್ಮ ಪ್ರತಿಮಾರೂಪ ಮತ್ತೊಬ್ಬಳು. ಇವುಗಳಿಂದ ತೀರ ಭಿನ್ನವಾದ ಅನೌಪಚಾರಿಕ ಮೌಖಿಕ ಪರಂಪರೆಯ ಭಾವುಕ ಭಕ್ತರ ಮನೋಮಂದಿರದಲ್ಲಿ ಸ್ಥಾಪ್ಯಳಾದ ಅಕ್ಕನ ಬಳಗಗಳ ವೀರ ವೈರಾಗ್ಯನಿಧಿ ಅಕ್ಕ ಇನ್ನೋರ್ವಳು. ಇವುಗಳಲ್ಲದೆ ಆಧುನಿಕ, ಆಧುನಿಕೋತ್ತರ ಕಾಲದ ಹೊಸ ಓದಿನ ಮಹಿಳಾ ಜಗತ್ತಿನ ಸಾಮಾಜಿಕ ಎಚ್ಚರದ ಹುಡುಕಾಟದಲ್ಲಿ ಅಕ್ಕ ಮಗದೋರ್ವಳು. ಹೀಗೆ ಅಕ್ಕಗಳ ಪ್ರತಿಮಾ ಬಿಂಬಗಳು ಆಯಾ ಯುಗಮಾನದ ಸಂದರ್ಭಕ್ಕೆ ಸ್ಮೃತಿಗೊಳ್ಳುತ್ತಲೇ; ಒಂದರ್ಥದಲ್ಲಿ ಪುನರ್ ಹುಟ್ಟು ಪಡೆದುಕೊಳ್ಳುತ್ತಲೇ ಇವೆ. ಅಕ್ಕನ ವ್ಯಕ್ತಿತ್ವದ ಸಾಧ್ಯತೆಯೇ ಈ ತೆರನ ಪುನರ್‌ಸೃಷ್ಟಿಯಲ್ಲಿ ಹರಳುಗಟ್ಟಿಕೊಳ್ಳುತ್ತದೆ. ಆ ಅಂದಿನ ಚಾರಿತ್ರಿಕ ಅಕ್ಕನಿಂದ ಹಿಡಿದು ಇಂದಿನ ಸ್ತ್ರೀವಾದಿ ಹಿನ್ನೆಲೆಯ ಅಕ್ಕನನ್ನು ಹಲವು ಅಧ್ಯಯನ ಶಿಸ್ತುಗಳ ಅಡಿಯಲ್ಲಿ ಅಧ್ಯಯನಿಸ ಬೇಕಾದ ತುರ್ತು ನಮ್ಮೆದುರು ಇದೆ. ಈ ಎಲ್ಲ ಅಕ್ಕ ಬಿಂಬಗಳ ಅಧ್ಯಯನವು ಒಟ್ಟು ಕನ್ನಡ ಮನಸ್ಸುಗಳ ಸಾಂಸ್ಕೃತಿಕ ಲೋಕಾನ್ವೇಷಣೆಯಾಗಬಹುದು. ಅಷ್ಟೇ ಅಲ್ಲ ಸ್ತ್ರೀಲೋಕದ ಅಧಿಕೃತ ಚರಿತ್ರೆಯ ಅನಾವರಣವೂ ಆಗಬಲ್ಲದು. ಶೂನ್ಯ ಸಂಪಾದನೆಗಳ ಭಿನ್ನ ಭಿನ್ನ ಕೃತಿಗಳಲ್ಲಿ

ಕಂಡರಿಸಲ್ಪಟ್ಟ ಅಕ್ಕನ ಪ್ರಸಂಗವನ್ನು ಸೂಕ್ಷ್ಮವಾಗಿ ಗಮನಿಸಿದರೂ ಸಾಕು ಈ ಮಾತಿಗೆ ಪುಷ್ಟಿ ದೊರೆತೀತು. ನಾಲ್ಕು ಸಂಪಾದನೆಗಳಲ್ಲಿ ಅಕ್ಕನ ಪ್ರಸಂಗ ಕುರಿತಂತೆ ಬರುವ ಅಲ್ಪ ಸ್ವಲ್ಪ ಬದಲಾವಣೆಗಳು, ವಿವರಣೆಗಳಲ್ಲಿನ ವ್ಯತ್ಯಾಸಗಳು, ವಚನಗಳ ಹೆಣಿಕೆ ವಿನ್ಯಾಸದಲ್ಲಿರುವ ವೈವಿಧ್ಯತೆ ಇವೆಲ್ಲವೂ ಕಾಲಕಾಲಕ್ಕೆ ಸ್ತ್ರೀಯರನ್ನು ಕಂಡ ಲೋಕದೃಷ್ಟಿಯ ಪರಿಚಯ ಮಾಡಿಕೊಡುತ್ತವೆ.

ಪ್ರಥಮ ಸಂಪಾದನಕಾರ ಶಿವಗಣ ಪ್ರಸಾದಿ ಮಹಾದೇವ ಅಕ್ಕನನ್ನು ಒಬ್ಬ ಅನುಭಾವಿಯಾಗಿ, ಶರಣೆ, ಅದ್ಭುತ ಸಾಧಕಿಯಾಗಿ ಚಿತ್ರಿಸುವಲ್ಲಿ ನಿರತನಾದರೆ, ತದನಂತರದ ಹಲಗೆಯಾರ್ಯನಿಗೆ ಅವಳ ಹೆಣ್ತನ ತುಸ ಹೆಚ್ಚೇ ಚಿಂತೆಗೇಡು ಮಾಡಿದಂತಿದೆ. ಅವಳು ಒಬ್ಬ ಹೆಣ್ಣಾಗಿ ಅದರಲ್ಲೂ ಪುರುಷನನ್ನು ಲೌಕಿಕ ಪತಿಯಾಗಿ ಸ್ವೀಕರಿಸಿದ ಹೆಣ್ಣಾಗಿ ಕಾಣಿಸುತ್ತಾಳೆ. ಕಾಣಿಸುತ್ತಾಳೆ ಎಂಬುದಕ್ಕಿಂತ ಕಾಡುತ್ತಾಳೆ ಎಂಬ ಪದವು ಹೆಚ್ಚು ಸೂಕ್ತ ಮತ್ತು ಸಮರ್ಥನೀಯವೇನೋ? ಆ ಕಾಲದ ಮೌಲ್ಯಗಳಲ್ಲಿ ಹೆಣ್ಣಿನ ರಾಷ್ಟ್ರೀಯ ಉತ್ಪಾದನೆ ಮತ್ತು ಅವಳ ಆಂತರ್ಯದಲ್ಲಿನ ಕೌಶಲ್ಯ ಬಳಕೆಯು ಮುಖ್ಯವಾಗಿಲ್ಲದೇ ಇರುವ ಕಾರಣ ಅವಳ ಸಾಧನೆಗಿಂತ ಹೆಣ್ತನ ಮುಖ್ಯ ವಾಗುತ್ತದೆ. ಆದುದರಿಂದಲೂ ಕಿನ್ನರಿ ಬೊಮ್ಮಯ್ಯ ಅಕ್ಕನನ್ನು ಶಿವಗಣ ಪ್ರಸಾದಿ ಮಹಾದೇವಯ್ಯ ನಲ್ಲಿಗಿಂತ ಹಲಗೆಯಾರ್ಯನಲ್ಲಿ ಅಷ್ಟು ಕಠಿಣವಾಗಿ ಮತ್ತು ದಾರುಣವಾಗಿ ಪರೀಕ್ಷಿಸುತ್ತಾನೆ. ಶಿವಗಣ ಪ್ರಸಾದಿಗಳಲ್ಲಿ ಬೊಮ್ಮಯ್ಯ ಅಕ್ಕನನ್ನು ಕಾಣುವ ವೇಳೆಗಾಗಲೇ ಅವಳು ಚೆನ್ನಮಲ್ಲಿಕಾರ್ಜುನನ ವಿಕಳಾವಸ್ಥೆಯಲ್ಲಿ ತನ್ನನ್ನು ಮರೆತ್ತಿದ್ದಳು. ಇಂಥ ಅಕ್ಕನನ್ನು ಕಿನ್ನರಿ ಬೊಮ್ಮಿ ತಂದೆಗಳು ಪರುಷಿಸಿ (ಸ್ಪರ್ಶಿಸಿ, ಪರೀಕ್ಷಿಸಿ) ನೋಡಲು ಅವಳು ಅಂತರಂಗದ ಜ್ಞಾನಾಗ್ನಿಯೊಳು ಕಾಮನಂ ಸುಟ್ಟು ಭಸ್ಮಮಂ ಮಾಡಿರುತ್ತಾಳೆ. ಆದರೆ ಈ ಪರೀಕ್ಷೆ ಹಲಗೆಯಾರ್ಯನಲ್ಲಿ ತೀರ ಅತಿರೇಕಕ್ಕೆ ಹೋದದ್ದು ಇದೆ. ಹಲಗೆಯಾರ್ಯನ ಬೊಮ್ಮಯ್ಯ ಅಕ್ಕನ "ಸರ್ವಾಂಗ ಸ್ಥಾನಮಾನಂಗಳಂ ಪರುಷಿಸಿ (ಪರೀಕ್ಷಿಸಿ) ನೋಡುತ್ತಾನೆ. ಅಲ್ಲಿ ದೇಹಾಭಿಮಾನಗಳಿಲ್ಲ ದಿರಲಾತಂ ಯೋನಿ ಯೊಳಂಗುಲಿ ಪ್ರವೇಶವಂ ಮಾಡಲು ಅಲ್ಲಿ ಚಿಧ್ಭಸ್ಮ ಉದುರುವದೆಂದು" ಕಾಣಿಸಲಾಗಿದೆ.

ಹೀಗೆ ಅವಳ ಪ್ರತಿಯೊಂದು ಅಂಗವನ್ನು ಸ್ಪರ್ಶ ಪರೀಕ್ಷೆಗೆ ಒಳಪಡಿಸುವ ಮತ್ತು ಪರೀಕ್ಷೆಗೊಳಪಡಿಸಲು ಹಚ್ಚುವ ಮನೋಧರ್ಮ ಇದೆಯಲ್ಲ. ಇದು ಪರಂಪರಾಗತ ವ್ಯವಸ್ಥೆಯ ಪ್ರತಿನಿಧಿತ್ವ ಸೂಚಿಸುತ್ತದೆ. ಹೆಣ್ಣನ್ನ ಮಾಂಸದ ಮುದ್ದೆಯಂತೆ ಭಾವಿಸಿದ ಪುರುಷ ಅವಳು ಭಾವನೆಗಳಿಲ್ಲದ ವಸ್ತು, ಒಡವೆ ಎಂಬ ಪರಿಗಣನೆಯ ಚೌಕಟ್ಟಿಗೆ ತುರುಕಿದ್ದೇ ಇದಕ್ಕೆ ಕಾರಣವಾಗಿದೆ. ಬಹುಶಃ ಶೂನ್ಯಸಂಪಾದನೆಗಳ ಕಾಲಕ್ಕೆ ಇಂತಹ ಪರೀಕ್ಷಾ ವಿಧಾನಗಳು ಸ್ವೀಕೃತವಾಗಿದ್ದವೇನೋ? ಅಥವಾ ಆ ಮೂಲಕ ಅಕ್ಕನನ್ನು ಬಿಚ್ಚಿಡುವ ಆಕಾಂಕ್ಷೆಯ ಒತ್ತಡವೂ ಇಲ್ಲಿ ಕೆಲಸ ಮಾಡಿರಬಹುದು. ತದನಂತರದ ಸಿದ್ಧಲಿಂಗಯತಿ ಸಂಪಾದನೆಯಲ್ಲಿ ಈ ಪ್ರಸಂಗ ತನ್ನ ರೂಕ್ಷತೆಯನ್ನು ಹಿಂದೆ ಸರಿಸಿ ಇನ್ನೊಂದು ಹೊಸ ಹಾದಿ ಹುಡುಕಿಕೊಳ್ಳುತ್ತದೆ. ಇಲ್ಲಿ ಕಿನ್ನರಿ ಬೊಮ್ಮಯ್ಯ ಅಕ್ಕನನ್ನು ಬಂದು ಕಂಡದ್ದು ಅಲ್ಲಮ ಕಳುಹಿಸಿದ್ದರಿಂದ. ಅಲ್ಲಮನಿಗಾದರೋ ಮಹಾದೇವಿ ಕಾಮಸಂಹಾರಿ ಎಂದು ಪ್ರತ್ಯಕ್ಷವಾಗಿ ತೋರಿಸಬೇಕಾದ ಜರೂರಿ ಕಾಣಿಸಿ ಕೊಂಡಿದೆ. ಆದ್ದರಿಂದ ಇಲ್ಲಿಯ ಕಿನ್ನರಯ್ಯ ತುಂಬ ಭಕ್ತಿ ಭಾವದಿಂದ ಅಕ್ಕನನ್ನು ಪರೀಕ್ಷಿಸಿ ನೋಡಲು ಅಕ್ಕ ಅಂತರಂಗದ ಜ್ಞಾನಾಗ್ನಿಯೋಳು ಕಾಮನಂ ಸುಟ್ಟು ಭಸ್ಮ ಮಾಡಿರುತ್ತಾಳೆ. ಮುಂದಿನ ಶೂನ್ಯ ಸಂಪಾದನಕಾರ ಸಿದ್ಧವೀರಣ್ಣೊಡೆಯರು ಈ ಪ್ರಸಂಗದಲ್ಲಿ

ಎರಡು ವಚನಗಳು ಹೆಚ್ಚಾಗಿ ಸೇರಿಸಿ ಸಿದ್ಧಲಿಂಗಯತಿಯನ್ನು ಅನುಸರಿಸಿಕೊಂಡುಹೋಗುತ್ತಾರೆ. ಈ ರೀತಿಯ ವ್ಯತ್ಯಾಸಗಳು ತಮ್ಮಷ್ಟಕ್ಕೆ ಸ್ತ್ರೀತ್ವ ಮತ್ತು ಸ್ತ್ರೀಯರನ್ನು ಕಾಣುವ ಧೋರಣೆಯಲ್ಲಿರುವ ದ್ವಂದ್ವಗಳನ್ನು ಎತ್ತಿ ತೋರಿಸುತ್ತವೆ. ಹೆಚ್ಚು ಕಡಿಮೆ ಅಕ್ಕನನ್ನು ವೈಭವೀಕರಿಸುವ ಮೂಲಕ ಆಕೆಯ ವ್ಯಕ್ತಿತ್ವವನ್ನು ಎತ್ತಿ ಹಿಡಿಯುವ ಆಶಯವೇ ಪ್ರಮುಖವಾಗಿದ್ದರೂ ಅಲ್ಲಿರುವ ವಿವರಗಳಲ್ಲಿನ ವ್ಯತ್ಯಾಸಗಳು ಸಮುದಾಯ ಮನೋಧರ್ಮದ ವೈರುಧ್ಯ ಮತ್ತು ಸ್ಥಾಪಿತ ಮೌಲ್ಯಗಳ ತಾಕಲಾಟವನ್ನು ಕಾಣಿಸುತ್ತವೆ.

ಒಂದು ಹೆಣ್ಣು ಪುರುಷನ ಸಂಪರ್ಕವಿಲ್ಲದೆ ಬಾಳಬಹುದೇ ? ಎಂಬುದು ಸಾಮಾಜಿಕವಾಗಿ ಪ್ರಶ್ನೆಗೊಳಗಾಗುವುದು ಮುಖ್ಯವಲ್ಲ. ಸಮಾಜದ ಕಟ್ಟುಕಟ್ಟಳೆ ವಿಧಿ ನಿಯಮಗಳಿಗಿಂತ ಬದುಕು ಭಿನ್ನವೇ ಆಗಿರುತ್ತದೆ. ಮೇಲುನೋಟಕ್ಕೆ ಸಮಾಜದ ವಿಧಿ ನಿಯಮಗಳಿಗನುಗುಣವಾಗಿ ನಡೆದಕೊಳ್ಳುವ ಮನುಷ್ಯ ಮನೋಭಾವಗಳು ಒಳಗಡೆಯಲ್ಲೊ ಅವನ್ನು ಸಕಾರಾತ್ಮಕವಾಗಿಯೋ, ಇಲ್ಲವೇ ನಕಾರಾತ್ಮಕವಾಗಿಯೋ ಮೀರುವ ತಹತಹವನ್ನು ಅನುಭವಿಸುತ್ತಿರುತ್ತವೆ. ಆದ್ದರಿಂದ ಇಲ್ಲಿ ಬೊಮ್ಮಯ್ಯ ಹೆಣ್ಣೊಬ್ಬಳು ಸಾಮಾಜಿಕವಲ್ಲದ ವಲಯದಲ್ಲಿ ಮಾನಸಿಕವಾಗಿ, ದೈಹಿಕವಾಗಿ, ಭಾವನಾತ್ಮಕವಾಗಿ ಪುರುಷನಿಲ್ಲದೆ ಬಾಳಬಲ್ಲಳೇ ಎಂಬ ಪ್ರಶ್ನೆಗೆ ಉತ್ತರ ಹುಡುಕುವ ಪ್ರಯತ್ನಕ್ಕಿಳಿಯುತ್ತಾನೆ. ಈ ಪ್ರಶ್ನೆಯ ಮೂಲಕ ಅವನಲ್ಲಿ ಹುಟ್ಟುವ ದುಗುಡವು ಅವನನ್ನು ಸೃಷ್ಟಿ ಸಹಜವಾದ ನಿಸರ್ಗದತ್ತ ಅಪ್ಪಟ ಬದುಕನ್ನು ವಿಮರ್ಶಿಸುವ ಮನಃಶಾಸ್ತ್ರವಾಗಿ ಕಾಣಿಸುತ್ತದೆ. ಬೊಮ್ಮಯ್ಯ ಅಂತಹ ಪರೀಕ್ಷಾ ವಿಧಾನಗಳ ಮೊರೆ ಹೊಕ್ಕದ್ದು ಪುರುಷ ಪ್ರಧಾನ ವ್ಯವಸ್ಥೆಯ ಸ್ವಾರ್ಥ ಕೇಂದ್ರಿತ ಧೋರಣೆ ಎಂದೆಲ್ಲ ಹೇಳಿದರೆ ಸಮಸ್ಯೆಯನ್ನು ಅಷ್ಟರ ಮಟ್ಟಿಗೆ ಸರಳೀಕರಿಸಿದಂತಾದೀತು. ಇಲ್ಲಿ ಸಂಪಾದನ ಕಾರರ ವೈವಿಧ್ಯಮಯ ಮನಃಸ್ಥಿತಿ ಪುರುಷ ಕೇಂದ್ರಿತ ನೆಲೆಯಿಂದ ರೂಪಿತವಾದದ್ದು ಎಂಬುದು ಎಷ್ಟು ಮುಖ್ಯವೋ ಮನುಷ್ಯ ಸ್ವಭಾವದ ಮೂಲರೂಪದ್ದು ಎಂಬುದು ಕೂಡಾ ಅಷ್ಟೇ ಮುಖ್ಯವಾಗುತ್ತದೆ.

ಬೊಮ್ಮಯ್ಯನ ಪ್ರಶ್ನೆಗಳನ್ನು, ಪ್ರಶ್ನಿಸುವ ವಿಧಾನಗಳನ್ನು ಮಾನವೀಯ ಸಂವೇದನೆಗಳ ತಾಕಲಾಟದ ಚೌಕಟ್ಟಿನಲ್ಲಿ ಗ್ರಹಿಸುವಾಗ ಅಕ್ಕನನ್ನು ಆತ ಇಡೀ ಸ್ತ್ರೀ ಸಮೂಹದ ಪ್ರತಿನಿಧಿಯಾಗಿ ಗ್ರಹಿಸುತ್ತಾನೆ. ಹೊರತು ಅಪವಾದವೆಂದಾಗಿ ಅಲ್ಲ. ಅಂತಲೇ ಅವಳನ್ನು ಆತ ಸಾಮಾನ್ಯ ಸ್ತ್ರೀಯೊಬ್ಬಳು ಇಷ್ಟೆಲ್ಲ ನೈಸರ್ಗಿಕ ಕಾಮನೆಗಳ ನಡುವೆಯೂ ಅವುಗಳನ್ನು ಮೀರಿನಿಂತಳಲ್ಲ. ಅದು ಹೇಗೆ ಸಾಧ್ಯವಾಯಿತು ಎಂಬ ಗುಮಾನಿ ಕಾಡಿದಂತಿದೆ. ನಾಗರಿಕ ಸಮಾಜಕ್ಕೆ ತೀರ ಅಸಹ್ಯ ಮತ್ತು ಅಶ್ಲೀಲವೆನಿಸಬಹುದಾದ ಯೋನಿ ಪ್ರಸಂಗದ ಬಗ್ಗೆ ಹಲಗೆಯಾರ್ಯನಿಗೆ ಪರಿಕಲ್ಪನೆ ಇರಲಿಲ್ಲವೆ? ಎಂದೆನಿಸುವುದು ಸಹಜ. ಆದರೆ ತೀರ ತಾತ್ವಿಕ ಮತ್ತು ನಿಸರ್ಗ ಬದುಕಿನ ರೂಕ್ಷತೆ ಶೀಲ ಅಶ್ಲೀಲಗಳ ನಡುವಿನ ಗೆರೆಯನ್ನು ಅಳಿಸಿ ಹಾಕುತ್ತದೆ. ಅಂತಹ ನಿಲುವು ಮನುಷ್ಯನ ಮತ್ತು ಅವರ ಅದಮ್ಯ ಭಾವನಾ ಪ್ರಪಂಚ, ಸ್ವಭಾವ ಸಹಜ ಮೂಲ ಪ್ರವೃತ್ತಿ ಇವುಗಳನ್ನು ಮಾತ್ರ ಗಮನದಲ್ಲಿಟ್ಟುಕೊಂಡು ತಾತ್ವಿಕ ಚರ್ಚೆಗೆ ಹೊರಡುತ್ತದೆ.

ಸಂಪಾದನಕಾರರಿಗೆ ಮಹಾದೇವಿಯಕ್ಕ ನಿಜವಾದ ಅರ್ಥದಲ್ಲಿ ಭಾವನೆಗಳನ್ನು ಮೀರಿ ನಿಂತಳಲ್ಲ ಅದು ಸಾಧ್ಯವೆ? ನಿಸರ್ಗ ಸಹಜ ಬದುಕನ್ನು ಅದಿರುವ ಸ್ಥಿತಿಯಲ್ಲಿ ಮುಟ್ಟಿಯೂ, ಮುಟ್ಟದಂತೆ ಮೀರಿ ಬೆಳೆಯಬಹುದೆ? ಹಾಗಾದರೆ ನಿಸರ್ಗದತ್ತ ಇಂದ್ರಿಯಾನುಭವಗಳ ಮೂಲಕ ಬದುಕುವುದು ಹೆಚ್ಚು ಶ್ರೇಷ್ಠವೊ? ಎಂಬ ಪ್ರಶ್ನೆಗಳು ಎದುರಾಗಿರಲಿಕ್ಕೂ ಸಾಕು.

ಇಂಥ ಮೂಲಭೂತ ಸಮಸ್ಯೆಗಳು ಎದುರಾದಾಗಲೆಲ್ಲ ವಚನ ಸಿದ್ಧಾಂತದಂಥ ಜೀವಪರ ದರ್ಶನಗಳನ್ನು ಹೊರತುಪಡಿಸಿ ಭಾರತೀಯ ದರ್ಶನದ ಎಲ್ಲ 'ತಾತ್ವಿಕ ಶಾಖೆಗಳು ಇಂದ್ರಿಯಾತೀತವಾಗಿ ಬದುಕುವುದೇ ಹೆಚ್ಚು ಶ್ರೇಷ್ಠವೆಂಬ ಸುಲಭ ಸಾಧ್ಯವಲ್ಲದ ಜೀವನ ವಿಧಾನವೊಂದರತ್ತ ವಾಲುವ ಹುಷಾರಿತನ ತೋರಿಸಿ ಬಿಡುತ್ತವೆ.

ವಚನ ಚಳವಳಿಯ ಬಂಡಾಯದ ಪ್ರಖರತೆಯನ್ನು ಮಸುಕಾಗಿಸಿದ ಹಂತದಲ್ಲಿ ಶೂನ್ಯ ಸಂಪಾದನಕಾರರು, ಪುರಾಣಕಾರರಿಗೆ ಅಕ್ಕನ ಪಾವಿತ್ರ್ಯತೆಯನ್ನು ಸಾಬೀತುಪಡಿಸುವ ಜರೂರಿ ಕಂಡುಬಂದಂತಿದೆ. ಇದನ್ನು ಮನಗಂಡೇ ಹಲಗೆಯಾರ್ಯ ಶಿವಗಣ ಪ್ರಸಾದಿಯ ಸಂಪಾದನೆಯಲ್ಲಿ ಇಲ್ಲದ ಪ್ರಸಂಗವನ್ನು ಸೃಷ್ಟಿಸಿಕೊಳ್ಳುತ್ತಾನೆ. ಈ ಘಟನೆಯ ಹೆಚ್ಚು ಪ್ರಖರತೆಗೆ ಅಲ್ಲಮಪ್ರಭುವಿನ ಪ್ರಶ್ನೆರೂಪದ ವಚನಗಳ ಹೆಣಿಕೆ ಮತ್ತು ಆಯ್ಕೆಯಲ್ಲಿ ಅವನ ಧೋರಣೆಯನ್ನು ಗುರುತಿಸಬಹುದು. ಈ ಸಂದರ್ಭದಲ್ಲಿ ಕಿನ್ನರಯ್ಯನಿಗಿಂತ ಒಂದು ಹೆಜ್ಜೆ ಮುಂದಾಗಿ ಮಾತಿನ ರೂಪದಲ್ಲಿ ಅಲ್ಲಮ ಅಕ್ಕನನ್ನು ಇರಿಯುತ್ತಾನೆ. ಪ್ರತಿಯೊಂದು ಅಂಗಕ್ಕೂ ಅಲ್ಲಮನ ದೃಷ್ಟಿ ಮಾತುಗಳ ಚಾಟಿಯೇಟು ಅವನು ಎಂತಹ ನಿರ್ದಯಿ ಎಂಬಂತೆ ಭ್ರಮಿಸುವ ಸಾಧ್ಯತೆಗಳಿವೆ. ಆದರೆ ಕೇಳುವವನ ಮನಸ್ಸಿನಾಳದ ಮಿಡಿತ ಒರತೆಯೇ ಅವನು ನಿರ್ದಯಿಯೂ ಅಲ್ಲ. ಪುರಾಣಕಾರರಂತೆ ಅವಳ ಪಾವಿತ್ರತೆಯನ್ನು ಜಗಜ್ಜಾಹೀರು ಮಾಡುವ ಉದ್ದೇಶವೂ ಅವನಿಗೆ ಇರಲಿಕ್ಕಿಲ್ಲ ಎನಿಸುತ್ತದೆ. ಅಕ್ಕನನ್ನು ಅರ್ಥೈಸಿಕೊಳ್ಳ ಬೇಕೆಂಬ ಪ್ರಭುವಿನ ಹಟವಿದೆಯಲ್ಲ. ಅದು ಜೀವಪರ ಮತ್ತು ಸಂವಾದದ ಮೂಲಕ ಸ್ಪಷ್ಟತೆಗೆ ಸಮೀಪವಾಗಬಲ್ಲ ಜೀವನ ನಿಲುವುಗಳ ವ್ಯಾಖ್ಯಾನವೆನಿಸುತ್ತದೆ. ಅದೇ ಕಾಲಕ್ಕೆ ಪ್ರಭುವಿಗೆ ಅಕ್ಕನನ್ನು ತನ್ನ ಸ್ಥಿತಿಗೆ ಹೋಲಿಸಿಕೊಂಡು ನೋಡಿಕೊಳ್ಳುವಂತೆ ಪ್ರೇರೇಪಿಸಿದಂತೆ ಕಾಣುತ್ತದೆ. ಏಕೆಂದರೆ ಪ್ರಭು ಕೂಡಾ ಕಾಮಲತೆಯನ್ನು ಕಳೆದುಕೊಂಡು ಬಂದವನಲ್ಲವೆ?

ಅಕ್ಕ ಕೌಶಿಕನನ್ನು ತ್ಯಜಿಸಿ ಬಂದಿರಬಹುದಾದ ಕಾರಣ ಏನಿರಬಹುದು ಎಂಬುದಕ್ಕೆ ಉತ್ತರ ಅಷ್ಟು ಸರಳ ಮತ್ತು ಸುಲಭವಾಗಿಲ್ಲ. ಯಶೋಧರನನ್ನು ತಿರಸ್ಕರಿಸಿದ ಅಮೃತ ಮತಿಯ ಸಂದರ್ಭಕ್ಕೆ ಹೊಳೆಯುವ ಸರಳ ಉತ್ತರ ಅಕ್ಕನ ಸಂದರ್ಭಕ್ಕೆ ಹೊಳೆಯುವುದಿಲ್ಲ. ಲೋಕದ ಗಂಡಂದಿರನ್ನು ಇಷ್ಟಪಡದೇ ಇರುವುದಕ್ಕಾಗಿ ಚೆನ್ನಮಲ್ಲಿಕಾರ್ಜುನ ಪ್ರಿಯವಾದನೆ? ಅಥವಾ ಚೆನ್ನಮಲ್ಲಿಕಾರ್ಜುನ ಪ್ರಿಯವಾದುದಕ್ಕಾಗಿ ಲೋಕದ ಗಂಡಂದಿರು ತ್ಯಾಜ್ಯವಾದರೆ? ಇದರಲ್ಲಿ ಯಾವುದು ಮೊದಲು ಎಂಬ ಪ್ರಶ್ನೆ ಹಲವು ಸಾಧ್ಯತೆಗಳಿಗೆ ದಾರಿ ಮಾಡಿಕೊಡುತ್ತದೆ. ಈ ಪ್ರಶ್ನೆಯೇ ಪ್ರಭು ಆದಿಯಾಗಿ ಎಲ್ಲರಿಗೂ ಕಾಡಿದ್ದು ಮತ್ತು ಕಾಡುತ್ತಿರುವದು ಮುಂದೆಯೂ ಕಾಡಬಹುದಾದದ್ದು. ಅಕ್ಕನಿಗೆ ಲೋಕದ ಗಂಡನಲ್ಲಿ ಆಸಕ್ತಿ ಬೆಳೆಯಲಿಲ್ಲವಾದರೆ ಏಕೆ ಬೆಳೆಯಲಿಲ್ಲ. ಮಹಾರಾಜ ಸ್ಪುರದ್ರೂಪಿ ಎಲ್ಲಕ್ಕಿಂತ ಹೆಚ್ಚಾಗಿ ಅಪ್ಪಟ ಪ್ರೇಮಿಯಾಗಿದ್ದ ಅವನಲ್ಲಿ ಎಷ್ಟು ಮಾತ್ರಕ್ಕೂ ಪ್ರೀತಿ ಹುಟ್ಟುದೇ ಇರುವುದು. ಅವಳ ಅಂದಿನ ಮಾನಸಿಕ ಸ್ಥಿತಿ ಅಂಥದೊಂದು ಸ್ಥಿತಿಗೆ ಕಾರಣವಾಗಿರಬಹುದಾದ ಚಾರಿತ್ರಿಕ, ಸಾಮಾಜಿಕ ಸಂದರ್ಭಗಳು ಅವಳ ಕೌಟುಂಬಿಕ ಪರಿಸರ, ಸಾಂಸ್ಕೃತಿಕ ಸಂಘರ್ಷ ಇತ್ಯಾದಿಗಳಿಗೆಲ್ಲಾ ಉತ್ತರ ಸ್ಪಷ್ಟವಾಗಬೇಕಾದರೆ ಅಕ್ಕನನ್ನು ಕೇವಲ ಮನುಷ್ಯಳನ್ನಾಗಿ ನೋಡುವ ನಮ್ಮ ಮನೋಭಾವ ಗಟ್ಟಿಯಾಗಬೇಕಾಗುತ್ತದೆ. ಆ ದಿಸೆಯಲ್ಲಿ ನಮ್ಮ ಆಲೋಚನೆ, ಅನ್ವೇಷಣೆಗಳು ಅಪ್ಪಟ ಜೀವನ ಪ್ರೀತಿಯನ್ನು ಹಿನ್ನೆಲೆಯಾಗಿಟ್ಟುಕೊಂಡು ಹೊರಡಬೇಕಾಗುತ್ತದೆ.

ಅಕ್ಕ ಪುರುಷನಿಲ್ಲದೆ ಬಾಳಬೇಕೆಂಬುದು ಮೊದಮೊದಲೇ ತನ್ನನ್ನು ತಾನು ಸಿದ್ಧಮಾಡಿ ಕೊಂಡಿರಲಿಕ್ಕಿಲ್ಲ. ಯೌವ್ವನ ಸಹಜವಾದ ಬಯಕೆಗಳು ಅರಳುವ ಪೂರ್ವದಲ್ಲೇ ಅವುಗಳನ್ನು ನೇರ್ಪುಗೊಳಿಸಿ ಒಂದು ಅವಾಸ್ತವ ಬದುಕಿನ ರೀತಿಗೆ ಬದ್ಧ ಮಾಡಿಕೊಂಡರಲಿಕ್ಕಿಲ್ಲ. ಅಲ್ಲದೆ ಇಡೀ ಸ್ತ್ರೀಕುಲಕ್ಕೆ ಮಾದರಿಯಾಗಬೇಕೆಂಬ ಹುಚ್ಚು ಹುರುಪು ಅವಳಿಗಿದ್ದಿರಲಿಕ್ಕಿಲ್ಲ. (ಪುರಾಣ, ಸಂಪಾದನಾಕಾರರು ಅವಳನ್ನು ಚಿತ್ರಿಸುವಲ್ಲಿ ಮಾಡಿದ ದುರಂತವೇ ಇದು.) ಮಲ್ಲಿಕಾರ್ಜುನನನ್ನು ಕುರಿತು ಅವಳ ವಚನಗಳಲ್ಲಿ ವ್ಯಕ್ತವಾಗುವ ಭಾವತೀವ್ರತೆ, ಭಾವೋತ್ಕಟತೆ, ನಲ್ಲನನ್ನು ಕುರಿತ ಸರಸ ಭಾವಗಳನ್ನು ನೋಡಿದರೆ ತನ್ನ ಬದುಕನ್ನು ಪ್ರಯೋಗಕ್ಕೆ ಗುರಿ ಮಾಡಿಕೊಳ್ಳಬೇಕೆಂಬ ಇರಾದೆ ಅವಳಿಗೆ ಖಂಡಿತ ಇರಲಿಲ್ಲ ಎಂಬುದು ವಿಧಿತವಾಗುತ್ತದೆ. ಜಗತ್ತಿನ ಎಲ್ಲ ಸಿದ್ಧಾಂತ ಮತ್ತು ಅನ್ವೇಷಣೆಗಳು ಕಾಮ ಮತ್ತು ಸಾವನ್ನು ಕುರಿತು ಒಂದಲ್ಲ ಒಂದು ಹಂತದಲ್ಲಿ ಮುಖಾಮುಖಿಯಾಗುತ್ತಿರುವುದರಿಂದ ಈ ಮಾತುಗಳು ಗಮನಾರ್ಹ ಎನಿಸಲು ಸಾಕು. ಅಕ್ಕ ಕೌಶಿಕನನ್ನು ತ್ಯಜಿಸುವಲ್ಲಿ ವಿವಾಹ ಸಂಸ್ಥೆ ರೂಪಿತ "ಗಂಡ, ನಿಸರ್ಗ ಬಯಕೆಯ ಗಂಡಸು" ಪ್ರಭುತ್ವ ರೂಪಿತ "ಮಹಾರಾಜ" ಹೀಗೆ ಮೂರು ನೆಲೆಯ ನಿರಾಕರಣೆಗಳಿವೆ. ಹೀಗೆ ಗಂಡ, ಗಂಡಸು ಮಹಾರಾಜ ಮೂವರನ್ನು ಏಕಕಾಲಕ್ಕೆ ನಿವಾರಿಸಿಕೊಳ್ಳುವ ಅಕ್ಕನ ಬದುಕೇ ಹಲವು ಆಶ್ಚರ್ಯ ಮತ್ತು ಅದ್ಭುತಗಳ ಮೊತ್ತವಾಗಿ ಮುಂದಿನವರಿಗೆ ಕಂಡುಬಂದಿದೆ. ಈ ಹಿನ್ನೆಲೆಯಲ್ಲಿ ಅವಳನ್ನು ನಮಗೆ ಗೊತ್ತಿರುವ ಅಥವಾ ನಮ್ಮ ಅನುಭವಕ್ಕೆ ಬಂದಿರುವ ಒಂದು ಸ್ಥಿತಿ ಯಿಂದಲೇ ಅರ್ಥಮಾಡಿಕೊಳ್ಳಬೇಕೆಂಬ ಹಟ ಮುಖ್ಯವಾದಾಗ ಹಲಗೆಯಾರ‍್ಯ, ಚಾಮರಸ ಇಂಥವರ ಕಥಾನಕಗಳು ಸಿದ್ಧವಾಗುತ್ತವೆ. ಆದರೆ ಹಲಗೆಯಾರ‍್ಯನಂಥವರಿಗೆ ಅಕ್ಕನ ಅದ್ಭುತ ವ್ಯಕ್ತಿತ್ವ ಕಂಡು ಅವಾಕ್ಕಾಗಿ ಬಿಡುವ ಅವಸ್ಥೆ ಬಿಟ್ಟರೆ ಪ್ರಭುವಿನಂತೆ ಸ್ವಾನುಭಾವದ ನೆಲೆಯಲ್ಲಿ ಪ್ರಶ್ನಿಸುವ ಧೈರ್ಯವಾಗುವುದಿಲ್ಲ. ಈ ವಾದವನ್ನು ಜನಜನಿತ ನೆಲೆಯಲ್ಲಿಯೂ ಇನ್ನೊಂದು ಬಗೆಯಾಗಿ ಪರಿಹರಿಸಬಹುದೆಂದು ತೋರುತ್ತದೆ. ಪರುಷನಿಲ್ಲದೆ ಸ್ತ್ರೀಯು ನೈಸರ್ಗಿಕವಾಗಿ, ಮಾನಸಿಕವಾಗಿ ಭಾವನಾತ್ಮಕವಾಗಿ (ಸಾಮಾಜಿಕವಾಗಿ ಅಲ್ಲ) ಬಾಳಬಹುದೆ ಎಂಬ ಅಂಶ ದಿಗ್ಭ್ರಮೆ ಹುಟ್ಟಿಸುವಷ್ಟು ಸ್ತ್ರೀಯಿಲ್ಲದೆ ಪುರುಷ ಬದುಕಬಲ್ಲನೆ ಎಂಬ ಪ್ರಶ್ನೆ ಹುಟ್ಟಿಸುವುದಿಲ್ಲ. ಅಕ್ಕನಿಗೆ ಎದುರಾಗುವ ಸಮಸ್ಯೆಗಳು ಸಿದ್ಧರಾಮ, ಪ್ರಭು, ಮುಂತಾದವರಿಗೆ ಎದುರಾಗು ವುದಿಲ್ಲ. ನಿಸರ್ಗಕ್ಕೆ ಲಿಂಗಭೇದದ ಪ್ರಶ್ನೆ ಇಲ್ಲ. ನಿಸರ್ಗದೊಳಗೆ ತಮ್ಮದೆ ಲೋಕವೊಂದನ್ನು ಕಟ್ಟಿಕೊಂಡಿರುವ ಮನುಷ್ಯರಿಗೆ ಲಿಂಗಭೇದಗಳು ಕಾಡುವ ಪರಿ ಇದೆಯಲ್ಲ ಇದು ಪ್ರಶ್ನಾರ್ಹ ವಾಗುತ್ತದೆ. ಇಲ್ಲಿ ಪ್ರಭು, ಸಿದ್ಧರಾಮನಂತಹವರನೇಕರು ಪ್ರಶ್ನಾತೀತರಾದದ್ದೇಕೆ? ಎಂಬುದಕ್ಕೆ ಉತ್ತರ ಹೀಗೆ ಕಂಡುಕೊಳ್ಳಬಹುದೇನೋ? ಕನಸು, ಭಾವನೆಗಳು ಒತ್ತಿ ಒತ್ತಿ ಹಿಡಿದು ಹರಳುಗಳನ್ನಾಗಿಸಿದ ಭಾರತೀಯ ಸಾಮಾಜಿಕ ಸಂದರ್ಭದಲ್ಲಿ ಹೆಣ್ಣು ವೈಯಕ್ತಿಕವಾಗಿ ಅಲ್ಲದೆ ಸಾಮಾಜಿಕವಾಗಿ ಒಪ್ಪಿತವಾಗಬೇಕಾದ ಅನಿವಾರ‍್ಯತೆ ಇರುವುದರಿಂದ ಅಕ್ಕನಂತಹವರು ಮತ್ತೆ ಮತ್ತೆ ಪ್ರಶ್ನೆಗಳ ಚೂಪು ಮೊನೆಗಳ ಮೇಲೆ ನಡೆಯುತ್ತಲೆ ಇರಬೇಕಾಗುತ್ತದೆ.

ಶಿವಗಣ ಪ್ರಸಾದಿ ಮಹಾದೇವಯ್ಯಗಳ ಶೂನ್ಯ ಸಂಪಾದನೆಯಲ್ಲಿ ಬರುವ ಪ್ರಭು ಕಾಮಲತೆಯರ ಪ್ರಸಂಗ ಅವನ ಒಟ್ಟು ವ್ಯಕ್ತಿತ್ವಕ್ಕೆ ಹೊಸದೊಂದು ಗಟ್ಟಿ ಆಯಾಮ ನೀಡುತ್ತದೆ. ಕಾಮಲತೆ ಪ್ರಸಂಗದ ನಿರ್ದಿಷ್ಟತೆಯನ್ನು ಮುಂದೆ ಬಂದ ಹಲಗೆಯಾರ‍್ಯ, ಚಾಮರಸ

ಮುಂತಾದವರಿಗೆ ಒಪ್ಪಿತವಾಗುವುದಿಲ್ಲ ಎಂಬುದಕ್ಕೆ ಬೇರೆ ಕಾರಣಗಳಿವೆ. ಪುರಾಣ, ಕಾವ್ಯಕಾರರ ಮತೀಯ ವ್ಯಾಮೋಹವನ್ನು ಅರ್ಥಮಾಡಿಕೊಳ್ಳದಷ್ಟು ಮುಗ್ಧರಾಗಿ ಇಂದು ಜನತೆ ಉಳಿದಿಲ್ಲ ಎಂಬುದು ಆರೋಗ್ಯಪೂರ್ಣವೆ. ಪ್ರಭು ಕಾಮಲತೆಯರ ಪ್ರಸಂಗ, ಅಕ್ಕ ಕೌಶಿಕರ ಪ್ರಸಂಗ ಎರಡೂ ಭಿನ್ನ ಭಿನ್ನ ಕೋನಗಳಲ್ಲಿಯೆ ಗ್ರಹಿಕೆಗೆ ಬರುತ್ತವೆ. ಕಾಮಲತೆ ಪ್ರಭುವಿನಿಂದ ದೂರವಾದ ಪ್ರಸಂಗಕ್ಕೂ, ಕೌಶಿಕನನ್ನು ಅಕ್ಕ ಧಿಕ್ಕರಿಸುವುದಕ್ಕೂ ಪರಸ್ಪರ ತೀರ ವ್ಯತಿರಿಕ್ತವಾದ ಭಾವನೆಗಳ ಮುಖಾಮುಖಿಯಿದೆ. ಎಲ್ಲೊ ಒಂದು ಕಡೆ ಪ್ರಭು ನಿಸರ್ಗ ಸಹಜವೆನಿಸುವಂತೆ ಅಕ್ಕ ಕಾಣುವುದಿಲ್ಲ ಎಂಬ ಗುಮಾನಿ ಪ್ರಜ್ಞಾವಂತರಿಗೆ ಕಾಡುವದುಂಟು. ಆದರೆ ಬದುಕಿನಲ್ಲಿ ಬರುವ ಎಲ್ಲ ನಿರ್ಲಿಪ್ತತೆಗಳು ಜಿಗುಪ್ಸೆ ಭ್ರಮನಿರಸನದಿಂದಲೆ ಬರಬೇಕೆ? ಯಾವೊಂದು ಧನಾತ್ಮಕ ಅಂಶದಿಂದಲೂ ಅದು ಬರುವ ಸಾಧ್ಯತೆ ಇಲ್ಲವೆ? ಬಾಹ್ಯ ಕಾರಣಗಳ ಗೊಡವೆ ಇಲ್ಲದೆ ತನ್ನೊಳಗೆ ಏಳುವ ವಿಚಿತ್ರ ತಾಕಲಾಟದಲ್ಲಿ ಅದು ಎದುರಾಗುವ ಮನಸ್ಸಿನ ನಿಗೂಢತೆಯನ್ನು ವ್ಯಾಖ್ಯಾನಿಸುವುದು ಕಷ್ಟಸಾಧ್ಯವಲ್ಲವೆ?

ಅಕ್ಕನ ವಚನಗಳಲ್ಲಿ ಕಾಣುವ ಸಾಂಸಾರಿಕ ಬದುಕಿನ ಅದಮ್ಯ ಪ್ರೀತಿ, ತನ್ನ ಅಮೂರ್ತ ಪ್ರಿಯಕರನಿಗಾಗಿ ಹಂಬಲಿಸುವ ಉತ್ಕಟತೆ, 'ಎರೆಯಂತೆ ಕರಕರಗಿ, ಮಳಲಂತೆ ಜರಿಜರಿದು', ಪುರುಷ ಬಾರಾ ಪುರುಷ ರತ್ನವೆ ಬಾರಾ, ಅಪ್ಪಿದಡೆ ಅಸ್ಥಿಗಳು ನುಗ್ಗುನುಸಿಯಾಗಬೇಕು" ಎನ್ನುವ ವಚನ ಮಾತುಗಳು ಮತ್ತು ಅವುಗಳ ಮೂಲಕ ಹೊರಡುವ ನಲ್ಲನ ಬಯಕೆ, ಅದು ಎಲ್ಲಿಯೂ ವಿಕ್ಷಿಪ್ತತೆಯಾಗದೆ ಉಳಿದ ಪಕ್ವತೆ ಮುಖ್ಯವಾಗುತ್ತವೆ. ಇವುಗಳ ಭಾವನಾತ್ಮಕ ಆಧಾರದಲ್ಲಿ ಬದುಕಿನ ಯಾವ ಘಟ್ಟದಲ್ಲಿಯೂ ಅಭಾವ ಕಾಣದ ಮನಸ್ಸು ಅಧ್ಯಯನ ಯೋಗ್ಯವಾಗುತ್ತದೆ. ಲೋಕವಿದೂರನಾದ ಪತಿ ಬಯಕೆ ಮತ್ತು ನೆಲಕ್ಕೆ ಅಂಟಿಕೊಂಡ ಸಾಂಸಾರಿಕ ಒಲವು. ಸಮಾಜ ನಿರ್ಮಿತ ಚೌಕಟ್ಟಿನೊಳಗಡೆಯೂ ಅಪ್ಯಾಯ ಮಾನವೆನಿಸುವ ಮನುಷ್ಯ ಸಂಬಂಧಗಳ ಹುಡುಕಾಟ ವೈರುಧ್ಯಗಳನ್ನು ನೋಡಿದಾಗ ಅಕ್ಕನನ್ನು ಅರ್ಥ ಮಾಡಿಕೊಳ್ಳಲು ಹಲವು ಆಯಾಮಗಳ ಅವಶ್ಯಕತೆಯಿರುವುದನ್ನು ಕಾಣಬಹುದು. ಪ್ರಶ್ನೆಗೊಳಗಾಗಬಹುದಾದ ದಾರಿಯಲ್ಲಿ ನಡೆಯುತ್ತಿರುವ ತಿಳುವಳಿಕೆಯಿದ್ದು ಅದರಿಂದ ವಿಚಲಿತಳಾಗದೆ ನಡೆಯುವ ಅಕ್ಕನ ಸ್ಥೈರ್ಯವೇ ಅವಳನ್ನು ಹೇಗಾದರೂ ಮಾಡಿ ಅರ್ಥ ಮಾಡಿಕೊಳ್ಳಬೇಕೆಂಬ ಹಟ ಹುಟ್ಟಿಸುತ್ತದೆ. ಅದಕ್ಕಾಗಿಯೇ ತದನಂತರದ ಎಲ್ಲ ಕೃತಿಕಾರರಿಗೆ ಅವಳ ಬದುಕನ್ನು ಕುರಿತು ಏನೇ ಬರೆಯುವುದು ಒಂದು ಸವಾಲಾಗಿರುವಂತೆ ತೋರುತ್ತದೆ. ವೀರಶೈವ ಧಾರ್ಮಿಕ ಧಾರೆಯಲ್ಲಿ ಬರೆಯುವ ಕವಿಗಳಿಗೆ ಅಕ್ಕನನ್ನು ದೈವೀಕರಿಸಿ ಬಿಡುವಲ್ಲಿ ದೊಡ್ಡ ಬಿಡುಗಡೆ ಕಂಡಂತಾಗಿದೆಯಾದರೂ ಅಕ್ಕನನ್ನು ಅಪ್ಪಟ ಮನುಷ್ಯ ನೆಲೆಯಲ್ಲಿ ಕಂಡುಕೊಳ್ಳುವ ಜರೂರಿಯನ್ನು ಕಂಡಿತ ಅನುಭವಿಸಿರಲಿ ಸಾಕು. ವೈಜ್ಞಾನಿಕ ವೈಚಾರಿಕ ಯುಗದಲ್ಲಿರುವ ನಮಗೆ ಅಕ್ಕನನ್ನು ದೈವೀಕರಿಸುವ ಜರೂರಿ ಇಲ್ಲವಾದರೂ ನಮ್ಮ ಇಂದಿನ ವಾಸ್ತವದ ಸವಾಲುಗಳೊಂದಿಗೆ ಮುಖಾಮುಖಿಯಾಗಿಸ ಬೇಕಾದ ಅನಿವಾರ್ಯತೆ ಇದೆ. ಸ್ತ್ರೀವಾದದ ಪ್ರಖರ ನೆಲೆಯೇ ಮಾರಕವೆಂಬಂತೆ ಹಬ್ಬುತ್ತಿರುವ ಜಾಗತೀ ಕರಣದ ಈ ಹೊತ್ತಿನಲ್ಲಿ ಜಾಗತಿಕ ಮಾರುಕಟ್ಟೆಗೆ ವ್ಯಾಪಕ ಸರಕಾಗುತ್ತಿರುವ ಗ್ಲಾಮರಸ್ ಲೋಕ ಅಕ್ಕನ ಅಸ್ಮಿತತೆಯನ್ನು ಪುನಃ ಕಟ್ಟಿಕೊಳ್ಳಬೇಕು. ಪ್ರಾಯಶಃ ಅಕ್ಕನ ಬದುಕಿನ ಅನುಸಂಧಾನವೇ ಸ್ತ್ರೀಲೋಕದ ಇಂದಿನ ಬಿಕ್ಕಟ್ಟುಗಳಿಗೆ ಪರಿಹಾರೋಪಾಯವಾಗಬಹುದು.

ಭಾಗ – ೨

೯. ಮಹಾದೇವಿಯಕ್ಕ ಮತ್ತು ಕಾರಿಕಾಲಮ್ಮೆ

●

ಡಾ. ಎಂ.ಎಸ್. ಲಠ್ಠೆ

ಕಾರಿಕಾಲಮ್ಮೆ ಮಹಾದೇವಿಯಕ್ಕ ಇವರ ಸಾಹಿತ್ಯಕೃತಿಗಳನ್ನು ತುಲನೆಮಾಡಿ ನೋಡಿದಾಗ ಅಲ್ಲಿ ಹೆಚ್ಚಿನ ಸಾಮರಸ್ಯವನ್ನು ಕಾಣುತ್ತೇವೆ. ಅವರಿಬ್ಬರೂ ಶಿವನ ಅತ್ಯಂತ ಪ್ರೀತಿಯ ಭಕ್ತರಿದ್ದುದರಿಂದ ಆ ಶಿವನ ಹೊರತು ಅವರು ಅನ್ಯದೈವಂಗಳಿಗೆ ಮನಸೋಲರು. ಅವನನ್ನು ಎಷ್ಟು ಕೊಂಡಾಡಿದರೂ ಅವರಿಗೆ ತೃಪ್ತಿಯಿಲ್ಲ ಅವನ ಕುರಿತು ಹಾಡಿಯೇ ಹಾಡುತ್ತಾರೆ. ಜೀವನದಲ್ಲಿ ಅವರಿಬ್ಬರೂ ಕಂಡುಂಡ ಸುಖದುಃಖಗಳನ್ನೆಲ್ಲ ಶಿವನ ಮುಂದೆ ತಂದು ಅರುಹುತ್ತಾರೆ. ಆತನ ಕರುಣೆಗಾಗಿ ಹಾತೊರೆಯುತ್ತಾರೆ. ಇನ್ನೊಮ್ಮೆ ಹುಟ್ಟಿ ಬರುವುದಾದಲ್ಲಿ, ಶಿವನೆ ನಿನ್ನನ್ನೇ ಪೂಜಿಸುವ ಭಾಗ್ಯವನ್ನು ದಯಪಾಲಿಸೆಂದು ಬೇಡಿಕೊಳ್ಳುತ್ತಾರೆ.

ಕಾರಿಕಾಲಮ್ಮೆ ಪೂಜಿಸುವುದು ನಟರಾಜರೂಪದ ಶಿವನನ್ನು, ಮಹಾದೇವಿಯಕ್ಕ ಪೂಜಿಸುವುದು ಕರದ ಇಷ್ಟಲಿಂಗವನ್ನು, ಮಹಾದೇವಿಯಕ್ಕನ ಮುದ್ರಿಕೆ ಚನ್ನಮಲ್ಲಿಕಾರ್ಜುನ ಎಂಬುದು. ಇಂಥ ಯಾವ ಮುದ್ರಿಕೆಯೂ ಕಾರಿಕಾಲಮ್ಮೆಯ ಹಾಡುಗಳಲ್ಲಿ ಬಂದಿಲ್ಲ. ಆದರೆ ಅವಳ ಕೃತಿಗಳ ಕೊನೆಗೆ "ಕಾರಿಕಾಲದ ಪಿಶಾಚಿ ಹಾಡಿದ ಹಾಡುಗಳನ್ನು ಕೇಳಿದವರಿಗೆ ಪಾಪ ನಾಶವಾಗುತ್ತದೆ" ಎಂದು ಹೇಳಿದ್ದಾಳೆ. ಕಾರಿಕಾಲಮ್ಮೆ ಶಿವನನ್ನೇ ತಂದೆಯೆಂದು ಕರೆದಿದ್ದಾಳೆ. ಆತನ ವಿಕಟರೂಪ, ಆಭರಣಗಳನ್ನು ಕಂಡು, ಶಿವನೆ ನಿನಗೆ ಭಿಕ್ಷೆ ನೀಡಲು ಬಂದ ಕೋಮಲ ಸ್ವಭಾವದ ಹೆಣ್ಣುಮಕ್ಕಳು ಹೆದರುತ್ತಾರೆ, ಆ ರುಂಡಮಾಲೆ, ಸರ್ಪಗಳನ್ನು ತೆಗೆದೂಗೆ ಎಂದು ವಿನಮ್ರತೆಯಿಂದ ಸೂಚಿಸುತ್ತಾಳೆ. ಇಲ್ಲಿ ಅವಳ ಮುಗ್ಧ ಭಕ್ತಿಯು ಎದ್ದುಕಾಣುವಂತಹದು. ಇವಳು ಭಾವಜೀವಿ; ಮಹಾದೇವಿಯಕ್ಕನು ಚನ್ನಮಲ್ಲಿಕಾರ್ಜುನನೇ ತನ್ನ ಪತಿಯೆಂದು ದೃಢವಾಗಿ ನಂಬಿ ಆತನನ್ನು ಕೂಡಲು ತವಕ ಪಡುತ್ತಾಳೆ. ಕಾರಿಕಾಲಮ್ಮೆಯದು ದಾಸಮಾರ್ಗವಾದರೆ ಮಹಾದೇವಿಯಕ್ಕನದು ಷಟ್‌ಸ್ಥಲ ಮಾರ್ಗ, ದಾಸಮಾರ್ಗದನ್ವಯ ಕಾರಿಕಾಲಮ್ಮೆ ಶಿವನನ್ನು ಭಕ್ತಿಭಾವದಿಂದ ಪೂಜಿಸಿ, ಪ್ರಾರ್ಥಿಸಿ ಶಿವನ ಕರುಣೆಗಾಗಿ ಹಂಬಲಿಸುತ್ತಾಳೆ, ಷಟ್‌ಸ್ಥಲ ಮಾರ್ಗದನ್ವಯ ಮಹಾದೇವಿಯಕ್ಕ, ತಾನು ಸತಿಯಾಗಿ, ಶಿವನನ್ನು ಪತಿಯನ್ನಾಗಿ ಅರಸಿ ಲಿಂಗಾಂಗ ಸಾಮರಸ್ಯಕ್ಕಾಗಿ ಸಾಧನೆಗಿಳಿಯುತ್ತಾಳೆ. ಬಾಹ್ಯಸೌಂದರ್ಯವೆಲ್ಲವನ್ನೂ ಅಲ್ಲಗಳೆದ ಕಾರಿಕಾಲಮ್ಮೆ, ಪಿಸಾಚಿರೂಪು ತೊಟ್ಟು, ತಿರುವಾಲಂಗಾಡಿನಲ್ಲಿ ನಟರಾಜನನ್ನು

ಹಾಡಿ, ಕೊಂಡಾಡಿ ಅವನಲ್ಲಿಯೇ ಸದ್ಗತಿ ಹೊಂದುತ್ತಾಳೆ. ಮಹಾದೇವಿಯಕ್ಕ ಹಂತಹಂತವಾಗಿ ಷಟ್‌ಸ್ಥಲ ಮಾರ್ಗವಿಡಿದು ಶರಣೆಯಾಗಿ, ಅನುಭವ ಮಂಟಪದ ಅಧ್ಯಕ್ಷ ಅಲ್ಲಮ ಪ್ರಭುವಿನಿಂದ ನಿಜದ ನೆಲೆಯನರಿತು ಶ್ರೀಶೈಲಕ್ಕೆ ತೆರಳಿ, ಚೆನ್ನಮಲ್ಲಿಕಾರ್ಜುನನಲ್ಲಿ ಲಿಂಗೈಕ್ಯಳಾಗುತ್ತಾಳೆ. ಇಂಥ ಜೀವನದ ಅನೇಕ ಚಿತ್ರಗಳನ್ನು ಅವರೀರ್ವರ ಭಕ್ತಿಗೀತೆಗಳಿಂದ ಅರಿಯ ಬಹುದಾಗಿದೆ ಅವರುಂಡ ಆ ಅನುಭವವನ್ನೇ ತಮ್ಮ ಹಾಡುಗಳಲ್ಲಿ ಎರಕಹೊಯ್ದದ್ದರಿಂದ ಅವು ಅನುಭವ ಗೀತೆಗಳಾಗಿವೆ. ಅಲ್ಲದೆ, ಅವರವರ ಆತ್ಮಗೀತೆಗಳೂ ಆಗಿವೆ. ಅವರಿಬ್ಬರ ಅಂತಸ್ತನ್ನು ಅರಿಯ ಬೇಕಾದಲ್ಲಿ ಕೇವಲ ಕಾವ್ಯ ಪುರಾಣ ಗಳಿಗೆ ಶರಣುಹೊಕ್ಕರೆ ಸಾಲದು; ಅವರ ಅನುಭವ ಗೀತೆಗಳನ್ನು ಓದಿದಾಗ ಅವರ ಧರ್ಮತತ್ತ್ವ, ಅನುಭವದ ಸ್ಪಷ್ಟ ನಿಲುವನ್ನು ಅರಿಯುವಂತಾಗುತ್ತದೆ.

ಶೈವಧರ್ಮದ ದಾಸಮಾರ್ಗದ ಪ್ರಕಾರ ಭಕ್ತನು ಶಿವಪೂಜೆ ಶಿವಸ್ತೋತ್ರ ಶಿವಭಕ್ತರ ಸೇವೆ ಮಾಡಿಕೊಂಡು, ಶಿವಪಂಚಾಕ್ಷರೀ ಮಂತ್ರವನ್ನು ಉಚ್ಚರಿಸಿ, ನಿತ್ಯತೃಪ್ತಿ ಪಡೆಯು ವುದಾಗಿದೆ. ಅಂತಹ ನಿಲುವಿನಲ್ಲಿ ನಿಂತವಳು ಕಾರಿಕಾಲಮ್ಮೆ ಎಂದು ಹೇಳಬಹುದು. ಚಿಕ್ಕಂದಿನಿಂದಲೂ ಮಾತು ಬಂದಾಗಿನಿಂದಲೇ ಅವಳು ಶಿವನನ್ನು ಹಾಡಿದವಳು ಶಿವಭಕ್ತರ ಸೇವೆ ಮಾಡಿದವಳು ಶಿವಸ್ತೋತ್ರ ಪೂಜಾದಿಗಳು ಅವಳ ಜೀವನದ ಉಸಿರಾಗಿದ್ದುವು ಶಿವನಲ್ಲಿಯಂತೂ ಅಚಲವಾದ ಶ್ರದ್ಧೆ, ನಿಷ್ಠೆ ಅವಳದು. ಅವನ ಹೊರತಾಗಿ ಆಕೆ ಯಾವ ಆಳೂ ಆಗಲಾರಳು.

ಕಾರಿಕಾಲಮ್ಮೆ ತನ್ನ ಹಾಡುಗಳಲ್ಲಿ ಬೋಧಿಸಿದ ತಾತ್ವಿಕ ವಿವೇಚನೆ ಹೃದಯಗಮ್ಯ ವಾಗಿದೆ ದೇವರು ನಮ್ಮ ನಿಮ್ಮ ನಿರ್ಮಾತೃ. ಅವನೇ ರಕ್ಷಕನೂ ಸಂಹಾರಕನೂ ಕೂಡ. ಅವನು ಜಾಣ. ಆತನ ಪಾದಗಳನ್ನು ಹೊಂದುವುದೇ ಮಾನವನ ಏಕೈಕ ಗುರಿಯಾಗಿದೆ ಎಂಬುದು ಅವಳ ಸಿದ್ಧಾಂತ. ಜನ್ಮವಿದು ಕರ್ಮಫಲದಿಂದ ಬಂದ ಪಾಕ; ಅದನ್ನು ಈಶ ಸೇವೆಯಿಂದ ಕಳೆದು ಕೊಳ್ಳಬೇಕಾಗುವುದು. ಆ ಶಿವನು ಸಾಧುಗಳಿಗೆ ಕಾಣಬಲ್ಲನು ಪ್ರೀತಿ ತುಂಬಿದ ಹೃದಯದಲ್ಲಿ ಆತನ ಪ್ರಭೆ ಇದ್ದೇ ಇರುತ್ತದೆ; ಅವನೇ ಸತ್ಯ, ಯಜಮಾನ. ಆತನೇ ಅಷ್ಟಮೂರ್ತಿ. ಭಕ್ತರು ತಮ್ಮ ತಮ್ಮ ಮನಸ್ಸಿನಲ್ಲಿ ರೂಪಿಸಿಕೊಂಡಂತೆಯೆ ಆ ಶಿವನ ಆಕಾರ. ಏಕಾಗ್ರಚಿತ್ತದಿಂದ ಅಂಥವನನ್ನು ಪ್ರೀತಿಸಿದರೆ ಅವನು ಯಾವಾಗಲೂ ಮೆಚ್ಚುತ್ತಾನೆ ಎಂಬುದು ಅವಳ ಅನುಭವವಾಣಿ ಈಶನ ಕೃಪೆಯಿಂದಲೇ ಜಗತ್ತು ಆಳಲ್ಪಡುತ್ತದೆ. ಜನ್ಮಗಳ ನಾಶವಾಗುತ್ತದೆ ಸತ್ಯವನ್ನು ಅರಿಯಬಲ್ಲದುದರಿಂದ ಅಂತಹ ಸತ್ಯದಲ್ಲಿ ಸದಾಕಾಲವೂ ನಾನು ಮುಳುಗಿರಲಿ ಎಂದುಕೊಂಡಿದ್ದಾಳೆ. ಅಂದುಕೊಂಡದುದಷ್ಟೇ ಅಲ್ಲ, ಪ್ರಿಯಕರನೂ ಕೃಪಾಳುವೂ ಆದ ಆ ಶಿವನನ್ನು ತನ್ನವನನ್ನಾಗಿ ಮಾಡಿಕೊಂಡು, ತನ್ನ ಹೃದಯದಲ್ಲಿ ನಿತ್ಯತೃಪ್ತಿಯ ಆನಂದವನ್ನು ತುಂಬಿಕೊಂಡಿದ್ದಾಳೆ. ಕಾರಿಕಾಲಮ್ಮೆಯ ಅನುಭವಕ್ಕೆ ಮಿಗಿಲಾದ ಅವಳ ಭಕ್ತಿಯೇ ಶಕ್ತಿಯಾಗಿದೆ. ಆ ಭಕ್ತಿಯ ಸಾಮರ್ಥ್ಯದಿಂದಲೇ ಪ್ರಪಂಚದಿಂದ ಸಿಡಿದೆದ್ದು ಪಿಶಾಚಿರೂಪು ತಾಳಿ ಶಿವನನ್ನು ಹಾಡಿ, ಬೇಡಿ ಅವನ ಕರುಣೆಯನ್ನು ಪಡೆದು, ಅವನಲ್ಲಿಯೇ ಒಂದಾಗಿದ್ದಾಳೆ.

ಷಟ್‌ಸ್ಥಲಮಾರ್ಗದನ್ವಯ ಕರದಿಷ್ಟಲಿಂಗವನ್ನು ಏಕಾಗ್ರಚಿತ್ರದಿಂದ ಪೂಜಿಸಿ, ತನ್ನ ತಾನರಿಯುವ ಸಾಧನೆಗೆ ಚಿಕ್ಕಂದಿನಿಂದಲೂ ಮಹಾದೇವಿಯಕ್ಕ ತೊಡಗಿದವಳು. ತನ್ನ ವಿನೋದಕ್ಕೆ ತಾನೇ ಸೃಷ್ಟಿಸಿದ ಸಕಲ ಪ್ರಪಂಚವನ್ನು ಅರಿತು ಜಗದ್ವಿಲಾಸ ಸಾಕಾದಾಗ ಆ ಮಾಯೆಯ ಪಾಶವನ್ನು ಜಗನ್ನಿಯಾಮಕನಾದ ಆ ಶಿವನು ಹರಿದುಹಾಕುವನೆಂದು ಮನಗಂಡವಳು. ಚಲುವ ಚನ್ನಮಲ್ಲಿಕಾರ್ಜುನನ ಸತಿಯಾಗಿ ಅತ್ಯಂತ ಒಲುಮೆಯಿಂದ

ಅವನನ್ನು ಪ್ರೀತಿಸಿದವಳು. ಅವಳ ತತ್ತ್ವ 'ಶರಣಸತಿ ಲಿಂಗಪತಿ' ಎಂಬುದು. ಇಂಥ ಉದ್ದಾಮ ಆಧ್ಯಾತ್ಮಿಕ ಮಧುರಭಕ್ತಿಯ ಪರಾಕಾಷ್ಠೆಯಿಂದಾಗಿ ಅವಳು ವೀರವಿರಾಗಿಣಿಯಾದವಳು. 'ತನ್ನರಿವೇ ತನಗೆ ಗುರು' ಎಂದು ನಂಬಿದ ಅಕ್ಕ ಅಂತಹ ಅರಿವನ್ನು ಅಳವಡಿಸಿಕೊಂಡು ಆ ಅರಿವಿನಿಂದಲೇ ಮಹಾನುಭವಿಯಾದವಳು ಅವಳ ದೃಷ್ಟಿಯಲ್ಲಿ ಈ ಸೃಷ್ಟಿಯೇ ಶಿವಸೃಷ್ಟಿ. ವನವೆಲ್ಲಾ, ವನದೊಳಗಣ ದೇವತರುವೆಲ್ಲಾ ಶಿವನ ರೂಪ. ಪಾರಮಾರ್ಥ ಜಗತ್ತನ್ನರಿತ ಅವಳಿಗೆ ಲೌಕಿಕ ಜಗತ್ತೆಂಬುದೇ ಇಲ್ಲ. ತನುಮನ ಪ್ರಾಣಗಳೆಲ್ಲಾ ಶಿವಮಯವಾದುದರಿಂದ ಮಹಾದೇವಿಯಕ್ಕ ಕೊನೆಯ ಹಂತವೇರಿದವಳಾಗಿದ್ದಾಳೆ ಅದುವೇ ಲಿಂಗಾಂಗ ಸಾಮರಸ್ಯ ಸಿದ್ಧಾಂತವಾಗಿದೆ.

ಲಿಂಗದಲ್ಲಿ ಏಕಾಗ್ರಚಿತ್ತದ ಏಕೈಕ ನಿಷ್ಠೆ, ಶಿವಾರ್ಪಣೆ, ಲಿಂಗಪಾತಿವ್ರತ್ಯ-ಇವೆಲ್ಲಾ ಮಹಾದೇವಿಯಕ್ಕನ ಜೀವನದ ಉಸಿರಾಗಿದ್ದುವು. ಲೋಕದಲ್ಲಿ ಬಂದ ಸ್ತುತಿ-ನಿಂದೆಗಳಿಗೆ ತಲೆಬಾಗದ ಧೀರೆ ಅವಳು. ಭಕ್ತಿ-ಜ್ಞಾನ ವೈರಾಗ್ಯಗಳ ತ್ರಿವೇಣಿ ಸಂಗಮವೇ ತಾನಾಗಿದ್ದರೂ ಅವಳಲ್ಲಿ ಅಹಂಭಾವವೆಂಬುದಿರಲಿಲ್ಲ.

ಶೈವಧರ್ಮದ ಮೂವತ್ತಾರು ತತ್ತ್ವಗಳ ಹಾಗೂ ವೀರಶೈವ ಧರ್ಮದ ಮೂವತ್ತಾರು ತತ್ತ್ವಗಳ ಆವಿರ್ಭಾವ ಸೃಷ್ಟಿಯಲ್ಲಿ-ಪ್ರವೃತ್ತಿಯಲ್ಲಿ ಎರಡೂ ಒಂದೇ. ಮೂಲಪರಶಿವನಿಂದ ಸೃಷ್ಟಿಯುತ್ಪತ್ತಿ. ಆದರೆ ಮೂಲ ಪರಬ್ರಹ್ಮದಲ್ಲಿ ಶಕ್ತಿ ಅವಿನಾಭಾವವಾಗಿ ಇದೆಯೆಂಬುದು ವೀರಶೈವ ಸಿದ್ಧಾಂತ. ಆ ಶಕ್ತಿಗೆ ಊರ್ಧ್ವಪ್ರಕೃತಿ-ಅಧಃಪ್ರಕೃತಿ ಎಂಬ ಎರಡು ರೂಪ. ಮಹಾದೇವಿಯಕ್ಕನದು ಊರ್ಧ್ವಪ್ರಕೃತಿಯಾಗಿದೆ.

ಶೈವ, ವೀರಶೈವಗಳೆರಡಕ್ಕೂ ಭಕ್ತಿಯೇ ಸಾಧನ. ಮಹಾದೇವಿಯಕ್ಕನಲ್ಲಿ ಸಮರಸ ಭಕ್ತಿಯನ್ನು ಕಾಣುತ್ತೇವೆ. ಪಂಚಮ ಪುರುಷಾರ್ಥಭಕ್ತಿಯೇ ಮುಕ್ತಿ. ಕಾರಿಕಾಲಮ್ಮೆಯಲ್ಲಿ ಸಾಧ್ಯಭಕ್ತಿ, ಅವಳು ಶಿವಭಕ್ತರು ನಡೆದ ತಾಣದಲ್ಲಿ, ಕಾಲಿನಿಂದ ನಡೆಯಲಾಗದು ತಲೆಯೂರಿ ನಡೆಯಬೇಕೆಂದು ಹೇಳಿ, ಹಾಗೇ ನಡೆದು, ಕೊನೆಗೆ ಶಿವನಿಂದ "ಎಮ್ಮಮ್ಮೆ ನಿಮ್ಮತ್ತೆ" ಎಂದು ಪಾರ್ವತಿಯೆದುರು ನುಡಿಸಿಕೊಂಡವಳು. ಮಹಾದೇವಿಯಕ್ಕನದು ಸಮಸ್ತ ಮಾನವ ಕುಲಕ್ಕೆ ಮೋಕ್ಷವನ್ನು ಕೊಡಬಲ್ಲ ಪ್ರಭುದೇವನನ್ನು ಅವಾಕ್ಕಾಗಿ ಮಾಡಿದ ದಿವ್ಯ ಜ್ಞಾನಪ್ರಭೆಯದು. ತನಗುಂಟಾದ ಸುಜ್ಞಾನದ ಉದಯ. ಶಿವಾನುಭಾವದ ವಿಷಯಗಳನ್ನು ಎತ್ತಿ ಆಕೆ ಮಾತನಾಡಿದಾಗ, "ನಾ ಸತ್ತೆನೆಂದು ಹೆಣ ಕೂಗಿದುದುಂಟೆ"?[೧] ಎಂದು ಪ್ರಭುದೇವರು ಪ್ರಶ್ನಿಸುತ್ತಾರೆ ಉತ್ತರ ರೂಪವಾಗಿ ಮಹಾದೇವಿಯಕ್ಕ ಹೆಣ ನಾ ಸತ್ತೆನೆಂದು ಕೂಗಿದ್ದೂ ಉಂಟು[೨] ಎನ್ನುತ್ತಾಳೆ, ಕನಸಿನಲ್ಲಿ ಕಂಡದ್ದನ್ನು ಜಾಗೃತ ಅವಸ್ಥೆಯಲ್ಲಿ ನಾವು ನುಡಿಯುತ್ತೇವೆ ಎಂದು ಉದಹರಿಸುತ್ತಾಳೆ. ಇಂತಹ ಸಾದೃಶ್ಯಗಳಿಂದ ಶಿವಾನುಭವದ ತುತ್ತತುದಿಯನ್ನು ಬಿತ್ತರಿಸಿದ್ದಾಳೆ ಮಹಾದೇವಿಯಕ್ಕ.

ಕಾರಿಕಾಲಮ್ಮೆ ಮೌನ, ಮಹಾದೇವಿಯಕ್ಕ ಮಿಂಚು. ಅವರಿಬ್ಬರೂ ಭಿನ್ನ ದಾರಿಗಳಾದ ದ್ವೈತ, ಶಿವಾದ್ವೈತ ಮಾರ್ಗದಲ್ಲಿ ನಡೆದು, ಮುಕ್ತಿಯ ನೆರವಿನಿಂದ ನಿಂದ ಮಹಾಜ್ಯೋತಿಗಳು.

ವೆನ್ಬಾ ಮತ್ತು ವಿರುತ್ತಮ್ ಛಂದೋವೃತ್ತಗಳಲ್ಲಿ ಹಾಡುಗಳನ್ನು ರಚಿಸಿ, ತಮಿಳು ಸಾಹಿತ್ಯಕ್ಕೆ ಕಾರಿಕಾಲಮ್ಮೆ ನೀಡಿದ ಕಾಣಿಕೆ ಅಪೂರ್ವವಾದುದು. ತಮಿಳು ನಾಯನಾರರಲ್ಲಿಯ ಸಮಯಾಚಾರಿಗಳಿಗಿಂತಲೂ ಪೂರ್ವದಲ್ಲಿದ್ದ ಈ ಕಾರಿಕಾಲಮ್ಮೆ ಶೈವಧರ್ಮಕ್ಕೆ ಸಂಬಂಧಪಟ್ಟ ಹಾಡುಗಳನ್ನು ಬರೆದ ಮೊದಲ ಕವಯಿತ್ರಿಯೂ ಆಗಿದ್ದಾಳೆ.

ಮಹಾದೇವಿಯಕ್ಕನ ಸಾಹಿತ್ಯವನ್ನು ಅವಲೋಕಿಸಿದಾಗ, ಅವಳ ಘನವ್ಯಕ್ತಿತ್ವದ ಅರಿವು ನಮಗಾಗುತ್ತದೆ. ಸ್ತ್ರೀಯೂ ಆಧ್ಯಾತ್ಮ ವಿಷಯ ಅರಿತು, ಸಾಧನೆಗಿಳಿದು, ಶಿವಯೋಗಿಣಿಯಾಗ ಬಲ್ಲಳೆಂಬುದನ್ನು ಮಹಾದೇವಿಯಕ್ಕ ತನ್ನ ಆಚರಣೆಯಿಂದ ತೋರಿಸಿಕೊಟ್ಟಿದ್ದಾಳೆ. ಅದೂ ಮುಗ್ಧವಾಗಿ ಬಂದುದಲ್ಲ, ಜ್ಞಾನಪೂರ್ಣವಾಗಿ ಬಂದದ್ದು. ಅಂಥ ಜ್ಞಾನ ಕ್ರಿಯೆಗಳಿದು ದರಿಂದಲೇ ಅವೆರಡರ ಸುಂದರ ಸಂಗಮ ಅವಳ ಅನುಭವಕ್ಕೆ ಕನ್ನಡಿ ಹಿಡಿದಂತಾಗಿದೆ. ಆ ಅನುಭವದ ಆಳದಿಂದಲೇ ಹೊರಹೊಮ್ಮಿದೆ–ಅವಳ ಸಾಹಿತ್ಯ. ಅವಳು ತ್ರಿಪದಿಯಲ್ಲಿ ಬರೆದಿರುವ ಯೋಗಾಂಗ ತ್ರಿವಿಧಿಯಂತೂ ಶಿವಯೋಗವನ್ನು ಪ್ರತಿಪಾದಿಸುವ ಸಂಕ್ಷಿಪ್ತ ಸಿದ್ಧಾಂತ ಕೃತಿಯಾಗಿದೆ. ಅವಳ ವಚನಗಳಲ್ಲೆಲ್ಲಾ ಅಂತರಂಗದ ಆಧ್ಯಾತ್ಮಿಕ ಅನುಭಾವದ ನೈಜ ಚಿತ್ರ ಇದ್ದಕ್ಕಿದ್ದಂತೆಯೇ ಮೂಡಿ ಬಂದಿರುತ್ತದೆ. ಅಧ್ಯಾತ್ಮ ಸಾಧನೆಯಲ್ಲಿ ತೊಡಗಿದಾಗಿನ ಮನೋವೇದನೆಗಳ, ರಾಗರಸಗಳ ಭಾವ ತೀವ್ರತೆಯ ವಾಸ್ತವಿಕ ಚಿತ್ರ ಅವಳ ಸಾಹಿತ್ಯದಲ್ಲೆಲ್ಲ ಮೂಡಿಬಂದಿದೆ. ಅಂತಹ ಸಾಹಿತ್ಯ ಓದುವುದರಿಂದ ದೊರಕುವ ಆನಂದ ಕ್ಷಣಿಕ ಕಾಲದ್ದಲ್ಲ. ಶಾಶ್ವತವಾದದ್ದು. ಸಾಕ್ಷಾತ್ಕಾರಕ್ಕೆಳಸುವಂತಹದು. ಕಲ್ಪನೆಯ, ತರ್ಕಗಳ ಜಾಡಕ್ಕೆ ಸಿಲುಕಿ, ಶಬ್ದಜಾಲಕ್ಕಿಳಿದ ಕಾವ್ಯಸೌಂದರ್ಯವಲ್ಲ–ಅವಳದು; ಶಿವನ ನಿಸ್ಸೀಮ ಭಕ್ತಳಾಗಿ, ಜ್ಞಾನಿಯಾಗಿ ವಿರಾಗಿಣಿಯಾಗಿ– ಕ್ರಿಯೆಗಿಳಿದ ಅವಳ ಸ್ವಾನುಭಾವ ಸಹಜವೂ ಸುಂದರವೂ ಆದ ಶಬ್ದಗಳಲ್ಲಿ ಕಾವ್ಯವಾಹಿನಿಯಾಗಿ ಹರಿದು ಬಂದಿದೆ. ಅಂತೆಯೆ, ವಚನಕಾರರಲ್ಲೆಲ್ಲ ಅವಳಿಗೆ ಹಿರಿಯ ಸ್ಥಾನ. ಕನ್ನಡ ಸಾಹಿತ್ಯದಲ್ಲಿ ಸ್ಪರ್ಧೆಗಿಳಿದಿರುವ ಕೆಲಪದ್ಯಗ್ಳು ಕಂತಿಯವೆಂದು ಹೇಳಿದರೂ ಅದು ದಂತಕಥೆ ಇರಬಹುದೆಂದು ಪಂಡಿತರ ಅಭಿಪ್ರಾಯ. ಇದರಿಂದಾಗಿ ಆ ತರುವಾಯದ ಈ ಮಹಾದೇವಿಯಕ್ಕನೇ ಕನ್ನಡ ಸಾಹಿತ್ಯದ ಮೊದಲ ಕವಯಿತ್ರಿಯಾಗಿದ್ದಾಳೆ.

ಹೀಗೆ 'ಕುಲವ ನಾಲಗೆಯಱುಹಿತು'[೩] ಎಂಬ ನಾಣ್ನುಡಿಯಂತೆ ಅವರಿಬ್ಬರ ಕಾವ್ಯ ಕೃತಿಗಳಲ್ಲಿ ಹೊರಚೆಲ್ಲಿದ ನುಡಿಗಳಿಂದ ಕಾರಿಕಾಲಮ್ಮೆ ಮತ್ತು ಮಹಾದೇವಿಯಕ್ಕ ಇವರ ಘನ ವ್ಯಕ್ತಿತ್ವದ, ಅನುಭವದ ಅರಿವನ್ನುಂಟುಮಾಡಿಕೊಳ್ಳಬಹುದಾಗಿದೆ.

ಕಾರಿಕಾಲಮ್ಮೆ ಮತ್ತು ಮಹಾದೇವಿಯಕ್ಕ ಅವರು ಬಾಳಿದ ಕಾಲದಲ್ಲಿ ಸುಮಾರು ಆರು ನೂರು ವರುಷಗಳ ಅಂತರವಿದೆ. ಇಷ್ಟು ದೀರ್ಘಾವಧಿಯ ಅಂತರದಲ್ಲಿದ್ದ ಜೀವಿತದ ಘಟನೆ ಗಳನ್ನು ತೌಲನಿಕ ದೃಷ್ಟಿಯನ್ನಿಟ್ಟುಕೊಂಡು ನೋಡಿದಾಗ ಕೆಲ ಸಾಮ್ಯ ವೈಷಮ್ಯಗಳನ್ನು ಕಾಣುತ್ತೇವೆ.

ಇಬ್ಬರೂ ಸುಸಂಸ್ಕೃತ ಮನೆತನಗಳ, ಶಿವಭಕ್ತ ತಂದೆತಾಯಿಗಳ ಉದರದಿಂದ ಜನಿಸಿದವರು. ಚಿಕ್ಕಂದಿನಿಂದಲೂ ಶಿವನ ಆರಾಧಕರು. ರೂಪಗುಣಶೀಲಸಂಪನ್ನರು. ಕಾರಿಕಾಲಮ್ಮೆ ತಾನು ಮಾತು ಕಲಿತಂದಿನಿಂದ ಶಿವನನ್ನು ಪೂಜಿಸಲು, ಧ್ಯಾನಿಸಲು, ನಾಮ ಸ್ಮರಣೆ ಮಾಡಲು ಕಲಿತವಳು. ಮಹಾದೇವಿಯಕ್ಕನೂ ಶಿವನನ್ನು ಕುರಿತು ಹಾಡಿದಲ್ಲದೆ ಸೈರಿಸ ಲಾರೆನೆಂದಂದು ಬಾಲ್ಯದಿಂದಲೂ ಹಾಡಿದವಳು. ಕಾರಿಕಾಲಮ್ಮೆಯ ಪೂಜೆ ಸ್ಥಾವರಲಿಂಗಕ್ಕೆ, ಮಹಾದೇವಿಯಕ್ಕನದು ಇಷ್ಟಲಿಂಗಕ್ಕೆ. ಆ ಲಿಂಗಗಳ ಮುಖಾಂತರವಾಗಿ ತಮ್ಮ ತಮ್ಮ ಹೃದಯಮಂದಿರದಲ್ಲಿರುವ ಶಿವನನ್ನು ಮೊರೆಹೊಕ್ಕವರು.

ವಯಸ್ಸಿಗೆ ಬಂದ ಕಾರಿಕಾಲಮ್ಮೆಯ ವಿವಾಹ ಶೈವಕುಲದ ಪರಮದತ್ತನ ಜೊತೆಗೆ ಆಗುತ್ತದೆ. ಕೌಶಿಕ ಭವಿಯೂ ಕಾಮುಕನೂ ಇದ್ದುದರಿಂದ ಮಹಾದೇವಿಯಕ್ಕ ಅವನನ್ನು ಲಗ್ನವಾಗಲು ನಿರಾಕರಿಸುತ್ತಾಳೆ. ಬಲಾತ್ಕರಿಸಹೋದಾಗ ಉಟ್ಟಸೀರೆಯ ತೊರೆದು ದಿಗಂಬರೆ

ಯಾಗುತ್ತಾಳೆ. ಕಾರಿಕಾಲಮ್ಮ ಅನೇಕ ವರುಷಗಳವರೆಗೆ ಪತಿ ಪರಮದತ್ತನ ಜೊತೆ ದಾಂಪತ್ಯ ಜೀವನ ಸಾಗಿಸುತ್ತಾಳೆ. ಅಂಥ ದಾಂಪತ್ಯದ ಕ್ಷಣಿಕ ಕಾಲದ ಸುಖವನ್ನು ಮಹಾದೇವಿಯಕ್ಕ ಮೀರಿ ನಡೆದಿದ್ದಾಳೆ. ಅವಳದು ಶಾಶ್ವತ ಸುಖಕ್ಕಾಗಿ ಹಾತೊರೆಯುವ ಮನೋವೃತ್ತಿ. ಕಾರಿಕಾಲಮ್ಮ ಒಳ್ಳೆಯ ಗೃಹಿಣಿಯಾಗಿ ಪ್ರಪಂಚದಲ್ಲಿದ್ದು ಪಾರಮಾರ್ಥಿಕ ಜೀವನ ಸಾಗಿಸುತ್ತಿದ್ದ ಮಹಿಳಾ ಮಣಿ. ಅವಳಿಗೆ ಶಿವಭಕ್ತರೆಂದರೆ ಪಂಚಪ್ರಾಣ. ಅಂಥ ಶಿವಭಕ್ತನೊಬ್ಬನಿಗೆ ಮಾವಿನ ಹಣ್ಣಿತ್ತ ಆ ಘಟನೆಯೇ ಅವಳ ವೈರಾಗ್ಯ ಜೀವನಕ್ಕೆ ಮೂಲ ಕಾರಣವಾಗುತ್ತದೆ. ಆಗಲೇ ಪತಿ ಪರಮದತ್ತನು ಅವಳ ದೈವೀಶಕ್ತಿಯನ್ನು ಅರಿಯುವಂತಾಗುತ್ತದೆ. ಸತಿಯೆಂದು ಭಾವಿಸದೆ ದೇವಿಯೆಂದು ನಮಸ್ಕರಿಸಿದಾಗ ಕಾರಿಕಾಲಮ್ಮ ಪತಿಗಾಗಿ ಮೀಸಲಿದ್ದ ದೇಹ ಸೌಂದರ್ಯವು ನಶಿಸಿಹೋಗಲಿ ಎನ್ನುತ್ತಾಳೆ. ಪಿಶಾಚಿಯ ವಿಕಾರರೂಪ ಬೇಕೆಂದು ಶಿವನನ್ನು ಬೇಡಿ ಪಡೆಯುತ್ತಾಳೆ. ಪತಿಯಿಂದ ಅಗಲಿ ಶಿವನನ್ನು ಕಂಡು, ತಿರುವಾಲಂಗಾಡಿನಲ್ಲಿ ಆ ಶಿವನ ದಾಸಾನುದಾಸಳಾಗಿ ಸೇವೆ ಸಲ್ಲಿಸುತ್ತ ನಾಮಸ್ಮರಣೆ ಮಾಡಿ, ಹಾಡಿ ಕೊನೆಗೆ ಅಲ್ಲಿಯೆ ಶಿವಸದ್ಗತಿಯನ್ನು ಹೊಂದುತ್ತಾಳೆ.

ಮಹಾದೇವಿಯಕ್ಕನೂ ಚಿಕ್ಕಂದಿನಿಂದ ಚೆನ್ನಮಲ್ಲಿಕಾರ್ಜುನನೇ ಪತಿಯೆಂದು ನಂಬಿದವಳು. ಸಾವಕೆಡುವ ಗಂಡರನ್ನು ಅಲ್ಲಗಳೆದು ಶರಣಸತಿ ಲಿಂಗಪತಿ ಭಾವ ತಾಳಿದವಳು. ಅಂತೆಯೆ ಕಾಮುಕ ಕೌಶಿಕ ಪ್ರೀತಿಸಿದಾಗ ಅಮೇಧ್ಯದ ಮಡಿಕೆಯೆಂದಂದು ಬಟ್ಟೆಗಳನ್ನೆಲ್ಲಾ ಕಳಚಿ ಅರಸನ ಮೇಲೆ ಬಿಸಾಕಿ ಹೋಗುತ್ತಾಳೆ. ವೈಹಾಳಿಯಿಂದ ಮೆರವಣಿಗೆಯಲ್ಲಿ ಬರುತ್ತಿರುವಾಗ ಕೌಶಿಕ ಈ ಮಹಾದೇವಿಯ ರೂಪಕ್ಕೆ ಮರುಳಾದ ಘಟನೆಯೇ ಅವಳ ವೈರಾಗ್ಯಕ್ಕೆ ಕಾರಣ ವಾಗುತ್ತದೆ. ಶಿವಭಕ್ತನಲ್ಲದ ಕೌಶಿಕನನ್ನು ಅಗಲಿ, ಚೆನ್ನಮಲ್ಲಿಕಾರ್ಜುನನೇ ತನ್ನ ಪತಿ, ಆತ್ಮಸಂಗಾತಕ್ಕೆ ಎಲ್ಲೆಲ್ಲಿಯೂ ಅವನೇ ಎಂದೆನ್ನುತ್ತ ಕಲ್ಯಾಣ ಸೇರುತ್ತಾಳೆ. ಶರಣರ ಸಂಗ ದಿಂದಾಗಿ ಅನುಭಾವ ಮಾರ್ಗದ ಕೊನೆಯ ಹಂತವನ್ನೇರಿ, ಲೋಕಗುರು ಅಲ್ಲಮನಿಂದ ನಿಜದ ನೆಲೆಯನ್ನರಿತು ಶ್ರೀ ಶೈಲ ಸೇರಿ ಲಿಂಗೈಕ್ಯಳಾಗುತ್ತಾಳೆ.

ಕಾರಿಕಾಲಮ್ಮೆಯ ಜೀವನದಲ್ಲಿ ಮುಖ್ಯವಾಗಿ ಎರಡು ಘಟ್ಟಗಳು. ಒಂದ್ನು–ಲೌಕಿಕ ದೊಡನೆ ಇದ್ದುಕೊಂಡು ಒಳ್ಳೆಯ ಗೃಹಿಣಿಯಾಗಿ ಬಾಳಿದುದು. ಇನ್ನೊಂದು–ಲೌಕಿಕ ಗಂಡನೇ ಇವಳನ್ನು ಸತಿಯೆನ್ನದೆ ದೇವಿಯೆಂದಾಗ ಪಿಶಾಚಿರೂಪು ತೊಟ್ಟು ತಿರುವಾಲಂಗಾಡಿನಲ್ಲಿ ಶಿವನ ಕಂಡು–ಹಾಡಿಪಾಡಿ ಪಾರಮಾರ್ಥಿಕ ಜೀವನ ಸಾಗಿಸಿದುದು.

ಮಹಾದೇವಿಯಕ್ಕನ ಜೀವನದಲ್ಲಿಯೂ ಮುಖ್ಯವಾಗಿ ಎರಡು ಘಟ್ಟಗಳನ್ನು ಕಾಣುತ್ತೇವೆ. ಬಾಲ್ಯದಿಂದಲೂ ಶಿವಭಕ್ತಳಾಗಿ 'ಶರಣ ಸತಿ ಲಿಂಗ ಪತಿ' ಭಾವ ಬೆಳೆದುದರಿಂದ ಭವಿಯ ಬಯಸದೆ ದಿಗಂಬರೆಯಾದುದು. ಇನ್ನೊಂದು–ಶರಣರ ಅನುಭವ ಮಂಟಪ ಸೇರಿ ಶಿವಾನು ಭವಿಯಾಗಿ ಅಲ್ಲಮನ ಮಾರ್ಗದರ್ಶನದೊಂದಿಗೆ ಶ್ರೀಶೈಲದಲ್ಲಿ ಲಿಂಗಾಂಗ ಸಾಮರಸ್ಯ ಹೊಂದಿದುದು. ಮಹಾದೇವಿಯಕ್ಕನು ದೇವರೇ ಪತಿಯೆಂದು ಭಾವಿಸಿದವಳು. ಕಾರಿಕಾಲಮ್ಮ ತಂದೆಯೆಂದು ಬಗೆದವಳು. ಮಹಾದೇವಿಯಕ್ಕನದು ಶರಣಸತಿ, ಲಿಂಗಪತಿ ಮಾರ್ಗ, ವೀರಶೈವಧರ್ಮ. ಕಾರಿಕಾಲಮ್ಮೆಯದು ದಾಸ ಮಾರ್ಗ; ಶೈವಧರ್ಮ. ಮಹಾದೇವಿಯಕ್ಕ ಮಹಶಿವಶರಣೆ. ಶಿವಯೋಗಿಣಿ. ಕಾರಿಕಾಲಮ್ಮ ಆದರ್ಶ ಗೃಹಿಣಿ, ಯೋಗಿಣಿ. ಕಾರಿ ಕಾಲಮ್ಮೆಯದು ಮುಗ್ಧಭಕ್ತಿಯೆನಿಸಿದರೆ ಮಹಾದೇವಿಯಕ್ಕನದು ಶುದ್ಧ ಸಾತ್ವಿಕ ಭಕ್ತಿ. ಒಂದು ದ್ವೈತಭಕ್ತಿ; ಇನ್ನೊಂದು ಶಿವಾದ್ವೈತ ಸದ್ಭಕ್ತಿ. ಇಬ್ಬರದೂ ಅಸಾಮಾನ್ಯ ವ್ಯಕ್ತಿತ್ವ. ಲೋಕದ ಜನ

ಏನೇ ಅಂದುಕೊಂಡರೂ ಶಿವ ಮೆಚ್ಚಿದರೆ ಸಾಕೆಂದು ಆಧ್ಯಾತ್ಮ ಜೀವನ ಸಾಗಿಸಿದವರು. ಅವರಿಬ್ಬರ ಬಾಲ್ಯಜೀವನ ಅನುಕರಣೀಯವಾದುದು, ಆದರ್ಶ ವಾದುದು. ಕಾರಿಕಾಲಮ್ಮೆಯ ದಾಂಪತ್ಯಜೀವನವೂ ಲೌಕಿಕ ರೀತಿಯಿಂದ ಆದರ್ಶವಾದದ್ದೇ. ಆದರೆ ಕಾರಿಕಾಲಮ್ಮೆ ಪಿಶಾಚಿಯಾಗಿ. ಮಹಾದೇವಿಯಕ್ಕ ದಿಗಂಬರೆಯಾಗಿ ನಡೆದ ಜೀವನ, ಲೌಕಿಕ ಜಗತ್ತಿಗೆ ಬಾಹಿರವಾದದ್ದು. ಆದರೂ ತಮ್ಮ ತಮ್ಮ ಜೀವನದಲ್ಲಿ ಬಂದ ಘಟನೆಗಳನ್ನು ಧೀರರಾಗಿ, ಧೀಮಂತರಾಗಿ ಎದುರಿಸಿ ಶ್ರೇಷ್ಟ ಜೀವನ ಸಾಗಿಸಿದ ಮಹಿಳೆಯರಿವರು.

ಸ್ತ್ರೀಗೂ ಆತ್ಮವಿದೆ. ಪೂಜಾಸ್ವಾತಂತ್ರ್ಯವಿದೆ. ಆಧ್ಯಾತ್ಮ ಸಾಧನೆಯಿದೆ. ಇವೆಲ್ಲವುಗಳಿಂದ ಅವಳೂ ಶಿವಸದ್ಗತಿಯನ್ನು ಹೊಂದಬಲ್ಲಳೆಂಬುದನ್ನು ಈ ಸ್ತ್ರೀ ಅನುಭಾವಿಗಳಿಬ್ಬರೂ ಸಾಧನೆಯಿಂದ ಮನುಕುಲಕ್ಕೆ ತೋರಿಸಿಕೊಟ್ಟಿದ್ದಾರೆ.

ಕಾರಿಕಾಲಮ್ಮೆ ಸಂಸಾರವನ್ನು ತುಚ್ಛವೆಂದು ಬಗೆಯದೆ ಒಳ್ಳೆಯ ಗೃಹಿಣಿಯಾಗಿ ಕೈಹಿಡಿದ ಪತಿಯ ಸೇವೆ ಮಾಡಿದ ಶ್ರೇಷ್ಟ ಪತಿವ್ರತಾ ಮಹಿಳೆ. ಅವಳ ಗಂಡನೇ ಅವಳನ್ನು ಸತಿಯೆಂದು ಒಲ್ಲೆನೆಂದಾಗ, ಅವನಿಗಾಗಿ ಮೀಸಲಾಗಿದ್ದ ಆ ಬಾಹ್ಯ ಸೌಂದರ್ಯವನ್ನು ಅಲ್ಲಿಯೇ ಕಿತ್ತೆಸೆಯುತ್ತಾಳೆ, ಮಾಂಸದ ಮುದ್ದೆಗಳನ್ನೆಲ್ಲಾ ಹರಿದು ಚೆಲ್ಲುತ್ತಾಳೆ. ಅದಕ್ಕೆ ಕಾರಣ –ಸಮಾಜ ಪತಿಬಿಟ್ಟ ಹೆಣ್ಣೆಂದು ಕಾಮುಕ ದೃಷ್ಟಿಯಿಂದ ಪೀಡಿಸಬಾರದೆಂದು. ಇದುವರೆಗೂ ಸತಿಯಾಗಿದ್ದ ಅವಳ ರಕ್ಷಣೆಯ ಭಾರ ಪರಮದತ್ತನದಾಗಿತ್ತು. ಇನ್ನು ಮೇಲೆ ಕಾರಿಕಾಲಮ್ಮೆ ತನ್ನ ರಕ್ಷಣೆಗೆ ಹೊಣೆ ..... ತಾನೇಯಾಗಬೇಕಾಯ್ತು. ಅವಳಿಗೆ ಭಯ ಬಂದುದು ಅವಳ ಬಾಹ್ಯ ಸೌಂದರ್ಯದಿಂದಾಗಿ. ಪರಿಹಾರಕ್ಕೆಂದು ಪಿಶಾಚಿ ರೂಪು ತೊಟ್ಟು ಕುರೂಪಿಯಾಗುತ್ತಾಳೆ. ಶಿವಭಕ್ತರೆಲ್ಲ ನಡೆದುಹೋದ ಹೆಜ್ಜೆಗಳಲ್ಲಿ ತಲೆಯೂರುತ್ತ ನಡೆಯುತ್ತಾಳೆ. ಮಹಾಪುರುಷರ ಹೆಜ್ಜೆಗಳೆಂದರೆ ಪವಿತ್ರವಾದವುಗಳು. ಅವುಗಳನ್ನು ತುಳಿದು ಅಪವಿತ್ರ ಗೊಳಿಸಬಾರದೆಂದಂದು ತಲೆಯ ಮೇಲೆ ಹೊತ್ತುಕೊಂಡು ಅಂದರೆ ತಲೆಯೂರಿ ನಡೆದುಹೋದ ಏಕೈಕ ಮಹಿಳಾಮಣಿ ಇವಳು. ಅದನ್ನು ಕಂಡ ಶಿವ ಬೆಪ್ಪಾಗಿ–ತಾಯೆ ಎಂದು ಕರುಣಿಸುತ್ತಾನೆ.

ಅಂತೂ ಕಾಲಿಕಾಲಮ್ಮೆ ತನ್ನ ಜೀವಿತದ ಕೊನೆಯ ದಿನಗಳನ್ನು ಬಹು ಕಷ್ಟದ ದಿನ ಗಳನ್ನಾಗಿ ಕಳೆದಳು. ಇವಳು ಸಹಿಸಿದ ಆ ಕಾಯಕಷ್ಟ ಅದ್ಭುತವಾದುದು. ಕಾರಿಕಾಲಮ್ಮೆಯ ನಿಜ ಭಕ್ತಿ, ಭಕ್ತರ ಆದರಾತಿಥ್ಯ, ಪತಿಯಲ್ಲಿ ಪಾತಿವ್ರತ್ಯ ಗುಣ, ಹೊಂದಾಣಿಕೆ, ಏಕಾಕಿ ಯಾಗಿದ್ದಾಗ ಅಲಂಕರಿಸಿಕೊಳ್ಳದಿರುವದು. ನಿಸ್ವಾರ್ಥ ಪ್ರಾರ್ಥನೆ, ಸತ್ಯವನ್ನು ತ್ಯಜಿಸದಿರುವದು, ದೇವರ ಅನುಗ್ರಹಕ್ಕಾಗಿಯೆ ಹಂಬಲಿಸುವುದು, ಮೊದಲಾದವುಗಳು ಆಕೆಯ ಜೀವನದಿಂದ ಕಲಿತುಕೊಳ್ಳುವ ಪಾಠಗಳಾಗಿವೆ.

"The story of this pious lady has many a lesson to teach her sisters of the present day. True devotion to God, hospitality to bhaktas, attachment to the husband, renunciation of presonal adornment by women when alone, unceasing prayer for selflessness. strict adherence to truth, reliance on God's mercy are some of them."[4]

ಮಹಾದೇವಿಯಕ್ಕ ಸಂಸಾರವನ್ನು ತುಚ್ಛವೆಂದು ಕಂಡು ತನಗೆ ಉಚ್ಚತಮವಾದದ್ದೆಂದು ಅನಿಸಿದುದನ್ನು ಅನುಸರಿಸಿ ಧೈರ್ಯದಿಂದ ವೀರವಿರಾಗಿಣಿಯಾದವಳು. ಅನುಭವ

ಮಂಟಪದಲ್ಲಿ ಶಿವಶರಣರು ಅವಳನ್ನು ಒರೆಗೆ ಹಚ್ಚಿದಷ್ಟೂ ಪರಿಶುದ್ಧಳಾಗಿದ್ದಾಳೆ. ಧೀರಳಾಗಿ ಶಾಂತಳಾಗಿ ತನ್ನ ನಿಜದ ಅರಿವನ್ನು ಅವರೆಲ್ಲರ ಮುಂದಿಟ್ಟಾಗ ಆಕೆಯ ವಿನಯಗುಣ ಇನ್ನೂ ಹೆಚ್ಚಾಗಿದೆ. ಅಂತೆಯೆ ಮನಸ್ಸಿನಲ್ಲಿ ಕಿರಿಯವಳಾದರೂ ಅನುಭವಮಂಟಪದ ಹಿರಿಯ ಶಿವಶರಣರಿಗೂ 'ಅಕ್ಕ' ಎಂದಾಗಿದ್ದಾಳೆ. ಇಂಥ ಘನವ್ಯಕ್ತಿತ್ವದ ಮಹಾದೇವಿಯಕ್ಕ ಅಂತೆಯೆ ಹೆಸರಿನಲಿ ಹೆಣ್ಣು ರೂಪಾದರೂ ಭಾವದಲಿ ಗಂಡು ರೂಪಾಗಿ ಕಂಡಿದ್ದಾಳೆ. ಮಹಾದೇವಿಯಕ್ಕನ ಸುಸಂಸ್ಕೃತ ಜೀವನ ಲೌಕಿಕ ಜಗತ್ತಿಗಿಳಿಯದೇ ಲೋಕಬಾಹಿರವಾಗಿ ಪಾರಮಾರ್ಥಿಕ ಪ್ರಪಂಚಕ್ಕೆ ತಿರುಗಿದುದನ್ನು ಕಾಣುತ್ತೇವೆ. ಇದರಿಂದಾಗಿ ಜೀವನದಲ್ಲಿ ಅನೇಕ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದೆಗಳು ಬಂದಾಗ ಮನದಲ್ಲಿ ಕೋಪವನ್ನು ತಾಳದೆ ಸಮಾಧಾನಿಗಯಾಗಿದ್ದ ಅಕ್ಕನ ಜೀವನ ಜಗತ್ತಿಗೇನೇ ಇಂದು ಪಾಠ ಕಲಿಸುವಂತಿದೆ. ಅವಳು ತನ್ನ ಚಿಕ್ಕಂದಿನಿಂದಲೂ ಪರಿಶುದ್ಧ ಮನಸ್ಸಿನ ಸಂಸ್ಕಾರಕ್ಕಾಗಿ ಹಾತೊರೆದದ್ದು ಅವಳ ಉಚ್ಚಸಂಸ್ಕೃತಿಯ ಕುರುಹಾಗಿದೆ. ಅವಳನ್ನು ಕಾಮಿಸಿಬಂದ ಕೌಶಿಕ ದೊರೆಯನ್ನು ಒಲ್ಲೆನೆಂದು ದಿಗಂಬರೆಯಾದ ಘಟನೆ ಅವಳ ವೀರ ವೈರಾಗ್ಯವನ್ನು ಚಿತ್ರೀಕರಿಸುತ್ತದೆ. ವಿವಾಹವಾಗದಲೇ ಲೌಕಿಕ ಪತಿಯನ್ನು ಮೀರಿ, ಆಧ್ಯಾತ್ಮಿಕ ಪತಿಯಾದ ಪರಮಾತ್ಮನನ್ನೇ ಮೊರೆಹೊಕ್ಕು ಹೆಣ್ಣು ಬಾಳಬಲ್ಲದು, ಅಷ್ಟೇ ಅಲ್ಲ, ಮುಕ್ತಿ ಹೊಂದಬಲ್ಲದು ಎಂಬುದನ್ನು ತನ್ನ ಆಚರಣೆಯಿಂದ ಜಗತ್ತಿನ ಸ್ತ್ರೀ ಲೋಕಕ್ಕೆಲ್ಲ ತೋರಿಸಿಕೊಟ್ಟಿದ್ದಾಳೆ. ಅವಳ ಚಾರಿತ್ರಶುದ್ಧಿ, ನಿಷ್ಕಾಮಪ್ರವೃತ್ತಿ, ಲಿಂಗ ಪಾತಿವ್ರತ್ಯಗುಣ, ಅನುಭಾವಿಗಳ ಸತ್ಸಂಗ, ವಿನಯಗುಣ, ಶುದ್ಧ ಸಾತ್ವಿಕಭಕ್ತಿ, ಸಮಾಧಾನ ಪ್ರವೃತ್ತಿ ಮೊದಲಾದ ಗುಣಗಳನ್ನು ಕಂಡು ಇಂದು ಸ್ತ್ರೀ ಅಷ್ಟೇ ಅಲ್ಲ, ಮನುಷ್ಯಲೋಕವೇ ಅಚ್ಚರಿಪಡುವಂತಿದೆ.

ಮುಕ್ತಿ ಬಯಸುವ, ಜೀವಿತದ ಅಂತಿಮಗುರಿಯನ್ನು ಕಾಣುವ, ಪ್ರತಿಯೊಬ್ಬ ವ್ಯಕ್ತಿಯೂ ಅನುಸರಿಸಬೇಕಾದ ಆದರ್ಶ ಮಾರ್ಗಗಳನ್ನು ಈ ಇಬ್ಬರ ಜೀವನ ಚರಿತ್ರೆಯಿಂದಲೂ ನಾವು ಅರಿಯಬಹುದಾಗಿದೆ.

---

೧. ಭೂಸನೂರಮಠ : ಶೂನ್ಯಸಂಪಾದನೆ, ಪುಟ ೩೩೧ ವ. ೩೪.

೨. ಸಂ.ಶಿ. ಭೂಸನೂರಮಠ : ಶೂನ್ಯಸಂಪಾದನೆ, ಪುಟ ೩೩೧ ವ. ೩೫.

೩. ಹರಿಶ್ಚಂದ್ರ ಕಾವ್ಯ ಸಂಗ್ರಹ– ಪುಟ ೧೩.

೪. M.S. Puranalingam Pillai : Ten Tamil Saints & Co. Madras. (Chapter : Saint Karaikal Ammai the Demon poetess.)

೧೦. ಆಂಡಾಳ್ ಮತ್ತು ಅಕ್ಕಮಹಾದೇವಿ

•

ಜೆ. ಶಾರದ ರಾಜಶೇಖರ್

ಪ್ರಪಂಚದ ಅನೇಕ ಭಾಗಗಳಲ್ಲಿ ಪುರುಷರಂತೆ ಮಹಿಳೆಯರು ಸಹ ಭಗವಂತನನ್ನು ಕಾಣುವ ಹಂಬಲದಿಂದ ತಮ್ಮ ಆಧ್ಯಾತ್ಮಿಕ ಜೀವನದಿಂದ ಉದ್ದೀಪನಗೊಳಿಸಿಕೊಂಡಿರುವುದು ಸ್ಪಷ್ಟವಾಗಿದೆ. ವೇದ–ಉಪನಿಷತ್ತುಗಳ ಕಾಲದಲ್ಲಿ ಗಾರ್ಗಿ, ಮೈತ್ರೇಯಿಯ ವರಂಥವರು ಆಧ್ಯಾತ್ಮ ವಿದ್ಯೆಯಲ್ಲಿ ಬಲ್ಲಿದರಾಗಿದ್ದು, ಪುರುಷ ಸಮಾನ ಅವಕಾಶಗಳನ್ನು ಪಡೆದುಕೊಂಡಿದ್ದರು.

ಹೆಣ್ಣನ್ನು ಮಾಯಾ ಸೆರೆಯಿಂದ ಮತ್ತು ಅಸ್ಪೃಶ್ಯತೆಯ ಸಂಕೋಲೆ ಯಿಂದ ಬಿಡಿಸಿದ ಶರಣರು 'ಹೆಣ್ಣು ಹೆಣ್ಣಲ್ಲ ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ' ಎಂದು ಅವಳಲ್ಲಿ ದೇವತ್ವವನ್ನು ಕಂಡರು, ಅವಳು ದೇವತ್ವಕ್ಕೇರಲು ಅವಕಾಶ ಮಾಡಿ ಕೊಟ್ಟರು, ಹೆಣ್ಣಿಗೆ ಅರಿವಿನ ಜ್ಯೋತಿರ್ಲಿಂಗದ ದರ್ಶನ ಮಾಡಿದರು.

ಚನ್ನಚಲ್ಲಿಕಾರ್ಜುನನೆ ತನ್ನ ಗಂಡನೆಂದು ನಂಬಿನಡೆದ ಅಕ್ಕಮಹಾದೇವಿ ವೈರಾಗ್ಯನಿಧಿ ಎನಿಸಿಕೊಂಡಿದ್ದಾಳೆ. ಭಾರತದ ಇತರ ಕಡೆಯೂ ಸಹ ಅಕ್ಕಮಹಾದೇವಿಯಂತೆ ಭಗವಂತನೇ ತನ್ನ ಪತಿ ಎಂದು ನಂಬಿದ್ದ ಇತರ ಮಹಿಳೆಯರನ್ನು ಕಾಣಬಹುದಾಗಿದೆ. ಅಂಥ ಮಹಿಳೆಯರಲ್ಲಿ ಅಗ್ರಗಣ್ಯಳೆಂದರೆ ಆಂಡಾಳ್.

ಆಂಡಾಳ್ ಮತ್ತು ಅಕ್ಕಮಹಾದೇವಿಯ ಜೀವನಗಳನ್ನು ಅವಲೋಕಿಸಿದಾಗ ಇವರಿಬ್ಬರ ಜೀವನಗಳಲ್ಲಿ ಹಲವು ಹೋಲಿಕೆ ಗಳನ್ನು ನಾವು ಕಾಣಬಹುದಾಗಿದೆ.

ದಕ್ಷಿಣ ಭಾರತದಲ್ಲಿ ಮಧುರೆ ಎನ್ನುವುದು ಪ್ರಸಿದ್ಧ ಪಟ್ಟಣ. ಈ ಪಟ್ಟಣ ಸಾಂಸ್ಕೃತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಹಿನ್ನೆಲೆಯುಳ್ಳ ದ್ದಾಗಿತ್ತು. ಆ ಪಟ್ಟಣಕ್ಕೆ ಸೇರಿದಂತೆ ಒಂದು ಊರು ಶ್ರೀವಿಳ್ಳಿ ಪುತ್ತೂರು. ಈ ಊರು ವೈಷ್ಣವ ಭಕ್ತರಿಗೆ ಅಚ್ಚುಮೆಚ್ಚಾದ ಊರು. ಇಂಥ ಊರಿನಲ್ಲಿದ್ದವಳು ಆಂಡಾಳ್, ಆಕೆ ಅಕ್ಕಮಹಾದೇವಿಯಂತೆ ತನ್ನನ್ನು ತಾನೆ ಸಂಪೂರ್ಣವಾಗಿ ಭಗವಂತನಿಗೆ ಅರ್ಪಿಸಿಕೊಂಡಿದ್ದ ಮಹಾಭಕ್ತೆ.

ಯಾವ ವ್ಯಕ್ತಿ ತನ್ನನ್ನು ತಾನು ಪೂರ್ತಿ ಭಗವಂತನಿಗೆ ಅರ್ಪಿಸಿಕೊಂಡಿರುತ್ತಾನೊ ಅಂಥ ವ್ಯಕ್ತಿಯನ್ನು ವೈಷ್ಣವ ಸಂಪ್ರದಾಯದಲ್ಲಿ 'ಅಜ್‌ವಾರ್ಸ್' ಎಂದು ಕರೆಯುತ್ತಾರೆ. ಅದೇ ಹೆಣ್ಣು ಪರಮಾತ್ಮನಿಗೆ ಪೂರ್ತಿ ಅರ್ಪಿಸಿಕೊಂಡವಳನ್ನು 'ಆಂಡಾಳ್' ಎಂದು ಕರೆಯುತ್ತಾರೆ.

ವೀರಶೈವರಲ್ಲಿ ಶರಣ-ಶರಣೆ ಎಂಬ ಪದಗಳು ಈ ಪದಗಳಿಗೆ ಸಂವಾದಿಯಾಗಿವೆ. ಆಂಡಾಳ್ ಕಾಲ್ಪನಿಕ ವ್ಯಕ್ತಿಯಲ್ಲ. ಚಾರಿತ್ರಿಕ ವ್ಯಕ್ತಿ, ಅಕ್ಕಮಹಾದೇವಿಯಂತೆ.

ಆಂಡಾಳ್ ಕ್ರಿ.ಶ. ೭ನೇ ಶತಮಾನದ ಮಧ್ಯ ಭಾಗದಲ್ಲಿದ್ದ ವ್ಯಕ್ತಿ, ಅಕ್ಕಮಹಾದೇವಿ ಕ್ರಿ.ಶ. ೧೨ನೆಯ ಶತಮಾನದಲ್ಲಿದ್ದ ವ್ಯಕ್ತಿ.

ರಾಮಾಯಣದ ಸೀತೆ ಜನಕನಿಗೆ ಭೂಮಿಯಲ್ಲಿ ಸಿಕ್ಕಂತೆ ಶ್ರೀ ವಿಳ್ಳಿ ಪುತ್ತೂರಿನ ಪೆರಿಯಾಸ್‌ವಾರ್‌ರವರಿಗೆ ಈಕೆ ತುಳಸಿತೋಟದಲ್ಲಿ ದೊರೆತ ಚಿಕ್ಕಹುಡುಗಿ. ಈ ಹುಡುಗಿಯನ್ನು ಪೆರಿಯಾಸ್‌ವಾರ್ ಮನೆಗೆ ಕರೆತಂದು ತನ್ನ ಕುವರಿಯಂತೆ ಅಕ್ಕರೆಯಿಂದ ಬೆಳೆಸತೊಡಗಿದರು. ಆ ಕುವರಿಗೆ 'ಗೋದಾ' ಎಂದು ಹೆಸರಿಟ್ಟರು. ಗೋದಾಳಿಗೆ ಬಾಲ್ಯ ದಿಂದಲೇ ಆಧ್ಯಾತ್ಮಿಕ ವಿದ್ಯೆಯನ್ನು ಕಲಿಸತೊಡಗಿದರು. ಆತ ಅನೇಕ ವಿಧದ ಹೂಗಳನ್ನು ಬೆಳೆಸುವ ಹೂ ತೋಟದಲ್ಲಿ ವಿಶೇಷ ಆಸಕ್ತಿ ಉಳ್ಳವನಾಗಿದ್ದನು. ಆ ಹೂಗಳಿಂದ ಸುಂದರವಾದ ಹಾರಗಳನ್ನು ಕಟ್ಟಿ ತನ್ನ ಮನೆದೇವರಿಗೆ ಪ್ರಾತಃಕಾಲ ಮತ್ತು ಸಂಜೆ ಸುಂದರವಾಗಿ ಅಲಂಕರಿಸಿ ಅದರಿಂದ ಭಗವಂತನ ಆರಾಧನೆಮಾಡಿ ತೃಪ್ತಿಪಟ್ಟು ಕೊಳ್ಳುತ್ತಿದ್ದನು. ಈ ವಿಧದ ವಾತಾವರಣದಲ್ಲಿ ಬೆಳೆಯುತ್ತಿದ್ದ ಆಂಡಾಳ್‌ಗೆ ಬಾಲ್ಯದಲ್ಲಿಯೇ ಭಗವಂತನ ಬಗೆಗೆ ಒಲವು ಮೂಡತೊಡಗಿತು.

ಅಕ್ಕಮಹಾದೇವಿ ಹುಟ್ಟಿದುದು ಶಿವಮೊಗ್ಗ ಜಿಲ್ಲೆಯ ಉಡುತಡಿ ಎಂಬ ಗ್ರಾಮದಲ್ಲಿ. ಮಲೆನಾಡಿನ ಪ್ರಕೃತಿ ಸೌಂದರ್ಯದ ಮಡಲಿನಲ್ಲಿ. ನಿರ್ಮಲ, ಸುಮತಿ ಮಾತಾಪಿತೃಗಳು, ಶಿವಭಕ್ತರು. ಅವಳು ಸಹ ಆಂಡಾಳ್ ಹಾಗೆ ಬಾಲ್ಯದಿಂದಲೇ ಭಗವಂತನ ಕರುಣೆಗಾಗಿ ಪರಿತಪಿಸಿದವಳು, ಅಕ್ಕಮಹಾದೇವಿಯ ಗುರುಭಕ್ತಿ ಅಸದೃಶವಾದುದು. 'ಹುಟ್ಟಿದೆನು ಶ್ರೀ ಗುರುವಿನ ಹಸ್ತದಲ್ಲಿ' ಎಂದೇ ತನ್ನ ಆತ್ಮಚರಿತ್ರೆಯನ್ನು ಆರಂಭಿಸುವಳಾಕೆ.

ಅಕ್ಕನೇ ತನ್ನ ಗುರುವಿನ ಘನತೆಯನ್ನು ಹಾಡಿರುವುದರಿಂದ ಅವಳಿಗೆ ಕೌಮಾರ್ಯದಲ್ಲಿಯೇ ಸಂಸಾರ ನಿಸ್ಸಾರವೆಂಬುದನ್ನು ಮನಗಾಣಿಸಿ ಮಲ್ಲಿಕಾರ್ಜುನನ ಮೋಹದಲ್ಲಿ ಮುಳುಗಿಸಿದವರು ಆ ಗುರುಗಳೇ ಆಗಿರಬೇಕು, ಅಂತೆಯೇ 'ನಿತ್ಯವೆನ್ನ ಮನೆಗೆ ನಡೆದುಬಂದಿತ್ತು, ಮುಕ್ತಿ ಎನ್ನ ಮನೆಗೆ ನಡೆದುಬಂದಿತ್ತು, 'ಜಯಗುರುವೇ, ನಮೋ ಪರ ಮಗುರುವೆ, ನಮೋ ಚೆನ್ನಮಲ್ಲಿಕಾರ್ಜುನನ ತಂದೆನಗೆ ಕೊಟ್ಟ ಗುರುವೇ ನಮೋನಮೋ' ಎಂದು ತನ್ನ ಗುರುಗಳನ್ನು ಬಗೆದುಂಬಿ ಬಣ್ಣಿಸಿದ್ದಾಳೆ.

ಡಾ. ಹಳಕಟ್ಟಿಯವರು (ಶಿವಶರಣೆಯರ ಚರಿತ್ರೆಗಳು ಪುಟ-೧೦ಳರಲ್ಲಿ) ಬರೆದಿರುವಂತೆ ಉಡುತಡಿಯಲ್ಲಿ ಮಲ್ಲಿಕರ್ಜುನನ ದೇವಾಲಯವೊಂದು ಇದೆ ಎಂದು ಹೇಳಿದ್ದಾರೆ. ಆ ದೇವಾಲಯಕ್ಕೆ ಅವಳ ತಂದೆತಾಯಿಗಳೊಡನೆ ಗೆಳತಿಯರೊಡನೆ ಆಗಾಗ ಹೋದಾಗ ಅವಳಿಗೆ ಅರಿಯದಂತೆಯೇ ಅವಳ ಹೃದಯದಲ್ಲಿ ಮಲ್ಲಿಕಾರ್ಜುನನ ಮೋಹ ಮೊಳತಿರಬೇಕು. ಬಾಲ್ಯದಿಂದಲೂ ಬೆಳೆದ ಆ ಭಕ್ತಿ ಗುರುಕಾರುಣ್ಯದಿಂದ ಪಲ್ಲವಿಸಿ, ಪಸರಿಸಿ ಅವಳ ಬಾಳ ಹಂದರಕ್ಕೆ ಹಬ್ಬಿನಿಂತಿತು.

ಆಂಡಾಳ್‌ಗೆ ಹೃದಯಲ್ಲಿ ಅಡಗಿದ್ದ ಆಧ್ಯಾತ್ಮಿಕ ಹಸಿವು ವಾತಾವರಣದಿಂದ ಉದ್ದೀಪನ ಗೊಂಡು ಕೃಷ್ಣನ ಬಗ್ಗೆ ಪ್ರೇಮ ಉಕ್ಕಿ ಹರಿಯತೊಡಗಿತು.

ಕೃಷ್ಣನನ್ನು ಒಲಿಸಿಕೊಳ್ಳಲು ಗೋಪಿಕಾ ಸ್ತ್ರೀಯರು ಕೃಷ್ಣನನ್ನು ಆರಾಧನೆ ಮಾಡಿದಂತೆ ಆಂಡಾಳಳು ತಾನೇ ಗೋಪಿ, ಕೃಷ್ಣ ತನ್ನ ಪ್ರಿಯಕರ ಎಂಬ ಭಾವದಿಂದ ಕೃಷ್ಣನ ಆರಾಧನೆ ಮಾಡತೊಡಗಿದಳು.

ಅಕ್ಕಮಹಾದೇವಿ ಶರಣಸತಿ ಲಿಂಗಪತಿ ಎನಿಸಿಕೊಳ್ಳಲಿಲ್ಲವೆ ಹಾಗೆ ಆಂಡಾಳ್‌ಗೆ ಕೃಷ್ಣ ಪ್ರಿಯಕರ, ಆಧ್ಯಾತ್ಮಿಕ ಪತಿ ಶ್ರೀ ಕೃಷ್ಣ.

ಬಾಲ್ಯದಿಂದಲೆ ಆಂಡಾಳ್ ತಾನು ಬೃಂದಾವನದ ಶ್ರೀ ಕೃಷ್ಣನ ವಧು ಎಂದು ಭಾವಿಸಿಕೊಳ್ಳ ತೊಡಗಿದಳು. ತಾನು ಶ್ರೀಕೃಷ್ಣನಿಗೆ ತಕ್ಕ ವಧುವೆ? ಎಂದು ಪರೀಕ್ಷಿಸಿಕೊಳ್ಳಲು ಮತ್ತು ಅವನ ಪ್ರೀತಿಯನ್ನು ಪಡೆಯಲು, ತನ್ನ ಸಾಕುತಂದೆ ದೇವರಿಗೆಂದು ಸುಂದರವಾಗಿ ಕಟ್ಟಿದ ಹೂವಿನ ಹಾರವನ್ನು ತಾನು ಧರಿಸಿ ಕನ್ನಡಿಯ ಮುಂದೆ ನಿಂತು ತನ್ನ ಅಂದವನ್ನು ನೋಡಿಕೊಂಡು ತದ ನಂತರ ಆ ಹಾರಗಳನ್ನು ತೆಗೆದಿರಿಸುವಳು, ಆ ಹಾರಗಳನ್ನು ದೇವರಿಗೆ ಧರಿಸುತ್ತಿದ್ದರು ಅವಳ ಸಾಕುತಂದೆ. ಪ್ರತೀದಿನ ಏಕಾಂತದಲ್ಲಿ ಇದೇ ರೀತಿ ಹಾರ ಧರಿಸುವುದು ತೆಗೆದಿಡುವುದು ನಡೆಯುತ್ತಿತ್ತು. ಇವಳು ಉಪಯೋಗಿಸಿ ತೆಗೆದಿಡುತ್ತಿದ್ದ ಹಾರಗಳನ್ನು ದೇವರಿಗೆ ಧರಿಸುತ್ತಿದ್ದನು ತಂದೆ.

ಒಂದು ದಿನ ಇವಳ ಈ ಕೆಲಸವನ್ನು ಕಂಡು ಕೃದ್ಧನಾದ ತಂದೆ, ಈ ಉಪಯೋಗಿಸಿದ ಹಾರಗಳನ್ನು ದೇವರಿಗೆ ಧರಿಸುವುದೆ ಬೇಡವೆ ಎಂಬ ಗೊಂದಲಕ್ಕೊಳಪಟ್ಟ.

ಆದರೆ ಕೃಷ್ಣ ಭಗವಂತ ಈತನನ್ನು ಚಕಿತಗೊಳಿಸುವಂತೆ ತನ್ನ ದರ್ಶನವನ್ನು ನೀಡಿ, ಆಂಡಾಳ್‌ದು ನಿಜವಾದ ಪ್ರೇಮ ಅವಳು ಹಾರಗಳನ್ನು ಧರಿಸಿದ ನಂತರವೆ ತನಗೆ ಧರಿಸಬೇಕೆಂದು ಹೇಳಿದ. ಅದರಂತೆ ಅಜ್‌ವಾರರು ನಡೆದರು, ತದನಂತರ ಗೋದಾಳನ್ನು ಆಂಡಾಳ್ ಎಂದು ಕರೆಯತೊಡಗಿದರು. ಅಂದರೆ ದೈವಿಸಂಭೂತಳಾದಮಾತೆ ಎಂದು.

ಅನುಭವ ಮಂಟಪದಲ್ಲಿ ಅಕ್ಕನ ಅಗ್ನಿಪರೀಕ್ಷೆ ನಡೆಯಿತು ಅಲ್ಲಮಪ್ರಭುಗಳ ಪರೀಕ್ಷೆ? ಕೇಳುವುದೇನಿದೆ. ಈ ಕಠೋರ ಪರೀಕ್ಷೆಯಲ್ಲಿಯೂ ಪಾರಂಗತಳಾದಳು. ಆಧ್ಯಾತ್ಮ ಸಾಗರದ ಅನರ್ಘ್ಯ ರತ್ನ ಅಕ್ಕಮಹಾದೇವಿ.

ಪ್ರಭುದೇವರ ಪ್ರಾರಂಭಪ್ರಶ್ನೆಯೇ ಎಂಥವರನ್ನು ಅಪ್ರತಿಭರನ್ನಾಗಿ ಮಾಡುವಂತಹುದು.

'ಉದಮದದ ಯೌವನವನೊಳಕೊಂಡ ಸತಿ ನೀನು ಇತ್ತಲೇಕೆ ಬಂದೆಯವ್ವಾ? ನಿನ್ನ ಪತಿಯ ಕುರುಹು ಹೇಳಿದರೆ ಬಂದು ಕುಳ್ಳಿರು; ಅಲ್ಲದಿರೆ ತೊಲಗು ತಾಯೆ;'

ನಮ್ಮ 'ಗುಹೇಶ್ವರನ ಶರಣರಲ್ಲಿ ಸಂಗಸುಖ ಸನ್ನಿಹಿತವ ಬಯಸುವರೆ, ನಿನ್ನ ಪತಿಯಾರೆಂದು ಹೇಳಾ, ಎಲೆ ಅವ್ವಾ'.

ಈ ಪ್ರಶ್ನೆಯಿಂದ ಪ್ರಾರಂಭವಾಗಿ ಅಕ್ಕನ ಗೆಲುವಿನಲ್ಲಿ ಮುಕ್ತಾಯ. ಈ ಪ್ರಜ್ಞಾಪೂರ್ಣ ಸಂವಾದ ಅನುಭವ ಮಂಟಪದ, ಅದೇಕೆ–ಆಧ್ಯಾತ್ಮ ವಿದ್ಯೆಯ ಇತಿಹಾಸದಲ್ಲಿಯೇ ಅಸದೃಶವಾದುದು.

ಪ್ರಭುವಿನ ಪ್ರಶ್ನೆಗೆ ಅಕ್ಕನ ಉತ್ತರ.

'ಪಚ್ಚೆಯ ನೆಲೆಗಟ್ಟು, ಕನಕದ ತೋರಣ, ವಜ್ರದ ಕಂಭ,
ಪವಳದ ಚಪ್ಪರವನಿಕ್ಕಿ ಮದುವೆಯ ಮಾಡಿದರು,
ಎಮ್ಮವರೆನ್ನ ಮದುವೆಯ ಮಡಿದರು–
ಕಂಕಣ ಕೈದಾರ ಸ್ಥಿರ ಸೇಸೆಯನಿಕ್ಕಿ
ಚನ್ನಮಲ್ಲಿಕಾರ್ಜುನನೆಂಬ ಗಂಡಗೆನ್ನ ಮದುವೆಯ ಮಾಡಿದರು.'

ಬಸವಣ್ಣನ ಅರಮನೆಯಲ್ಲಿ ಅಕ್ಕನ ಆಧ್ಯಾತ್ಮ ಜೀವನ ಅರಳತೊಡಗಿತು.

ಆಂಡಾಳ್ ಶ್ರೀ ಕೃಷ್ಣನೇ ತನ್ನ ಪತಿ ಎಂದು ನಂಬಿದವಳು. ಅಕ್ಕಮಹಾದೇವಿಯಾದರೊ ಚನ್ನಮಲ್ಲಿಕಾರ್ಜುನನೆ ತನ್ನಪತಿ ಎಂದು ನಂಬಿದವಳು. ಇವರಿಬ್ಬರೂ ಸಹ ಪರಮಾತ್ಮನೇ

ತಮ್ಮ ಗಂಡನೆಂದು ನಂಬಿ ಅವನ ಒಲುಮೆ ಪಡೆಯಲು ಸದಾ ಹಂಬಲಿಸಿದವರು ವಚನ ಧರ್ಮಸಾರದರ್ಶಕರಾದ ಎಂ.ಆರ್. ಶ್ರೀನಿವಾಸಮೂರ್ತಿಗಳು ಹೇಳಿರುವಂತೆ, "ಮಹಾದೇವಿಯಕ್ಕನ ಜೀವನಚರಿತ್ರೆ, ಹೆಣ್ಣಿನ ಗೌರವ ಸಾಧನೆಯ, ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ, ಹೆಣ್ಣಿನ ಪರಮಾರ್ಥ ಸಾಧನೆಯ ಒಂದು ಮಹಾ ಪ್ರಕರಣ."

ಆಂಡಾಳ್ ಬೆಳೆಬೆಳೆದಂತೆಲ್ಲಾ ಅವಳಲ್ಲಿ ಶ್ರೀಕೃಷ್ಣನನ್ನು ಕಾಣುವ ಅಭೀಪ್ಸೆ ದಿನದಿಂದ ದಿನಕ್ಕೆ ವೃದ್ಧಿಸತೊಡಗಿತು. ಅವಳ ಬುದ್ಧಿಮತ್ತೆ ಮತ್ತು ಅರ್ಪಣಾ ಮನೋಭಾವ ವೃದ್ಧಿಸ ತೊಡಗಿತು. ಭಕ್ತಿ ಪಕ್ವವಾಗತೊಡಗಿತು. ಶ್ರೀಕೃಷ್ಣನನ್ನು ವಿವಾಹವಾಗುವ ಬಯಕೆ ಹೆಚ್ಚ ತೊಡಗಿತು. ಅವನಿಂದ ಆಗಲಿರುವುದು ಅವಳಿಂದ ಸಾಧ್ಯವಾಗಲಿಲ್ಲ. ಯಮುನಾ ನದಿಯ ತೀರದಲ್ಲಿರುವ ಬೃಂದಾವನಕ್ಕೆ ಹೋಗ ಬಯಸಿದಳು. ತಾನು ಗೋಪಿ, ತನ್ನ ಪ್ರಿಯಕರ ಕಷ್ಟ ಮಾರ್ಗಶಿರಮಾಸ ಛಳಿಗಾಲ ಬೆಳಗಿನ ಜಾವವೇ ಎದ್ದಳು. ಶುಚಿರ್ಭೂತಳಾಗಿ ಮಂಗಳ ಸ್ನಾನವನ್ನು ಮಾಡಿಕೊಂಡಳು ಸುಂದರವಾಗಿ ಅಲಂಕರಿಸಿಕೊಂಡಳು. ಜೊತೆಗೆ ತನ್ನ ಸಂಗಡಿಗರನ್ನು ಹೊರಡಿಸಿಕೊಂಡಳು. ಆರಾಧನೆಗಾಗಿ ಸೇರಿದ ಜನರ ತಂಡ, ಈ ಜನರ ತಂಡವನ್ನು ಹೊರಡಿಸಿ ಕೊಂಡು ಹೊರಟಳು ಬೃಂದಾವನದತ್ತ. ಜನಪರ್ಯೆಯನ್ನು ಬಾರಿಸುತ್ತಾ ಹೊರಟರು, ಶ್ರೀಕೃಷ್ಣನನ್ನು ಎಚ್ಚರಿಸುವ ಸಲುವಾಗಿ ಇದೆಲ್ಲಾ ನಡೆಯಿತು. ಇವರ ಬೇಡಿಕೆ ಗಳನ್ನು ಕೇಳುವ ಸಲುವಾಗಿ ಶ್ರೀಕೃಷ್ಣನು ತನ್ನ ಸಿಂಹಾಸನವನ್ನು ಬಿಟ್ಟಿಳಿದು ಬಂದು ಜನರು ಕೊಡುವ ಸ್ಥಳಕ್ಕೆ ಧಾವಿಸಿದ ಅವರ ಬೇಡಿಕೆಗಳನ್ನು ಕೇಳಲು ಸನ್ನದ್ಧವಾದ. ಈ ಗುಂಪಿನ ನಾಯಕಿಯಾಗಿದ್ದ ಆಂಡಾಳ್‌ಗೆ ಪ್ರಾಪಂಚಿಕ ಸುಖದ ಬೇಡಿಕೆಗಳಾವುವು ಇರಲಿಲ್ಲ. ತನ್ನ ಮತ್ತು ಕೃಷ್ಣನ ಆತ್ಮಗಳು ಒಂದಾಗಬೇಕು, ಅದು ಎಂದೆಂದಿಗೂ ಬೇರ್ಪಡಿಸ ಲಾರದಂತಹ ಬಂಧನವಾಗಬೇಕೆಂದು ಬೇಡಿಕೊಂಡಳು.

ಇದರ ಪೂರ್ತಿ ಸಂವಾದವನ್ನು ಆಕೆ ರಚಿಸಿರುವ ಭಾವಗೀತೆಯಾದ 'ತಿರುಪ್ಪಾವೈ'ನಲ್ಲಿ ಕಾಣಬಹುದಾಗಿದೆ. ಈ ಭಾವಗೀತೆಯಂತಿರುವ ೩೦ ಪದ್ಯಗಳು ರಚಿತವಾಗಿವೆ. ಇದರಲ್ಲಿ ಉಪಮಾನ, ಉಪಮೇಯಗಳು, ಸುಂದರ ಶೈಲಿ, ಆಧ್ಯಾತ್ಮಿಕ ಸೊಗಡಿನಿಂದ ಕಂಗೊಳಿಸುತ್ತಿವೆ. ಈ ಪದ್ಯಗಳನ್ನು ಭಕ್ತಿಯಿಂದ ವೈಷ್ಣವ ಸಂಪ್ರದಾಯದವರು ಪ್ರತಿನಿತ್ಯ ಪಠಿಸುವರು.

ಆಂಡಾಳ್ ಬೃಂದಾವನಕ್ಕೆ ತೆರಳಿ ಕೃಷ್ಣನನ್ನು ಕಾಣಬಯಸಿದಂತೆ. ಅಕ್ಕಮಹಾದೇವಿ ಸಹ ಚೆನ್ನಮಲ್ಲಿಕಾರ್ಜುನನನ್ನು ಕಾಣುವ ತವಕವನ್ನು ನೋಡುವ.

"ಪರಮಸುಖ ಪರಿಣಾಮ ಮನ ಮೇರೆದಪ್ಪಿ ನಾನು ನಿಜವನ್ನೈದುವ ಠಾವ ಹೇಳಾ, ಚೆನ್ನಮಲ್ಲಿಕಾರ್ಜುನಯ್ಯ" ಎಂದು ಅಲ್ಲಮನಿಗೆ ಪ್ರಾರ್ಥಿಸಿಕೊಂಡಾಗ, ಅವಳ ಒಲವನ್ನರಿತ ಪ್ರಭುದೇವರು ಹೇಳಿದರು,

"ನಾನೀನೆಂಬುಭಯಸಂಗವಳಿದು ತಾನು
ತಾನಾದ ತ್ರಿಕೂಟವೆಂಬ ಮಹಾಗಿರಿಯ ತುಟ್ಟ ತುದಿಯು
ಮೆಟ್ಟಿ ನೋಡಲು ಬಟ್ಟಬಯಲು ಕಾಣಬಹುದು ನೋಡಾ!
ಈ ಬಯಲು ಬೆರಸುವಡೆ ತ್ರಿಕೂಟ ಗಿರಿಯೊಳಗೊಂದು ಕಾಣಬಾರದ
ಕದಳಿಯುಂಟು ನೋಡಾ! ಕದಳಿಯ ತಳದಲ್ಲಿ
ಒಳಹೊಕ್ಕು ನೋಡಲು ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ!

ನಡೆಯಲ್ಲಿಗೆ ತಾಯೆ, ಗುಹೇಶ್ವರ ಲಿಂಗದಲ್ಲಿ

ಪರಮಪದವಿ ಸ್ವಯವಹುದು ನೋಡಾ!

'ಶ್ರೀ ಶೈಲ, ತ್ರಿಕೂಟ, ಕದಳಿ' ಎಂಬ ಶಬ್ದಗಳು ಕಿವಿಗೆ ತಾಗುತ್ತಲೆ ರೋಮಾಂಚಿತ ಳಾದಳು ಅಕ್ಕಮಹಾದೇವಿ.

ತಾನು ಬಾಲ್ಯದಿಂದಲೂ ಕಾಣುತ್ತಲಿದ್ದ ಕನಸೇ ಶ್ರೀಶೈಲ, ಅಲ್ಲಿ ತಾನು ತಾನಾದ ತ್ರಿಕೂಟಗಿರಿ, ಅದರೊಳಗೊಂದು ಕಾಣಬಾರದ ಕದಳಿ–ಆಹಾ ಅದೆಷ್ಟು ರಮಣೀಯ ಸ್ಥಾನವಿರಬಹುದು. ಅಲ್ಲಿಗೆ ಹೋಗಲೇಬೇಕು ತಡಮಾಡಕೂಡದು.

ಅಕ್ಕನು ಶರಣೆಯರನ್ನೆಲ್ಲ ತಕ್ಕೈಸಿ ಶರಣರಿಗೆ ಶರಣೆಂದು ಹೊರಡಲು ಅನುಮತಿ ಬೇಡುತ್ತಲಿದ್ದಾಳೆ. ಎಲ್ಲರ ಕಣ್ಣಲ್ಲೂ ನೀರೂರಿವೆ.

ಅಕ್ಕ ವಿಷಯಗಳನ್ನು ವಿಕಾರಗಳನ್ನು ಎಂದೋ ಹಿಂದುಳಿಸಿದ್ದಳು. ಈಗ ಅರಿಷಡ್ ವರ್ಗ ಗಳನ್ನು, ಸಚರಾಚರವನ್ನು ಹಿಂದುಳಿಸುತ್ತಾ ಹೊರಟಿದ್ದಾಳೆ. ಅವಳ ಶ್ರೀ ಶೈಲಾರೋಹಣ ಅಕ್ಕನ ಊರ್ಧ್ವಗಾಮಿ ಪಯಣದ ಪ್ರತೀಕವಾಗಿ ಉಳಿಯುವುದು ಆಚಂಧಾರ್ಕವಾಗಿ ಆಂಡಾಳ್ ರಚಿಸಿದ 'ತಿರುಪ್ಪಾಪೈ'ನಂತೆ ಅಕ್ಕಮಹಾದೇವಿ ಅನೇಕ ವಚನಗಳನ್ನು ರಚಿಸಿ ವಚನ ಸಾಹಿತ್ಯಕ್ಕೆ ಉತ್ತಮ ಕೊಡುಗೆಯನ್ನು ಕೊಟ್ಟಿದ್ದಾಳೆ.

ಷಟ್‌ಸ್ಥಲ ಚಕ್ರವರ್ತಿ ಚನ್ನಬಸವಣ್ಣನೇ ತೂಗಿ ನೋಡಿ ಈ ರೀತಿ ಹೇಳಿದ್ದಾನೆ.

ಆದ್ಯರ ಅರವತ್ತು ವಚನಕ್ಕೆ, ದಣ್ಣಾಯಕರ ಇಪ್ಪತ್ತು ವಚನ

ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ

ಪ್ರಭುದೇವರ ಹತ್ತು ವಚನಕ್ಕೆ ಆಜಗಣ್ಣನ ಐದು ವಚನ

ಅಜಗಣ್ಣನ ಐದು ವಚನಕ್ಕೆ ಕೂಡಲಸಂಗಯ್ಯನಲ್ಲಿ

ಮಹಾದೇವಿಯಕ್ಕಗಳ ಒಂದು ನಿರ್ವಚನ."

ಯೋಗಾಂಗ ತ್ರಿವಿಧಿ, ಸೃಷ್ಟಿಯ ವಚನ, ಮಂತ್ರಗೋಪ್ಯಗಳೆಂಬ ಲಘು ಕೃತಿಗಳನ್ನು ಬರೆದಿದ್ದರೂ ಅಕ್ಕನ ಅಂತರಂಗದರ್ಶನದಾಗುವುದು ಅವಳ ವಚನಗಳಲ್ಲಿ.

ಆಂಡಾಳ ರಚಿಸಿರುವ 'ತಿರುಮೊಳಿ' ಎಂಬ ಕೃತಿಯಲ್ಲಿ ತನ್ನ ಅಂತರಂಗವನ್ನೇ ತೋಡಿ ಕೊಂಡಿದ್ದಾಳೆ, ವಧುವಾಗಿ ತನ್ನ ಪ್ರಿಯಕರನನ್ನು ಒಲಿಸಿಕೊಳ್ಳಲು ತಾನು ಮಾಡಿವ ವಿಧವಿಧ ಪ್ರಯತ್ನಗಳು ಅಲ್ಲಿ ನಮೂದಿತವಾಗಿದೆ. ಅಕ್ಕಮಹಾದೇವಿಯಂತೆ ಆಂಡಾಳ್ ಸಹ ಅಮರತ್ವವನ್ನು ಪಡೆದಿರುವ ಗಂಡನನ್ನೇ ಬಯಸುತ್ತಾಳೆ. ಅಕ್ಕನ ಉದ್ದೇಶವು ಅದೇ ಆಗಿತ್ತು.

"ಸಾವಿಲ್ಲದ ಕೇಡಿಲ್ಲದ...."

ಶ್ರೀರಂಗದ ರಂಗನಾಥನು ಆಂಡಾಳನ್ನು ವರಿಸಿದನೆಂಬ ಪ್ರತೀತಿ ಉಂಟು.

ಅಕ್ಕಮಹಾದೇವಿ ಶ್ರೀಶೈಲದ ಚನ್ನಮಲ್ಲಿಕಾರ್ಜುನನಿಗೆ ಒಲಿದಂತೆ ಆಂಡಾಳ್ ಶ್ರೀರಂಗದ ರಂಗನಾಥನಿಗೆ ವಧುವಾಗಿ ಒಲಿದಳು.

ಅಕ್ಕಮಹಾದೇವಿ ಮತ್ತು ಆಂಡಾಳರ ಜೀವನವನ್ನು ಅವಲೋಕಿಸಿದಾಗ ಇವರಿಬ್ಬರಲ್ಲಿ ಅನೇಕ ಸಾಮ್ಯಗಳಿರುವುದನ್ನು ಕಾಣಬಹುದಾಗಿದೆ. ಈ ಮಹಿಳೆಯರು, ಮಹಿಳೆಯರಾಗಿಯೂ ಆಧ್ಯಾತ್ಮ ಜೀವನದಲ್ಲಿ ಉತ್ತುಂಗ ಶಿಖರವನ್ನೇರಿದ ಮಹಾನ್ ಮಹಿಳೆಯರೆಂದರೆ ಉತ್ಪ್ರೇಕ್ಷೆಯಲ್ಲ. ಇವರಿಬ್ಬರ ಜೀವನಗಳು ಮಹಿಳೆಯರಿಗೆ ಮಾರ್ಗದರ್ಶನವಾಗುವಲ್ಲಿ ಸಂದೇಹವಿಲ್ಲ.

೧೧. ಅಕ್ಕಮಹಾದೇವಿ ಮತ್ತು ರಬಿಯಾ

●

ಶಿವಕುಮಾರ ಪಾವಟೆ

ಭಕ್ತಿ ಚಳವಳಿ ಮತ್ತು ಅನುಭಾವಿ ಪರಂಪರೆಗಳಿಗೆ ಒಂದು ದೀರ್ಘವಾದ ಇತಿಹಾಸವಿದೆ. ಇದು ಒಂದು ವರ್ಗದಿಂದ ಅಥವಾ ಒಬ್ಬ ವ್ಯಕ್ತಿಯಿಂದ ಮೂಡಿಬಂದ ಪರಂಪರೆಯಲ್ಲ. ಇದರ ಪ್ರಮುಖ ಲಕ್ಷಣಗಳೇ ಸಮಾನತೆ, ಜನಪರತೆ ಮತ್ತು ಭಕ್ತಿ. ಈ ಮಾರ್ಗವು ಜ್ಞಾನ, ಕರ್ಮಕ್ಕಿಂತ ಭಿನ್ನವಾದ ಭಕ್ತಿಮಾರ್ಗ. ನಿಷ್ಕಲ್ಮಷವಾದ ಅನನ್ಯ ಪ್ರೀತಿಯೇ ದೈವ ಸಾಕ್ಷಾತ್ಕಾರಕ್ಕೆ ಬೇಕಾದ ಅರ್ಹತೆಯೆಂದು ಇದರ ಮೂಲತತ್ವ. ಭಕ್ತಿ ಚಳವಳಿಯು ಅನೇಕ ಪಂಥ, ಸಂಪ್ರದಾಯ, ಚಳವಳಿಗಳ ಮೂಲಕ ಇತಿಹಾಸದುದ್ದಕ್ಕೂ ತನ್ನ ಇರವನ್ನು ತೋರುತ್ತಿದೆ. ಅದರಲ್ಲೂ ಈ ಪರಂಪರೆಯಲ್ಲಿ ಸ್ತ್ರೀಯರ ಪಾತ್ರ ಮಹತ್ವಪೂರ್ಣವಾದದ್ದು. ಕ್ರಿಸ್ತಶಕದ ಆದಿಯಿಂದಲೂ ನಾವು ಮಹಿಳಾ ಅನುಭಾವಿಗಳನ್ನು ನೋಡಬಹುದು. ಈ ಆರಂಭಿಕ ಅನುಭಾವಿಗಳಲ್ಲಿ ಕಾರಿಕಾಲಮ್ಮೆ, ಮಾಂಗಾಯಕ್ಕ ರಸಿಯಂಥ ಶಿವಭಕ್ತೆಯರಿದ್ದಾರೆ. ನಂತರ ಬಂದ ಆಂಡಾಳ್, ವೈಜಕ್ಕವ್ವೆ, ಅಕ್ಕ ಮಹಾದೇವಿ, ಅಕ್ಕನಾಗಮ್ಮ, ನೀಲಾಂಬಿಕೆ, ಸತ್ಯಕ್ಕ, ಕಾಳವ್ವೆ, ಗುಡ್ಡವ್ವೆ, ಮಿರಾ, ಕಿಬ್ಬವ್ವೆ ಇತ್ಯಾದಿ ಅನುಭಾವಿಗಳು ನಮ್ಮ ಚರಿತ್ರೆಯಲ್ಲಿದ್ದಾರೆ.

ಪ್ರಸ್ತುತ ಅನುಭಾವಿಗಳಾದ ಮಹಾದೇವಿ ಮತ್ತು ರಬಿಯಾ ಬೇರೆ ದೇಶ, ಕಾಲ, ಧರ್ಮದವರಾದರೂ ಅವರ ಜೀವನ ಮತ್ತು ತತ್ವಗಳಲ್ಲಿ ಅಪಾರವಾದ ಸಾಮ್ಯತೆ ಕಂಡು ಬರುತ್ತದೆ. ಅಕ್ಕಮಹಾದೇವಿಯ ಜೀವನ ಚರಿತ್ರೆಯು ಕನ್ನಡಿಗರಿಗೆ ಆಗಲೇ ಚಿರಪರಿಚಿತ ವಾಗಿರುವುದರಿಂದ ರಬಿಯಾಳ ಜೀವನ ಚರಿತ್ರೆ ಮತ್ತು ಧರ್ಮದ ಕುರಿತು ಒಂದು ಇಣುಕು ನೋಟ ಇಲ್ಲಿದೆ.

ಇಸ್ಲಾಂ ಧರ್ಮ ಏಳನೇ ಶತಮಾನದಲ್ಲಿ ಅರೇಬಿಯಾದಲ್ಲಿ ಜನ್ಮ ತಳೆದು ನಂತರ ಒಂದು ವ್ಯವಸ್ಥಿತ ಧರ್ಮವಾಗಿ ರೂಪುಗೊಂಡಿತ್ತು. ಇಸ್ಲಾಂ ಧರ್ಮ ತಾತ್ವಿಕವಾಗಿ ದ್ವೈತ ಸಿದ್ಧಾಂತವಾಗಿದ್ದು ಭಕ್ತ ಮತ್ತು ದೇವರು ಸೇವಕ–ಸೇವ್ಯ ಸ್ಥಿತಿಯಲ್ಲೇ ಉಳಿದುಬಿಡುತ್ತಾರೆ. ಆದರೆ ಇದಕ್ಕೆ ಪರ್ಯಾಯವಾಗಿ ಹುಟ್ಟಿಕೊಂಡ ಅನುಭಾವಿ ಪರಂಪರೆಯೇ ಸೂಫಿ ಪರಂಪರೆ. ಇದು ತಾತ್ವಿಕವಾಗಿ ಅದ್ವೈತಿಯಾಗಿದ್ದು ದೇವ–ಭಕ್ತರ ಸಮಾಗಮವೇ ಇದರ ತುರೀಯಾವಸ್ಥೆ. ಆಚರಣೆಗಳಿಗಿಂತ ಭಕ್ತಿಯೇ, ಜ್ಞಾನಕ್ಕಿಂತ ಅನುಭಾವವೇ ಮುಖ್ಯ ವಾಗಿದ್ದ ಈ ಸೂಫಿ ಪಂಥಕ್ಕೆ

ಭಾರತದ ಅದ್ವೈತ ಪರಂಪರೆ ಮತ್ತು ಭಕ್ತಿ ಚಳವಳಿಗಳೊಡನೆ ತುಂಬಾ ಹತ್ತಿರದ ನಂಟಿದೆ. ಇದಕ್ಕೆ ಕಾರಣ ಸೂಫಿ ಸಂತರ ಮತ್ತು ಅದ್ವೈತಗಳ ಮಧ್ಯೆ ನಡೆದ ಕೊಡು-ಕೊಳೆ. ಉದಾಹರಣೆಗೆ ಸೂಫಿ ಕವಿಯಾಗಿದ್ದ ಮನ್ಸೂರ್-ಅಲ್-ಹಲ್ಲಜ್ (ಕ್ರಿ.ಶ. ೮೫೭-೯೨೨) ತನ್ನ ಪಂಜಾಬ್-ಸಿಂಧ್ ಪ್ರಾಂತ್ಯಗಳ ಪ್ರವಾಸದಲ್ಲಿದ್ದಾಗ ಅದ್ವೈತಿಗಳನ್ನು ಭೇಟಿಯಾಗಿ ವಿಚಾರ ವಿಮರ್ಶೆ ನಡೆಸಿದ್ದನು. ಸೂಫಿ ತತ್ವದ ಪ್ರಕಾರ ದೇವರು ಜಲಾಲ್ (ಭಯಂಕರ) ಅಲ್ಲ, ಅವನು ಜಮಾಲ್ (ಪ್ರೇಮಸ್ವರೂಪಿ). ವಚನ ಚಳವಳಿಯು ಶರಣಸತಿ-ಲಿಂಗಪತಿ ತತ್ವವನ್ನು ಅನುಸರಿಸಿದ್ದರೆ ಸೂಫಿ ತತ್ವವು ಶರಣಪತಿ-ಲಿಂಗಸತಿ ಎಂದಾಗಿತ್ತು. ಇದು ಭಕ್ತನನ್ನು ಆಶಿಕ್ (ಪ್ರಿಯತಮ) ಎಂದು ದೇವರನ್ನು ಮಶುಕ್ (ಪ್ರಿಯತಮೆ) ಎಂದು ಭಾವಿಸಿದ್ದರು. ಎರಡೂ ಪಂಥಗಳು ಭಕ್ತಿಪ್ರಧಾನವಾದವುಗಳೇ.

ವಚನ ಚಳವಳಿಯ ಮೂಲ ಸಿದ್ಧಾಂತ ಷಟ್‌ಸ್ಥಲವಾದರೆ ಸೂಫಿಪಂಥ ಪಂಚಸ್ಥಳಗಳದ್ದು. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಇವು ವಚನ ಚಳವಳಿಯ ಮಾರ್ಗವಾಗಿದ್ದರೆ ತಸವ್ವುಫ್ (ಅನುಭಾವ), ಜಿಕ್ರ್ (ಧ್ಯಾನ), ಇಲ್‌ಹಾಮ್ (ದೈವ ಪ್ರೇರಣೆ), ಹಾಲ್ (ಭಾವಸಮಾಧಿ), ಸಮಾ (ಸಂಗೀತ) ಸೂಫೀ ಪಂಥದ ಸಿದ್ಧಾಂತವಾಗಿದ್ದವು. ವಚನ ಚಳವಳಿಯಂತೆ ಸೂಫಿ ಪಂಥವೂ ಅಕ್ಲ್ (ಬುದ್ಧಿ) ಮತ್ತು ಇಲ್ಮ್ (ಪಾಂಡಿತ್ಯ)ವನ್ನು ನಿರಾಕರಿಸಿತು. ಹೀಗೆ ವಚನ ಚಳವಳಿ ಮತ್ತು ಸೂಫಿ ಪಂಥಗಳ ಉದ್ದೇಶ ಒಂದೇ. ಅದು ಜೀವಾತ್ಮ-ಪರಮಾತ್ಮರ ಏಕೀಭವನ.

ಈ ಸೂಫಿ ಅನುಭಾವಿ ಪರಂಪರೆಯಲ್ಲಿ ಬಂದ ರಬಿಯಾ ಮತ್ತು ವಚನ ಚಳವಳಿಯಲ್ಲಿ ಮೂಡಿಬಂದ ಅಕ್ಕಮಹಾದೇವಿಯರು ಪರಸ್ಪರ ಸಾದೃಶ್ಯರೂಪಕಗಳಂತೆ ನಮಗೆ ಕಾಣುತ್ತಾರೆ.

ಅಕ್ಕಮಹಾದೇವಿಯು ೧೨ನೇ ಶತಮಾನದಲ್ಲಿ ಶಿವಮೊಗ್ಗ ಜಿಲ್ಲೆಯ ಉಡುತಡಿಯಲ್ಲಿ ಜನಿಸಿದರೆ, ರಬಿಯಾ ಕ್ರಿ.ಶ. ೭೧೭ರಲ್ಲಿ ಇರಾಕಿನ ಬಾಸ್ರಾ ಎಂಬ ಊರಲ್ಲಿ ಜನಿಸಿದಳು. (ಕ್ರಿ.ಶ. ೭೧೭-೮೦೧) ರಬಿಯಾ 'ಬಗ್ಗೆ ಇತಿಹಾಸಕ್ಕಿಂತ ಮಿತ್‌ಗಳು, ವಸ್ತುನಿಷ್ಠ ಮಾಹಿತಿಗಿಂತ ಕತೆಗಳು ಹೆಚ್ಚು ದೊರಕುತ್ತವೆ. (ಬಹುಪಾಲು ಅನುಭಾವಿಗಳ ಚರಿತ್ರೆ ಹೀಗೆಯೆ ಇದ್ದದ್ದನ್ನು ನಾವು ನೋಡಬಹುದು.)

ಒಂದು ಬಡಕುಟುಂಬದಲ್ಲಿ ಹುಟ್ಟಿದ ರಬಿಯಾ ಎಳವೆಯಲ್ಲಿಯೇ ತಂದೆಯನ್ನು ಕಳೆದುಕೊಂಡ ನತದೃಷ್ಟೆ. ಮುಂದೆ ಒಂದು ಸಲ ಬಂದ ಬರಗಾಲದ ಸಮಯದಲ್ಲಿ ಅಕಸ್ಮಾತ್ ತನ್ನ ಕುಟುಂಬದಿಂದ ದೂರಳಾದ ರಬಿಯಾ ದರೋಡೆಕೋರರ ಕೈಯಲ್ಲಿ ಸಿಕ್ಕು ಗುಲಾಮಗಿರಿಗೆ ತಳ್ಳಲ್ಪಟ್ಟಳು. ಈ ವಿಷಯದಲ್ಲಿ ಅಕ್ಕಮಹಾದೇವಿ ಅದೃಷ್ಟವಂತಳಾದರೂ ಒಲ್ಲದ ಮನಸ್ಸಿನಿಂದ ಮದುವೆಯಾಗದ ಸಂದರ್ಭ ಅಕ್ಕನಿಗೆ ಇಷ್ಟೇ ನೋವನ್ನು ತಂದಿರಬೇಕು. ಅಕ್ಕನಂತೆ ರಬಿಯಾ ತನ್ನ ಕಷ್ಟದ ಜೀವನದಲ್ಲಿಯೂ ಕಾಯಕನಿಷ್ಠೆಯನ್ನೂ ಮೆರೆದು ತನಗೆ ಸಿಕ್ಕ ಸಮಯದಲ್ಲಿ ಪ್ರಾರ್ಥನೆ, ಧ್ಯಾನದಲ್ಲಿ ಮಗ್ನಳಾಗಿರುತ್ತಿದ್ದಳು.

ಕೌಶಿಕನ ಸೆರೆಯಿಂದ ಅಕ್ಕ ಮುಕ್ತಳಾಗಿ ಕಲ್ಯಾಣದೆಡೆಗೆ ತನ್ನ ಗಂಡ ಚನ್ನಮಲ್ಲಿಕಾರ್ಜುನನನ್ನು ನೆನೆಯುತ್ತ ಸಾಗಿದಳು. ಹಾಗೆಯೇ ಒಂದು ಕತೆಯ ಪ್ರಕಾರ ರಬಿಯಾಳನ್ನು ಒಬ್ಬ ದಾರಿಹೋಕ ಬೆನ್ನಟ್ಟಿದಾಗ ತನ್ನ ರಕ್ಷಣೆಗೆ ಓಡುತ್ತಿದ್ದ ಅವಳು ಜಾರಿಬಿದ್ದು ಕೈ ಮುರಿದುಕೊಂಡಾಗ ದೇವರಲ್ಲಿ ಹೀಗೆ ಪ್ರಾರ್ಥಿಸುತ್ತಾಳೆ:

ನಾನೊಬ್ಬ ಅನಾಥೆ ಮತ್ತು ಗುಲಾಮಳೂ ಸಹ

ಈಗ ನನ್ನ ಕೈಯೂ ಮುರಿದಿದೆ

ಇದರಿಂದ ನನಗೇನೂ ದುಃಖವಿಲ್ಲ

ಆದರೆ ಅದು ನನ್ನನ್ನು ನೀನು ಒಪ್ಪಿಕೊಂಡರೆ ಮಾತ್ರ*

ಕಲ್ಯಾಣದಲ್ಲಿ ಅಲ್ಲಮಪ್ರಭುವಿನ ಪರೀಕ್ಷೆಗೊಳಗಾಗಿ ಗೆದ್ದು ಶರಣರ ಅಭಿಮಾನಕ್ಕೆ ಪಾತ್ರಳಾದ ಅಕ್ಕ ತನ್ನ ವೈರಾಗ್ಯದಿಂದ ಎಲ್ಲರಿಂದ ಗೌರವಿಸಲ್ಪಟ್ಟಳು.

ಹಾಗೆಯೇ ಒಂದು ದಿನ ರಬಿಯಾಳ ಯಜಮಾನ ರಾತ್ರಿ ಹೊತ್ತಿನಲ್ಲಿ ಕುತೂಹಲದಿಂದ ರಬಿಯಾ ಏನು ಮಾಡುತ್ತಿರುವಳು ಎಂದು ಅವಳ ಕೋಣೆಯ ಕಿಟಕಿಯಿಂದ ನೋಡಿದನು. ಆಗ ಒಂದು ಪ್ರಖರವಾದ ಬೆಳಕಿನ ಹೊನಲು ಅವಳನ್ನು ಸುತ್ತುವರೆದಿತ್ತು. ಇದರಿಂದ ಬೆರಗಾದ ಮನೆಯೊಡೆಯ ಮನನೊಂದು ಇಂಥ ಪವಿತ್ರಾತ್ಮಳನ್ನು ನಾನು ಗುಲಾಮಳಂತೆ ನೋಡಿಕೊಂಡೆನಲ್ಲ ಎಂದು ಪಶ್ಚಾತ್ತಾಪ ಪಟ್ಟು ಅವಳನ್ನು ಬಿಡುಗಡೆಗೊಳಿಸಿದ.

ಅಕ್ಕಮಹಾದೇವಿಯಂತೆ ರಬಿಯಾ ಯಾವ ಗುರುವನ್ನು ಹುಡುಕದೆ ದೇವರನ್ನೇ ತನ್ನ ಸರ್ವಸ್ವವನ್ನಾಗಿ ಮಾಡಿಕೊಂಡು ಮರಳುಗಾಡಿನಲ್ಲಿ 'ಹಸಿವಾದೊಡೆ ಭಿಕ್ಷಾನ್ನಗಳುಂಟು, ತೃಷೆಯಾದೊಡೆ ಕೆರೆ ಹಳ್ಳ ಬಾವಿಗಳುಂಟು, ಶಯನಕ್ಕೆ ಹಾಳು ದೇಗುಲವುಂಟು' ಎಂದು ಅಲೆಯುತ್ತಿದ್ದಳು.

ತನ್ನ ಜೀವನದುದ್ದಕ್ಕೂ ದೈವಪ್ರೇಮ, ಬಡತನ ಮತ್ತು ತನ್ನತನದ ನಿರಾಕರಣೆಯನ್ನೇ ತನ್ನ ಸಂಗಡಿಗರನ್ನಾಗಿ ಮಾಡಿಕೊಂಡಿದ್ದ ರಬಿಯಾ ಇಹಲೋಕ ತೊರೆದಾಗ ಅವಳ ಬಳಿ ಇದ್ದದ್ದು ಮೂರೇ ವಸ್ತುಗಳು; ಒಡೆದ ನೀರಿನ ಮಡಿಕೆ, ಹಳೆಯ ಚಾಪೆ ಮತ್ತು ತಲೆದಿಂಬಿನಂತೆ ಉಪಯೋಗಿಸುತ್ತಿದ್ದ ಇಟ್ಟಿಗೆ.

ಅನುಭವ ಮಂಟಪದಲ್ಲಿ ಅನೇಕ ಶರಣರ ಜೊತೆ ಒಡನಾಟದಲ್ಲಿದ್ದ ಅಕ್ಕ ಅನೇಕ ವಿಷಯ ಗಳನ್ನು ಅಲ್ಲಿ ಚರ್ಚಿಸಿ ವಚನಸಾಹಿತ್ಯಕ್ಕೆ ತನ್ನ ಕೊಡುಗೆಯನ್ನು ನೀಡಿದಳು. ರಬಿಯಾಳೂ ಸಹ ಆಶ್ಚರ್ಯವೆಂಬಂತೆ ತನ್ನ ಸಮಕಾಲೀನ ಧಾರ್ಮಿಕ ವಿದ್ವಾಂಸರೊಡನೆ ಚರ್ಚಿಸುತ್ತಿದ್ದಳು. ಅವಳಿಗೆ ಅನೇಕ ಜನ ಶಿಷ್ಯರೂ ಇದ್ದರು.

ಅಕ್ಕ ಕೌಶಿಕನನ್ನು ತಿರಸ್ಕರಿಸಿದಂತೆ ರಬಿಯಾ ತನ್ನ ಕೈ ಹಿಡಿಯಲು ಬಂದಿದ್ದ ಬಾಸ್ರಾದ ಅಮೀರ್‌ನನ್ನು ತಿರಸ್ಕರಿಸಿದಳು. 'ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು' ಎಂಬಂತೆ ಇಬ್ಬರೂ ನಡೆದುಕೊಂಡಿದ್ದರು.

ಅಕ್ಕಮಹಾದೇವಿ ಮತ್ತು ರಬಿಯಾಗೆ ದೈವಪ್ರೇಮವೇ ಮಂತ್ರವಾಗಿತ್ತು. ದೇವರನ್ನು ದೇವರಿಗೋಸ್ಕರವೇ ಪ್ರೀತಿಸುತ್ತಿದ್ದರೇ ಹೊರತು ಯಾವುದೋ ಪ್ರತಿಫಲಕ್ಕಲ್ಲ. ಭಕ್ತಿಯು ಭವ ಮತ್ತು ಆಸೆಯಿಂದ ಕೂಡಿದ್ದರೆ ಅದು ದೈವಸಾಕ್ಷಾತ್ಕಾರಕ್ಕೆ ತೊಡಕೆಂದು ಭಾವಿಸಿದ್ದರು.

ಇನ್ನು ವಿಚಿತ್ರವೆಂಬಂತೆ ಅವರು ಬರೆದಿರುವ ಎರಡು ವಚನಗಳನ್ನು ನೋಡಿದರೆ ಅವರಿಬ್ಬರೂ ಹೇಗೆ ಸಮೀಪವಾಗಿದ್ದರು ಎಂದು ಗೊತ್ತಾಗುತ್ತದೆ.

ನಿನ್ನರಿಕೆಯ ನರಕವೇ ಮೋಕ್ಷ ನೋಡಯ್ಯ

ನಿನ್ನರಿಯದ ಮುಕ್ತಿಯೇ ನರಕ ಕಂಡಯ್ಯ

ನೀನೊಲ್ಲದ ಸುಖವೇ ದುಃಖ ಕಂಡಯ್ಯ

ಚನ್ನಮಲ್ಲಿಕಾರ್ಜುನಯ್ಯ
ನೀ ಕಟ್ಟಿ ಕೆಡಹಿದ ಬಂಧನವೇ ನಿರ್ಬಂಧವೆಂದಿಪ್ಪೆನು. —ಅಕ್ಕಮಹಾದೇವಿ

ದೇವರೆ ನಾನೇನಾದರೂ ನರಕದ ಭಯದಿಂದ
ನಿನ್ನನ್ನು ಪೂಜಿಸಿದರೆ ನನ್ನನ್ನು ನರಕದಲ್ಲಿಯೇ ಸುಡು
ನಾನೇನಾದರೂ ಸ್ವರ್ಗದಾಸೆಯಿಂದ ನಿನ್ನ ಪೂಜಿಸಿದರೆ
ಆ ಸ್ವರ್ಗ ಸಿಗದಂತೆ ಮಾಡು
ಆದರೆ ನಿನಗೋಸ್ಕರ ನಾ ನಿನ್ನ ಪೂಜಿಸಿದರೆ
ನಿನ್ನ ಮುಖಾರವಿಂದವನು ಎನಗೆ ತೋರು —ರಬಿಯಾ

ಅನುಭಾವಿ ಹೃದಯಗಳ ಭಾವನೆಗಳು ಒಂದೇ ಆಗಿರುತ್ತವೆ ಎಂಬುದಕ್ಕೆ ಇವೆರಡು ವಚನಗಳು ಸಾಕು. ಇಬ್ಬರೂ ದೇವನ ವಿರಹದಿಂದ ಪರಿತಪಿಸುವರು. ಅವನನ್ನು ಸೇರಲು ಹಾತೊರೆಯುವವರು. ಅವರಲ್ಲಿರುವ ಅನುಭಾವ, ಭಕ್ತಿ, ಶ್ರದ್ಧೆಯನ್ನು ಪ್ರೇಮಕ್ಕೆ ತಿರುಗಿಸಿ ತಮ್ಮ ನಿರ್ಮಲ ಹೃದಯದಲ್ಲಿ ದೇವರನ್ನು ಪೂಜಿಸುವವರು. ಅವರಿಬ್ಬರ ವಿರಹ ಅವರ ಈ ಎರಡು ವಚನಗಳಲ್ಲಿ ಹೇಗೆ ಒಂದೇ ಭಾವನೆಯಾಗಿ ರೂಪುಗೊಂಡಿವೆಯೆಂಬುದನ್ನು ನೋಡಬಹುದು:

ಎರೆಯಂತೆ ಕರಕರಗಿ, ಮಳಲಂತೆ ಜರಿಜರಿದು
ಕನಸಿನಲಿ ಕಳವಳಿಸಿ ಆನು ಬೆರಗಾದೆ!
ಆವಗೆಯ ಕಿಚ್ಚಿನಂತೆ ಸುಳಿಸುಳಿದು ಬೆಂದೆ!
ಆಪತ್ತಿಗೆ ಸಖಿಯರ ನಾನಾರುವನು ಕಾಣೆ
ಅರಸಿ ಕಾಣದ ತನುವೆ, ಬೆರೆಸಿ ಕೂಡದ ಸುಖವ
ಎನಗೆ ನೀ ಕರುಣಿಸು ಚೆನ್ನಮಲ್ಲಿಕಾರ್ಜುನ. —ಅಕ್ಕಮಹಾದೇವಿ

ನನ್ನ ತೊಳಲಾಟದ ಮತ್ತು ಒಂಟಿತನದ
ನೆಲೆ ನನ್ನ ಎದೆಯಾಳದಲ್ಲಿದೆ
ಇದಕ್ಕೆ ಯಾವ ವೈದ್ಯನೂ ಮದ್ದು ಕೊಡಲಾರ
ನನ್ನಿನಿಯನ ನೋಟ–ಕೂಟವೇ
ಇದಕ್ಕೆ ದಿವ್ಯೌಷಧಿ —ರಬಿಯಾ

ಇವೆರಡೂ ವಚನಗಳಲ್ಲಿ ಮೂಡಿದ ಭಾವನೆ ಕಾಲಾತೀತ, ದೇಶಾತೀತ, ಧರ್ಮಾತೀತವೆಂದು ಘೋಷಿಸುವುದಿಲ್ಲವೇ? ಅನುಭಾವವೆಂಬುದು ಇಲ್ಲಿ ಮೂಲದ್ರವ್ಯ, ಭಾಷೆ, ಧರ್ಮಗಳು ಮೇಲ್ನೋಟಕ್ಕೆ ಮಾತ್ರವೆಂಬದು ಅಕ್ಕಮಹಾದೇವಿ ಮತ್ತು ರಬಿಯಾರ ಜೀವನದಿಂದ ವ್ಯಕ್ತವಾಗುತ್ತದೆ.

೧೨. ಶಿವಶರಣ–ಶರಣೆಯರು ಮತ್ತು ಅಕ್ಕ

●

ಡಾ. ಬಿ.ಎನ್. ಸುಮಿತ್ರಾಬಾಯಿ

ಶಿವಶರಣರನೇಕರ ಚಿಂತನೆಗಳಲ್ಲಿ ಮಹಾದೇವಿಯಕ್ಕನನ್ನು ಕುರಿತಂತೆ ವಿಶೇಷವಾದ ಗೌರವಾದರಗಳು ಇದ್ದವೆಂಬುದನ್ನು ಅವರ ವಚನಗಳಿಂದ ತಿಳಿಯಬಹುದು. ಶರಣ ಧುರೀಣರು ವ್ಯಕ್ತ ಪಡಿಸುವ ಗೌರವಭಾವ ಮುಖ್ಯವಾಗಿ ಅಕ್ಕನು ಸಾಧಿಸಿದ್ದ ಆಧ್ಯಾತ್ಮಿಕ ಉನ್ನತಿಯನ್ನು ಕುರಿತದ್ದು, ಅಲ್ಲಮಪ್ರಭು, ಬಸವಣ್ಣ, ಚೆನ್ನಬಸವಣ್ಣ ನಾದಿಯಾಗಿ ಅನೇಕ ಶರಣರು ಆಕೆಯ ಸಾಧನೆಗಳನ್ನು ಮೆಚ್ಚಿದ್ದಾರೆ, ಭಕ್ತಿಯಿಂದ ಆಕೆಗೆ ನಮಿಸಿದ್ದಾರೆ. ಅಂಥ ಕೆಲವು ನುಡಿಗಳಿವು:

"ನಾಮವಿಲ್ಲದ ಸೀಮೆಯಿಲ್ಲದ ನಿಜಶಕ್ತಿಯೆ
ನಿಃಶಕ್ತಿಯಾಯಿತ್ತು ನೋಡಾ
ಅಂತರಂಗದ ಪ್ರಭೆ ಬಹಿರಂಗವೆಲ್ಲಾ ತಾನೆಯಾಗಿ ವೇಧಿಸಿ
ಗುಹೇಶ್ವರನ ಸಂಗದಲ್ಲಿ ಸಂದಿಲ್ಲದಿಪ್ಪ
ಮಹಾದೇವಿಯಕ್ಕನಿಗೆ ನಮೋನಮೋ ಎಂಬೆನು"[೧] –ಅಲ್ಲಮಪ್ರಭು

"ತನ್ನಲ್ಲಿ ತಾ ನಿಶ್ಚಯವಾಗಿ ಭಾಷೆ ಬೀಸರವೊಗದೆ ಇಪ್ಪ ಇರವು
ಕೂಡಲಸಂಗಮ ದೇವರಲ್ಲಿ
ನಮ್ಮ ಹೆತ್ತ ತಾಯಿ ಮಹಾದೇವಿಯಕ್ಕಂಗಾಯಿತ್ತು"[೨] –ಬಸವಣ್ಣ

"ಅನುವರಿದು ಘನವ ಬೆರಸಿ
ಹಿರಿದು ಕಿರಿದೆಂಬ ಭೇದವವರೆದು
ಕೂಡಲ ಚೆನ್ನಸಂಗಯ್ಯನಲ್ಲಿ ಬೆರಸಿ ಭೇದವಿಲ್ಲದ ಹಿರಿಯತನ
ನಮ್ಮ ಮಹಾದೇವಿಯಕ್ಕಂಗಾಯಿತ್ತು"[೩] –ಚೆನ್ನಬಸವಣ್ಣ

"ಕಪಿಲಸಿದ್ಧ ಮಲ್ಲಿನಾಥನಲ್ಲಿ
ಮಹಾದೇವಿಯಕ್ಕನ ನಿಲುವಿಂಗೆ ಶರಣೆಂದು
ಶುದ್ಧನಾದೆನು ಕಾಣಾ ಚೆನ್ನಬಸವಣ್ಣಾ"[೪] –ಸಿದ್ಧರಾಮ

"ಹೆಂಗೂಸೆಂಬ ಭಾವವಳಿದು ಬಯಲು ಬೆರೆಸಿತ್ತು
ಕಲಿಯಕ್ಕರ ದೇವಾ ನಿಮ್ಮೊಲಿಸಿ ಒಚ್ಚತವಾದ
ಮಹಾದೇವಿಯಕ್ಕನ ಪಾದವ ನೆನೆದು ಬದುಕಿದೆನ"[೫] **– ಮಡಿವಾಳ ಮಾಚಯ್ಯ**

ಈ ಬಗೆಯ ನುಡಿಗಳಲ್ಲಿನ ಮೆಚ್ಚುಗೆ, ಆದರಗಳೆಲ್ಲಕ್ಕೂ ಒಂದೇ ಮತಿನಲ್ಲಿ ಚೆನ್ನಬಸವಣ್ಣ ಹೇಳಿರುವಂತೆ: 'ತನುವಿನೊಳಗಿದ್ದು ತನುವ ಗೆದ್ದಳು, ಮನದೊಳಗಿದ್ದು ಮನವ ಗೆದ್ದಳು, ವಿಷಯದೊಳಗಿದ್ದು ವಿಷಯವ ಗೆದ್ದಳು, ಭವಿಯ ಸಂಗದೊಳಿದ್ದು ಭವವಗೆದ್ದಳು' ಮತ್ತು ಶಿವನ 'ಹೃದಯ ಕಮಲವ ಬಗಿದುಹೊಕ್ಕು ನಿಜಪದವನಯಿದಿದ'[೬] ವಳೆಂಬುದೇ ಮುಖ್ಯ ಗೌರವದ ನೆಲೆಯಾಗಿದೆ.

ಇಂಥ ಗೌರವಾದರಗಳು ಏಕಮುಖವಾದದ್ದಲ್ಲ. ಅಕ್ಕಮಹಾದೇವಿಯೂ ಶಿವಶರಣರು ತಮ್ಮ ಜ್ಞಾನವನ್ನು ಧಾರೆಯೆರೆದು, ತನ್ನ ಅರಿವನ್ನು ಬೆಳೆಸಿ ಧರ್ಮದ ಹಾದಿ ನಿಷ್ಕಂಟಕ ವಾಗುವಂತೆ ಸ್ನೇಹ, ಬೆಂಬಲಗಳನ್ನು ತೋರಿ, ತನಗೆ ಮಾರ್ಗದರ್ಶನ ಮಾಡಿದರೆಂಬುದನ್ನು ಅನೇಕ ಬಗೆಯಾಗಿ ಹೇಳಿಕೊಂಡು ಹೃದಯತುಂಬಿ ಕೃತಜ್ಞತೆಗಳನ್ನು ವ್ಯಕ್ತಪಡಿಸಿದ್ದಾಳೆ:

"ಬಸವಣ್ಣ, ಎನ್ನ ಭಕ್ತಿ ನಿಮ್ಮ ಧರ್ಮ
ಎನ್ನ ಜ್ಞಾನ ಪ್ರಭುದೇವರ ಧರ್ಮ
ಎನ್ನ ಪರಿಣಾಮ ಚೆನ್ನಬಸವಣ್ಣನ ಧರ್ಮ
ಇಂತೀ ಮೂವರು ಒಂದೊಂದ ಕೊಟ್ಟ ಕಾರಣ
ಎನಗೆ ಮೂರು ಭಾವವಾಯಿತ್ತು.
ಆ ಮೂರು ಭಾವವ ನಿಮ್ಮಲ್ಲಿ ಸಮರ್ಪಿಸಿದ ಕಾರಣ
ಚೆನ್ನಮಲ್ಲಿಕಾರ್ಜುನನ ನೆನಹಾದಲ್ಲಿ
ನಿಮ್ಮ ಕರುಣದ ಕಂದನ ಕಾಣಾ, ಸಂಗನ ಬಸವಣ್ಣ"[೭]

ಇತರ ಶರಣರೆಲ್ಲರನ್ನೂ ಅಕ್ಕ ಭಕ್ತಿಯಿಂದ ನೆನೆದಿದ್ದರೂ, ಬಸವಣ್ಣನ ಬಗ್ಗೆ ವಿಶೇಷ ಆದರ, ಗೌರವಗಳಿಂದ ಮತ್ತೆ ಮತ್ತೆ ಕೊಂಡಾಡಿ ನಮಿಸಿದ್ದಾಳೆ. ಶಿವಶರಣರು ಮೆಟ್ಟಿದ ಧರೆ ಪಾವನ, ಅವರು ಇದ್ದ ಪುರವೇ ಕೈಲಾಸ, 'ಭಕ್ತರ ಮನೆಯಂಗಳ ವಾರಣಾಸಿಯಿಂದ ಗುಂಜಿ ಯಧಿಕ', ಎಂಬುದರ ಜೊತೆಯಲ್ಲಿ 'ಶರಣ ಬಸವಣ್ಣನಿದ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವಾಗಿ' ಅಕ್ಕನಿಗೆ ತೋರಿದೆ. ಬಸವಣ್ಣನ ಪಾಧವ ಕಂಡದ್ದರಿಂದ ತನ್ನ ಅಂಗ ನಾಸ್ತಿಯಾಯಿತ್ತು, ಆ ಪರಶಿವನ ನಿಜವನು 'ದೇವ–ದಾನವ–ಮಾನವರೊಳಗಾದವರೆಲ್ಲರೂ ಕಾಣಲರಿಯದೆ ಅಜ್ಞಾನದಿಂದ ಭವಭಾರಿಗಳಾಗಿ ಹೋದರು. ಈ ಪರಿಯಲ್ಲಿ ಬಯಲಾಗಿ ಹೋಗಬಾರದೆಂದು ನಮ್ಮ ಬಸವಣ್ಣನು ಜಗದ್ಧಿತಾರ್ಥವಾಗಿ ಮರ್ತ್ಯಕ್ಕೆ ಬಂದು ವೀರಶೈವ ಮಾರ್ಗವನರಿಪುವುದಕ್ಕೆ'[೮] ಯತ್ನಿಸಿದನೆಂದು ಕೊಂಡಾಡಿದ್ದಾಳೆ.

"ಬಸವಣ್ಣನೇ ಗುರು, ಪ್ರಭುದೇವರೇ ಲಿಂಗ
ಸಿದ್ಧರಾಮನೇ ಜಂಗಮ
ಮಡಿವಾಳಯ್ಯನೇ ತಂದೆ, ಚೆನ್ನಬಸವಣ್ಣನೇ ಎನ್ನ ಪರಮಾರಾಧ್ಯರು
ಇನ್ನು ಶುದ್ಧವಾದೆನು ಕಾಣಾ ಚೆನ್ನಮಲ್ಲಿಕಾರ್ಜುನಯ್ಯ"[೯]

ಎಂಬ ಧನ್ಯತೆಯಿಂದ, ಬಸವಣ್ಣನ ಮನೆಯಮಗಳು, ಚೆನ್ನಬಸವಣ್ಣನ ತೊತ್ತಿನ ಮಗಳು, ಪ್ರಭು

ದೇವರ ತೊತ್ತಿನ ಮರುದೊತ್ತಿನ ಮಗಳು, ಸಿದ್ಧರಾಮಯ್ಯ ಶಿಶುಮಗಳು, ಮಡಿವಾಳಯ್ಯನ ಮನೆ ಮಗಳಾಗಿ ಆ ಅಸಂಖ್ಯಾತ ಗಣಂಗಳ ಕರುಣದ ಕಂದನೆಂದು ತನ್ನನ್ನು ಆಕೆ ಕಂಡುಕೊಂಡಿದ್ದಾಳೆ.

ಪರಸ್ಪರರಲ್ಲಿ ಈ ರೀತಿ ಗೌರವ ಮತ್ತು ಭಕ್ತಿ, ವಾತ್ಸಲ್ಯ ಶಿವಶರಣದೊಂದಿಗೆ, ಅಕ್ಕನಿಗಿತ್ತು. ಆದರೆ ವಚನಕಾರ್ತಿಯರ ಸ್ಪಂದನೆ ಈಕೆಯ ಬಗ್ಗೆ ಹೇಗಿತ್ತೆಂಬುದಕ್ಕೆ ದಾಖಲೆಗಳಿಲ್ಲ. ಮುಕ್ತಾಯಕ್ಕ, ಸತ್ಯಕ್ಕ, ಪರಸ್ಪರರ ವಿಚಾರಗಳನ್ನು ಮಥಿಸಿ ಹೇಳಿಸಿಕೊಂಡಿರುವುದಕ್ಕೆ ಅವರ ಎರಡು ವಚನಗಳಲ್ಲಿ ಸೂಚನೆ ದೊರೆಯುತ್ತದೆ.[೧೦] ಆದರೆ ಅಕ್ಕನ ಬಗ್ಗೆ ಈ ರೀತಿಯ ಸಂವಾದವೋ ಪ್ರತಿಕ್ರಿಯೆಯೋ ಕಂಡುಬರುವುದಿಲ್ಲ. ಒಂದೆರಡು ಕಡೆ ಶಿವಶರಣೆಯರ ವಚನಗಳು ಅಕ್ಕಮಹಾದೇವಿಯದನ್ನು ಹೋಲುತ್ತವೆ. ಆದರೆ ಇಂಥ ಹೋಲಿಕೆ, ಬಹುಶಃ ಆ ಯುಗದ ಚಿಂತನೆಯಲ್ಲೇ ಇದ್ದ ಅಂಶಗಳಿಂದ ಕಾಣಿಸಿರುವುದು ಸಾಧ್ಯ.

ಉದಾಹರಣೆಗೆ :

"ಆರೂ ಇಲ್ಲದವಳೆಂದು ಆಳಿಗೊಳ್ಳಲುಬೇಡ
ಆಳಿಗೊಂಡಡೆ ಆನು ಅಂಜುವವಳಲ್ಲ
ಒಲವಿನ ಒತ್ತೆಕಲ್ಲ ಬೆವರಿಸಬಲ್ಲೆ ಕಾಣಿರೋ
ಅಳಿದವರ ನಪ್ಪಿದಡೆ ತರಗೆಲೆಯಂತೆ"[೧೧] ಎನ್ನುವ ಮುಕ್ತಾಯಕ್ಕನ ವಚನ

"ಆರೂ ಇಲ್ಲದವಳೆಂದು
ಆಳಿಗೊಳ್ಳಲು ಬೇಡ ಕಂಡಯ್ಯಾ
ಏನ ಮಾಡಿದಡೆಯೂ ನಾನು ಅಂಜುವವಳಲ್ಲ
ತರಗೆಲೆಯ ಮೇಲೆ ನಾನಿಹೆನು"[೧೨]

ಎನ್ನುವ ಅಕ್ಕನ ವಚನದೊಂದಿಗೆ ಹೆಚ್ಚು ಹೋಲುತ್ತದೆ. ಆದರೆ ಜಗತ್ತಿಗೆ ಒಂಟಿಯಾಗಿ ತನ್ನನ್ನು ಒಡ್ಡಿಕೊಂಡ ನೆಲೆಯಲ್ಲಿ ತನ್ನ ನಿರ್ಭೀತ ಮನಃಸ್ಥಿತಿಯನ್ನು ಅಕ್ಕನು ಹೇಳುತ್ತಿದ್ದರೆ, ಮುಕ್ತಾಯಕ್ಕನು, ತನ್ನ ಒಲವಿನ ಅಜಗಣ್ಣನ ಸಾವಿನಿಂದ ದುಃಖಿತೆಯಾಗಿದ್ದಾಕೆ, ಆ ಸ್ಥಿತಿಯನ್ನು ಮೀರಿ ತನ್ನ ಏಕಾಕಿತನವನ್ನು ಎದುರಿಸಲು ಸಿದ್ಧಳಾದಾಗಿನ ದಿಟ್ಟತನ ಆ ಮಾತುಗಳಲ್ಲಿ ತೋರಿಸಿದ್ದಾಳೆ. ಭಾವನಾತ್ಮಕ ಭಿನ್ನತೆ ಇದ್ದರೂ ಪದಗಳ ಸಾದೃಶ್ಯ ಇಲ್ಲಿ ಗಮನಾರ್ಹ.

ಮತ್ತೊಂದು ವಚನದಲ್ಲಿ ಮಹಾದೇವಿಯಕ್ಕ ಚೆನ್ನಮಲ್ಲಿಕಾರ್ಜುನನ ನಿಲುವನ್ನು ಬಣ್ಣಿಸುತ್ತ "ನೆಲದ ಮರೆಯ ನಿದಾನದಂತೆ, ತಿಲದ ಮರೆಯ ತೈಲದಂತೆ, ಶಿಲೆಯ ಮರೆಯ ಕನಕದಂತೆ, ಮರದ ಮರೆಯ ತೇಜದಂತೆ' ಎಂಬ ಉಪಮೆ ಸರಣಿ ರೂಪಿಸುತ್ತಾಳೆ. ಮುಕ್ತಾಯಕ್ಕನ ನಿರೂಪಣೆ ಹೀಗಿದೆ:

"ಅಲರೊಳಡಗಿದ ಪರಿಮಳದಂತೆ, ಪತಂಗದೊಳಡಗಿದ ಅನಲದಂತೆ,
ಶಶಿಯೊಳಡಗಿದ ಷೋಡಶ ಕಳೆಯಂತೆ, ಉಲುಹಡಗಿದ ವಾಯುವಿನಂತೆ"[೧೩]

ತನ್ನ ಅಜಗಣ್ಣ ತಂದೆಯ ಯೋಗವಿದೆಯೆಂದು ವರ್ಣಿಸುತ್ತಾಳೆ. ಈ ರೀತಿ ಪರತತ್ವದ ನೆಲೆಯನ್ನು ವರ್ಣಿಸುವುದು, ಅದಕ್ಕಾಗಿ ಹೊಸಹೊಸ ಉಪಮೆಗಳನ್ನು ಕಲ್ಪಿಸುವುದು ವಚನ ಯುಗದಲ್ಲಿ ಪ್ರಚಲಿತವಿದ್ದ ಒಂದು ರಚನಾವಿಧಾನವೂ ಆಗಿದ್ದೀತು. ಅಲ್ಲಮಪ್ರಭುವಿನ ಈ ವಚನ ಅದಕ್ಕೆ ನಿದರ್ಶನ:

"ನೆಲೆದ ಮರೆಯ ನಿಧಾನದಂತೆ, ಮುಗಿಲ ಮರೆಯಲಡಗಿದ ಮಿಂಚಿನಂತೆ ಬಯಲ ಮರೆಯಲಡಗಿದ ಮರೀಚಿಕೆಯಂತೆ, ಕಂಗಳ ಮರೆಯಲಡಗಿದ ಬೆಳಕಿನಂತೆ.
ಗೋಹೇಶ್ವರಾ ನಿಮ್ಮ ನಿಲುವು"[೧೪]

ಅಕ್ಕ ನಾಗಮ್ಮನ ಒಂದು ವಚನದಲ್ಲಿ ಜೀವ-ಪರತತ್ವದ ಸಂಬಂಧವನ್ನು ಮದುವೆಯ ರೂಪಕದ ಮೂಲಕ ವರ್ಣಿಸುವುದನ್ನು ಕಾಣುತ್ತೇವೆ:

"ಶ್ರೀ ಗುರುವೆ ತಂದೆಯಾಗಿ, ಲಿಂಗವೆ ಪತಿಯಾಗಿ
ಜಂಗಮವೆ ಅತ್ತೆ-ಮಾವಂದಿರಾಗಿ, ಶಿವಭಕ್ತರೆ ಬಾಂಧವರಾಗಿ
ಸತ್ಯಸದಾಚಾರವೆಂಬ ಮನೆಗೆ ಕಳುಹಿದರಾಗಿ
ಶರಣಸತಿ ಎಂಬ ನಾಮ ನಿಜವಾಯಿತ್ತು"[೧೫]

ಈ ವಚನವನ್ನು ಓದುವಾಗ ಯಾರಿಗಾದರೂ ಅಕ್ಕನ ಸುಪ್ರಸಿದ್ಧ ವಚನವಾದ "ಗುರುವೆ ತೆತ್ತಿಗನಾದ ಲಿಂಗವೆ ಮದುವಳಿಗನಾದ" ಎಂಬುದು ನೆನಪಾಗದೆ ಇರದು. ಅಕ್ಕನ ವಚನಕ್ಕೆ ಧ್ವನಿಭಾರ ಹೆಚ್ಚು. ಅಲ್ಲಿ ಇರುವವರು ಮದುವಳಿಗ ಮದುವಳಿಗೆ, ಗುರು ಮತ್ತು ಶಿವಶರಣರೇ ತಾಯಿ ತಂದೆಗಳು. ಆದರೆ ಅಕ್ಕ ನಾಗಮ್ಮನ ವಚನದಲ್ಲಿ ಅತ್ತೆ-ಮಾವಂದಿರೂ ಸೇರಿದ್ದಾರೆ. ಲೋಕದ ಗಂಡರ ಸಂಬಂಧ ತನಗಿಲ್ಲ. ತನ್ನ ಗಂಡ ಮಲ್ಲಿಕಾರ್ಜುನನೇ ಎಂದು ಒತ್ತಿ ಹೇಳುವುದು ಅಕ್ಕನ ವಚನದ ಉದ್ದೇಶ. ಆದರೆ ಅಕ್ಕ ನಾಗಮ್ಮ ಸೌಮ್ಯವಾಗಿ 'ಶರಣಸತಿ'ಯ ಹೆಸರು ಸಾರ್ಥಕವಾದ ಬಗೆಯನ್ನು ಹೇಳುತ್ತಾಳೆ, ಈ ರೀತಿಯಲ್ಲಿ ಈಕೆಯ "ಎನ್ನ ತನು ಚೆನ್ನಬಸವಣ್ಣನ ಬಯಲ ಬೆರೆಸಿತ್ತು" ಮತ್ತು ಅಕ್ಕನ, "ಬಸವಣ್ಣ, ಎನ್ನ ಭಕ್ತಿ"ಗಳನ್ನೂ ಹೋಲಿಸಬಹುದು. ಆಯ್ದಕ್ಕಿ ಲಕ್ಕಮ್ಮನು ಶರಣ ಸಮುದಾಯಕ್ಕೆ ವಂದಿಸುವ ವಚನವೊಂದರಲ್ಲಿ ಬಸವಣ್ಣ, ಚೆನ್ನಬಸವಣ್ಣ, ಮಡಿವಾಳಯ್ಯ, ಶಂಕರ ದಾಸಿಮಯ್ಯ, ಸಿದ್ಧರಾಮಯ್ಯ, ಘಟ್ಟಿವಾಳಯ್ಯ ಪ್ರಭುದೇವರನ್ನಲ್ಲದೆ ಮುಕ್ತಾಯಕ್ಕ, ಅಕ್ಕ ನಾಗಮ್ಮರನ್ನೂ ಹೆಸರಿಸಿ ನಮಿಸಿದ್ದಾಳೆ. ಆದರೆ ಈ ಶರಣ-ಶರಣೆಯರ ಪಟ್ಟಿಯಲ್ಲಿ ಅಕ್ಕಮಹಾದೇವಿಯ ಹೆಸರಿಲ್ಲ[೧೬].

ಶಿವಶರಣೆಯರ ಪೈಕಿ, ಕೆಲವರಲ್ಲಿ, ವಿಶೇಷವಾಗಿ ಕೆಳವರ್ಗದಿಂದ ಬಂದವರಲ್ಲಿ ಸ್ತ್ರೀ ಸಂಬಂಧಿತ ತಾತ್ವಿಕ ಪ್ರಶ್ನೆಗಳನ್ನು ಎತ್ತುವಲ್ಲಿ ಅಕ್ಕನಿಗಿಂತ ಮುಂದುವರಿದ ಚಿಂತನೆಯ ಧ್ವನಿಯನ್ನು ಗುರುತಿಸಬಹುದು. ಗಜೇಶ ಮಸಣಯ್ಯಗಳ ಪುಣ್ಯಸ್ತ್ರೀ ರಚಿಸಿರುವ ಈ ವಚನ ಗಮನಾರ್ಹ:

"ಹೊನ್ನ ಬಿಟ್ಟು ಲಿಂಗವನೊಲಿಸ ಬೇಕೆಂಬರು
ಹೊನ್ನಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?
ಹೆಣ್ಣಬಿಟ್ಟು ಲಿಂಗವನೊಲಿಸಬೇಕೆಂಬರು
ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?"[೧೭]

ಈ ಪ್ರಶ್ನೆ ಹೆಣ್ಣು, ಹೊನ್ನು, ಮಣ್ಣುಗಳು ಮಾಯೆಯೆನ್ನುವ ಪುರುಷ ಚಿಂತನೆಗೆ, ಸವಾಲಾಗುವುದು ಗಮನಾರ್ಹ. ಹೆಣ್ಣು ಹೆಣ್ಣಾದರೆ ಗಂಡಿಗೆ ಮಾಯೆ ಎಂದ ಅಕ್ಕನ ನೆಲೆಗಿಂತಲೂ ಇದು ಭಿನ್ನವಾದದ್ದಾಗಿ ತೋರುತ್ತದೆ. ಅಕ್ಕನ ನುಡಿ ವೀರಶೈವ ಯುಗದ ತತ್ವವನ್ನು ಒಪ್ಪಿದ ನೆಲೆಯದಾದರೆ ಈ ಅಜ್ಞಾತ ಹೆಸರಿನ ವಚನಕಾರಳು ಆ ನಂಬಿಕೆಯನ್ನೇ ಪ್ರಶ್ನಿಸಿದ್ದಾಳೆ.

ಧೂಪದ ಗೊಗ್ಗವ್ವೆ ಎಂಬ ವಚನಕಾರ್ತಿ ಹೆಣ್ಣಿನ ನೆಲೆಯಿಂದ ಕೇಳುವ ಪ್ರಶ್ನೆ ಕೂಡ ಮಹಾದೇವಿಯಕ್ಕನ ವಚನಗಳಿಗಿಂತ ಮುಂದುವರಿದ ಚಿಂತನೆಯನ್ನು ಧ್ವನಿಸುತ್ತದೆ:

“ಗಂಡು ಮೋಹಿಸಿ ಹೆಣ್ಣ ಹಿಡಿದಡೆ
ಅದು ಒಬ್ಬರ ಒಡವೆ ಎಂದು ಅರಿಯಬೇಕು.
ಹೆಣ್ಣು ಮೋಹಿಸಿ ಗಂಡ ಹಿಡಿದಡೆ
ಉತ್ತರವಾವುದೆಂದರಿಯಬೇಕು.”೧೮

ಇಲ್ಲಿ ಯಜಮಾನಿಕೆ ಅಥವಾ ಒಡೆತನದ ಪ್ರಶ್ನೆ ಎದ್ದಿರುವುದು ಮುಖ್ಯ. ಹೆಂಡತಿ, ಗಂಡನಿಗೆ ಒಡವೆಯಾಗಬಹುದು, ಅವನಿಗೆ ಸೇರಿದ ವಸ್ತುವಾಗಬಹುದು. ಸಾಂಪ್ರದಾಯಿಕ ಒಡೆತನದ ಕಲ್ಪನೆಯನ್ನು ಈಕೆ ತಿರುವು ಮುರುವು ಮಾಡುವ ಮೂಲಕ ಅದಕ್ಕೆ ಉತ್ತರವನ್ನು ಬಯಸಿರುವುದು ಗಮನಾರ್ಹ. ಗಂಡ ಮನೆಯ ಒಡೆಯನಲ್ಲ ಎನ್ನುವ ಅಕ್ಕ, ಹೆಂಡತಿಯೂ ಒಡತಿಯಲ್ಲವೆಂದು ಹೇಳಿ ಕೊನೆಗೆ ಚೆನ್ನಮಲ್ಲಿಕಾರ್ಜುನನೇ ಒಡೆಯನೆಂದು, ತಾನು ಅವನ ತೊತ್ತೆಂದೂ ಸಾರುತ್ತಾಳೆ. ಅಂದರೆ ಇಲ್ಲಿ ಕೂಡ ಆಕೆ ಶಿವಶರಣ ಯುಗದ ಚಿಂತನೆಯ ಜೊತೆ ಸಾಗುತ್ತಾಳೆ. ಅದರ ನೆಲೆಯಿಂದ ತನ್ನನ್ನು ಅರ್ಥೈಸಿಕೊಳ್ಳುತ್ತಾಳೆ, ಗೊಗ್ಗವ್ವೆಯೆತ್ತಿರುವ ಪ್ರಶ್ನೆಗೆ ಇರುವ ಸಾಂಸ್ಕೃತಿಕ ಆಯಾಮ ಇನ್ನೂ ದೊಡ್ಡದು.

ತಾತ್ವಿಕವಾದ ಕೆಲವು ವಿಚಾರಗಳಲ್ಲಿ, ಶಿವಶರಣ ಯುಗದ ಚಿಂತನೆಗೆ ಸ್ತ್ರೀಯ ನೆಲೆಯಿಂದ ಕೆಲವಾದರೂ ಹೊಸ ಅಂಶಗಳನ್ನು ಒದಗಿಸಿ ಕೊಟ್ಟಾಕೆ ಅಕ್ಕ ಮಹಾದೇವಿ. ಆದರೆ ಅಕ್ಕನಾಗಮ್ಮ, ಮುಕ್ತಾಯಕ್ಕ ಮುಂತಾದವರ ಚಿಂತನೆಗಳು ಶಿವಶರಣರು ಪ್ರಚಲಿತಗೊಳಿಸಿದ ಸ್ತ್ರೀ ಸಂಬಂಧಿತ ತಾತ್ವಿಕ ನೆಲೆಗಳಿಗೇ ತಮ್ಮನ್ನು ಹೊಂದಿಸಿಕೊಳ್ಳುವಂತೆ ತೋರಿದರೆ, ಅವರಿಗಿಂತ ಕೆಳಗಿನ ನೆಲೆಗಳಿಂದ ಬಂದವರ ಚಿಂತನೆಗಳು ಅವರವರ ಜೀವನ ಪರಿಸರ, ವೃತ್ತಿಯ ಮೂಲವಾದ ಅನುಭವಗಳಿಂದ ಹೆಚ್ಚು ಸತ್ವ ಪಡೆದಂತೆ ಕಂಡುಬರುತ್ತವೆ. ತನ್ನ ಅಲೌಕಿಕ ಪತಿಯ ಗುಣ ಸ್ವಭಾವದ ಬಗ್ಗೆ ಕದಿರ ರೆಮ್ಮವ್ವೆಯ ಈ ವರ್ಣನೆಯನ್ನು ನೋಡಬಹುದು. ಲೌಕಿಕ ಸಂಸಾರದ ಅನುಭವದ ಅಂಶವನ್ನೇ ಬಳಸಿಕೊಳ್ಳುತ್ತ ಆಕೆ ತನ್ನ ಆಧ್ಯಾತ್ಮಿಕ ಅನುಭವವನ್ನು ಹೇಳುತ್ತಾಳೆ.

“ಎಲ್ಲರ ಗಂಡರು ತೊಳಸಿಕ್ಕುವರು
ಎನ್ನ ಗಂಡಂಗೆ ತೊಳಸಿಕ್ಕುವುದಿಲ್ಲ.
ಎಲ್ಲರ ಗಂಡಂದಿರಿಗೆ ಬಸಿವರು
ಎನ್ನ ಗಂಡಂಗೆ ಬಸಿವುದಿಲ್ಲ.
ಎಲ್ಲ ಗಂಡಂದಿರಿಗೆ ಬೀಜವುಂಟು
ಎನ್ನ ಗಂಡಂಗೆ ಅಂಡದ ಬೀಜವಿಲ್ಲ.
ಎಲ್ಲ ಗಂಡಂದಿರು ಮೇಲೆ
ಎನ್ನ ಗಂಡ ಕೆಳಗೆ, ನಾ ಮೇಲೆ”೧೯

ಆ ವಚನವನ್ನು ಅಕ್ಕನ “ಎಲ್ಲರ ಗಂಡರ ಶೃಂಗಾರದ ಪರಿಯಲ್ಲ” ಎಂಬುದರ ಜೊತೆ ಹೋಲಿಸಿದರೆ ಅಕ್ಕ ಪುರಾಣಗಳ ವರ್ಣನೆಗಳನ್ನು ಬಳಸಿಕೊಂಡು ಕಟ್ಟಿಕೊಡುವ ಕಲ್ಪನಾ ಪ್ರಧಾನವಾದ ವಿವರಗಳಿಗೂ, ಮಣ್ಣಿನ ನೆಲೆಯ, ದೈನಂದಿನ ಬದುಕಿನಿಂದಲೇ ವಿವರ ಗಳನ್ನು ಪಡೆದುಕೊಳ್ಳುವ ರೆಮ್ಮವ್ವನ ಚಿಂತನೆಗೂ ಇರುವ ಅಂತರ ಗಮನಾರ್ಹ. ಅದರೊಂದಿಗೆ ಅವು ಹುಟ್ಟಿಸುವ ಅರ್ಥ ಪರಂಪರೆಗಳೂ ತೀರಾ ಭಿನ್ನವಾಗುತ್ತವೆ.

ಬಸವಣ್ಣನ ಅತ್ಯಾಪ್ತನಾಗಿದ್ದ ಹಡಪದ ಅಪ್ಪಣ್ಣನ ಪುಣ್ಯಾಂಗನೆಯಾದ ಲಿಂಗಮ್ಮ ಕೆಳಸ್ತರದಿಂದ ಬಂದು ದೀಕ್ಷೆಯ ಮೂಲಕ ಶಿವಶರಣರ ಸಂಪರ್ಕ ಪಡೆದು ವಚನಾಭಿವ್ಯಕ್ತಿಗೆ ತೊಡಗಿದ ಅನೇಕ ಸ್ತ್ರೀಯರಲ್ಲಿ ಒಬ್ಬಳು. ಏಕಾಗ್ರಚಿತ್ತದಿಂದ ಸ್ವಸಾಧನೆಯಲ್ಲಿ ಬದುಕನ್ನು ತೊಡಗಿಸಿಕೊಂಡ ಈಕೆಯ ವಚನಗಳಲ್ಲಿ ಸಾಧನೆಯ ವರ್ಣನಾತ್ಮಕ ವಿವರಗಳು, ಭಾವನಾ ತೀವ್ರತೆ, ಸಾಮಾಜಿಕ ಪ್ರಗತಿಯ ವಿಚಾರಗಳಾವುದೂ ಇಲ್ಲವಾದರೂ ಅನುಭವದ ಸತ್ಯವನ್ನು ನೇರವಾಗಿ ಆಕೆ ಸರಳವಾಗಿ ಹೇಳಿಕೊಳ್ಳಬಲ್ಲಳು. ಧಾರ್ಮಿಕ ಸಾಧನೆಯ ವಿಚಾರಗಳೇ ಆಕೆಯ ಮುಖ್ಯವಸ್ತು. ಸೌಮ್ಯ ವಿಚಾರಗಳುಳ್ಳ ಈ ವಚನಕಾರ್ತಿಯ ಎರಡು ವಚನಗಳಲ್ಲಿ ಅಕ್ಕಮಹಾದೇವಿಯ ಬಗೆಗಿನ ಪರೋಕ್ಷ ವಿಮರ್ಶೆಯನ್ನು ಗುರುತಿಸಲು ಸಾಧ್ಯವಿದೆ.

"ಕದಳಿಯ ಬನದೊಳಗಿರುವ ಲಿಂಗವ ಅರಸಿದಡೆ ಕಾಣಬಾರದು
ನೋಡಿದಡೆ ನೋಟಕ್ಕಿಲ್ಲ, ಹಿಡಿದಡೆ ಹಸ್ತಕ್ಕಿಲ್ಲ, ನೆನೆದಡೆ ಮನಕ್ಕಗೋಚರ
ಇಂತು ಮಹಾಘನವ ಹೃದಯದಲ್ಲಿ ನೆಲೆಗೊಳಿಸಿದ ಶರಣರ
ಕಂಗಳಲ್ಲಿ ಹೆರೆಹಿಂಗದೆ ನೋಡಿ ಅವರಂಘ್ರಿಯಲ್ಲಿ ಐಕ್ಯನಾದೆನಯ್ಯಾ
ಅಪ್ಪಣ್ಣಪ್ರಿಯ ಚನ್ನಬಸವಣ್ಣಾ"[೨೦]

ಕದಳಿಯ ಬನದಲ್ಲಿನ ಮಲ್ಲಿಕಾರ್ಜುನ ಲಿಂಗವನ್ನು ಅರಸಿ, ಹಪಾಹಪಿಸಿ ಕಾತರಿಸಿ ಅಲೆದ ಅಕ್ಕನು

"ಗಿರಿಯೊಳು ಮನದೊಳು ಗಿಡಗಿಡದತ್ತ
ದೇವ ಎನ್ನದೇವ ಬಾರಯ್ಯಾ
ತೋರಯ್ಯಾ ನಿಮ್ಮ ಕರುಣವನೆಂದು
ನಾನು ಅರಸುತ್ತ ಅಳಲುತ್ತ ಕಾಣದೆ
ಸುಯಿದು ಬಂದು ಕಂಡೆ
ಶರಣರ ಸಂಗದಿಂದ ಅರಸಿ ಹಿಡಿದಹೆನೆಂದು
ನೀನಡಗುವ ಠಾವ ಹೇಳಾ, ಚೆನ್ನಮಲ್ಲಿಕಾರ್ಜುನಾ'[೨೧]

ಎಂದು ಹೇಳಿ ಹುಡುಕಿದ ಬಗೆಗೆ ಭಿನ್ನವಾಗಿ ಲಿಂಗಮ್ಮ 'ಕಾಯವೆಂಬ ಕದಳಿಯ ಹೊಕ್ಕು, ನೂನ ಕದಳಿಯ ದಾಟಿ, ಜೀವ ಪರಮರ ನೆಲೆಯನರಿದು'[೨೨] ಎಂದು ಹೇಳುವಾಗ ಕಾಣದ, ಸಿಗದ ಲಿಂಗವನ್ನು ಹೊರಗೆ ಅರಸುವ ಬದಲು ತನ್ನಲ್ಲೇ ಪ್ರಾಣಲಿಂಗವನ್ನೇ ಏಕಾಗ್ರತೆಯಿಂದ ನೆನೆದಲ್ಲಿ ಪರತತ್ವದೊಂದಿಗೆ ಬೆರೆಯುವುದು ಸಾಧ್ಯವೆಂದು ಸೂಚಿಸುತ್ತಾಳೆ. ಈ ಅಂಶದತ್ತ ಗಮನ ಸೆಳೆಯುತ್ತಾ ಡಾ. ಬಸವರಾಜ ಸಾದರ ಪ್ರಾಣಲಿಂಗದ ಮೂಲಕವೇ, ಅಂದರೆ ವ್ಯಕ್ತಿತ್ವದಲ್ಲಿ ಹುದುಗಿರುವ ಶಕ್ತಿಯ ಮೂಲಕವೇ ಮಹತ್ವದ ಸಾಧನೆ ಮಾಡಲು ಸಾಧ್ಯವೆಂದು ಅನುಭವದಿಂದ ಅರಿತ ಅವಳು ಅಕ್ಕಮಹಾದೇವಿಯ ಈ ತೊಳಲಾಟವನ್ನು ಆಕ್ಷೇಪಿಸಿದ್ದು ನಿಜಕ್ಕೂ ಅರ್ಥಪೂರ್ಣ[೨೩] ಎನ್ನುತ್ತಾರೆ. ಅಕ್ಕ ಮಹಾದೇವಿಯಂಥ ಹಿರಿಯರ ವಿಚಾರಕ್ಕೆ ಕೂಡ ಲಿಂಗಮ್ಮನಂಥ ವಚನಕಾರ್ತಿ ಪ್ರತಿಕ್ರಿಯೆ ತೋರಲು ಸಾಧ್ಯವಾಯಿತು ಎಂಬುದು ನಿಜಕ್ಕೂ ಆ ಯುಗದಲ್ಲಿ ಸ್ತ್ರೀಯರಿಗೆ ದೊರೆತ ವೈಚಾರಿಕ ಸ್ವಾತಂತ್ರ್ಯವನ್ನು ಸೂಚಿಸುತ್ತದೆ. ಅಕ್ಕನ ವಚನಗಳಲ್ಲಿನ ದ್ವಂದ್ವ ತೊಳಲಾಟಗಳು ಆಕೆಯ ಅನುಭವದಲ್ಲಿನ ಮಾನವೀಯ ಹಾಗೂ ಪ್ರಾಮಾಣಿಕ ಅಭಿವ್ಯಕ್ತಿಗಳಾಗಿದ್ದು, ಅದನ್ನು ಹೇಳುವುದರಿಂದಲೇ ಆಕೆಯ ವಚನಗಳಿಗೆ ವಿಶಿಷ್ಟ

ತೀವ್ರತೆ, ಕಾವ್ಯಶಕ್ತಿ ದೊರೆತಿದೆ ಎಂಬುದನ್ನು ಮರೆಯುವಂತಿಲ್ಲ. ಕೇವಲ ನೀರಸವಾದ ತತ್ವದ ರೀತಿ ಆಕೆ ತನ್ನ ಅನುಭವವನ್ನು ಹೇಳಲಿಲ್ಲವಾದ್ದರಿಂದಲೇ ಅವಳ ರಚನೆಗಳಿಗೆ ಅನನ್ಯತೆಯು ಉಂಟಾಗುತ್ತದೆ. ಬದುಕನ್ನು, ಜಗತ್ತಿನಲ್ಲಿ ಮಾನವ ಅಸ್ತಿತ್ವದ ಅರ್ಥವನ್ನೂ ಪ್ರಶ್ನಿಸುವ ದಾರ್ಶನಿಕತೆ ಅಕ್ಕನ ವಚನಗಳ ಸತ್ವವಾಗಿದ್ದರೆ ಲಿಂಗಮ್ಮನಂಥವರು ಆ ಯುಗದಲ್ಲಿ ದೊರಕಿದ್ದ ಸ್ವಾತಂತ್ರ್ಯವನ್ನು ಸ್ತ್ರೀಯರು ಹೇಗೆ ಬಳಸಿಕೊಂಡರೆಂಬುದನ್ನು ಪ್ರತಿನಿಧಿಸುತ್ತಾರೆ.

ಇತರ ವಚನಕಾರ್ತಿಯರ ಜೊತೆ ಅಕ್ಕನ ವಚನಗಳನ್ನು ಹೋಲಿಸುವಾಗ ಎದ್ದು ಕಾಣುವ ಮತ್ತೊಂದು ಲಕ್ಷಣ, ಅಕ್ಕನ ಅಂತರ್ಮುಖತೆ, ಆತ್ಮಶೋಧನೆ, ಆಧ್ಯಾತ್ಮಿಕ ಅಸ್ತಿತ್ವದ ಹುಡುಕಾಟ, ಆನುಭಾವಿಕ ಅನುಭವಗಳ ಶೋಧನೆ ಆಕೆಯ ಅಂತರಂಗದ ಪಾತಳಿಗಳು. ಅಲ್ಲಿ 'ಭಕ್ತಿ' ಮತ್ತು 'ವೈರಾಗ್ಯ'ಗಳೇ ಬಹುಮುಖ್ಯ ಗ್ರಹಿಕೆಗಳು. ಆದರೆ ಅಮುಗೆ ರಾಯಮ್ಮನಂಥ ವಚನಕಾರ್ತಿ (ಈಕೆಯನ್ನು ಗುರುತಿಸುವಲ್ಲಿ ವಿದ್ವಾಂಸರ ನಡುವೆ ತೀರ ವಿವಾದಗಳಿವೆ) ಕೂಡ ಭಕ್ತಿ ವೈರಾಗ್ಯ ಗಳನ್ನೇ ಮುಖ್ಯವಾಗಿಸಿಕೊಂಡಿದ್ದರೂ ಅದಕ್ಕೆ ಸಾಮಾಜಿಕ ಪ್ರಜ್ಞೆಯನ್ನೂ ಆಕೆ ಹೊಂದಿಸಿಕೊಂಡಿದ್ದಾಳೆ.

'ಹೊನ್ನ ಬಿಟ್ಟಡೇನು, ಹೆಣ್ಣ ಬಿಟ್ಟಡೇನು, ಮಣ್ಣ ಬಿಟ್ಟಡೇನು/ವಿರಕ್ತನಾಗಬಲ್ಲನೆ?'[೨೪] ಎನ್ನುವ ಆಕೆ ಇವೆಲ್ಲದರ ನಡುವೆಯಿದ್ದೂ ಸಾಧನೆ ಕೈಗೊಳ್ಳಬೇಕೆನ್ನುತ್ತಾಳೆ. ಇತರ ಶಿವಶರಣರಂತೆ ಸಾಂಸಾರಿಕ ನೆಲೆಯನ್ನೂ ಸಹಜವಾಗಿಯೇ ಸ್ವೀಕರಿಸುವ ರಾಯಮ್ಮ ತಾದಾತ್ಮ್ಯದ ನೆಲೆಯಲ್ಲಿ ಹೊರಗಿನ ಆಚರಣೆಗಳಾದ ಪೂಜಾದಿಗಳನ್ನೂ ಅನಗತ್ಯವೆನ್ನುತ್ತಾಳೆ.

> **"ನೀನೆ ಪತಿಯಾಗಿ ನಾನೆ ಸತಿಯಾದ ಕಾರಣ**
> **ನಿನ್ನ ನೆನವವನಲ್ಲ ನಾನು; ನಿನ್ನ ಪೂಜಿಸುವವನಲ್ಲ ನಾನು;**
> **ನಿನ್ನ ರಚಿಸುವವನಲ್ಲ**
> **ಎನಗೆ ನಿನಗೆ ಸಂದಿಲ್ಲದ ಸಮರಸವಯ್ಯಾ"[೨೫]**

ಛಲ, ಹಠ, ದಿಟ್ಟತನಗಳಿಂದ ಎಲ್ಲವನ್ನೂ ಪ್ರಶ್ನಿಸಬಲ್ಲ ನಿರ್ಭೀತ ವಿಮರ್ಶನ ಪ್ರಜ್ಞೆಯಿರುವ ರಾಯಮ್ಮ ವಿರಕ್ತರು, ಭಕ್ತರು, ಜ್ಞಾನಿಗಳು, ಅನುಭಾವಿಗಳು, ಲಿಂಗವಂತರು ಎಲ್ಲರನ್ನೂ ಆ ಮೂಲಾಗ್ರವಾಗಿ ಜಾಲಾಡಿ ನಿಜವನ್ನು ಬಯಲಿಗೆಳೆಯುವ ಧೋರಣೆಯಾಕೆ. "ಮಂಡೆ ಬೋಳಿಸಿಕೊಂಡು ತುಂಡುಗಂಬಳಿಯ ಹೊದ್ದವರ ಕಂಡಡೆ/ನಂಬಲಾರೆ, ನೆಚ್ಚಲಾರೆ"[೨೬] "ಕತ್ತೆಯಂತೆ ಬತ್ತಲೆಯಿದ್ದಡೇನು, ಇಷ್ಟಲಿಂಗ ಸಂಬಂಧಿಯಾಗಬಲ್ಲನೆ"[೨೭] ಎಂಬಂಥ ಮೊನಚು ಮಾತುಗಳಲ್ಲಿ ಸಮಾಜದಲ್ಲಿರುವ ವೇಷಧಾರಿಗಳ ಡಂಭಾಚಾರ ಗಳನ್ನು ನಿಷ್ಠುರವಾಗಿ ಟೀಕಿಸುವವಳು. ಅಕ್ಕಮಹಾದೇವಿಯನ್ನು ಈಕೆ ಹೀಗೆ ನೆನೆದಿದ್ದಾಳೆ. "ಬಸವಣ್ಣಂಗೆ ಭಕ್ತಿಯ ತೋರಲೆಂದು/ಚೆನ್ನಬಸವಣ್ಣಂಗೆ ಆರುಸ್ಥಲವನರುಹಲೆಂದು/ ಘಟ್ಟಿವಾಳ, ಮಹಾದೇವಿ, ನಿರವಯಸ್ಥಲದಲ್ಲಿ ನಿಂದ ಅಜಗಣ್ಣ, ಬೊಂತಲಾ ದೇವಿ/ ಇಂತಿವರಿಗೆ ಸ್ವತಂತ್ರವ ತೋರಲೆಂದು ಬಂದೆಯಲ್ಲಾ/ಅಮುಗೇಶ್ವರ ಲಿಂಗಕ್ಕೂ ಎನಗೂ ಪರತಂತ್ರವ ತೋರದೆ/ ಸ್ವತಂತ್ರನ ಮಾಡಿ ನಿರವಯಸ್ಥಲದಲ್ಲಿ ನಿಲ್ಲಿಸಿದೆಯಲ್ಲಾ, ಪ್ರಭುವೆ"[೨೮]

ತನ್ನ ಆನುಭಾವಿಕ ಅನುಭವವನ್ನು ಹೇಳುವ ರಾಯಮ್ಮನ ವಚನಗಳಲ್ಲಿ ದೇವರ ಹಂಬಲ, ಅಮೂರ್ತವಾದ ಆತ್ಯಂತಿಕವಾದ ಆ ತತ್ವನ್ನು ಶೋಧಿಸುವ ಕಾತರತೆ ಇದೆ. ಆದರೆ ಸ್ತ್ರೀ–ಪುರುಷ ಸಂವೇದನೆಗಳನ್ನು ಅಥವಾ ವಿವಾಹ, ಕುಟುಂಬ ವ್ಯವಸ್ಥೆಯನ್ನು ಕುರಿತಂತೆ ಅಕ್ಕನ ವಚನಗಳಲ್ಲಿ ಕಾಣುವ ಜಿಜ್ಞಾಸೆ ಈಕೆಗೆ ಮುಖ್ಯವಾಗಿಲ್ಲ. ಸಂಸಾರದಲ್ಲಿ ತನ್ನ ಇರವಿನ

ಅರಿವು, ಅದರಿಂದ ಪಾರಾಗಬೇಕೆಂಬಲ್ಲಿ ಅಕ್ಕನ ದ್ವಂದ್ವ ಕೂಡ ಈಕೆಯನ್ನು ಕಾಡದು. ಈಕೆ ತನ್ನ ಸುತ್ತಲಿನ ಸಮಾಜದ ತೋರಿಕೆಗೂ ನಿಜಕ್ಕೂ ಇರುವ ಅಂತರವನ್ನು ಎತ್ತಿತೋರಿಸುವ ಪರಿಯಲ್ಲಿ ಈಕೆಯ ನಿಜದ ಹುಡುಕಾಟದ ದನಿಯನ್ನು ಕೇಳಬಹುದು. ಆದರೆ ಅಕ್ಕಮಹಾದೇವಿಯ ವಚನಗಳ ಪ್ರಭಾವ ಈಕೆಯ ವಚನಗಳಲ್ಲಿ ಕಾಣಲು ಸಾಧ್ಯ.

ಲೋಕದ ಪತಿಯನ್ನು, ಲೌಕಿಕ ಸಂಸಾರವನ್ನೂ ಅತ್ಯುತ್ಕಟವಾಗಿ ಒಪ್ಪಿಯೇ ಸಾಧನೆಗೈದ ನೀಲಲೋಚನೆಯ ನೆಲೆ ಅಕ್ಕಮಹಾದೇವಿಯದಕ್ಕೆ ವಿರುದ್ಧ ಧ್ರುವವೆನ್ನಬಹುದು. ನೀಲಾಂಬಿಕೆ, ನೀಲಲೋಚನೆ, ನೀಲಮ್ಮ, ಮಾಯಾದೇವಿ ಮುಂತಾಗಿ ಕಾವ್ಯ, ಕಥೆ ಪುರಾಣಗಳಲ್ಲಿ ವಿವಿಧ ರೀತಿಯಿಂದ ಉಲ್ಲೇಖಗೊಳ್ಳುವ ಈಕೆ ಬಸವಣ್ಣನ ಒಬ್ಬ ಪತ್ನಿಯಾಗಿ (ಮತ್ತೊಬ್ಬಾಕೆ ಗಂಗಾಂಬಿಕೆ) ಆ ಮಹಾಶಿವಶರಣನ ಭಕ್ತಿ, ಸಾಧನೆಗೆ, ಗುರು–ಲಿಂಗಮ–ಜಂಗಮ ಸೇವೆಗೆ ದೀನದಲಿತರ ಉದ್ಧಾರದ ಧ್ಯೇಯಕ್ಕೆ ತನ್ನನ್ನು ಸಂಪೂರ್ಣವಾಗಿ ಸಮರ್ಪಿಸಿಕೊಂಡು "ಮಹಾಸಾಧ್ವಿ"ಯಾಗಿ ಕೀರ್ತಿಪಡೆದಾಕೆ[೨೯]. ಬಸವಣ್ಣನ ಆತ್ಮಸಂಗಾತಿ. ಜ್ಞಾನ ಹುಟ್ಟುವ ಮೊದಲು, ಅಹಂಕಾರ ಅಳಿಯದ ಮೊದಲು ಆತ ಆಕೆಗೆ ಗುರು. ಅನುಭಾವದ ಮೊದಲ ಸ್ಥಿತಿಯಲ್ಲಿ ಆತ ಆಕೆಯ ಶಿಶು, ಇನ್ನೊಮ್ಮೆ ಆಕೆಯೇ ಆತನ ಶಿಶು. ಪರಮಸ್ಥಿತಿಯಲ್ಲಿ ಆಕೆ ಬೇರೆಯಲ್ಲ ಆತ ಬೇರೆಯಲ್ಲ ಎಂಬಂಥ ಅರಿವು ಆಕೆಯದು:

> **"ಮಡದಿ ಎನಲಾಗದು ಬಸವಂಗೆ ಎನ್ನನು**
> **ಪುರುಷನೆನ್ನಲಾಗದು ಬಸವನ ಎನಗೆ**
> **ಉಭಯದ ಕುಲವ ಹರಿದು ಬಸವಗೆ ಶಿಶುವಾದೆ**
> **ಬಸವನೆನ್ನ ಶಿಶುವಾದ**
> **ಪ್ರಮಥ ಪುರಾತನರು ಸಾಕ್ಷಿಯಾಗಿ ಸಂಗಯ್ಯನಿಕ್ಕಿದ**
> **ದಿಬ್ಬವ ಮೀರದೆ ಬಸವನೊಳಗಾನಡಗಿದೆ"[೩೦]**

ಇಂಥ ತಾತ್ವಿಕ ನೆಲೆಗೇರಿದ ನೀಲಲೋಚನೆ ಉನ್ನತ ಸ್ತರದ ಕಾವ್ಯ ಶಕ್ತಿಯುಳ್ಳ ವಚನಗಳನ್ನು ರಚಿಸಿರುವುದಷ್ಟೇ ಅಲ್ಲದೆ ಶರಣ ಚಳವಳಿಯ ಮುಖ್ಯ ಪ್ರಕ್ರಿಯೆಯಲ್ಲಿ ಸಕ್ರಿಯ ಪಾಲುದಾರಳೂ ಆಗಿದ್ದಾಳೆ. ಆಕೆ ಸ್ತ್ರೀಯ ನೆಲೆಯಿಂದ ನಡೆಸಿದ ಚಿಂತನೆಯ ನಿದರ್ಶನವಾಗಿ ಈ ವಚನವನ್ನು ನೋಡಬಹುದು:

> "ಏಕೆನ್ನ ಪುಟ್ಟಿಸಿದೆಯಯ್ಯಾ ಹೆಣ್ಣು ಜನ್ಮದಲ್ಲಿ, ಪುಣ್ಯವಿಲ್ಲದ ಪಾಪಿಯ?
> **ನಾನು ಇಹಪರಕ್ಕೆ ದೂರಳಯ್ಯ**
> **ಎನ್ನ ನಾಮ ಹೆಣ್ಣು ನಾಮವಲ್ಲಯ್ಯಾ**
> **ನಾನು ಸಿರಿಯಿದ್ದ ವಸ್ತುವಿನ ವಧುವಾದ ಕಾರಣ**
> **ಸಂಗಯ್ಯನಲ್ಲಿ ಬಸವನ ವಧುವಾದ ಕಾರಣ**
> **ಎನಗೆ ಹೆಣ್ಣು ನಾಮವಿಲ್ಲವಯ್ಯಾ"[೩೧]**

ಈ ಒಟ್ಟು ವಚನ ಆ ಕಾಲದ ಸ್ತ್ರೀಯರಲ್ಲಿ ಮೂಡಿದ್ದ ವೈಚಾರಿಕತೆಯ ವಿವಿಧ ಸ್ತರಗಳ ಪಡಿಯಚ್ಚಿನಂತಿದೆ. ಪುಣ್ಯವಿಲ್ಲದ, ಪಾಪಿಯ ಜನ್ಮ ಹೆಣ್ಣಿನದು, ಇಹಪರಕ್ಕೆ ದೂರವಾದದ್ದು, ಎಂಬುದು ಸಾಂಪ್ರದಾಯಿಕವಾಗಿ ವೈದಿಕ, ಜೈನ ಧರ್ಮಗಳ ಪ್ರಭಾವದಡಿ ಹೆಣ್ಣಿಗಿದ್ದ ನೆಲೆಯಾಗಿದೆ. ಆದರೆ 'ಎನ್ನ ನಾಮ ಹೆಣ್ಣು ನಾಮವಲ್ಲ' 'ಎನಗೆ ಹೆಣ್ಣು ನಾಮವಿಲ್ಲ' ಎಂಬ

ಅರಿವು ಸ್ತ್ರೀಪುರುಷರನ್ನು ಆತ್ಮದ ನೆಲೆಯಲ್ಲಿ ಒಂದೇ ಎಂದು ಗುರುತಿಸಿದ್ದ ವೀರಶೈವ ತಾತ್ವಿಕ ನೆಲೆಯ ಪರಿಣಾಮದಿಂದ ಹುಟ್ಟಿರುವಂಥದು. ಆ ಸಾಧನೆಯಲ್ಲಿ ಬಸವನ ಪಾತ್ರವೇನು ಎಂಬುದನ್ನು ಅವನ ಪತ್ನಿಯ ಹೊರತು ಬೇರಾರು ಅಷ್ಟು ಖಚಿತವಾಗಿ ಹೇಳಬಹುದು? ಭಕ್ತಿ, ಸಮರ್ಪಣಾ ಭಾವ, ಬಸವಣ್ಣನ ಸ್ತುತಿ, ಲೋಕಾತೀತ ಅನುಭವ, ದರ್ಶನ, ಬಸವಣ್ಣ ವಿಯೋಗದಿಂದ ಹುಟ್ಟಿದ ದುಃಖ ನೀಲಲೋಚನೆಯ ವಚನಗಳ ಪ್ರಾಣಶ್ರುತಿ. ಚೆನ್ನಮಲ್ಲಿ ಕಾರ್ಜುನನಿಗೆ ಸಮರ್ಪಿಸಿಕೊಂಡ ಅಕ್ಕನಂತೆ ಈಕೆ ಬಸವನಲ್ಲಿ ತನ್ನ ಸರ್ವಸ್ವವನ್ನೂ ಅರ್ಪಿಸಿದವಳು. ಆದರೂ, ಬದುಕಿನ ಕೊನೆಗಳಿಗೆಯಲ್ಲಿ, ತನ್ನದೇ ಸ್ವಂತಿಕೆಯನ್ನು ಅರಿವಿನ ವಿಶಾಲ ನೆಲೆಯನ್ನು ಗಳಿಸಿಕೊಂಡಾಕೆ. ಅನುಕೂಲೆಯಾದ ಪತ್ನಿಯಾಗಿ, ಶರಣೆಯರಿಗೆ ಅಕ್ಕನಿಗಿಂತ 'ನೀಲಲೋಚನೆ ಸಹಜವಾಗಿ ಒಪ್ಪಿತ ಮಾದರಿಯಾಗಿ ಅವರಿಂದ ಸ್ಮರಿಸಲ್ಪಡುತ್ತಾಳೆ.

ಅಕ್ಕಮಹಾದೇವಿಯ ನಂತರದ ಹೆಸರಾಗಿ ವಚನಕಾರ್ತಿಯರಲ್ಲಿ ಗುರುತಿಸಲ್ಪಡುವ ಮುಕ್ತಾಯಕ್ಕ ಮಹಾ ಶಿವಶರಣ ಸಾಧಕ ಅಜಗಣ್ಣನ ಸೋದರಿಯಾಗಿದ್ದು, ಅಜಗಣ್ಣನನ್ನು ತಾತ್ವಿಕ ಗುರುವಾಗಿ ಸ್ವೀಕರಿಸಿ, ಶ್ರೇಷ್ಠಮಟ್ಟದ ತತ್ವಜ್ಞಾನವನ್ನೂ, ಕಾವ್ಯದ ಭಾವತೀವ್ರತೆಯನ್ನೂ ತನ್ನ ವಚನಗಳಲ್ಲಿ ಪ್ರಕಟಿಸಿದ್ದಾಳೆ. ತೀಕ್ಷ್ಣವಾದ ವೈಚಾರಿಕ ಶಕ್ತಿಯುಳ್ಳ ಮುಕ್ತಾಯಕ್ಕ ಅಪರೂಪದ ಬುದ್ಧಿಜೀವಿ ವಚನಕಾರ್ತಿ. ಅಲ್ಲಮಪ್ರಭುವಿನೊಂದಿಗೂ ತರ್ಕಕ್ಕಿಳಿದು ವಾದಿಸಿದಂಥ ದಿಟ್ಟೆ. ಮಹಾದೇವಿಯಕ್ಕನಿಗೆ ವಿರಕ್ತಿಯೇ ಪರಮ ಮೌಲ್ಯವೆನಿಸಿದ್ದರೆ ಮುಕ್ತಾಯಕ್ಕನಿಗೆ ಭಕ್ತಿ, ಜ್ಞಾನಗಳು ಮುಖ್ಯ ತತ್ವಗಳಾಗಿವೆ. ಆದರೆ ಭಕ್ತಿಯು ಮಹಾದೇವಿ ಯಕ್ಕನ ವಚನಗಳಲ್ಲಿ ಭಾವಾರ್ದ್ರವಾಗಿ ಹೊಮ್ಮಿ ಬರುವಷ್ಟು ಸಹಜವಾಗಿ ಮುಕ್ತಾಯಕ್ಕನ ವಚನಗಳಲ್ಲಿ ಕಾಣದು. ಅಕ್ಕನಿಗಿರುವ ವಿನೀತ ಭಾವಕ್ಕಿಂತ ಭಿನ್ನವಾಗಿ ಈಕೆಯಲ್ಲಿ ಛಲ, ಆತ್ಮ ವಿಶ್ವಾಸಗಳು ಎದ್ದುತೋರುತ್ತವೆ. "ಕುಸುಮ ಬಲಿದು ದೆಸೆದೆಸೆಗೆ ವಾಸನೆ ಫಲಿಸುವಂತೆ", 'ಸಿಡಿಲು ಹೊಯ್ದ ಬಾವಿಗೆ ಸೋಪಾನವೇಕೊ" ಎಂಬಂಥ ಅರ್ಥ ಪರಂಪರೆಯುಳ್ಳ ಉಪಮೆಗಳನ್ನು ಸೃಷ್ಟಿಸಬಲ್ಲ ಮುಕ್ತಾಯಕ್ಕ ಶಬ್ದದ ಬಗ್ಗೆ ತೋರುವ ಎಚ್ಚರ ವಿಶಿಷ್ಟವಾದದ್ದು.

"ಘನಮಹಿಮ ಶರಣರ ಸಂಗದಿಂದ ಘನಕ್ಕೆ ಘನವೇದ್ಯವಾದ ಬಳಿಕ
ಅರಿಯಲಿಲ್ಲ, ಮರೆಯಲಿಲ್ಲ, ಕೂಡಲಿಲ್ಲ, ಅಗಲಿಲ್ಲ.
ಮನ ಮೇರೆದಪ್ಪಿ ನಿರವಯಲಾದ ಸುಖವ
ಶೂನ್ಯ ನಿಶೂನ್ಯವೆಂದು ನುಡಿಯಲುಂಟೆ?
ಶಬ್ದಮುಗ್ಧವಾಗಿ ಎನ್ನ ಅಜಗಣ್ಣ ತಂದೆಯ ಬೆರಸಿದ ಬಳಿಕ
ಉರಿಯುಂಡ ಕರ್ಪುರದಂತಾದೆನಯ್ಯ"[೩೨]

"ವಚನಕಾರ್ತಿಯರಲ್ಲಿ ಶ್ರೇಷ್ಠಮಟ್ಟದ ಬೌದ್ಧಿಕಳೆಂದರೆ ಮುಕ್ತಾಯಕ್ಕನೇ, ತೀವ್ರ ಭಾವುಕ ಳೆಂದರೆ ಮಹದೇವಿಯಕ್ಕನೇ ಎಂಬ ಮನ್ನಣೆ ಇವರಿಬ್ಬರಿಗೆ ದೊರೆತಿದೆ"[೩೩] ಎಂ.ಆರ್.ಶ್ರೀ ಯವರು "ಅಕ್ಕಮಹಾದೇವಿ ಬಸವಣ್ಣನವರ ಅಚ್ಚು; ಮುಕ್ತಾಯಕ್ಕ ಚೆನ್ನಬಸವಣ್ಣ ನವರ ಅಚ್ಚು"[೩೪] ಎಂದು ಹೇಳುವುದು ಈ ಇಬ್ಬರ ನಡುವಿನ ಪ್ರತಿಭೆ, ತಾತ್ವಿಕ ನಿಲುವು, ಅಭಿವ್ಯಕ್ತಿಗಳ ಅಂತರಕ್ಕೆ ಸೂಚನೆ ನೀಡುತ್ತದೆ.

ವಚನಕಾರ್ತಿಯರು ಬಂದಿರಬಹುದಾದ ಸಾಮಾಜಿಕ ನೆಲೆಗಳು, ಅವರ ಭಾಷೆ, ಭಾವಾಭಿವ್ಯಕ್ತಿ, ಅವರು ಸೃಷ್ಟಿಸುವ ಪ್ರತಿಮೆಗಳು, ಅನುಭವ ಲೋಕಗಳನ್ನು ಪ್ರಭಾವಿಸಿರುತ್ತವೆ.

ಮೇಲೆ ಉಲ್ಲೇಖಿಸಿದ ವಚನಕಾರ್ತಿಯರಿಗಿಂತ ಅತ್ಯಂತ ಕೆಳಗಿನ ನೆಲೆಯಿಂದ ಬಂದಿರಬಹುದಾದ ವಚನಕಾರ್ತಿ ಉರಿಲಿಂಗ ಪೆದ್ದಯ್ಯಗಳ ಪುಣ್ಯ ಸ್ತ್ರೀ ಕಾಳವ್ವೆ ಆ ಯುಗದಲ್ಲಿ ಸಂಕೀರ್ಣವಾಗಿದ್ದ ಸ್ತ್ರೀಯರ ಸ್ಥಿತಿಯನ್ನೂ ಪ್ರತಿನಿಧಿಸುತ್ತಾಳೆ. ಈಕೆಯ ವಚನಗಳಲ್ಲಿ ವಿಪುಲವಾದ ಸಂಸ್ಕೃತ ಶ್ಲೋಕ ಅಥವಾ ಉಕ್ತಿಗಳ ಉಲ್ಲೇಖ ಕಾಣಿಸಿಕೊಳ್ಳುತ್ತದೆ. ಶಾಸ್ತ್ರ ಗ್ರಂಥದ ಇಂಥ ಉಕ್ತಿಗಳ ಆಧಾರ ನೀಡಿ, ಆಕೆ ಸದಾಚಾರದ ಮಹತ್ವವನ್ನೂ ವ್ರತಹೀನರ ಬಗ್ಗೆ ತಿರಸ್ಕಾರವನ್ನೂ ಸಾರುತ್ತಾಳೆ. ಜಾತಿಯ ನೆಲೆಯಲ್ಲಿ ಸಾಂಪ್ರದಾಯಿಕ ವೈದಿಕ ಧರ್ಮದ ಶ್ರೇಣೀಕರಣ ವ್ಯವಸ್ಥೆಯನ್ನು ದಿಟವಾಗಿ ಪ್ರಶ್ನಿಸುತ್ತಾಳೆ, ಸುಧಾರಿಸಿದ ತನ್ನ ನೈತಿಕ ನೆಲೆಯಿಂದ ಈ ಜಿಜ್ಞಾಸೆ ನಡೆಸುತ್ತಾಳೆ. ವ್ರತಹೀನರ ಬಗ್ಗೆ ಆಕೆ ತಳೆಯುವ ಕಠೋರ ನಿಲುವು ಗಮನಾರ್ಹ. ಬ್ರಾಹ್ಮಣವರ್ಗದಿಂದ ತುಚ್ಚೀಕರಿಸಲ್ಪಟ್ಟ ಜಾತಿಯ ಅವಮಾನ, ನೋವು ಆಕೆಯ ವಚನಗಳಲ್ಲಿ ಕ್ರೋಧವಾಗಿ, ಜಾತಿ ವಿಮರ್ಶೆಯಾಗಿ ಕಾಣಿಸಿಕೊಳ್ಳುತ್ತದೆ.

> **"ಕುರಿಕೋಳಿ ಕಿರಿಮೀನು ತಿಂಬವರಿಗೆಲ್ಲ ಕುಲಜ ಕುಲಜರೆಂದೆಂಬರು**
> **ಶಿವಗೆ ಪಂಚಾಮೃತವ ಕರೆವ ಪಶುವ ತಿಂಬ ಮಾದಿಗ ಕೀಳುಜಾತಿಯೆಂಬರು**
> **ಅವರೆಂತು ಕೀಳು ಜಾತಿಯಾದರು? ಜಾತಿಗಳು ನೀವೇಕೆ ಕೀಳಾರಿಗೋ?"**[೩೫]

ಎಂದು ಒಂದೆಡೆ ಪ್ರಶ್ನಿಸುವ ಕಾಳವ್ವೆ ಮತ್ತೊಂದೆಡೆ

> **"ವ್ರತವೆಂಬದು ನಾಯಕರತ್ನ; ವ್ರತವೆಂಬುದು ಸುಪ್ಪಾಣಿಯ ಮುತ್ತು**
> **ವ್ರತವೆಂಬುದು ಜೀವನ ಕಳೆ, ವ್ರತವೆಂಬುದು ಸುಯಿಧಾನ**
> **ವ್ರತತಪ್ಪಲು ಉರಿಲಿಂಗ ಪೆದ್ದಿಗಳರಸನೊಲ್ಲನವ್ವಾ"**[೩೬]

ಎಂದು ಸಾರುತ್ತಾಳೆ. ಕಾಳವ್ವೆಯ ಲಭ್ಯವಿರುವ ವಚನಗಳಲ್ಲಿ ಒಂದೆಡೆ ಜಾತಿ ಅಸಮಾನತೆಯ ಪ್ರಶ್ನೆ ಮತ್ತೊಂದೆಡೆ ವ್ರತಪಾಲನೆಯ ಪ್ರಶ್ನೆಗಳೇ ಚಿಂತನೆಯ ಮುಖ್ಯ ಮೀಟುಗಳಾಗಿವೆ. ಸ್ತ್ರೀಯರ ಸಂಬಂಧಿತವಾದ ಪ್ರಶ್ನೆ ಈ ವಚನಗಳಲ್ಲಿಲ್ಲವಾದರೂ, ಅಕ್ಕಮಹಾದೇವಿಗೂ ಕಾಳವೆಯಂಥವರಿಗೂ ಇರುವ ಚಿಂತನಾಕ್ರಮದ ವ್ಯತ್ಯಾಸಕ್ಕೂ ಅವರ ವಿಭಿನ್ನ ಸಾಂಸ್ಕೃತಿಕ ಹಿನ್ನೆಲೆಗಳಿಗೂ ಸಂಬಂಧವಿರುವುದನ್ನು ಗಮನಿಸಬಹುದು. ಕೌಟುಂಬಿಕ ನೆಲೆಯ ಧಿಕ್ಕಾರದ ಮೂಲಕ ಹೊಮ್ಮಿರುವ ಅಕ್ಕನ ಚಿಂತನೆಯಲ್ಲಿ ಹೊಸ ಸಾಧ್ಯತೆಯೆಂಬುದು ಉದಾತ್ತ ಪ್ರೇಮ– ಆಧ್ಯಾತ್ಮದ ನೆಲೆಯಿಂದ ಸೂಚಿತವಾಗುತ್ತದೆ. ಆದರೆ ವೀರಶೈವ ಧರ್ಮದಲ್ಲಿ ಮತಾಂತರದ ಮೂಲಕ ಸಂಸ್ಕೃತೀಕರಣಕ್ಕೆ ಒಳಗಾದ ವಚನಕಾರ್ತಿಯರ ಹೊಸ ಬದುಕಿನ ಪರಿಕಲ್ಪನೆ, ಆಶಯಗಳು, ಕೆಳಸಂಸ್ಕೃತಿಯ ಅಂಶಗಳನ್ನೂ, ವೈದಿಕ ಧರ್ಮದ ವಿರೋಧವನ್ನೂ ಒಳಗೊಂಡ ಸಂಕೀರ್ಣ ನೆಲೆಯೊಂದನ್ನು ಸೂಚಿಸುತ್ತದೆ. ಇಂಥ ಸ್ಥಿತಿಯಲ್ಲಿ ಹೊಸದಾಗಿ ಮತಾಂತರಗೊಳ್ಳುವವರು ತೋರುವ ಧಾರ್ಮಿಕವಾದ ಅತ್ಯುತ್ಸಾಹ, ಅತಿನಿಷ್ಠೆಗಳಿಂದ ಅವರು (ಮತಾಂತರವಾಗದ ಅಥವಾ ಹೊಸ ಮತದಲ್ಲಿ ಸರಿಯಾಗಿ ನೆಲೆಗೊಳ್ಳದ) ವ್ರತಹೀನರನ್ನು ಇತರರಿಗಿಂತ ಹೆಚ್ಚು ಆಕ್ರೋಶದಿಂದ ತಿರಸ್ಕರಿಸುವುದೂ, ಅವರಿಗೆ ಅವಶ್ಯಕತೆಯಾಗಿರ ಬಹುದು. ಆದರೆ ಸಂಸ್ಕೃತಿ ಚಿಂತನೆಗೆ ಒದಗುವಷ್ಟು ಇವರ ವಚನಗಳು ಬೇರೆ ಬಗೆಯ ಚಿಂತನೆಗೆ ಒದಗಿಲ್ಲ.

ಹನ್ನೆರಡನೆಯ ಶತಮಾನದ ಶಿವಶರಣ ಆಂದೋಲನ, ಅಂದಿನ ಚಿಂತನೆ, ಆ ಅವಧಿಯ ಸ್ತ್ರೀಯ ಸಾಧನೆಗಳ ದೃಷ್ಟಿಯಿಂದ ಅಕ್ಕಮಹಾದೇವಿಯದು ಅನನ್ಯ ರೀತಿಯ ಅಪೂರ್ವ ಚರಿತ್ರೆಯಾಗಿದೆ. ಆಕೆಯ ವಚನಗಳ ಉತ್ಕೃಷ್ಟವಾದ ಕಾವ್ಯಾಂಶದಿಂದ ಕನ್ನಡದ ಮೊಟ್ಟ

ಮೊದಲ ಹಾಗೂ ಶ್ರೇಷ್ಠ ಕವಯತ್ರಿ ಎನಿಸಿದ್ದಾಳೆ ಆಕೆ. ಆಕೆ ತಾನು ಶರಣಸತಿ ಎಂಬ ತತ್ವವನ್ನು ಆತ್ಯಂತಿಕವಾಗಿ ಬದುಕಿಡೀ ಎತ್ತಿ ಹಿಡಿದು, ಅದರ ಸಾಧನೆಗಾಗಿ ಬದುಕಿಡೀ ಮೀಸಲಿಟ್ಟಿಳಲ್ಲದೆ, ಅಂಥ ತನ್ನ ಆಧ್ಯಾತ್ಮಿಕ, ತಾತ್ವಿಕ ನೆಲೆಯಿಂದ ಬದುಕಲ್ಲಿ ಎದುರಿಸಿದ ಅನುಭವಗಳನ್ನು ಅತ್ಯಂತ ಕಲಾತ್ಮಕವಾಗಿ ಭಾಷೆಯಲ್ಲಿ ಹಿಡಿದು ಕೊಟ್ಟಿದ್ದಾಳೆ, ಹೀಗಿದ್ದೂ ಶಿವಶರಣ ಚಳವಳಿಯಲ್ಲೇ ಸೇರಿಹೋದ ಅಥವಾ ಅದರ ಅವಿಭಾಜ್ಯವಾದ ಅಂಗವೆಂಬಂತೆ ಆಕೆಯನ್ನು ನೋಡುವುದು ಪೂರ್ತಿ ಸರಿಯಲ್ಲ.

ಕಲ್ಯಾಣಕೇಂದ್ರಿತವಾದ ವಚನಕಾರ ಚಳವಳಿ ಹುಟ್ಟಿ, ಬೆಳೆದು, ತನ್ನದೇ ಆದ ಸಿದ್ಧರೂಪದ ತಾತ್ವಿಕ ನಿಲುವುಗಳನ್ನು, ಜೀವನ ನೀತಿಯ ಚೌಕಟ್ಟುಗಳನ್ನು ರೂಪಿಸಿಕೊಂಡ ಎಷ್ಟೋ ಕಾಲದ ನಂತರ ಅಕ್ಕಮಹಾದೇವಿ ಕಲ್ಯಾಣದ ಈ ಕೀರ್ತಿಯಿಂದ ಆಕರ್ಷಿತಳಾಗಿ ಅಲ್ಲಿಗೆ ಬಂದಳು. ಅಲ್ಲಿಗೆ ಬರುವುದಕ್ಕೂ ಮೊದಲಿನಿಂದಲೂ ತನ್ನದೇ ಆದ ಭಕ್ತಿ ಸಾಧನಾವಿಧಿಗಳು, ಯೋಗಶಾಸ್ತ್ರದ ಪರಿಚಯ, ಹಾಗೂ ತಾತ್ವಿಕ ನಿಲುವುಗಳನ್ನು ಆಕೆ ಬೆಳೆಸಿಕೊಂಡಿದ್ದಳು. ಲೋಕವನ್ನು ಕುರಿತು ಆಕೆಯು ತಳೆದಿದ್ದ ದೃಷ್ಟಿಕೋನ ಕೂಡ ತನ್ನದೇ ಆದ ರೀತಿ ವಿಕಸಿತಗೊಂಡಂಥದು. ಕಲ್ಯಾಣದಲ್ಲಿ ಬಂದು ನೆಲೆಸಿದ ಅವಧಿಯಲ್ಲಿ ಶಿವಶರಣರ ಮಹೋನ್ನತ ವ್ಯಕ್ತಿತ್ವಗಳು, ವಿಚಾರಗಳು, ಸಾಧನೆಗಳೂ ಅವರ ತಾತ್ವಿಕ ನಂಬಿಕೆಗಳೂ ಆಕೆಯ ಮೇಲೆ ಪ್ರಭಾವ ಬೀರಿದ್ದುದು ನಿಜವಾದರೂ ಆ ಚಳವಳಿಯಲ್ಲಿ ಆಕೆ ವಹಿಸಿದ ಪಾತ್ರವೇನು? ಎಂಬುದನ್ನು ನೋಡುವಾಗ "ಆಕೆಗೂ ಆ ಚಳವಳಿಗೂ ಇದ್ದ ಸಂಬಂಧ ಕೇವಲ ಅಗಂತುಕವೂ ತಾತ್ಕಾಲಿಕವೂ ಆದದ್ದೆಂಬುದು ಮಾತ್ರ ನಿಜ"[೩೭]. ಅಕ್ಕನ ವ್ಯಕ್ತಿತ್ವ ಹಾಗೂ ಅನುಭಾವಿಕ ನಿಲುವುಗಳು ಶರಣ ಸಮುದಾಯವನ್ನು ಬೆರಗುಗೊಳಿಸಿತು, ಆಕೆಯ ವೈರಾಗ್ಯ ವೈಚಾರಿಕ ಪಕ್ವತೆಗಳಿಂದ ಶಿವಶರಣರು "ಅಕ್ಕ"ನೆಂದೂ ಅವಳನ್ನು ಕರೆದು ಗೌರವಿಸಿದರು. ಆದರೆ ಕಲ್ಯಾಣದ ಶಿವಶರಣ ಚಳವಳಿಯಿಂದಲೇ ಅದರ ಮೂಲವಾಗಿಯೇ ವಿಕಾಸಗೊಂಡ ಅನೇಕ ಶಿವಶರಣ-ಶರಣೆಯರ ವ್ಯಕ್ತಿತ್ವ, ಆಲೋಚನಾ ವಿಧಾನ ಮತ್ತು ಅಭಿವ್ಯಕ್ತಿ ಕ್ರಮಗಳಿಗಿಂತ ಮಹಾದೇವಿಯಕ್ಕ ಭಿನ್ನವಾಗಿರುವುದು ಸಹಜ. ಮಾಯೆಯನ್ನು ಕುರಿತಂತೆ, ಶಿವನನ್ನು ಪತಿಯಾಗಿ ಭಾವಿಸಿಕೊಳ್ಳುವುದರಲ್ಲಿ, ಕೌಟುಂಬಿಕ ಸಂಬಂಧಗಳನ್ನು ಕುರಿತಂತೆ ಹಾಗೂ ವಿವಾಹ ಸಂಸ್ಥೆಯನ್ನು ಕುರಿತಂತೆ ಅಕ್ಕನ ತಾತ್ವಿಕ ನಂಬಿಕೆಗಳು ಶಿವಶರಣ-ಶರೆಯರದಕ್ಕಿಂತ ಭಿನ್ನವಾಗಿದೆ ಎಂಬುದನ್ನು ಈ ಹಿಂದೆ ಪರಿಶೀಲಿಸಿದ್ದೇವೆ.

ಆದರೆ ಶಿವಶರಣ ಚಳವಳಿ ಬಹು ಉಚ್ಛ್ರಾಯದ ಹಂತದಲ್ಲಿದ್ದಾಗ ಅಕ್ಕನೂ ಅದರೊಂದಿಗೆ ಸಂಪರ್ಕ ಹೊಂದಿದ್ದುದರಿಂದ, ಆಕೆಯ ವೈಯಕ್ತಿಕ ಹೋರಾಟದ ಎಷ್ಟೋ ಅಂಶಗಳು ಆ ಯುಗದ ಬಂಡಾಯದ, ಸಾಧನೆಯ ಚರಿತ್ರೆಗೆ ಕಾಣಿಕೆಯಾದವು ಎಂಬುದೂ ಮುಖ್ಯವಾದ ಸಂಗತಿಯಾಗಿದೆ. ವೈಯಕ್ತಿಕ ನೆಲೆಯಲ್ಲಿ ಕುಟುಂಬ ವ್ಯವಸ್ಥೆ, ಸಂಸಾರದ ವಿರುದ್ಧವಾಗಿ ಬಂಡೆದ್ದು, ಆಧ್ಯಾತ್ಮಿಕ ನೆಲೆಯಲ್ಲಿ ಪರ್ಯಾಯ ವ್ಯವಸ್ಥೆಗಾಗಿ ಅಕ್ಕ ನಡೆಸಿದ ಹೋರಾಟ ಸಾಂಕೇತಿಕ ನೆಲೆಯದೇ ಆದರೂ ಒಂದು ಸಂಸ್ಕೃತಿಯ ಸಮೂಹ ಪ್ರಜ್ಞೆಯನ್ನು ತಿದ್ದಿ ರೂಪಿಸುವಲ್ಲಿ ಇಂಥ ಸಂಕೇತಗಳಿಗೂ ಕಾಲಾತೀತ ಶಕ್ತಿಯಿರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಆಕೆಯ ಪ್ರಯತ್ನದ ತತ್ಕಾಲೀನ ಪ್ರಭಾವ ಆಕೆಯು ಬದುಕಿದ್ದ ಸಂದರ್ಭದಲ್ಲಿ ಕಂಡುಬರುವುದಿಲ್ಲ. ಮಹಿಳೆಯರಲ್ಲ ಆಕೆಯ ಹಿಂಬಾಲಕರಾಗಲೂ ಇಲ್ಲ.

ಆದರೆ ಆಧುನಿಕ ಯುಗದಲ್ಲಿ ಕನ್ನಡದ ಕವಯತ್ರಿಯರು ಆಕೆಯ ಜೀವನ ಸತ್ವವನ್ನು, ಬದುಕಿನ ಸಂಕಷ್ಟವನ್ನು ಎದುರಿಸುವಲ್ಲಿ ದಿಟ್ಟತನದ ಮಾದರಿಯೊಂದನ್ನು ಆಕೆಯಲ್ಲಿ ಗುರುತಿಸಿ ಕೊಳ್ಳುತ್ತಾರೆ. ಧಾರ್ಮಿಕವಾಗಿ ಕೂಡ ವೀರಶೈವ ಪರಂಪರೆ ಮೊದಲು ಸ್ಮರಿಸಬೇಕಾದಂಥ ಶಿವಶರಣರ ಸಾಲಿನಲ್ಲಿ ಈಕೆಗೆ ಮಾನ್ಯತೆ ನೀಡಿದ್ದು, ಆಕೆಯ ರಚನೆಗಳನ್ನು ಪೂರ್ಣವಾಗಿ ನಾಶವಾಗಗೊಡದಂತೆ ಶ್ರದ್ಧೆ, ಗೌರವಗಳಿಂದ ರಕ್ಷಿಸಿಕೊಂಡು ಬಂದಿದೆ. ಹೀಗಾಗಿ ಕಾಲದಿಂದ ಕಾಲಕ್ಕೆ ಬೇರೆ ಬೇರೆ ಕಾರಣಗಳಿಗಾಗಿ ಶ್ರದ್ಧಾಳುಗಳಿಗೆ ಮುಖ್ಯವಾಗಿ ತೋರುತ್ತ ಬಂದ ಅಕ್ಕಮಹಾದೇವಿಯ ಬದುಕು ಬರಹಗಳಿಗೆ ಸಮಕಾಲೀನ ಸಾಂಸ್ಕೃತಿಕ ಚಿಂತನೆಯೊಳಗೂ ಮಹತ್ವದ ಸ್ಥಾನ ದೊರೆಯುವುದು ಸಾಧ್ಯವಾಗಿದೆ.

*   *   *

ಜಾಗತಿಕವಾಗಿ ಹಾಗೂ ನಮ್ಮದೇಶದಲ್ಲಿ ಆಗಿಹೋದ ಅನೇಕ ಸಂತ ಮಹಿಳೆಯರ ನಡುವೆ ಅಕ್ಕಮಹಾದೇವಿಯನ್ನು ಚರಿತ್ರೆಯಲ್ಲಿ ಗುರುತಿಸಲಾಗಿದೆ.[೩೮] ರಾಬಿಯಾ, ಸಂತ ಥೆರೇಸಾ, ಕಾರಿಕಾಲಮ್ಮೆ, ಆಂಡಾಳ್, ಮೀರಾಬಾಯಿ, ಲಲ್ಲೇಶ್ವರಿ, ಜನಾಬಾಯಿ ಮುಂತಾದ ಭಕ್ತೆಯರ ಜೀವನ, ಸಾಧನೆಗಳಿಗೂ ಅಕ್ಕಮಹಾದೇವಿಯದಕ್ಕೂ ಹಲವು ಹೋಲಿಕೆಗಳಿವೆ. ಭಗವಂತನನ್ನೇ ಪತಿಯೆಂದು ಭಾವಿಸಿಕೊಂಡು ಮಧುರ ಭಕ್ತಿ ತೋರಿದ ಅಂಡಾಳ್, ರಾಜ ಕುಟುಂಬದಿಂದ ಬಂದು, ಅರಸನ ಕೈ ಹಿಡಿದು, ವೈಧವ್ಯದ ನಂತರ ಗಿರಿಧರ ಗೋಪಾಲನನ್ನು ಅರಸಿ, ಭಕ್ತಿ–ಪ್ರೇಮದ ಮಧುರಗೀತೆಗಳನ್ನು ರಚಿಸಿದ ಮೀರಾಬಾಯಿಯರು ಅಕ್ಕನಂತೆ ತೋರಬಹುದು. ವೈವಾಹಿಕ ಬದುಕಿನಲ್ಲಿ ನಿತ್ಯ ಹಿಂಸೆ, ದೌರ್ಜನ್ಯಗಳನ್ನು ಎದುರಿಸಿಯೂ ತನ್ನ ಭಕ್ತಿ ಸಾಧನೆಯನ್ನು ಮಾಡಿದ ಲಲ್ಲೇಶ್ವರಿಯಿರಲಿ ಅಥವಾ ಅರಸನನ್ನು ನಿರಾಕರಿಸಿದ ರಾಬಿಯಾ ಆಗಲಿ, ಇನ್ನಿತರರಾಗಲಿ ಬಿಡಿಬಿಡಿಯಾಗಿ ತಮ್ಮ ವ್ಯಕ್ತಿಗತ ನೆಲೆಗಳಲ್ಲಿ ತಾವು ನಂಬಿದ ತತ್ವಕ್ಕಾಗಿ ವಿರುದ್ಧ ಪರಿಸ್ಥಿತಿಗಳನ್ನು ಎದುರಿಸಿದರು. ಆದರೆ ಅಕ್ಕಮಹಾದೇವಿಯ ಸಂದರ್ಭದಲ್ಲಿ ವೈಯಕ್ತಿಕವಾಗಿ ಆಕೆ ಆರಂಭಿಸಿದ ಆಧ್ಯಾತ್ಮಿಕ ಗುರಿಯುಳ್ಳ ಹೋರಾಟಕ್ಕೆ ವೀರಶೈವ ಶಿವಶರಣರ ಸಮಗ್ರ ಬೆಂಬಲ ದೊರೆತದ್ದರಿಂದ ಆಕೆಯ ಪ್ರಯತ್ನಕ್ಕೆ ಒಂದು ಅನನ್ಯತೆ ಪ್ರಾಪ್ತವಾಗಿದೆ.

ವ್ಯಕ್ತಿತ್ವದ ಪರಮ ಸ್ವಂತಿಕೆಯಲ್ಲಿ, ಪ್ರಚಲಿತ ವ್ಯವಸ್ಥೆಯ ರೂಢಮೂಲ ನಂಬಿಕೆಗಳನ್ನು ಪ್ರಶ್ನಿಸಿರುವಲ್ಲಿ, ಪ್ರಬಲ ವಿರೋಧದ ಎದುರಲ್ಲಿ ಗಟ್ಟಿಯಾಗಿ ನಿಂತು ತನ್ನನ್ನು ಸಮರ್ಥಿಸಿ ಕೊಂಡಿರುವ ರೀತಿಯಲ್ಲಿ, ತನ್ನ ಅನುಭವ, ಅನುಭಾವದ ಅಭಿವ್ಯಕ್ತಿಯಲ್ಲಿ ಕೂಡ ಮಹಾದೇವಿ ಯಕ್ಕನದು ಅನನ್ಯ ನಿಲುವು. ಹುಟ್ಟಿದ ಮನೆಯಿಂದ ಆಕೆಯ ಶಿವಯೋಗ ಸಾಧನೆಗೆ ವಿರೋಧವೇನೂ ಕಂಡುಬರುವುದಿಲ್ಲ. ಅಡ್ಡಿತಂದಂಥ ಪತಿಯನ್ನು ಆಕೆಯೇ ತೊರೆದಳು. ಕಲ್ಯಾಣದಲ್ಲಿ ಸಮಾನ ಮನೋಧರ್ಮದ ಶಿವಶರಣರ ಸಹವಾಸದಲ್ಲಿ ಉನ್ನತ ಸಾಧನೆಗೆ ತುಂಬ ಬೆಂಬಲವೇ ದೊರೆಯಿತು. ಈ ಸ್ಥಿತಿ, ಅನುಕೂಲಗಳು ಮೀರಾಬಾಯಿ ಗಾಗಲಿ, ಲಲ್ಲೇಶ್ವರಿಗಾಗಲಿ ದೊರೆತಂಥದಲ್ಲ. ಆಂಡಾಳ್ ಅನುಭವಿಸಿದ ಅಭಿವ್ಯಕ್ತಿಗೊಳಿಸಿದ ಮಧುರಭಕ್ತಿಯ ಬದುಕಿನಲ್ಲಿ ಸವಾಲುಗಳು ಇಲ್ಲ. ಹಲವು ವಿದ್ವಾಂಸರು ಕಾಲಕಾಲಕ್ಕೆ ಮಹಾದೇವಿಯಕ್ಕನ ಬದುಕು ವ್ಯಕ್ತಿತ್ವಗಳನ್ನು ಕುರಿತಂತೆ ಮಾಡಿರುವ ಪ್ರಶಂಸೆಗಳು ಹೆಣ್ಣಾಗಿ ಆಕೆಯ ಸಾಧನೆಯನ್ನೇ ಸೂಚಿಸುತ್ತವೆ:

"ಮಹಾದೇವಿಯಕ್ಕನ ಜೀವನ ಚರಿತ್ರೆ ಹೆಣ್ಣಿನ ಗೌರವ ಸಾಧನೆಯ, ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ, ಹೆಣ್ಣಿನ ಪರಮಾರ್ಥ ಸಾಧನೆಯ ಒಂದು ಮಹಾಪ್ರಕರಣ."[೩೯]

"ಎಳೆಯಂದಿನಲ್ಲಿ ತಂದೆ ತಾಯಂದಿರ, ಯೌವನದಲ್ಲಿ ಕೈಹಿಡಿದ ಗಂಡನ, ಮುಪ್ಪಿನಲ್ಲಿ ಮಕ್ಕಳ ರಕ್ಷಣೆಯಲ್ಲಿ ಇರಬೇಕಾದ ಹೆಣ್ಣು ಸ್ವಾತಂತ್ರ್ಯಕ್ಕೆ ಅರ್ಹಳಲ್ಲ' ಎಂಬ ಮನುಧರ್ಮ ಸೂತ್ರವು ನಿಯಂತ್ರಿಸಿದ ಸಾಂಸಾರಿಕ ಚೌಕಟ್ಟನ್ನು ದಾಟಿ ಹೆಣ್ಣಿಗೆ ಇದರಿಂದಾಚೆಯ ಬೇರೊಂದು ಅಸ್ತಿತ್ವವೂ ವ್ಯಕ್ತಿತ್ವವೂ ಉಂಟು ಎಂಬುದನ್ನು ತನ್ನ ವೈಚಾರಿಕತೆ ಹಾಗೂ ದಿಟ್ಟತನದ ನಡವಳಿಕೆಯ ಮೂಲಕ ಸಾಧಿಸಿತೋರಿಸಿದ ಅಕ್ಕಮಹಾದೇವಿ ಹನ್ನೆರಡನೆಯ ಶತಮಾನದ ಶರಣ ಚಳವಳಿಯ ನಡುವೆ ಒಂದು ವಿಶಿಷ್ಟವೂ, ಭಿನ್ನವೂ ಆದ ನಿಲುವಿನಿಂದ ಹೆಣ್ತನದ ಘನತೆ ಗೌರವಗಳ ಪ್ರತೀಕವಾಗಿದ್ದಾಳೆ."[೪೦]

"ಲೋಕದ ಹೆಣ್ಣಿನ ಜಾತಿಯಲ್ಲಿ ಈ 'ಇತಿ ಹ ಅಸ' ಇದ್ದಂತೆ ತೋರುವುದಿಲ್ಲ. ಯಾವ ಎದೆ? ಎಂಥ ಕೆಚ್ಚು? ಅಥವಾ ಎಂಥ ಹೆಣ್ಣು? ಎಷ್ಟು ಗಂಡು? ಈ ಹೆಣ್ಣಿನ ಹೃದಯದಲ್ಲಿ ಯಾವ ಗಂಡಸಿನಲ್ಲಿಯೂ ಕಾಣದ ಈ ಗಂಡಿಕೆ ಮೊಳೆತಿರುವುದೆಲ್ಲಿಂದ? ಮುಗುಳೊತ್ತಿ ಪಲ್ಲವಿಸುತ್ತಿರುವುದು ಯಾವ ನೆಲ ಎಂಥ ನೀರು ಎಲ್ಲಿಯ ಗೊಬ್ಬರದಿಂದ? ಅಕ್ಕನ ಈ ದಿವ್ಯ ಸಾಹಸದ ಸಕೀಲ ಸಂಬಂಧ ಎಲ್ಲಿದೆ? 'ಅಂಗಸಂಗಮಂ ತೊರೆದು ಲಿಂಗಸಂಗದೊಳು ಅವಿರಳ ಸಂಗಿಯಾಗಿ' ಇದ್ದ ಇರವಿನಲ್ಲಿ ಅಕ್ಕಗಳ ಅಲೌಕಿಕ ವೀರ್ಯ, ಧೈರ್ಯ, ನಿರ್ಭಯ ಸಾಹಸದ ಮಂತ್ರ ರಹಸ್ಯವಿದೆ"[೪೧]

"ಮಹಾದೇವಿಯಕ್ಕನು ಆ ಕಾಲದ ಸ್ತ್ರೀಯ ಸ್ಥೈರ್ಯದ ಸಂಕೇತವಾಗಿದ್ದಾಳೆ, ಸ್ತ್ರೀ ಗಳಿಸಿದ ಸಾಧನೆಯ ಪ್ರತೀಕವಾಗಿದ್ದಾಳೆ, ಸ್ತ್ರೀ ಸಂಕಲ್ಪ ಶಕ್ತಿಯ ಸಾಕಾರಳಾಗಿದ್ದಾಳೆ. ಸಾಮಾಜಿಕ ಸ್ತರದಲ್ಲಿಯೂ ಅವಳು ಎದುರು ಹಾಕಿಕೊಂಡದ್ದು ಬಲಿಷ್ಠ ವ್ಯಕ್ತಿಯನ್ನು. ಅಧಿಕಾರ ಶಾಹಿಯನ್ನೇ ಎದುರಿಸಿದ ಆಕೆಯ ಕೆಚ್ಚು ಒಂದು ಬಗೆಯಲ್ಲಿ ಎಲ್ಲ ಶರಣರ ನೈತಿಕ ಸ್ಥೈರ್ಯವನ್ನು ಪ್ರತೀಕಿಸುತ್ತದೆ"[೪೨]

"ಮಹಾದೇವಿ ಸ್ತ್ರೀಯಾಗಿ ಸ್ತ್ರೀತ್ವವನ್ನು ಮೀರಿ ನಿಂತಿದ್ದುದು ಒಂದು ವಿಶೇಷ"[೪೩] ಈ ಧೋರಣೆ ಈಚೆಗೆ ಹೆಚ್ಚು ಜನಪ್ರಿಯವಾಗಿದೆ. ಆದರೆ ವಚನಕಾರರ ಆಧ್ಯಾತ್ಮಿಕ ಚಳವಳಿಯ ಒಂದು ತಾತ್ವಿಕನೆಲೆಯಲ್ಲಿ ತನ್ನ ಆಕೆ ಮೀರಿದ್ದು ನಿಜ. ಆದರೆ ಮಹಾದೇವಿಯಕ್ಕ ಸಂಪ್ರದಾಯಸ್ಥ ಸಾಮಾಜಿಕ ರೀತಿನೀತಿಗಳಿಗೆ, ರೂಢಿಗತವಾದ ಚಿಂತನೆಗೆ ಸ್ವತಃ ಒಂದು ಸವಾಲಾದವಳು, ಆ ದಿಕ್ಕುಗಳಿಂದ ತೀವ್ರ ವಿರೋಧ, ನಿಂದೆ, ಕಷ್ಟಗಳನ್ನು ಹೆಣ್ಣಾಗಿಯೇ ಎದುರಿಸಿದವಳು. ಅವಳ ನುಡಿಗಳಲ್ಲಿ ನೋವು, ದ್ವಂದ್ವ, ತಾಕಲಾಟಗಳಿದ್ದರೂ ಅವು ಮಾನವೀಯ ಸಹಜ ಪ್ರತಿಕ್ರಿಯೆಗಳಷ್ಟೇ. ಅಂತಿಮವಾಗಿ ಮನದ ಮುಂದೆ ನಿಲ್ಲುವ ಚಿತ್ರ ನಮ್ರತೆಯತ್ತ ಹಂತಹಂತವಾಗಿ ಸಾಗಿ ಅದನ್ನು ಸಾಧಿಸಿದ ವೀರ ವಿರಾಗಿಣಿಯದೇ ಆಗಿದೆ.

ಸಮಕಾಲೀನ ಸಂದರ್ಭದಲ್ಲಿ ಆಕೆ ಮುಖ್ಯಳಾಗುವುದು ಪರಂಪರೆಯ ಒಳಸುಳಿಗಳ ನಡುವೆಯೂ ಕಾಲಾತೀತವಾಗಿ ಉಳಿದುಬಂದಿರುವ ಆಕೆಯ ವ್ಯಕ್ತಿತ್ವದ ಸತ್ವಪೂರ್ಣ ಅಂಶಗಳಿಗಾಗಿ. ಬದುಕಿನ ಎದುರಲ್ಲಿ ಆಕೆ ತನ್ನನ್ನು ಒಡ್ಡಿಕೊಂಡ ರೀತಿಯಲ್ಲಿ, ತನ್ನತನವನ್ನು ಗುರುತಿಸಿ, ಸಾಧಿಸಿರುವ ಅಂಶದಲ್ಲಿ ಮತ್ತು ಉತ್ಕೃಷ್ಟವಾದ ಸಾಹಿತ್ಯಗುಣಗಳೊಂದಿಗೆ ತನ್ನ ಅನುಭವವನ್ನು ಅಭಿವ್ಯಕ್ತಿಗೊಳಿಸಿರುವ ಬಗೆಯಲ್ಲಿ ಆಕೆಯ ಅನನ್ಯತೆ ಅಪರೂಪದ್ದು.

ಹರಿಹರನಿಂದ ಇವತ್ತಿನವರೆಗೆ ಮಹಾದೇವಿಯಕ್ಕನ ಬದುಕು ನೂರಾರು ಜನ ಕವಿ, ವಿಮರ್ಶಕ, ತತ್ವಜಿಜ್ಞಾಸು, ಸಾಹಿತಿ ಚಿಂತಕ, ಸಂಶೋಧಕರನ್ನು ವಿಚಾರಕ್ಕೆ ಪ್ರೇರೇಪಿಸುತ್ತ ಬಂದಿರುವುದು ಆಕೆಯ ವ್ಯಕ್ತಿತ್ವದ ಘನತೆಗೆ ಹಿಡಿದ ಕನ್ನಡಿ ಎನ್ನಬಹುದು.

ವಚನಯುಗದ ಆಧ್ಯಾತ್ಮಿಕ ಚಳವಳಿಯಲ್ಲಿ ಸ್ತ್ರೀಯರ ಸಾಧನೆಗಳನ್ನು ಚರ್ಚಿಸು ವಾಗಲೆಲ್ಲ ತಾನು ಹೆಣ್ಣೆಂಬ ಪ್ರಜ್ಞೆಯನ್ನು ಮೀರಿ, ತಾನೊಂದು ಚೈತನ್ಯವೆಂಬ ಅರಿವನ್ನು ಬೆಳೆಸಿಕೊಂಡ ಅಕ್ಕಮಹಾದೇವಿಯ ಮಾದರಿಯನ್ನು ಅಂದಿನ ಸ್ತ್ರೀಯರ ಸಾಧನೆಯ ಮುಖ್ಯ ಲಕ್ಷಣವೆಂದು ಹೇಳಲಾಗುತ್ತದೆ. "ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ" ಎಂದ ಅಕ್ಕನದು ದೈಹಿಕ ಭಿನ್ನತೆಯನ್ನು ಮೀರಿದ ಸಾಧಕ ಸ್ಥಿತಿಯ ನಿಲುವು. ಈ ಅರಿವಿನಿಂದ ಇಹಪರ ನಾಸ್ತಿಯಾದ ಸಾಧನೆ ಸಾಧ್ಯವಾಯಿತೆಂದು ಆಕೆ ಹೇಳುತ್ತಾಳೆ. ಅಕ್ಕನಂತೆ ಇತರ ಅನೇಕ ವಚನಕಾರ್ತಿಯರೂ ತಮ್ಮನ್ನು ಲಿಂಗಾತೀತ ನೆಲೆಯಲ್ಲಿ ಚೈತನ್ಯವಾಗಿ ಗುರುತಿಸಿಕೊಂಡು, ತಮ್ಮ ಲೌಕಿಕ ಬಂಧನದಿಂದ ಪಾರಾಗಲು ಯತ್ನಿಸುತ್ತಾರೆ. ಇದು ಭಾವನಾವಾದದ ಒಂದು ಆತ್ಯಂತಿಕ ನೆಲೆ. ವ್ಯಕ್ತಿಯಾಗಿ ತನ್ನನ್ನು ತಾನು ಮೀರುವ ಹಾದಿಯಲ್ಲಿ ಮುಖ್ಯವಾಗಬಹುದಾದದ್ದು. ಆದರೆ ಲೌಕಿಕದಲ್ಲಿ ಬದುಕುತ್ತಲೇ ಬದುಕಿನ ಸುಂದರ ಅನುಭವಗಳತ್ತ ಕೈಚಾಚುತ್ತ, ಇಲ್ಲಿ ಹಾಸು ಹೊಕ್ಕಾಗಿರುವ ಅಸಮಾನತೆಯ ಕುರೂಪಿ ಅಂಶಗಳಿಗೆ ಮೂಲ ವಾದ ಪರಿಸ್ಥಿತಿಗಳನ್ನು ಬದಲಾಯಿಸಬಯಸುವ ಮತ್ತು ಇಹದೊಳಗೇ ಪ್ರೀತಿ, ವಿಶ್ವಾಸ, ಅಂತಃಕರಣ ತುಂಬಿದ ಪರ್ಯಾಯ ವ್ಯವಸ್ಥೆಯನ್ನು ಕಟ್ಟಲು ಬಯಸುವ ಆಧುನಿಕ ಸ್ತ್ರೀ ಸಂವೇದನೆಗೆ ಅಕ್ಕಮಹಾದೇವಿಯ ಮಾದರಿ ಯಾವ ರೀತಿ ಅರ್ಥಪೂರ್ಣ ವಾದೀತು ಎಂಬುದನ್ನು ಗಮನಿಸಬೇಕು. ಆಕೆಯ ವೈರಾಗ್ಯದಲ್ಲಿ ತಮ್ಮ ಮಾದರಿ ಕಾಣುವವರು ಬೇಕಾದರೆ ಆ ದಿಕ್ಕನ್ನು ಅರಸಲಿ. ಆದರೆ ಬದುಕಿನ ಎಲ್ಲ ಮಾನವೀಯ ಸಂಬಂಧಗಳ ಅರ್ಥಪೂರ್ಣತೆಗಾಗಿ ಬಯಸುವವರಿಗೆ ಅಕ್ಕನ ದಿಟ್ಟತನ, ಅನುಭವಕ್ಕೆ ಆಕೆ ತನ್ನನ್ನು ಒಡ್ಡಿಕೊಂಡ ಧೀರತೆ, ಅಭಿವ್ಯಕ್ತಿಯಲ್ಲಿನ ಪ್ರಾಮಾಣಿಕತೆಗಳೂ, ಆಕೆಯ ಆತ್ಮ ಶೋಧನಾಗುಣವೂ ನಿಜವಾಗಿ ಮಾದರಿಯಾಗಬಲ್ಲವು.

ಗ್ರಂಥಾವಳಿ

೧. ಡಾ. ವಿ. ಕಮಲಮ್ಮ: ಅಕ್ಕಮಹಾದೇವಿ ಜೀವನ ಮತ್ತು ಕೃತಿಗಳು, ೧೯೯೪, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೨. ಡಾ. ಎಂ.ಜಿ. ಕೃಷ್ಣಮೂರ್ತಿ : ಕೃತಿ–ಸಂಸ್ಕೃತಿ (ಎಂಜಿಕೆಯವರ ಸಮಗ್ರ ಲೇಖನಗಳು) ಋಜುವಾತು ಪ್ರಕಾಶನ, ೧೯೯೪, ಮೈಸೂರು.

೩. ಡಾ. ಎಂ.ಎಂ. ಕಲಬುರ್ಗಿ: (ಸಂ) ಬಸವ ಮಾರ್ಗ: ಸಂಪುಟ ೨, ೧೯೮೧, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೪. ಡಾ. ಗುರುಲಿಂಗ ಕಾಪಸೆ: ಅಕ್ಕಮಹಾದೇವಿ, ೧೯೮೭, ಸಾಹಿತ್ಯ ಅಕಾಡೆಮಿ, ನವದೆಹಲಿ

೫. ಡಾ. ಎಂ. ಚಿದಾನಂದ ಮೂರ್ತಿ: (೧) ವಚನ ಸಾಹಿತ್ಯ, ೧೯೭೫, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. (೨) ಮಧ್ಯಕಾಲೀನ ಕನ್ನಡ ಸಾಹಿತ್ಯ ಮತ್ತು ಅಸ್ಪೃಶ್ಯತೆ: ೧೯೮೫, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

೬. ಡಾ. ಎಚ್. ತಿಪ್ಪೇರುದ್ರಸ್ವಾಮಿ: (೧) ವಚನಸಾಹಿತ್ಯ: ವೈಚಾರಿಕ ಅಧ್ಯಯನ, ೧೯೭೭, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ. (೨) ಶೂನ್ಯ ಸಂಪಾದನೆ ವಿವರಣಾತ್ಮಕ ಪರಿಚಯ) : ೧೯೮೮, ಡಿ.ವಿ.ಕೆ. ಮೂರ್ತಿ, ಮೈಸೂರು.

೭. ಡಾ. ಕೆ.ಜಿ. ನಾಗರಾಜಪ್ಪ: (ಸಂ) ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು, ೧೯೮೯, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೮. ಡಾ. ಹಾ.ಮಾ.ನಾಯಕ ಮತ್ತು ಡಾ. ಟಿ.ವಿ. ವೆಂಕಟಾಚಲಶಾಸ್ತ್ರೀ (ಸಂ): ಕನ್ನಡ ಸಾಹಿತ್ಯ ಚರಿತ್ರೆ: ನಾಲ್ಕನೆಯ ಸಂಪುಟ ೧೯೭೭, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೯. ಡಾ. ಪಿ.ವಿ. ನಾರಾಯಣ: (೧) ವಚನ ನಿರ್ವಚನ: ಪುಸ್ತಕಾಲಯ, ೧೯೯೦, ಮೈಸೂರು (೨) ವಚನ ಪರಿಸರ, ೧೯೯೪, ಬೆಂಗಳೂರು.

೧೦.ಎಚ್.ಎಸ್. ಪಾರ್ವತಿ: (ಸಂ) ಅಜ್ಞಾತ ಕವಯಿತ್ರಿಯರು, ೧೯೮೪, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು.

೧೧.ಬರಗೂರು ರಾಮಚಂದ್ರಪ್ಪ (ಸಂ) (೧) ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪಗಳು, ೧೯೯೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು (ಸಂ) ಬೆಡಗಿನ ವಚನ ಪರಂಪರೆ: ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೪.

ಅಡಿ ಟಿಪ್ಪಣಿಗಳು

೧. ಅಕ್ಕನ ವಚನಗಳು :ಸಂ.ಎಲ್. ಬಸವರಾಜು, ದ್ವಿ ಸಂಸ್ಕರಣ, ೧೯೭೨, ಮೈಸೂರು, ಪು. ೪೮. ವ. ೬

೨. ಅದೇ. ವ. ೫.

೩. ಅದೇ. ಪು. ೫೦. ವ. ೧೧

೪. ಅದೇ. ಪು. ೪೯. ವ. ೯

೫. ಅದೇ. ಪು. ೫೦. ವ. ೧೧

೬. ಅಕ್ಕಗಳ ವಚನಗಳು : ಸಂ.ಡಾ. ಶಾ.ಶಿ.ಮರುಳಯ್ಯ. ೧೯೯೩, ಬೆಂಗಳೂರು ಪು. ೭೨ ವ. ೧೮.

೭. ಅಕ್ಕನ ವಚನಗಳು : ಪೂರ್ರೋಕ್ತ ಪು. ೧೨೬. ವ. ೨೦೨.

೮. ಅದೇ. ಪು. ೧೨೯, ವ. ೨೦೮

೯. ಅದೇ. ಪು. ೧೨೮ ವ. ೨೦೪

೧೦. ಶಿವಶರಣೆಯರ ವಚನಗಳು : ಸಂಪುಟ ೩: ಡಾ. ಆರ್.ಸಿ. ಹಿರೇಮಠ, ದ್ವಿ. ಮುದ್ರಣ. ೧೯೯೦. ಧಾರವಾಡ, ಪು. ೭೫, ವಚನ ೧೫೬ ನ್ನೂ ಪು. ೪೯, ವಚನ ೯೮ನ್ನೂ ಹೋಲಿಸಬಹುದು.

೧೧. ಅದೇ. ಪು. ೫೨ ವ. ೧೦೭

೧೨. ಅಕ್ಕನ ವಚನಗಳು, ಪೂರ್ವೋಕ್ತ, ಪು. ೭೬ ವ. ೬೪

೧೩. ಶಿವಶರಣೆಯರ ವಚನಗಳು: ಸಂಪುಟ ೩. ಪು. ೬೦ ವ. ೧೨೪.

೧೪. ವಚನ ಕಮ್ಮಟ : ಸಂ.ಎಂ.ಸಿ. ಮರುಳಸಿದ್ದಪ್ಪ ಮತ್ತು ಕಿ.ರಂ. ನಾಗರಾಜ, ೧೯೭೯, ಬೆಂಗಳೂರು, ಪು. ೧೫. ವ, ೬೨

೧೫. ಶಿವಶರಣೆಯರ ವಚನಗಳು ಸಂ. ೩ ಪು. ೭೭. ವ. ೧೬೦.

೧೬. ಅದೇ. ಪು. ೪೬ ವ. ೯೪

೧೭. ಅದೇ. ಪು. ೯೩ ವ. ೧೯೯

೧೮. ಅದೇ. ಪು. ೮೯ ವ. ೧೮೮
೧೯. ಅದೇ. ಪು. ೯೧ ವ. ೧೯೩
೨೦. ಶಿವಶರಣೆಯರ ವಚನಗಳು. ಸಂ: ಡಾ. ಆರ್.ಸಿ. ಹಿರೇಮಠ್. ೧೯೬೮ ಪು. ೨೪೯ ವಚನ. ೫೧
೨೧. ಶಿವಶರಣೆಯರ ವಚನ ಸಂಪುಟ. ಸಂ: ಡಾ. ವೀರಣ್ಣರಾಜೂರು ೧೯೯೩, ಬೆಂಗಳೂರು
೨೨. ವಚನ ಸಾಹಿತ್ಯ ಸಂಗ್ರಹ : ಸಂ. ಶಿ. ಭೂಸನೂರ ಮಠ, ೧೯೬೫, ಬೆಂಗಳೂರು ಪು ೫೧೪, ವ. ೮೧.
೨೩. ಡಾ. ಬಸವರಾಜ ಸಾದರ: 'ಲಿಂಗಮ್ಮ': ವಚನಕಾರರು: ವ್ಯಕ್ತಿ ಹಾಗೂ ಅಭಿವ್ಯಕ್ತಿ; ಸಂ: ಡಾ. ಸಿ.ಯು. ಮಂಜುನಾಥ್ ಮತ್ತು ಬಿ.ಸಿ. ವೀರಪ್ಪ, ೧೯೯೩, ಬೆಂಗಳೂರು ಪು ೧೬೪.
೨೪. ಶಿವಶರಣೆಯರ ವಚನ ಸಂಪುಟ: ಪೂರ್ವೋಕ್ತ. ಪು. ೧೯೮ ವ. ೬೨೨
೨೫. ಅದೇ. ಪು. ೧೭೩. ವ. ೫೩೨
೨೬. ಅದೇ. ಪು. ೧೯೩. ವ. ೫೯೨
೨೭. ಅದೇ. ಪು. ೧೭೫. ವ. ೫೪೧
೨೮. ಅದೇ. ಪು. ೯ ವ. ೫೧೯
೨೯. ಅದೇ. ಪು. ೧೬೯. ವ. ೫೧೯
೩೦. ಅದೇ. ಪು. ೨೬೦. ವ. ೮೧೭.
೩೧. ಅದೇ. ಪು. ೨೪೮. ವ. ೭೬೫
೩೨. ಅದೇ. ಪು. ೨೭೫, ವ. ೮೬೬
೩೩. ಉಷಾಕಿರಣ್ : "ಮುಕ್ತಾಯಕ್ಕ" : ವಚನಕಾರರು: ವ್ಯಕ್ತಿ ಹಾಗೂ ಅಭಿವ್ಯಕ್ತಿ: ಪು. ೧೦೨.
೩೪. ಅದೇ. ಉಲ್ಲೇಖ. ಪು. ೯೯
೩೫. ಶಿವಶರಣೆಯರ ವಚನಗಳು ಸಂಪುಟ ೩: ಪೂರ್ವೋಕ್ತ. ಪು. ೧೦೧. ವ.೨೧೭
೩೬. ಅದೇ. ಪು. ೯೭, ವ. ೨೦೫
೩೭. ಡಾ. ಜಿ.ಎಸ್. ಶಿವರುದ್ರಪ್ಪ: "ಅಕ್ಕಮಹಾದೇವಿ ಚಳವಳಿಯಲ್ಲೊಂದು ಭಿನ್ನಸ್ವರ" : ಸಮಗ್ರಗದ್ಯ, ೧೯೯೩, ಬೆಂಗಳೂರು. ಪು. ೧೪೦–೧೪೧ರಲ್ಲಿರುವ ಚರ್ಚೆ ನೋಡಿ
೩೮. Great Women of India : Advaita Ashrama, Himalaya, 1953, Women Saints of East and West, Ramakrishna Vedanta Centre, Condon 1955.
೩೯. ಡಿ.ಆರ್. ಶ್ರೀಣಿವಾಸಮೂರ್ತಿ: ವಚನಧರ್ಮಸಾರ
೪೦. ಡಾ. ಜಿ.ಎಸ್ ಶಿವರುದ್ರಪ್ಪ. ಪೂರ್ವೋಕ್ತ. ಪು. ೧೫೪.
೪೧. ಪ್ರೊ. ಸಂ.ಶಿ. ಭೂಸನೂರ ಮಠ, "ನಿರ್ಭಯದ ನಿಲುವು ಚೆಲುವು" ಶೂನ್ಯ ಸಂಪಾದನೆಯ ಪರಾಮರ್ಶೆ, ೧೯೬೯, ಧಾರವಾಡ. ಪು. ೭೩೮
೪೨. ಡಾ. ಪಿ.ವಿ. ನಾರಾಯಣ: "ವಚನ ಚಳವಳಿ ಮತ್ತು ಮಹಿಳೆ" : ವಚನ ಪರಿಸರ. ೧೯೯೪, ಬೆಂಗಳೂರುಪು. ೧೮೨
೪೩. ಡಾ. ಗುರುಲಿಂಗ ಕಾಪಸೆ: ಅಕ್ಕಮಹಾದೇವಿ: ೧೯೮೮, ನವದೆಹಲಿ, ಪು. ೪೪.

ಭಾಗ – ೩

೧೩. ಅಕ್ಕಮಹಾದೇವಿ ವಚನಗಳಲ್ಲಿ ಪ್ರಕೃತಿ

●

ಡಾ. ಬಸವರಾಜ ಸಬರದ

ಪ್ರಕೃತಿ–ಪರಿಸರದ ಬಗೆಗೆ ಇತ್ತೀಚೆಗೆ ತುಂಬಾ ಕಾಳಜಿ ವಹಿಸು ತ್ತಿದ್ದೇವೆ. ವಿಜ್ಞಾನದಲ್ಲೆಷ್ಟೇ ಮುನ್ನಡ ಸಾಧಿಸಿದರೂ ಪರಿಸರ ವನ್ನು ಕೆಡಿಸಿ–ಪ್ರಕೃತಿಯನ್ನು ನಾಶಪಡಿಸಿ ನಾವು ಬದುಕ ಲಾರೆವೆಂಬ ಸತ್ಯ ನಮಗೀಗ ಸ್ಪಷ್ಟವಾಗಿದೆ. ಅಂತೆಯೇ ಪರಿಸರ ಮಾಲಿನ್ಯದ ಬಗೆಗೆ ಇಂದು ದೊಡ್ಡ ಚಳವಳಿಯೇ ನಡೆದಿದೆ. ಜಗತ್ತಿನ ಬೇರೆ ಬೇರೆ ಭಾಷೆಗಳಲ್ಲಿ ಕಾವ್ಯ ರಚಿಸಿದ ಕವಿಗಳಲ್ಲಿ ಪ್ರಕೃತಿಯನ್ನು ಬಿಟ್ಟು ಬರೆದವರು ತುಂಬಾ ವಿರಳವೆನ್ನಬಹುದು.

ಪ್ರಾಣಿ ಅಥವಾ ಮನುಷ್ಯಪ್ರಾಣಿ ಇವೆಲ್ಲ ಪ್ರಕೃತಿಯ ಒಂದು ಅಂಗ. ಪ್ರಕೃತಿಯ ಬೆಳವಣಿಗೆ ಮತ್ತು ವಿನಾಶದಲ್ಲಿಯೇ ಮಾನವ ಬದುಕಿನ ಬೆಳವಣಿಗೆ ಮತ್ತು ವಿನಾಶ ಅಡಗಿದೆ. ಇಂತಹ ಒಂದು ದಟ್ಟ ಸತ್ಯವನ್ನು ಹನ್ನೆರಡನೆಯ ಶತಮಾನದಲ್ಲಿಯೇ ಕಂಡು ಕೊಂಡ ವಚನಕಾರರು ಪ್ರಕೃತಿಗೆ ಸಂಬಂಧಿಸಿದಂತೆ ಅನೇಕ ಹೊಸ ಮಜಲುಗಳನ್ನು ಪ್ರಕಟಿಸಿದ್ದಾರೆ. ಬಸವಣ್ಣ ಪ್ರಕೃತಿಯ ಸಂರಕ್ಷಣೆ ಕುರಿತು ಹೇಳಿದರೆ, ಅಕ್ಕಮಹಾದೇವಿ ಪ್ರಕೃತಿಯ ಒಳನೋಟಗಳನ್ನು ಕುರಿತು ಹೇಳುತ್ತಾಳೆ. ಪ್ರಕೃತಿಯ ನಿಗೂಢತೆ, ಅಂತಸ್ಸತ್ವ, ಪ್ರಾಮುಖ್ಯತೆ ಕುರಿತು ಅಕ್ಕಮಹಾದೇವಿ ಆಧ್ಯಾತ್ಮದ ಹಿನ್ನೆಲೆಯಲ್ಲಿ ವಿವರಿಸುವ ರೀತಿ ತುಂಬಾ ಕುತೂಹಲಕಾರಿಯಾಗಿದೆ. ಪ್ರಸ್ತುತ ಲೇಖನದಲ್ಲಿ ಅಂತಹ ಎಳೆಗಳನ್ನು ಹಿಡಿದಿದುವ ಪ್ರಯತ್ನ ಮಾಡಲಾಗಿದೆ.

ಈಳೆ ನಿಂಬೆ ಮಾವು ಮಾದಲಕ್ಕೆ
ಹುಳಿ ನೀರನೆರೆದವರಾರಯ್ಯ?
ಕಬ್ಬು ಬಾಳೆ ಹಲಸ ನಾರಿವಾಳಕ್ಕೆ
ಸಿಹಿ ನೀರನೆರೆದವರಾರಯ್ಯ?
ಕಳವೆ ರಾಜಾನ್ನ ಶಾಲ್ಯನ್ನಕ್ಕೆ
ಓಗರದ ಉದಕವನೆರೆದವರಾರಯ್ಯ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕ ನೆರೆದವರಾರಯ್ಯ?
ಇಂತೀ ಜಲವೂ ಒಂದೆ ನೆಲನು ಒಂದೆ ಆಕಾಶವು ಒಂದೆ

ಜಲವು ಹಲವು ದ್ರವ್ಯಂಗಳ ಕೂಡಿ, ತನ್ನ ಪರಿ ಬೇರಾಗಿಹ ಹಾಗೆ
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು? ತನ್ನ ಪರಿಬೇರೆ (ಬ. ವ–೪)

ಪ್ರಕೃತಿಯಲ್ಲಿ ಬೆಳೆದು ನಿಲ್ಲುವ ಹಣ್ಣುಗಳ ಗುಣ ವಿಶಿಷ್ಟತೆ, ಕಾಳಾಗಿ ಊಟಕ್ಕೆ ಸಲ್ಲುವ ಕಳವೆಗಳ ರುಚಿ ವಿಶಿಷ್ಟತೆ, ಪರಿಮಳ ಬೀರಿ ಮುಡಿಯೇರುವ ಹೂಗಳ ವೈವಿಧ್ಯತೆಯನ್ನು ಅಕ್ಕ ಇಲ್ಲಿ ವಿವರಿಸಿದ್ದಾಳೆ. ಇದಿಷ್ಟೇ ಆಗಿದ್ದರೆ ಇದೊಂದು ಪ್ರಕೃತಿಗೆ ಸಂಬಂಧಿಸಿದ ಒಂದು ಭಾವಗೀತೆ ಮಾತ್ರ ಆಗಬಹುದಿತ್ತು. ಆದರೆ ಇಲ್ಲಿ ಭಾವಗೀತಾತ್ಮಕ ಗುಣದೊಂದಿಗೆ ಒಡೆದು ಕಾಣುವ ಅನೇಕ ಒಳನೋಟಗಳ ವಿಶ್ಲೇಷಣೆ ಇದೆ.

ಈಳೆ–ನಿಂಬೆ–ಮಾವು–ಮಾದಲ ಒಂದು ಕಡೆ; ಕಬ್ಬು–ಬಾಳೆ–ಹಲಸ–ನಾರಿವಾಳ ಮತ್ತೊಂದು ಕಡೆ. ಮೊದಲನೆಯದಕ್ಕೆ ಹುಳಿ ನೀರನೆರೆದವರಾರು? ಎರಡನೆಯದಕ್ಕೆ ಸಿಹಿ ನೀರನೆರೆದವರಾರು? ಎಂಬ ಎರಡು ಪ್ರಶ್ನೆಗಳೊಂದಿಗೆ ವಚನ ಪ್ರಾರಂಭವಾಗುತ್ತದೆ. ಇದರ ಜತೆಗೆ ಮತ್ತೆರಡು ಪ್ರಶ್ನೆಗಳು ತಳುಕು ಹಾಕಿಕೊಳ್ಳುತ್ತವೆ. ಅನ್ನವಾಗಬಹುದಾದ ಕಳವೆಗೆ ಓಗರದ ಉದಕವನೆರೆದವರು ಮತ್ತು ಮರುಗ ಮಲ್ಲಿಗೆಗಳಿಗೆ ಪರಿಮಳದುದಕನೆರೆದವ ರಾರೆಂಬುದನ್ನು ನಂತರದ ಸಾಲುಗಳು ಪ್ರಶ್ನಿಸುತ್ತವೆ. 'ಇಂತೀ ಜಲವೂ ಒಂದೆ ನೆಲನು ಒಂದೆ ಆಕಾಶವು ಒಂದೆ' ಎಂಬ ಸಾಲಿಗೆ ವಚನ ಕೊನೆಗೊಂಡಿದ್ದರೆ ಅಲ್ಲಿ ಬರೀ ಕುತೂಹಲವನ್ನೇ ನೋಡಬಹುದಿತ್ತು. ಒಂದೇ ನೆಲದಲ್ಲಿ ಹುಟ್ಟಿ ಒಂದೇ ರೀತಿಯ ಬೆಳಕನ್ನು ಪಡೆದು, ಒಂದೇ ರೀತಿಯ ನೀರನ್ನುಂಡು ಬೆಳೆದುನಿಂತ ಈ ಮರಗಳು ಫಲ ಕೊಡುವುಲ್ಲೇಕೆ ಭಿನ್ನವಾಗುತ್ತವೆ? ಎಂಬ ಕುತೂಹಲ ಕೊನೆಯವರೆಗೂ ಉಳಿಯಬಹುದಿತ್ತು. ಆದರೆ ಇಲ್ಲಿ ಅಕ್ಕನಿಗೆ ಕೇವಲ ಕುತೂಹಲ ಹುಟ್ಟಿಸಿ ಕೈಬಿಡುವ ವಿಚಾರವಿಲ್ಲ. ಅಂತೆಯೇ ಆಕೆ ಮುಂದುವರಿದು 'ಜಲವು ಹಲವು ದ್ರವ್ಯಂಗಳ ಕೂಡಿ ತನ್ನ ಪರಿ ಬೇರಾಗಿಹ ಹಾಗೆ' ಎಂದು ಕುತೂಹಲಕ್ಕೆ ಕಾರಣವಾಗಿದ್ದ ಮೂಲವನ್ನು ವಿವರಿಸುತ್ತಾಳೆ. ಅದರೊಂದಿಗೆ ಚನ್ನಮಲ್ಲಿಕಾರ್ಜುನ ಉಳಿದವರಿಗಿಂತ ಹೇಗೆ ಬೇರೆಯೆಂಬುದನ್ನು ತಾದ್ಯಾತ್ಮ ಗೊಳಿಸಿ ಹೇಳುತ್ತಾಳೆ. ಪ್ರಕೃತಿಯ ಅಂಗವಾಗಿಯೇ ಬೆಳೆದ ಈ ಮರ–ಗಿಡ–ಬಳ್ಳಿಗಳು ತಮ್ಮ ಮೂಲ ದ್ರವ್ಯಂಗಳ ಗುಣವನ್ನುಳಿಸಿಕೊಂಡು ವಿಶಿಷ್ಟವಾಗಿ ಬೆಳೆದು ನಿಲ್ಲುವ ಪರಿ ಇಲ್ಲಿಯ ಒಟ್ಟು ಆಶಯವಾಗಿ ಕಾಣುತ್ತದೆ.

ಹಲವು ಜಗಂಗಳ ಕೂಡಿಕೊಂಡಿದ್ದರೂ ಚನ್ನಮಲ್ಲಿಕಾರ್ಜುನನ ಪರಿಯೇ ಬೇರೆ ಎಂದು ಮುಖ್ಯವಾಗಿ ಹೇಳಬೇಕಾಗಿದೆ. ಆದರೆ ಅಕ್ಕ ಅದನ್ನು ಪ್ರಕೃತಿಯ ಮೂಲಕ ಕಾವ್ಯಾತ್ಮಕವಾಗಿ ದಾಖಲಿಸುತ್ತಿರುವುದು ಹೆಚ್ಚು ಪರಿಣಾಮವನ್ನುಂಟುಮಾಡುತ್ತದೆ. ಇಲ್ಲಿ ಪ್ರಕೃತಿಯ ಮೂಲ ದ್ರವ್ಯಂಗಳು ಮತ್ತು ಚೆನ್ನಮಲ್ಲಿಕಾರ್ಜುನ ಅಮೂರ್ತವಾಗಿ, ಈಳೆ–ನಿಂಬೆ–ಕಬ್ಬು–ಬಾಳೆ–ಜಗಂಗಳು ಮೂರ್ತವಾಗಿ ಕಾಣಿಸಿಕೊಂಡಿವೆ. ಮೂರ್ತದ ಮೂಲಕ ಅಮೂರ್ತವನ್ನು ಕಾಣಲಿಚ್ಛಿಸುವ ಪ್ರಯತ್ನ ಇಲ್ಲಿ ಕಂಡುಬರುತ್ತದೆ. ಅಮೂರ್ತದ ವಿಶಿಷ್ಟತೆಯನ್ನು ಉಳಿಸಿಕೊಂಡೇ ಅದು ಮೂರ್ತಗೊಳ್ಳುವ ಪರಿ ತುಂಬಾ ಕುತೂಹಲಕಾರಿಯಾಗಿದೆ.

ಅಕ್ಕ ಒಂದೊಂದು ರೀತಿಯ ಗುಣ–ರುಚಿಗೆ ಸಂಬಂಧಿಸಿದಂತೆ ಒಂದೊಂದು ರೀತಿಯ ಮರ–ಗಿಡ–ಬಳ್ಳಿಗಳನ್ನು ಹೋಲಿಸುತ್ತಾಳೆ. ಅವುಗಳ ಗಂಧ–ಗುಣಗಳಿಗೆ ಸಂಬಂಧಿಸಿದಂತೆ ವರ್ಗೀಕರಣ ಮಾಡುತ್ತಾಳೆ. ಜಲ–ನೆಲ–ಆಕಾಶ ಒಂದೇ ಆಗಿದ್ದರೂ ಕೂಡ ಮೂಲ

ದ್ರವ್ಯಂಗಳಲ್ಲಿ ವ್ಯತ್ಯಾಸವಿರುವುದರಿಂದ ಅವು ಭಿನ್ನವಾಗಿ ಬೆಳೆಯುವ ಅಚ್ಚರಿಯನ್ನು ಆಧ್ಯಾತ್ಮದ ಹಿನ್ನೆಲೆಯಲ್ಲಿ ಕಟ್ಟಿಕೊಡುವ ರೀತಿ ನಿಜಕ್ಕೂ ಅರ್ಥಪೂರ್ಣವೆನಿಸುತ್ತದೆ. ಪ್ರಕೃತಿ ಪರಿಸರದ ಬಗೆಗೆ ಪೂರ್ಣಜ್ಞಾನವಿದ್ದವರಿಂದ ಮಾತ್ರ ಇಂತಹ ತಾದಾತ್ಮ್ಯ ಸಾಧ್ಯವಾಗುತ್ತದೆ.

ಪ್ರಕೃತಿಯ ಮೂಲ ನೆಲೆಗಳಾದ ನೆಲ ಮತ್ತು ಬಯಲುಗಳನ್ನು ಅಕ್ಕ ಕ್ರಮವಾಗಿ ಕಾಯ ಮತ್ತು ಜೀವಕ್ಕೆ ಹೋಲಿಸುತ್ತಾಳೆ. ಕಾಯವೇ ಮಣ್ಣಾಗಿ ಜೀವವೇ ಬಯಲಾದಾಗ "ಯಾವುದನ್ನು ಹಿಡಿಯಲಿ? ಯಾವ ಪರಿಯಲ್ಲಿ ನೆನೆಯಲಿ?" ಎಂದು ಕೇಳುವ ಆಕೆಯ ಪ್ರಶ್ನೆಗಳಿಗೆ ಉತ್ತರಗಳನ್ನು ಮತ್ತೆ ಪ್ರಕೃತಿಯಲ್ಲಿಯೇ ಹುಡುಕಬೇಕಾಗುತ್ತದೆ. ನೆಲ ಮುಗಿಲುಗಳಲ್ಲಿ, ಕಾಯ-ಜೀವಗಳನ್ನು ಕಲ್ಪಿಸಿ ಅಜಗಜಾಂತರವಿದ್ದ ಅಂತರವನ್ನು ಇಲ್ಲವಾಗಿಸಿ ಒಂದು ಮಾಡುವ ಶಕ್ತಿ ಆಧ್ಯಾತ್ಮಕ್ಕಿದೆಯೆಂಬುದನ್ನು ಅಕ್ಕ ತನ್ನ ಅನೇಕ ವಚನಗಳಲ್ಲಿ ವ್ಯಕ್ತಪಡಿಸಿದ್ದಾಳೆ.

ಚಂದನವ ಕಡಿದು ಕೊರೆದು ತೇದಡೆ
ನೊಂದೆನೆಂದು ಕಂಪ ಬಿಟ್ಟಿತ್ತೆ?
ತಂದು ಸುವರ್ಣವ ಕಡಿದೊರೆದಡೆ
ಬೆಂದು ಕಳಂಕ ಹಿಡಿಯಿತ್ತೆ?
ಸಂದ ಸಂದ ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದಡೆ
ಬೆಂದು ಪಾಕಗೊಳೆ ಸಕ್ಕರೆಯಾಗಿ ನೊಂದೆನೆಂದು ಸಿಹಿಯ ಬಿಟ್ಟಿತ್ತೆ (ಮ.ವ.: ೧೨೭)

ಇಲ್ಲಿ ಪ್ರಕೃತಿಯಲ್ಲಿರುವ ಮೂರು ವಸ್ತುಗಳನ್ನಾಯ್ದುಕೊಂಡು ಅವುಗಳ ಮೂಲ ಗುಣಗಳ ನಿಷ್ಠೆಯನ್ನು ಸ್ಪಷ್ಟಪಡಿಸಲಾಗಿದೆ. 'ಚನ್ನಮಲ್ಲಿಕಾರ್ಜುನದೇವಯ್ಯಾ ಕೊಂದಡೆ ಶರಣೆಂಬುದನು ಮಾಣೆ' ಎಂಬ ನುಡಿಗೆ ಪೂರಕವಾಗಿ ಇಡೀ ವಚನ ಬೆಳೆದು ನಿಂತಿದೆ.

ಕಂಪು ಬೀರುವದೇ ಚಂದನದ ವೈಶಿಷ್ಟ್ಯ, ಹೊಳೆಯುವದೇ ಸುವರ್ಣದ ವೈಶಿಷ್ಟ್ಯ, ಸಿಹಿ ನೀಡುವದೇ ಕಬ್ಬಿನ ವೈಶಿಷ್ಟ್ಯ. ಕಡಿದಂತೆಲ್ಲಾ ಚಂದನ ಕಂಪು ಬೀರತೊಡಗುತ್ತದೆ, ಸುವರ್ಣ ಹೊಳೆಯತೊಡಗುತ್ತದೆ, ಕಬ್ಬು ಸಿಹಿಯ ಕೊಡತೊಡಗುತ್ತದೆ. ಈ ಮೂರು ವಸ್ತುಗಳಿಗೆ ನಡೆಯುವ ಕ್ರಿಯೆ ಮಾತ್ರ ಒಂದೇ. ಅದು ಕಡಿಯುವುದು, ಕಡಿದಾಗಲೇ ಅದರ ಸತ್ಯ ಸ್ಪಷ್ಟವಾಗುವದು. ಹಾಗೆಯೇ ಶರಣರಾದವರಿಗೆ ಯಾವ ತೊಂದರೆ ಕೊಟ್ಟರೂ ಏನೂ ಆಗದು ಅವರ ಮೂಲ ಗುಣವಾದ 'ಶರಣು' ಎಂಬುದನ್ನವರು ಬಿಡರು – ಎಂಬ ಅಂಶವನ್ನು ಇಲ್ಲಿ ಸ್ಪಷ್ಟಪಡಿಸಲಾಗಿದೆ.

ಅಕ್ಕ ಇಲ್ಲಿ ಆಯ್ದುಕೊಂಡ ವಸ್ತುಗಳೇ ವಿಶಿಷ್ಟವಾಗಿವೆ. ಪ್ರಕೃತಿಯಲ್ಲಿಯೇ ಇಂತಹ ವಸ್ತುಗಳಿಗೆ ಕೆಲ ವಿಶಿಷ್ಟ ಗುಣವಿರುವುದನ್ನು ಜನಜಂಗುಳಿಯಲ್ಲಿಯೇ ವಿಶಿಷ್ಟರಾಗಿ ಕಾಣುವ ಶರಣರಿಗೆ ಹೋಲಿಸಲಾಗಿದೆ. ಕೊಂದರೂ 'ಶರಣು' ಎಂಬುದನ್ನು ಬಿಡಲಾರೆ ಎನ್ನುವಂತಹ ಮಾತು ನಿಷ್ಠೆಯನ್ನು ಪ್ರಕಟಿಸುತ್ತಲೇ ಪ್ರಕೃತಿಯಲ್ಲಿಯೇ ಇಂತಹ ನಿಷ್ಠೆಗಿರುವ ಒಂದು ಪರಂಪರೆಯನ್ನೇ ಸೂಚಿಸುತ್ತದೆ. ಹೀಗಾಗಿ ಅಕ್ಕ ಇಲ್ಲಿಯ ಪ್ರಕೃತಿಯ ವಸ್ತುಗಳನ್ನು ಬಳಸಿಕೊಳ್ಳುವ ರೀತಿಯೇ ತುಂಬಾ ಕುತೂಹಲಕಾರಿಯಾಗಿ ಕಾಣುತ್ತದೆ.

ಇದೇ ರೀತಿಯ ಭಾವವನ್ನು ಇನ್ನೊಂದು ವಚನದಲ್ಲಿ ನೋಡಬಹುದು.

ಗಿರಿಯಲ್ಲಲ್ಲದೆ ಹುಲ್ಲು ಮೊರಡಿಯಲ್ಲಾಡುವದೇ ನವಿಲು?
ಕೊಳಕ್ಕಲ್ಲದೆ ಕಿರುವಳ್ಳಕ್ಕೆಳಸುವದೇ ಹಂಸೆ?
ಮಾಮರ ತಳಿರಲ್ಲದೆ ಸ್ವರಗೈವುದೆ ಕೋಗಿಲೆ?

ಪರಿಮಳವಿಲ್ಲದ ಪುಷ್ಪಕ್ಕೆಳಸುವುದೆ ಭ್ರಮರ?
ಎನ್ನ ದೇವ ಚೆನ್ನಮಲ್ಲಿಕಾರ್ಜುನಂಗಲ್ಲದೆ ಅನ್ಯಕ್ಕೆಳಸುವದೆ
ಎನ್ನ ಮನ? ಎನ್ನ ಕೆಳದಿಯರಿರಾ! (ಮ.ವ. ೨೮೫)

ಮೊದಲಿನ ವಚನದಲ್ಲಿ ಚಂದನ, ಸುವರ್ಣ, ಕಬ್ಬು ಇಂತಹ ವಸ್ತುವನ್ನಾಯ್ದುಕೊಂಡು ಅವುಗಳ ಗುಣ ನಿಷ್ಠೆಯ ಮೂಲಕ "ಶರಣರ ಏಕ ನಿಷ್ಠೆ"ಯನ್ನು ಪ್ರಕಟಿಸಿದರೆ, ಈ ವಚನದಲ್ಲಿ ನವಿಲು, ಹಂಸೆ, ಕೋಗಿಲೆ, ಭ್ರಮರದಂತಹ ಪಕ್ಷಿಗಳ ಮೂಲಕ "ಶರಣರ ಮನದಿಂಗಿತ"ವನ್ನು ಸ್ಪಷ್ಟಪಡಿಸಲಾಗಿದೆ. ಇಲ್ಲಿ ಬಳಕೆಯಾಗಿರುವ ಗಿರಿ, ಕೊಳ, ಮಾಮರ, ಪರಿಮಳದ ಪುಷ್ಪ–ಇವು ಶ್ರೇಷ್ಠತೆಯ ಸಂಕೇತವಾಗಿ ಹುಲ್ಲು, ಮೊರಡಿ, ಕಿರುವಳ್ಳ, ಒಣ ಮರ, ಪರಿಮಳವಿಲ್ಲದ ಪುಷ್ಪ–ಕನಿಷ್ಠತೆಯ ಸಂಕೇತವಾಗಿ ಬಳಕೆಯಾಗಿವೆ. ಅಂದರೆ ಪ್ರಕೃತಿಯಲ್ಲಿಯೇ ಇಂತಹ ವೈವಿಧ್ಯತೆಯಿದೆ. ಇವು ಶ್ರೇಷ್ಠ, ಇವು ಕನಿಷ್ಠ ಎಂದು ಗುರುತಿಸುವ ಕ್ರಿಯೆ ಕೂಡ ಪ್ರಕೃತಿಯಲ್ಲಿ ಬೆಳೆದು ಬಂದ ಪಕ್ಷಿಗಳಿಂದಲೇ ನಡೆಯುತ್ತದೆ. ನವಿಲು–ಹಂಸೆ–ಕೋಗಿಲೆ–ಭ್ರಮರಗಳು ಈ ಗುಣವಿಶಿಷ್ಟತೆಯನ್ನು ಕಂಡುಕೊಂಡಿವೆ. ಅಂತೆಯೇ ಅವು ತಮಗೆ ಶ್ರೇಷ್ಟತಮವೆಂದಿನಿಸಿದ ತಾಣಗಳಲ್ಲಿ ಇರುತ್ತವೆಯೇ ಹೊರತು, ಬೇರೆ ತಾಣಗಳಲ್ಲಿ ಇರಲಾರವೆಂಬುದನ್ನು ಹೇಳುವುದರ ಮೂಲಕ "ಚನ್ನ ಮಲ್ಲಿಕಾರ್ಜುನಂಗಲ್ಲದೆ ಅನ್ಯಕ್ಕೆಳಸುವದೆ ಎನ್ನ ಮನ?" ಎಂಬ ನುಡಿಗೆ ಒತ್ತು ಬೀಳುತ್ತದೆ. ಪ್ರಕೃತಿಯಲ್ಲಿರುವ ಈ ಪಕ್ಷಿಗಳ ತಾಣಗಳನ್ನು ಸರಿಯಾಗಿ ಗುರುತಿಸುವ ಅಕ್ಕ ಅದನ್ನು ತನ್ನ ಬದುಕಿನ ಮೂಲಕ ಬಿಚ್ಚಿ ತೋರಿಸುವ ಪರಿ ನಿಜಕ್ಕೂ ಸೃಜನಶೀಲವಾಗಿದೆ. ನವಿಲು, ಗಿರಿಯನ್ನು ಬಿಟ್ಟು ಹುಲ್ಲು ಮೊರಡಿಯಲ್ಲಿ ಎಂದಿಗೂ ಆಡುವದಿಲ್ಲ. ಹಂಸೆ, ಕೊಳಬಿಟ್ಟು ಯಾವ ಹಳ್ಳದಲ್ಲಿಯೂ ತೇಲುವದಿಲ್ಲ. ಕೋಗಿಲೆ, ಮಾಮರ–ತಳಿರನ್ನು ಬಿಟ್ಟುಹೋಗುವುದಿಲ್ಲ. ಭ್ರಮರ, ಪರಿಮಳ ತುಂಬಿದ ಪುಷ್ಪವಿದ್ದರೆ ಮಾತ್ರ ಬಿಡುವುದಿಲ್ಲ. ಈ ಕ್ರಿಯೆ ಭೂತ–ವರ್ತಮಾನ–ಭವಿಷ್ಯತ್ತುಗಳಿಗೂ ಒಂದೇ ಆಗಿದೆ. ಇಂತಹ ಒಂದು ಚಿರಂತನವಾಗಿರುವ ಕ್ರಿಯೆಯ ಮೂಲಕ ಅಕ್ಕ ತನ್ನ ಮನಸ್ಸನ್ನು ತೆರೆದು ತೋರಿಸುವದು ಆ ಮೂಲಕ ಶರಣರ ಮನಸ್ಸೆಂದ್ಲರೆ ಹೇಗೆ ಇರುತ್ತದೆಂಬುದನ್ನು ಸ್ಪಷ್ಟಪಡಿಸುವದು ಇಲ್ಲಿ ನಿಖರವಾಗಿ ನಮೂದಿಸಲ್ಪಟ್ಟಿದೆ.

ಗಿರಿ, ಹುಲ್ಲು–ಮೊರಡಿ, ಶ್ರೇಷ್ಠ–ಕನಿಷ್ಠ ಎನ್ನುವದಕ್ಕಿಂತ ನವಿಲು ಇಷ್ಟಪಡುವ ತಾಣವೆಂದು ಮಾತ್ರ ಹೇಳಬೇಕಾಗುತ್ತದೆ. ಹಾಗೆಯೇ ಶರಣರ ಮನ ಯಾವಾಗಲೂ ಚನ್ನಮಲ್ಲಿಕಾರ್ಜುನನಂತಹ ದೇವರಿಗೆಳೆಸುತ್ತದೆಂಬುದನ್ನು ವಿವರಿಸಲಾಗಿದೆ. ಇದರೊಂದಿಗೆ ಗಿರಿಯ ವಿಶಾಲತೆ, ಕೊಳದ ಸೌಂದರ್ಯ, ಮಾಮರದ ಚಿಗರಿನ ರುಚಿ, ಪುಷ್ಪದ ಪರಿಮಳ, ಈ ಗುಣಗಳು ದಾಖಲಾಗುತ್ತವೆ.

ಕಳವಳದ ಮಾನ ತಲೆ ಕೆಳಗಾದುದವ್ವಾ
ಸುಳಿದು ಬೀಳುವ ಗಾಳಿ ಉರಿಯಾದುದವ್ವಾ
ಬೆಳುದಿಂಗಳು ಬಿಸಿಯಾಯಿತ್ತು ಕೆಳದಿ
ಹೊಳಲ ಸೊಂಕಿಗನಂತೆ ತೊಳಲುತ್ತಿದ್ದೆನವ್ವಾ... (ಮ.ವ. ೨೫೪)

ಈ ಮೊದಲು ವಿಶ್ಲೇಷಿಸಿದ ವಚನಗಳಿಗಿಂತ ತುಂಬಾ ಭಿನ್ನವಾಗಿ ಈ ವಚನ ಬೆಳೆದು ನಿಂತಿದೆ. ಇಲ್ಲಿನ ಆಶಯ ಮೊದಲ ವಚನಗಳಲ್ಲಿ ಕಾಣಿಸಿಕೊಂಡ ಆಶಯಕ್ಕೆ ವಿರುದ್ಧವಾಗಿದೆ. ತನ್ನ ಮನಸ್ಸು ಸಂತುಷ್ಟವಾಗಿದ್ದರೆ ಕಾಣುವ ಪ್ರತಿ ವಸ್ತುವೂ ನೂತನವಾಗಿ ಕಾಣುತ್ತದೆ. ಮನಸ್ಸು

ಯಾವುದೇ ಕಾರಣದಿಂದ ಅತೃಪ್ತಿಗೊಂಡರೆ, ನಿರಾಶೆಯಾದರೆ, ನೋವಾದರೆ ಆಗ ಪ್ರಕೃತಿಯಲ್ಲಿನ ವಸ್ತುಗಳು ಕೂಡಾ ಅಪಾಯದ ಸಂಕೇತವಾಗಿ ಕಾಣುತ್ತದೆ. ಇದು ಸಾಮಾನ್ಯವಾಗಿ ಮನಸ್ಸಿನ ಪ್ರಕ್ರಿಯೆಗೆ ಸಂಬಂಧಿಸಿದ ಸಹಜ ವಿಷಯ. ಇಲ್ಲಿ ಅಕ್ಕನಿಗೆ ನೋವಾಗಿರುವದು ತನ್ನ ಬದುಕಿನ ಆಗು-ಹೋಗುಗಳ ಬಗೆಗಲ್ಲ. ಚನ್ನಮಲ್ಲಿಕಾರ್ಜುನ ಮುನಿಸುಗೊಂಡಿದ್ದರಿಂದ ಆಕೆಗೆ ಸುಳಿದು ಬೀಸುವ ಗಾಳಿ-ಉರಿಯಾಗಿ, ಬೆಳದಿಂಗಳು ಬಿಸಿಯಾಗಿ ಕಾಣುತ್ತದೆ.

ಸುಳಿದು ಬೀಸುವ ಗಾಳಿ ಉರಿಯಾಗುವ, ಬೆಳದಿಂಗಳು ಬಿಸಿಯಾಗುವ ಕಲ್ಪನೆಯೇ ತುಂಬ ಅದ್ಭುತವಾದದ್ದು. ತದ್ವಿರುದ್ಧವಾದ ವಸ್ತುಗಳು ಒಂದಾಗುವ ಕ್ರಿಯೆ ಆಶ್ಚರ್ಯವನ್ನು ಉಂಟುಮಾಡುತ್ತದೆ. ಇಲ್ಲಿನ ಕ್ರಿಯೆಯನ್ನು ಲಕ್ಷ್ಯಗೊಟ್ಟು ನೋಡಿದಾಗ ಒಂದು ಮಾತು ಸ್ಪಷ್ಟವಾಗುತ್ತದೆ. ಪ್ರಕೃತಿಯಲ್ಲಿಯ ಪ್ರತಿಯೊಂದು ಸೃಷ್ಟಿಗೂ ಒಂದಕ್ಕೊಂದು ರೀತಿ ಸಂಬಂಧವಿದೆ. ಚನ್ನಮಲ್ಲಿಕಾರ್ಜುನನ ಮುನಿಸು, ಅಕ್ಕನ ಮೇಲೆ ಪರಿಣಾಮವನ್ನುಂಟುಮಾಡುವದು ಆ ಪರಿಣಾಮದಿಂದ ಪ್ರಕೃತಿಯಲ್ಲಿ ಕಾಣುವ ವಸ್ತುಗಳ ಗುಣ ವಿಶಿಷ್ಟತೆಯೇ ತದ್ವಿರುದ್ಧವಾಗಿ ಕಂಡುಬರುತ್ತದೆ. ಹೊಳಲ ಸುಂಕಿಗನಂತೆ ತೊಳಲಲಿಕ್ಕೆ ಮುಖ್ಯಕಾರಣ ಕಳವಳದ ಮನ ತಲೆಕೆಳಗಾದುದರಿಂದ. ಈ ಎಲ್ಲ ಕಾರ್ಯ-ಕಾರಣಗಳ ಹಿನ್ನೆಲೆಯಲ್ಲಿ ನಡೆಯುವ ಮನಸ್ಸಿನ ಕ್ರಿಯೆ ಇಲ್ಲಿ ಅತಿ ಮುಖ್ಯವಾಗುತ್ತದೆ. ಆದುದರಿಂದ ಬೆಳದಿಂಗಳಾಗಲಿ, ಬಿಸಿಲಾಗಲಿ, ತಂಗಾಳಿಯಾಗಲಿ, ಉರಿಯಾಗಲಿ ಮೊದಲು ಕಾಣುವದು ಒಳಗಣ್ಣಿಗೆ, ಅಂತರಂಗಕ್ಕೆ ಅಂತರಂಗದಲ್ಲಿ ಸುಡುವ ಸೂರ್ಯನನ್ನಿಟ್ಟುಕೊಂಡು ಬೆಳದಿಂಗ್ಳಳದಲ್ಲಿ ಅಡ್ಡಾಡಿದರೆ ಬೀಸಿ ತಟ್ಟುವುದೇ ಹೊರತು ತಂಪಲ್ಲ. ಈ ಮಾತನ್ನು ಅಕ್ಕ ತನ್ನ ಬದುಕಿನ ಅನುಭವದ ಮೂಲಕ ಹೇಳಿರುವುದು ಹಾಗೂ ಪ್ರಕೃತಿ ಮತ್ತು ಮನಸ್ಸುಗಳ ನಡುವೆ ಅರ್ಥಪೂರ್ಣ ಸಂಬಂಧ ಕಟ್ಟಿಕೊಂಡಿರುವುದು ಬಹಳ ಮುಖ್ಯವೆನಿಸುತ್ತದೆ. 'ಬುದ್ದಿ ಹೇಳಿ ಕರೆತಾರ' ಎನ್ನುವ ಮಾತು ಆಂತರಿಕ ಹೊಯ್ದಾಟವನ್ನು ಕಡಿಮೆಗೊಳಿಸಿ ಮುನಿಸನ್ನು ಶಮನಮಾಡುವುದೇ ಆಗಿದೆ.

ಅದೇ ಮನಸ್ಸು ಮುದಗೊಂಡಾಗ ವನವೆಲ್ಲಾ ಕಲ್ಪತರುವಾಗಿ ಕಾಣುತ್ತದೆ. ಗಿಡವೆಲ್ಲಾ ಮರುಜವಣಿಯಾಗಿ ಕಾಣುತ್ತದೆ. ಶಿಲೆಗಳೆಲ್ಲಾ ಪರುಷವಾಗಿ ನೆಲವೆಲ್ಲಾ ಅವಿಮುಕ್ತಿ ಕ್ಷೇತ್ರವಾಗಿ ಕಾಣುತ್ತದೆ. ಎಡಹುವ ಹರಳೆಲ್ಲಾ ಚಿಂತಾಮಣಿಯಾಗಿ ಕಾಣಲು ಮುಖ್ಯ ಕಾರಣ ಮಾನಸಿಕ ಸಂತೃಪ್ತಿ. ಹೀಗೆ ಅಕ್ಕ ತನ್ನ ವಚನಗಳಲ್ಲಿ ಪ್ರಕೃತಿಯ ಮೂಲಕ ಆಧ್ಯಾತ್ಮದ ಪರಿ, ಮನಸ್ಸಿನೊಳಗಿನ ಘರ್ಷಣೆಗಳು, ಅದರಿಂದುಂಟಾಗುವ ಪರಿಣಾಮಗಳು, ಅವುಗಳ ಪರಸ್ಪರ ಸಂಬಂಧ ಇವೆಲ್ಲವುಗಳ ಬಗೆಗೂ ಕೂಲಂಕುಷವಾಗಿ ವಿಶ್ಲೇಷಿಸಿದ್ದಾಳೆ.

ತಾನು ನೆಚ್ಚಿದ್ದ; ಮೆಚ್ಚಿದ್ದ ಚನ್ನಮಲ್ಲಿಕಾರ್ಜುನನ ಹುಡುಕಾಟವನ್ನು ಆಕೆ ಪ್ರಕೃತಿಯ ಮೂಲಕವೇ ಪ್ರಾರಂಭಿಸುವದು ತುಂಬಾ ಅರ್ಥಪೂರ್ಣವಾಗಿದೆ. ಯಾವುದು ಚರಾಚರ ಜೀವಜಂತುಗಳ ಸೃಷ್ಟಿಗೆ ಕಾರಣವೋ ಆ ಪ್ರಕೃತಿಯನ್ನೇ ಆಕೆ ಅಚಲವಾಗಿ ನಂಬುತ್ತಾಳೆ ಗಿರಿಗಳಲ್ಲಿ ವನಗಳಲ್ಲಿ ಮರ-ಗಿಡಗಳಲ್ಲಿ 'ದೇವ ಬಾರಯ್ಯಾ ಕರುಣೆಯ ತೋರಯ್ಯಾ' ಎಂದು ಕರೆಯುತ್ತಾಳೆ. 'ನೀನಡಗುವ ತಾವ ಹೇಳಾ?' ಎಂದು ಹಂಬಲಿಸುತ್ತಾಳೆ. ಇಡೀ ಪ್ರಕೃತಿಯಲ್ಲಿಯೇ ಚನ್ನಮಲ್ಲಿಕಾರ್ಜುನನನ್ನು ಕಾಣುವ ಬಗೆ ಉಳಿದ ವಚನಕಾರರಿಗಿಂತ ಅಕ್ಕನಲ್ಲಿ ವಿಶಿಷ್ಟವಾಗಿದೆ. ಪ್ರಕೃತಿಯ ವಸ್ತುಗಳನ್ನೇ ಸಾಕ್ಷಿಯಾಗಿರಿಸಿಕೊಂಡು ಮಾತನಾಡುವ ವಚನವಂತೂ ತುಂಬಾ ಅರ್ಥಪೂರ್ಣವಾಗಿದೆ.

ಚಿಲಿಮಿಲಿ ಎಂದು ಓದುವ ಗಿಳಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ
ಸ್ವರವೆತ್ತಿ ಪಾಡುವ ಕೋಗಿಲೆಗಳಿರಾ, ನೀವು ಕಾಣಿರೆ, ನೀವು ಕಾಣಿರೆ
ಎರಗಿ ಬಂದಾಡುವ ತುಂಬಿಗಳಿರಾ, ನೀವು ಕಾಣಿರೆ, ನೀವು ಕಾಣಿರೆ
ಕೊಳನ ತಳಿಯಾಡುವ ಹಂಸೆಗಳಿರಾ, ನೀವು ಕಾಣಿರೆ, ನೀವು ಕಾಣಿರೆ
ಗಿರಿಗಹ್ವರದೊಳಾಡುವ ನವಿಲುಗಳಿರಾ, ನೀವು ಕಾಣಿರೆ, ನೀವು ಕಾಣಿರೆ
ಚನ್ನಮಲ್ಲಿಕಾರ್ಜುನನೆಲ್ಲಿದ್ದಹನೆಂದು ಹೇಳಿರೆ (ಮ.ವ.: ೨೭೪)

ಪ್ರಕೃತಿಯ ಈ ಪ್ರಕ್ಷಿಗಳ ಮೂಲಕ ಚನ್ನಮಲ್ಲಿಕಾರ್ಜುನನ್ನರಸುವ ಪರಿಯೇ ತುಂಬಾ ಮಹತ್ವದ್ದೆನಿಸುತ್ತದೆ. ಚಿಲಿಮಿಲಿ ಎಂದೋದುವ, ಸ್ವರವೆತ್ತಿ ಹಾಡುವ, ಎರಗಿ ಬಂದಾಡುವ, ಕೊಳ ಗಿರಿಗಹ್ವರದಲ್ಲಾಡುವ ಕ್ರಿಯೆ ಆಯಾ ಪಕ್ಷಿಗಳ ಗುಣಸೂಚಕವಾಗಿ ಬಂದು ಚನ್ನಮಲ್ಲಿ ಕಾರ್ಜುನನೇ ಆ ರೂಪದಲ್ಲಿ ಬಂದು ನಿಂತಂತಾಗುತ್ತದೆ. ನಿಷ್ಕ್ರೀಯವಾದ ವಸ್ತುಗಳನ್ನು ಆಕೆ ಇಲ್ಲಿ ಉದಾಹರಿಸುವುದಿಲ್ಲ. ಹೀಗಾಗಿ ಕ್ರಿಯೆಮೂಲವಾಗುವ, ಜಂಗಮದ ಚಲನಶೀಲಗುಣ ವನ್ನೊಳಗೊಂಡಿರುವ ಪ್ರಕೃತಿಯಲ್ಲಿ ಕೂಡಿ ಬದುಕುವ ಈ ಪಕ್ಷಿಗಳ ಸಮೂಹದಲ್ಲಿ ಚನ್ನಮಲ್ಲಿಕಾರ್ಜುನನನ್ನು ಹುಡುಕುವುದು ಹೆಚ್ಚು ಅರ್ಥಪೂರ್ಣವೆನಿಸುತ್ತದೆ. ನೀವು ಕಾಣಿರೆ ? ನೀವು ಕಾಣಿರೆ ? ಎನ್ನುವ ಪ್ರಶ್ನೆ ಪುನರಾವರ್ತನೆಗೊಂಡು ನೀವು ಕಂಡಿದ್ದೀರಿ ಎನ್ನುವ ನಿರ್ಣಾಯಕ ಹಂತವನ್ನು ತಲುಪುತ್ತದೆ. ಹೀಗೆ ಪ್ರಕೃತಿಯಲ್ಲಿಯೇ ದೇವರನ್ನು ಕಾಣುವ ಅಕ್ಕಮಹಾದೇವಿ, ಪ್ರಕೃತಿಯ ಅದ್ಭುತ ಸತ್ಯಗಳನ್ನು ಕಂಡುಕೊಂಡಿರುವದು ಇಂದಿಗೂ ಪ್ರಸ್ತುತವಾಗುತ್ತದೆ.

ಇಲ್ಲಿ ಬಳಸಲಾಗಿರುವ ವಚನಗಳನ್ನು ಡಾ. ಆರ್.ಸಿ. ಹಿರೇಮಠರು ಸಂಪಾದಿಸಿರುವ 'ಮಹಾದೇವಿಯಕ್ಕನ ವಚನಗಳು' ಗ್ರಂಥದಿಂದ ಆರಿಸಿಕೊಳ್ಳಲಾಗಿದೆ.

೧೪. ಮಹಾದೇವಿಯಕ್ಕನ ವಚನಗಳಲ್ಲಿ ಪ್ರತಿಮಾ ವಿಧಾನ

•

ಡಾ. ಶೈಲಜಾ ಉಡಚಣ

ಕಾವ್ಯದಲ್ಲಿ ಪ್ರತಿಮಾಸೃಷ್ಟಿಯೆಂಬುದು ಸಹಜ ಸ್ಫುರಣ. ಅದೊಂದು ದಿವ್ಯ ದರ್ಶನದ ಕಲಾತ್ಮಕ ಅಭಿವ್ಯಕ್ತಿ. ಕವಿ ತನ್ನ ಅನುಭೂತಿಯನ್ನು ವ್ಯಕ್ತಿ ವೈಶಿಷ್ಟ್ಯದ ಸೀಮೆ ಮೀರಿ ಸಮಷ್ಟಿಯಲ್ಲಿ ಲೀನಗೊಳಿಸಿ ಏಕಾತ್ಮನಾದಾಗ ದಿವ್ಯದರ್ಶನ ಉಂಟಾಗುತ್ತದೆ. ಅದರ ಅಭಿವ್ಯಕ್ತಿಗಾಗಿ ಬಾಹ್ಯ ಜಗತ್ತಿನ ಪರಿಕರಗಳನ್ನು ನೆರವಿಗೆ ತೆಗೆದುಕೊಂಡು ತನ್ಮೂಲಕ ತನ್ನ ದರ್ಶನವನ್ನು ರೂಪಿಸುತ್ತಾನೆ. ಪ್ರತಿಭಾ ವಿಧಾನವು ರೂಪಕ, ಉಪಮೆ, ಉತ್ಪ್ರೇಕ್ಷೆಗಳೆಲ್ಲವನ್ನು ಒಳಗೊಳ್ಳಬಲ್ಲದು; ಇಡಿಯಾಗಿ ಮೈದೋರಬಲ್ಲದು; ಬಿಡಿಯಾಗಿ ಒಮ್ಮೊಮ್ಮೆ ಒಂದೇ ಒಂದು ರೂಪಕ, ಉಪಮೆ, ಉತ್ಪ್ರೇಕ್ಷೆ ಮುಖಾಂತರವೇ ಮಹತ್ ಅನುಭೂತಿಯನ್ನು ಒದಗಿಸಬಲ್ಲದು. ಸಹಜ ಕವಿಯ ಶ್ರೇಷ್ಠ ಪ್ರತಿಮಾ ವಿಧಾನವೇ ಸಾಧನವಾಗ ಬಲ್ಲದು. ಕವಿಯನ್ನು ಈ ದೃಷ್ಟಿಯಿಂದಲೇ ರಸಋಷಿ ಎಂದು ಕರೆದಿರುವುದು. ಅವನಿಗೆ ಋಷಿಗಿರುವ ದರ್ಶನ, ಕವಿಗಿರುವ ಪ್ರತಿಭೆ–ಎರಡು ಸಮಷ್ಟಿಗೊಳ್ಳುವುದರಿಂದ ಅವನ ಕಾವ್ಯ ಪ್ರತಿಮಾ ವಿಧಾನದ ಶ್ರೇಷ್ಠ ಮಾದರಿಯಾಗಿ ಬೃಹತ್ ಮಹತ್ ದರ್ಶನವನ್ನು ಸಹೃದಯನಿಗೆ ಮಾಡಿರುವ ಸಾಮರ್ಥ್ಯ ಪಡೆಯುತ್ತದೆ.

ಕಾವ್ಯದಲ್ಲಿ ಅಘಟಿತ ಘಟನೆಗಳ ಸೃಷ್ಟಿಯ ಉದ್ದೇಶ ಮಹತ್ ದರ್ಶನವೇ. ವಚನಕಾರರ ಪವಾಡಗಳು. ಸಹಜ ಕವಿಗಳಿಂದ ಸೃಷ್ಟಿಯಾದವು; ಶ್ರೇಷ್ಠ ಪ್ರತಿಮಾ ಮಾಧ್ಯಮದ ಉದಾಹರಣೆಗಳಾಗಿವೆ. ವಚನಕಾರರು ಮೂಲತಃ ದಾರ್ಶನಿಕರು; ಅಂದಾಕ್ಷಣ ಅವರ ದರ್ಶನವೆಲ್ಲ ಪ್ರತಿಮಾ ಸೃಷ್ಟಿಯೇ? ಆಗಲಾರದು. ಧಾರ್ಮಿಕ ಜಗತ್ತಿನಲ್ಲಿ ಒಂದು ರೀತಿಯಾದರೆ, ಸಾಹಿತ್ಯದಲ್ಲಿ ಪ್ರತಿಮೆ ಕಲಾತ್ಮಕ ನಿರೂಪಣೆಯಲ್ಲಿಯೇ ಜನ್ಮತಾಳುತ್ತದೆ ವಚನ ಸಾಹಿತ್ಯ ಧರ್ಮ ಸಿದ್ಧಾಂತಗಳನ್ನೂ ಒಳಗೊಂಡಿದ್ದರೂ ಅಲ್ಲಿ ಸಾಧಕ ಜಗತ್ತಿನ ಸಾವು–ನೋವಿನ, ಸೋಲು–ಗೆಲುವಿನ ಸುಂದರ ಪರಿಕ್ರಮಣಗಳಿರುವುದರಿಂದ ಅದಕ್ಕೆ ಸಾಹಿತ್ಯದಲ್ಲೂ ಗಣ್ಯಸ್ಥಾನವಿದೆ. ಹಲವಾರು ವಚನಕಾರರು ಮುಖ್ಯವಾಗಿ ಬಸವ, ಅಲ್ಲಮ, ಅಕ್ಕಮಹಾದೇವಿ ಮೊದಲಾದವರು ರಸಋಷಿಗಳಾದುದರಿಂದ ಅವರ ಆ ದಿವ್ಯಾನುಭವ ಇಂದಿಗೂ ಸಹೃದಯ ಲೋಕದ ಮಾನಸ ತರಂಗದಲ್ಲಿ ಪ್ರತಿಸ್ಪಂದನಕ್ಕೆ ಕಾರಣವಾಗಿದೆ.

ಹಾಗೆ ನೋಡಿದರೆ ವಚನಕಾರರ ಗುರು, ಲಿಂಗ, ಜಂಗಮದ ಕಲ್ಪನೆ, ಧಾರ್ಮಿಕ ನೆಲೆಗಟ್ಟಿನಲ್ಲಿದ್ದರೂ ಅದೊಂದು ಪ್ರತಿಮಾ ಸೃಷ್ಟಿಯೆ ಸರಿ. ವಚನಗಳಲ್ಲಿ ಬಂದ ಅವುಗಳ ಅಮೂಲಾಗ್ರಚಿಂತನೆ, ಆಳ, ಹರವು, ಎತ್ತರ, ಬಿತ್ತರಗಳ, ಆ ಅನಂತಭಾವದ ವಿಶ್ಲೇಷಣೆ ಸಿಕ್ಕಿತೆಂದು ತಿಳಿದಾಗಲು ಮುಂದೆ ನಡೆಸುವ ಧೋರಣೆ; ನೆಲೆ, ನೆಲೆಯಿಂದ ಬದಲಿಸುವ, ಆತ್ಮತ್ರಿಷ್ಠದಶಾಂಗುಲ ಎಂದು ಮುಂದುಮುಂದಕ್ಕೆ ಒಯ್ಯುವ, ಆ ಅರ್ಥ ಕ್ಷಿತಿಜದ ವಿಸ್ತಾರ; ತಾತ್ತ್ವಿಕ ನೆಲೆಮೀರಿ ಉಂಟಾಗುವ ದಿವ್ಯಾನುಭವ ಇವುಗಳಿಂದ ಗುರು, ಲಿಂಗ, ಜಂಗಮದ ಕಲ್ಪನೆ, ವ್ಯಕ್ತಿ, ವಸ್ತು, ಭಾವ ಇವುಗಳನ್ನು ಮೀರಿದ ಅನಂತ ಅಂತರಾತ್ಮದ ಅನುಭೂತಿಗೆ ಒಯ್ಯುವದು ಈ ಪ್ರತಿಮಾ ವಿಧಾನದಿಂದಲೇ.

ಇದರಂತೆ ಇರುವ ಇನ್ನೊಂದು ಅತ್ಯಂತ ಸುಂದರತಮ ಕಲ್ಪನೆ, ಶರಣರ 'ಶರಣಸತಿ', 'ಲಿಂಗಪತಿ' ಭಾವ. ಲೌಕಿಕದ ಸತಿಪತಿಗಳ ಸಂಕೇತದಿಂದ ಮೇಲೆದ್ದು ಶರಣ ಲಿಂಗದ ಪ್ರತೀಕಗಳಲ್ಲಿ ಮೈದೋರಿ, ಜೀವ ಆತ್ಮದ ವ್ಯಾಪಕತೆಗಳನ್ನು ಐಕ್ಯತೆಗಳನ್ನೂ ತುಂಬಿಕೊಳ್ಳುವ ಈ ಕಲ್ಪನೆ, ಪ್ರತಿಮಾ ವಿಧಾನದ ಅದ್ಭುತ ಸೃಷ್ಟಿ. ಇಂದ್ರಿಯ, ಬುದ್ಧಿ, ಚಿತ್ತ, ಆತ್ಮದ ಪರಿಧಿಯಾಚೆ ನಿಂತ ಅರ್ಧನಾರೀಶ್ವರತ್ವದ ಅನುಭಾವ.

ಸಾಮಾನ್ಯವಾಗಿ ಪ್ರತಿಮೆ ಕವಿಯ ಕಲ್ಪನೆಯಲ್ಲಿ ಬೆಳೆದು, ಸಹೃದಯರಲ್ಲಿ ಭೂಮವಾಗಿ, ಧಾರ್ಮಿಕನಲ್ಲಿ ಸಂಕೇತವಾಗಿ, ಸಾಮಾನ್ಯನಲ್ಲಿ ಸಾಯುವದು ಹಣೇಬರಹ.

* * *

ವಚನಕಾರರ ಶರಣಪತಿ, ಲಿಂಗಪತಿ ಕಲ್ಪನೆಯ ಸಜೀವ ಪ್ರತೀಕ ಮಹಾದೇವಿಯಕ್ಕ. ಇದನ್ನು ಅರಿತುಕೊಳ್ಳುವ ಮೊದಲು ಎಂದರೆ ಆಕೆಯ ಸಮಗ್ರ ಸಾಹಿತ್ಯಸೃಷ್ಟಿಯ ಪ್ರತಿಮಾ ವಿಧಾನವನ್ನು ಕುರಿತು ಆಲೋಚಿಸುವ ಮುಂದೆ; ಅದು ಬಿಡಿ ಬಿಡಿಯಾಗಿ ಯಾವ ರೀತಿ ಮೈದೋರಿದೆ, ಇದನ್ನು ನೋಡುವಾ. ಒಂದು ರೀತಿಯಿಂದ ನೋಡಿದರೆ ಸಾಹಿತ್ಯ ಜಗತ್ತೆಲ್ಲ ಪ್ರತಿಮಾಸೃಷ್ಟಿಯೆ. ಅದರ ಯಶಸ್ವಿ ಪ್ರಯೋಗದ ಮೇಲೆ ಸಾಹಿತ್ಯಕ ಮೌಲ್ಯ ನಿರ್ಣಯಗೊಳ್ಳುತ್ತದೆ.

ಮಹಾದೇವಿಯಕ್ಕನ ವಚನಗಳಲ್ಲಿ ವಚನಕಾರರ ಸಾಮಾನ್ಯ ಲಕ್ಷಣಗಳೆಲ್ಲ ಕಾಣಿಸಿಕೊಳ್ಳುತ್ತವೆ. ಉಪಮೆ, ರೂಪಕ, ದೃಷ್ಟಾಂತ, ಕೆಲವು ವಿಶಿಷ್ಟ ಪದಗಳು ಕೂಡ. ಹೀಗಿದ್ದರೂ ವ್ಯಕ್ತಿ ವಿಶೇಷ ಪ್ರತಿಭೆಯಿಂದ ಅವುಗಳಿಗೆ ಹೊಸ ವ್ಯಂಜಕತ್ವ ಉಂಟಾಗಿ ಭಾವದೀಪ್ತಿ ಪ್ರಖರಗೊಳ್ಳುತ್ತದೆ.

ಉದಾ : ಕಳ್ಳ, ಮರ್ಕಟ ಇವುಗಳ ಪ್ರತೀಕ ಹೇಗಿದೆ ನೋಡಿ:

ತನ್ನ ವಸರಕ್ಕಾಗಿ ಹಗಲುಗನ್ನವನಿಕ್ಕಿದರೆ
ಕನ್ನ ಸವೆಯಲಿಲ್ಲ ಕಳವು ದೊರೆಯಲಿಲ್ಲ ॥
ಬೊಬ್ಬುಲಿಯನೇರಿದ ಮರ್ಕಟನಂತೆ
ಹಣ್ಣಮೆಲಲಿಲ್ಲ. ಕುಳ್ಳಿರೆ ತಾವಿಲ್ಲ ।
ನಾನು ಸರ್ವಸಂಗ ಪರಿತ್ಯಾಗ ಮಾಡಿದವಳಲ್ಲ
ನಿಮ್ಮ ಕೂಡಿ ಕುಲವಳಿದವಳಲ್ಲ, ಚೆನ್ನಮಲ್ಲಿಕಾರ್ಜುನಾ

ಇಲ್ಲಿ ಇಹ–ಪರಗಳು, ಜೀವನದಲ್ಲಿ ಸಮನ್ವಯ ಸಾಧ್ಯವಾಗದೆ, ತೊಳಲುತ್ತಿರುವ ಮನಸ್ಸಿನ ಚಿತ್ರ ಈ ಪತ್ರೀಕಗಳ ಮುಖಾಂತರ ವ್ಯಕ್ತವಾಗಿದೆ.

ಕೆಲವು ದೃಷ್ಟಾಂತಗಳು ಅವು ಇತರ ವಚನಕಾರರಿಂದ ಬಳಕೆಗೊಂಡಿದ್ದರೂ ಪ್ರಯೋಗ ವೈಶಿಷ್ಟ್ಯದಿಂದ ವ್ಯಕ್ತಿನಿಷ್ಠ ಪರ್ಯಾಲೋಚನೆಯನ್ನು ಮೀರಿಸಿ ವಿಶಾಲವಾದ ಮನನ ಚಿಂತನಕ್ಕೆ ಅನುವು ಮಾಡಿಕೊಟ್ಟು ತಮ್ಮ ಧ್ವನಿರಮ್ಯತೆಯಿಂದ ಮೋಹ ಉತ್ಕಟತೆ, ತೀವ್ರತೆ, ಧನ್ಯತೆಗೆ ಪ್ರತೀಕಗಳಾಗಿ ಪರಿಣಮಿಸುತ್ತವೆ.

"ಊರ ಸೀರೆಗೆ ಆಗಸ ತಡಬಡಿಸಿದಂತೆ; ಕರ್ಪೂರದ ಗಿರಿಯ
ಉರಿಯುಕೊಂಡಂತೆ...."
ಬಲ್ಲಿದರ ಹಗೆಯವತೆಗೆವನ್ನ ಬರ ಬಡವನ ಹರಣ ಹಾರಿ ಹೋದ
ತೆರನಂತಾಯಿತ್ತು...."
"ಅರಲುಗೊಂಡ ಕೆರೆಗೆ ತೊರೆ ಹಾಯ್ದದಂತಾಯಿತ್ತು...."
'ನಿಮ್ಮ ಮಂಡೆಗೆ ಹೂವತಾರೆನಲ್ಲದೆ ಹುಲ್ಲತಾರೆನು...'
"ತಾಯಿ ರಕ್ಕಸಿಯಾದಂತೆ ಕಾಯವಿಕಾರ...."
"ಹೊಳೆ ಇಳಿದ ಮೇಲೆ ಅಂಬಿಗಂಗೇನುಂಟು...."
'ಬಂಜೆ ಬೇನೆಯನರಿವಳೇ, ಬಲತಾಯಿ ಮುದ್ದು ಬಲ್ಲಳೆ!'

ಇಲ್ಲಿಯ ಅಕ್ಕನ ಮಾತುಗಳು ಕೇವಲ ಆಕೆಯವಲ್ಲ; ಅಖಿಲ ಸ್ತ್ರೀ ಜಾತಿಯ ಎದೆಯ ಮಿಡಿತ, ಹೂವು ಹುಲ್ಲು: ಕೀರ್ತಿ, ಅಪಕೀರ್ತಿಗಳ ಸಂಕೇತವಾಗಿ ಬಹುದಿನಗಳಿಂದ ಬಳಕೆಗೊಂಡಿದ್ದರೂ ಅಕ್ಕನಂತೆ ಆಧ್ಯಾತ್ಮಿಕ ಅರ್ಥದಲ್ಲಿ ಬಳಕೆ ಕೊಂಡುದು ಕ್ವಚಿತ. ಕಾಯದ ಗುಣವನ್ನು ಅದರ ಇಮ್ಮುಖವನ್ನು ಥಟ್ಟನೆ ಗುರುತಿಸಿದ್ದಾಳೆ ಅಕ್ಕ! ವಿಕಾರಕ್ಕೊಳಗಾದರೆ ಇದೇ ಕಾಯ ರಾಕ್ಷಸಿಯಾಗುತ್ತದೆ. ವಿಕಾಸಗೊಂಡರೆ ಒಲವಿನ ಮಡಿಲು.

ಒಮ್ಮೊಮ್ಮೆ ಇಡಿಯ ವಚನಗಳಲ್ಲಿ ಅಕ್ಕ ಸುಂದರ ಪ್ರತೀಕಗಳನ್ನು ಕಡೆದು ನಿಲ್ಲಿಸುತ್ತಾಳೆ :

ಜಾಲಗಾರನೊಬ್ಬ ಜಲವ ಹೊಕ್ಕು ಶೋಧಿಸಿ
ಹಲವು ಪ್ರಾಣಿಗಳ ಕೊಂಡು ನಲಿನಲಿದಾಡುವ।
ತನ್ನ ಮನೆಯಲೊಂದು ಶಿಶು ಸತ್ತರೆ
ಅದಕೆ ಮರಗುವಂತೆ ಅವಕೇಕ ಮರುಗನು?

'ಸ್ವಾತ್ಮಾನಮಿತರಾಂಶ್ಚೈವ
ದೃಷ್ಟ್ವಾ ದೃಷ್ಟ್ವಾ ನಭಿದ್ಯತೇ।
ಸರ್ವಂ ಚಿಜ್ಜ್ಯೋತಿರೇವೇತಿ
ಯಃ ಪಶ್ಯತಿ ಸಪಶ್ಯತಿ" ॥
ಎಂದುದಾಗಿ – ಜಾಲಗಾರನ ದುಃಖ ಜಗಕ್ಕೆಲ್ಲ ನಗೆಗೆಡೆ!
ಇದು ಕಾರಣ ಚೆನ್ನಮಲ್ಲಿಕಾರ್ಜುನಯ್ಯನ ಭಕ್ತನಾಗಿರ್ದು
ಜೀವ–ಹಿಂಸೆಯ ಮಾಡುವ ಮಾದಿಗರನೇನೆಂಬೆನಯ್ಯ!"

ಚಂದನವ ಕಡಿದು ಕೊರೆದು ತೇದೊಡೆ
ನೊಂದೆನೆಂದು ಕಂಪ ಬಿಟ್ಟಿತ್ತೇ?

ತಂದು ಸುವರ್ಣವ ಕಡಿದೊರೆದೊಡೆ ಬೆಂದು ಕಳಂಕ ಹಿಡಿದಿತ್ತೆ?
ಸಂದ ಸಂದನು ಕಡಿದು ಕಬ್ಬನು ತಂದು ಗಾಣದಲಿಕ್ಕಿ ಅರೆದಡೆ
ಬೆಂದು ಪಾಗುಳ್ಳ ಸಕ್ಕರೆಯಾಗಿ ನೊಂದೆನೆಂದು ಸವಿಯ ಬಿಟ್ಟಿತ್ತೆ

ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು ಮುಂದಿಳುಹಲು
ನಿಮಗೆ ಹಾನಿ!
ಎನ್ನ ತಂದೆ ಚೆನ್ನಮಲ್ಲಿಕಾರ್ಜುನದೇವಯ್ಯ.
ಕೊಂದೊಡೆ ಶರಣೆಂಬುದ ಮಾಣೆ

ಇಂಥ ವಚನಗಳು ತಮ್ಮ ಉದ್ದೇಶದಿಂದ ಮೂರ್ತಿಮತ್ತಾಗಿ ಒಂದು ಪ್ರತೀಕವ ನಿಲ್ಲಿಸಿ ತನ್ಮೂಲಕ ಸಾರ್ವತ್ರಿಕ ಗುಣವನು ಎಚ್ಚರಿಸುವ ಕ್ರಿಯೆಗಳಾಗುವವು. ಅಹಿಂಸೆಗಳ, ಸ್ವಾರ್ಥ ರೂಪ ಚಿಂತನೆಗೆ ಜಾಲಗಾರನು ಪ್ರತೀಕವಾದ ಸತ್ತ್ವನ ಅದಮ್ಯ ಅನಾಹತ ಶಕ್ತಿಗೆ; ಚಂದನ ಚಿನ್ನ, ಕಬ್ಬುಗಳು ಪ್ರತಿಕ್ರಿಯಿಸಿವೆ. ಕೊನೆಗೆ ಬರುವ 'ಕೊಂದೊಡೆ ಶರಣೆಂಬುದ ಮಾಣೆ' ಎಂಬಲ್ಲಿ ನಿಷ್ಠೆ ಪರಾಕಾಷ್ಠೆ ಮೈದೋರುತ್ತದೆ.

ವಚನಕಾರರು ಹಲವೆಡೆ ಬಳಸಿರಬಹುದಾದ ಮಾಯೆ ಮಾಮರ ಕೋಗಿಲೆ ಬೆಳದಿಂಗಳು ಇತ್ಯಾದಿ ಇತ್ಯಾದಿಗಳನ್ನು ಮಹಾದೇವಿಯಕ್ಕನೂ ಬಳಸಿದ್ದಾಳೆ. ಆದರೆ ಆಕೆಯಿಂದ ವ್ಯಕ್ತವಾಗುವ ಅರ್ಥವ್ಯಾಪ್ತಿಯಲ್ಲಿ ವಿಶೇಷತೆ ಬೇರೆಯೆ:

ಪುರುಷನ ಮುಂದೆ ಮಾಯೆ,
ಸ್ತ್ರೀಯೆಂಬ ಅಭಿಮಾನವಾಗಿ ಕಾಡಿತ್ತು ನೋಡಾ!
ಸ್ತ್ರೀಯ ಮುಂದೆ ಮಾಯೆ
ಪುರುಷನೆಂಬ ಅಭಿಮಾನವಾಗಿ ಕಾಡಿತ್ತು ನೋಡಾ!
ಲೋಕವೆಂಬ ಮಾಯೆಗೆ
ಶರಣಚಾರಿತ್ರ್ಯ ಮರುಳಾಗಿ ತೋರುವುದು ನೋಡಾ!
ಚೆನ್ನಮಲ್ಲಿಕಾರ್ಜುನನೊಲಿದ ಶರಣಂಗೆ
ಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ.

ಮಾಯೆಯನ್ನು ಎಲ್ಲ ವಚನಕಾರರು ಸ್ತ್ರೀ ಪುರುಷರ ಮಧ್ಯದಲ್ಲಿಯೆ ನಿಲ್ಲಿಸಿದ್ದಾರೆ. ಆದರೆ ಅವರಿಬ್ಬರ ಮಧ್ಯದಲ್ಲಿರುವ 'ಅಭಿಮಾನ'ವೆಂಬುದನ್ನು ಗುರುತಿಸಿದವಳು ಮಹಾದೇವಿಯಕ್ಕ.

ಕೆಲವು ವಚನಗಳಲ್ಲಿ ಯಾವ ಮೂರ್ತ ಸ್ವರೂಪ ತೋರದಿದ್ದರೂ ಅವುಗಳ ಒಟ್ಟಂದದ ಪರಿಣಾಮ ಸಾಮಾನ್ಯವಲ್ಲ:

ಹಸಿವೆಯೇ ನೀನು ನಿಲ್ಲು ನಿಲ್ಲು;
ತೃಷೆಯೇ ನೀನು ನಿಲ್ಲು ನಿಲ್ಲು;
ನಿದ್ರೆಯೇ ನೀನು ನಿಲ್ಲು ನಿಲ್ಲು;
ಕಾಮವೇ ನೀನು ನಿಲ್ಲು ನಿಲ್ಲು;
ಕ್ರೋಧವೇ ನೀನು ನಿಲ್ಲು ನಿಲ್ಲು;
ಮೋಹವೇ ನೀನು ನಿಲ್ಲು ನಿಲ್ಲು;

ಲೋಭವೇ ನೀನು ನಿಲ್ಲು ನಿಲ್ಲು
ಮದವೇ ನೀನು ನಿಲ್ಲು ನಿಲ್ಲು;
ಮತ್ಸರವೇ ನೀನು ನಿಲ್ಲು ನಿಲ್ಲು;
ಸಚರಾಚರವೇ ನೀನು ನಿಲ್ಲು ನಿಲ್ಲು;
ನಾನು ಚೆನ್ನಮಲ್ಲಿಕಾರ್ಜುನ ದೇವರ ಅವಸರದ
ಓಲೆಯನೊಯ್ಯುತ್ತಲಿದ್ದೇನೆ ಶರಣಾರ್ಥಿ.

ಈ ವಚನದಲ್ಲಿ ನೇರವಾಗಿ ಅರಿಷಡ್ವರ್ಗಗಳನ್ನೇ ಸಂಬೋಧಿಸುತ್ತಾಳೆ. ಅಕ್ಕ ಅವುಗಳ ಪ್ರಬಲತೆ, ಉದ್ಧಟತೆ, ವ್ಯಾಪಕತೆಯನ್ನು ಸಂಕೇತಿಸುವಂತೆ; ನಿಲ್ಲು ನಿಲ್ಲು ಎಂಬ ಸಂಬೋಧನೆ, ಅದರಲ್ಲಿ ಅವುಗಳ ಗೆಲ್ಲುವ ಛಲ ಅವಸರದ ಓಲೆನ್ನೊಯ್ಯುತ್ತಿರುವೆ; ಶರಣಾರ್ಥಿ ಎಂಬಲ್ಲಿ ನಾನು ಈ ರೀತಿ ಸಾಗಿ ಅಸಂಖ್ಯರಲ್ಲಿ ಒಬ್ಬಳು ಎಂಬುವ ವಿನೀತ ಭಾವ. ಸಾತ್ವಿಕ ಅಲ್ಪತೆಯು ಸಾಧನೆಯಿಂದ ಭೂಮತೆಯನ್ನು ಪಡೆಯಬಲ್ಲ ನಿಷ್ಠೆ ಇವೆಲ್ಲ ಧ್ವನಿಪೂರ್ಣವಾಗಿ ವಚನ ಕಂಡರಿಸುತ್ತದೆ.

ಇನ್ನೊಂದು ವಚನ:

ತನು ಕರಗದವರಲ್ಲಿ ಮಜ್ಜನವನೊಲ್ಲೆಯಯ್ಯ ನೀನು!
ಮನ ಕರಗದವರಲ್ಲಿ ಪುಷ್ಪವನೊಲ್ಲೆಯಯ್ಯ ನೀನು!
ಹದುಳಿಗರಲ್ಲದವರಲ್ಲಿ ಗಂಧಾಕ್ಷತೆಯನೊಲ್ಲೆಯಯ್ಯ ನೀನು!
ಅರಿವು ಕಣ್ದೆರೆಯದವರಲ್ಲಿ ಆರತಿಯನೊಲ್ಲೆಯಯ್ಯ ನೀನು!
ಭಾವ ಶುದ್ಧವಿಲ್ಲದವರಲ್ಲಿ ಧೂಪವನೊಲ್ಲೆಯಯ್ಯ, ನೀನು!
ಪರಿಣಾಮಿಗಳಲ್ಲದವರಲ್ಲಿ ನೈವೇದ್ಯವನೊಲ್ಲೆಯಯ್ಯ ನೀನು!
ತ್ರಿಕರಣ ಶುದ್ಧವಿಲ್ಲದವರಲ್ಲಿ ತಾಂಬೂಲವನೊಲ್ಲೆಯಯ್ಯ ನೀನು!

ಇಲ್ಲಿ ನಿಷೇಧಾತ್ಮಕವಾಗಿಯೇ ಅಂಗೀಕಾರಾರ್ಥವನ್ನು ಕೊಡುವ, ಪರಾತತ್ವ ಸಾಧನೆಯೆಂಬುದು ಸದ್ಗುಣಗಳ ಸಾಕಾರವಾಗುವ ಮೋಡಿ ಪ್ರಭಾವಿಯಾಗೆ ಬಂದಿದೆ.

ಇಲ್ಲಿಯವರೆಗೆ ಸಾಂಕೇತಿಕವಾಗಿ ಪ್ರತೀಕಮಯವಾಗಿ ಉಪಮೆ–ದೃಷ್ಟಾಂತಗಳ ಮೂಲಕ ಒದಗಿದ ಪ್ರತಿಮಾ ಸತ್ವದ ಹೊಳಹನ್ನು ತುಸು ಅಲ್ಲಿ, ಇಲ್ಲಿ ಕಂಡುಕೊಳ್ಳಲಾಯಿತು. ಇನ್ನೂ ಸಮಗ್ರತೆಯಲ್ಲಿ ಮೈದೋರಿರುವ ಒಟ್ಟಂದದ ಚೆಲುವು ತುಂಬ ಆಕರ್ಷಕವಾದುದು. ಚೆನ್ನಮಲ್ಲಿಕಾರ್ಜುನ ಪತಿ. ತಾನು ಸತಿ, ಈ ದೈವಸಂಬಂಧ ಆಕೆಯು ವಚನಗಳಲ್ಲಿ: ಲೋಕೋತ್ತರತ್ವವನ್ನು ತಂದಿದೆ. ಹೀಗೆ ಮೈದೋರಿದ ಪ್ರತಿಮಾ ವಿಧಾನವನ್ನು ನಿರೀಕ್ಷಿಸುವ ಮೊದಲು ಅಕ್ಕನ ಇಲ್ಲಿವರೆಗೆ ಗ್ರಹಿಸಲಾದ ಲೌಕಿಕ ಜೀವನದ ಕಡೆಗೆ ತುಸು ಇಣುಕುವ : ಈಗ ತಿಳಿದ ಮಟ್ಟಿಗೆ ಮಹದೇವಿಯಕ್ಕನ ಚರಿತ್ರೆಯಲ್ಲಿ ಚರ್ಚೆಗೀಡಾದುದು ಆಕೆಯ ಮದುವೆ. ಹರಿಹರ ಮದುವೆ ಮಾಡಿಸಿದ್ದಾನೆ. ರಸಿಕಚಕ್ರಿಯಾದ ಅವನಿಗೆ. ಅಕ್ಕ ಮದುವೆ ಮಾಡಿಕೊಂಡು ಲೌಕಿಕದ ತುಂಬ ತೃಪ್ತಿಯಲ್ಲೇ ಅನುಭಾವದ ಸವಿಯನ್ನು ಸಮನ್ವಯಗೊಳಿಸುವುದು ಒಪ್ಪಿತ; ಆದರೆ ಚಾಮರಸನ ಹೊತ್ತಿಗೆ ಬರುವಾಗ ಆ ಬಂಧನ ಕಳಚಿದೆ. ಯೋಗಸಾಧನೆಗೆ ಅದೊಂದು ಕಲಂಕಪ್ರಾಯ ಎಂಬಂತಹ ಧೋರಣೆ ಬೈರಾಗಿ ಚಾಮರಸನದು. ಅಲ್ಲದೆ ಅವನ ಕಾಲಕ್ಕಾಗಲೇ ಶರಣರು ಅಲೌಕಿಕ ಪುರುಷರೆಂದು ಸಮರ್ಥಿಸುವ ಹವ್ಯಾಸ. ಸಾಮಾನ್ಯರಂತೆ ಅವರು ಎಂದಾಗ ಅದೊಂದು ಅಗೌರವ ಎಂಬ ನಂಬಿಕೆ. ಇದು ಆಕೆಯನ್ನು ಕುರಿತು ಬರೆದ ಕಾವ್ಯಕಾರರ ಗಡಿಬಿಡಿ.

ಆದರೆ ಕಾವ್ಯ ಜಗತ್ತಿನಲ್ಲಿ ಎಂದರೆ ಮುಖ್ಯವಾಗಿ ವಚನಗಳ ಮೂಲಕ ಆಕೆಯನ್ನು ಪರಿಭಾವಿಸ ಬೇಕೆಂದವರು ಅಷ್ಟು ತೊಡಕು ಮಾಡಿಕೊಳ್ಳುವದು ಬೇಕಾಗಿಲ್ಲ ಎನ್ನಿಸುತ್ತದೆ. ಲೌಕಿಕ ಜೀವನದಲ್ಲಿ ಮನುಷ್ಯ ಹಲವು ವಿಶಿಷ್ಟತೆಗಳನ್ನು ಹೊಂದಿದ್ದರೂ ಮುಕ್ಕಾಲುಪಾಲು ಸಾಮಾನ್ಯ ರಂತೆಯೆ ಬಾಳುತ್ತಾನೆ. ಆದರೆ ಅವನ ಮಾನಸಲೋಕವೇ ಬೇರೆ. ಅದು ಮೈದೋರುವದು ಕಾವ್ಯದ ಮೂಲಕವೇ. ಕಾವ್ಯ, ಕಲೆಗಳು ಮನುಷ್ಯನನ್ನು ಲೌಕಿಕದಲ್ಲಿ ಹಗಲಿರುಳು ಕಾಡಿ ಸುತ್ತುಗೊಳ್ಳುವ ಪರಕೀಯತೆಯಿಂದ ಮುಕ್ತಗೊಳಿಸುವ ಸುಖ ತೃಪ್ತಿಯ ಸಾಧನಗಳು, ಅನೇಕ ಮಹಾಕವಿಗಳ ಲೌಕಿಕ ಜೀವನವೇನಿತ್ತೋ ಅದನ್ನು ಬಹುಶಃ ಸಮಕಾಲೀನರೂ ಸರಿಯಾಗಿ ಗುರುತಿಸಲಾರರು. ಆದರೆ ಅವರ ಮಾನಸಲೋಕದ ಎಂದರೆ ಕೃತಿಯಿಂದಲೇ ಅವರ ಸ್ವರೂಪವನ್ನು ಗ್ರಹಿಸಿ ಅದರ ಮೇಲೆಯೆ ಕಲ್ಪನೆ–ಊಹೆಗಳಿಂದ ಕಥೆ, ಆಖ್ಯಾನಗಳನ್ನು ರಚಿಸುವ ಪ್ರತಿಮಾ ವಿಧಾನ ಹೊಸದಲ್ಲ. ಈ ದಿಶೆಯಲ್ಲಿ ಅಕ್ಕನ ಜೀವನವನ್ನು ಪರ್ಯಾಲೋಚಿಸುವ ದರಿಂದ ಯಾವ ಪ್ರಮಾದವಾಗ ಲಾರದೆಂದು ನನ್ನ ಊಹೆ. ಈ ಊಹೆಗೆ ಆಕೆಯ ವಚನಗಳಲ್ಲಿಯೇ ಆಧಾರ ದೊರೆಯುತ್ತದೆ :

ಲೋಕವಿಡಿದು ಲೋಕದ ಸಂಗದಿಂದಿಪ್ಪೆನು
ಆಕಾರವಿಡಿದು ಸಾಕಾರಸಹಿತ ನಡೆವೆನು
ಹೊರಗೆ ಬಳಸಿ, ಒಳಗೆ ಮೈಮರೆದಿಪ್ಪೆನು
ಬೆಂದು ನುಲಿಯಂತೆ ಹುರಿಗುಂದದಿಪ್ಪೆನು
ಎನ್ನ ದೇವ ಚೆನ್ನಮಲ್ಲಿಕಾರ್ಜುನಯ್ಯ
ಹತ್ತರೊಳಗೆ ಹನ್ನೊಂದಾಗಿ ನೀರತಾವರೆಯಂತಿಪ್ಪೆನು

ಪಂಚೇಂದ್ರಿಯಗಳಿಗೆ, ಮನಸ್ಸಿಗೆ, ಅದನ್ನೇ ಅರ್ಪಿಸಿ ಇಲ್ಲಗೈದರೆ!.... ಆಕೆಯು ಸುತ್ತಿದ ಆವರಣಗಳೆಲ್ಲ ಕಳಚುತ್ತಾಳೆ. 'ನಿರ್ವಾಣತ್ವ' ಮನಕ್ಕೆ ಒಳವವರೆಗೆ ಇದೇ ಸ್ಥಿತಿ. ಕೊನೆಗೊಂದೇ ಮಾರ್ಗ" ಸೋಲು, ಶರಣಾಗತಿ.

ಅತ್ತೆ ಮಾಯೆ, ಮಾವ ಸಂಸಾರಿ!
ಮೂವ್ವರು ಮೈದುನರು ಹುಲಿಯಂಥಾ ಅವಂದಿರು!
ನಾಲುವರು ನಗೆವೆಣ್ಣು ಕೇಳು ಕೇಳದಿ !
ಐವರು ಭಾವದಿರನೊಯ್ವ ದೈವವಿಲ್ಲ !
ಆರು ಪ್ರಜೆಯತ್ತಿಗೆಯರ ಮೀರಲಾರೆನು ತಾಯೆ !
ಹೇಳುವಡೆ, ಏಳು ಪ್ರಜೆತೊತ್ತಿರ ಕಾವಲು !
ಕರ್ಮವೆಂಬ ಗಂಡನ ಬಾಯ ಟೊಣೆದು
ಹಾದರಮಾಡುವೆನು ಹರನ ಕೂಡೆ!
ಮನವೆಂಬ ಸಖಿಯ ಪ್ರಸಾದದಿಂದ
ಅನುಭಾವವ ಕಲಿತೆನು ಶಿವನೊಡನೆ
ಕರ ಚೆಲುವ ಶ್ರೀಶೈಲ ಚೆನ್ನಮಲ್ಲಿಕಾರ್ಜುನನೆಂಬ
ಸಜ್ಜನ ಗಂಡನ ಮಾಡಿಕೊಂಬೆನು.

ಸುತ್ತವರಿದ 'ಈ ಸಂಸಾರ' ಕೋಟೆಯಲ್ಲಿ ಬಂಧಿತವಾದ "ಮನಸ್ಸು" ಹಾಗೆ ಮಾಡುವುದಕ್ಕೆ ನಿರ್ಧರಿಸಿದೆ (ಬಸವಣ್ಣನ ಮಾನಸಗಳ್ಳಿ, ಅಕ್ಕನ ಹಾದರ ಎಂತಹ ಅರ್ಥ ವ್ಯತ್ಯಾಸ!) ಈ

ವಚನದ ಇಡಿಯರ್ಥದಲ್ಲಿ ಬರುವ ಅನುಭವ ಬಿಚ್ಚಿ ಬಿಚ್ಚಿ ನೋಡಿದಾಗ ಜಾಳಾಗುತ್ತದೆ. ಅಕ್ಕ ಹಾದರ, ಮಿಂಡ, (ಒಳಗಂಡನವ್ವ ಹೊರಗಣ ಮಿಂಡನವ್ವ ವ. ೧೧೪)ದಂತಹ ಒರಟು ಪದಗಳ ಬಳಸಿದ್ದಾಳೆ. ಆದರೆ ಅದರಿಂದ ಯಾವ ಮಡಿವಂತಿಕೆಗೆ ದೋಷ ಉಂಟಾಗುವುದಿಲ್ಲ. ಜಾನಪದ ಸತ್ತ್ವದಿಂದ ತುಂಬಿದ ಬಳಕೆ ನುಡಿಗಳಲ್ಲಿ ಭಾವವೇ ತೋಡಿಕೊಳ್ಳುವಷ್ಟು ಅನುಕೂಲ. ಒಮ್ಮೊಮ್ಮೆ ಇತರ ಪದಗಳಿಂದ ಆಗದ.... ಇಂತಹ ಪ್ರಯೋಗ ಸಾಮಾನ್ಯ ಹೆಣ್ಣಿನಿಂದ ಸಾಧ್ಯವಿಲ್ಲ. ಆಕೆಗಿರುವ ಕೀಳು ಭಾವಜಗತ್ತಿನಲ್ಲಿ ಅವುಗಳ ಸ್ಥಾನ ಕೀಳು. ಇದು ಅತ್ಯಂತ ಪ್ರಾಮಾಣಿಕತೆ ಸಾತ್ವಿಕ ಧೈರ್ಯದಿಂದ ಬರುವ ರೀತಿ. ಅಕ್ಕ ಸಾಮಾನ್ಯ ಸ್ತ್ರೀಯಾಗಿ ಭಾವ ಸಹಜ ಕಾವ್ಯಶ್ರೀಯನ್ನೊಳಗೊಂಡವಳು. ಅಂತೆಯೇ ಹಿಂದುಮುಂದು ನೋಡಿ ನೇರವಾಗಿ ಹೃದಯ ತೆರೆದಿಟ್ಟಿದ್ದಾಳೆ. ಇಲ್ಲಿ ಮನದ ಇಂತಹ ಸುಂದರ ವಿಡಂಬನೆ ಬಹಳ ಕಡೆಗೆ ಕಾಣದೊರೆಯದು.

ಸೋಲಿನ ಮೊದಲ ಚಿನ್ಹೆ ಉದಾಸೀನತೆ. ಆದರೆ ಅದು ಹೇಡಿಗಳ ಆಯುಧವಲ್ಲ, ಗುಣಿಗಳ ಗಂಭೀರಹಾರ. ಒಳಗಣ್ಣು ವಿಕಾಸಗೊಳ್ಳುವಾಗ ಹೊರಗಣ್ಣು ಮುಚ್ಚಿಕೊಳ್ಳುವುದು ಸಹಜ.

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಂಗಳಿಗಂಜಿದಡೆಂತಯ್ಯ?
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆ ತೆರೆಗಳಿಗಂಜಿದಡೆಂತಯ್ಯ?
ಸಂತೆಯೊಳಗೊಂದು ಮನೆಯಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯ?
ಚೆನ್ನಮಲ್ಲಿಕಾರ್ಜುನದೇವ ಕೇಳಯ್ಯ
ಲೋಕದೊಳಗೆ ಹುಟ್ಟಿದ ಬಳಿಕ
ಸ್ತುತಿ-ನಿಂದೆಗಳು ಬಂದರೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು!

ಈ ಪ್ರಸಿದ್ಧ ವಚನ ಅಕ್ಕ-ತನ್ನ ಸಾಧನೆ ಮತ್ತು ಲೌಕಿಕತೆಯ ಮಧ್ಯದ ತೊಡರುಗಳನ್ನು ಹೇಗೆ ಸಲೀಸಾಗಿ ಬಿಡಿಸಿಕೊಂಡಳೆಂಬುದನ್ನು ತಿಳಿಸುವ ಸುಂದರ ಉಪಮಾಗುಚ್ಛ, ಪರಿಭಾವಿಸಿದಷ್ಟು ಉಚ್ಚ ಅನುಭವಿ ಶ್ರೇಣಿಗೇರಿಸುತ್ತದೆ.

ಅಯ್ಯ, ನೀ ಕೇಳಿದರೆ ಕೇಳು, ಕೇಳದಿದ್ದರೆ ಮಾಣು,
ನಾ ನಿನ್ನ ಹಾಡಿದಲ್ಲದೆ ಸೈರಿಸಲಾರೆನಯ್ಯ!
ಅಯ್ಯ, ನೀನೊಲಿದರೆ ಒಲಿ, ಒಲಿಯದಿದ್ದರೆ ಮಾಣು;
ನಾ ನಿನ್ನ ಪೂಜಿಸಿದಲ್ಲದೆ ಸೈರಿಸಲಾರೆನಯ್ಯ;
ಅಯ್ಯ, ನೀ ಮೆಚ್ಚಿದರೆ ಮೆಚ್ಚು, ಮೆಚ್ಚದಿದ್ದರೆ ಮಾಣು;
ನಾ ನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯ!
ಅಯ್ಯ, ನೀ ನೋಡಿದರೆ ನೋಡು, ನೋಡದಿದ್ದರೆ ಮಾಣು'
ನಾ ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯ
ಚೆನ್ನಮಲ್ಲಿಕಾರ್ಜುನಯ್ಯ, ನಾ ನಿಮ್ಮ ಪೂಜಿಸಿ
ಹರುಷದಲೋಲಾಡುವೆನಯ್ಯ!

ಇಲ್ಲಿ ಸೋಲಿನಲ್ಲೂ ವಿರಾಜಮಾನವಾಗಿರುವುದು ಸ್ಥಿರತೆಯ ರಾಜಶೀವಿ. ಅಡಿಮುಂದಿಟ್ಟ ಮೇಲೆ ಹಿಂದೆ ಸರಿಯುವುದು ವೀರನ ಲಕ್ಷಣವಲ್ಲ.

'ಕಳವಳದ ಮನವು ತಲೆಕೆಳಗಾದುದವ್ವ....'

'ಕಾಮಿಸಿ ಕಲ್ಪಿಸಿ ಕಂದಿದೆನವ್ವಾ....'

'ಹಿಂಡನಗಲಿ ಹಿಡಿವಡೆದ ಕುಂಜರ.....'

'ಎರೆಯಂತೆ ಕರಗಿ ಮಳಲಂತೆ ಜರಿದು....'

ಚಿಲಿಮಿಲಿ ಎಂದೋದುವ ಗಿಳಿಗಳಿರಾ.....'

ಈ ಮೇಲಿನ ವಿರಹದ ಕಲ್ಪನೆಯ ವಚನಗಳೆಲ್ಲ ಬಹು ಹೃದಯಂಗಮವಾದುವು. ಅಲ್ಲಿಯ ಅನುಭವದ ಹಾದಿ ನೆಲದಿಂದ ಮುಗಿಲವರೆಗೆ ಹಬ್ಬುವಂತಹದು. ಸಹೃದಯ ತರತಮಗಳಲ್ಲಿ ಹಿಗ್ಗಿ ಹಿಗ್ಗಿ ಬೆಳೆಯುವಂತಹದು. ಆತ್ಮಾನುಭೂತಿಯ ತೀವ್ರತೆ, ಉತ್ಕಟತೆ, ತರಹರತ್ವ (ತಹತಹ) ಅಷ್ಟೇ ಏರಿಕೆಯಲ್ಲಿ ಪರಿಣಾಮಕಾರಿಯಾಗುತ್ತ ಹೋಗುತ್ತದೆ.

"ಭಾವದಲ್ಲಿ ನಿಜದ ನೆಲೆಯನ್ನು" ಅಪ್ಪಿದ ಐಕ್ಯ, ಸಾಮರಸ್ಯದ ಕೆಳಗಣ ವಚನ ಅನಂತವಾದ ಅಮೂರ್ತ ಮಹಾಸತ್ತ್ವವನ್ನು ಮೂರ್ತಗೊಳಿಸಿದ ಆಕೆಯ ಕವಿತಾ ಸಾಮರ್ಥ್ಯ : ಇಲ್ಲಿಯ "ಚೆಲುವ" ಅಪ್ರತಿಮನಾದರೂ ಪ್ರತಿಮೆಗೆ ಒಳಗಾಗಿದ್ದಾನೆ. ಆಕಾಶ ಅಂಗೈಯ ಕನ್ನಡಿಯಲ್ಲಿ ಮೈದೋರಿದಂತೆ,

ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆನವ್ವ!
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗಾನೊಲಿದೆನವ್ವ!
ಭವವಿಲ್ಲದ ಭಯವಿಲ್ಲದ ಚೆಲುವಂಗಾನೊಲಿದೆ!
ಕುಲಸೀಮೆಯಿಲ್ಲದ ನಿಸ್ಸೀಮ ಚೆಲುವಂಗಾನೊಲಿದೆ!
ಇದು ಕಾರಣ ಚೆನ್ನಮಲ್ಲಿಕಾರ್ಜುನ ಚೆಲುವ ಗಂಡನೆನಗೆ!
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ!

ಕೊನೆಯಲ್ಲಿ ಬರುವ 'ಈ ಸಾವ, ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ' ನಗುಬರುವಂತಹದ್ದಾದರೂ ಅರ್ಥಸೌಂದರ್ಯದ ಸೀಮೆಯಿಂದ ಹೊರಗಿಲ್ಲ. ಕೊನೆಯದಾಗಿ ಒಂದು ಮಾತು; ಕಾವ್ಯದಲ್ಲಿ ಪ್ರತಿಮಾವಿಧಾನ ಪ್ರಯತ್ನ ಪೂರ್ವಕವಾಗಿ ಹೆಕ್ಕಿ ತೆಗೆದು ನೋಡುವಂತಹದಲ್ಲ. ನಿಸ್ಪೃಹನಾದ ಸಹೃದಯನಿಗೆ ಅನಾಯಾಸ ಒದಗಿಸುವ ಶ್ರೇಷ್ಠ ರಸಾನುಭೂತಿಯ ಮಾಧ್ಯಮ. ವಚನಗಳು ಖಂಡಕೃತಿಗಳಾಗಿರುವುದರಿಂದ ಗಾತ್ರದಲ್ಲಿ ಕಿರಿದವುಗಳಾದುದರಿಂದ ಮಹತ್ವ ಅನುಭೂತಿಯ ತೆರೆ ತೆರೆಯನ್ನು ಉಕ್ಕಿಸಿ ಮರೆಯಾಗುವಂತಹವು. ಆದುದರಿಂದ ಅವುಗಳಿಂದ ದೊರೆವ ರಸಾನುಭೂತಿ ಅಲ್ಪವೆನಿಸಿದರೂ ಅಮೃತದ ಹನಿಯಂತೆ ಅದರ ಸವಿ ಮೆಲುಕು ಹಾಕುವಂತಹದು. ಇಡಿಯ ವಚನ ಸಾಹಿತ್ಯದಲ್ಲಿ ಇಂತಹ ಅಮೃತ ಬಿಂದುಗಳು ಅನೇಕ ಹುದುಗಿಕೊಂಡಿವೆ. ಕನ್ನಡ ಕಾವ್ಯ ಜಗತ್ತಿನಲ್ಲಿ ಅಕ್ಕ ಮೊದಲ ಕವಯಿತ್ರಿ ಆದಿಕವಿ ಪಂಪನಂತೆ.

ಆಧಾರ ಗ್ರಂಥಗಳು

೧) ಅಕ್ಕನ ವಚನಗಳು – ಎಲ್. ಬಸವರಾಜು
೨) ರಸೋವೈಸಃ – ಕೆ.ವಿ. ಪುಟ್ಟಪ್ಪ

೧೫. ಅಕ್ಕಮಹಾದೇವಿಯ ವಚನಗಳಲ್ಲಿ ಸೂಳ್ನುಡಿಗಳು

●

ಎ.ಬಿ. ಕಲಘಟಗಿ

ದಾನವ ಮಾನವನಿಗಿತ್ತ ಮಹತ್ತರ ಕೊಡುಗೆಗಳಲ್ಲಿ ಮಾತಿಗೆ ಮಹಾಪ್ರಸಾದದ ಸ್ಥಾನ ಕಲ್ಪಿತವಾಗಿದೆ. ಅಂತೆಯೆ ಮಾನವ ಪ್ರಾಣಿಯನ್ನು ಇತರ ಪ್ರಾಣಿಸಂಕುಲದಿಂದ ಭಿನ್ನವಾಗಿ ಗುರುತಿಸುವುದು ಮಾನವನಿಗೆ ಲಭಿಸಿದ ಈ ವಾಕ್ ಶಕ್ತಿಯ ಸಾಧನದಿಂದಲೇ. ಮಾತಿಗೆ ಮಾನವ ಕುಟುಂಬದಲ್ಲಿ ಮಹತ್ವದ ಸ್ಥಾನವಿರುವುದನ್ನಂತೂ ಪ್ರಾಚೀನ ಭಾರತೀಯ ವಿದ್ವಾಂಸ ದಂಡಿಯು ತನ್ನ ಕೃತಿ ಕಾವ್ಯಾದರ್ಶದಲ್ಲಿ.

"ಇದಂ ಅಂಧತಮಂ ಕ್ರತ್ಸ್ನಂ ಜಾಯೇತ ಭುವನತ್ರಯಂ
ಯದಿ ಶಬ್ದಾಹ್ವಯಂ ಸಂಸಾರಾನ್ ಜ್ಯೋತಿರಾನ್ ನ ದೀಪ್ಯತೆ" ॥

"ಶಬ್ದವೆಂಬ ಜ್ಯೋತಿ ಜೀವನವನ್ನು ಬೆಳಗದಿರದಿದ್ದರೆ ಈ ಮೂರು ಲೋಕಗಳೆಲ್ಲ ಅಂಧಕಾರಮಯವಾಗಿರುತ್ತಿದ್ದವು." ಎನ್ನುವಲ್ಲಿ ಇದರ ಮಹತ್ವ ಸ್ಪಷ್ಟಗೊಳ್ಳುತ್ತದೆ. 'ಮಾತೆಂಬುದು ಜ್ಯೋತಿರ್ಲಿಂಗ' ಎನ್ನುವ ಶರಣರ ನುಡಿಯಿಂದಲೂ ಇದೇ ಭಾವವನ್ನು ಕಂಡುಕೊಳ್ಳಬಹುದಾಗಿದೆ. 'ಮಾತು' ಮಾನವನ ಸರ್ವಾಂಗೀಣ ಅಭಿವೃದ್ಧಿಯ ಸಾಧನಪಥ. ಇದನ್ನರಿತೆ ನಮ್ಮ ಜಾನಪದರು 'ಮಾತು ಬಲ್ಲವನಿಗೆ ಜಗಳವಿಲ್ಲ' 'ಮಾತು ಬಲ್ಲವ ಮಾಣಿಕ್ಯ ತಂದ', 'ಮಾತು ಆಡಿದರೆ ಹೋಯ್ತು : ಮುತ್ತು ಒಡೆದರೆ ಹೋಯ್ತು' ಎಂದು ಮಾತಿನ ಮಹತ್ವವನ್ನರಿತು ತಮ್ಮ ಜನಪದ ಅಭಿವ್ಯಕ್ತಿಯನ್ನು ವ್ಯಕ್ತಪಡಿಸಿದ್ದಾರೆ. ಮಾತಿನ ನಿಜಬಳಕೆ ಪರಸ್ಪರ ಬಾಂಧವ್ಯ ವೃದ್ಧಿಗೆ ಸಹಾಯಕವಾದುದು. ಇಂಥ ಮಾತಿನ ಮಹತ್ವವನ್ನು ಕಂಡುಕೊಂಡ ಕನ್ನಡನಾಡಿನ ಶಿವಶರಣರು ತಮ್ಮ ವಚನಗಳುದ್ದಕ್ಕೂ ಇದರ ನೆಲೆ–ಬೆಲೆಯನ್ನು ಗುರುತಿಸಿದ್ದಾರೆ.

"ನುಡಿದರೆ ಮುತ್ತಿನ ಹಾರದಂತಿರಬೇಕು,
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು,
ನುಡಿದರೆ ಸ್ಫಟಿಕದ ಸಲಾಕೆಯಂತಿರಬೇಕು,
ನುಡಿದರೆ ಲಿಂಗಮೆಚ್ಚಿ ಅಹುದಹುದೆನಬೇಕು."

ಎನ್ನುವಲ್ಲಿ ಮಾತಿನ ಸರ್ವಾಂಗೀಣ ಚಾಚನ್ನು ಎತ್ತಿಹಿಡಿದು ಅದರ ಮಹತ್ವವನ್ನು ನಿಚ್ಚಳಗೊಳಿಸಿದ್ದಾರೆ.

ಸುಮಾರು ೧೫೦೦ ವರ್ಷಗಳ ಉತ್ಕೃಷ್ಟ, ಉನ್ನತ ಪರಂಪರೆ ಹೊಂದಿದ ಕನ್ನಡ ಸಾಹಿತ್ಯವನ್ನು ಅವಲೋಕಿಸಿದಾಗ, ಪ್ರಾರಂಭದಲ್ಲಿ ಬಂದ ಚಂಪೂ ಸಾಹಿತಿಗಳು ತಮ್ಮ ನೈಜ ಪ್ರತಿಭಾಭಿವ್ಯಕ್ತಿಯ ಕಾವ್ಯರಸಗಂಗೆಯನ್ನು ಸ್ವಾರ್ಥಸಾಧನೆಯ ಲೌಕಿಕ-ಆಗಮಿಕ ಕಾವ್ಯ ಪ್ರಕಾರ ಗಳಲ್ಲಿ ಹರಿಬಿಟ್ಟರು. ಇದರಿಂದ 'ಜೀವನಕ್ಕಾಗಿ ಕಲೆ' ಎಂಬ ಧೋರಣೆ ದೂರವಾಗಿ 'ಕಲೆಗಾಗಿ ಕಲೆ' ಎಂಬ ಮಂತ್ರದ ಸಾಹಿತ್ಯ, ಶಾರದೆಯನ್ನು ಮುಗುಚಿಕೊಂಡಿತು. ಸಾಹಿತ್ಯದ ಭಾಷೆ ಜನಸಾಮಾನ್ಯರಿಗೆ ನಿಲುಕದ ನಿ(ನೆ)ಲುವಾಯಿತು. ಇದರಿಂದ ಜನಸಾಮಾನ್ಯರು ನಿರ್ಗತಿಕರಾಗಿ "ಮುಗಿಲೆಡೆಗೆ ಮುಖಚಾಚಿ ಮಳೆರಾಯನ ಇಳಿವಿಗಾಗಿ ಹಂಬಲಿಸುವ ಬಕಪಕ್ಷಿ ಯಂತೆ" ಬಂಧನದಿಂದ ಮುಕ್ತ ಮಾಡುವ ನವಪ್ರತಿಭೆಗಳಿಗಾಗಿ ಹಾತೊರೆಯ ತೊಡಗಿದರು. ಇಂಥ ಸಂದಿಗ್ಧಮಯ ಸಮಾಜವನ್ನು ಉದ್ಧರಿಸುವ, ಎತ್ತರಿಸುವ ಹೊಣೆಹೊತ್ತ ಶಿವಶರಣರು ಜನಸಾಮಾನ್ಯರಿಗೆ ಎಟಕುವ ಮೃದುವಾದ ಸಹಜತೆಯ ಸೊಲ್ಲಿನಿಂದೊಡಗೂಡಿದ ಮಾತನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿ ಬಳಸಿಕೊಂಡು ಜನವಾಣಿಯನ್ನೆ ದೇವವಾಣಿಯ ಮಟ್ಟಕ್ಕೆ ಏರಿಸಿದರು. ಇಂಥ ಅರ್ಥಗರ್ಭಿತ ಮಾತುಗಳೇ ಕನ್ನಡ ಸಾಹಿತ್ಯದಲ್ಲಿ ಶಿವಶರಣರಿಂದ ರಚಿತವಾದ 'ವಚನಸಾಹಿತ್ಯ'ವೆಂಬ ವಿಶಿಷ್ಟ ಸಾಹಿತ್ಯ ಪ್ರಕಾರಕ್ಕೆ ಅಪರೋಕ್ಷವಾಗಿ ಕಾರಣೀಭೂತವಾಯಿತು.

'ಮಾತು' ಪ್ರತಿಯೊಬ್ಬರಿಗೂ ಇರಬಹುದಾದ ಸ್ವಾರ್ಜಿತ ವಸ್ತುವಾದರೂ ಎಲ್ಲರೂ ಮಾತನಾಡಿದ ಮಾತಿಗೆ ಶಕ್ತಿ, ಗೌರವ ಹಾಗೂ ಬೆಲೆ ಬರುವುದಿಲ್ಲ. ಮಾತನಾಡುವ ವ್ಯಕ್ತಿ ಪರಿಪೂರ್ಣನಾಗಿರಬೇಕು, ಪರಿಶುದ್ಧನಾಗಿರಬೇಕು ಮತ್ತು ಪರಿಪಕ್ವನಾಗಿರಬೇಕು. ಇಂಥ ಮಹಾತ್ಮರ ಅಮೃತವಾಣಿಗೆ ಮಾತ್ರ ಮೌಲ್ಯ ಪ್ರಾಪ್ತವಾಗುತ್ತದೆ. "ಅವನ ಆತ್ಮಕುಸುಮ ಅರಳಿ ಮನ ಮಕರಂದ ಸೂಸುತ್ತಿರಬೇಕು. ಹೃದಯ ಫಲವಾಗಿ ಅನುಭವ ಪರಿಪಕ್ವ ಗೊಂಡಿರಬೇಕು. ಅದ ಇನಿರಸವನ್ನು ಉಣಿಸುವಂತಿರಬೇಕು. ನಡೆ-ನುಡಿ ಸಾಮರಸ್ಯ ಹೊಂದಿ ಕಾಲ-ದೇಶ, ಮತಾತೀತವಾದ ಉನ್ನತ ವಿಚಾರ, ಉತ್ಕೃಷ್ಟ ತತ್ವ, ಸರ್ವಸಮನ್ವಯ ದೃಷ್ಟಿ, ಶ್ರೇಷ್ಠ ಸಂದೇಶವನ್ನು ಸಾರುವಂತಿರಬೇಕು. ಮಾನವನ ಬಾಳಿಗೆ ಮಾರ್ಗದರ್ಶನ ಸೂತ್ರವಾಗಿ ದಾರಿದೀಪವಾಗಿ, ಜೀವನ ಪಾವನತೆಗೆ ಕಾರಣವಾಗಬೇಕು. ಲೋಕಕಲ್ಯಾಣಕ್ಕೆ ದಿಕ್ಸೂಚಿಯಾಗಿ ಸಮಾಜ, ಸಂಸ್ಕೃತಿ, ಧರ್ಮಗಳ ಸ್ವಾಸ್ಥ್ಯವನ್ನು ಕಾಪಾಡಿಕೊಂಡು ಹೋಗುವ, ಅವುಗಳನ್ನು ಅಭಿವೃದ್ಧಿಗೊಳಿಸುವ ಸಂಜೀವಿನಿಯಾಗಿ ನಿಲ್ಲಬೇಕು."[೧] ಇಂಥ ಹಿರಿದಾದ ವ್ಯಕ್ತಿತ್ವವನ್ನು ಬೆಳೆಸಿಕೊಂಡವರು ನಮ್ಮ ಶಿವಶರಣರು. ಇವರು ನುಡಿದಂತೆ ನಡೆದರು. ಅದೇ ರೀತಿ ನಡೆದಂತೆ ನುಡಿದರು. ಹೀಗಾಗಿ ನಡೆ-ನುಡಿಯಲ್ಲಿ ಸಾಮರಸ್ಯ ತಂದ ಇವರ ಒಂದೊಂದು ಅಮೃತವಾಣಿಗೂ ಅಪಾರ ಬೆಲೆ ಬಂದಿತು. ಇವರ ಮುಖವಾಣಿಯಿಂದ ಹೊರಟ ವಾಕ್ ಸರಣಿಗಳಿಗೆ ಮುತ್ತಿನ, ಮಾಣಿಕ್ಯದ, ಸ್ಫಟಿಕದ ಬೆಲೆ ಪ್ರಾಪ್ತವಾಯಿತು. ಇವರು ನಡೆದಂತೆ ನುಡಿದ ಕೆಲ ಮುತ್ತುಗಳೇ ವಚನಗಳಾಗಿ, ಸೂಳ್ನುಡಿಗಳಾಗಿ ಸಾಹಿತ್ಯ ಶಾರದೆಯಲ್ಲಿ ರೂಪ ಪಡೆದವು. ಇಂಥ ವಾಕ್‌ಸರಣಿಗಳು ಅವರ ಅಪಾರವಾದ ಲೋಕಾನುಭವ, ಆತ್ಮಾನುಭವ, ಹಾಗೂ ಆಧ್ಯಾತ್ಮಾನುಭವಗಳಿಂದ ರಚನೆಗೊಂಡಿವೆ.

ಸೂಳ್ನುಡಿಗಳು ಎಲ್ಲ ಶಿವಶರಣರ ವಚನಗಳಲ್ಲಿ ಕಂಡುಬರುತ್ತವೆ. ಅವರಲ್ಲಿ ವಿಶಿಷ್ಟವಾಗಿ, ಬಸವಣ್ಣ, ಅಲ್ಲಮಪ್ರಭುದೇವ, ಚೆನ್ನಬಸವಣ್ಣ, ಸಿದ್ಧರಾಮ, ಅಕ್ಕಮಹಾದೇವಿಯಂಥ ಮಹಾನುಭಾವಿಗಳ ಸೂಳ್ನುಡಿಗಳಿಗೆ ಮುತ್ತಿನ ಮಾಲೆ (ಹಾರ)ಯಲ್ಲಿ ಶೋಭಿಸುವ 'ವಜ್ರದ'

ಸ್ಥಾನ-ಬೆಲೆ ಇವಕ್ಕಿದೆ. ಇವುಗಳಲ್ಲಿ ಶರಣರು ಕೈಕೊಂಡ ಧಾರ್ಮಿಕ ವಿಚಾರಕ್ರಾಂತಿ, ನಡೆ-ನುಡಿ, ನೀತಿಯನ್ನು ಅರುಹುವ ಸಮಾಜಕ್ರಾಂತಿಯ ಮಾತುಗಳು, ವೀರಶೈವ ಧರ್ಮದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಗುರು-ಲಿಂಗ-ಜಂಗಮ, ದಾಸೋಹ ಹಾಗೂ ಕಾಯಕಸಿದ್ಧಾಂತಗಳನ್ನು ತಿಳಿಸುವ ವಿಚಾರಗಳನ್ನು ಕಾಣುತ್ತೇವೆ.

ಸೂಳ್ನುಡಿಗಳ ಸ್ವರೂಪದ ಕುರಿತಾಗಿ ಹೇಳಬೇಕೆಂದರೆ, ಅಪಾರವಾದ ಲೋಕಾನುಭವ, ಆತ್ಮಾನುಭವ ಹಾಗೂ ಆಧ್ಯಾತ್ಮಾನುಭವಗಳನ್ನು ತಿಳಿಸಲು ಉಪಮೆ-ರೂಪಕ-ದೃಷ್ಟಾಂತಗಳ ಮೂಲಕ ಚಿಕ್ಕ ಚಿಕ್ಕ ವಾಕ್ಯಗಳಲ್ಲಿ ಸಂಯೋಜಿಸಿದ ಹಿರಿದಾದ ಭಾವವನ್ನೊಳಗೊಂಡ ನುಡಿ ಮುತ್ತುಗಳೆನ್ನಬಹುದು. ಇವು ಒಮ್ಮೊಮ್ಮೆ ದೀರ್ಘವಾದ ಸರಣಿ ರೂಪದಲ್ಲಿ ಇರಬಹುದಾದರೂ ಇಂಥ ಹೇಳಿಕೆ (ರಚನೆ)ಗಳು ಕ್ವಚಿತ್ತಾಗಿವೆ. ಅಪಾರವಾದ ವಚನ ಸಾಹಿತ್ಯ ಸಾಗರದಿಂದ ಇವನ್ನು ಹೆಕ್ಕಿ ತೆಗೆದಾಗ ಇವು ಅಂದಿನ ಸಮಕಾಲೀನ ಸಮಾಜದ ಅನುಭವ ಪರಿಪೂರ್ಣತೆ ಯಿಂದ ರಚನೆಗೊಂಡ ಗಾದೆ ಮಾತುಗಳಂತೆಯೂ ಕಂಡುಬರುತ್ತವೆ.

ಪ್ರಸ್ತುತ ಲೇಖನದಲ್ಲಿ ಜಗನ್ಮಾತೆ ಅಕ್ಕಮಹಾದೇವಿಯ ಅನುಭವದ ಭಾವ ಸಮುದ್ರ ದಿಂದಾಯ್ದ ಕೆಲವು ಮಹತ್ವದ ಸೂಳ್ನುಡಿಗಳನ್ನು ಉಲ್ಲೇಖಿಸುವ ಚಿಕ್ಕ ಪ್ರಯತ್ನವನ್ನಿಲ್ಲಿ ಕೈಕೊಳ್ಳಲಾಗಿದೆ;

> **"ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ,**
> **ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ,**
> **ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ,**
> **ಅಜಗಣ್ಣನ ಐದು ವಚನಕ್ಕೆ ಕೂಡಲ ಚೆನ್ನಸಂಗಮದೇವಾ**
> **ಮಹಾದೇವಿಯಕ್ಕನ ಒಂದು ವಚನ ನಿರ್ವಚನ".**

"ಷಟ್‌ಸ್ಥಲ ಚಕ್ರವರ್ತಿ ಚೆನ್ನಬಸವಣ್ಣನ ಈ ನುಡಿವಾಕ್ಯ ಶಿವಶರಣೆ ಮಹಾದೇವಿಯಕ್ಕನ ವಚನಗಳ ಮೌಲಿಕತೆಯನ್ನು ಬಿಂಬಿಸಿದೆ. ಅಕ್ಕನ ವಚನಗಳ ಅಧ್ಯಯನ ಕೈಕೊಂಡಾಗ ಅಲ್ಲಿ ಕಂಡುಬರುವ ಆಧ್ಯಾತ್ಮಿಕ, ಅನುಭಾವಿಕ, ವಸ್ತು, ಭಾಷೆ, ನಿರೂಪಣೆ ಮತ್ತು ಶೈಲಿಯ ದೃಷ್ಟಿಯಿಂದ, ವಚನರಚನಾ ಶಿಲ್ಪ ಹಾಗೂ ವಚನಸತ್ವಗಳ ದೃಷ್ಟಿಯಿಂದ ಈ ಮೇಲಿನ ಮಾತು ನಿಜವೆನಿಸುತ್ತದೆ. ಇಂಥ ಮೌಲಿಕ ಗುಣಗಳನ್ನೊಳಗೊಂಡ ಅಕ್ಕನ ವಚನಗಳಲ್ಲಿ ಕಾಣಬರುವ ವಚನಗಳೊಂದಿಗೆ ಸಾಮರಸ್ಯ ಗುಣಹೊಂದಿರುವ ಸೂಳ್ನುಡಿಗಳ ಮಹತ್ವವೂ ಅಷ್ಟೇ ಮಹತ್ವ ಪೂರ್ಣವಾದುದು.

ನೀತಿ : 'ನೀತಿ' ಮಾನವನ ಜೀವನ ನಿರ್ವಹಣೆಗೆ ದಿಕ್ಸೂಚಿಯಿದ್ದಂತೆ. "ನೀತಿಯುತವಾಗಿ ಬಾಳುವವನು ಸಜ್ಜನ, ಅನೀತಿಯ ಬೆನ್ನು ಹತ್ತಿದವ ದುರ್ಜನ; ಇದು ಇಹದ ಒಳಿತು ಮತ್ತು ಪರದ ಬೆಳಕು ತೋರುವ ದಾರಿದೀಪವೂ ಹೌದು."೨ ಇಂಥ ನೈತಿಕ ಮೌಲ್ಯವನ್ನು ಬಿಂಬಿಸುವ ಅನೇಕ ಸೂಳ್ನುಡಿಗಳು ಅಕ್ಕನ ವಚನಗಳಲ್ಲಿ ಸಮಾವೇಶಗೊಂಡಿವೆ.

೧) ಅಲ್ಲವೆಂದೆನಿಸಿಕೊಂಬುದರಿಂದ ಆ ಕ್ಷಣವೇ ಸಾವುದು ಲೇಸು.

೧) ಎಲ್ಲಿ ಹೋದರೂ ಕಲಿಗೆ ಭಯವಿಲ್ಲ : ಹಂದೆಗೆ ಸುಖವಿಲ್ಲ.

೩) ಎಲೆಯಿಲ್ಲದ ಮರನು, ಜಲವಿಲ್ಲದ ನದಿಯು, ಗುಣಿಯಲ್ಲದ ಅವಗುಣಿಯ ಸಂಗವದೇತಕ್ಕೆ ಪ್ರಯೋಜನ.

೪) ಕಲ್ಲಹೊತ್ತು ಕಡಲೊಳಗೆ ಮುಳುಗಿದೊಡೆ ಎಡರಿಂಗೆ ಕಡೆಯುಂಟೆ?
೫) ಕಂದನಲ್ಲಿ ಕುಂದನರಸುವರೆ?
೬) ಕಳವೇರಿ ಇಳಿವುದು ವೀರಂಗೆ ಮತವಲ್ಲ.
೭) ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯಾ.
೮) ಸಂತೆಯೊಳಗೆಂದು ಮನೆಯಮಾಡಿ ಶಬ್ದಕ್ಕೆ ನಾಚಿದೊಡೆಂತಯ್ಯಾ.

ಈ ತೆರನಾಗಿ ನೀತಿಯ ಸ್ವರೂಪ, ಪ್ರಯೋಜನ ಹಾಗೂ ಅದರ ಬಳಕೆಯನ್ನು ಅಕ್ಕಮಹಾದೇವಿ ಸೂಳ್ನುಡಿಗಳಲ್ಲಿ ತುಂಬಿದ್ದಾಳೆ.

ನಡೆ–ನುಡಿ : 'ಅನುಭವ ಮಂಟಪ'ದ ಅನುಭಾವಿಗಳು ತಮ್ಮ ಜೀವನದುದ್ದಕ್ಕೂ ನಡೆ–ನುಡಿಯಲ್ಲಿ ಸಾಮರಸ್ಯವನ್ನು ಬೆಳೆಸಿಕೊಂಡವರು. "ನಡೆಯಲ್ಲಿ ಎಚ್ಚತ್ತು, ನುಡಿಯಲ್ಲಿ ತಪ್ಪಿದಡೆ ಹಿಡಿದಿರ್ದ ಲಿಂಗವು ಘಟಸರ್ಪ" ವಾಗುವುದನ್ನು ಬಯಸಿದವರಲ್ಲ ಶರಣರು. ಇದರಿಂದ ಹೊರತಾಗದ ಅಕ್ಕನ ವಚನಗಳಲ್ಲಿಯೂ ನಡೆ–ನುಡಿ ಶುದ್ಧಿಯ ಸೂಳ್ನುಡಿಗಳು ಸುರಳಿಗೊಂಡಿವೆ.

೧) ಉದಯಾಸ್ತಮಾನವೆಂಬ ಕೊಳಗದಲ್ಲಿ, ಆಯುಷ್ಯವೆಂಬ ರಾಶಿಯ ಅಳೆದು ತೀರದ ಮುನ್ನ ಶಿವನ ನೆನೆಯಿರಿ.
೨) ನಡೆಯದ ನುಡಿಗಡಣ, ಮಾಡದ ಕಲಿತನ, ಚಿತ್ರದ ಸತಿಯ ಶೃಂಗಾರವು ಅದೇತಕ್ಕೆ ಪ್ರಯೋಜನ.

ಅರಿವು : 'ಅರಿವು' ಮಾನವ ಕುಲಕ್ಕೆ ಲಭಿಸಿದ ಮಹತ್ವದ ಕೊಡುಗೆ. ಇದನ್ನೇ ವಚನ ಪರಿಭಾಷೆಯಲ್ಲಿ 'ಜ್ಞಾನ' ಎನ್ನುವುದುಂಟು. ಸಾಮಾನ್ಯ ಹೇಳಿಕೆಯಾಗಿ 'ತಿಳುವಳಿಕೆ, ಬಲ್ಲವ' ಎಂದೂ ಕರೆಯಬಹುದಾಗಿದೆ. ಅರಿದಡೆ ಶರಣ : ಮರೆದಡೆ ಮಾನವ ಎನ್ನುವಲ್ಲಿ ಇಡಿಯಾಗಿ ಅರಿವಿನ ಸ್ವರೂಪದ ಭಾವ ತಿಳಿಯುತ್ತದೆ. ಅಕ್ಕನ ವಚನಗಳಿಂದಾಯ್ದು ಕೆಲವು ಅರಿವನ್ನು ಅರುಹುವ ಸೂಳ್ನುಡಿಗಳು ಹೀಗಿವೆ.

೧) ಅರಿಯದವರೊಡನೆ ಸಂಗವ ಮಾಡಿದರೆ ಕಲ್ಲಹೊಯ್ದು ಕಿಡಿಯ ತೆಗೆದುಕೊಂಡಂತೆ.
೨) ಎಲ್ಲಯೆಲ್ಲವನು ಅರಿದು ಫಲವೇನಯ್ಯಾ ತನ್ನ ತಾನರಿಯಬೇಕಲ್ಲದೆ.
೪) ನೆರೆಯರಿದುದು ಮರೆಯದು.
೫) ಅರಿದೆಡೆ ಅರಿದೆಹೆನೆಂದು ಆಗಮ ಅರೆಯಾಗಿ ಹೋಯಿತ್ತು.
೬) ಜ್ಞಾನಿಯೊಡನಾಡಿದ ಅಜ್ಞಾನಿ ಕೆಟ್ಟ ಕೇಡ ನೋಡಯ್ಯಾ.
೭) ಬಲ್ಲವರೊಡನೆ ಸಂಗವ ಮಾಡಿದರೆ ಮೊಸರು ಹೊಸೆದು ಬೆಣ್ಣೆಯ ತೆಗೆದುಕೊಂಡಂತೆ.

ಹೀಗೆ ಅರಿವಿನ ಸ್ವರೂಪ, ಮಹತ್ವಗಳನ್ನು ತಿಳಿಸಿದ್ದಾಳೆ.

ವಿಡಂಬನೆ : ಶಿವಶರಣರ ಪ್ರಮುಖ ಧ್ಯೇಯ, ಸಮಾಜ ಸುಧಾರಣೆಯಾಗಿತ್ತು. ಹೀಗಾಗಿ ಎಲ್ಲ ಶಿವಶರಣರ ವಚನಗಳಲ್ಲಿ ೧೨ನೆಯ ಶತಮಾನದಲ್ಲಿ ಬದ್ಧರೂಪ ತಾಳಿದ್ದ ಧಾರ್ಮಿಕ ಪುರೋಹಿತ್ಯ, ರಾಜಕೀಯ ಅಟ್ಟಹಾಸ, ಸಾಮಾಜಿಕ ಅಸಮಾನತೆಗಳನ್ನು ಖಂಡಿಸುವ, ವಿಡಂಬಿಸುವ ಹಾಗೂ ಅವುಗಳ ದಮನಕ್ಕಾಗಿ ಪ್ರಯತ್ನಿಸಿದ ಉಲ್ಲೇಖಗಳು ತೀರಾ ಸಾಮಾನ್ಯ. ಅಕ್ಕನ ಸೂಳ್ನುಡಿಗಳಲ್ಲಿಯೂ ಈ ಭಾವವನ್ನು ಗುರುತಿಸಬಹುದು.

೧) ಶುನಕ, ಸೂಕರ, ಕುಕ್ಕಟ, ಮಾರ್ಜಾಲಂಗಳ ಕೂಡೆ ಭುಂಜಿಸಬಹುದೆ?
೨) ಕೊಳಲದವನಿಗೆ ಸರ್ಪ ತಲೆತೂಗಿದಡೇನು? ಒಳಗಣ ವಿಷದ ಬೀಜ ಬಿಡದನ್ನಕ್ಕ.

೩) ಕಾಮಧೇನು ಕರೆವೊಡೆ ಕರುವಿನ ಹಂಗೇಕೆ?
೪) ಗೂಗೆ ಕಣ್ಣು ಕಾಣಲರಿಯದೆ ರವಿಯ ಬಯ್ವುದು.
೫) ಪರುಷ ಕೈಯಲುಳ್ಳೊಡೆ ಸಿರಿಯ ಹಂಗೇಕೆ?
೬) ಬೊಬ್ಬುಳಿಯನು ಏರಿದ ಮರ್ಕಟದಂತೆ ಹಣ್ಣ ಮೆಲಲಿಲ್ಲ, ಕುಳ್ಳಿರೆ ಠಾವಿಲ್ಲ.
೭) ಮಾಣಿಕ್ಯದ ಬೆಳಗುಳ್ಳೊಡೆ ಜ್ಯೋತಿಯ ಹಂಗೇಕೆ?
೮) ಮರೀಚಿಕಾ ಜಲದೊಳು ಅಡಗಿದ ಪ್ರಾಣಿ ವ್ಯಾಧನ ಬಲೆಗೆ ಒಳಗಹುದೆ?

ವಚನಕಾರರು ಸಮಾಜ ಸುಧಾರಣೆಯೊಂದಿಗೆ, ಸುಧಾರಿತ ಸಮಾಜಕ್ಕಾಗಿ ಒಂದು ಸಂವಿಧಾನವನ್ನೂ ರಚನೆ ಮಾಡಿದರು. ಅದುವೆ ವೀರಶೈವಧರ್ಮದ ಸಂವಿಧಾನ. ಶಿವಶರಣರ ವಚನಗಳುದ್ದಕ್ಕೂ ವೀರಶೈವಧರ್ಮದ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲ, ಗುರು-ಲಿಂಗ-ಜಂಗಮ, ಶರಣ-ಭಕ್ತ ಹಾಗೂ ಚತುರ್ವಿಧ ಮೌಲ್ಯಗಳನ್ನು ನಿರ್ದೇಶಿಸುವ ಹಲವಾರು ವಚನಗಳಲ್ಲಿ ಸೂಳ್ನುಡಿಗಳು ಹಾಸು ಹೊಕ್ಕಿವೆ. ಅಕ್ಕನ ವಚನಗಳಿಂದಾಯ್ದ ಸೂಳ್ನುಡಿಗಳು ಈ ಕೆಳಗಿನಂತಿವೆ:

೧) ಅಯ್ಯಾ ಕತ್ತಲೆಯ ಕಳೆದುಳಿದ ಸತ್ಯ ಶರಣರ ಪರಿಯನೇನೆಂಬೆನಯ್ಯಾ.
೨) ಶರಣರೆನ್ನ ಮನೆಗೆ ಬಂದಡೆ ಅವರ ಶ್ರೀಪಾದವೆನ್ನ ಹೃದಯದಲ್ಲಿ ಬಗೆದಿಟ್ಟು ಕೊಂಬೆ.
೩) ಶರಣರು ಮೆಟ್ಟಿದ ಧರೆಪಾವನ; ಶರಣರಿದ್ದ ಪುರವೇ ಕೈಲಾಸವಯ್ಯಾ.
೪) ಶರಣರ ಪಾದರಕ್ಷೆ ಶಿರದಲ್ಲಿ ತೊಂಡಿಲುಬಾಸಿಂಗವೆನಗೆ.

ವೀರಶೈವ ಧರ್ಮದಲ್ಲಿ 'ಶರಣ'ನಿಗೆ ಇರಬಹುದಾದ ಬೆಲೆಯನ್ನು ಮೇಲಿನ ಸೂಳ್ನುಡಿಗಳಿಂದ ಅರ್ಥೈಸಿಕೊಳ್ಳಬಹುದು.

ಶಿವಶರಣರು ಜನವಾಣಿಯನ್ನೆ ತಮ್ಮ ಅಭಿವ್ಯಕ್ತಿ ಮಾಧ್ಯಮಕ್ಕೆ ಬಳಸಿಕೊಂಡು ಅದನ್ನು ದೇವವಾಣಿಯ ಮಟ್ಟಕ್ಕೇರಿಸಿದರು. ಅದು ಬಾಳಿ-ಬದುಕಿದ್ದ ಜನಸಾಮಾನ್ಯರ ಕೆಲವು ಗಾದೆಮಾತುಗಳು ಅಕ್ಕನ ಸೂಳ್ನುಡಿಗಳಾಗಿವೆ.

೧) ಊರ ಸೀರೆಗೆ ಅಸಗ ತಡಬಡಗೊಂಬಂತೆ
೨) ಎಮ್ಮೆಗೊಂದು ಚಿಂತೆ, ಸಮಗಾರನಿಗೊಂದು ಚಿಂತೆ
೩) ಒಲಿದುದು ಓಸರಿಸದು
೪) ಕಟ್ಟಿದ ಕೆರೆಗೆ ಕೋಡಿ ಮಾಣದು
೫) ತುಂಬಿದುದು ತುಳುಕದು
೬) ನಂಬಿದುದು ಸಂದೇಹಿಸದು
೭) ಬಲದಾಯಿ ಮುದ್ದ ಬಲ್ಲಳೆ?
೮) ಬೆಂದ ಹುಣ್ಣಿಗೆ ಬೇಗೆಯನು ಇಕ್ಕುವರೆ?
೯) ಹೊಳೆಯಿಳಿದ ಬಳಿಕ ಅಂಬಿಗಂಗೆ ಏನುಂಟು?

ಸುಮಾರು ೮೦೦ ವರ್ಷಗಳ ಹಿಂದೆ ಬಳಕೆಯಾದ ಈ ನುಡಿಗಳು ಇಂದಿಗೂ ಉಳಿದುಕೊಂಡು ಬಂದು ಇಂದಿನ ಸಮಾಜಕ್ಕೂ ಭಾಷೆಗೂ ಗಡಸುತನವನ್ನು ಒದಗಿಸಿವೆ.

ಹೀಗೆ ಅಕ್ಕನ ಸೂಳ್ನುಡಿಗಳಲ್ಲಿ ಲೋಕಾನುಭವ, ಆತ್ಮಾನುಭವ ಹಾಗೂ ಆಧ್ಯಾತ್ಮಾನುಭವಗಳ ತ್ರಿವೇಣೀ ಸಂಗಮ ರಚಿತವಾಗಿದೆ, ದೇಶೀ ಭಾಷೆಯ ಸೊಗಸನ್ನು ಮೈಗೂಡಿಸಿ

ಕೊಂಡು ರಚನೆಯಾದ ಇವುಗಳು ಜನಸಾಮಾನ್ಯರಿಗೆ ಉತ್ತಮ ಜೀವನ ಪಥವನ್ನು ತಿಳಿಸುವ ದಿಕ್ಸೂಚಿಗಳಾಗಿವೆ. ಹೀಗಾಗಿ ಮಾನವೀಯತೆಯನ್ನು ಬಿಂಬಿಸುವ ಮನೋಧರ್ಮವನ್ನೊಳಗೊಂಡಿರುವ ಬೇರೆ ಬೇರೆ ವಚನಕಾರರ ಸೂಳ್ನುಡಿಗಳ ಅಧ್ಯಯನವಿಂದು ವಿಶ್ಲೇಷಣಾತ್ಮಕವಾಗಿ ಸಾಗಿದರೆ ವಚನ ಸಾಹಿತ್ಯಕ್ಕೆ ಇನ್ನೂ ಹೆಚ್ಚಿನ ಬೆಲೆ ಪ್ರಾಪ್ತವಾಗುವುದರಲ್ಲಿ ಸಂದೇಹವಿಲ್ಲ.

೧. ಡಾ. ವೀರಣ್ಣ ರಾಜೂರ : ಶರಣರ ನುಡಿಮುತ್ತುಗಳು – ಪರಂಜ್ಯೋತಿ ಸಂಪುಟ ೧೨, ಸಂ–೧–೨
೨. ಡಾ. ವೀರಣ್ಣ ರಾಜೂರ : ವಚನ ಅಧ್ಯಯನ, ಪುಟ–೧೪೮ (೧೯೯೪)

೧೬. ಭಕ್ತಿಯಿಂದ ಬಂಡಾಯದವರೆಗೆ

(ಅಕ್ಕಮಹಾದೇವಿ ಕುರಿತು ಅಧ್ಯಯನಗಳ ತಾತ್ವಿಕ ಸ್ವರೂಪ)

●

ಡಾ. ಎಂ.ಎಸ್. ಆಶಾದೇವಿ

ಉಜ್ವಲವಾದ ಒಂದು ವ್ಯಕ್ತಿತ್ವವನ್ನು ಗ್ರಹಿಸುವುದೆಂದರೆ ದೇಶ ಕಾಲಾತೀತವಾಗಿ ಮನುಷ್ಯ ಸ್ವಭಾವದ ದೌರ್ಬಲ್ಯಗಳನ್ನು, ವ್ಯವಸ್ಥೆಯ ಮಿತಿಗಳನ್ನು ಮೀರಲು ನಡೆಸಿದ ಮಹಾಗಾಥೆ ಯೊಂದನ್ನು ಓದಿದಂತೆ. ಮನುಷ್ಯರ ಅಸೀಮ ಶಕ್ತಿ-ಸಾಧ್ಯತೆಗಳನ್ನು ಮನದಟ್ಟು ಮಾಡಿಕೊಳ್ಳುವ ಸಲುವಾಗಿಯೇ ಸಾಧಕರ ಜೀವನವನ್ನು ಕುರಿತಂತೆ ಕೊನೆಯಿಲ್ಲದ ಆಸಕ್ತಿ ಸಮಾಜದಲ್ಲಿ ಉದ್ದಕ್ಕೂ ಉಳಿದುಕೊಂಡುಬಂದಿದೆ. ಆದರೆ ನಾಗರಿಕ ಸಮಾಜವೊಂದು ರೂಪಿಸಿ ಕೊಂಡಿರುವ ಏನೆಲ್ಲ ಮಾನದಂಡ ಮತ್ತು ಮಿತಿಗಳನ್ನು ಮೀರಿ ಬೆಳೆದ ವ್ಯಕ್ತಿತ್ವವೊಂದನ್ನು ನಾವು ಆ ವ್ಯಕ್ತಿತ್ವದ ನಿಜ ವಿಸ್ತಾರದ ನೆಲೆಯಲ್ಲಿ ಗುರುತಿಸುತ್ತಿರುತ್ತೇವೆಯೋ ಅಥವಾ ನಮ್ಮ ಸಂದರ್ಭದ ಪ್ರಶ್ನೆ, ನಿರೀಕ್ಷೆ, ಒತ್ತಡಗಳ ಹಿನ್ನೆಲೆಯಲ್ಲಿ ನಮಗೆ ಬೇಕಾದ ವ್ಯಕ್ತಿತ್ವದ ಚಹರೆಗಳನ್ನು ಮಾತ್ರ ಆ ಉಜ್ವಲ ವ್ಯಕ್ತಿತ್ವದಲ್ಲಿ ಕಂಡುಕೊಳ್ಳಲು ಪ್ರಯತ್ನಿಸುತ್ತಿರುತ್ತೇವೆಯೋ?

ಎಲ್ಲ ಅಸಾಧಾರಣ ವ್ಯಕ್ತಿತ್ವಗಳನ್ನು ಕುರಿತಂತೆಯೂ ಈ ಪ್ರಶ್ನೆಗಳಿವೆ. ಕೊನೆಗೂ ಆ ಪ್ರಭಾವಶಾಲಿ ಚೇತನವು ನಮ್ಮ ಈ ಗಳಿಕೆಯ ತುರ್ತುಗಳಿಗೆ ಸ್ಪಂದಿಸುತ್ತದೆಯೋ ಇಲ್ಲವೋ ಎನ್ನುವುದು ಮೊದಲನೆಯ ನಿರೀಕ್ಷೆ; ಅದರ ಕಾಲಾತೀತತೆಯನ್ನು ಕುರಿತದ್ದು ಎರಡನೆಯ ನಿರೀಕ್ಷೆ. ಇವು ಒಂದನ್ನೊಂದು ಸಂಪೂರ್ಣವಾಗಿ ಅವಲಂಬಿಸಿವೆ ಎನ್ನುವುದು ಸತ್ಯವಾದರೂ ಆದ್ಯತೆಯ ದೃಷ್ಟಿಯಿಂದ ಬಹುಶಃ ಹಿಂದು ಮುಂದಾಗಲಾರವು.

ಸಾಹಿತ್ಯದ ವ್ಯಾಖ್ಯಾನವೇ ಹಿಂದೆಂದೂ ಕಾಣದ ವಿಸ್ತಾರವನ್ನು ಪಡೆಯುತ್ತಿರುವ, ಸಾಹಿತ್ಯದ ಹಲವು ಬಗೆಯ ಓದುಗರು ಚಾಲ್ತಿಗೆ ಬರುತ್ತಿರುವ, ಸಾಹಿತ್ಯೇತರ ಮಾನದಂಡಗಳೂ ಕಾವ್ಯದ ಅನನ್ಯತೆಯನ್ನು ನಿರ್ಧರಿಸುತ್ತಿರುವ ಈ ದಿನಗಳಲ್ಲಿ ಅಕ್ಕಮಹಾದೇವಿಯನ್ನು ಕುರಿತ ಅಧ್ಯಯನಗಳ ಪರಿಶೀಲನೆಯೆನ್ನುವುದು ಅನೇಕ ಕಾರಣಗಳಿಗಾಗಿ ಮುಖ್ಯವಾದುದೂ ಕುತೂಹಲಕರವಾದುದೂ ಆಗಿದೆ.

ಕನ್ನಡ ಸಾಹಿತ್ಯ ಪರಂಪರೆಯಲ್ಲಿಯೇ ಸಕಾರಣವಾಗಿ ನಿರಂತರ ಆರಾಧನೆಗೆ ಒಳಗಾದವರು ಅಕ್ಕಮಹಾದೇವಿ. ಅಕ್ಕನ ಪ್ರಸ್ತಾಪವಿಲ್ಲದೆ ವಚನ ಸಾಹಿತ್ಯವನ್ನು, ಕನ್ನಡ ಮಹಿಳಾ ಸಾಹಿತ್ಯವನ್ನು,

ಕನ್ನಡದ ಶ್ರೇಷ್ಠ ಕವಿಗಳನ್ನು ಕರಿತು ಯಾವ ಲೇಖನವೂ ಪೂರ್ಣಗೊಳ್ಳುವುದಿಲ್ಲ. ಅವಳ ಅಸೀಮ ಭಕ್ತಿಯನ್ನು, ಅನುಪಮವಾದ ಕಾವ್ಯಶಕ್ತಿಯನ್ನು, ಲೋಕೋತ್ತರವಾದ ಪ್ರೀತಿಯನ್ನು ವರ್ಣಿಸಲು ಕನ್ನಡ ವಿದ್ವಾಂಸರು ಬಳಸದ ವಿಶೇಷಣಗಳಿಲ್ಲ. ಅವಳನ್ನು ಕುರಿತ ಲೇಖನಗಳನ್ನೆಲ್ಲ ಒಟ್ಟಿಗೇ ಒಂದೇ ಬೀಸಿನಲ್ಲಿ ಓದಿದರೆ ಹೆಣ್ಣಿಗೆ ಆ ತನಕ ಆದ ಅನ್ಯಾಯವನ್ನು ಈಗಲೂ ಆಗುತ್ತಿರುವುದನ್ನು, ಮುಂದೆಯೂ ಆಗಬಹುದಾದ್ದನ್ನು ಅಕ್ಕಮಹಾದೇವಿ ಒಬ್ಬಳೇ ಒಟ್ಟಿಗೇ ಗೆದ್ದು ಬಿಟ್ಟಿದ್ದಾಳೆ ಎಂದು ಒಂದು ಗಳಿಗೆ ನಮಗೆ ಅನ್ನಿಸಿಬಿಡುತ್ತದೆ.

ಅಕ್ಕಮಹಾದೇವಿಯನ್ನು ಕುರಿತು ಕನ್ನಡದಲ್ಲಿ ಬಂದಿರುವ ಅಧ್ಯಯನಗಳನ್ನು ಸ್ಥೂಲವಾಗಿ ಎರಡು ಮಾದರಿಗಳಲ್ಲಿ ಗುರುತಿಸಬಹುದು. ಅವೆಂದರೆ ಭಕ್ತಿ ಹಾಗೂ ಬಂಡಾಯ ಮಾದರಿಗಳು; ('ಜೀವಭಕ್ತಿ'ಯ ಹಾಗೂ 'ಜೀವಕಾಮ'ದ ಪರಿಕಲ್ಪನೆಗಳಲ್ಲಿಯೂ ಈ ಮಾದರಿ ಗಳನ್ನು ಗುರುತಿಸಬಹುದು). ಲೇಖನಗಳಲ್ಲಿ ಶೇಕಡಾ ೯೦ರಷ್ಟು ಮೊದಲ ಮಾದರಿಗೆ ಸೇರುತ್ತವೆ. ಇವು ೮೦ರ ದಶಕದಿಂದೀಚೆಗೆ ಬಂದವು. ಎರಡೂ ಮಾದರಿಗಳಲ್ಲಿ ಸಾಮಾನ್ಯ ವಾಗಿರುವ ಒಂದು ಮುಖ್ಯ ಅಂಶವೆಂದರೆ ಆಕೆ ಅಭಿಜಾತ ಕವಿ ಎನ್ನುವುದು. ಕುತೂಹಲಕರ ಅಂಶವೆಂದರೆ ಆಕೆ ಶ್ರೇಷ್ಠ ಕವಯಿತ್ರಿಯೆಂದು ಬೇರೆ ಬೇರೆ ಕಾರಣಗಳನ್ನು ಕೊಟ್ಟು ಸಮರ್ಥಿಸಿ ಕೊಳ್ಳಲು ಎರಡೂ ಮಾದರಿಗಳು ಉದಾಹರಿಸುವ ವಚನಗಳು ಕೂಡ ಒಂದೇ ಆಗಿವೆ.

ಭಕ್ತಿ ಮಾದರಿಯ ಬರಹಗಳ ದೃಷ್ಟಿಕೋನವನ್ನು ಈಗ ಗಮನಿಸಬಹುದು. ನಿರ್ದಿಷ್ಟ ಲೇಖನ ಉದಾಹರಿಸದೆ ಒಟ್ಟಾರೆಯಾಗಿ ಅವುಗಳ ಉದ್ದೇಶ ಮತ್ತು ಆಶಯಗಳನ್ನು ಕುರಿತ ಕೆಲವು ಸಾಮಾನ್ಯ ಲಕ್ಷಣಗಳನ್ನು ಚರ್ಚಿಸುವ ಪ್ರಯತ್ನ ಮಾಡಬಹುದು. ಅವುಗಳ ತಾತ್ವಿಕ ಭಿತ್ತಿಯನ್ನು ಗುರುತಿಸುವುದು ಇಲ್ಲಿನ ಉದ್ದೇಶ. ಫ.ಗು. ಹಳಕಟ್ಟಿಯವರಿಂದ (೧೯೨೬) ಶುರುವಾದ ಈ ಅಧ್ಯಯನ ಮಾದರಿ ೭೦ರ ದಶಕದವರೆಗೂ ಮುಂದುವರೆಯಿತು. ಮಾತ್ರವಲ್ಲ ಈಗಲೂ ಕ್ವಚಿತ್ತಾಗಿ ಈ ಮಾದರಿಯ ಬರಹಗಳು ನಮಗೆ ಕಾಣಸಿಗುತ್ತವೆ. ಅಕ್ಕಹಾದೇವಿಯನ್ನು ಕುರಿತು ಬಹುಪಾಲು ಲೇಖನಗಳನ್ನು ಸೃಷ್ಟಿಸಿರುವ ಈ ಮಾದರಿಯ ಬರಹಗಳನ್ನು ನಾವು ತುಂಬ ಎಚ್ಚರಿಕೆಯಿಂದ ಗಮನಿಸಬೇಕು.

ಮೊದಲಿಗೆ ಈ ಅಧ್ಯಯನಗಳನ್ನು ನಾವು ಆಧುನಿಕ ಕನ್ನಡ ವಿಮರ್ಶೆಯ ಮೊದಲನೆಯ ಘಟ್ಟವಾದ 'ಪರಂಪರೆ ಮತ್ತು ಪರಿಸರ ನಿರ್ಮಾಣ'ದ ಹಿನ್ನೆಲೆಯಲ್ಲಿಟ್ಟು ನೋಡಬೇಕು. ವಸಾಹತುಶಾಹಿ ಅನುಭವ ಮತ್ತು ತತ್ಪರಿಣಾಮವಾದ ಸಾಂಸ್ಕೃತಿಕ ಸಂಘರ್ಷವು ನಮ್ಮನ್ನು ಪರಂಪರೆಯ ರಾಚನಿಕ ಪ್ರಯತ್ನಗಳಿಗೆ ಒತ್ತಾಯಿಸಿದ್ದು ನಿಜವಷ್ಟೆ. Never in an literary history was there so much obsession with the past, such glorificaiton and defence, such introspection and criticism[೧] ಎನ್ನುವ ಶಿಶಿರಕುಮಾರ ದಾಸ್ ಅವರ ವ್ಯಾಖ್ಯಾನವು ಕನ್ನಡದ ಮಾತ್ರವಲ್ಲ, ಒಟ್ಟು ಭಾರತೀಯ ನವೋದಯ ಸಂದರ್ಭದ ಅಗತ್ಯ-ಆಶಯಗಳನ್ನು ಶಕ್ತವಾಗಿ ಹೇಳುತ್ತದೆ. ಆದರೆ ಈ ಹೇಳಿಕೆಯ ಕೊನೆಯ ಮಾತಾದ 'ವಿಮರ್ಶೆ'ಯು ಎಲ್ಲ ಹೊತ್ತಿಗೂ ಸಾಧ್ಯವಾಯಿತೆಂದು ಹೇಳಲಾಗುವುದಿಲ್ಲ.

ಭಾರತೀಯ ಸಮಾಜದಲ್ಲಿ ಆಗ ಆರಂಭವಾದ ಸಾಮಾಜಿಕ ಪುನರುಜ್ಜೀವನದ ಆಶಯಗಳ ಹಿನ್ನೆಲೆಯಲ್ಲಿ ಇಂಥವೇ ಆಶಯಗಳ ಸಾಕಾರ ರೂಪದಂತಿದ್ದ ವಚನ ಸಾಹಿತ್ಯ ಸಹಜವಾಗಿಯೇ ಅಭಿಮಾನಕ್ಕೆ ಪಾತ್ರವಾಯಿತು. ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪರಂಪರೆ

ನಿರ್ಮಾಣದ ಗುರುತರ ಜವಾಬ್ದಾರಿ ಹೊತ್ತಿದ್ದ ನಾಡಿನ ವಿದ್ವಾಂಸರಲ್ಲಿ ವಚನ ಸಾಹಿತ್ಯ ಅಗತ್ಯವಾದ ಆತ್ಮವಿಶ್ವಾಸವನ್ನು ತುಂಬಿತು. ಆದ್ದರಿಂದ ಈ ವರ್ಗಕ್ಕೆ ಸೇರಿದ ಅಧ್ಯಯನಗಳ ಉದ್ದೇಶ ಸ್ಪಷ್ಟವಾಗಿದೆ. ಒಂದು ಸ್ಥಾಪಿತ ನಿಲುವಿನಿಂದ ಅವು ಹೊರಡುತ್ತವೆ. ಸರಳವಾಗಿ ಹೇಳಬೇಕೆಂದರೆ ಅಕ್ಕಮಹಾದೇವಿ ವಚನ ಚಳವಳಿಯ ಸಾಧನೆಯ ಶಿಖರವಾಗಿ, ಶೋಭಾಯಮಾನ ರತ್ನವಾಗಿ, ಸ್ತ್ರೀ ಸಮಾನತೆಯ ಪ್ರತೀಕವಾಗಿ ಇಲ್ಲಿ ಕಾಣಿಸಿಕೊಳ್ಳುತ್ತಾಳೆ.

ಎಂ.ಆರ್. ಶ್ರೀನಿವಾಸಮೂರ್ತಿ ಅವರ 'ವಚನ ಧರ್ಮಸಾರ' ಈ ಮಾದರಿಗೆ ಅತ್ಯುತ್ತಮ ಪ್ರಾತಿನಿಧಿಕ ಬರಹ. ಶಿಶಿರಕುಮಾರ ದಾಸ್ ಅವರು ಹೇಳಿದ ವೈಭವೀಕರಣ, ಸಮರ್ಥನೆ ಮತ್ತು ಮೋಹಕ್ಕೆ ಇಲ್ಲಿ ಹೆಚ್ಚಿನ ಒತ್ತು ದೊರೆಯಿತು. ಸಂದರ್ಭದ ಒತ್ತಡ ನಿರೀಕ್ಷೆ ಇದ್ದದ್ದೂ ಇದರ ಪರವಾಗಿಯೇ. ಆದ್ದರಿಂದಲೇ ಆ ಕಾಲಘಟ್ಟದ ಅಕ್ಕಮಹಾದೇವಿಯನ್ನು ಕುರಿತು ಯಾವ ಲೇಖನವನ್ನು ನೋಡಿದರೂ, 'ಹೆಣ್ಣಿನ ಸ್ವಾತಂತ್ರ್ಯ ಸಾಧನೆಯ ಮಹಾ ಪ್ರಕರಣ' ಎನ್ನುವ ಎಂ.ಆರ್.ಶ್ರೀಯವರ ಹೇಳಿಕೆಯ ವಿಭಿನ್ನ ಆವೃತ್ತಿಗಳೇ ಎದ್ದು ಕಾಣಿಸುತ್ತವೆ. ಈ 'ಮಹಾಪ್ರಕರಣ'ದ ಒಳಗಿನ ಸಂಘರ್ಷ, ದ್ವಂದ್ವಗಳನ್ನು ಪರಿಶೀಲಿಸುವ ಗೋಜಿಗೇ ಅವು ಹೋಗುವುದಿಲ್ಲ. ವ್ಯಕ್ತಿಪೂಜೆಯ ಪರಾಕಾಷ್ಠೆಯ ಸ್ಥಿತಿ ಈ ಲೇಖನಗಳ ಮೂಲಗುಣ.

ಅಕ್ಕಮಹಾದೇವಿಯ ಭಕ್ತಿ ಮತ್ತು ಪ್ರೀತಿಯನ್ನು ಅಖಂಡವಾಗಿ ನೋಡುವುದರಲ್ಲಿಯೇ ಈ ಲೇಖಕರಿಗೆ ಆಸಕ್ತಿಯಿದೆ. 'ದೇಹ'ವೆನ್ನುವುದು ಅವಳನ್ನು ಮತ್ತೆ ಮತ್ತೆ ಕಾಡಿದರೂ ಕೊನೆಗೂ ದೇಹದ ಹಂಗಿನಿಂದ ಆಕೆ ಪಾರಾಗಿ ಆಧ್ಯಾತ್ಮದ ದಾರಿಯಲ್ಲಿ ದೃಢವಾಗಿ ನಡೆದಳು. ಭಕ್ತಿ ಮತ್ತು ಪ್ರೀತಿ ಎರಡಿಲ್ಲದಂತೆ ಒಂದಾದುವೇ ಅವಳ ಬದುಕಿನ ಸಾಧನೆ. ಅಂದರೆ ಭಕ್ತಿಯ – ಆಧ್ಯಾತ್ಮದ ಆವರಣದೊಳಗೇ ಅಕ್ಕಮಹಾದೇವಿಯ ಇಡೀ ಬದುಕನ್ನು ನೋಡಲಾಗುತ್ತದೆ. 'ಭವಿ'ಯಾಗಿ ಆಕೆ ಎದುರಿಸಿದ ಸಮಸ್ಯೆ ತಲ್ಲಣಗಳನ್ನು 'ಭವಿ'ಯಾಗಿಯೇ ಆಕೆ ಪರಿಹರಿಸಿ ಕೊಳ್ಳಲು ನಡೆಸಿರಬಹುದಾದ ಹೋರಾಟಗಳನ್ನು ಕುರಿತು ಈ ಮಾದರಿ ದಿವ್ಯ ಮೌನ ತಾಳುತ್ತದೆ.

ವಚನಕಾರರ ಜೊತೆಯಲ್ಲಿದ್ದೂ ಅವರಿಗಿಂತ ಅಕ್ಕ ಭಿನ್ನವಾಗಿರಬಹುದಾದ ಸಾಧ್ಯತೆಯನ್ನು ಹುಡುಕುವುದರಲ್ಲಿ, ಗಮನಿಸುವುದರಲ್ಲಿ ಈ ಅಧ್ಯಯನಗಳಿಗೆ ಆಸಕ್ತಿಯಿಲ್ಲ. ನಮ್ಮ ಪರಂಪರೆಯ ರೋಮಾಂಚಕಾರಿ ವ್ಯಕ್ತಿತ್ವವೊಂದನ್ನು ಕಟ್ಟಿಕೊಳ್ಳುವ ವಿಧಾನವನ್ನು ನಮ್ಮ ವರ್ತಮಾನ ಮತ್ತು ವ್ಯವಸ್ಥೆಗಳು ಒಟ್ಟಾಗಿ ನಿಯಂತ್ರಿಸುತ್ತವೆ ಎನ್ನುವ ವಿವರ ಎಲ್ಲಿ ಮುಖ್ಯವಾಗಿ ಕಾಣಿಸುತ್ತದೆ. ಅಕ್ಕನನ್ನು ಸಮೃದ್ಧ ಪರಂಪರೆಯ ಭಾಗವಾಗಿ ನೋಡುವುದರಲ್ಲಿ ಈ ಮಾದರಿಯ ಅಧ್ಯಯನಗಳಿಗೆ ಇರುವ ಆಸಕ್ತಿ ಅವಳ ಇಡೀ ಬದುಕನ್ನು ವ್ಯಕ್ತಿಗತ ನೆಲೆಯಲ್ಲಿ ನೋಡುವುದರಲ್ಲಿ ಇಲ್ಲ. ಅಕ್ಕನ ಬದುಕೆನ್ನುವುದು 'ಸ್ವಾತಂತ್ರ ಸಾಧನೆಯ ಮಹಾ ಪ್ರಕರಣ' ಎಂದು ಮೆಚ್ಚಿ ಕೊಂಡಾಡುತ್ತಿರುವಾಗಲೂ ತಮ್ಮ ಲೇಖನಗಳ ವಿವರಗಳಲ್ಲಿ ಆಕೆ ಕೌಶಿಕನನ್ನು ತ್ಯಜಿಸಿದ್ದನ್ನಾಗಲೀ, ವ್ಯವಸ್ಥೆಯನ್ನು ಪ್ರಶ್ನಿಸಿದ್ಧನ್ನಾಗಲೀ, ಆಯ್ಕೆಯ ಬದುಕು ಮತ್ತು ವ್ಯಕ್ತಿತ್ವದ ಸ್ವೀಕಾರಕ್ಕಾಗಿ ನಡೆಸಿದ ಹೋರಾಟವನ್ನಾಗಲೀ ಸಾಮಾಜಿಕ ಹಿನ್ನೆಲೆಯಲ್ಲಿ ಗಂಭೀರವಾಗಿ ಚರ್ಚಿಸುವ ಪ್ರಯತ್ನಗಳನ್ನು ಈ ಮಾದರಿ ಮಾಡುವುದಿಲ್ಲ.

ಏಕೆಂದರೆ ಇದು ಮೇಲ್ನೋಟಕ್ಕೆ ಕಾಣಿಸುವಷ್ಟು ಸರಳವಾದುದಲ್ಲ. ಪ್ರತ್ಯಕ್ಷವಾಗಿ ಪರಂಪರೆಯ ನಿರ್ಮಾಣದ ಕೆಲಸವನ್ನು ಮಾಡುತ್ತಲೇ ಪರೋಕ್ಷವಾಗಿ ಇನ್ನೊಂದು ನೆಲೆಯಲ್ಲಿ ಇವು ಕಾರ್ಯೋನ್ಮುಖವಾಗಿರುವಂತೆ ಭಾಸವಾಗುತ್ತದೆ. ಅಕ್ಕಮಹಾದೇವಿ ನಡೆಸಿದ ಪ್ರಯತ್ನ

ಗಳನ್ನೆಲ್ಲ ಧಾರ್ಮಿಕ ಚೌಕಟ್ಟಿನೊಳಗೆ, ಭಕ್ತಿ ಪರಂಪರೆಯೊಳಗೆ ಕೂರಿಸುವ ಪ್ರಯತ್ನವನ್ನು ಇವು ಶ್ರದ್ಧೆಯಿಂದ ಮಾಡುತ್ತವೆ. ಆಕೆ ಎತ್ತುವ ಪ್ರಶ್ನೆಗಳನ್ನು ಶುದ್ಧ ವೈಚಾರಿಕ, ಸಾಮಾಜಿಕ ಪ್ರಶ್ನೆಗಳಾಗಿ ಚರ್ಚಿಸಲು ಇವು ಹಿಂಜರಿಯುತ್ತವೆ. ಆಕೆಯ ಬೆತ್ತಲೆಯ ವಿಷಯವನ್ನೇ ನೋಡೋಣ. ಅಕ್ಕಮಹಾದೇವಿಯ ಬೆತ್ತಲೆಯನ್ನು ಭಕ್ತಿಯ ಪರಾಕಾಷ್ಠೆಯ ಅಂಗವಾಗಿ, ದೇಹದ ಹಂಗನ್ನು ಮೀರುವ ಪ್ರಯತ್ನವಾಗಿ ಈ ಅಧ್ಯಯನಕಾರರು ಒಪ್ಪಿಕೊಳ್ಳ ಬಲ್ಲರೇ ಹೊರತು ತೀವ್ರವಾದ ಪ್ರತಿಭಟನೆಯ ಅಂಗವಾಗಿ ಅದನ್ನು ನೋಡಲಾರರು. ಆದ್ದರಿಂದಲೇ ಲೈಂಗಿಕತೆಯ ಅಕ್ಕನ ವಚನಗಳನ್ನು ದುರ್ಲಕ್ಷಿಸಿ ಅವರು ದೇಹವನ್ನು ನಿರಾಕರಿಸುವ ವಚನ ಗಳನ್ನು ಮಾತ್ರ ವೈಭವೀಕರಿಸುತ್ತಾರೆ. ಜೊತೆಗೆ ಅವಳನ್ನು ವಚನ ಚಳವಳಿಯ ಸಮಷ್ಟಿಯಲ್ಲಿ ನೋಡುವುದರ ಮೂಲಕವೂ ಅವರು ಅನೇಕ ಪ್ರಶ್ನೆಗಳಿಂದ ಸುರಕ್ಷಿತವಾಗಿ ಪಾರಾಗಿ ಬಿಡುತ್ತಾರೆ.

ಈ ಅಂಶವು ಅನಿವಾರ್ಯವಾಗಿ ಸ್ತ್ರೀವಾದಿ ಚಳವಳಿಗೆ ತಳುಕು ಹಾಕಿಕೊಳ್ಳುತ್ತದೆ. ಹೆಣ್ಣೊಬ್ಬಳು ವ್ಯವಸ್ಥೆಯನ್ನು ಪ್ರಶ್ನಿಸುವ – ಬದಲಾಯಿಸುವ ಮಹತ್ವಾಕಾಂಕ್ಷೆಯಿಂದಲೋ, ವೈಯಕ್ತಿಕ ತುರ್ತಿನಿಂದಲೋ ನಡೆಸಿದ ಹೋರಾಟವನ್ನು, ಕಾಲದ ಅಂತರದಲ್ಲಿ ಮತ್ತೆ ವ್ಯವಸ್ಥೆ ಎಷ್ಟು ಶಕ್ತವಾಗಿ ವ್ಯವಸ್ಥೆಯ ಚೌಕಟ್ಟಿನೊಳಗೆ ಅಳವಡಿಸಲು ಪ್ರಯತ್ನಿಸುತ್ತದೆ ಎನ್ನುವ ಸಂಗತಿಯಂತೂ ನನ್ನನ್ನು ಮತ್ತೆ ಮತ್ತೆ ಕಾಡುತ್ತದೆ. ಪರಂಪರೆ ನಿರ್ಮಾಣದ ಆ ಇಡೀ ಸನ್ನಿವೇಶದಲ್ಲಿ ಅಕ್ಕಮಹಾದೇವಿಯಂತಹ ಸಂಕ್ರಮಣ ಘಟ್ಟವೊಂದರ ಪ್ರತಿನಿಧಿಯ ವ್ಯಕ್ತಿತ್ವವನ್ನು ಅದರೆಲ್ಲ ಸಮೃದ್ಧತೆ, ಶಕ್ತಿ, ಸೌಂದರ್ಯ, ಸಂಕೀರ್ಣತೆ, ದ್ವಂದ್ವ, ನಿರ್ಭೀತಿ, ಪ್ರಾಮಾಣಿಕತೆ ಈ ಎಲ್ಲ ಬಹುಮುಖಿ ಆಯಾಮಗಳನ್ನು ಅವುಗಳ ಸಾಂದ್ರತೆ ಮತ್ತು ತೀವ್ರತೆಯಲ್ಲಿ ಗುರುತಿಸುವುದಿಲ್ಲ. ಬದಲಿಗೆ ಸರಳ ಭಕ್ತಿ ಚಳವಳಿಯ ಆಯಾಮವೊಂದರಲ್ಲೇ ಸ್ಥಾಪಿಸಲು ನಡೆಸಿದ ಪ್ರಜ್ಞಾಪೂರ್ವಕ ಮತ್ತು ಅಪ್ರಜ್ಞಾಪೂರ್ವಕ ಪ್ರಯತ್ನವಾಗಿಯೇ ಮೊದಲ ಮಾದರಿಯ ಬಹುಪಾಲು ಲೇಖನಗಳು ಕಾಣಿಸುತ್ತವೆ. ವ್ಯಕ್ತಿತ್ವವೊಂದರ ಪರಿಣಾಮಕಾರಿ ಲಯಗಳ ವೈವಿಧ್ಯವನ್ನು, ಅದರ ಹೊಸತನವನ್ನು ಮೆಟ್ಟಿಕೊಳ್ಳುತ್ತಲೇ ಅದನ್ನು ವ್ಯವಸ್ಥೆಯ ಎಲ್ಲೆಯೊಳಗೆ ತರುವ ಯತ್ನಗಳು ಕಾಲದ ಅಂತರದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತವೆ.

ಈ ಎಲ್ಲ ಅಂಶಗಳನ್ನು ಚರ್ಚಿಸುತ್ತಿರುವಾಗ ಈ ಮಾದರಿಯ ಲೇಖನಗಳ ಯಶಸ್ಸ ನ್ನಾಗಲೀ ಅರ್ಥಪೂರ್ಣತೆಯನ್ನಾಗಲೀ ನಾನು ನಿರಾಕರಿಸುತ್ತಿಲ್ಲ. ಪ್ರಭಾವಶಾಲಿ ವ್ಯಕ್ತಿತ್ವ ವೊಂದರ ಗ್ರಹಿಕೆಯ ವಿಧಾನಗಳನ್ನು ನಿರ್ಬಂಧಿಸುವ ರೂಪಿಸುವ ಸಾಮಾಜಿಕ-ಸಾಂಸ್ಕೃತಿಕ ಯಾಜಮಾನ್ಯ ಶಕ್ತಿಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ. ಆ ಗಳಿಕೆಯ ಅಗತ್ಯವನ್ನು ಪೂರೈಸಿದವು ಎನ್ನುವ ಸರಳ ಸತ್ಯದಾಚೆಗಿನ ವಿವರಗಳನ್ನು ಗುರುತಿಸುವ ಸ್ಥೂಲ ವಾದ ಇದು.

* * *

ಬಂಡಾಯ ಮಾದರಿಯ ಬರಹಗಳು ಆರಂಭವಾದದ್ದು ಬಹುಶಃ ಜಿ.ಎಸ್. ಶಿವರುದ್ರಪ್ಪನವರ 'ಅಕ್ಕಮಹಾದೇವಿ ವಚನ ಚಳವಳಿಯಲ್ಲೊಂದು ಭಿನ್ನ ಸ್ವರ' (೧೯೮೨) ಎನ್ನುವ ಲೇಖನದಿಂದ. ಅಕ್ಕನ ಬದುಕನ್ನು ವೈಯಕ್ತಿಕ ನೆಲೆಯಿಂದ ನೋಡುವ ಮೊದಲ ಯತ್ನವಿದು. ಬಂಡಾಯವೇ ಅಕ್ಕನ ವ್ಯಕ್ತಿತ್ವದ ಮೂಲ ದ್ರವ್ಯ ಎನ್ನುವ ನಿಲುವು ಈ ಬರಹ ಗಳಲ್ಲಿ ಪ್ರಧಾನವಾಗಿ ಕಾಣಿಸುತ್ತದೆ. ಈ ಮಾದರಿಯ ಲೇಖನಗಳು ಎರಡು ಅಂಶಗಳನ್ನು ಮುಖ್ಯವಾಗಿ ಚರ್ಚಿಸುತ್ತವೆ. ಒಂದು ಬಂಡಾಯವಾದರೆ, ಇನ್ನೊಂದು ದೇಹವನ್ನು ಕುರಿತ

ಆಕೆಯ ಗೀಳನ್ನು ಗುರುತಿಸುವುದು. ಸಂಖ್ಯೆಯಲ್ಲಿ ಈ ಮಾದರಿಯ ಬರಹಗಳು ಕಡಿಮೆ ಯಾದರೂ ಅಕ್ಕಮಹಾದೇವಿಯ ವ್ಯಕ್ತಿತ್ವದ ಒಳಗನ್ನು ಅರ್ಥಮಾಡಿಕೊಳ್ಳಲು ಗಂಭೀರವಾಗಿ ಪ್ರಯತ್ನಿಸುತ್ತವೆ. ಈ ಆಶಯದ ಕೆಲವು ಪ್ರಮುಖ ಲೇಖನಗಳನ್ನು ಇಲ್ಲಿ ನಾವು ನೋಡಬಹುದು. ಆಕೆಯ ಸಂಕೀರ್ಣತೆ ಮತ್ತು ದ್ವಂದ್ವವನ್ನೇ ಪ್ರಧಾನವಾಗಿಟ್ಟುಕೊಂಡು ಅವಳ ವ್ಯಕ್ತಿತ್ವವನ್ನು ಕಟ್ಟಲು ಈ ಬರಹಗಳು ಉದ್ದೇಶಿಸಿವೆ. 'ಭಿನ್ನಸ್ವರದ' ರೀತಿಯ ಲೇಖನಗಳು ಆಕೆಯ ತಾತ್ವಿಕತೆಯನ್ನು ಅರ್ಥಮಾಡಿಕೊಳ್ಳುವ ನೆಲೆಯಾದ್ದಾದರೆ ಚನ್ನಯ್ಯನವರ ಲೇಖನ ('ಅಕ್ಕಮಹಾದೇವಿ ವಚನಗಳ ಪ್ರತಿಮಾ ವಿಧಾನ' ೧೯೭೪) ದೇಹ ಮತ್ತು ಲೈಂಗಿಕತೆಯನ್ನು ಕುರಿತ ಅಂಶ ಆಸಕ್ತಿಯನ್ನು ಮೂಡಿಸಲು ನೋಡುತ್ತದೆ. ದೇಹವನ್ನು ನಿರಾಕರಿಸುತ್ತಲೇ ಅಕ್ಕಮಹಾದೇವಿ ಅದು ಮನುಷ್ಯ ಜೀವನದ ಸಂಭ್ರಮದ ಮೂಲ ಆಕರಗಳಲ್ಲಿ ಒಂದು ಎಂಬುದನ್ನು ತನ್ನ ವಚನದಲ್ಲಿ' ಉತ್ಕಟವಾಗಿ ಪ್ರತಿಪಾದಿಸುತ್ತಾಳೆ ಎನ್ನುವ ಅಂಶಕ್ಕೆ ಹೆಚ್ಚಿನ ಒತ್ತನ್ನು ಕೊಡುತ್ತದೆ. ಅವಳ ಬಂಡಾಯ ಸ್ವಭಾವವನ್ನು, ದೇಹ ಕಾಮದ ಮೋಹವನ್ನು ಗುರುತಿಸುತ್ತಿರುವಾಗ ಅವಳ ವಚನದಲ್ಲಿ ಅಷ್ಟೇ ಮುಖ್ಯವಾಗಿರುವ ಪ್ರೀತಿಯ ಅಲೌಕಿಕತೆ, ಮಾರ್ದವತೆ, ಅದು ಬದುಕಿಗೆ ತಂದುಕೊಡಬಹುದಾದ ಸಾರ್ಥಕತೆ, ಭಕ್ತಿಯ ಘನತೆ ಇವುಗಳನ್ನು ನಿರ್ಲಕ್ಷಿಸುತ್ತದೆ.

ಅಕ್ಕಮಹಾದೇವಿಯನ್ನು ಅಭಿಮಾನಕ್ಕೆ ಪಾತ್ರವಾಗಿಸಿ, ಮತ್ತೆ ಮತ್ತೆ ಚರ್ಚಿಸಿದರೂ ಕೂಡ ಅವಳನ್ನು ಮುಟ್ಟಬೇಕಾದ–ಮುಟ್ಟಬಹುದಾದ ದಾರಿಗಳು ಇನ್ನೂ ಉಳಿದಿವೆ ಎಂದೇ ನನಗನ್ನಿಸುತ್ತದೆ. ಇದನ್ನು ಹೀಗೂ ಹೇಳಬಹುದು. ಎಲ್ಲ ಉಜ್ವಲ, ರೋಮಾಂಚಕಾರಿ ವ್ಯಕ್ತಿತ್ವಗಳಲ್ಲೂ ಕೆಲವು ವಿಶಿಷ್ಟ ಗುಣವಿರುತ್ತವೆ. ಬದಲಾದ ಕಾಲ ಸಂದರ್ಭದ ಹಿನ್ನೆಲೆಯಲ್ಲಿ ಆ ವ್ಯಕ್ತಿತ್ವಗಳನ್ನು ಗ್ರಹಿಸುವ ವಿಧಾನಗಳು ಮಾತ್ರ ನಿರಂತರವಾಗಿ ಶೋಧಿತವಾಗುತ್ತಿರುತ್ತವೆ.

ನನ್ನ ಮಟ್ಟಿಗೆ ಅಕ್ಕಮಹಾದೇವಿ ಆದಿಮ ಸ್ತ್ರೀವಾದದ ಪ್ರತೀಕ; ಆದಿಮ ಸ್ತ್ರೀವಾದದ ಅತಿರೇಕ ದೌರ್ಬಲ್ಯ, ಶಕ್ತಿ, ಎಲ್ಲದರ ರೂಪಕ; ಅವಳನ್ನು ಒಂದು ಅಸಾಮಾನ್ಯ ಜನಪರ ಚಳವಳಿಯ ಪ್ರದರ್ಶಕ ಸಾಧಕಿಯಾಗಿ ಮಾತ್ರ ನೋಡುವುದಾಗಲಿ, ವೈಯಕ್ತಿಕ ತುರ್ತಿನಿಂದ ನಡೆಸಿದ ಪ್ರಯತ್ನ ಎಂದು ಮಾತ್ರ ನೋಡುವುದಾಗಲೀ ಆಕೆಯ ವ್ಯಕ್ತಿತ್ವವನ್ನು ಪಾರ್ಶ್ವಿಕವಾಗಿ ತೋರಿಸುತ್ತವೆ. ಹಲವು ವಿರುದ್ಧ ನೆಲೆಗಳಲ್ಲಿ ಇನ್ನಿಲ್ಲದ ತೀವ್ರತೆ ಮತ್ತು ಪ್ರಾಮಾಣಿಕತೆಯಲ್ಲಿ ಬದುಕಿದ ಅಕ್ಕ, ಬದುಕನ್ನು ಕುರಿತ ತೀವ್ರ ವ್ಯಾಮೋಹಿಯಾಗಿ ಕಾಣಿಸುತ್ತಾಳೆ. ದೇಹವನ್ನು, ಲೌಕಿಕ ಪ್ರೀತಿಯನ್ನು ಅಲೌಕಿಕ ಭಕ್ತಿಯನ್ನು ಹೀಗೆ ಅವಳ ಯಾವುದೇ ನಿಲುವುಗಳಲ್ಲಿ ಥಟ್ಟನೇ ನಮ್ಮ ಅನುಭವಕ್ಕೆ ಬರುವುದು ಬದುಕನ್ನು ಕುರಿತ ಅವಳ ಈ ವ್ಯಾಮೋಹವೇ. ಅವಳನ್ನು ಅರ್ಥಮಾಡಿಕೊಳ್ಳುವ, ಪರಸ್ಪರ ಹೊಂದಲಾರದ ವಿವರಗಳಿರುವ ಅವಳ ಬದುಕನ್ನು ನೋಡಬಹುದಾದ ಸಣ್ಣ ಸಾಧ್ಯತೆಯೆಂದು ನನಗೆ ಕಾಣಿಸುತ್ತದೆ.

ಟಿಪ್ಪಣಿ

1. History of Indian Literature (Vol-I) Centeral Sahitya Acadami, New Delhi. 1987.

೧೭. ಸಾವಿಲ್ಲದ ಸಂಗಾತಿಯನ್ನರಸುವ ಅಕ್ಕ

•

ಕೆ. ನೀಲಾ

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚಲುವಂಗೆ ನಾನೊಲಿದೆ
ಎಡೆಯಿಲ್ಲದ ಕಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ
ಚೆಲುವಂಗೆ ನಾನೊಲಿದೆ ಎಲೆ ಅವ್ವಗಳಿರಾ
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೊಲಿದೆ ನಾನು
ಸೀಮೆ ಇಲ್ಲದ ನಿಸ್ಸೀಮಂಗೊಲಿದೆ ನಾನು
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆ
ಮಿಗೆ ಮಿಗೆ ಒಲಿವೆ ಎಲೆ ಅವ್ವಗಳಿರಾ....

ಮಹಾದೇವಿಯಕ್ಕ ಕಟ್ಟಿದ ಈ ವಚನ, ಕಟ್ಟುವಿಕೆಯ ಹಿಂದಿರುವ ಪ್ರೇರಣೆ ಮತ್ತು ಅಲ್ಲಿ ಕಟ್ಟಿಕೊಡಬಯಸುವ ಆಶಯ ದಿಂದಾಗಿ ಗಮನ ಸಳೆಯುತ್ತದೆ. ಪುರುಷ ಪ್ರಧಾನ ವ್ಯವಸ್ಥೆ ಹುಟ್ಟು ಹಾಕಿದ ಲಿಂಗಭೇದ ನೀತಿಯ ಹಿನ್ನೆಲೆಯಲ್ಲಿ ಗಣಿಸಿದರೆ ಅಕ್ಕ ತನ್ನ ಗಂಡನನ್ನು ತಾನೇ ಆಯ್ಕೆ ಮಾಡಿಕೊಳ್ಳುವ ಛಾತಿ ತೋರಿದ್ದು ಆ ಹೊತ್ತಿಗೆ ದೊಡ್ಡ ಸವಾಲಾಗಿ ಕಂಡಿರಲು ಸಾಕು. ಪುರುಷಶಾಹಿ ಜೀವನವಿಧಾನವು ತನ್ನ ಸ್ವಾರ್ಥಪ್ರೇರಿತ ಪರಿಧಿಯನ್ನು ಗಟ್ಟಿ ಗೊಳಿಸಲೆಂದು ಹುಟ್ಟುಹಾಕಿದ ವಿವಾಹ ಸಂಸ್ಥೆ ಮತ್ತು ಅದರ ಎಲ್ಲ ಸಾಮಾಜಿಕ ಆಯಾಮಗಳು ಸ್ತ್ರೀಯರನ್ನು ದಯನೀಯ ಸ್ಥಿತಿಗೆ ತಂದು ಅಧಃಪತನಗೊಳಿಸಿವೆ. ಮಾತೃಪ್ರಧಾನ ಸಂಸ್ಕೃತಿಯ ಮುಕ್ತ ವಾತಾವರಣ ಮಾಯವಾಗಿ ಪುರುಷ ಕೇಂದ್ರಿತ ನೆಲೆಗೆ ಬದುಕು ಎಂದು ನಿಂತದ್ದೇ ಸಾಕು ಸ್ತ್ರೀಯು ಎಲ್ಲ ಬಗೆಯ ಶೋಷಣೆಗೆ ಬಲಿಯಾಗಿದ್ದಳು. ವೈದಿಕಯುಗದ ಇತಿಹಾಸ ಕಾಲದಿಂದಲೂ ಮಹಿಳೆಯರು ದಮನಕ್ಕೆ, ಪುರುಷನ ಭೋಗಕ್ಕೆ, ಸಹಜವಲ್ಲದ ಔಪಚಾರಿಕ ಗೌರವಕ್ಕೆ ಮಾತ್ರ ಪಾತ್ರರಾದದ್ದು ಪುರಾಣ ಕಾವ್ಯಗಳಲ್ಲಿ ತನ್ನದೆ ರೂಪದಲ್ಲಿ ದಾಖಲಾಗಿದೆ. ಹೀಗಿರುವಾಗಲೂ ಅಕ್ಕನಂಥ ಕೆಲವು ಧೀಮಂತ ಮಹಿಳೆಯರು ತಮ್ಮ ಕಾಲದ ಮಿತಿಗಳ ನಡುವೆಯೂ ವ್ಯವಸ್ಥೆಯ ವಿರುದ್ಧ ದಂಗೆಗಿಳಿದಿದ್ದಾರೆ. ಧರ್ಮ, ಸಮಾಜ, ಸಂಸ್ಕೃತಿ ಮುಂತಾಗಿ ಬದುಕನ್ನು ರೂಪಿಸುವ ಎಲ್ಲ ವಿದ್ಯಮಾನಗಳು ಮಹಿಳೆಯರನ್ನು ಎರಡನೇ

ದರ್ಜೆಯ ಪ್ರಜೆಯಾಗಿ ನಡೆಸಿಕೊಂಡಿರುವ ಸಂದರ್ಭದಲ್ಲಿಯೂ ಅಕ್ಕನಂಥ ಚೇತನಗಳು ಬಂಡಾಯ ಹೂಡಿದ್ದು ಅಧ್ಯಯನ ಯೋಗ್ಯವೆನಿಸುತ್ತದೆ.

ಶ್ರೀಮಂತ ಮತ್ತು ಮೇಲ್ಜಾತಿಯ ಕುಟುಂಬದಲ್ಲಿ ಜನಿಸಿದ ಅಕ್ಕ ಎಲ್ಲ ಸಾಮಾನ್ಯ ಮಹಿಳೆಯರಂತೆ ಬೆಳೆದಿರಬಹುದಾದರೂ, ತನ್ನೊಟ್ಟಿಗೆ ಸಂಭವಿಸುವ ಸಾಮಾಜಿಕ ಕ್ರಿಯಾ ಕಲಾಪಗಳನ್ನು ಎದುರಿಸುವಾಗ ಅವಳು ಇತರರಿಂದ ಭಿನ್ನವಾಗಿ ನಿಲ್ಲುತ್ತಾಳೆ.

ಅಕ್ಕ ಕೌಶಿಕನನ್ನು ಮೂರು ಪ್ರಧಾನ ನೆಲೆಯಲ್ಲಿ ಧಿಕ್ಕರಿಸುತ್ತಾಳೆ. ಕೌಶಿಕನೆಂಬ 'ಗಂಡಸು'. ಮದುವೆಯಾಗಲಿರುವ "ಗಂಡು" (ವರ) ಮತ್ತು ಪ್ರಭುತ್ವದ ಪ್ರತಿನಿಧಿಯಾಗಿರುವ 'ಮಹಾರಾಜ'; ಹೀಗೆ ಗಂಡಸು, ಗಂಡ ಮತ್ತು ರಾಜ ಅಂದರೆ ಪುರುಷಶಾಹಿ, ಸಾಮ್ರಾಜ್ಯಶಾಹಿ ಮತ್ತು ರಾಜ್ಯಶಾಹಿ ತ್ರಿವಳಿಗಳ ನಿರಾಕರಣೆಗಳು ಒಟ್ಟು ಲಿಂಗಭೇದ ನೀತಿಯ ವಿಭಿನ್ನ ಸ್ತರ ಮತ್ತು ಸಂಕೀರ್ಣ ಆಯಾಮಗಳನ್ನು ಅನಾವರಣಗೊಳಿಸುತ್ತವೆ. ತಾನು ಗಂಡಸು ಆದ್ದರಿಂದ ಪತಿದೇವರು, ಅವಳದೆನ್ನುವ ಎಲ್ಲದಕ್ಕೂ ಒಡೆಯ. ಇನ್ನು ತಾನು ರಾಜ, ಆದ್ದರಿಂದ ದೇಶದಲ್ಲಿರುವ ಎಲ್ಲ ಸಂಪತ್ತು (ಸ್ತ್ರೀ ಎಂಬುದನ್ನು ಸಂಪತ್ತಿನ ಒಂದು ಭಾಗ) ರಾಜನ ಆಧೀನಕ್ಕೆ ಒಳಪಡಬೇಕಾಗಿತ್ತು. ಆದರೆ ಅಕ್ಕ ಮಾತ್ರ ಈ ಗತಾನುಗತಿಕ ಪಾಳೇಗಾರಿ ಮೌಲ್ಯಗಳ ವಿರುದ್ಧ ಧ್ವನಿ ಎತ್ತಿ ಮಧ್ಯಕಾಲೀನ ಪುರುಷವಾದಿ ನಭೋಮಂಡಲಕ್ಕೆ ಉಲ್ಕಾಪಾತವಾಗಿ ಎರಗಿದಳು.

ಗಂಡ, ಗಂಡಸು ಮತ್ತು ರಾಜ ಮೂವರನ್ನು ಏಕಕಾಲಕ್ಕೆ ಧಿಕ್ಕರಿಸುವಲ್ಲಿ ಅವಳಿಗಿರುವ ತುರ್ತು ಏನಿತ್ತು? ಇದನ್ನು ಕಂಡುಕೊಳ್ಳುವ ಜರೂರಿ ಇದೆ. ಹದಿಹರೆಯದ ಚಿತ್ತಾರ ಚೆಲುವೆಯೊಬ್ಬಳು ನಾಡನ್ನಾಳುವ, ಪ್ರೀತಿ ಸುರಿಸುವ, ಸ್ಫುರದ್ರೂಪಿ ಗಂಡನನ್ನು ಧಿಕ್ಕರಿಸುವದೆಂದರೆ ಕಾರಣವೇನಿರಬಹುದು? ಅವಳು ಈ ಮೊದಲೇ ಇನ್ನೊಬ್ಬನನ್ನು ಪ್ರೇಮಿಸಿರಬಹುದೆ? ಅಥವಾ ಕೌಶಿಕನಲ್ಲಿ ಅವಳಿಗೆ ಯಾವುದಾದರೂ ದೋಷ ಕಂಡಿರಬಹುದೆ? ಎಂಬ ಪ್ರಶ್ನೆಗಳು ಸಾಮಾಜಿಕರಿಗೆ ಕಾಡುವದು ಸಹಜ. ಇಂಥ ಪ್ರಶ್ನೆಗಳು ಕಾಡಿದಾಗಲೆಲ್ಲ ಅಕ್ಕ ಚೆನ್ನಮಲ್ಲಿಕಾರ್ಜುನನ್ನು ಕುರಿತು ಹಂಬಲಿಸಿದ್ದ ವಚನಗಳು ಇವರಿಗೆ ಸಮಾಧಾನ ತಂದಿವೆ. ಅಕ್ಕನ ತರುವಾಯ ಅವಳನ್ನು ಕುರಿತು ಚರಿತ್ರೆ, ಕಾವ್ಯ, ಪುರಾಣ ಬರೆಯಹೊರಟವರಿಗೆಲ್ಲ ಅವಳನ್ನು ವೀರವೈರಾಗಿಣಿ, ದೈವಾಂಶಸಂಭೂತೆ ಎಂದು ಹೇಳುವುದು ದೊಡ್ಡ ಬಿಡುಗಡೆಯಂತೆ ಕಂಡಿದೆ. ಇನ್ನು ಶೂನ್ಯಸಂಪಾದನಾಕಾರರಂಥ ತಾತ್ವಿಕ ಪರಿಣತರಿಗೆ ಅವಳದೇ ವಚನಗಳನ್ನು ಇಟ್ಟುಕೊಂಡು ವೈಭವೀಕರಿಸುವದು ಆಪ್ಯಾಯಮಾನವೆನಿಸಿದೆ. ಆದರೆ ಪ್ರಖರ ಸ್ತ್ರೀವಾದಿ ಚಿಂತನಾಯುಗದಲ್ಲಿ ನಿಂತಿರುವ ನಮ್ಮಗಳಿಗೆ ಅಕ್ಕನನ್ನು ಅರ್ಥೈಸಿ ಕೊಳ್ಳುವದು ವಾಸ್ತವದ ಹುಡುಕಾಟವಾಗುತ್ತದೆ. ಪುರಣ ವಚನಗಳಲ್ಲಿ ವ್ಯಕ್ತವಾದ ಭಾವನೆಗಳ ಕ್ಯಾನವಾಸಿನ ಹಿನ್ನೆಲೆಯಲ್ಲಿ ಅವಳ ಚಿತ್ರ ಕಟ್ಟಿಕೊಳ್ಳುವದು ಅನಿವಾರ್ಯವಾಗುತ್ತದೆ.

ಈವರೆಗೆ ಅಕ್ಕನನ್ನು ಅರ್ಥೈಸಿಕೊಳ್ಳಬೇಕೆಂಧು ಹೊರಟ ಯುಗಮಾನಗಳೆಲ್ಲವೂ ತಮಗೆ ಬೇಕಾದ ಆಕೃತಿಗಳನ್ನು ಕಟ್ಟಿಕೊಳ್ಳಲು ಗುದ್ದಾಟ ನಡೆಸಿದಂತೆ ತೋರುತ್ತವೆ. ಆದ್ದರಿಂದ ಅಕ್ಕ ಬಾಲ್ಯದಿಂದಲೂ ವೈರಾಗ್ಯದತ್ತ ವಾಲಿದವಳು, ಲೋಕವಿದೂರೆ, ಕಾಮಾದಿ ವಾಸನೆ ಮೀರಿದವಳು, ಎಂದೆಲ್ಲಾ ಪರಿಭಾವಿಸಲು ಹೆಣಗಾಡಿವೆ. ಹೀಗಾಗಿಯೇ ಆಕೆ ಕೌಶಿಕನನ್ನ ತ್ಯಜಿಸುವಲ್ಲಿ ಲೌಕಿಕ ಕಾರಣ ಮತ್ತು ಸಂದರ್ಭ ಪ್ರಮುಖವೆಂದು ಅವರಿಗೆ ತೋರಿಲ್ಲ. ಆದರೆ ಅಕ್ಕನ ವಚನಗಳು ಈ ಅಭಿಪ್ರಾಯಗಳಿಗೆ ವ್ಯತಿರಿಕ್ತವಾದುದನ್ನೆ ಹೇಳುತ್ತವೆ. ಹಾಗೇ ನೋಡಿದರೆ

ಅಕ್ಕನಿಗೆ ಲೋಕ ಸಂಸಾರ, ಸಂಗಾತಿಯ ಸಾಮಿಪ್ಯ ಇವೆಲ್ಲ ತ್ಯಾಜ್ಯವೇ ಅಲ್ಲ. ಅವಳಷ್ಟು ಸಂಸಾರವನ್ನು ತುಂಬಿಕೊಳ್ಳುವ ಜೀವಭಾವ ಇನ್ನೊಬ್ಬ ಸ್ತ್ರೀಯರಲ್ಲಿ ಕಾಣಲಿಕ್ಕಿಲ್ಲ.

ಬಂದಹೆನೆಂದು ಬಟ್ಟೆಯ ನೋಡಿ
ಬಾರದಿದ್ದಡೆ ಕರಗಿ ಕೊರಗಿದೆನವ್ವಾ
ತಡವಾದಡೆ ಬಡವಾದೆ ತಾಯೆ
ಚೆನ್ನಮಲ್ಲಿಕಾರ್ಜುನನ ಒಂದಿರುಳಗಲಿದಡೆ
ತೆಕ್ಕೆ ಸಡಲಿದ ಜಕ್ಕವಕ್ಕಿಯಂತಾದೆನವ್ವಾ.

ಕೂಡಿ ಕೂಡುವ ಸುಖದಿಂದ
ಒಪ್ಪಚ್ಚಿ ಅಗಲಿ ಕೂಡುವ ಸುಖ ಲೇಸು ಕೆಳದಿ
ಒಚ್ಚೊತ್ತಗಲಿದಡೆ ಕಾಣದಿರಲಾರೆ
ಎನ್ನ ದೇವ ಚೆನ್ನಮಲ್ಲಿಕಾರ್ಜುನನಗಲಿಯಗಲದ
ಸುಖವೆಂತಪ್ಪುದೊ?

ಪ್ರಣಯೋತ್ಕಟತೆಯನ್ನು ಬಿಂಬಿಸುವ ಇಂಥ ಹತ್ತಾರು ವಚನಗಳು ಅವಳೆಂಥ ಜೀವನ್ಮುಖಿ ಮತ್ತು ಹುಚ್ಚು ಪ್ರೇಮಿ ಎಂಬುದನ್ನು ಕಾಣಿಸುತ್ತವೆ. ಉದ್ದಕ್ಕೂ ಪ್ರಿಯಕರನನ್ನು ಹಂಬಲಿಸುವ, ತನ್ಮಯತೆಯಿಂದ ಭರಿಸಿಕೊಳ್ಳುವ ಸರಸಭಾವಗಳು ಅವಳನ್ನು ಅಪ್ಪಟ ಈ ಲೋಕದ ಜೀವಿಯನ್ನಾಗಿಸಿವೆ. ಇಷ್ಟೆಲ್ಲಾ ನವಿರುಭಾವಗಳನ್ನು ಇಂಬಿಟ್ಟುಕೊಂಡು ತನ್ನದೆ ಪುಟ್ಟದೊಂದು ಸಂಸಾರಕ್ಕಾಗಿ ಹಂಬಲಿಸುವ ಅಕ್ಕನಿಗೆ ಕೌಶಿಕನಂಥವನ ಮೇಲೆ ಎಳ್ಳಷ್ಟು ಪ್ರೀತಿ ಅಂಕುರಿಸ ಲಿಲ್ಲವೆ? ಈ ಪ್ರಶ್ನೆಗೆ ಮಾನವ ಮನಸ್ಸಿನ ಸೂಕ್ಷ್ಮ ತಂತುಗಳಲ್ಲಿ ಮಾತ್ರ ಉತ್ತರದ ಒಂದು ಎಳೆ ಕಾಣಿಸಿಕೊಂಡೀತು. ಅಕ್ಕನಿಗೆ ಖಂಡಿತ ಸಂಗಾತಿ ಬೇಕು. ಅವಳಿಗಾಗಿ ಅವಳನ್ನು ಪ್ರೀತಿಸುವ, ಕೇವಲ ಪ್ರೇಮಮಯಿ ಜೊತೆಗಾರ ಬೇಕು. ಆತ ಎಲ್ಲಿಯೂ ಗಂಡ, ಗಂಡಸು, ಒಡೆಯ್ನು ಎಂಬ ಮಿತಿಗೆ ಒಳಗಾಗಿರಬಾರದು. ತಾರತಮ್ಯ ನೀತಿಯನ್ನೊಳಗೊಂಡ ಈ ವ್ಯವಸ್ಥೆಯ ಪುರುಷನೂ ಅವನಾಗಿರಬಾರದು. ತುಂಬಿಯೂ ತುಳಕದ, ನಂಬಿ ಸಂದೇಹಿಸದ, ಒಲಿದು ಓಸರಿಸದ, ನೆರೆದು ಎಂದೆಂದೂ ಮರೆಯದ ಪರಿಪೂರ್ಣ ಪುರುಷನಾಗಿರಬೇಕೆಂಬುದು ಅವಳ ನಿಲುವಾಗಿತ್ತು.

ಲೋಕದ ಪ್ರತಿಷ್ಠೆ ಮತ್ತು ಶ್ರೇಣೀಕೃತ ವ್ಯವಸ್ಥೆ ಘೋಷಿತ ಭ್ರಮೆಗಳಿಗೆ ಅಕ್ಕ ಒಳಗಾದವಳೇ ಅಲ್ಲ. "ತನ್ನತನ"ದ ಪ್ರಚಂಡ ಪ್ರಜ್ಞೆಯಲ್ಲಿ ಉನ್ಮೀಲತವಾದ ಅವಳು ಯಾವುದೇ ಕಾರಣಕ್ಕೂ ರಾಜತ್ವ, ಸಂಪತ್ತು, ಅಧಿಕಾರ ಅಂತಸ್ತುಗಳಿಗೆ ಮಾರು ಹೋಗಲಾರಳು. ಎಂತಲೇ ಕೌಶಿಕನಂಥ ರಾಜನನ್ನು ಧಿಕ್ಕರಿಸಿ ಸುಲಿಪಲ್ಲಗೊರವ, ಚಿಕ್ಕ ಚಿಕ್ಕ ಜಡೆಗಳ ಭಿಕ್ಷುಕ, ಅರಸಿ ಕಾಣದ ತನುಜೀವಿ, ಬೆರಸಿ ಕೂಡದ ಸುಖದ ಬೇಂಟೆಗಾರರನನ್ನು ಒಲಿಯಬಯಸುತ್ತಾಳೆ. ಹೀಗಾಗಿಯೇ ಅವಳಿಗೆ ಪರಪುರುಷರು (ಕೌಶಿಕನನ್ನು ಸೇರಿಸಿ)ಎರದ ಮುಳ್ಳಾಗುತ್ತಾರೆ. ಅಕ್ಕನ ಈ ಭಾವತೀವ್ರದ ವಚನ ಗಳಲ್ಲಿ ಅತ್ಯಂತ ಸಾಮಾನ್ಯಲೋಕದ ಆದರೆ ಭಾವಜೀವಿಯಾದ ಪುರುಷನ ಬಯಕೆಯನ್ನು ಕಾಣುತ್ತೇವೆ. ಆಧ್ಯಾತ್ಮಿಕ ಜಗತ್ತಿನಲ್ಲಿ 'ಮಾಯೆ' ಎಂದೇ ಬಿಂಬಿತವಾಗಿದ್ದ ಮಹಿಳೆಗೆ ಆಯ್ಕೆಯ ಅವಕಾಶವಿಲ್ಲ. ಸಂಗಾತಿಯ ಆಯ್ಕೆಯ ಪ್ರಶ್ನೆ ಏನಿದ್ದರೂ ಅದು ಪುರುಷನಿಗೆ ಮಾತ್ರ ಮೀಸಲು. ಸಹನೆ, ಒಪ್ಪಂದ, ಕೇವಲ ಕೊಡುವಿಗೆ ಮಾತ್ರ ಅವಳತನವಾಗಬೇಕು. ಈ

ಕಾರಣವಾಗಿ ಅವಳು ಸಹನಾಮಯಿ, ತ್ಯಾಗಮಯಿ, ಏನೆಲ್ಲವೂ ಆಗಿಸಲ್ಪಡುತ್ತಾಳೆ. ಹೀಗಿರುವಾಗ ತನ್ನ ಮನಸ್ಸಿಗೊಪ್ಪದ, ಹೇಳಲು ಸಾಧ್ಯವೇ ಆಗದ ಕಾರಣಗಳಿಗಾಗಿಯೂ ಇಷ್ಟವಾಗದ ವರನನ್ನು ಒಪ್ಪದಿರುವುದು ಪುರುಷ ಪ್ರಧಾನ ವ್ಯವಸ್ಥೆಗೊಂದು ಪ್ರಹಾರವೇ ಸರಿ. ಅಕ್ಕ ಮಾತ್ರ ಈ ಅಸಾಧ್ಯತೆಗಳನ್ನು ತನ್ನ ಸಾಮಾಜಿಕ ಸಂದರ್ಭದಲ್ಲಿ ಪ್ರಯೋಗಕ್ಕಿಳಿಸಲು ಹೊರಟಿದ್ದು ಇಂದಿನ ಧಾರ್ಮಿಕ ಪಠ್ಯಗಳಿಗೆ ಆದರ್ಶವೆನಿಸಿಕೊಂಡರೆ ಅಂದಿಗೆ ಅದೊಂದು ಬಹುದೊಡ್ಡ ಸಂಘರ್ಷವೇ ಆಗಿತ್ತು. ಅವಳ ಹೋರಾಟ ಮೇಲ್ನೋಟಕ್ಕೆ ವೈಯಕ್ತಿಕ ಎಂದು ಕಾಣಿಸಬಹುದಾದರೂ ಅದು ಚರಿತ್ರೆಯ ಭಾಗವಾಗಿ ಸಂವಹನಗೊಳ್ಳುವಾಗ ವೈಯಕ್ತಿಕ ಪರಿಧಿ ಮೀರಿ ಸಾಮೂಹಿಕ ಮಟ್ಟಕ್ಕೆ ಆವರಿಸಿಕೊಳ್ಳುತ್ತದೆ. ಸಮಾಜದ ನಿರ್ಬಂಧಿತ ವಿದ್ಯಮಾನ್ಯಗಳ ನಡುವೆ ಅಕ್ಕ ತನ್ನ ವೈಯಕ್ತಿಕ ಬದುಕಿನ ಮಟ್ಟದಲ್ಲಿ ನಡೆಸುವ ಹೋರಾಟವೂ ಸಹ ಹಲವು ಸಾಧ್ಯತೆಗಳಿಗಾಗಿ ಪ್ರಮುಖವೆನಿಸುತ್ತದೆ. ದಮನಿತ ಮನೋಸ್ಥಿತಿ ಧಿಕ್ಕರಿಸಲಿಕ್ಕಾಗಿ ಮೊದಲು ತನ್ನೊಳಗೆ ಒಂದು ಸಂಘರ್ಷ ಏರ್ಪಡಿಸಿಕೊಳ್ಳಬೇಕಾಗುತ್ತದೆ. ಈ ರೀತಿಯ ಸಂಘರ್ಷದ ಮೂಲಕ ಅಕ್ಕ ಹೊಸ ಚಿಂತನೆಗೆ ದಾರಿಯಾಗುತ್ತಾಳೆ. ಗತಾನುಗತಿಯ ನಂಬಿಕೆಗಳ ಚೌಕಟ್ಟು ಒಡೆಯುವ ಮನೋಸ್ಥೈರ್ಯ, ವೆಗ್ಗಳವಾದ ತಾಕಲಾಟಗಳನ್ನು ಮುಖಾಮುಖಿ ಯಾಗಿಸುವ ಆತ್ಮಪ್ರತ್ಯಯಗಳು ಅವಳಲ್ಲಿ ಹೊಡೆ ಮುರಿದು ನಿಲ್ಲುತ್ತವೆ. ಆದ್ದರಿಂದ ಅವಳು ಈ ತನ್ನ ಕುಟುಂಬ ವಲಯದಲ್ಲೂ ಬಂಡಾಯದ ದನಿ ಎತ್ತಿದಳು. ಈ ಹಂತದಲ್ಲಿ ಎದುರಾಗುವ ಧಾರ್ಮಿಕ, ಸಾಮಾಜಿಕ, ಆರ್ಥಿಕ, ಮುಂತಾದ ಎಲ್ಲ ವಲಯದ ತಿಕ್ಕಾಟಗಳನ್ನು ನಿಭಾಯಿಸಿದಳು.

ಈ ಎಲ್ಲ ಅವಘಡಗಳೇ "ಹಸಿವಾದೊಡೆ ಭಿಕ್ಷಾನ್ನಗಳುಂಟು, ತೃಷೆಯಾದೊಡೆ ಕೆರೆ ಭಾವಿಗಳುಂಟು, ಮನೆ ಮನೆ ತಪ್ಪದೆ ಕೈಯೊಡ್ಡಿ ಬೇಡುವಂತೆ ಮಾಡಯ್ಯ, ಬೇಡಿದೊಡೆ ಇಕ್ಕದಂತೆ ಮಾಡಯ್ಯ, ಹಸಿವೆ ನೀನು ನಿಲ್ಲು ನಿಲ್ಲು, ತೃಷೆಯೇ ನೀನು ನಿಲ್ಲು ನಿಲ್ಲು" ಮುಂತಾದ ವಚನಗಳಲ್ಲಿ ಸ್ವಗತಗಳಾಗಿ ದಾಖಲಾಗಿವೆ. ಅವಳು ಎದುರಿಸಿದ್ದ ಒಳಹೊರ ಸಂಘರ್ಷಗಳನ್ನು ಇವು ಬಿಚ್ಚಿಡುತ್ತವೆ. ಸ್ಥಾಪಿತ ವ್ಯವಸ್ಥೆಯ ಬಂಧನಗಳನ್ನು ಮೆಟ್ಟಿ ಮೀರಿ ಬಯಲ ರೂಪಿಣಿಯಾಗಿ ನಿಂತಿರುವ ಅಕ್ಕನನ್ನು ಅರಗಿಸಿಕೊಳ್ಳುವದು ಎಲ್ಲ ಕಾಲದ ಸಮಾಜಕ್ಕೂ ಹೈರಾಣ ಎನಿಸಿದೆ.

ಇಂದು ನಮಗೆ ದೊರೆತ ಅವಳದೇ ೩೫೪ ವಚನಗಳಲ್ಲಿ ತನ್ನನ್ನು ಸಾದರಪಡಿಸಿಕೊಂಡಿರುವ ಅಕ್ಕನನ್ನು ಅರ್ಥೈಸಿಕೊಳ್ಳುವುದು ಸಾಧ್ಯವಾಗಬೇಕು. ಪುರಾಣ, ಕಾವ್ಯಗಳಲ್ಲಿ ಚಿತ್ರಿತವಾದ ಅಕ್ಕ ಕಾಲಕಾಲಕ್ಕೆ ಕನ್ನಡದ ಲೋಕದೃಷ್ಟಿ ಕಂಡ ಹೆಣ್ಣು, ಹೆಣ್ತನವನ್ನು ಗ್ರಹಿಸಿದ ಬಗೆಯಾಗಿ ಮೂಡಿಬರುತ್ತದೆ. ಆ ಲೋಕದೃಷ್ಟಿ ಮತ್ತೊಂದು ಚರ್ಚೆಗೆ ದಾರಿಯಾದೀತು. ಈಗ ನಮ್ಮ ಎದುರು ಇರುವ ಪ್ರಧಾನ ಪ್ರಮೇಯವೆಂದರೆ ಅಂದಿನ ಅಕ್ಕ ಇಂದು ನಮ್ಮಗಳ ಸಂದರ್ಭಕ್ಕೆ ಗ್ರಹಿತವಾಗಬೇಕಾದ ಬಗೆ. ಮಹಿಳೆ ಇಲ್ಲದೆ ಪುರುಷ ಬದುಕುವದು ಆಧ್ಯಾತ್ಮಿಕ ದೃಷ್ಟಿಯಲ್ಲಿ ಮಹಾನ್ ಸಾಧನೆಯಾಗಿ ಪರಿಗಣಿಸುವುದಾದರೆ, ಪುರುಷನಿಲ್ಲದೆ ಮಹಿಳೆ ಬದುಕಲಾರಳೇನು? ಹಾಗೇ ನೋಡಿದರೆ ಅಕ್ಕನದು ಪ್ರವೃತ್ತಿಮಾರ್ಗವೇ ಹೊರತು ನಿವೃತ್ತಿ ಮಾರ್ಗವಲ್ಲ. ಭಾರತೀಯ ಆಧ್ಯಾತ್ಮವಾದಿಗಳ ನಿವೃತ್ತಿ ನೆಲೆಯನ್ನು ಒಡೆಯುವ ಮೂಲಕ ಭೌತತತ್ವದ ವಾಸ್ತವವಾದ ಸಿದ್ಧಾಂತವನ್ನು ಕಟ್ಟಿಕೊಂಡವರು ಶರಣರು. ಹೀಗಾಗಿ ಅಕ್ಕನಿಗೆ ಗಂಡು ಹೆಣ್ಣು ಪರಸ್ಪರ ಮಾಯೆ ಅಲ್ಲ. ಅವರು ಪರಸ್ಪರರ ಮೇಲೆ ಅಂಕಿತ ಸಾಧಿಸಬೇಕಾದದ್ದು ಇಲ್ಲ. ಎಂತಲೇ "ಪುರುಷನ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡುತ್ತದೆ"

ಎಂದು ಅಕ್ಕ ಖಚಿತಪಡಿಸುತ್ತಾಳೆ. ಇನ್ನು ಒಂದು ಹೆಜ್ಜೆ ಮುಂದು ಹೋಗಿ ಗಂಡುಹೆಣ್ಣು ಎಂಬುದು ಪ್ರಕೃತಿಯ ವೈವಿಧ್ಯಗಳೇ ಹೊರತು ಅವು ಮೇಲು ಕೀಳರಿಮೆಯ ಘಟಕಗಳಲ್ಲ ಎನ್ನುತ್ತಾಳೆ. "ನಾ ಮರೆಯ ನೂಲು ಸಡಿಲಲು ನಾಚುವರು ನೋಡಾ ಗಂಡು ಹೆಣ್ಣೆಂಬ ಜಾತಿಗಳು" ಎಂಬ ವಚನವನ್ನು ನೆನೆಯಬೇಕು.

ಮತೀಯ ನೇತಾರರು ಅಕ್ಕನನ್ನು "ಪರದೊಂದಿಗೆ" ಜೋಡಿಸಬೇಕೆಂದರೂ ಅವಳು ಮಾತ್ರ ಇಹದ ಅನುಭವಗಳೊಂದಿಗೆ ಗುರುತಿಸಿಕೊಳ್ಳುವ ಪ್ರಯತ್ನ ಮಾಡುತ್ತಾಳೆ. ತನ್ಮೂಲಕ ಇಹದಲ್ಲಿನ ತನ್ನ ಅಸ್ಮಿತೆಯನ್ನು ಸ್ಥಾಪಿಸುವ ಸಾಹಸ ಮಾಡುತ್ತಾಳೆ. ಪ್ರಾಯಶಃ ಅನುಭವ ಮಂಟಪದ ಧಾರ್ಮಿಕ ಚೌಕಟ್ಟು ಅವಳು ಬದುಕಿರುವಾಗಲೇ ದಂತಕಥೆಗಿಳಿಸುವ ಧಾವಂತಕ್ಕೆ ಇಳಿದಿದೆ. ಆದ್ದರಿಂದಲೇ ಆಕೆ ತಾನು ಇಹವನ್ನು ಪ್ರೀತಿಸುವ ಮತ್ತು ಲೋಕ ಮೂಲವಾದ ಎಲ್ಲ ಬಯಕೆಗಳಿಗೂ ಬಾಯಾಗುವ ಜೀವಿ ಎಂಬುದನ್ನು ತೋರಿಸಿಕೊಟ್ಟಿದ್ದಾಳೆ. ಅವಳ ಚೆನ್ನಮಲ್ಲಿಕಾರ್ಜುನನು ಸೃಷ್ಟಿ, ಸ್ಥಿತಿ, ಲಯಾದಿಗಳ ನಿಗೂಢೀಕರಣವನ್ನು ನಂಬುವವರಿಗೆ "ದೇವರು" ಆಗಿಕಂಡರೆ, ಅವಳಿಗೆ ಮಾತ್ರ ಆತ ತನ್ನೊಳಗಿನ ಅನಂತ ಬಯಕೆಗಳ ಲೋಕಕ್ಕೆ ಒಳಹರಿವು ಪಡೆದುಕೊಳ್ಳಬಲ್ಲ ನಿಷ್ಕಲ್ಮಷ ಪ್ರಿಯಕರನಾಗಿದ್ದಾನೆ. ಅವಳು ಇಂಥ ಪ್ರಿಯಕರನಿಗಾಗಿ ಅನಂತ ಕಾಲ ತಪಿಸಬಲ್ಲಳು. ಭೌತಿಕವಾಗಿ ದಕ್ಕದೇ ಹೋದರೂ ಜೀವಭಾವದ ಅಸೀಮ ನೆಲೆಯಲ್ಲಿ ಸಂವಾದ ಏರ್ಪಡಿಸಿ ಕೊಳ್ಳಬಲ್ಲಳು. ಇಂಥ ಸಂಕೀರ್ಣ ವ್ಯಕ್ತಿತ್ವದ ಅಕ್ಕನೊಂದಿಗೆ ಮುಖಾಮುಖಿಯಾಗುವದೆಂದರೆ, ಬದುಕನ್ನು ಕಟ್ಟಿಕೊಳ್ಳುವ ಯತ್ನವೆಂದೇ ಅರ್ಥ. ಸ್ತ್ರೀವಾದಿ ಚಿಂತನೆಗಳ ವಿಸ್ತೃತ ಕ್ಯಾನ್‌ವಾಸಿನ ಮೇಲೆ ಮಹತ್ವಪೂರ್ಣ "ಮಾಸ್ಟರ್‌ಪೀಸ್"ಆಗಿ ಒದಗಿ ಬರುವ ಅವಳು, ಅಂದು ತಾಳಿದ ನಿಲುವುಗಳಿಗಾಗಿ ಮುಖ್ಯವಾಗುವಂತೆ, ಇಂದೂ ಸಹ ನಾವು ಮತ್ತೆ ಮತ್ತೆ ಕಟ್ಟಿಕೊಳ್ಳಬೇಕಾದ ಸ್ತ್ರೀತ್ವದ ರೂಪಕವಾಗಿ ಮುಖ್ಯವಾಗುತ್ತಾಳೆ. ಲಿಂಗಭೇದ ನೀತಿಯು ಅಂತಿಮವಾಗಿ ಚಾತುರ್ವರ್ಣ ವ್ಯವಸ್ಥೆಯ ಮುಖವಾಣಿವಾಗಿತ್ತು. ಆದ್ದರಿಂದ ಅಕ್ಕ ತನ್ನ ಭಿನ್ನ ಹೆಜ್ಜೆಗಳನ್ನು ಇಡುವಾಗಲೂ ಚಾತುರ್ವರ್ಣದ ನಂಬಿಕೆಗಳನ್ನು ಒಡೆಯುವ ಕೆಲಸವನ್ನೇ ಮಾಡುತ್ತಾಳೆ.

ಓದಿ ಓದಿ ವೇದ ವಾದಕ್ಕಿಕ್ಕಿತ್ತು
ಕೇಳಿ ಕೇಳಿ ಶಾಸ್ತ್ರ ಸಂದೇಹಕ್ಕಿಕ್ಕಿತ್ತು
ಅರಿದೆ ಅರಿದೆಹೆನೆಂದು ಆಗಮ ಅರಿಯಾಗಿ ಹೋಯಿತ್ತು
ಪೂರೈಸಿಹೆ ಪೂರೈಸಿಹೆನೆಂದು
ಪುರಾಣ ಪೂರ್ವದ ಬಟ್ಟೆಗೆ ಹೋಯಿತ್ತು
ನಾನೆತ್ತ ತಾನೆತ್ತ?
ಬೊಮ್ಮ ಬಟ್ಟ ಬಯಲು ಚೆನ್ನಮಲ್ಲಿಕಾರ್ಜುನ

ಈ ರೀತಿಯ ಪ್ರತಿಭಟನೆಗಳಲ್ಲಿ ಅವಳ ಹೋರಾಟವೂ ವೈಯಕ್ತಿಕ ನೆಲೆಯಿಂದ ಸಾಮೂಹಿಕ ನೆಲೆಗೆ ಚಾಚಿಕೊಳ್ಳುತ್ತದೆ. ಸ್ತ್ರೀಯರನ್ನು ಶೋಷಿಸುವ ಎಲ್ಲ ಬಗೆಯ ವಿದ್ಯಮಾನಗಳಿಗೆ ಕಾರಣೀಭೂತವಾಗಿರುವ ವರ್ಗಭೇದ ಮತ್ತು ಜಾತಿಭೇದಗಳ ವಿರುದ್ಧ ದಂಗೆ ಏಳುವದು ಅವಳಿಗೆ ಅನಿವಾರ್ಯವಾಗಿತ್ತು. ಹಲವು ವಚನಗಳಲ್ಲಿ ಇದನ್ನು ತುಂಬಾ ನೇರವಾಗಿ ಖಂಡಿಸುವ ಛಾತಿ ತೋರಿದ್ದಾಳೆ. "ಬಲ್ಲಿದ ಹಗೆಯವ ತೆಗೆವನ್ನಬರ ಬಡವರ ಹರಣ ಹಾರಿ ಹೋದ

ತೆರನಂತಾಯಿತ್ತು" ಎಂಬಂಥ ವಚನ ಮಾತುಗಳು ವ್ಯವಸ್ಥೆಯ ಬಗೆಗಿನ ಅವಳ ನಿಲುವನ್ನು ಬಿಚ್ಚಿಡುತ್ತವೆ. ಲಿಂಗ, ವರ್ಣ, ವರ್ಗ, ಭೇದಗಳನ್ನು ಖಂಡಿಸುವ ಅಕ್ಕನ ಆ ಹೊತ್ತಿನ ಹೋರಾಟ ಇಂದಿನ ನಮ್ಮಗಳ ಬದುಕಿಗೆ ಅನ್ವಯಿಸಿ ಕೊಳ್ಳಬೇಕಾದ ತುರ್ತು ಇದೆ.

ಬದುಕಿನ ಹೊರಳು ಹಾದಿಯಲ್ಲಿರುವ ನಮ್ಮಗಳ ಇದಿರು ತೆರೆದುಕೊಂಡಿರುವ ಲೋಕ ಸಂಕೀರ್ಣ ಮತ್ತು ಆತಂಕಪೂರಿತವಾಗಿದೆ. ಮಹಿಳೆ ಕತ್ತಲು ಗುಹೆಯಿಂದ ಅಕ್ಷರದ ಬಯಲು ಬಾಗಿಲಿಗೆ ಬಂದು ನಿಂತಿರುವುದರ ಹಿಂದೆ ಹಲವು ಸಂಘರ್ಷಗಳಿವೆ. ಅಸಂಖ್ಯ ನೋವು ಹಾಗೂ ಮೌನಗಳಿವೆ. ಈ ಸಂಘರ್ಷ ನೋವು, ಮೌನಗಳೆಲ್ಲ ನಮ್ಮವರಿಗೆ ಪ್ರಾಯೋಗಿಕ ಪಠ್ಯವಾಗಬೇಕಿದೆ. ಅಕ್ಕನಂಥವರ ಬದುಕು ಸ್ತ್ರೀ ಸಮುದಾಯಕ್ಕೆ ಸ್ವಾಭಿಮಾನ, ಅರಿವುಗಳ ಸಂಕೇತವಾಗಿ ನಿಲ್ಲಬೇಕು. ಎಂಟುನೂರು ವರ್ಷಗಳ ಹಿಂದೆ ಶ್ರೇಣಿಕೃತ ವ್ಯವಸ್ಥೆಯ ಮಧ್ಯದಲ್ಲಿ ಬದುಕಿಯೂ ಅಪಾರ ಸವಾಲುಗಳಿಗೆ ಒಡ್ಡಿಕೊಂಡಿರುವ ಅಕ್ಕ ಇವತ್ತಿಗೂ ಧಾರ್ಮಿಕ ಅಥವಾ ಶಾಬ್ದಿಕ ವಲಯದ ವೈಭವ ಮಾತ್ರವಾಗಿ ಒದಗಿ ಬಂದರೆ ಏನು ಪ್ರಯೋಜನ? ಒಂದೆಡೆ ಮತೀಯ ಪರಂಪರೆಯ ವಲಯದಲ್ಲಿ ಮಹಾದೇವಿಯಕ್ಕ ಅಕ್ಕನ ಬಳಗಗಳ ಆರಾಧನೆಗೆ, ವಿಚಾರ ರಹಿತ ಭಾವುಕ ಭಕ್ತರ ಭಜನೆಗೆ ಬಳಕೆಯಾದರೆ, ಇನ್ನೊಂದೆಡೆ ವಿದ್ವತ್ ಲೋಕದ ಸಾಹಿತ್ಯ ಮೀಮಾಂಸೆಯ ಕಸರತ್ತಿನಲ್ಲಿ ಕಳೆದುಹೋಗುತ್ತಿದ್ದಾಳೆ. ತುಂಬಾ ಸರಳ ಮತ್ತು ಪ್ರಖರ ವಾಗಿರುವ ಅಕ್ಕನ ಬದುಕನ್ನು ಈ ಎರಡೂ ಅಪಾಯಗಳಿಂದ ತಪ್ಪಿಸಬೇಕಿದೆ. ಅವಳ ಒಟ್ಟು ಚಿಂತನಾ ಲಹರಿಯನ್ನು ಈ ಹೊತ್ತಿಗೆ ಬದುಕಿಗೆ ಒದಗಿ ಬರಲು ಜೀವಸೆಲೆಯಾಗಿ ಹರಿಸಬೇಕಿದೆ.

ನಾವು ಪ್ರಜಾತಾಂತ್ರಿಕ ವ್ಯವಸ್ಥೆಯನ್ನು ಒಪ್ಪಿಕೊಂಡು ಅರ್ಧಶತಮಾನ ಗತಿಸಿ ಹೋಗಿದೆ. ಆದರೂ ಹಿಡಿಯಷ್ಟು ಮಹಿಳೆಯರಿಗೆ ಮಾತ್ರ ಅಕ್ಷರದ ಅವಕಾಶ ಸಿಕ್ಕಿದೆ. ಆರ್ಥಿಕ ವ್ಯವಸ್ಥೆಯ ಪಲ್ಲಟದ ಕಾರಣವಾಗಿ ಮಹಿಳೆಯರು ಮನೆಯ ಹೊರಗೂ ಉತ್ಪಾದನಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಆದಾಗ್ಯೂ ಅವರು ಪುರುಷ ಕೇಂದ್ರಿತ ಮೌಲ್ಯ ಗಳನ್ನು ಬಿಟ್ಟು ಹೊರಬರಲಾಗುತ್ತಿಲ್ಲ. ತಮ್ಮ ಆಗುಹೋಗುಗಳನ್ನು ತಾವೇ ನಿರ್ಣಯಿಸುವ ನೀತಿ ನಿರೂಪಣಾ ಶಕ್ತಿಯನ್ನು ಸಂಚಯಿಸಿಕೊಳ್ಳಲಾಗುತ್ತಿಲ್ಲ. ಆದ್ದರಿಂದಲೇ ನೂರಾರು ವರ್ಷಗಳ ಹಿಂದಿರುವ ಸ್ತ್ರೀಯರ ಸಮಸ್ಯೆಗಳು ಇಂದು ಹೊಸರೂಪ ಮತ್ತು ಆಕಾರ ತೊಟ್ಟುಕೊಂಡು ಮತ್ತೆ ಮತ್ತೆ ವಿಜೃಂಭಿಸುತ್ತಿವೆ. ವರದಕ್ಷಿಣೆ ಸಾವು, ಸ್ತ್ರೀ ಭ್ರೂಣ ಹತ್ಯೆ, ಲೈಂಗಿಕ ಕಿರುಕುಳ, ಕೌಟುಂಬಿಕ ಹಿಂಸೆ ಮುಂತಾದವುಗಳು ಪ್ರಸ್ತುತ ವ್ಯವಸ್ಥೆಯ ಅಣಕಗಳು. ಇಂದಿಗೂ ಜೀವಂತವಿರುವ ಬಾಲ್ಯ ವಿವಾಹ ಪದ್ಧತಿ, ದೇವದಾಸಿ ಪದ್ಧತಿ, ಬಾಲ ವೇಶ್ಯಾವಾಟಿಕೆ, ಬಹುಪತ್ನಿತ್ವ ಆಧುನಿಕ ಬದುಕಿನ ಸವಾಲುಗಳಾಗಿವೆ. ಅಕ್ಕನಂತಹವರ ಬಹುನೆಲೆಯ ಹೋರಾಟಗಳು ಸಂಭವಿಸುತ್ತಿರುವ ಗಳಿಗೆಗಳಲ್ಲೂ ಮಹಿಳಾ ಮೀಸಲಾತಿ ಮಸೂದೆ ನೆನೆಗುದಿಗೆ ಬಿದ್ದಿರುವದು ಪ್ರಜಾಪ್ರಭುತ್ವದ ವ್ಯಂಗ್ಯವಲ್ಲವೆ? ವ್ಯವಸ್ಥೆ ಈ ಎಲ್ಲ ಕ್ರೌರ್ಯಗಳ ನಡುವೆ ಬದುಕುತ್ತಿರುವ ನಮ್ಮಗಳಿಗೆ ಅಕ್ಕನ ವ್ಯಕ್ತಿತ್ವ ಧಾರಣ ಶಕ್ತಿಯಾಗಬೇಕು. ನಮ್ಮ ಬಿಕ್ಕಟ್ಟು ಏನೆಂದರೆ, ಅಕ್ಕನ ಬದುಕು ಸಾಮಾನ್ಯ ಹೆಣ್ಣೊಬ್ಬಳು ತನ್ನ ಅಸ್ತಿತ್ವಕ್ಕಾಗಿ ಸಾರಿದ ದಂಗೆಯಾಗಿ ಗ್ರಹಿಕೆಗೆ ಬರುವು ದಕ್ಕಿಂತ ಹೆಚ್ಚಾಗಿ ಆಧ್ಯಾತ್ಮಿಕ ಪಠ್ಯವಾಗಿ, ಬಳಕೆಯಾಗುತ್ತಿರುವುದು. ವೈದಿಕ ಮನಸ್ಸುಗಳಿಗೆ ಅಕ್ಕನನ್ನು ಸಂಭಾಳಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಈ ಕಾರಣವಾಗಿಯೇ ಅವು ಒಟ್ಟು ವಚನ ಚಳವಳಿಯನ್ನು ನವವೈದಿಕತೆಯೊಂದಿಗೆ ಸಮೀಕರಿಸುವ ತಂತ್ರ ಹೆಣೆಯುತ್ತವೆ. ಆದರೆ

ಮಹಿಳಾ ಲೋಕ ಅತ್ಯಂತ ಎಚ್ಚರದಿಂದ ಅಕ್ಕನ ಬದುಕು ಮತ್ತು ಬರಹಗಳನ್ನು ಸಾಕ್ಷಿ ಪ್ರಜ್ಞೆಯಾಗಿ ಕಾಯ್ದುಕೊಳ್ಳ ಬೇಕಾದ ಜರೂರಿ ಇದೆ. ಇಲ್ಲವಾದರೆ ಆಧುನಿಕತೆ, ಪರಿವರ್ತನೆಯ ನೆವದಲ್ಲಿ ಸ್ತ್ರೀಯರನ್ನು ಮತ್ತೆ ಮತ್ತೆ ಮಾರ್ಕೆಟಿನ ಸರಕಾಗಿಸುವ ಅಪಾಯ ಇದೆ. ಜಾಗತೀಕರಣದ ಪ್ರಮುಖ ವಿದ್ಯಮಾನಗಳಾಗಿರುವ, ಜಾಹಿರಾತು, ತಂತ್ರಜ್ಞಾನ, ಇಂಟರನೆಟ್, ವ್ಯಕ್ತಿ ಕೌಶಲ್ಯ ದಂಥವುಗಳು ಮಹಿಳಾ ಲೋಕದ ದಿಕ್ಕು ತಪ್ಪಿಸುತ್ತಿರುವದನ್ನು ಈ ಹೊತ್ತು ಗ್ರಹಿಸದೆ ಹೋದರೆ ದೊಡ್ಡ ದುರಂತ ಕಾದಿದೆ. ಆದ್ದರಿಂದ ಪ್ರಭುತ್ವವನ್ನು, ಸಂಪತ್ತು, ರಾಣಿತ್ವದ ಪದವಿಗಳನ್ನು ಧಿಕ್ಕರಿಸಿದ ಅಕ್ಕ ಗ್ಲಾಮರಸ್ ಲೋಕ ಒಡ್ಡುವ ಹಣದ ಹುಚ್ಚು ಹೊಳೆಯಲ್ಲಿ ಕೊಚ್ಚಿ ಹೋಗುತ್ತಿರುವ ಸಮುದಾಯಕ್ಕೆ ಎಚ್ಚರದ ಗಂಟೆಯಾಗಬೇಕು.

೧೮. ಅಕ್ಕ ಹಾಗೂ ಮಹಿಳೆಯರ ಅಸಾಂಪ್ರದಾಯಿಕ ಸಾಹಸಗಳು

•

ಡಾ. ವೀಣಾ ಬನ್ನಂಜೆ

ಒಮ್ಮೆ ಶ್ರೀ ಬನ್ನಂಜೆ ಗೋವಿಂದಾಚಾರ್ಯರು ಚಾಣಕ್ಯನ 'ಅರ್ಥಶಾಸ್ತ್ರ'ದ ಉಪನ್ಯಾಸ ನಡೆಸಿದ್ದರು. ಸಭಿಕರಲ್ಲಿ ನಾನೂ ಒಬ್ಬಳು. ಅವರ ಮಾತು ಜೀವ ಬೆಳವಣಿಗೆಯ ಕುರಿತು ಇತ್ತು. ಪ್ರತೀ ತಂದೆ ತನ್ನ ಮಗನಲ್ಲಿ, ಮಗ ಅವನ ಮಗನಲ್ಲಿ ಹೀಗೆ ತನ್ನ ಕಂಟಿನ್ಯೂಟಿಯನ್ನು ಕಾಣುತ್ತಿರುತ್ತಾನೆ. ಮುಂದೆ ಚರ್ಚೆಯ ಸಂದರ್ಭ. ನಾನು ಆಗಿನ್ನು ೧೮ರ ಹುಡುಗಿ, ಎದ್ದು ನಿಂತು ಪ್ರಶ್ನಿಸಿದೆ, "ಪ್ರತೀ ಹೆಣ್ಣು ಯಾರಲ್ಲಿ ಕಂಟಿನ್ಯೂಟಿ ಕಾಣಬೇಕು? ತಾಯಿಯ ಜೀವ ಪರಂಪರೆಯನ್ನು ಮುಂದುವರಿಸುವ ಅಪೇಕ್ಷೆ ಅವಳಿಗಿಲ್ಲವೆ? ಇದ್ದರೆ ಅದು ಯಾರ ಮುಖಾಂತರ? ಮಗಳು ಸಾಧುವಲ್ಲವೆ?" ಅದಕ್ಕೆ ನಮ್ಮ ತಂದೆ ಬನ್ನಂಜೆ, "ಗಂಡು ಜೀವ ತನ್ನನ್ನು ಬೆಳೆಸುವ ಕಡೆಗೆ ಹೆಣ್ಣು ಪಾತ್ರವಾಗಿ, ಕ್ಷೇತ್ರವಾಗಿ ಸಹಕರಿಸುತ್ತಾಳೆ. ಅದೇ ಅವಳ ಸಾರ್ಥಕತೆ. ಅವಳಿಗೆ ಕಂಟಿನ್ಯೂಟಿಯ ಮಾತು ಬರುವುದಿಲ್ಲ" ಎಂಬರ್ಥದ ಉತ್ತರ ನೀಡಿದ್ದರು. ತಂದೆಯನ್ನು ಹಾಗೆ ಪ್ರಶ್ನಿಸಬಾರದೆಂದು ಅಲ್ಲಿರುವ "ಹಿರಿಯರು" ನನ್ನನ್ನು ತಿದ್ದಿ ನುಡಿದಿದ್ದರು. ನನ್ನ ಪ್ರಶ್ನೆ ತಂದೆಯಾಚೆಗೂ ಚಾಚಿಯೇ ಇತ್ತು.

ಅದಾಗಿ ಆರು ವರುಷಗಳ ಬಳಿಕ ಬಸ್ಸಿನಲ್ಲಿ ಪ್ರತ್ಯೇಕತೆ ಬೇಕೆ ಬೇಡವೆ ಎಂಬ ಚರ್ಚೆಯ ಬಿಸಿಯಿದ್ದ ಕಾಲ. ನಮ್ಮಲ್ಲಿಗೆ ತೇಜಸ್ವಿನಿ ನಿರಂಜನ ಬಂದಿದ್ದರು. ಅವರು ಪ್ರತ್ಯೇಕತೆಯನ್ನು, ಮೀಸಲಾತಿ ಯನ್ನು ಅನುಮೋದಿಸಿ ಮಾತಿಗೆ ತೊಡಗಿದ್ದರು. ನಾನು, "ಮೀಸಲಾತಿ ಲಿಂಗಾಧಾರಿತವಿರಲಿ, ಜಾತ್ಯಾಧಾರಿತವಿರಲಿ. ಬೇಡ. ಅದು ನಮ್ಮ ಬೆಳವಣಿಗೆಯನ್ನು ತಡೆಯುತ್ತದೆ. ಬಸ್ಸಿನಲ್ಲಿ ಸೀಟು ಕಾಯುವ ಪ್ರತ್ಯೇಕತೆಯಂತೂ ಬೇಡವೇ ಬೇಡ. ಅದು ನಾವು ಸೀಟಿಗಾಗಿ ಹೋರಾಡದಷ್ಟು ದುರ್ಬಲರನ್ನಾಗಿಸುತ್ತದೆ. ನಾವೇನೂ ಅಷ್ಟು ಬಲಹೀನರಲ್ಲ" ಎಂದು ವಾದಿಸಿದೆ. ಅಲ್ಲಿಯೂ ಹಲವು ಮಂದಿ ನನಗೆ "ಸೌಮ್ಯವಾಗಿ" ಮಾತಾಡುವಂತೆ ಸೂಚನೆ ಕೊಟ್ಟಿದ್ದರು. ನಾನು ಬಲಕಳೆದುಕೊಳ್ಳಬಾರದೆಂದೇ ನಡೆಯುತ್ತಿದ್ದೆ.

ಅಂದಿನಿಂದ ಇಂದಿನವರೆಗೂ ನನ್ನನ್ನು ಎರಡು ಮುಖ್ಯ ಸಂಗತಿಗಳು ನಡೆಸುತ್ತವೆ. ನನಗೆ ಆಗ ಕಾಣಿಸಿದ್ದು ಇಷ್ಟು:

೧. ಜೀವ ಬೆಳವಣಿಗೆಗೆ ಕಾತರಿಸುತ್ತದೆ.
೨. ಅದಕ್ಕೆ ಲಿಂಗದ ಮಿತಿ ಇದೆ.

ಇವೆರಡನ್ನು ನಾನು ತೆರೆದ ಕಣ್ಣಿನಿಂದ ನೋಡುತ್ತಲೇ ಇದ್ದೆ. ನನಗೇ ಪ್ರತೀ ನಿಮಿಷಕ್ಕೂ ಭೇದ ಸೇರುತ್ತಿರಲಿಲ್ಲ. ನನ್ನ ವೃತ್ತಿಯನ್ನು ಗೌರವಾದರಗಳಿಂದ ನೋಡುವ, ಆಡುವ ಜನ ನನ್ನ ತಾಯಿಯ ಕೆಲಸಕ್ಕೆ ಕಿಮ್ಮತ್ತು ಕೊಡುವುದಿಲ್ಲ ಎಂಬ ಅಸಮಾಧಾನವಿತ್ತು. ಅವುಗಳ ಜತೆಜತೆಗೆ ಸ್ತ್ರೀಯೆಂಬ ಕಾರಣಕ್ಕೆ ನನ್ನನ್ನು, ನನ್ನಂಥ ಎಲ್ಲರನ್ನು ಸಮಾಜದ ಸಾಮೂಹಿಕ ಸಂದರ್ಭಗಳು, ಆಚರಣೆಗಳು ಬೇರ್ಪಡಿಸುವ ಸಂಗತಿಯನ್ನು ಕಾಣುತ್ತಿದ್ದೆ. ಆಗೆಲ್ಲ ಇವನ್ನು ಹರಿದು ಹೊರಬರುವ ಒಂದು ದಾರಿಯ ಹುಡುಕಾಟವೂ ಎನ್ನೊಳಗೆ ನಡೆಯುತ್ತಿತ್ತು.

ನಾನು ಆಗ ತೆರದ ಕಣ್ಣುಗಳನ್ನು ಈಗ ಇನ್ನಷ್ಟು ಅಗಲಿಸಿ ನೋಡುತ್ತಿದ್ದೇನೆ. ನನ್ನ ಸುತ್ತಮುತ್ತಲಿನ ಜನರ ದೇಹಪ್ರಜ್ಞೆ, ಲಿಂಗಪ್ರಜ್ಞೆ, ಲಿಂಗದ ಅಸಮಾನತೆಯ ಎಲ್ಲ ಭೇದಗಳನ್ನು ನಾನು ಓದತೊಡಗಿದ್ದೇನೆ. ಅದರೊಳಗೆ ನನ್ನ ಕುರಿತ ಒಂದು ಓದೂ ತೀವ್ರವಾಗಿ ನಡೆಯುತ್ತಿದೆ.

ನಾನು ಸಮಾಜದ ಒಳಗಿದ್ದು ನನ್ನವರಲ್ಲದವರನ್ನೂ, ನನ್ನವರನ್ನೂ ಕಣ್ಣು ತೆರೆದು ನೋಡುವ ಪ್ರಯತ್ನ ಮಾಡುತ್ತಿದ್ದೇನೆ. ಆಗೆಲ್ಲ ನನಗೆ ಕಾಣಿಸಿದ್ದು ಇಷ್ಟು, ಇಲ್ಲಿ ಎರಡು ಸಂಗತಿಗಳಿಗಾಗಿ ನಿತ್ಯ ಹೋರಾಟ ನಡೆದಿದೆ. ಒಂದು ನಾನು ಎಂಬುದನ್ನು ಸಾಬೀತು ಪಡಿಸುವ ಅಹಂಕಾರ ಸ್ಥಾಪನೆ. ಇನ್ನೊಂದು ಅದನ್ನು ಸಾಬೀತು ಪಡಿಸಿಕೊಳ್ಳುವುದಕ್ಕೆ ಇರುವ ಈ ದೇಹದ ಜತೆಗೆ ಅಥವಾ ಲಿಂಗದ ಜತೆಗಿನ ಸಂಬಂಧ.

ಇವುಗಳನ್ನು ಅಹಂಪ್ರಜ್ಞೆ ಮತ್ತು ಲಿಂಗಪ್ರಜ್ಞೆ ಎಂದು ಗುರುತಿಸುತ್ತಿದ್ದೇನೆ. ಕೆಳವರ್ಗದ ಹೆಣ್ಣುಮಕ್ಕಳಿಂದ ತೊಡಗಿ ಮೇಲ್ವರ್ಗದವರೆಗಿನ ಮೂರು ಆಯಾಮಗಳಲ್ಲಿ ಇವಕ್ಕೆ ಬೇರೆ ಬೇರೆ ಅರ್ಥವ್ಯಾಪ್ತಿಯಿದೆ. ೧ ಒಬ್ಬ ಕೆಳವರ್ಗದ ಹೆಣ್ಣುಮಗಳು ಎಂದಿಗೂ ಕೂಡ ಬಸ್ಸಿನಲ್ಲಿ ಪ್ರತ್ಯೇಕ ಸೀಟುಬೇಕು ಎಂದು ನಮ್ಮ ಹಳ್ಳಿಯಲ್ಲಿ ವಾದಿಸುವುದಿಲ್ಲ. ಅವಳಿಗೆ ಮೈಯ ಹತ್ತಿರ ಬಂದು ನಿಲ್ಲುವ ಗಂಡಸು ಯಾವ ರೋಮಾಂಚನವನ್ನೂ ಉಂಟು ಮಾಡಲಾರ. ಅವಳ ಪಕ್ಕಕ್ಕೆ ಬಂದು ನಿಂತ ಅಂತದ್ದೇ ವರ್ಗದ ಗಂಡಸಿಗೂ ಅವರು ದಿನ ಬೆಳಗಾದರೆ ಕೂಲಿಯ ಸಂದರ್ಭದಲ್ಲಿ, ಮುಟ್ಟಿ, ಸವರಿ ಮಾಡುವ ಕೆಲಸಗಳೇ ಅಂಥವು. ಅವರ ಸೆನ್ಸಿಟಿವಿಟಿಗೆ ಇನ್ನೂ ಅಂಥ ಸೂಕ್ಷ್ಮ ಸಂವೇದನೆಯ ಭಾಗ ಬಂದಿಲ್ಲ. ಅವಳು ಎಲ್ಲರ ಮುಂದೆ ಬಟಾಬಯಲಲ್ಲಿ ಸೊಂಟದ ಕೆಳಗೊಂದು ಅರಿವೆ ಬಿಟ್ಟರೆ ಉಳಿದಂತೆ ಅರೆಬೆತ್ತಲಾಗಿ ಸ್ನಾನ ಮಾಡುತ್ತಾಳೆ. ಮೊಲೆ, ಮುಚ್ಚಬೇಕಾದ ಅಂಗವೇ ಅಲ್ಲ ಅವಳಿಗೆ. ಮಗು ಉಣ್ಣುವ ಪದಾರ್ಥ ಎಂಬುದಷ್ಟೇ ಅವಳ ಪ್ರಜ್ಞೆ. ಇದು ಅವಳ ದೇಹ ಪ್ರಜ್ಞೆಯ ಕುರಿತ ಅಸೂಕ್ಷ್ಮ ಸಂವೇದನೆ. ಅವಳಗಿನ್ನು ಲಿಂಗಪ್ರಜ್ಞೆ ಅನತಿದೂರ. ಕಾಮ ಎಂದರೆ ಅದು ಸಂಭೋಗವೇ. ಮುಟ್ಟುವುದು, ಮುಟ್ಟಿಸಿ ಕೊಂಡಾಗ ಪ್ರೀತಿ ಹುಟ್ಟುವ ಭಾಗ ಇನ್ನು ಕೇಳದ ಸಂಗತಿ. ಅವಳು ಬದುಕುವ ರೀತಿಗೆ ಅಜ್ಞಾನ, ಮುಗ್ಧ ಇಂಥ ಹೆಸರುಗಳನ್ನಿತ್ತರೂ ಅದು ಲಿಂಗಪ್ರಜ್ಞೆಯನ್ನು ಜಾಗೃತವಲ್ಲದ ಸ್ಥಿತಿ. ೨. ಮೇಲ್ವರ್ಗದವರಿದ್ದಾರೆ, ಅವರದು ಇನ್ನೊಂದು ಮುಖ. ಅಲ್ಲಿ ಅವರಿಗೆ ಅವಲಂಬನೆಗಿಂತ ಸ್ವಾತಂತ್ರ್ಯ ಹೆಚ್ಚು. ತಮ್ಮದೇ ವಾಹನ, ತಮ್ಮದೇ ಗುಂಪು, ಇದರ ಜತೆಗೆ ಹೆಚ್ಚು ಬದುಕುವವರು ಇವರು. ಇವರು ತಮ್ಮ ಕೆಳಗಿನ ಕೆಳ ಮತ್ತು ಮಧ್ಯಮ ವರ್ಗಗಳ ಸಮೀಕರಣಕ್ಕೆ ಬರಲಾರರು. ಅವರಿಗೆ ಲಿಂಗಪ್ರಜ್ಞೆ ಇದ್ದರೂ ಅದಕ್ಕೆ ಒಂದು ಸೀಮಿತ ಚೌಕಟ್ಟಿನೊಳಗೆ ಮುಕ್ತಿ. ಅದು

ಸಾಮಾಜಿಕ ಸಂದರ್ಭಕ್ಕೆ ಮುಖಾಮುಖಿ ಆಗುವುದು ಕಡಿಮೆ. ೩. ಎಲ್ಲ ಸಮಸ್ಯೆಗಳ ಮೂಲವಿರುವುದು ಮಧ್ಯಮ ವರ್ಗದಲ್ಲಿ. ಇವರಿಗೆ ದೇಹದ ಸುತ್ತ ಸಣ್ಣ ಸೆನ್ಸಿಟಿವಿಟಿ. ಮುಟ್ಟಿದರೆ ಮುನಿಯುವ ಮತ್ತು ಮುಟ್ಟಿದ್ದು ಇಷ್ಟವಾದರೆ ಅರಳುವ ಎರಡು ಸಂಗತಿಗಳ ಮಟ್ಟಿಗೂ ಇವರು ಜಾಗೃತರು. ಆದ್ದರಿಂದಲೇ ಇವರದು. ತೀರ ಜೆನ್ವಿನ್ ಸಮಸ್ಯೆ. ಆಯ್ಕೆಯ ಸ್ವಾತಂತ್ರ್ಯ ಮೇಲ್ವರ್ಗದವರಷ್ಟು ಸರಳವಿಲ್ಲ ಮತ್ತು ಕೆಲವರ್ಗದವರಿಗಿಂತ ಉತ್ತಮರೆಂಬ ಭಾವದಿಂದಾಗಿ ಇವರದು ಅತಂತ್ರ ಸ್ವರ್ಗ. ಇವರದು ಲಿಂಗದ ಅರೆ ಪ್ರಜ್ಞಾವಸ್ಥೆ. ನಾನು ಎನ್ನುವುದನ್ನು ಎಸ್ಟಾಬ್ಲಿಶ್ ಮಾಡುವ ಅಹಂಪ್ರಜ್ಞೆಗೆ ಸಂಬಂಧಿಸಿಯೂ ಇದೇ ಮಾತು ಅನ್ವಯವಾಗುತ್ತದೆ. ಕೆಳವರ್ಗದ ಮಹಿಳೆಗೆ ಇಂದು ದುಡಿದು ಇಂದಿನ ರೊಟ್ಟಿ ಸಂಪಾದನೆಯೇ ಅವಳ ಟಾರ್ಗೆಟ್. ತನ್ನನ್ನು ಗುರುತಿಸಬೇಕು, ಗುರುತಿಸಿ ಕೊಳ್ಳಬೇಕು ಎಂಬ ಕಡೆಗೆ ಅವಳದು ತೀರ ಸಲ್ಲದ ನಡೆ. ಅವಳಿಗೆ ಅದು ಬೇಕಿಲ್ಲ ಮತ್ತು ಗೊತ್ತಿಲ್ಲ. ದುಡಿಮೆ ಅವಳ ಅಗತ್ಯ. ಮೇಲ್ವರ್ಗದವರಿಗೆ ಅವರ ಹಣ ತಂದುಕೊಟ್ಟ ಘನಸ್ತಿಕೆ ಸಾಕು. ಅವರಿಗೆ ತನ್ನನ್ನು ಗುರುತಿಸಿಕೊಳ್ಳುವುದಕ್ಕಿಂತಲೂ ಹಣದ ದೊಡ್ಡಸ್ತಿಕೆಯ ಬಲ. ಅದರಿಂದಲೇ ತೃಪ್ತರೆಂಬ ಕಾರಣಕ್ಕೇ ಅವರು ಸಾಮಾಜಿಕ ಸಂದರ್ಭದ ಐಡೆಂಟಿಟಿ ಕ್ರೈಸಿಸ್‌ನ ಕುರಿತು ಅಷ್ಟಾಗಿ ತಲೆಕೆಡಿಸಿಕೊಳ್ಳುವುದಿಲ್ಲ.

ಆದರೆ ಮಧ್ಯಮ ವರ್ಗದವರಿಗೆ ತನ್ನನ್ನು ಗುರುತಿಸಿಕೊಳ್ಳುವುದು ಮುಖ್ಯ. ಆ ದಾರಿಗೆ ಬರುವ ತೊಡಕುಗಳೆಲ್ಲ ಆಗ ನಿವಾರಣೆಯಾಗಬೇಕು. ಅದಕ್ಕಾಗಿ ಹೋರಾಟ. ಆಗ ಹೆಣ್ಣು ತನ್ನನ್ನು ಎಲ್ಲಿಯಾದರೂ ಐಡೆಂಟಿಫೈ ಮಾಡುವ ದಾರಿಯಲ್ಲಿ ಮೊದಲು ಗೆಲ್ಲಬೇಕಾದದ್ದು ದೇಹ ಅದರ ಅಸಮಾನತೆ. ಹೀಗಾಗಿ ಅಹಂಪ್ರಜ್ಞೆಯ ಕುರಿತು ಒಂದಿಷ್ಟು ಪ್ರಯತ್ನ. ಅಲ್ಲಿಯ ನಡೆಗೆ ಬೇರೆ ಬೇರೆ ಹೋರಾಟ.

ಒಟ್ಟಿನಲ್ಲಿ ಅಜ್ಞಾನ, ಅರೆಜ್ಞಾನ ಮತ್ತು ಸುಜ್ಞಾನ. ಅಪ್ರಜ್ಞೆ, ಅರೆಪ್ರಜ್ಞೆ ಮತ್ತು ಪೂರ್ಣಪ್ರಜ್ಞೆ, ಮೊದಲನೆಯವರು ಹೋರಾಡುವುದಿಲ್ಲ. ಎರಡನೆಯವರು ಒದ್ದಾಡುತ್ತಾರೆ. ಮೂರನೆಯವರು ತ್ರಯಸ್ಥರಾಗುತ್ತಾರೆ.

ಒಟ್ಟು ಸಾಮಾಜಿಕ ಬೆಳವಣಿಗೆಯನ್ನು ಗಮನಿಸಿದರೆ ಒಂದು ವರ್ಗವು ಲಿಂಗ ಅಸಮಾನತೆಗಾಗಿ ಹೋರಾಡುತ್ತಿದೆ. ಮೀಸಲಾತಿ, ಪ್ರತ್ಯೇಕತೆ, ದುಡಿಮೆ, ಮಹಿಳೆ ಈ ಎಲ್ಲ ಸಂಗತಿಗಳು ಲಿಂಗ ಅಸಮಾನತೆಯ ಪ್ರಾಡಕ್ಟುಗಳೇ. ಇದು ನಡೆದು ವರುಷ ಕಾಲವಾದರೂ ನಾವಿನ್ನು ಸಮಾನತೆಯನ್ನು ಸಾಧಿಲ್ಲ. ಕಾರಣವಿಷ್ಟೆ, ಲಿಂಗ ಅಸಮಾನತೆಯ ಮೂಲ ಕಾರಣವಲ್ಲ ಅದು ಲಿಂಗ ಭಯದ ಬೈಪ್ರಾಡಕ್ಟ್. ಎಲ್ಲಿಯವರೆಗೆ ಲಿಂಗಭೀತಿ ನಿರ್ಮೂಲವಾಗುವುದಿಲ್ಲವೋ, ಅಲ್ಲಿಯವರೆಗೆ ಲಿಂಗ ಅಸಮಾನತೆ ಪರಿಹಾರವಾಗಲಿಕ್ಕಿಲ್ಲ. ಸಮಾನತೆಯ ಕೆಲ ಉದಾಹರಣೆಗಳನ್ನು ಕೊಟ್ಟು ನಾವು ಸಮಾಧಾನಿಸಿಕೊಂಡರೂ ಮೂಲದ ಕಳೆಯನ್ನು ನಾವಿನ್ನು ಚಿವುಟಿಲ್ಲ. ಅದಕ್ಕೆ ಲಿಂಗಭೀತಿಯನ್ನು ಕಳೆದುಕೊಳ್ಳುವ ಕಡೆ ಕಣ್ಣು ಹೊರಳಿಸಬೇಕು:

ಗಂಡು ಗಂಡಾದೊಡೆ ಹೆಣ್ಣಿನ ಸೂತಕ
ಹೆಣ್ಣು ಹೆಣ್ಣಾದೊಡೆ ಗಂಡಿನ ಸೂತಕ
ಮನದ ಸೂತಕ ಹಿಂಗಿದೊಡೆ
ತನುವಿನ ಸೂತಕಕ್ಕೆ ತೆರಹುಂಟೆ
ಮೊದಲಲ್ಲಿದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ

ಅಕ್ಕಳ ಈ ಮಾತು ಇದನ್ನೇ ಧ್ವನಿಸುತ್ತದೆ. ನಮ್ಮ ಎಲ್ಲ ಭೀತಿಯ ಮೂಲ ಈ ದೇಹ ಭಯ. ಅದು ಲಿಂಗ ಪ್ರಜ್ಞೆಯಿಂದ ಹುಟ್ಟಿದೆ ಎಂದೇ ದೇಹ ಕುರಿತು ಅಜ್ಞಾನ. ಉಳ್ಳವರಿಗೆ ಲಿಂಗಪ್ರಜ್ಞೆ ಬಹಳವಿಲ್ಲದೆ ಅವರಿಗೆ ಅದು ಒಂದು ಸಮಸ್ಯೆಯಾಗದು. ಪೂರ್ಣ ತಿಳಿದು ದಾಟಿದ ಸಂತನೂ ನಿರಾಳವಾಗಿ ಬದುಕಬಲ್ಲ. ಎಡಬಿಡಂಗಿಗಳಿಗೆ ಬಿಡಿಸಲಾಗದ ಕಗ್ಗಂಟು ಇದು. ವಾಸ್ತವಿಕ ಲಿಂಗಪ್ರಜ್ಞೆಯ ಪೂರ್ಣ ಅರಿವುಳ್ಳ ಸಂತನ ಕಣ್ಣು ದೇಹದಿಂದ ಲಿಂಗಕ್ಕೆ, ಲಿಂಗದಿಂದ ಜೀವಕ್ಕೆ ನಡೆದಿರುತ್ತದೆ. ಅಲ್ಲಿ ಬದುಕು ತುಂಬ ಸುಖದಾಯಕ. ಕಾರಣ ಸ್ಪಷ್ಟ. ಲಿಂಗಭಯ ದಾಟಿದವನಿಗೆ ಹಗಲು ರಾತ್ರಿ ಭೇದವಿಲ್ಲ. ಗಂಡು ಹೆಣ್ಣು ವ್ಯತ್ಯಾಸ ತಿಳಿಯಿ ವುದಿಲ್ಲ. ಏಕಾಂಗಿ, ಸಾರ್ವಜನಿಕ ಎಂಬ ಎರಡು ಮುಖಗಳಿಲ್ಲ. ಸ್ತ್ರೀಯ ಸ್ತ್ರೀತನವೇ ಮುಳುವಾಗುವ ಭಯವಿಲ್ಲ. ಈ ನಿಟ್ಟಿನ ನಡೆ ಬೆಳವಣಿಗೆಯ ಸೋಪಾನ. ಆದರೆ ಅದು ಇನ್ನೂ ಸಾಧ್ಯವಾಗಿಲ್ಲ.

ಲಿಂಗಭೀತಿ ಕಳೆಯುವುದು ಹೇಗೆ? 'ಹೇಳಬಾರದಯ್ಯ' ಎಂಬುದೇ ಸರಿಯಾದ ಉತ್ತರ. ಮಹಿಳೆಗೆ ತಾಯಿಯಾಗುವ ಗುಣವೈಶಿಷ್ಟ್ಯವಿದೆ. ತಾಯಿಯಾಗುವುದನ್ನೇ ಅವಳ ಲಿಮಿಟೇಶನ್ ಮಾಡಿತು ಸಮಾಜ. ಅದನ್ನು ಕರ್ತವ್ಯವೆಂದು ಘೋಷಸಿತು. ಮಹಿಳಾವಾದಿಗಳು ಹೋರಾಟಕ್ಕೆ ತೊಡಗಿದರು. ಅದು ಕರ್ತವ್ಯವಲ್ಲ ಅವಳ ಆಯ್ಕೆ ಎಂದರು. ಎಲ್ಲವೂ ಚಂದವೇ. ಮಹಿಳೆ ಕುಟುಂಬದ ಬಂಧವವಿಲ್ಲದೆ, ಮದುವೆಯ ಚೌಕಟ್ಟಿನೊಳಗಲ್ಲದೆ ತಾಯಿಯಾಗುವುದನ್ನು ಕುರಿತು ಯೋಚಿಸಿದರು. ವಾಸ್ತವಿಕ ಹೋರಾಟ ಈಗಲೂ ಮುಂದುವರಿದಿದೆ.

ಕೌಟುಂಬಿಕ ಬಂಧನವಿಲ್ಲದೆ ತಾಯಿಯಾಗುವುಧು, ಬಂಧನದೊಳಗೆ ತಾಯಿಯಾಗುವುದು ಇವು ಎರಡು ವರ್ಗಗಳು. ಮೂರನೆಯದೊಂದಿದೆ. ಮದುವೆಯೂ ಆಗದೆ, ಪುರುಷನ ಸಂಪರ್ಕವೂ ಇಲ್ಲದೆ ತಾಯಿ ಆಗುವುದು. ಅದಕ್ಕೆ ಲಿಂಗ ದೇಹವುಳ್ಳ ಗರ್ಭಪಾತ್ರೆ ಬೇಡ. ಹೃದಯಪಾತ್ರೆಯಲ್ಲಿ ಅದರ ಸೃಷ್ಟಿ ಔರಸವೇ ಅದರ ಸಂತಾನ. ಈ ಮೂರನೆಯ ತಾಯಿಗೆ ಅನಂತ ಸಂಸಾರ. ಇಲ್ಲಿ ಹೆಣ್ಣು ಮಾತ್ರವಲ್ಲ ಗಂಡೂ ತಾಯಿಯಾಗಬಹುದು. ಈ ತಾಯಿಗೆ ಲಿಂಗಪ್ರಜ್ಞೆ ಇಲ್ಲ. ಮಗು ಯಾವ ಲಿಂಗ? ಗುರು ಯಾವ ಲಿಂಗ? ಆತ್ಮ ಯಾವ ಲಿಂಗ? ಇದನ್ನು 'ಥರ್ಡ್ ಜೆಂಡರ್' ಅಂದರೆ ಸ್ತ್ರೀವಾದಿಗಳ ಶಿಖಂಡಿ ಸೃಷ್ಟಿಯಾಗಿ ಬಿಡುತ್ತದೆ. ಅದಲ್ಲ ಇದು. ಇದು ಪುಲ್ಲಿಂಗವಲ್ಲ, ಸ್ತ್ರೀಲಿಂಗವಲ್ಲ, ನಪುಂಸಕವೂ ಅಲ್ಲ. ನಾಲ್ಕನೆಯ ಲಿಂಗಪ್ರಜ್ಞೆ ಆಗಿಬಿಟ್ಟರೆ ಬೆಳವಣಿಗೆ ಒಂದೇ ನಡೆ. ಜತೆಗಿರುವವರನ್ನು ನಡೆಸುವುದೇ ಅದರ ಗುರಿ. ಹಸಿವುಳ್ಳವನನ್ನು ಎತ್ತಿಕೊಳ್ಳುವುದಷ್ಟೇ ಅದರ ಕಾಳಜಿ. ಎತ್ತಿದವನು ಹೆಣ್ಣೋ ಗಂಡೋ, ನೋಡುವ ಕಣ್ಣು ಅಲ್ಲಿರುವುದಿಲ್ಲ. ಮಹಿಳಾವಾದ, ಪುರುಷವಾದ ಅಥವಾ ಎಲ್ಲ ಪ್ರತ್ಯೇಕತೆಗಳ ದ್ವೀಪ ಕಟ್ಟಿಕೊಂಡ ಗುಡ್ಡಗಳು ಇತ್ತ ಹೊರಳಬೇಕು. ಈ ದಾರಿ ಬೆಳಕಿನದು.

ಇಷ್ಟು ದಾರಿ ನಡೆವಾಗ ಕಾಣುವ ಸಂಗತಿ ಸ್ಪಷ್ಟ. ಪ್ರತೀ ಮನುಷ್ಯನೂ ಒಂದು ಸ್ವಾತಂತ್ರ್ಯದ ಹಸಿವಿನಲ್ಲಿ ನಡೆದಿದ್ದಾನೆ. ಸ್ವತಂತ್ರವಾಗುವ ಅಪೇಕ್ಷೆಯೇ ಈ ಎಲ್ಲ ಹೋರಾಟಗಳ ಮೂಲ. ಸ್ವಾತಂತ್ರ್ಯಕ್ಕೆ ಹೆಚ್ಚು ಹೆಚ್ಚು ಅಡ್ಡಿಯಿರುವ ಕಡೆಗಳಲ್ಲೆಲ್ಲ ಹೆಚ್ಚು ಹೆಚ್ಚು ಹೋರಾಟ ನಡೆದಿದೆ. ಸ್ತ್ರೀವಾದವೂ ಕಟ್ಟಕಡೆಗೆ ನೋಡಿದರೆ ಒಂದು ಬಂಧನದಿಂದ ಹರಿದುಕೊಂಡು ಬರಲು ಮಾಡುತ್ತಿರುವ ಪ್ರಯತ್ನವೇ. ಇದರೊಳಗೆ ಒಂದು ಕುತೂಹಲದ ಸಂಗತಿ ಹೇಳಬೇಕು. ನಾವೀಗ ಪುರುಷರಿಗೆ ಸ್ತ್ರೀಯರನ್ನು ಹೋಲಿಸಿ ಸ್ತ್ರೀ ಸ್ವತಂತ್ರಳಲ್ಲ, ಅವಳಿಗೆ ಪಾರತಂತ್ರ್ಯವಿದೆ, ಬಂಧನವಿದೆ, ಅವಲಂಬಿತಳನ್ನಾಗಿ ಮಾಡಲಾಗಿದೆ ಎಂದು ವಾದಿಸುತ್ತಿದ್ದೇವೆ. ಇದು

ಕಂಪ್ಯಾರಿಸನ್. ಈ ಕಂಪ್ಯಾರಿಸನಿಲ್ಲದ ಮುಕ್ತ ಸ್ಥಿತಿಯಲ್ಲಿ ಈ ಜಗದ ಕಡೆಗೆ ಕಣ್ಣು ತಿರುಗಿಸಿದರೆ ಇಲ್ಲಿ ಯಾರೂ ಸ್ವತಂತ್ರರಿಲ್ಲ. ಸಂಪೂರ್ಣ ಸ್ವತಂತ್ರನೆಂಬ ಯಾವ ಪುರುಷನನ್ನೂ ನಾನು ಇದುವರೆಗೆ ನೋಡಿಲ್ಲ. ಅವನೂ ಒಂದಿಲ್ಲೊಂದು ಬಂಧನಕ್ಕೆ ಒಳಗಾದವನೇ. ಯಾವುದೋ ಭಯ ಅವನೊಳಗೂ ಇದೆ. ಅವನು ಯಾವುದೋ ಕುಟುಂಬಕ್ಕೆ ತನ್ನನ್ನು ಬಂಧಿಸಿ ಕೊಂಡವನೆ. ಮಾನಸಿಕವಾಗಿ ಅವನೂ ಅವಲಂಬಿತನೆ. ನಿರ್ಭೀತ ಸ್ವಾತಂತ್ರ್ಯ ಇನ್ನೂ ಗಳಿಸಲಾಗದ ಸೊತ್ತು. ಇಲ್ಲೊಂದು ನಿರ್ಭೀತ ಸ್ವಾತಂತ್ರ್ಯದ ಹಸಿವಿದೆ. ಅದಕ್ಕೆ ದಿಕ್ಕು ದಿಸೆಗಳಿಲ್ಲದೆ ಹೋರಾಟ ನಡೆದಿದೆ. ಅಲ್ಲೊಮ್ಮೆ ಇಲ್ಲೊಮ್ಮೆ ಸಿಕ್ಕ ಸಣ್ಣಪುಟ್ಟ ಸುಖ ಸ್ವಾತಂತ್ರ್ಯಗಳನ್ನೇ ಎಂಜಾಯ್ ಮಾಡಿ ಮನುಷ್ಯ ಮತ್ತೆ ಅದೇ ವಿಶಿಯಸ್ ಸರ್ಕಲ್‌ನೊಳಗೆ ಗಿರಕಿ ಹೊಡೆಯುತ್ತಿದ್ದಾನೆ.

ಈಗಾಗಲೇ ಲಿಂಗ ಅಸಮಾನತೆಯ ಮೂಲ ಲಿಂಗಭಯ ಎಂದಂತೆ, ನಮ್ಮ ಸ್ವಾತಂತ್ರ್ಯ ಹೋರಾಟಗಳೆಲ್ಲ ಜೀವ ಸ್ವಾತಂತ್ರ್ಯದ ಹಸಿವೇ ಆಗಿದೆ. ಜೀವಸ್ವಾತಂತ್ರ್ಯದ ಒಳಹಸಿವೆಯೇ ನಮ್ಮ ಬಂಧನಗಳನ್ನು ಬಿಡಿಸುವಂತೆ ಒತ್ತಾಯಿಸುತ್ತಿದೆ. ಈ ಜೀವ ಸ್ವಾತಂತ್ರ್ಯದ ಹಸಿವೆಗೆ ಪುರುಷ ಸ್ತ್ರೀ ಎಂಬ ಭೇದವಿಲ್ಲ. ಜೀವಕ್ಕೆ ಬೆಳವಣಿಗೆ ಗುಣ. ಬಿತ್ತಿದ ಬೀಜ ಬೆಳೆಯುತ್ತಿದೆ. ಉಗುರು, ಕೂದಲು ಬೆಳೆಯುತ್ತಿವೆ. ಜೀವ ಬೆಳವಣಿಗೆಗೆ ಹಪಹಪಿಸುವುದು ಅಸಹಜವಲ್ಲ. ಇದು ಜೀವಗುಣ. ಬೆಳವಣಿಗೆಯನ್ನು ಯಾರೂ ತಡೆಯಲಾರರು. ಇಂದಲ್ಲ ನಾಳೆ ಸ್ವಾತಂತ್ರ್ಯದ ಪರಮಾನುಭವದ ಕಡೆ ಜೀವ ತುಡಿದೇ ತುಡಿಯುತ್ತದೆ. ಅಲ್ಲಮ, ರಾಮಕೃಷ್ಣ ಪರಮಹಂಸರಂಥ ಒಂದೆರಡು ಜೀವಗಳು ಸ್ವಾತಂತ್ರ್ಯದ ಪರಮಾನುಭವ ಪಡೆದಿವೆ.

ಜೀವಸ್ವಾತಂತ್ರ್ಯದ ಮಾತು ಬಂದಾಗ ಅಲ್ಲಿಯೂ ಮತ್ತೆ ಮಹಿಳಾ ಎಂಬ ವಿಭಾಗಕ್ಕೆ ತೊಡಕುಗಳನ್ನು ಹೇಗೆ ಸೃಷ್ಟಿಸಲಾಯಿತು ಎಂಬುದು ಮಾತ್ರ ತುಂಬ ಕುತೂಹಲದ ಸಂಗತಿ. ಜೀವ ಸ್ವಾತಂತ್ರ್ಯವನ್ನು ಸ್ತ್ರೀ ಅಪೇಕ್ಷಿಸಿದರೂ ಅವಳಿಗೆ ಮುಕ್ತಿಯಿಲ್ಲ ಎಂಬುದನ್ನು ವೇದ ವಾಕ್ಯ ಎಂಬಂತೆ ಕೃಷ್ಣನಿಂದ ಹೇಳಿಸಲಾಯಿತು. ಇದು ಕೃಷ್ಣನ ಮಾತು: "ಸ್ತ್ರೀಯರಿಗೂ, ಶೂದ್ರರಿಗೂ ಮುಕ್ತಿಯಿಲ್ಲ". ಸ್ತ್ರೀಯರಿಂದಲೇ ಮುಕ್ತಿಕಂಡ ಕೃಷ್ಣ ಈ ಮಾತು ಆಡಿರಲಿಕ್ಕಿಲ್ಲ. ಆಡಿದ್ದರೂ ಅದಕ್ಕೆ ಅಕ್ಕ ಹೇಳುವ 'ಮನದ ಸೂತಕ'ದ ಅರ್ಥವನ್ನು ಹಚ್ಚಿ ಓದಬೇಕು.

ಜೀವಸ್ವಾತಂತ್ರ್ಯದ ಸಾಧ್ಯತೆಗಳನ್ನು ಮಹಿಳೆಯಿಂದ ಕಸಿದುಕೊಳ್ಳಲಾಗಿದೆ. ಅವಳು ಪೂಜೆ ಮಾಡಬಾರದು, ನೋಡಬಹುದು ಅಷ್ಟೆ. ಅವಳು ತಪಸ್ವಿಯಾಗಲಾರಳು. ತಪಸ್ವಿಗಳ ಸೇವೆ ಮಾಡಬೇಕು. ಇನ್ನೂ ಕುತೂಹಲದ ಸಂಗತಿ ವಿಷ್ಣು ಅವಳನ್ನು ಪಾದಸೇವೆಗೆ ಇಟ್ಟ. ಬ್ರಹ್ಮ ಅವಳನ್ನು ಹುಟ್ಟಿಸಿ ಹೆಂಡತಿ ಎಂಬ ಪೀಠ ಕೊಟ್ಟ. ಈಶ್ವರ ಅವಳು ತನ್ನೊಳಗೇ ಇರುವುದನ್ನು ಕಂಡ. ಇದು ಸ್ತ್ರೀ ಬೆಳೆಯಬೇಕಾದ ಮೂರು ಹಂತವೂ ಹೌದು.

ಜೀವಸ್ವಾತಂತ್ರ್ಯಾಕಾಂಕ್ಷಿಗೆ ಇರಲೇಬೇಕಾದ ಎರಡು ಅರ್ಹತೆ ಅಥವಾ ಗುಣಗಳೆಂದರೆ ಸಮರ್ಪಣೆ ಮತ್ತು ಪ್ರೀತಿ. ಈ ಎರಡು ಗುಣಗಳು ಸ್ತ್ರೀ ಸಹಜವೇ. ಈ ಮಾತನ್ನು femine quality ಎಂಬ ಅರ್ಥದಲ್ಲಿ ಬಳಸುತ್ತಿದ್ದೇನೆ. ಸಮರ್ಪಣಾಭಾವ ಮತ್ತು ಪ್ರೀತಿಸುವ ಗುಣ ಗಂಡಿನಲ್ಲೂ ಇರಬಹುದು. ಅದು ಅವನ ಫೆಮಿನಿಟಿಗೆ ಸಂಬಂಧಿಸಿದ್ದು. ಹೆಚ್ಚು ಹೆಚ್ಚು ಅರ್ಪಿಸಿಕೊಂಡ ಜೀವಕ್ಕೆ ಸ್ವಾತಂತ್ರ್ಯಾನುಭವ ತನ್ನನ್ನು ವಿಸ್ತರಿಸಿಕೊಳ್ಳುತ್ತಿರುವುದು ಕಾಣಿಸುತ್ತದೆ. ಕೊಟ್ಟುಕೊಂಡವ ಬೆಳೆಯುತ್ತಾ ಹೋಗುವ ಅನುಭವವಾಗುತ್ತದೆ. ಅದನ್ನೇ ನಾನು ಅಹಂಪ್ರಜ್ಞೆ ಎಂದದ್ದು. ತಾನು ಬೆಳೆಯಬೇಕು, ಹೆಸರಾಗಬೇಕು ಎಂಬ ಭಾವವಿಲ್ಲದೆ ತಾನು ತನ್ನನ್ನು ಕೊಟ್ಟು

ಕೊಳ್ಳಬೇಕು, ಕಳೆದುಕೊಳ್ಳಬೇಕು ಎಂಬ ಸಮರ್ಪಣಾಭಾವ ಒಂದು ದೊಡ್ಡ ಬೆಳವಣಿಗೆಯನ್ನು ಅನುಭವಕ್ಕೆ ತರುತ್ತದೆ. ಆ ಬೆಳವಣಿಗೆಯ ಮುಖ ತುಂಬ ಅಂತರ್ಗತ ವಾದದ್ದು. ಇವನು ತುಂಬ ದೊಡ್ಡವ ಅಂತ ಬೇರೆಯವರಿಗೆ ಕಾಣುವುದು, ನಾನು ತುಂಬ ದೊಡ್ಡವ ಎಂದು ತನಗೆ ತಿಳಿಯುವುದು ಇವೆರಡರಲ್ಲಿ ತುಂಬ ಅಂತರವಿದೆ. ಒಂದು, ಸಮಾಜದಲ್ಲಿ ಹೆಸರುವಾಸಿ ಯಾಗುವ ಪ್ರತಿಷ್ಠೆಯ ದಾರಿ. ಇನ್ನೊಂದು, ಉಳಿದವರ ಆಳ, ಅಗಲ, ಎತ್ತರ ಕಾಣುತ್ತಾ ತನ್ನ ಎತ್ತರವನ್ನು ಅರಿತುಕೊಳ್ಳುವ ಅರಿವು. ಮೊದಲನೆಯ ದಾರಿಯಲ್ಲಿ ವೀರಪ್ಪನ್ ಕೂಡ ಜಗತ್ಪ್ರಸಿದ್ಧನಾಗಲಿಕ್ಕೆ ಸಾಧ್ಯ. ಎರಡನೆಯ ದಾರಿಯಲ್ಲಿ ಅಲ್ಲಮನ ದೊಡ್ಡಸ್ತಿಕೆ.

ಈ ಎರಡನೆಯ ಸಮರ್ಪಣೆ ಮತ್ತು ಪ್ರೀತಿಯ ದಾರಿ ಸ್ತ್ರೀಗೆ ತುಂಬ ಸರಳ. ಅವಳ ಆ ಗುಣಗಳು ಅವಳನ್ನು ಬೆಳೆಸುತ್ತವೆಂದೇ ಅಂಥ ಗುಣಗಳನ್ನು ಗಂಡನಿಗೆ ಸಮರ್ಪಿಸಿಕೊಳ್ಳುವಂತೆ, ಕುಟುಂಬವನ್ನು ಪ್ರೀತಿಸುವಂತೆ ಒತ್ತೆಯಿಡಲಾಯಿತು. ಆದರೆ ಪ್ರೀತಿ ಮತ್ತು ಸಮರ್ಪಣೆ ಎರಡೂ ಅಷ್ಟು ಸಣ್ಣ ವಸ್ತುಗಳಲ್ಲ. ಅವು ಒಬ್ಬನಿಗೆ ಒತ್ತಾಯಪೂರ್ವಕ ಸಮರ್ಪಿಸಿಕೊಳ್ಳುವು ದರಲ್ಲಿ ತೃಪ್ತಿ ಕಾಣುವುದಿಲ್ಲ. ಕುಟುಂಬವನ್ನಷ್ಟೇ ಪ್ರೀತಿಸುವುದರಲ್ಲಿ ಮುಗಿದು ಹೋಗುವುದಿಲ್ಲ. ಎಂತಲೇ ಅವು ಹರಿಹಾಯ್ದಿವೆ, ಬೇಲಿದಾಟಿವೆ, ಕಾಲ ಪಕ್ವವಾದಾಗ ಹೊಸದು ಹುಟ್ಟಿವೆ.

ಈ ನಿಟ್ಟಿನಲ್ಲಿ ನೋಡಿದಾಗ ಮಹಿಳೆ ಇನ್ನು ಅಸಾಂಪ್ರದಾಯಿಕ ಸಾಹಸ ಮಾಡಿಲ್ಲ. ಇಂದಿರಾಗಾಂಧಿ, ಕಿರಣ್‌ಬೇಡಿ ಇವರು ಒಂದೆರಡು ಗೆರೆದಾಟುವ ಪ್ರಯತ್ನ ಮಾಡಿದರೂ ಅವು ಸಾಂಪ್ರದಾಯಿಕ ಚೌಕಟ್ಟನ್ನು ಒಪ್ಪಿಕೊಂಡೇ ಕೊಂಚಧೈರ್ಯ ಮಾಡಿ ಪುಟ್ಟ ಬೇಲಿದಾಟಿದ ಪ್ರಯತ್ನ ಅಷ್ಟೆ. ಅವು ಸಾಹಸ ಎಂದು ಹೇಳಲಾರೆ. ಪುರುಷ ಮಾಡಿದ್ದು ಸಾಹಸವೇ ಹೌದಾದರೆ ಅದೇ ಕೆಲಸ ಹೆಣ್ಣು ಮಾಡಿದರೆ ಸಾಹಸ ಯಾಕಾಗಬೇಕು ನನಗೆ ತಿಳಿಯುವುದಿಲ್ಲ. ಸಾಂಪ್ರದಾಯಿಕ ಚೌಕಟ್ಟನ್ನು ಹೀಗೆ ಒಪ್ಪಿಕೊಂಡು ಅಲ್ಲಿ ಇಲ್ಲಿ ಇಂಥ ಸಣ್ಣಪುಟ್ಟ 'ಸಾಹಸ' ಎಂಬ ಸಂಗತಿಗಳು ನಡೆದಿವೆ. ಹಳ್ಳಿಯಲ್ಲಿ ಎಲ್ಲ ಗಂಡಸರು ಸೇರಿ ನಾಗರಹಾವು ಬಡಿಯುವಾಗ, ನಾನೊಂದು ಬಡಿಗೆ ಹಿಡಿದು ನಾನೇ ನಾಗರಹಾವು ಬಡಿವ ಪ್ರಸಂಗ ಬಂದರೆ, ಅದನ್ನು ಆ ಸಮಾಜ ಸಾಹಸ ಎನ್ನುತ್ತದೆ. ನಾನು ಇವೆರಡೂ ಅಲ್ಲದ ನಿಟ್ಟಿನಲಿ ಬೆಳವಣಿಗೆಯನ್ನು ಸೂಚಿಸಿದ್ದೇನೆ. ಆ ದೃಷ್ಟಿಯಲ್ಲಿ ಅಸಾಂಪ್ರದಾಯಿಕ ಸಾಹಸದ ಒಂದೇ ಒಂದು ಪ್ರಯತ್ನ ಅಕ್ಕಮಹಾದೇವಿ ಮಾತ್ರ. ಅವಳೂ ಮದುವೆಯ ಚೌಕಟ್ಟನ್ನು ಮೀರಲಾಗದ (ಮದುವೆ ಯಾದದ್ದು ಹೌದಾದರೆ!) ಸಾಂಪ್ರದಾಯಿಕ ಸಂಗತಿಯಲ್ಲೇ ಇದ್ದರೂ ಕೊನೆಗೆ ಅದನ್ನು ಮೀರಿದಳು. ಇದೇ ಅವಳ ಅಸಾಂಪ್ರದಾಯಿಕ ಸಾಹಸ. ಅವಳನ್ನು ಬಿಟ್ಟರೆ ಇಲ್ಲಿಯವರೆಗೆ ಅಸಾಂಪ್ರದಾಯಿಕ ಸಾಹಸ ನಡೆದಿಲ್ಲ. ಈ ಮಾತು ತೀರ ಉದ್ಧಟತನದ್ದು ಎನಿಸಿದರೆ ಕ್ಷಮೆಯಿರಲಿ.

೧೯. ಅಕ್ಕ ಹಾಗೂ ಸಮಕಾಲೀನ ಮಹಿಳಾ ಕಾವ್ಯ ಸಂದರ್ಭ

ಡಾ. ಮಮತಾ ಜಿ. ಸಾಗರ

೧೨ನೇ ಶತಮಾನದ ವಚನಗಳನ್ನು ಕನ್ನಡ ಸಾಹಿತ್ಯದ ಅಂಗವಾಗಿ ಸಮೀಕರಿಸಿಕೊಂಡಾಗ ವಚನಕಾರರನ್ನೂ ಸಹ ಕನ್ನಡ ಸಾಹಿತ್ಯದ ರಚನಕಾರರ ಸಾಲಿನಲ್ಲಿ ಸಮೀಕರಿಸಿ ಕೊಳ್ಳಲಾಯಿತು. ವಚನಗಳ ಮೂಲಭೂತ ಉದ್ದೇಶ ಸಾಹಿತ್ಯವಲ್ಲ ಅನ್ನುವುದನ್ನು ಸ್ಪಷ್ಟಪಡಿಸಲು ಇದನ್ನು ಹೇಳಬೇಕಿದೆ. ಹೀಗೆ ಸಮೀಕರಣಗೊಂಡ ವಚನಕಾರರಲ್ಲಿ ಕೆಲವರಿಗೆ ಹೆಚ್ಚಿನ ಮಾನ್ಯತೆ ದೊರಕಿತು; ಇನ್ನು ಕೆಲವರಿಗೆ ದೊರಕಬೇಕಾದ ಮಾನ್ಯತೆಯೂ ದೊರಕದೇ ಹೋಯಿತು. ಹೀಗೆ, ಆ ಕಾಲದಲ್ಲಿನ ವಿವಿಧ ಕಾಯಕಗಳಿಂದ ಬಂದ ದಿಟ್ಟ ಮಹಿಳಾ ವಚನಕಾರರಿದ್ದರು. ಆದರೂ ಸಹ, ಹೆಚ್ಚಿನ ಮಾನ್ಯತೆ ದೊರಕಿದ್ದು ಪಿತೃಪ್ರಧಾನ ಮೌಲ್ಯಗಳ ಸರಹದ್ದಿನೊಳಗೇ ಭಕ್ತಿಯನ್ನು ಆಚರಿಸಿದ ಅಕ್ಕಮಹಾದೇವಿಗೆ.[೧]

ಅಕ್ಕನನ್ನು ಕುರಿತು ಹಲವಾರು ಕಥೆಗಳಿವೆ. ಅವಳ ವಚನಗಳಿಗಿಂತ ಹೆಚ್ಚು ಪ್ರಚಲಿತ ವಾಗಿರುವುದು ಈ ಕಥೆಗಳು. "ಸಾವಿಲ್ಲದ ಕೇಡಿಲ್ಲದ ಚೆಲುವಂಗೊಲಿದ" ಕಥೆ; "ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು" ಎಂದು ಮನೆ ಮಠ ಬಿಟ್ಟು ಹೊರಟ ಕಥೆ; ಉಟ್ಟ ಸೀರೆಯ ಕಳಚಿ ಮುಡಿ ಬಿಟ್ಟು ದೇವಂಗೆ ತನುಮನವನೊತ್ತೆಯಿಟ್ಟು, ದಿಟ್ಟ ಹೆಜ್ಜೆಯಿಟ್ಟು ಬೆತ್ತಲೆ ನಡೆದ ಕಥೆ; ಮೈ ಮೇಲಿನ ಬಟ್ಟೆ ತೊರೆದು ಭಕ್ತಿ ಬಟ್ಟೆಯನ್ನರಸಿ ಹೊರಟವಳು ಎದುರಿಸಿದ ಕಠಿಣ ಐಹಿಕ ಹಾಗೂ ಆಧ್ಯಾತ್ಮಿಕ ಪರೀಕ್ಷೆಗಳ ಕಥೆ. ಹೀಗೆ, ಒಂದೇ ಎರಡೇ.. ಆದರೆ ಅಕ್ಕನನ್ನಾವರಿಸಿದ ಕಥೆಗಳ ಪಟ್ಟಿ ಯಲ್ಲಿ ಹೆಚ್ಚಿನ ಪ್ರಚಾರ ಸಿಕ್ಕಿರುವುದು ಅವಳ ಮೈಗಂಟಿದ ಕಥೆಗೇ!

ಹೆಣ್ಣು ಬಟ್ಟೆ ತೊಟ್ಟರೂ ಗಂಡಿನ ಪ್ರಪಂಚಕ್ಕೆ ಕಾಣುವುದು ಈ ಬಟ್ಟೆಯಲ್ಲಡಗಿದ ದೇಹವಾಗಿ ಮಾತ್ರ ಎನ್ನುವುದನ್ನು ಅರಿತು, "ಉಟ್ಟ ಸೀರೆಯ ಸೆಳೆದು... ಕೊಟ್ಟೆನೊ ಎನ್ನ ತನುಮನವ" ಎಂದು ಭವದ ಹಂಗನ್ನೇ ತೊರೆದ ಮಹಾದೇವಿಯಕ್ಕನನ್ನು ನಮ್ಮ ಸಂಸ್ಕೃತಿಯು ನಮಗೆ ಅರ್ಥಮಾಡಿಸಿರುವುದೇ ಪರಿವೆ ಇಲ್ಲದ ಆ ದೇಹದ ಮೂಲಕ. ಅಕ್ಕನ ಸಮಕಾಲೀನವಾದ ಬಸವಣ್ಣನನ್ನು ಥಳಥಳಿಸುವ ಕಿರೀಟ ತೊಟ್ಟ, ಕುದುರೆ ಏರಿದ ನಗೆ ಮೊಗದ ರಾಜಕುಮಾರನ ರೂಪದಲ್ಲಿ ಊಹಿಸಿಕೊಂಡಿದೆ; ಅಕ್ಕನನ್ನು ದಟ್ಟ ಕೇಶರಾಶಿಯ

ಮರೆಯಲ್ಲಿ ಅಡಿಗಿದ ನಗ್ನ ದೇಹವನ್ನಾಗಿ ರೂಪಿಸಿಕೊಟ್ಟಿದೆ. ಅನಿಸಿಕೆಗೆ ರೂಪಕೊಟ್ಟಾಗ, ಕಣ್ಣಿಗೆ ಕಾಣುವ ಆ ರೂಪವು ನಿರೂಪಿತ ಚಿತ್ರದಲ್ಲಿ ಅರ್ಥಗಳನ್ನು ತುಂಬುತ್ತ ಅದಕ್ಕೊಂದು ಐಡೆಂಟಿಟಿಯನ್ನು ಹುಟ್ಟು ಹಾಕುತ್ತದೆ; ಸಾಮೂಹಿಕ ನೆನಪಿನಲ್ಲಿ ಈ ಚಿತ್ರ ಹಾಗೂ ಅದು ಮೈಗೂಡಿಸಿಕೊಂಡ ಅರ್ಥಗಳು ಭದ್ರವಾಗಿ ನಿಂತುಬಿಡುತ್ತವೆ.

ಅಕ್ಕ ಹೇಗಿದ್ದಳು ಎಂತಿದ್ದಳು ಅನ್ನುವುದನ್ನು ನಾವ್ಯಾರು ಕಂಡವರಲ್ಲ. ಹೀಗೆ ತೋರಿದ್ದನ್ನು ನೋಡಿದವರು, ಹಾಗೆ ತಿಳಿಯಪಡಿಸಿದ್ದನ್ನು ಅರಿತುಕೊಂಡವರು. ಆದರೆ ಸಮಸ್ಯೆ ಬರುವುದು, ಒಬ್ಬ ಮಹಿಳೆಯನ್ನು ವೈಭವೀಕರಿಸುವಾಗ ಅವಳ ಸ್ತ್ರೀತ್ವ (femininity) ಹಾಗೂ ಲೈಂಗಿಕತೆ ಗಳನ್ನು ಅವಳ ಬರಹದ ಲಕ್ಷಣಗಳನ್ನು ನಿರೂಪಿಸುವಲ್ಲಿ ಬಳಸಿದಾಗ; ಅವಳ ಚಿತ್ರಣವು ಅವಳ ಬರಹಗಳನ್ನು ಸ್ತ್ರೀತ್ವಕ್ಕೆ ಸೀಮಿತಗೊಳಿಸಿ ನೋಡುವಂಥಾ ಒತ್ತಡವನ್ನು ತಂದಾಗ. ಅಷ್ಟೇ ಅಲ್ಲ, ಈ ಅರ್ಥವಂತಿಕೆಯನ್ನು ಮಾದರಿಯಾಗಿಟ್ಟುಕೊಂಡು ನಿರ್ದಿಷ್ಟ ರೀತಿಯಲ್ಲಿ ಸತತವಾಗಿ ಮಹಿಳೆಯರೆಲ್ಲರ ಬರವಣಿಗೆಗೂ ಇದೇ ತಂತ್ರವನ್ನು ಅಳವಡಿಸುತ್ತ ಬಂದಾಗ; ಇಲ್ಲಿ ಸಮಸ್ಯೆ ಇನ್ನೂ ಜಟಿಲವಾಗುತ್ತದೆ. ಹೀಗೆ, ಮಹಿಳಾ ಕಾವ್ಯವನ್ನು ಕೇವಲ ಸ್ತ್ರೀತ್ವದ ಚೌಕಟ್ಟಿನೊಳಗೇ ಇಟ್ಟು ನೋಡುವುದು ರೂಢಿಗತವಾದಾಗ ಅದರ ಉಳಿದ ಆಯಾಮ ಹಾಗೂ ಸಾಧ್ಯತೆಗಳು ಗೋಚರವಾಗದೇ ಹೋಗುವ ಸಂಭವವಿದೆ.

ಪುರಾಣಾದಿ ಚಾರಿತ್ರಿಕ ಪಾತ್ರಗಳ ಚಿತ್ರಣವಾಗಲಿ, ಸಾಹಿತ್ಯದ ಪರಿಕಲ್ಪನೆಯಾಗಲಿ ೧೯ನೇ ಶತಮಾನಕ್ಕಿಂತ ಹಳೆಯದ್ದೇನಲ್ಲ. ರಂ.ಶ್ರೀ.ಮುಗಳಿಯವರು 'ಕನ್ನಡ ಸಾಹಿತ್ಯದ ಇತಿಹಾಸ'ದಲ್ಲಿ ಅಕ್ಕನೇ ಮೊದಲನೆಯ ಕವಯಿತ್ರಿ ಎಂದು ದಾಖಲಿಸಿದರು. "...ಆಧ್ಯಾತ್ಮ ಮತ್ತು ಗದ್ಯಕವಿತ್ವ ಇವೆರಡನ್ನೂ ಸೊಗಸಾಗಿ ಮೇಳ ಹಾಕುವುದರಲ್ಲಿ ಮಹಾದೇವಿಯಕ್ಕನೇ ಮೊದಲಿಗಿತ್ತಿ. ಅವಳ ಜೀವನ ಚರಿತ್ರೆ ಅದ್ಭುತ ರಮ್ಯವಾಗಿದೆ. ಆಧ್ಯಾತ್ಮಿಕ ಸಾಹಸದಿಂದ ಸ್ಫೂರ್ತಿದಾಯಕವಾಗಿದೆ."[೨] ಅಕ್ಕನ ರಚನೆಗಳನ್ನು ಕವಿತೆಯಾಗಿ ಪರಿವರ್ತಿಸುವ ಪ್ರಯತ್ನಕ್ಕೆ ಉದಾಹರಣೆಗಳು ಕನ್ನಡ ಸಾಹಿತ್ಯ ಚರಿತ್ರೆಗಳ ಪುಟಗಳಲ್ಲಿ ಸಾಕಷ್ಟು ದೊರಕುತ್ತವೆ. ಜಿ.ಎಚ್. ನಾಯಕರ ಬಚ್ಚಹದಿಂದ ಅಂಥ ಮತ್ತೊಂದು ಉದಾಹರಣೆಯನ್ನು ನೋಡಬಹುದು:

"ಸತಿಭಾವದ ಉನ್ನತ್ತ ಆತ್ಮಸಮರ್ಪಣ ಮತ್ತು ದೈವೀ ವಿರಹದ ಭಾವತೀವ್ರತೆಯಿಂದಾಗಿ ಅಕ್ಕಮಹಾದೇವಿಯ ವಚನಗಳಲ್ಲಿ ಭಾವಗೀತೆಯ ಗುಣ ಹೆಚ್ಚಾಗಿ ಇದೆ."[೩]

ಸಮಕಾಲೀನ ಮಹಿಳಾ ಕಾವ್ಯದ ಮೇಲೆ ಮಹಾದೇವಿ ಅಕ್ಕನ ಪ್ರಭಾವವನ್ನು ಕುರಿತು ಈಗಾಗಲೇ ಸಾಕಷ್ಟು ಬರವಣಿಗೆ ಬಂದಿದೆ. ಜಿ.ಎಸ್. ಶಿವರುದ್ರಪ್ಪ ಅವರು ಸ. ಉಷಾ ಅವರ ಸಂಕಲನ 'ಈ ನೆಲದ ಹಾಡು'ವಿಗೆ ಬರೆದ ಮುನ್ನುಡಿಯಲ್ಲಿ, ಅಕ್ಕಮಹಾದೇವಿ ಮತ್ತು ಸಂಚಿ ಹೊನ್ನಮ್ಮ ಇಬ್ಬರೂ, ಮಹಿಳೆಯರಿಗೆ ಸಂಬಂಧಿಸಿದ ಎರಡು ಮಾದರಿಗಳನ್ನು ಪ್ರತಿನಿಧಿಸುತ್ತಾರೆ, ಇತ್ತೀಚಿನ ಮಹಿಳೆಯರ ಬರಹಗಳು ಅಕ್ಕನ ಮಾದರಿಯನ್ನು ಮುಂದುವರಿಸುವಂತಿದೆ ಎನ್ನುತ್ತಾರೆ:

> **ಕವಿತೆಗಳಲ್ಲಿ ಅಕ್ಕನನ್ನು ಕುರಿತ ವಸ್ತು ತೀರಾ ಗಮನಾರ್ಹವಾಗಿ ಕಾಣಿಸಿಕೊಳ್ಳುತ್ತ, ಬಹುಶಃ ಈ ಕವಯಿತ್ರಿಯರ ಧೋರಣೆಯ ಕೇಂದ್ರ ಪ್ರತೀಕವೂ ಆಗಿ ಪರಿಣಮಿಸಿದೆ. ಅದಮ್ಯವಾದ ಪ್ರೀತಿಯನ್ನು ತುಂಬಿಕೊಂಡ ಹೆಣ್ಣಿನ ವ್ಯಕ್ತಿತ್ವಕ್ಕೆ ಘನತೆಯನ್ನೂ, ಗೌರವವನ್ನು, ಅಪೂರ್ವವಾದ ಆತ್ಮಪ್ರತ್ಯಯವನ್ನೂ ತಂದುಕೊಟ್ಟ ಅಕ್ಕನ ಬದುಕು ನಮ್ಮ ಕವಯತ್ರಿಯರನೇಕರಿಗೆ ತಕ್ಕ 'ವಸ್ತು ಪ್ರತಿರೂಪ'ವಾಗಿರುವುದು ಆಶ್ಚರ್ಯವೇನಲ್ಲ.**

ಸಮಕಾಲೀನ ಮಹಿಳಾ ಕಾವ್ಯದ ಆಶಯಗಳ ಬೇರನ್ನು ಮಹಾದೇವಿಯಕ್ಕನ ರಚನೆಗಳಲ್ಲಿ ಹುಡುಕುವ ಪ್ರಯತ್ನವು ಒಂದು ರೀತಿಯಲ್ಲಿ ಸಮಕಾಲೀನ ಕಾವ್ಯದ ವಿಶ್ಲೇಷಣೆಯನ್ನು ಸೀಮಿತ ಗೊಳಿಸುತ್ತದೆ. ಆದರೂ ಈ ವಿಧಾನವು ಪುರುಷ ಕೇಂದ್ರಿತ ವಿಶ್ಲೇಷಣೆಗೆ ಒಪ್ಪವಾಗಿ ಒದಗಿ ಬರುವ ಸರಕು (tool). ಆದ್ದರಿಂದ 'ಮಹಿಳಾ ಕಾವ್ಯ' ಅನ್ನುವ ವರ್ಗದ ಉಗಮದ ಜೊತೆಗೇ ಅದರ ಗುಣಾವಗುಣಗಳ ವಿಶ್ಲೇಷಣೆಗೆಂದು 'ಸ್ತ್ರೀ ಸಹಜ', 'ಸ್ತ್ರೀತ್ವದ ಗುಣ', 'ಸ್ತ್ರೀ ಸೌಜನ್ಯ', 'ಸ್ತ್ರೀ ಸಂವೇದನೆ'... ಮುಂತಾದ ಪದ ಪ್ರಯೋಗಗಳು ಧಾರಾಳವಾಗಿ ಹುಟ್ಟಿ ಬಳಕೆಗೆ ಬಂದದ್ದನ್ನು ಗಮನಿಸಬಹುದು. ಮಹಿಳಾ ಕಾವ್ಯವನ್ನು ಕುರಿತು ಬಂದಿರುವ ವಿಮರ್ಶೆ ಗಳನ್ನು ಗಮನಿಸಿದರೆ, ಸ್ತ್ರೀತ್ವದ ಚೌಕಟ್ಟಿನೊಳಗೇ ಮಹಿಳಾ ಕಾವ್ಯವನ್ನು ಹಿಡಿದಿಡುವ ಪ್ರಯತ್ನಗಳು ಮೇಲಿಂದ ಮೇಲೆ ಆಗಿರುವುದು ಧಾರಾಳವಾಗಿ ಕಂಡುಬರುತ್ತದೆ.

ಸಮಕಾಲೀನ ಮಹಿಳಾ ಕಾವ್ಯವನ್ನು ಕವಿಯಾದ ಅಕ್ಕನ ನಿರೂಪಣೆಯಲ್ಲಿ ವೈಭವೀಕರಿಸ ಲಾಗುವ ಸ್ತ್ರೀತ್ವದ ಎಕ್ಸ್‌ಟೆನ್ಷನ್ ಅನ್ನುವ ಹಾಗೆ ಪರಿಗಣಿಸಲಾಗುತ್ತದೆ. ನಿಜ, ಸಮಕಾಲೀನ ಮಹಿಳಾ ಕಾವ್ಯದ ನಿರೂಪಣೆಯಿಂದ ಹಿಡಿದು ವಿಶ್ಲೇಷಣೆಯವರೆಗೆ ಪ್ರತಿಯೊಂದು ಘಟ್ಟದಲ್ಲೂ ಅಕ್ಕನನ್ನು ಮಾನದಂಡವಾಗಿ ಅಕ್ಕನೆಂಬ ಈ ಅದ್ಭುತ ಭಂಡಾರದಿಂದ ಸರಕುಗಳನ್ನು ಒಂದೊಂದಾಗಿ ಹೊರಗೆಳೆದು ಬಳಸಿದಂತೆ ಕಂಡರೂ, ಇಲ್ಲಿ 'ಅಕ್ಕ' ಒಂದು ನಿಮಿತ್ತ ಮಾತ್ರ. ಅಕ್ಕನನ್ನು ಹೇಗೆ ಕೊಟ್ಟರೋ ಹಾಗೆ ಸಮಕಾಲೀನ ಮಹಿಳಾ ಕಾವ್ಯ ಆಕೆಯನ್ನು ಸ್ವೀಕರಿಸಿದೆ. ಅಕ್ಕ ಬಟ್ಟೆಯ ಹಂಗನ್ನು ಕಳಚಿಕೊಂಡ ಗಳಿಗೆಯನ್ನು ರಿಯಲೈಜ್ ಮಾಡಿಕೊಂಡದ್ದೇ ಮಹಿಳಾ ಕಾವ್ಯದ ಮಹತ್ತರವಾದ ಶಕ್ತಿ ಎನ್ನಬೇಕು. ಶರೀರ ಮತ್ತು ಅಸ್ಮಿತೆಗಳ ಪ್ರಬಲವಾದ ನಂಟನ್ನು ಸಮಕಾಲೀನ ಮಹಿಳಾ ಕಾವ್ಯವು ಘಂಟಾಘೋಷವಾಗಿ ಸೆಲೆಬ್ರೇಟ್ ಮಾಡದೆ, ದೇಹದ, ಮನಸಿನ, ಕನಸಿನ, ತುಡಿತಗಳನ್ನು ಕುರಿತು ಮುಜುಗರವಿಲ್ಲದೇ ಮಾತನಾಡುವ ದಿಟ್ಟತನವನ್ನು ಅಕ್ಕನೆಂಬ ಕಾನ್ಸೆಪ್ಟ್ ಮಹಿಳಾ ಕಾವ್ಯದಲ್ಲಿ ಹುಟ್ಟಿಸಿತು. ಸಮಕಾಲೀನ ಮಹಿಳಾ ಕಾವ್ಯ ಸಹ ತನ್ನ ಸಂದರ್ಭಕ್ಕನುಗುಣವಾಗಿ ಅಕ್ಕನನ್ನು ಬಳಸಿಕೊಂಡಿತು. ಹೀಗೆ ಬಳಸಿ ಕೊಂಡಿರುವ ಬಗೆಯನ್ನು ಅರ್ಥಮಾಡಿ ಕೊಳ್ಳುವುದಕ್ಕಾಗಿ ಈ ಲೇಖನದಲ್ಲಿ ಸಮಕಾಲೀನ ಮಹಿಳಾ ಕಾವ್ಯದಿಂದ ಅಕ್ಕನ ರೆಫರೆನ್ಸ್ ಇರುವ ನಾಲ್ಕು ಕವಿತೆಗಳನ್ನು ಆಯ್ದುಕೊಳ್ಳಲಾಗಿದೆ.

ಅಕ್ಕನ ವಚನಗಳ ಜಾಡನ್ನೇ ಹಿಡಿದು ಹೊರಟ ಹಾಗೆ ಕಾಣುವ ಸವಿತಾರ ಕವಿತೆ 'ಎಲ್ಲ ಹುಡುಗಿಯರ ಕನಸು', ಅವ್ವ ಕೇಳೇ ನಾನೊಂದು ಕನಸ ಕಂಡೆ ಎಂದು ಆರಂಭವಾಗುತ್ತದೆ. ಸುಂದರವಾದ ಈ ರೊಮ್ಯಾಂಟಿಕ್ ಕವಿತೆಯ ನಾಯಕನೂ ಚೆನ್ನಮಲ್ಲಿಕಾರ್ಜುನನ ಪ್ರತಿರೂಪ.

ಹುಲಿಚರ್ಮ ಹೊದ್ದರೂ ಹಾಲು ಮನಸಿನ ಹುಡುಗ
ಡೊಳ್ಳ ಬಾರಿಸಿ, ಢಕ್ಕೆಯ ಬಡಿದು, ಡಮರುಗ ನುಡಿಸಿದ
ನವಿಲ ಹಾಗೆ ಕುಣಿದು ಮಿಂಚು ಮಳೆ ಕರೆದ.....
ಒಲ್ಲೆ ಎಂದರು ಬಿಡದೆ ಒಲವು ಬೇಡಿದನವ್ವ...
ಮುದ್ದಾಗಿ ಮಾತಾಡಿ ಮರುಳು ಮಾಡಿದನವ್ವ[3]

ಈ ಕವಿತೆಯಲ್ಲೂ ಅಕ್ಕನ ಉತ್ಕೃಷ್ಟ ಪ್ರಣಯ ವಚನಗಳ ಹಾಗೇ ನಾಯಕನ ಹೊರತಾಗಿ ನಾಯಕಿಗೆ ಏನೂ ಕಾಣುವುದಿಲ್ಲ. ಅವಳ ಉದ್ದೇಶದ ಆದಿ ಅಂತ್ಯ ಎಲ್ಲವೂ ಅಡಗಿರುವುದು ನಾಯಕನಲ್ಲೆ. ಎಲ್ಲ ಹುಡುಗಿಯರ ಕನಸೂ ಅಕ್ಕನ ಕನಸಿನ ಮುಂದುವರಿಕೆಯಷ್ಟೆ. ಅದೇ

ಕನಸು ಅಂಥದ್ದೇ ನಾಯಕ ಸಹಜವಾಗಿ ಮತ್ತೆ ಮತ್ತೆ ಮರುಕಳಿಸಿ ಬರುವುದನ್ನು ಪ್ರತಿನಿಧಿಸುವ ಈ ಕವಿತೆ ಅಕ್ಕನ ಪ್ರಪಂಚದ ಪ್ರತಿಮೆಗಳನ್ನೇ ಬಳಸಿಕೊಳ್ಳುತ್ತದೆ.

ಸ. ಉಷಾ ಅವರ 'ಅಕ್ಕ ಹೇಳಿದ್ದು' ಕವಿತೆಯು ನೇರವಾಗಿ ಅಕ್ಕನ ಕಥೆಯಿಂದಲೇ ರೆಫರೆನ್ಸ್ ತೆಗೆದುಕೊಳ್ಳುತ್ತದೆ. ಸಮಾನತೆ ಹಾಗೂ ಸಹಿಷ್ಣತೆಗಳು ವಚನ ಚಳವಳಿಯ ಬಹುಮುಖ್ಯ ಆಯಾಮಗಳು. ಆದರೆ ಆ ಗುಣ–ಧರ್ಮ ಪರಿಪಾಲನೆ ಪುರುಷ ಪ್ರಧಾನ ಮೌಲ್ಯಾಧಾರಿತವಾದದ್ದು.

ಸೆರೆಗೆಳೆವ ರಾಜರು
ಕೊಂಕುನೋಟವ ಹೊದ್ದ
ತುಂಬು ಸೆರಗಿನ ಗರತಿಯರು....[೬]

ಇಂಥ ಸಮಾಜದಲ್ಲಿ ಬೆತ್ತಲಾಗಿ ಹೊರಟ ಮಹಾದೇವಿಗೆ 'ಹರಿದ ಸೀರೆಯಲರ್ಧ ಕೊಟ್ಟು ಮೈಮುಚ್ಚ ಬಂದ ತಾಯಂದಿರು' ಎದುರಾಗುತ್ತಾರೆ. ಆದರೆ ದುಃಖ ತರುವ ಸಂಗತಿಯೆಂದರೆ, ಪತಿಯ ಕುರುಹ ಹೇಳದಿರೆ ತೊಲಗೆಂದು ನಿರ್ವಾಣದ ಬೆಳಗು ಕೊರಳೆತ್ತಿದ್ದು.

ಇರಲಿರಲಿ ಶೂನ್ಯಗಳು
ಸಿಂಹಾಸನಗಳು
ಗಿಳಿ ಕೋಗಿಲೆಗಳನ್ನಾದರೂ
ದಾರಿ ಕೇಳುತ್ತಾ
ನಿಮ್ಮ ನಡೆ ಮುಡಿಯ ಬಿಸುಟು
ಹೋಗುತ್ತೇನೆ
ಕದಳಿಗೆ[೭]

ಪುರುಷ ಪ್ರಧಾನ ಮೌಲ್ಯಾಧಾರಿತ ಸಮಾಜದಲ್ಲಿ ಮಹಿಳೆಗೆ ಒಬ್ಬ ಸ್ವತಂತ್ರ ವ್ಯಕ್ತಿಯಾಗಿ ಯಾವ ಸ್ಥಾನವೂ ಇರುವುದಿಲ್ಲ. ಅವಳ ಭಕ್ತಿ, ಬೌದ್ಧಿಕ ಸಾಧನೆಗಳಿಗಿಂತ ಅವಳ ರೂಪ, ದೇಹ, ಪಿತೃಪ್ರಧಾನ ಚೌಕಟ್ಟಿನಲ್ಲಿ ಮಹಿಳೆಯಾಗಿ ಅವಳು ನಿರ್ವಹಿಸಿದ ಪಾತ್ರ ಹೆಚ್ಚು ಪ್ರಸ್ತುತವಾಗುತ್ತದೆ.

ಸಮಕಾಲೀನ ಸಮಾಜದ ಮಧ್ಯಮವರ್ಗದ ಮಹಿಳೆಯಾಗಿ ಬಾಳುವೆ ನಡೆಸುವುದರ ಬಿಕ್ಕಟ್ಟು ಹಾಗೂ ದ್ವಂದ್ವಗಳನ್ನು ವೈದೇಹಿ ಅವರ ತಂಗಿಯ ಪದಗಳು[೮] ಎಂಬ ಶೀರ್ಷಿಕೆಯ ಕವಿತೆಗಳಲ್ಲಿ ಕಾಣಬಹುದು. ಅಕ್ಕನನ್ನು ಆದರ್ಶವಾಗಿ ಪರಿಗಣಿಸಿದರೂ ಸಹ ಸಂಸಾರಿಗಳ ಸಮಸ್ಯೆಗಳೇ ಬೇರೆ, ಎಂಬುದು ನಿಜದ ಸಂಗತಿ.

ದೈನಂದಿನೆತ್ತಿಗೆ ಹುರುಳಿ ಬೇಯಿಸಬೇಕು
ಒಲೆ ಮುಂದೆ ಇರಬೇಕು ನಂದದಂತೆ...

ಕೇಳಿದರೂ ವನದ ಕತೆ ತಾಳಿಕೊಳ್ಳಲೇಬೇಕು
ನೆರವಾಗುತ್ತದೆ ಲೋಕಯುಕ್ತಿ
ಕದಳಿ ಸಸಿಗಳ ನಾಕು ಸಾಕಿಕೊಂಡಿದ್ದೇನೆ
ಮನೆಯ ಹಿಂದಿನ ಹಿತ್ತಲಲ್ಲಿ
ನಿನ್ನ ನೆನಪಿಗೆ ನನ್ನ ಯಥಾನುಶಕ್ತಿ[೯]

ಎಲ್ಲವನ್ನೂ ತೊರೆದು, ಮನಸು ತೋರಿದ ಹಾದಿಯಲ್ಲಿ ಸಾಗಬಲ್ಲ ಸಾಧ್ಯತೆಗಳ ಜೊತೆಗೆ

ಏನನ್ನೂ ತೊರೆದು ಹೋಗಲಾಗದ ಅನಿವಾರ್ಯತೆಗಳನ್ನು ಮೇಳೈಸಿ ನೋಡಿದಾಗ ಸಮಕಾಲೀನ ಮಹಿಳೆಯರ ಬದುಕಿನ ಜಟಿಲತೆ ಸ್ಪಷ್ಟವಾಗಿ ಮೂಡಿಬರುತ್ತದೆ.

ಮಹಿಳೆಯರ ಬಗ್ಗೆ ಮತ್ತು ಮಹಿಳಾ ಕಾವ್ಯದ ಬಗ್ಗೆ ತಮ್ಮ ಟೀಕೆಗಳನ್ನು ಮಂಡಿಸುವುದರ ಸಲುವಾಗಿ ಪುರುಷರು ಅಕ್ಕನ ಪ್ರತೀಕವನ್ನು ಮ್ಯಾನಿಪ್ಯುಲೇಟ್ ಮಾಡುತ್ತಲೇ ಬಂದಿದ್ದಾರೆ. ಸಮಕಾಲೀನ ಮಹಿಳಾ ಕಾವ್ಯದ ಧ್ವನಿಯಂತಿರುವ ಸರ್ವಮಂಗಳಾ ಅವರ 'ಭಂಡರು' ಕವಿತೆಯು ಇಂಥ ಮ್ಯಾನಿಪ್ಯುಲೇಶನ್ನನ್ನು ಖಂಡಿಸಲು ಬಹಳಾ ಯಶಸ್ವಿ ಯಾಗಿದೆ ಇದಕ್ಕೆ ಅಕ್ಕನ ರೆಫರೆನ್ಸನ್ನು ಬಳಸಿಕೊಂಡಿದೆ.

ಹೆಣ್ಣಿ ಬುದ್ಧಿ ಮೊಳಕಾಲ ಕೆಳಗಲ್ಲ
ಅಕ್ಕಳಂತೆ ಮುಂಬರಬೇಕು
ಎನ್ನುವ ಲಿಂಗಭಕ್ತ ಅಣ್ಣಗಳ ಭಯವಯ್ಯ

ಮಾತಾಡುತ್ತಲೇ ಉಬ್ಬು ತಗ್ಗಿನತ್ತ
ಕಣ್ಣು ಹಾಯಿಸಿ ಕೈಯಾಡಿಸಿದರೆ
ಹೇಗೆಂದು ಮೆಲುಕಿಸಿ
ಒಳಗೊಳಗೆ ಮುಲುಗುಟ್ಟುವ
ಈ ಪ್ರಭುಗಳ ದಿಗಿಲಯ್ಯ

ಅನುಭವ ಮಂಟಪಕ್ಕೆ ಬರಿಸಿ
ಮುತ್ತು-ಗಿತ್ತು ವಿನಿಮಯ ನಡೆಸಿ
ವಿಚಾರಕ್ಕೆ ನಿಲ್ಲಿಸಿ
ಹೆಣ್ಣೆಂಬುದನ್ನು ಪದೇ ಪದೇ ನೆನಪಿಸುವ
ಈ ಮರುಳಯ್ಯರನ್ನು ಕಂಡರೆ ವಾಕರಿಕೆಯಯ್ಯ
ಅಯ್ಯಾ, ನನಗೊಂದು ಆಶೆ
ಹಾಗೆ-ಹೀಗೆ
ಹೆಣ್ಣು ಬುಗುರಿಯಾಡಿಸುವ
ಇವುಗಳ ಕುಂಡಿಗೆ
ಒಮ್ಮೆಯಾದರೂ ಜಾಡಿಸಿ ಒದೀಬೇಕು[೧೧]

ವಚನಗಳ ಮೂಲ ಉದ್ದೇಶ ಸಾಹಿತ್ಯವಲ್ಲದಿದ್ದರೂ, ಮಹಾದೇವಿ ಅಕ್ಕನ ವಚನಗಳು, ನಿರ್ದಿಷ್ಟ ಚೌಕಟ್ಟಿನೊಳಗೆ ಕನ್ನಡ ಮಹಿಳಾ ಕಾವ್ಯಕ್ಕೆ ರೂಪ ಕೊಡುವಲ್ಲಿ ಮಹತ್ತರವಾಗಿ ಬಳಕೆಗೆ ಬಂದಿದೆ. ಈ ಕಾರ್ಯದಲ್ಲಿ ರಚನೆಗಳಷ್ಟೇ ಯಶಸ್ವಿಯಾಗಿ ರಚನಕಾರಳನ್ನೂ ಕನ್ನಡ ಸಾಹಿತ್ಯ ಮೀಮಾಂಸಕರು ಬಳಸಿಕೊಂಡಿದ್ದಾರೆ ಎಂದರೆ ತಪ್ಪಾಗಲಾರದು. ಅದೇ ರೀತಿಯಲ್ಲಿ ಮಹಿಳಾ ಕವಿಗಳೂ ಸಹ ಅಕ್ಕನ ವ್ಯಕ್ತಿತ್ವ, ಬದುಕು, ಬರಹಗಳನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ತಮ್ಮ ಅನಿಸಿಕೆಗಳನ್ನು ತೆರೆದಿಡಲು ಬಳಸಿಕೊಂಡಿದ್ದಾರೆ. ಒಟ್ಟಲ್ಲಿ, ಮಹಾದೇವಿ ಅಕ್ಕ ಹಾಗೂ ಅವಳ ರಚನೆಗಳಿಗೆ ಸಮಕಾಲೀನ ಮಹಿಳಾ ಕಾವ್ಯದಲ್ಲಿ ವಿಶೇಷ ಸ್ಥಾನವಿರುವುದನ್ನು ಯಾರೂ ಅಲ್ಲಗಳೆಯಲಾಗುವುದಿಲ್ಲ.

ಟಿಪ್ಪಣಿಗಳು

೧. ಹೆಚ್ಚಿನ ವಿವರಗಳಿಗೆ ನೋಡಿ: ಸರಸ್ವತಿ ಎಚ್.ಜೆ., ಆಧುನಿಕ ಪೂರ್ವ ಬರಹಗಾರ್ತಿಯರು: ಒಂದು ಸ್ತ್ರೀವಾದಿ ದೃಷ್ಟಿಕೋನ, ವಿವಿಧ ಲೇಖಕರು, ಕನ್ನಡ ಸಾಹಿತ್ಯ ಮತ್ತು ಸ್ತ್ರೀವಾದಿ ಚಿಂತನೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು೧೯೯೩, ಪುಟ. ೨೦–೩೦.

೨. ಮುಗಳಿ, ರಂ. ಶ್ರೀ ಕನ್ನಡ ಸಾಹಿತ್ಯದ ಇತಿಹಾಸ, ಸಾಹಿತ್ಯ ಅಕಾಡೆಮಿ, ನವದೆಹಲಿ ೧೯೬೩, ಪು. ೮.

೩. ನಾಯಕ ಜಿ.ಎಚ್., ನಿರಪೇಕ್ಷ ಅಕ್ಷರ ಪ್ರಕಾಶನ, ಸಾಗರ ೧೯೮೪, ಪು. ೧೦.

೪. ಜಿ.ಎಸ್. ಶಿವರುದ್ರಪ್ಪ, ಸ.ಉಷಾ., ಈ ನೆಲದ ಹಾಡು, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ ೧೯೯೦, ಪು. ೬.

೫. ಪ್ರೊ. ವಿವೇಕ ರೈ, (ಸಂ) ಪೊಚ್ಚ ಹೊಸ ಕಾವ್ಯ ಕದಿರು, ಪ್ರಸಾರಾಂಗ, ಮಂಗಳಗಂಗೋತ್ರಿ, ಮಂಗಳೂರು ವಿಶ್ವವಿದ್ಯಾಲಯ ೨೦೦೨, ಪು. ೭೫.

೬. ಉಷಾ ಸ., ಈ ನೆಲದ ಹಾಡು, ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ ೧೯೯೦, ಪು. ೮.

೭. ಅದೇ. ಪು. ೯.

೮. ವೈದೇಹಿ, ಪಾರಿಜಾತ, ಕ್ರೈಸ್ಟ್ ಕಾಲೇಜು, ಬೆಂಗಳೂರು ೧೯೯೯, ಪು. ೫೧–೫೬.

೯. ಅದೇ, 'ಸಂಸಾರಿ ಪದ', ಪು. ೫೨.

೧೦. ಗೀತಾ ದೇಸಾಯಿ, (ಸಂ)., ಕವನ ಸೌರಭ, ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು ೧೯೮೪, ಪು. ೭೩.

೨೦. ಅಕ್ಕ : ದ್ವಂದ್ವಗಳ ಸಮನ್ವಯಕ್ಕೊಂದು ಹೆಸರು

•

ಡಾ. ಧರಣೀದೇವಿ ಮಾಲಗತ್ತಿ

ಅಕ್ಕಮಹಾದೇವಿಯ ಜೀವನದ ರೀತಿ ಮತ್ತು ವಚನಗಳಲ್ಲಿ ಮೇಲ್ನೋಟಕ್ಕೆ ದ್ವಂದ್ವದ ಹಾಗೆ ಕಾಣಿಸುವ ಹಲವು ಸಂಗತಿ ಗಳಿವೆ. ನೇರವಾಗಿ ಆಕೆಯನ್ನು ಅರ್ಥೈಸಬಯಸುವಲ್ಲಿ ಸರಳೀ ಕರಣದ ಅಪಾಯವಿದೆ. ಸ್ತ್ರೀತ್ವವನ್ನು ನಿರಾಕರಿಸುತ್ತಲೇ ಸ್ತ್ರೀತ್ವವನ್ನು ಪ್ರೀತಿಸುವ ವ್ಯಕ್ತಿತ್ವ ಅಕ್ಕನದು. ದೈಹಿಕ ಸ್ತ್ರೀತ್ವವನ್ನಾಕೆ ತುಚ್ಛವಾಗಿ ಕಾಣಿಸುತ್ತಾಳೆ. "ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ, ಕೀವಿನ ಹಡಿಕೆ"ಯಾಗಿ ಕಾಣಿಸುತ್ತದೆ ದೇಹ. ಪರೀಕ್ಷಿಸಲು ಬಂದವನನ್ನು ವೈರಾಗ್ಯಕ್ಕೆಳಸುವ ಸಂದರ್ಭದಲ್ಲಿ ಹೆಣ್ಣು ದೇಹ 'ಮೂತ್ರವನ್ನು ಒಸರುವ ನಾಳ'ವಷ್ಟೇ ಆಗಿ ಸೀಮಿತವಾಗಿದೆ. "ನಾನು ಹೆಂಗೂಸಲ್ಲ" ಎನ್ನುತ್ತಾಳೆ. "ನಾಮದಲ್ಲಿ ಹೆಣ್ಣು ರೂಪು, ಭಾವಿಸಲು ಗಂಡು ರೂಪು" ಎಂದು ಘೋಷಿಸುತ್ತಾಳೆ. ಇಷ್ಟೆಲ್ಲ ಹೆಣ್ಣುತನದ ನಿರಾಕರಣೆಯ ಜೊತೆಗೆ ಹೆಣ್ಣುತನದ ತೀವ್ರವಾದ ಅನುಭವಿಸುವಿಕೆಯನ್ನೇ ಭಕ್ತಿಯ ರೂಪಕವಾಗಿ ಪ್ರಕಟಿಸುತ್ತಾಳೆ. ಹೆಣ್ಣು ದೇಹದ ಅನುಭವವನ್ನೂ, ಕಳವಳ ಕಾತರಗಳನ್ನೂ ಭಕ್ತಿಯ ರೂಪದಲ್ಲಿ ವ್ಯಕ್ತ ಪಡಿಸುತ್ತಾಳೆ. ಚೆನ್ನಮಲ್ಲಿಕಾರ್ಜುನನ ಸ್ನೇಹ "ಅಪ್ಪಿದರೆ ಅಸ್ಥಿಗಳು ನುಗ್ಗುನುರಿಯಾಗುವ ಹಾಗಿರಬೇಕು" ಎಂದು ಬಯಸುತ್ತಾಳೆ. "ಮೆಚ್ಚಿದರೆ ಮೆಚ್ಚು, ಮೆಚ್ಚದಿರೆ ಮಾಣು, ನಾನ ನಿನ್ನನಪ್ಪಿದಲ್ಲದೆ ಸೈರಿಸಲಾರೆನಯ್ಯ" ಎನ್ನುವಷ್ಟು ಉತ್ಕಟತೆಯನ್ನು ಹೆಣ್ಣಿನ ದೇಹಭಾವ ಮಾತ್ರ ಪದರ್ಶಿಸಲು ಸಾಧ್ಯ. ಇಲ್ಲೆಲ್ಲ ಆಕೆ ಸ್ತ್ರೀತ್ವವನ್ನು ಅತೀವವಾಗಿ ಪ್ರೀತಿಸುತ್ತಾಳೆ. ಆ ಮೂಲಕ ಚೆನ್ನಮಲ್ಲಿಕಾರ್ಜುನನಿಗೆ ತನ್ನನ್ನು ನಿವೇದಿಸಿಕೊಳ್ಳುವ ಮಾರ್ಗ ಕಂಡುಕೊಳ್ಳುತ್ತಾಳೆ.

ಸಂಸಾರಿಯಾದ ನೀಲಾಂಬಿಕೆ 'ನಾನು ಹೆಣ್ಣಲ್ಲದ ಕಾರಣ ಇಹಪರ ನಾಸ್ತಿಯಾದವಳಯ್ಯ' ಎನ್ನುತ್ತಾಳೆ. ಈಕೆಗೆ ಸಂಸಾರದ ಹೋಲಿಕೆಗಳು ಸಿಗವು. ಮಡದಿ ಎನಲಾಗದು ಬಸವಂಗೆ ಎನ್ನನು, ಪುರುಷ ಎನಲಾಗದು ಬಸವನ ಎನಗೆ, ತಾನು ಬಸವನಿಗೆ ಶಿಶು, ಬಸವ ತನಗೆ ಶಿಶು ಎನ್ನುವುದು ಅವಳ ರೀತಿ. ಸಾಧ್ವಿಯೂ ಬಸವಣ್ಣನ 'ವಿಚಾರಪತ್ನಿ'ಯೂ ಆಗಿದ್ದುಕೊಂಡು ಪತ್ನಿತ್ವವನ್ನು ನಿರಾಕರಿಸುತ್ತಾ ಕೊನೆಯಲ್ಲೂ 'ಅಲ್ಲಿರುವ ಸಂಗ ಇಲ್ಲಿಲ್ಲವೆ?' ಎನ್ನುವ ನೀಲಾಂಬಿಕೆಗಿಂತ ಅಕ್ಕ ವಿಭಿನ್ನ. ತಾನು ಬೆಂಬತ್ತಿ ಕೈಹಿಡಿದರೂ ಮಿಕ್ಕು ಮೀರಿ ಹೋಹ 'ಪತಿ'ಯನ್ನು ಹಿಂಬಾಲಿಸುತ್ತಾ, ಹುಡುಕುತ್ತಾ, ಶ್ರೀಶೈಲದ ತನಕವೂ ಸಾಗುವ ಈಕೆಯದು

ದ್ವಿಧಾಭಾವ. 'ಚಿನ್ನದೊಳಗೂ ಬಣ್ಣದಂತೆ' ತನ್ನೊಳಗಿರ್ದ ಚೆನ್ನಮಲ್ಲಿಕಾರ್ಜುನ 'ಕರಸ್ಥಳದಲ್ಲೇ ಸಿಲ್ಕಿ' 'ನಾ' 'ನೀ' ಎಂಬ ಭ್ರಾಂತಿ ಯಾಕೆ? ಎನಿಸಿದರೂ ಅವಳ ಉತ್ಕಟ ಪ್ರೇಮರೂಪದ ಭಕ್ತಿಗೆ 'ನೀ', 'ನಾ' ಎನ್ನುವ ಸಂಬೋಧನೆ ಬೇಕೇಬೇಕು. ಅಂಥ ವಚನಗಳೇ ಕಾವ್ಯಾತ್ಮಕವಾಗಿಯೂ, ಭಾವಾತ್ಮಕವಾಗಿಯೂ ವಿಶಿಷ್ಟ ಅನಿಸಿಕೊಂಡವಳು. ಒಂದು ಸಲ ತನ್ನೊಳಗೇ ಇರುವವ ನೊಡನೆ ಸಂವಾದಿಸುವ ಹಾಗೆ, ಇನ್ನೊಂದು ಸಲ ತನ್ನಿಂದ ಪ್ರತ್ಯೇಕವಾಗಿರುವವನ ಜೊತೆ ಸಂವಾದಿಸುವಂತೆ ಒಮ್ಮೆ ದ್ವೈತಕ್ಕೂ, ಒಮ್ಮೆ ಅದ್ವೈತಕ್ಕೂ ನಿಲುವನ್ನು ಬದಲಾಯಿಸಿಕೊಳ್ಳುತ್ತಾಳೆ.

"ಕಾಯ ಕರ್ರನೆ ಕಂದಿದಡೇನು? ಕಾಯ ಮಿರ್ರನೆ ಮಿಂಚಿದಡೇನು?" ಎನ್ನುವ ನಿರಾಸಕ್ತಿ ದೇಹದ ಬಗೆಗೆ ಇದ್ದಾಗಲೂ ಆಕೆಗೆ ಆಧ್ಯಾತ್ಮಿಕ ಬದುಕಿನ ಆರಂಭದ ಘಟ್ಟದಲ್ಲಿ ದೇಹದ ವ್ಯಾಪಾರಗಳೇ ಬೇರೆ, ಆತ್ಮದ ವ್ಯಾಪಾರಗಳೇ ಬೇರೆ ಎನ್ನುವಷ್ಟು ದ್ವೈತ ಪ್ರೀತಿಯಿಲ್ಲ. ಆತ್ಮದ ವ್ಯಾಪಾರಕ್ಕೆ ಸಂಬಂಧಪಟ್ಟ ಪ್ರತಿಭಟನೆಗೆ ದೇಹವೇ ವಿಧಾನವಾಗುತ್ತದೆ. ಅಸಹಾಯ ಕತೆಯ ಆತ್ಯಂತಿಕ ನೆಲೆಯ ಪ್ರತಿಭಟನೆಯಾಗಿ ಇತ್ತೀಚೆಗೆ ಮಣಿಪುರದ ಕೆಲವು ಮಹಿಳೆಯರು ಭಾರತೀಯ ಸೈನಿಕರು ಮಹಿಳೆಯರ ಮೇಲೆ ಮಾಡುವ ಹಿಂಸೆಯನ್ನು ವಿರೋಧಿಸಲು ನಗ್ನತೆಯನ್ನು ಉಪಯೋಗಿಸಿದರು. ಬಹುಶಃ ಅಕ್ಕನೂ ಕೌಶಿಕನ ಒಲ್ಲದ ಒತ್ತಾಯದಿಂದ ಅತಿಯಾಗಿ ಬೇಸತ್ತ ಗಳಿಗೆಯಲ್ಲಿ ನಿರಾಕರಣೆಯ ಅನ್ಯಮಾರ್ಗವಿಲ್ಲದೆ ಈ ರೀತಿಯನ್ನು ಆಯ್ದುಕೊಂಡಿರಬೇಕು. ಆದರೆ ನಂತರದಲ್ಲಿ ದೇಹದ ಮೇಲಿನ ವಾಂಛೆಯನ್ನು ತಾನೂ ಕಳೆದುಕೊಳ್ಳುವುದು ಆಕೆಗೆ ಸಾಧ್ಯವಾಯಿತೆನಿಸುತ್ತದೆ.

ಸಮಾಜವು ಅತಿರೇಕದ ವರ್ತನೆಗಳೆಂದು ಟೀಕಿಸಿದವುಗಳನ್ನೇ ತನ್ನ ಇರುವಿಕೆಗೆ ಒಗ್ಗಿಸಿಕೊಳ್ಳಲು ಯತ್ನಿಸುತ್ತದೆ. ಅಕ್ಕನ ದಿಗಂಬರತ್ವಕ್ಕೆ ಅದು ಕೇಶಾಂಬರದ ನೈತಿಕತೆಯ ಕವಚ ನೀಡಿತು. "ದಿಗಂಬರವೇ ದಿವ್ಯಾಂಬರವೆನಗೆ" ಎಂದು ಅಕ್ಕ ಹೇಳಿದಾಗಲೂ ಆಕೆ ಹಾಗೇ ಸಂಚರಿಸುವುದು ಸಮಾಜದ ನೈತಿಕತೆಯ ಪ್ರಜ್ಞೆಗೆ ಸರಿಕಂಡಿಲ್ಲ. ಸಮಾಜದ ಸಹಜ ಬದುಕನ್ನು ಧಿಕ್ಕರಿಸಿ ಹೋದವಳನ್ನು ಕಾಲಾಂತರದಲ್ಲಿ ಮರಳಿ ತನ್ನ ಒಳಗೇ ಇಟ್ಟುಕೊಳ್ಳುವ ಹವಣಿಕೆಯ್ನಾಗಿ ಈ ಕಥೆಗಳು ಹೊಸ ರೂಪಾಂತರ ಪಡೆದುಕೊಳ್ಳುತ್ತವೆ.

ಗಂಡಿನ ಆಶ್ರಯವಿಲ್ಲದೆ ಹೆಣ್ಣು ಬದುಕುವುದು ಸಮಾಜಕ್ಕೆ ಒಪ್ಪಿತವಾದ ಸಂಗತಿ ಯಾಗಿರಲಿಲ್ಲ. "ಪುರುಷನ ಒಲವಿಲ್ಲದ ಲಲನೆ"ಯು ನಿಷ್ಪ್ರಯೋಜಕ ಸ್ಥಿತಿಯ ಪ್ರತಿಮೆಯಾಗಿ ಶರಣರಿಗೂ ಕಾಣಿಸಿದ್ದಾಳೆ. ದಾಸಿಮಯ್ಯನಿಗಂತೂ ಮಧ್ಯಾಹ್ನದ ಬಿಸಿಲಿನಲ್ಲಿ 'ದಾರ ಹರಿದಿದೆ, ದೀಪ ತಾ' ಎಂದರೆ ಪತ್ನಿ ತರುತ್ತಿದ್ದಳಂತೆ. ಮೊನ್ನೆ ಮಾಡಿದ ಅಂಬಲಿ ಸುಡುತ್ತಿದೆ ಎಂದರೆ ದೂರದಿಂದ ಗಾಳಿ ಬೀಸಿದಳಂತೆ. ಇಂತಹ ಹೆಣ್ಣು ಸಿಕ್ಕರೆ ಸಂಸಾರವೇ ಲೇಸು ಅನ್ನುತ್ತಾನೆ. ಇಂಥ 'ಸಜ್ಜನ ಸತಿ'ಯ ಕಲ್ಪನೆ ಶರಣರಲ್ಲೇ ಇತ್ತೆಂದರೆ, ಇನ್ನು ಸಾಮಾನ್ಯರ ಅಭಿಪ್ರಾಯವೇನು? ಇಂಥದ್ದರಲ್ಲಿ ಚೆನ್ನಮಲ್ಲಿಕಾರ್ಜುನನೇ ನನ್ನ ಗಂಡ ಎಂದು ಘೋಷಿಸುವುದು ಅವಳ ಸಾಮಾಜಿಕ ಅನಿವಾರ್ಯತೆ ಆಗಿತ್ತು. ಗಂಡನಿಲ್ಲದೆ, ಗಂಡನನ್ನು ಧಿಕ್ಕರಿಸಿ ಬಂದು ಬದುಕಿದ ರೀತಿಯನ್ನು ಸಮಾಜದ ಕಣ್ಣಿಗೆ ಸಹ್ಯವಾಗಿಸಿದ್ದು ಅದೇ.

ಹಲವು ಸಲ ಹೆಣ್ಣುತನದಿಂದ ಹೊರಗೆ ನಿಂತು ಅಕ್ಕ ನುಡಿಯುತ್ತಾಳೆ. ಆದರೆ ಅಕೆ ಅಲ್ಲಿ ಪ್ರದರ್ಶಿಸುವುದು 'ಅಂಗರಹಿತ' ಪ್ರಜ್ಞೆಯನ್ನಲ್ಲ. 'ತಾನು ಹೆಣ್ಣಲ್ಲ' ಎನ್ನುವುದನ್ನು ಪ್ರಜ್ಞಾ ವಲಯದಲ್ಲಿ ಇಟ್ಟುಕೊಳ್ಳುವುದಕ್ಕಿಂತ ಹೆಚ್ಚಾಗಿ ತಾನು ಹೆಣ್ಣುತನದಿಂದ ಹೊರಗಿರುವವಳು,

ಎನ್ನುವುದು ಅವಳಿಗೆ ಮುಖ್ಯವಾಗುತ್ತದೆ. ಆದ್ದರಿಂದ ಅಕ್ಕನದು 'ಅಂಗಾತೀತ ಪ್ರಜ್ಞೆ' ಎನ್ನಬಹುದು. ತಾತ್ವಿಕವಾಗಿ ಮಾತನಾಡುವಾಗಲೆಲ್ಲ ಈ ಅಂಗಾತೀತ ಪ್ರಜ್ಞೆ, ಅವಳ ವಿಚಾರಗಳ 'ಕೇಂದ್ರ' ನೆಲೆಯಲ್ಲಿ ನಿಲ್ಲುತ್ತದೆ. ಆದರೆ ಭಾವುಕನಾಗಿ ನುಡಿಯುವಾಗ ಸಾಮಾನ್ಯಳಿಗಿಂತ ಸಾಮಾನ್ಯಳಾಗುತ್ತಾಳೆ. ಅಬಲೆಯಾಗುತ್ತಾಳೆ. ಆಕೆಯ ಭಕ್ತಿಯ ಪರಾಕಾಷ್ಠೆ ವ್ಯಕ್ತವಾಗುವುದು ಅವಳ ಅಬಲತೆಯ ಭಾವದಲ್ಲಿ ಮತ್ತು ಅಪ್ಪಟ ಸ್ತ್ರೀತ್ವ ಎಂದು ಸಮಾಜ ಗುರುತಿಸುವ ರೀತಿಯಲ್ಲಿ. ಲೋಕದ ಗಂಡಸರ ಬಗ್ಗೆ ಅತೀವ ದ್ವೇಷ. ಚೆನ್ನಮಲ್ಲಿಕಾರ್ಜುನನೆಂಬ ಗುರುವಿನ ಬಗ್ಗೆ ಅತೀವ ಮೋಹ. ಚೆನ್ನಮಲ್ಲಿಕಾರ್ಜುನನಲ್ಲದ ಗಂಡರಿಗೆ "ಉರದಲ್ಲಿ ಮುಳ್ಳುಂಟೆಂಬ" ಭಾವನೆ ಅವಳದು. ಒಂದು ರೀತಿಯಲ್ಲಿ ದಿಟದ ನಾಗವನ್ನು ಹೊಡೆಯ ಬಯಸುವ ಮತ್ತು ಕಲ್ಲನಾಗನಿಗೆ ಹಾಲು ಕುಡಿ ಎಂದು ಗೋಗರೆಯುವ ರೂಪದ ಭಾವಾನುಬಂಧವನ್ನು ಆಕೆ ಪುರುಷರ ಬಗೆಗೆ ಪ್ರದರ್ಶಿಸುತ್ತಾಳೆ. ಬಯಕೆಗಳನ್ನು ಭಾವನೆ ಮತ್ತು ಪದಗಳ ಮೂಲಕ ವಿರೇಚಿಸುತ್ತಾಳೆ. ಅವಳ ಉತ್ಕಟ ಪ್ರೇಮದ ವಚನಗಳು ಇಂಥವೇ. ಕುಟುಂಬ ಪ್ರೀತಿಯುಳ್ಳ ಆಕೆಯನ್ನು ಕೌಶಿಕನ ದೌಷ್ಟ್ಯವೇ ಆಧ್ಯಾತ್ಮಿಕ ಜಗತ್ತಿನಲ್ಲಿ ಸಂಪೂರ್ಣವಾಗಿ ಇಳಿಯುವ ಹಾಗೆ ಮಾಡಿತೆನ್ನಬಹುದು.

ಇತರ ಶರಣೆಯರಂತೆ ಕೌಟುಂಬಿಕ ಭದ್ರತೆಯ ಜೀವನವಲ್ಲ ಆಕೆಯದು. ಆಕೆ ಮತ್ತೆ ಮತ್ತೆ ವೈರಾಗ್ಯವನ್ನು, ನಿರಸನವನ್ನು ತಂದುಕೊಳ್ಳಬಯಸುತ್ತಾಳೆ. ದೇಹ ಮನಸ್ಸುಗಳನ್ನು ದಂಡಿಸಿ ಪಕ್ವವಾಗಿಸಲು ಪ್ರಯತ್ನಿಸುತ್ತಾಳೆ. 'ಮನೆಮನೆದಪ್ಪದೆ ಕೈಯೊಡ್ಡಿ ಬೇಡಬೇಕು, ಬೇಡಿದಾಗಲೂ ಅವರು ನೀಡಬಾರದು! ನೀಡಿದರೂ ಅದು ನೆಲಕ್ಕೆ ಬೀಳಬೇಕು. ಬಿದ್ದಾಗ ಎತ್ತಿಕೊಳ್ಳಲು ಹೋದರೂ ಅದಕ್ಕಿಂತ ಮೊದಲು ನಾಯಿ ಎತ್ತಿಕೊಳ್ಳಬೇಕು' ಎನ್ನುವ ಹೆಜ್ಜೆ ಹೆಜ್ಜೆಯ ದಂಡನೆ ಅವಳಿಗೆ ಪ್ರಿಯ. ನೋವೇ ಸುಖ, ಅಭದ್ರತೆಯೇ ಸಂತೋಷ. ವೈರಾಗ್ಯವೆಂದರೆ ಚೆನ್ನಮಲ್ಲಿಕಾರ್ಜುನನ ಜತೆಗಿನ ಕಾಲ್ಪನಿಕ ಸಂಸಾರ, ದಿಗಂಬರವೇ ದಿವ್ಯಾಂಬರ-ಹೀಗೆ ಭವಿಗಳ ದ್ವಂದ್ವಗಳೆಲ್ಲ ಅಕ್ಕನ ವಿಷಯದಲ್ಲಿ ತಿರುವು ಮುರುವು.

'ದೈಹಿಕ'ದ ಬಗ್ಗೆ 'ಐಹಿಕ'ದ ಬಗ್ಗೆ ಅಕ್ಕಳಿಗೆ ಅಭ್ಯಂತರವಿಲ್ಲ. 'ಹಾವಿನ, ಹಲ್ಲುಕಳೆದು ಹಾವನಾಡಿಸಬಲ್ಲಡೆ ಹಾವಿನ ಸಂಗವೇ ಲೇಸು' ಎನ್ನುವುದನ್ನು ಕಂಡುಕೊಂಡವಳು ಆಕೆ. ಕೌಶಿಕನೊಳಗಿನ ಕಾಮದ ಹಾವಿನ ಹಲ್ಲುಕಳೆದು ಆಟವಾಡಿಸುವುದು ಅವಳಿಗೆ ಸಾಧ್ಯವಿರಲಿಲ್ಲ. ತನ್ನೊಳಗಿನ ಕಾಮವನ್ನು ನಿಯಂತ್ರಿಸಲು ಶಕ್ತಿ ಮೀರಿ ಪ್ರಯತ್ನಿಸಿದ ಹಾಗೆ ವಚನಗಳಲ್ಲಿ ನಿರೂಪಿಸುತ್ತಾಳೆ. ಹಸಿವು, ತೃಷೆ, ನಿದ್ರೆ, ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ, ಸಚರಾಚರಗಳನ್ನು ನಿಲ್ಲಿಸುವ ಯತ್ನ ಅವಳದು. 'ಒಲೆಯ ಹೊಕ್ಕು ಉರಿ ಮರೆತವಳು', 'ಸರವೂ ನಿಸ್ಸರವೂ ಒಂದಾದವಳು' ಹೀಗೆ ಆಕೆಯೇ ಈ ವೈದೃಶ್ಯಗಳ ಬೆಸುಗೆಯನ್ನು ಕಟ್ಟಿಕೊಡುತ್ತಾಳೆ. ಐಹಿಕ, ಪಾರಮಾರ್ಥಿಕಗಳನ್ನು ವಿಶಿಷ್ಟವಾಗಿ ಬೆರೆಸುವುದು ಆಕೆಗಷ್ಟೇ ಸಾಧ್ಯವೆನಿಸುತ್ತದೆ.

'ಸ್ತ್ರೀಗೆ ಪುರುಷ ಮಾಯೆ' ಎನ್ನುವುದು ಆಕೆಯ ಅನುಭವ. 'ಹೆಣ್ಣು ಮಾಯೆ'ಯೆಂಬ ಚರ್ವಿತಚರ್ವಣ ನುಡಿ ಅವಳಲ್ಲಿ ಹೊಸರೂಪ ಪಡೆದುಕೊಳ್ಳುತ್ತದೆ. ಅಷ್ಟೇ ಸಹಜವಾಗಿ ಗಂಡು ಕೂಡಾ ಹೆಣ್ಣಿಗೆ ಮಾಯೆಯಾಗಿ ಕಾಡಬಲ್ಲ ಎನ್ನುವುದು ಅವಳಿಗೆ ಗೊತ್ತು. ವ್ರತಭಂಗ ಮಾಡುವ ಹೆಣ್ಣಿಗೆ ಮಾಯೆಯಾಗಬಲ್ಲ ಗಂಡಿನ ರೂಪದಲ್ಲೇ ಚೆನ್ನಮಲ್ಲಿಕಾರ್ಜುನನನ್ನು ನೋಡುತ್ತಾ ದೌರ್ಬಲ್ಯಕ್ಕೆಳಸುವುದನ್ನೇ ತನ್ನ ಶಕ್ತಿಯನ್ನಾಗಿ ಪರಿವರ್ತಿಸಬಲ್ಲ ಸಮನ್ವಯದ

ರೀತಿ ಅಕ್ಕನದು. ಕಾಮವನ್ನು ಪ್ರೇಮವಾಗಿ, ಪ್ರೇಮವನ್ನು ಭಕ್ತಿಯಾಗಿ, ಭಕ್ತಿಯನ್ನು ನಿಷ್ಕಾಮವಾಗಿಸುವ ಕಲೆಯನ್ನು ಕೈವಶಮಾಡಿಕೊಳ್ಳುತ್ತಾ "ಭವಗೆದ್ದ ಮಗಳಾಗಿ ಚೆನ್ನಮಲ್ಲಿಕಾರ್ಜುನನ್ನು ಸೇರುವ ಒಲೆಯೊಳಗಿದ್ದು ಉರಿ ಮರೆತವಳ" ರೀತಿ ಅಕ್ಕನದು.

ಕದಳಿ ಎನ್ನುವುದನ್ನು ವಿಶಿಷ್ಟವಾಗಿ ಅರ್ಥೈಸುತ್ತಾಳೆ ಅಕ್ಕ. ಅದು ಐಹಿಕವಾದುದು. ಅದನ್ನು ಗೆಲ್ಲುವುದು ಅವಳ ಅಭೀಪ್ಸೆ. "ಕದಳಿಯೆಂಬುದು ಮನ, ಕದಳಿಯೆಂಬುದು ವಿಷಯಗಳು, ಕದಳಿಯೆಂಬುದು ಭವ ಘೋರಾರಣ್ಯ ಅಂಥ ಕದಳಿಯ ಬನದಲ್ಲಿ ಭವಹರನ ಕಂಡೆನು" ಎನ್ನುವ ವಚನ ಅವಳ ಬದುಕಿನ ಉದಾಹರಣೆಯೇ ಆಗಿದೆ. ಭವದಲ್ಲಿದ್ದೇ ಭವಹರನ ಕಂಡ, ಐಹಿಕ ಉಪಮೆಗಳ ಮೂಲಕವೇ ದೇವರನ್ನು ಪ್ರೀತಿಸಿದ, ನಿರಾಕಾರವನ್ನು ಸಾಕಾರನ ಹಾಗೆ ಕಲ್ಪಿಸಿ, ಪರಮಾರ್ಥವನ್ನು ಇಹಕ್ಕೂ, ಇಹವನ್ನು ಪರಮಾರ್ಥಕ್ಕೂ ತಂದು ಗೆದ್ದವಳೀಕೆ.

ಹೆಂಡತಿ ಭವಿಯಾಗಿದ್ದು ಗಂಡ ಭಕ್ತನಾದರೆ 'ಭಾಂಡ ಭಾಜನವಿಲ್ಲದವರಭಕ್ತಿ ಹೆಂಡದ ಮಡಿಕೆಯ ಹೊರಗೆ ತೊಳೆದಂತೆ' "ಸತ್ತ ನಾಯ ತಂದು ಅಟ್ಟದ ಮೇಲೆ ಇಳುಹಿ ಒಬ್ಬರೊಪ್ಪಚ್ಚಿ ಹಂಚಿಕೊಂಡು ತಿಂದಂತೆ." ಬೇರೆ ದೇವರನ್ನು ಪೂಜಿಸುವ ಸತಿ ಮನೆಯಲ್ಲಿದ್ದರೆ ಶ್ವಾನನಿಗಿಂತ ಕಷ್ಟ ಎಂದರು ಶರಣರು. ಆದರೆ ಭಕ್ತೆ ಹೆಂಡತಿಯಾಗಿ ಭವಿ ಗಂಡನಾಗಿರುವ ಸಂದರ್ಭದಲ್ಲಿ ಪರಿಹಾರವೇನು ಎನ್ನುವುದಕ್ಕೆ ಉತ್ತರ ರೂಪದಲ್ಲಿ ಅಕ್ಕಮಹಾದೇವಿ ವ್ಯವಹರಿಸುತ್ತಾಳೆ.

'ಶರಣಸತಿ ಲಿಂಗಪತಿ' ಎನ್ನುವ ನಂಬಿಕೆ ಪಾರಂಪರಿಕ ನಿಯಮಗಳನ್ನು ಬಲಪಡಿಸುವಂಥದ್ದು. 'ಲಿಂಗ' ಘನವಾದದ್ದು; ಆದುದರಿಂದ ಪತಿ ಶರಣ ತೃಣಸಮಾನ; ಆದ್ದರಿಂದ ಸತಿ, ತೃಣ ಘನಕ್ಕೆ ಅರ್ಪಿತವಾದಂತೆ ಸತಿಪತಿಗೆ ಅರ್ಪಿತ ಈ ತಾತ್ವಿಕತೆ ಸಂಪ್ರದಾಯ ಶರಣವಾದದ್ದೆ. ಸ್ತ್ರೀಪುರುಷರಲ್ಲಿ ಸ್ತ್ರೀಗೆ ಲಗುತ್ವವೂ, ಪುರುಷನಿಗೆ ಪ್ರಭುತ್ವವೂ ಅಂಗೀಕೃತ ರೀತಿ. ಅಕ್ಕ ಸಹ ಸಹಜವಾಗಿ ತನ್ನ ಸ್ತ್ರೀತ್ವವನ್ನು ದೇವರಿಗೆ ಅರ್ಪಿಸುತ್ತಾಳೆ". ತನ್ನ ಕಾಯದ ಸುಖಭೋಗವ ಲಿಂಗವ ಭೋಗಿಸುವನಾಗಿ 'ಶರಣಸತಿ ಲಿಂಗಪತಿ'ಯಾಗುತ್ತಾಳೆ. ಶರಣರು ಈ ನಿಸ್ಪೃಹತೆ ಗೋಸ್ಕರ ಹೆಣ್ಣಾಗುತ್ತಾರೆ, ಸತಿಯೆಂದು ಕಲ್ಪಿಸಿಕೊಳ್ಳುತ್ತಾರೆ. ಲಿಂಗ ಹೆಣ್ಣಾಗಿ ತಾನು ಗಂಡಾಗುವ ಪಲ್ಲಟ ಬಹುಶಃ ನಮ್ಮ ಸಮಾಜದಲ್ಲಿ ಸಾಧ್ಯವೇ ಇಲ್ಲ. ಆದರೂ 'ಹೆಣ್ಣಿಗೆ ಮೋಕ್ಷವಿಲ್ಲ' ಎಂಬ ಸಾಂಪ್ರದಾಯಿಕ ನಂಬಿಕೆಗಳ ಮಧ್ಯೆ ಹೆಣ್ಣಾಗಿಯೇ, ಸತಿಯಾಗಿಯೇ ಮೋಕ್ಷವನ್ನೈದುವ ಹಾಗೂ ನಿರ್ವಯಲಾಗುವ ವಿಶಿಷ್ಟತೆ ಹನ್ನೆರಡನೆಯ ಶತಮಾನದ, ವಚನ ಚಳವಳಿಯ ಕೊಡುಗೆಯೆನ್ನಬಹುದು.

ಅಕ್ಕಮಹಾದೇವಿಯ ವಿಚಾರ, ಬದುಕಿನ ರೀತಿ ಇಂದಿನ ಮಹಿಳೆಯರನ್ನು ಪ್ರಭಾವಿಸಿದೆ. ಬಹುಶಃ ಅವಳ 'ತನ್ನ ಇಚ್ಛೆ'ಯ ಪ್ರಕಾರ ನಡೆಯುವ ಛಾತಿ ಅದಕ್ಕೆ ಕಾರಣ. "ಎನ್ನಿಚ್ಛೆಯೊಳು ಶಿವನ ಪೂಜೆಯೊಳು ನಲಿದಿಪ್ಪೆ, ಎನ್ನಿಚ್ಛೆಯೊಳು ಮಹೇಶ್ವರರ ಗೋಷ್ಠಿಯೊಳಿಪ್ಪೆ, ಎನ್ನಿಚ್ಛೆಯೊಳು ಗುರುವಿನಂಘ್ರಿ ಸೇವೆಯೊಳಿಪ್ಪೆ, ಎನ್ನಿಚ್ಛೆಯೊಳು ನಿಮ್ಮ ನೃಪನ ಸಂಗದೊಳಿಪ್ಪೆ" ಎನ್ನುವ ಧೈರ್ಯ ಇವತ್ತಿಗೂ ಹೆಣ್ಣಿಗೆ ಬಂದಿಲ್ಲ. 'ಒಲ್ಲೆ' ಎನಿಸಿದಾಗ 'ಒಲ್ಲೆ'ನೆಂದು ಹೇಳುವ ತಾಕತ್ತು, ಅವಕಾಶ, ಇವತ್ತಿಗೂ ಹೆಣ್ಣಿಗಿಲ್ಲ. ಮಹಿಳೆ ಸಾಧಿಸಬಯಸುವ ಮಾರ್ಗ ಇಷ್ಟು ಶತಮಾನಗಳ ನಂತರವೂ ದುರ್ಭರವಾದದ್ದು. ಹಾಗಿರುವಾಗ 'ತನ್ನಿಚ್ಛೆಯೊಳು' ಜೀವನ ಮಾಡುವ ಸ್ವಾತಂತ್ರ್ಯವನ್ನು ತನಗೆ ತಾನೇ ಕೊಟ್ಟುಕೊಂಡ ಅಕ್ಕ ಈಗಲೂ ಆದರ್ಶ ಹೌದು.

೨೧. ಅಕ್ಕನವರ ವಚನದಲ್ಲಿ ದೀರ್ಘಾಯುಷ್ಯದ ಗುಟ್ಟು

●

ಡಾ. ಪಿ.ಎಸ್. ಶಂಕರ

ಕಾಲದ ಪ್ರಭಾವ

ದೇಹ ಎದುರಿಸುತ್ತಿರುವ ಕಷ್ಟಕರ ಸನ್ನಿವೇಶಗಳಲ್ಲಿ ದೇಹದ ರಕ್ಷಣೆ ಕಾರ್ಯವನ್ನು ನಿಯಂತ್ರಿಸುವ ಕೆಲವು ವಂಶವಾಹಿಗಳು ಬೇರೆ ಬೇರೆ ಜೀವರಾಶಿಯಲ್ಲಿ, ನಾಟಕೀಯ ರೀತಿಯಲ್ಲಿ ಆರೋಗ್ಯವನ್ನು ಸುಧಾರಿಸಿ, ಆಯುಷ್ಯವನ್ನು ಹೆಚ್ಚಿಸಬಲ್ಲವು. ಅದು ನಿರ್ವಹಿಸುತ್ತಿರುವ ಕಾರ್ಯದ ತಿಳಿವಳಿಕೆ ವೃದ್ಧಾಪ್ಯದ ರೋಗಗಳನ್ನು ದೂರಮಾಡಿ ಮನುಷ್ಯನ ಜೀವಿತ ಅವಧಿ ಯಾವ ರೀತಿ ಹೆಚ್ಚುತ್ತದೆ ಎಂಬ ಅಂಶದ ಮೇಲೆ ಬೆಳಕು ಚೆಲ್ಲಬಹುದು. ಬಳಕೆ ಮಾಡುತ್ತಿರುವ ಯಾವುದೇ ಯಾಂತ್ರಿಕ ಉಪಕರಣ ದಿನ ಕಳೆದಂತೆ ಸವಕಳಿ ಹೊಂದುವುದನ್ನು ಕಾಣುತ್ತೇವೆ. ಅದೇ ಹೋಲಿಕೆಯನ್ನು ವೃದ್ಧಾಪ್ಯಕ್ಕೂ ನೀಡಲಾಗುತ್ತದೆ. ಆದರೆ ನಿರ್ಜೀವ ಯಂತ್ರ ಮತ್ತು ಜೀವಂತ ಜೀವಿಯ ಮಧ್ಯ ಮಾಡುವ ಹೋಲಿಕೆ ಸರಿಯೆನಿಸುವುದಿಲ್ಲ. ಜೈವಿಕ ವ್ಯವಸ್ಥೆ ಪರಿಸರಕ್ಕೆ ಪ್ರತಿಕ್ರಿಯಿಸಿ ತನ್ನ ಕಾರ್ಯವ್ಯವಸ್ಥೆಯಲ್ಲಿ ಇಳಿಮುಖ ಕಾಣಬಲ್ಲದಾದರೂ, ಅದು ತನ್ನಲ್ಲಿನ ಸಾಧನಗಳಿಂದ ರಿಪೇರಿ ಮಾಡಿ ಕೊಂಡು ಪುನಶ್ಚೇತನ ಪಡೆಯುವ ಶಕ್ತಿಯನ್ನು ಪಡೆದಿದೆ.

ವಯಸ್ಸಾಗುವುದು ವಂಶವಾಹಿಗಳಿಂದ ನಿರ್ಧರಿಸಲ್ಪಟ್ಟ ಬೆಳವಣಿಗೆಯ ಒಂದು ಮಜಲೆಂದು ತಿಳಿದು, ಒಮ್ಮೆ ವ್ಯಕ್ತಿ ತನ್ನ ಬೆಳವಣಿಗೆಯ ಪರಾಕಾಷ್ಠೆಯನ್ನು ಕಂಡುಕೊಂಡ ಮೇಲೆ, ವಯಸ್ಸಾಗುತ್ತಿರುವ ವಂಶವಾಹಿಗಳು ವ್ಯಕ್ತಿಯನ್ನು ಮಸಣದತ್ತ ನಿರ್ದೇಶಿಸುತ್ತವೆ ಎಂದು ತಪ್ಪಾಗಿ ಭಾವಿಸಲಾಗಿದ್ದಿತು. ವಯಸ್ಸಾಗುವುದು ಕಾಲದ ಪ್ರಭಾವದಿಂದ ಉಂಟಾಗುವ ದೇಹ ಸವಕಳಿಯೆಂದು ಇಂದು ಪರಿಗಣಿಸಲ್ಪಟ್ಟಿದೆ. ಏಕೆಂದರೆ ದೇಹದಲ್ಲಿನ ರಿಪೇರಿ ಕಾರ್ಯ ವ್ಯವಸ್ಥೆಯು ವರುಷಗಳು ಗತಿಸಿದಂತೆ ನಿಷ್ಕ್ರಿಯವಾಗುವುದು ಅದರ ಕಾರಣ. ಒಮ್ಮೆ ಪ್ರಜನನ ಸಾಮರ್ಥ್ಯದ ಅವಧಿ ಮುಗಿದು ಹೋದ ಮೇಲೆ ಅವುಗಳ ಕಾರ್ಯ ಹಿಮ್ಮೆಟ್ಟುವುದು ಸ್ವಾಭಾವಿಕವೆನಿಸಿದೆ.

ವಂಶವಾಹಿಗಳ ಕಾರ್ಯ ಚಟುವಟಿಕೆ

ಆದರಣ ವಿಪರೀತ ಸೆಕೆ, ನೀರು–ಆಹಾರ ಸಿಕ್ಕದ ಬರಗಾಲ ಪರಿಸ್ಥಿತಿಯಂತಹ ಒತ್ತಡ ಸನ್ನಿವೇಶಗಳನ್ನು ಜೀವಿ ಪ್ರತಿರೋಧಿಸಿ ನಿಲ್ಲುವ ಸಾಮರ್ಥ್ಯವನ್ನು ದೇಹಕ್ಕೆ ಕೆಲವೊಂದು ವಂಶವಾಹಿಗಳು ನೀಡಬಲ್ಲವೆಂದು ತೋರಿಬಂದಿದೆ. ಅವುಗಳಿಂದಾಗಿ ನೈಸರ್ಗಿಕ ಪ್ರತಿರೋಧ ಸಾಮರ್ಥ್ಯ ಮತ್ತು ರಿಪೇರಿ ಕಾರ್ಯವನ್ನು ವಯಸ್ಸಿನ ಪರಿವೆಯಿಲ್ಲದೆ ಕಾಯ್ದಿರಿಸಬಲ್ಲೆವೆಂದು ತೋರಿದೆ. ಜೀವದ ಉಳಿವಿಕೆಗೆ ಬೇಕಾದ ಕಾರ್ಯಕ್ರಿಯೆಯನ್ನು ಬಳಸಿಕೊಂಡು, ಈ ವಂಶವಾಹಿಗಳು ವ್ಯಕ್ತಿ ದುರ್ಬರ ಸನ್ನಿವೇಶದಿಂದ ಪಾರಾಗುವುದರಲ್ಲಿ ಪಾತ್ರವಹಿಸುತ್ತವೆ. ಅವುಗಳು ಹೆಚ್ಚು ಕಾಲ ಸಕ್ರಿಯವಾಗಿರುವಂತೆ ಮಾಡಿದಲ್ಲಿ ಅವು ಜೀವಿಯ ಆರೋಗ್ಯವನ್ನು ಸುಧಾರಿಸುವುದಲ್ಲದೆ, ಅವುಗಳು ಜೀವಿತ ಕಾಲವನ್ನು ಹೆಚ್ಚಿಸುತ್ತವೆ. ಎಂದರೆ ಅವು ವೃದ್ಧಾಪ್ಯ ವಂಶವಾಹಿಗಳಿಗೆ ಪ್ರತಿಯಾಗಿ ದೀರ್ಘಾಯುಷ್ಯದ ವಂಶವಾಹಿಗಳಾಗಿ ಕಾರ್ಯನಿರ್ವಹಿಸುತ್ತವೆ.

ಪ್ರಯೋಗಶಾಲೆಯ ಪ್ರಾಣಿಗಳ ಮೇಲೆ ಮಾಡಿದ ಪ್ರಯೋಗಗಳು ಅನೇಕ ಬಗೆಯ ಒತ್ತಡ ಪ್ರತಿರೋಧಿ ಮತ್ತು ಜೀವಿತ ಕಾಲಾವಧಿಯನ್ನು ಹೆಚ್ಚಿಸುವಂತಹ ವಂಶವಾಹಿಗಳ ಇರುವಿಕೆಯನ್ನು ಸೂಚಿಸಿವೆ. ಅವು ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುವಲ್ಲಿ ಸಹಾಯಕ. ಅವುಗಳಲ್ಲಿ ಸದ್ದಿಲ್ಲದ ಸುದ್ದಿ ನಿಯಂತ್ರಕವೆನಿಸುವ ಸೈಲೆಂಟ್ ಇನ್‌ಫರ್ಮೇಶನ್ ರೆಗ್ಯುಲೇಟರ್ (ಎಸ್‌ಡಿಆರ್–ಸರ್)–೨ ಎಂಬ ವಂಶವಾಹಿ, ಮತ್ತು ಅದರ ಬೇರೆ ರೂಪಗಳು ಮನುಷ್ಯನನ್ನೊಳಗೊಂಡ ಎಲ್ಲ ಜೀವರಾಶಿಯಲ್ಲಿರುವುದು ತೋರಿಬಂದಿದೆ. ಅದರ ಹೆಚ್ಚಿನ ಪ್ರತಿಗಳು ಕೆಳವರ್ಗದ ಜೀವರಾಶಿಯ ಆಯುಷ್ಯವರ್ಧಕವಾಗಿ ತೋರಿಬಂದಿದ್ದು, ಅದು ಮೇಲ್ವರ್ಗದ ಜೀವರಾಶಿಗೆ ಅನ್ವಯವಾಗುವುದೊ ಹೇಗೆಂಬುದು ದೃಢಪಡಬೇಕಾಗಿದೆ.

ಸದ್ದು ಅಡಗಿದ ಮೌನ

ತುಂಬ ಸರಳ ಜೀವಿ ಉದಾಹರಣೆಯಾದ ಈಸ್ಟ್ (ಹುದುಗು)ನ ವಯೋಮಾನವನ್ನು ಅದು ಸಾಯುವ ಮುನ್ನ ವಿಭಜನೆಗೊಳ್ಳುತ್ತ ಉಂಟುಮಾಡುವ ಸಂತಾನ ವೃದ್ಧಿಯನ್ನಾಧರಿಸಿ ಅಳೆಯಲಾಗುತ್ತದೆ. ಸಾಮಾನ್ಯವಾಗಿ ಅದು ತನ್ನ ಜೀವಿತ ಅವಧಿಯಲ್ಲಿ ೨೦ ಬಾರಿಯಾದರೂ ವಿಭಜನೆಗೊಳ್ಳುತ್ತದೆ. ತುಂಬ ಹೆಚ್ಚು ಬಾರಿ ವಿಭಜನೆಗೊಳ್ಳುವ ಈಸ್ಟ್‌ನಲ್ಲಿ ಸರ್ ೪ ಎಂಬ ವಂಶವಾಹಿ ರೂಪಾಂತರ ಇರುವುದು ಗೋಚರಿಸಿದೆ. ಅದು ಸರ್ ೨ ಕಿಣ್ವವನ್ನು ಹೊಂದಿದ ಪ್ರೋಟಿನ್ ಸಂಕೀರ್ಣದ ಭಾಗವನ್ನು ಸಂಕೇತಿಸುತ್ತದೆ. ಅದರಿಂದಾಗಿ ಅದು ಸರ್ ೨ ಪ್ರೋಟಿನ್, ಈಸ್ಟ ತಳಿಸಂಕುಲದಲ್ಲಿ ಹೆಚ್ಚಿನ ಭಿನ್ನಗೊಳಿಕೆ ತೋರಿಸುವ ಸ್ಥಳದಲ್ಲಿ ಸಂಗ್ರಹಗೊಳ್ಳುವಂತೆ ಮಾಡುತ್ತದೆ. ಜೀವಕೋಶದ ಪ್ರೋಟಿನ್ ಕಾರ್ಯಾಗಾರ ರೈಬೋಸೋಮಿನ ಡಿಎನ್‌ಎ (ಡಿ–ಆಕ್ಸಿರೈಬೊನ್ಯೂಕ್ಲಿಯಿಕ್ ಆಮ್ಲ) ಆರ್‌ಡಿಎನ್‌ಎ–ಯನ್ನು ಸಂಕೇತಿಸುವ ವಂಶವಾಹಿಗಳು ಅಲ್ಲಿಯೇ ಅಡಗಿವೆ.

ಇಂತಹ ನೂರಾರು ಆರ್‌ಡಿಎನ್‌ಎಗಳ ಪುನರುಕ್ತಿಗಳನ್ನು ಈಸ್ಟ್ ಕೋಶದ ತಳಿ ಸಂಕುಲದಲ್ಲಿ ಗುರುತಿಸಲಾಗಿದೆ. ಪುನರುಕ್ತಿಯಾಗುತ್ತಿರುವ ಕ್ರಮಗತಿ ಬೇರೆ ಬೇರೆ ಕೋಶಗಳಲ್ಲಿ ಮರು ಹೊಂದಾಣಿಕೆಯಾಗಬಲ್ಲವು. ಇಂತಹ ಮರು ಹೊಂದಾಣಿಕೆಯೇ ಮನುಷ್ಯನಲ್ಲಿ

ಕ್ಯಾನ್ಸರ್ ನಂತರ ರೋಗದ ಬೆಳವಣಿಗೆಗೆಡೆ ಮಾಡಿಕೊಡುತ್ತವೆ. ಮೂಲ ಈಸ್ಟ್ ಕೋಶ ವಯಸ್ಸಾಗುವುದಕ್ಕೆ ಆರ್‌ಡಿಎನ್‌ಎ ಅಸ್ಥಿರತೆ ಕಾರಣವಾಗಿದ್ದು ಅದನ್ನು ಸರ್ ಪ್ರೋಟಿನ್‌ಗಳು ಹೋಗಲಾಡಿಸಬಲ್ಲವು ಎಂದು ತೋರಿದೆ. ಸರ್ ೨ ವಂಶವಾಹಿಯ ಹೆಚ್ಚಿನ ಪ್ರತಿಯ ಇರುವಿಕೆ ಈಸ್ಟ್‌ಕೋಶದ ಆಯಸ್ಸನ್ನು ಶೇಕಡ ೩೦ರಷ್ಟು ಹೆಚ್ಚಿಸಿತು. ಹೀಗಾಗಿ ಅದು ಆಯುಷ್ಯ ವೃದ್ಧಿಯ ವಂಶವಾಹಿಯಾಗಿ ಕಾರ್ಯ ನಿರ್ವಹಿಸಬಲ್ಲದು. ಇಂತಹದೇ ಸನ್ನಿವೇಶ ಇದ್ದಾಗ ದುಂಡು ಜಂತುಗಳ ಆಯುಷ್ಯ ಶೇಕಡ ೫೦ರಷ್ಟು ಹೆಚ್ಚಾಗುತ್ತಿರುವುದು ತೋರಿಬಂದಿದೆ.

ಸರ್ ೨ ವಂಶವಾಹಿಯು ವಿಶಿಷ್ಟ ಕಾರ್ಯಶಕ್ತಿಯ ಕಿಣ್ವವೊಂದನ್ನು ಸಂಕೇತಿಸುತ್ತದೆ. ಹಿಸ್ಟೋನ್ ಪ್ರೋಟಿನು ಜೀವಕೋಶದ ಡಿಎನ್‌ಎ ಸುತ್ತುವರಿದಿದೆ. ಅವುಗಳು ಅಸಿಟೈಲ್ ಗುಂಪಿನ ರಸಾಯನಿಕ ಫಲಕವನ್ನು ಹೊಂದಿವೆ. ಅವು ಡಿಎನ್‌ಎ ವಸ್ತುಗಳನ್ನು ಹಿಸ್ಟೋನ್ ಎಷ್ಟು ಚೆನ್ನಾಗಿ ಜೋಡಿಸಿದೆ ಎಂಬುದನ್ನು ನಿರ್ಧರಿಸುತ್ತವೆ. ಅಸಿಟೈಲ್ ಗುಂಪುಗಳನ್ನು ತೆಗೆದು ಹಾಕಿದಾಗ, ಆ ಕೂಡಿಕೆ ಮತ್ತಷ್ಟು ಬಲಗೊಂಡು, ಡಿ.ಎನ್.ಎ. ಕಿಣ್ವಗಳ ಪ್ರಭಾವಕ್ಕೆ ಒಳಪಡದಂತಾಗುತ್ತದೆ. ಹೀಗಾಗಿ ಅಸಿಟೈಲ್ ಗುಂಪಿಲ್ಲದ ಡಿಎನ್‌ಎ ಮೌನವಾಗಿರುತ್ತದೆ. ಆ ಪ್ರದೇಶದಲ್ಲಿನ ವಂಶವಾಹಿಗಳು ಪ್ರಚೋದನೆಗೆ ದೂರ.

ಸರ್ ಪ್ರೋಟಿನ್‌ಗಳು ವಂಶವಾಹಿಗಳ ಸದ್ದು ಅಡಗಿಸಿ ಮೌನವಾಗಿಸುತ್ತವೆ. ಅದರಿಂದಾಗಿಯೇ ಅದು ಸದ್ದಿಲ್ಲದ ಸುದ್ದಿ ನಿಯಂತ್ರಕ. ಸರ್ ೨ ಕಿಣ್ವ ಅಸಿಟೈಲ್ ಫಲಕವನ್ನು ಹಿಸ್ಟೋನಿನಿಂದ ತೆಗೆಯಬಲ್ಲದಾಗಿದ್ದು ಈ ಕೆಲಸಕ್ಕೆ ಅದಕ್ಕೆ ಜೀವಕೋಶಗಳಲ್ಲಿನ ಜೀವ ವಸ್ತುಕರಣ ಕ್ರಿಯೆಗೆ ಸಹಾಯಕವಾದ ನಿಕೋಟಿನ್ ಎಮೈಡ್ ಸಹಕರಿಸುತ್ತದೆ. ಹೀಗಾಗಿ ಸರ್ ೨ ಕಾರ್ಯ ಚಟುವಟಿಕೆ ಜೀವಸ್ತುಕರಣ ಕ್ರಿಯೆಗೆ ಸಂಬಂಧಪಡೆದಿದ್ದು. ಕೆಲೋರಿ ಸೀಮಿತಗೊಳಿಕೆ ಹೇಗೆ ಆಹಾರ ಮತ್ತು ವಯಸ್ಸಾಗುವುದರ ಮೇಲೆ ಪ್ರಭಾವ ಬೀರುತ್ತದೆ ಎಂಬುದನ್ನು ಸೂಚಿಸಬಲ್ಲದಾಗಿದೆ.

ಕೆಲೋರಿ ಸಂಬಂಧ

ಜೀವಿಯು ಆಹಾರ ಮೂಲದಿಂದ ದೊರಕಿಸುವ ಕೆಲೋರಿಗಳು (ಶಕ್ತಿ ಮೌಲ್ಯ ಆಹಾರ ದಹನಗೊಂಡಾಗ ಉತ್ಕರ್ಷಣಗೊಂಡು ಬಿಡುಗಡೆ ಮಾಡುವ ಶಕ್ತಿಯನ್ನು ಕೆಲೋರಿ ಮಾನದಿಂದ ಅಳೆಯಲಾಗುತ್ತದೆ) ಕಡಿಮೆಯಿದ್ದಲ್ಲಿ ಅದು ಜೀವಿತ ಅವಧಿಯನ್ನು ಹೆಚ್ಚಿಸುವುದು. ಈ ಸಂಗತಿಯನ್ನು ವೈಜ್ಞಾನಿಕವಾಗಿ ಗುರುತಿಸಿ ಏಳು ದಶಕಗಳು ಕಳೆದಿವೆ. ವ್ಯಕ್ತಿ ಸೇವಿಸುವ ಆಹಾರದ ಪ್ರಮಾಣ ತನ್ನ ಪ್ರಭೇದದ ಬೇರೆ ಜೀವಿಗಳು ಸೇವಿಸುವ ಪ್ರಮಾಣಕ್ಕಿಂತ ಶೇಕಡಾ ೩೦ ರಿಂದ ೪೦ ರಷ್ಟು ಕಡಮೆಯಿರಬೇಕು. ಈ ರೀತಿ ಕಡಿಮೆ ಆಹಾರ ಸೇವಿಸುವ ಇಲಿ, ನಾಯಿಗಳು ಹೆಚ್ಚು ಕಾಲ ಆರೋಗ್ಯದಿಂದ ಬಾಳಬಲ್ಲವೆಂದು ತೋರಿದೆ. ಈ ಅಂಶವನ್ನು ಮಾನವ ಕುಲಕ್ಕೂ ಅನ್ವಯಿಸಬಹುದು. ಅದು ಕ್ಯಾನ್ಸರ್, ಸಕ್ಕರೆ ಕಾಯಿಲೆ, ನರದ ಅನುವಳಿಕೆ ರೋಗಗಳು ಬಾರದಂತೆ ತಡೆಯನ್ನೊಡ್ಡುವುದು. ಜೀವಿ ಬದುಕುವ ಪ್ರಬಲ ಶಕ್ತಿಯನ್ನು ಪಡೆಯುತ್ತದೆ. ಕೆಲವು ಜಿವಿಗಳಲ್ಲಿ ಅವುಗಳ ಫಲವಂತಿಕೆ ಕಡಿಮೆಯಾಗಬಹುದು.

ಕೆಲೋರಿ ಸೇವನೆ ಕಡಿಮೆ ಮಾಡುವುದರಿಂದ ಹೇಗೆ ಆಯುಷ್ಯ ವರ್ಧನೆಯಾಗುತ್ತದೆ ಎಂಬದು ಆಕರ್ಷಕ ವಿಷಯವಾಗಿದೆ. ಅದು ಬಹುಶಃ ಜೀವಕೋಶಗಳಲ್ಲಿ ಉಂಟಾಗುವ ಜೀವವಸ್ತುಕರಣ ಕ್ರಿಯೆಯನ್ನು ನಿಧಾನಗೊಳಿಸುತ್ತದೆ; ತನ್ಮೂಲಕ ಆ ಕ್ರಿಯೆಯಿಂದ ಬಿಡುಗಡೆ

ಯಾಗುವ ವಿಷಾರಿ ವಸ್ತುಗಳ ಪ್ರಮಾಣ ಕಡಿಮೆಯಾಗುತ್ತದೆ ಎಂದು ತಿಳಿಯಲಾಗಿದ್ದಿತು. ಈ ಅಭಿಪ್ರಾಯ ಸರಿಯಲ್ಲವೆಂದು ಈಚೆಗೆ ತೋರಿಬಂದಿದೆ. ಕೆಲೋರಿ ಪ್ರಮಾಣ ಕಡಿಮೆಯಾಗುವುದರಿಂದ ಕೆಳವರ್ಗದ ಜೀವಿಯಲ್ಲಿ ಜೀವವಸ್ತುಕರಣ ಕ್ರಿಯೆ ಕುಗ್ಗಿದರೂ, ಅದು ಮೇಲ್ವರ್ಗದ ಜೀವಿಗಳಲ್ಲಿ ಕಡಿಮೆಯಾಗುವುದಿಲ್ಲ. ಕೆಲೋರಿ ಕಡಿಮೆ ಮಾಡುವುದು ಬರಪರಿಸ್ಥಿತಿಯಲ್ಲಿ ಆಹಾರ ಕೊರತೆ ಉಂಟುಮಾಡುವ ಜೈವಿಕ ಒತ್ತಡದಂತೆ ಇದ್ದು ಅದು ಪ್ರತಿರೋಧ ಪ್ರಕ್ರಿಯೆಗೆಡೆಮಾಡಿಕೊಟ್ಟು ಜೀವಿ ಬದುಕಿ ಉಳಿಯುವ ಸಾಧ್ಯತೆಯನ್ನು ಹೆಚ್ಚಿಸುತ್ತದೆ ಎಂದು ಅಮೆರಿಕ ವಿಜ್ಞಾನಿಗಳಾದ ಡೇವಿಡ್ ಸಿಂಕ್ಲೇರ್ ಮತ್ತು ಲೆನಿ ಗುರೆಂಟೆ ಅಭಿಪ್ರಾಯಪಡುತ್ತಾರೆ. ಮೇಲ್ವರ್ಗದ ಸಸ್ತನಿಗಳಲ್ಲಿ ಅದು ಜೈವಿಕ ರಕ್ಷಣೆ, ರಿಪೇರಿ, ಶಕ್ತಿ ಬಿಡಗಡೆ ಮತ್ತು ಕಾರ್ಯಸೂಚಿ ಅನ್ವಯ ಜೀವಕೋಶಗಳ ಸಾವಿಗೆ ಪ್ರಚೋದನೆಯನ್ನು ಉಂಟುಮಾಡುತ್ತದೆ.

ಈಸ್ಟ್ ನಂತಹ ಕೆಳವರ್ಗದ ಜೀವಿಯಲ್ಲಿ ಆಹಾರ ಪೂರೈಕೆಯನ್ನು ಸೀಮಿತ ಗೊಳಿಸಿದಲ್ಲಿ ಅದು ಜೀವಕೋಶಗಳಲ್ಲಿನ ಸರ್ ೨ ಕಿಣ್ವದ ಕಾರ್ಯ ಚಟುವಟಿಕೆಯ ಮೇಲೆ ಪ್ರಭಾವ ಬೀರುತ್ತದೆ. ಕೆಲೋರಿ ಸೇವನೆ ಸೀಮಿತಗೊಂಡಾಗ ಅದು ಒತ್ತಡದಡಿ ಬದುಕಿ ಉಳಿಯುವ ಕಾರ್ಯಕ್ಕೆ ಪ್ರೋತ್ಸಾಹ ನೀಡುತ್ತದೆ ಮತ್ತು ಜೀವಕೋಶಗಳ ಉಸಿರಾಟ ಗತಿಯನ್ನು ಹೆಚ್ಚಿಸಿ ಸರ್ ೨ ಕಿಣ್ವದ ಕಾರ್ಯ ಚಟುವಟಿಕೆಯನ್ನು ಹೆಚ್ಚಿಸುತ್ತದೆ.

ಆಹಾರ ಕಿರಿದು ಮಾಡಿ

ಆಹಾರ ಸೇವನೆ ಕಡಿಮೆ ಮಾಡಿ ಕೆಲೋರಿ ಮೌಲ್ಯವನ್ನು ಕಡಿಮೆ ಮಾಡಿ ದೀರ್ಘಾಯುಷ್ಯವನ್ನು ಸಾಧಿಸಬಹುದೆಂಬುದನ್ನು ಹನ್ನೆರಡನೇ ಶತಮಾನದ ಶಿವಶರಣೆ ಅಕ್ಕಮಹಾದೇವಿ ಮನಗಂಡದ್ದು ನಿಜಕ್ಕೂ ಸೋಜಿಗ.

ಆಹಾರ ಕಿರಿದು ಮಾಡಿರಣ್ಣಾ
ಆಹಾರವ ಕಿರಿದು ಮಾಡಿ
ಆಹಾರದಿಂ ವ್ಯಾಧಿ ಹಬ್ಬಿ ಬಲಿವುದಯ್ಯಾ
ಆಹಾರದಿಂದ ನಿದ್ರೆ, ನಿದ್ರೆಯಿಂ ತಾಮಸ, ಅಜ್ಞಾನ, ಮೈ ಮರೆವು
ಅಜ್ಞಾನದಿಂ ಕಾಮವಿಕಾರ ಹೆಚ್ಚಿ ಕಾಯವಿಕಾರ
ಮನೋವಿಕಾರ ಭಾವವಿಕಾರ, ಇಂದ್ರಿಯ ವಿಕಾರ
ವಾಯುವಿಕಾರ ಇಂಥ ಪಂಚ ವಿಕಾರಗಳನ್ನುಂಟುಮಾಡಿ
ಸೃಷ್ಟಿಗೆತಹುದಾದ ಕಾರಣ ಕಾಯದ ಅತಿ ಪೋಷಣೆ ಬೇಡ
ಅತಿ ಪೋಷಣೆ ಮೃತ್ಯುವೆಂದುದು
ಜಪತಪ ಧ್ಯಾನಧಾರಣ ಪೂಜೆಗೆ ಸೂಕ್ಷ್ಮದಿಂ
ತನು ಮಾತ್ರವಿದ್ದರೆ ಸಾಲದೆ? ತನುವ ಪೋಷಿಸು
ಆಸೆ ಯತಿತ್ವಕ್ಕೆ ವಿಘ್ನವೆಂದುದು. ತನು ಪೋಷಣೆಯಿಂದ
ತಾಮಸ ಹೆಚ್ಚಿ ಅಜ್ಞಾನದಿಂ ವಿರಕ್ತಿ ಹಾನಿ
ಅರಿವು ನಷ್ಟ, ಪರವು ದೂರ. ನಿರಕೆ ನಿಲವಿಲ್ಲದ ಕಾರಣ
ಚೆನ್ನಮಲ್ಲಿಕಾರ್ಜುನನೊಲಿಸ ಬಂದ ಕಾಯವ ಕೆಡಿಸದೆ
ಉಳಿಸಿಕೊಳ್ಳಿರಯ್ಯಾ"

ಈ ವಚನದಲ್ಲಿ ಅಕ್ಕನವರು ಆಹಾರ ಸೇವನೆ ಪ್ರಮಾಣವನ್ನು ಕಡಿಮೆಮಾಡಿ. ಯಾವ ರೀತಿ ದೇಹ ವ್ಯಾಧಿಯ ಗೂಡಾಗುವುದನ್ನು ತಪ್ಪಿಸಿ, ಮೃತ್ಯುವನ್ನು ದೂರ ಮಾಡಬಹುದು ಎಂಬುದನ್ನು ತಿಳಿಸಿದ್ದಾರೆ. ದೇಹವನ್ನು ಚೆನ್ನಾಗಿರಿಸಲು ಅತಿ ಆಹಾರ ಸಲ್ಲದು. ಆಹಾರ ಕಿರಿದು ಮಾಡುವುದರಿಂದ ದೇಹವನ್ನು ಆರೋಗ್ಯದಿಂದ ಇರಿಸಿಕೊಳ್ಳಬಹುದು. ಆಹಾರ ಕಿರಿದು ಮಾಡುವುದರ ಬಗ್ಗೆ ಆಕೆ ಒತ್ತಿ ಒತ್ತಿ ಹೇಳುತ್ತಾಳೆ. ಕೆಲೋರಿ ಕಡಿಮೆಯಾದಷ್ಟು ಜೀವಿತ ಅವಧಿ ಹೆಚ್ಚುವುದನ್ನು ವಿಜ್ಞಾನ ಗುರುತಿಸಿ ಶತಮಾನ ಕೂಡಾ ಕಳೆದಿಲ್ಲ. ಅದನ್ನು ಎಂಟು ನೂರು ವರುಷಗಳ ಹಿಂದೆ ಅಕ್ಕ ಸಾರಿದ್ದು ಆಕೆಯ ವೈಜ್ಞಾನಿಕ ದೃಷ್ಟಿಕೋನಕ್ಕೆ ಸಾಕ್ಷಿ.

ಆಹಾರದ ಹೆಚ್ಚು ಸೇವನೆಯಿಂದ ಅನೇಕ ರೋಗಗಳು ಹುಟ್ಟುತ್ತವೆ, ಹಬ್ಬುತ್ತವೆ ಮತ್ತು ಬಲಿಯುತ್ತವೆ. ಹೆಚ್ಚು ಆಹಾರ ಸೇವನೆ ನಿದ್ದೆಗೆಡೆಮಾಡುತ್ತದೆ; ತಾಮಸ ಗುಣವನ್ನು ಹೆಚ್ಚಿಸುತ್ತದೆ. ಅದು ಕಾಯವಿಕಾರ, ಮನೋವಿಕಾರ, ಭಾವವಿಕಾರ, ಇಂದ್ರಿಯ ವಿಕಾರ, ವಾಯುವಿಕಾರ ಗಳೆಂಬ ಪಂಚ ವಿಕಾರಗಳಿಗೆಡೆ ಮಾಡಿಕೊಟ್ಟು ಆಯುಷ್ಯವನ್ನು ಮೊಟಕುಗೊಳಿಸುವುದು. ಇದಕ್ಕೆಲ್ಲ ಮದ್ದು ಎಂಬಂತೆ ಅಕ್ಕ ಆಹಾರವನ್ನು ಕಿರಿದು ಮಾಡುವ ಅನುಪಾನ ಕೊಟ್ಟಿದ್ದಾಳೆ. ಅದು ಆಯುಷ್ಯ ವೃದ್ಧಿಗೆ ಸಹಾಯಕ ಎಂಬ ಅಂಶವನ್ನು ವಿಜ್ಞಾನ ಇಂದು ದೃಢಪಡಿಸಿದೆ.

ಹಿತಮಿತ ಆಹಾರ ಸೇವನೆಯು ದೇಹಾರೋಗ್ಯದ ಮೇಲೆ ಒಳ್ಳೆಯ ಪ್ರಭಾವ ಬೀರುತ್ತದೆ ಎಂಬುದನ್ನು ಸರ್ವಜ್ಞನು ಹೀಗೆ ವಿವರಿಸಿದ್ದಾನೆ, 'ನಾಲಗೆಯ ಕಟ್ಟಿಹನು! ಕಾಲನಿಗೆ ದೂರನಹ! ನಾಲಗೆಯ ರುಚಿಯ ಮೇಲಾಡುತಿರಲವನ! ಕಾಲ ಹತ್ತಿರವು ಸರ್ವಜ್ಞ.

ಆಯುಷ್ಯ ವರ್ಧಕ ವಂಶವಾಹಿ

ಸರ್ ೨ ಕಿಣ್ವ ಆಯಸ್ಸಿನ ಹೆಚ್ಚಳಕ್ಕೆ ಅಗತ್ಯ. ಕೆಲೋರಿ ಸೀಮಿತಗೊಳಿಕೆಯೊಟ್ಟಿಗೆ ಸರ್ ೨ ಕಿಣ್ವ ಕಾರ್ಯಚಟುವಟಿಕೆ ಆಯುಷ್ಯವನ್ನು ವೃದ್ಧಿಸುತ್ತದೆ. ಕೆಲೋರಿ ಸೀಮಿತಗೊಳಿಕೆ ಮತ್ತು ಸರ್ ೨ ಹಾಗೂ ಅದರ ಪೀಳಿಗೆಯನ್ನು ಉದ್ದೀಪನಗೊಳಿಸುವ ರಿಸ್ವರಟ್ರಾಲ್ ಕೊಡುಗೆ ಯಿಂದ ಫಲಕೀಟಗಳ ಆಯಸ್ಸು ಹೆಚ್ಚಿಸಬಹುದೆಂದು ತೋರಿಸಲ್ಪಟ್ಟಿದೆ.

ಸಸ್ತನಿಗಳಲ್ಲೂ ಈಸ್ಟನಲ್ಲಿರುವ ಸರ್ ೨ ವಂಶವಾಹಿ ಸಮರೂಪಿನ್ ಸರ್ಟ್ ೧ಯಿದ್ದು ಅದು ಸರ್ಟ್ ೧ ಪ್ರೋಟಿನ್‌ನ್ನು ಸಂಕೇತಿಸುವ ಕಿಣ್ವ ಚಟುವಟಿಕೆ ತೋರಿಸುತ್ತದೆ. ಅನೇಕ ಬಗೆಯ ಪ್ರೋಟಿನ್‌ಗಳನ್ನು ಗುರಿಯಾಗಿರಿಸಿಕೊಂಡ ಸರ್ಟ್ ೧, ಜೀವಕೋಶಗಳ ಅಂತ್ಯವನ್ನು ನಿರ್ಧರಿಸುತ್ತದೆ ಮತ್ತು ಸಸ್ತನಿಗಳ ಆಯುಷ್ಯವನ್ನು ವೃದ್ಧಿಸುತ್ತದೆ.

ಕೆಲೋರಿ ಸೀಮಿತಗೊಳಿಕೆಯಿಂದ ದೇಹದಲ್ಲಿ ಒಗ್ಗೂಡಿದ್ದ ಕೊಬ್ಬಿನ ಕಣಜ ಕುಗ್ಗುತ್ತದೆ. ಅದರ ಕೊರತೆ ರಸದೂತಗಳ ಬಿಡುಗಡೆಗೆ ಕಾರಣವಾಗಿ ದೇಹ ರಕ್ಷಕ ಕಾರ್ಯ ಚಟುವಟಿಕೆಗೆ ಪ್ರೋತ್ಸಾಹ ದೊರೆಯುತ್ತದೆ. ತಳಿತಾಂತ್ರಿಕತೆಯಿಂದ ರೂಪುಗೊಂಡ ಇಲಿಗಳು ತೆಳ್ಳಗಿದ್ದು. ಸೇವಿಸುವ ಆಹಾರದ ಪ್ರಮಾಣ ಏನೇ ಇದ್ದರೂ, ದೀರ್ಘಕಾಲ ಬಾಳುವುದನ್ನು ಕಂಡುಕೊಂಡಿದೆ.

ಸರ್ ೨ ವಂಶವಾಹಿಯು ವಯಸ್ಸಾಗುವುದರ ನಿಯಂತ್ರಣ ವ್ಯವಸ್ಥೆಯ ಮೇಲೆ ನಿಯಂತ್ರಣ ಹೊಂದಿದೆ. ರಸದೂತಗಳು, ಕೋಶದೊಳಗಿನ ನಿಯಂತ್ರಿಕ ಪ್ರೋಟಿನ್‌ಗಳು ಮತ್ತು ದೀರ್ಘಾಯುಷ್ಯಕ್ಕೆ ಸಂಬಂಧಿಸಿದ ವಂಶವಾಹಿಗಳ ವಾದ್ಯ ಮೇಳದ ಕೇಂದ್ರ ಬಿಂದು ವಿನಂತೆ ಸರ್ ೨ ವಂಶವಾಹಿ ಕಾರ್ಯ ನಿರ್ವಹಿಸುತ್ತದೆ. ಹೀಗಾಗಿ ದೀರ್ಘಾಯುಷ್ಯದ ಕೀಲಿ

ಕ್ಕೈ ಆ ವಂಶವಾಹಿಯಲ್ಲಿ ಅಡಗಿದ್ದು ಬರಲಿರುವ ವರುಷಗಳಲ್ಲಿ ಅದರ ರಹಸ್ಯ ಬಹಿರಂಗವಾಗುವುದನ್ನು ಎದುರು ನೋಡುತ್ತಿದ್ದೇವೆ.

ಹೀಗೆ ಎಂಟುನೂರು ವರುಷಗಳ ಹಿಂದೆ ಅಕ್ಕನವರು ತಮ್ಮ ಅನುಭವದ ದೃಷ್ಟಿಯಿಂದ ಸಾರಿದ ಮಾತು, 'ಆಹಾರ ಕಿರಿದು ಮಾಡಿರಣ್ಣಾ' ಎಂಬುದಕ್ಕೆ ಈಗ ವೈಜ್ಞಾನಿಕ ತಳಹದಿ ದೊರೆತಿದ್ದು, ಕಡಿಮೆ ಕೆಲೋರಿ ಸೇವನೆ ದೀರ್ಘಾಯುಷ್ಯಕ್ಕೆ ಎಡೆ ಮಾಡಿಕೊಬಲ್ಲದೆಂಬುದನ್ನು ದೃಢಪಡಿಸಿದೆ.

೨೨. ಅಕ್ಕಮಹಾದೇವಿ ವಿಜ್ಞಾನಿಯೂ ಅಹುದೇ?

●

ದಿ. ಪ್ರೊ. ಕೆ.ಎಸ್. ಸವಣೂರ

ನಮ್ಮೆಲ್ಲರ ಮನೆಯಾದ ಈ ಪೃಥ್ವಿಯಿಂದ ೯ ಕೋಟಿ ಮೈಲುಗಳಷ್ಟು ದೂರದಲ್ಲಿರುವ ಮತ್ತು ನಮ್ಮ ಆರಾಧ್ಯದೇವತೆಯೆನಿಸಿದ ಸೂರ್ಯನಾರಾಯಣನ ವಿಷಯವಾಗಿ ಅಕ್ಕ ಮಹಾದೇವಿಯು ತನ್ನ ಒಂದು ವಚನದಲ್ಲಿ ಹೇಳಿದ 'ಲೋಕದ ಚೇಷ್ಟೆಗೆ ರವಿ ಬೀಜವಾದಂತೆ' ಎಂಬ ಅಭಿಪ್ರಾಯವು ಜನಸಾಮನ್ಯನಿಗೆ ಅಷ್ಟು ಅರ್ಥಗರ್ಭಿತವೆನಿಸದಿದ್ದರೂ, ವಿಜ್ಞಾನಿಗಳನ್ನು ಮಾತ್ರ ದಂಗುಬಡಿಸುವಂತಿದೆ. ಈ ವಚನವನ್ನು ಅನೇಕರು ಅನೇಕ ಸಲ ಓದಿರಬಹು ದಾದರೂ, ಸೂತ್ರರೂಪದಲ್ಲಿ ಹೊರಟ ಈ ಅಭಿಪ್ರಾಯದ ಮಹತ್ವವು, ವಿಜ್ಞಾನಿಗಳ ಸಹಾಯ ದಿಂದಲ್ಲದೆ ಪೂರ್ಣವಾಗಿ ತಿಳಿಯಲು ಸಾಧ್ಯವಾಗದು. ಮೇಲಿನ ವಚನವನ್ನು ಓದಿ, ನನ್ನ ಆನಂದಕ್ಕೆ ಪಾರವೇ ಇಲ್ಲದಂತಾಗಿ, ಅಂದಿನ ಮಟ್ಟಿಗೆ ನನ್ನ ಮುಂದಿನ ಓದು ಸಹ ಸಾಗದಾಯಿತು. ೧೨ನೇ ಶತಮಾನದಲ್ಲಿ ಅಂದಿನ ಖಗೋಳಶಾಸ್ತ್ರ ವಿಷಯದಲ್ಲಿನ ಪ್ರಯೋಗ ಭಾಗವು ಪ್ರಾರಂಭವಾಗುವ ೪೦೦ ವರ್ಷಗಳ ಪೂರ್ವದಲ್ಲಿ ಬದುಕಿದ್ದ, ಕಳೆದ ೩೦೦ ವರ್ಷಗಳಲ್ಲಿ ಸುಧಾರಿಸಲ್ಪಟ್ಟ ದೂರದರ್ಶಕಗಳ ಸಹಾಯದಿಂದ ಹಾಗೂ ಅನೇಕ ವಿಜ್ಞಾನಿಗಳ ಶೋಧದ ಫಲವಾಗಿ. ಇಂದು ನಮಗೆ ಗೊತ್ತಿರುವ ಸೂರ್ಯ ವಿಷಯಕ ಜ್ಞಾನವು ಅಕ್ಕನ ವಚನದಲ್ಲಿ ಅಡಕವಾಗಿದೆ ಎಂದು ತಿಳಿದಲ್ಲಿ, ನಮ್ಮ ಕನ್ನಡ ಮಾತೆಯ ಉದರದಲ್ಲಿ ಜನಿಸಿದ ಸಾಧ್ವಿಮಣಿಯ ವಿಷಯವಾಗಿ, ಯಾರಿಗೆ ತಾನೆ ಅಭಿಮಾನವೆನಿಸಲಿಕ್ಕಿಲ್ಲ? ಆಧ್ಯಾತ್ಮಿಕ ವಿಚಾರಗಳನ್ನು ಪ್ರಕಟಿಸಲಿರುವ ಅಕ್ಕನ ವಚನಗಳಲ್ಲಿ ವೈಜ್ಞಾನಿಕ ಸತ್ಯತೆಯೂ ಅಡಕವಾಗಿದೆ ಎಂದು ತಿಳಿದಲ್ಲಿ, ಅದು ಅಕ್ಕನ ವಿಷಯದಲ್ಲಿ ಹೆಚ್ಚಿನ ಜ್ಞಾನಕ್ಕೆ ಕಾರಣೀಭೂತವಾಗುವುದು ಮೇಲೆ ವಿವರಿಸಿದ ವಚನದ ವ್ಯಾಪ್ತತೆಯು ಅತೀವವಿದ್ದುದು, ಅದ ಒಳಗೊಂಡಷ್ಟು ಶೋಧಗಳು ಅಥವಾ ರವಿ ವಿಷಯಕ ಜ್ಞಾನವು ವಿಜ್ಞಾನಕ್ಕೆ ಇನ್ನೂ ಆಗಿಲ್ಲ.

ಅಹ, ಅದೆಂಥ ವೈಜ್ಞಾನಿಕ ವಿಚಾರವನ್ನು ಅಕ್ಕನ ವಚನವು ಒಳಗೊಂಡಿರುವುದು, ಎಂಬುದನ್ನು ತಿಳಿಯುವ ಕುತೂಹಲವು ಎಲ್ಲ ಓದುಗರಲ್ಲಿಯೂ ಉತ್ಪನ್ನವಾಗಬಹುದಲ್ಲವೆ? ಈ ವಚನದಲ್ಲಿ ಉಪಯೋಗಿಸಲ್ಪಟ್ಟ 'ಚೇಷ್ಟೆಗೆ' ಎಂಬ ಶಬ್ದಕ್ಕೆ 'ವ್ಯಾಪಾರ' ಎಂದು ಅರ್ಥ ಮಾಡಿದಲ್ಲಿ ಲೋಕದ ವ್ಯಾಪಾರಕ್ಕೆ ರವಿಯೇ ಕಾರಣೀಭೂತನೆಂದು, ಈ ವಚನದಿಂದ ತಿಳಿಯ

ಬಹುದು. ಈ ವಚನದೊಂದಿಗೆ ಪ್ರೊ. ಹ್ಯಾರಿಸನ್‌ರು ರವಿ ವಿಷಯಕವಾಗಿ ವ್ಯಕ್ತಮಾಡಿದ ಅತ್ಯಂತ ಮಾರ್ಮಿಕವಾದ ಹಾಗೂ ವಿಶಾಲ ದೃಷ್ಟಿಯ ವಿವೇಚನೆಯನ್ನು ತುಲನೆ ಮಾಡಿದಲ್ಲಿ ಈ ವಚನದ ವೈಜ್ಞಾನಿಕ ಮಹತ್ವವು ಹೊಳದೇ ಹೋಗುವುದು. ಪ್ರೊ. ಹ್ಯಾರಿಸನ್ನರು ಹೇಳುವಂತೆ "ಯಾವುದೇ ಭೌತಿಕ ಸಮಸ್ಯೆಯನ್ನು ಕುರಿತು ನಾವು ವಿವೇಚಿಸಿದರೂ, ಪರೀಕ್ಷಾಂತದಲ್ಲಿ ಇದು ನಿಜವಾಗಿಯೂ ಶಕ್ತಿ ನಿಯಂತ್ರಣದ ಸಮಸ್ಯೆಯೆಂದೇ ಹೇಳಬೇಕಾಗುವುದು; ನಮ್ಮ ನಾಗರಿಕತೆಯ ಚಕ್ರವು ತಿರುಗಲಿರುವುದು ಶಕ್ತಿ ಬಲದಿಂದಲೆ! ಈ ಶಕ್ತಿಯು ನಮಗೆ ಪೆಟ್ರೋಲ್ ಇಲ್ಲವೆ ಕಲ್ಲಿದ್ದಲಿಂದ ದೊರೆತರೂ ಅಷ್ಟೇ ಅಥವಾ ಧಾನ್ಯ-ದವಸ ಬೆಣ್ಣೆ ಮುಂತಾದವುಗಳಿಂದ ದೊರೆತರೂ ಅಷ್ಟೆ! ಇದೆಲ್ಲವೂ ದೊರೆಯುತ್ತಿರುವುದು ಸೂರ್ಯನಿಂದಲೇ. ಶಕ್ತಿಯೇ ನಿಜವಾದ ಹಣವಿದ್ದು-ಸೂರ್ಯನಿಂದ ದೊರೆಯಲಿರುವ ಶಕ್ತಿಯು ಇಂತಹ ಶಕ್ತಿಯನ್ನು ಹಿಡಿದು ನಿಯಂತ್ರಣದಲ್ಲಿ ಟ್ಟುಕೊಳ್ಳಲು ಸಾಧ್ಯವಿದ್ದ ಯಾವನಿಗಾದರೂ ವಿನಾಮೂಲ್ಯವಾಗಿಯೇ ದೊರೆಯುವುದು." ಈ ಮಾತನ್ನು ವಿವೇಚಿಸುವ ಪೂರ್ವದಲ್ಲಿ, ರವಿ ವಿಷಯಕವಾಗಿ ವಿಜ್ಞಾನವು ಹೇಳಬಹುದಾದ ಮುಖ್ಯಾಂಶಗಳನ್ನು ತಿಳಿಯೋಣ.

ರವಿಯು ವಿಶ್ವಕೇಂದ್ರದಲ್ಲಿದ್ದು, ಪೃಥ್ವಿಯಿಂದ ೯೨೯೮೭೦೦೦ ಮೈಲುಗಳಷ್ಟು ದೂರದಲ್ಲಿ ಇದ್ದಾನೆ. ನಮ್ಮ ಪೃಥ್ವಿಯು ತನ್ನ ಸುತ್ತು ತಾನು ತಿರುಗುವುದಲ್ಲದೆ ರವಿಯ ಪ್ರದಕ್ಷಿಣೆ ಯನ್ನಾದರೂ ಮಾಡುತ್ತದೆ. ಸಾಮಾನ್ಯವಾಗಿ ಪೃಥ್ವಿ ಮತ್ತು ರವಿಯ ನಡುವಿನ ಅಂತರವು ೯ ಕೋಟಿ ಮೈಲು ಗಳಷ್ಟಿದೆ ಎಂದು ಹೇಳಿದಲ್ಲಿ, ಜನಸಾಮಾನ್ಯನಿಗೆ ಇದರ ನಿಜವಾದ ಕಲ್ಪನೆಯು ಬರಲಾರದು. ಇದನ್ನು ನಮ್ಮ ನಿತ್ಯ ಅನುಭವದಲ್ಲಿಯ ಎರಡು ಉದಾಹರಣೆಗಳಿಂದ ತಿಳಿಯ ಬಹುದಾಗಿದೆ. ಮೊದಲನೆಯದಾಗಿ, ನಾವು ಪೃಥ್ವಿಯಿಂದ ರವಿ ಪ್ರದೇಶಕ್ಕೆ ಉಗಿಬಂಡಿಯಿಂದ ಹೋಗುವುದು ಸಾಧ್ಯವೆಂದು ಕಲ್ಪಿಸಿ, ತಾಸಿಗೆ ೩೦ ಮೈಲುಗಳಷ್ಟು ವೇಗದ ಇಂಥ ವಾಹನದಲ್ಲಿ ನಮ್ಮ ಪ್ರವಾಸವನ್ನು ಪ್ರಾರಂಭಿಸುವಾ. ಇಂಥ ಉಗಿಬಂಡಿಯು ಎಲ್ಲಿಯೂ ನಿಲ್ಲದೆ, ದ್ವಿನದಲ್ಲಿ ೨೪ ಗಂಟೆಗಳೂ ಚಲಿಸುತ್ತ ರವಿ ಪ್ರದೇಶಕ್ಕೆ ಮುಟ್ಟುವವರೆಗೆ ಬೇಕಿರಬಹುದಾದ ಸಾಮಾಗ್ರಿಗಳಿಂದ ಸಹಿತವಾಗಿ ಹೊರಟುದಾದರೆ, ನಮಗೆ ಅಲ್ಲಿಗೆ ಮುಟ್ಟಲು ೩೬೦ ವರ್ಷಗಳು ಬೇಕಾಗುವವು. ಅಂದರೆ ಸಾವು ಪೃಥ್ವಿಯಿಂದ ಹೊರಟು, ನೇರವಾಗಿ ರವಿ ಪ್ರದೇಶವನ್ನು ಮುಟ್ಟಿ ನೇರವಾಗಿ ಪೃಥ್ವಿಗೆ ತಿರುಗಿ ಬರಲು ೭೨೦ ವರ್ಷಗಳ ಅವದಿ ಬೇಕು. ಎರಡನೆಯದಾಗಿ, ಈ ಪ್ರವಾಸದ ತಿಕೀಟಿಗೆ, ೧೧೦ ಮೈಲುಗಳಿಗೆ ೧ ರೂಪಾಯಿಯ ಪ್ರಯಾಣದಂತೆ ೧೮,೬೦,೦೦೦ ರೂಪಾಯಿಗಳ ವೆಚ್ಚವು ತಗಲುವುದು. ಈ ಎರಡು ಉದಾಹರಣೆಗಳು ರವಿ ಹಾಗೂ ಪೃಥ್ವಿ ಇವುಗಳಲ್ಲಿಯ ಕಲ್ಪನೆಯನ್ನು ಕೊಡಬಹುದಾಗಿದೆ.

ಇನ್ನು ರವಿಯು ಪ್ರಮಾಣದಲ್ಲಿ ಎಷ್ಟಿರಬಹುದು? ಈ ವಿಷಯವಾಗಿಯೂ, ವಿಜ್ಞಾನಕ್ಕೆ ಹೇಳಲು ಸಾಧ್ಯವಿದೆ. ನಮ್ಮ ಪೃಥ್ವಿಗೆ ಬೆಳಕನ್ನು ಪೂರೈಸಲಿರುವ ರವಿಯನ್ನು ಒಂದು ಪೆಟ್ಟಿಗೆಯಲ್ಲಿ ಹಿಡಿದಿಡಲು ಸಾಧ್ಯವಿದ್ದಲ್ಲಿ, ಇಂಥ ಪೆಟ್ಟಿಗೆಯು ನಮ್ಮ ಪೃಥ್ವಿಗಿಂತ ಸಾವಿರ ಪಟ್ಟು ದೊಡ್ಡದಿರುವ ಗುರು ಗ್ರಹದಂಥ ೧೦೦೦ ಗುರುಗಳನ್ನಾಗಲಿ ಇಲ್ಲವೆ ನಮ್ಮ ಪೃಥ್ವಿಯಾಕಾರದ ೧೦ ಲಕ್ಷ ಪೃಥ್ವಿಗಳನ್ನಾಗಲಿ ಹಿಡಿಯುವುದು.

ಇದಾದ ಬಳಿಕ, ಲಕ್ಷಾವಧಿ ವರ್ಷಗಳಿಂದ ಪೃಥ್ವಿಗೆ ಬೆಳಕು ಹಾಗೂ ಉಷ್ಣತೆಯನ್ನು ಒದಗಿಸಲಿರುವ ನಮ್ಮ ರವಿಯ ಮೇಲೆ ಎಷ್ಟು ಅಂಶಗಳ ಉಷ್ಣತೆಯಿರಬಹುದೆಂಬ ವಿಚಾರವು ಜನಸಾಮಾನ್ಯನಿಗೆ ಬಂದಿರಲು ಸಾಕು. ಬರ್ಫದ ಉಷ್ಣತೆಯು '೦' ಡಿಗ್ರಿ ಮತ್ತು ಉಗಿಯ ಉಷ್ಣತೆಯು ೧೦೦ ಡಿಗ್ರಿ ಎಂದು ಗ್ರಹಿಸಿ, ಅಂಥ ಉಷ್ಣತೆಯೆಂದು ಅಂಶಗಳಿರಬಹುದೆಂದು ಅಂದಾಜು ಮಾಡಲಾಗಿದೆ. ಅಥವಾ ರವಿಯಿಂದ ದೊರೆಯಲಿರುವ ಎಲ್ಲ ಉಷ್ಣತೆಯನ್ನು, ಎರಡೂವರೆ ಮೈಲು ವ್ಯಾಸದಷ್ಟು ಭೂಮಿಯ ಮೇಲೆ ಕೇಂದ್ರೀಕರಿಸಿದಲ್ಲಿ ಇಷ್ಟೇ ವ್ಯಾಸದ ಹಾಗೂ ಪೃಥ್ವಿಯಿಂದ ರವಿಯವರೆಗೆ ಎಂದರೆ ೯ ಕೋಟಿ ಮೈಲುಗಳಷ್ಟು ಎತ್ತರದವರೆಗೆ ಹಬ್ಬಿರುವ ಬರ್ಫದ ಕಂಬವು, ಒಂದೇ ಸೆಕೆಂಡಿನಲ್ಲಿ ಕರಗಿ ನೀರಾಗುವುದು.

ಮೇಲೆ ವಿವರಿಸಿದ ರವಿ ವಿಷಯಕ ಮೂರು ಮುಖ್ಯ ಅಂಶಗಳನ್ನು ಗಮನಿಸಿ ರವಿಯ 'ಲೋಕದ ವ್ಯಾಪಾರಗಳ' ವಿಷಯದಲ್ಲಿ ವಿಜ್ಞಾನಿಗಳಿಗೆ ಏನು ಹೇಳುವುದಿದೆ ಇದನ್ನು ವಿವೇಚಿಸುವಾ. ಈ ಮೊದಲೇ ವಿವರಿಸಿದ ಹ್ಯಾರಿಸನ್‌ರ ವಿಚಾರವನ್ನು ವಿಶದೀಕರಿಸಲು ಪ್ರಯತ್ನಿಸೋಣ. ಇಂದು ನಾವು ಉರುವಲು ಇಲ್ಲವೆ ವಿದ್ಯುತ್ತನ್ನುಕೊಳ್ಳುವಲ್ಲಿ, ಶಕ್ತಿಯನ್ನೇ ಕೊಳ್ಳುತ್ತಿರುವೆವೆಂಬ ಕಲ್ಪನೆಯು ಒಮ್ಮೆಲೇ ಬರುವುದು: ಆದರೆ ಇದೇ ತರದ ಕಲ್ಪನೆಯು, ನಮ್ಮ ಕಿರಾಣಿ ಸಾಮಾನು ಗಳನ್ನು ಇಲ್ಲವೆ ಹಾಲು ಬೆಣ್ಣೆ ಇತ್ಯಾದಿ ಆಹಾರ ಸಾಮಗ್ರಿಗಳನ್ನು ಕೊಳ್ಳುವಾಗಬಾರದು. ಈಗ ಬೆಣ್ಣೆಯ ವಿಷಯವನ್ನೇ ಹೆಚ್ಚಾಗಿ ವಿಚಾರ ಮಾಡೋಣ. ಬೆಣ್ಣೆಯು ಬೇಕಿರುವುದು ನಮಗೆ ಶಕ್ತಿಯನ್ನು ಒದಗಿಸಲೋಸುಗ. ಬೆಣ್ಣೆಯು ನಮಗೆ ದೊರೆಯುವ ರೀತಿಯನ್ನು ಸೂಕ್ಷ್ಮವಾಗಿ ಪರೀಕ್ಷಿಸಿದಲ್ಲಿ, ಇದರ ಉತ್ಪಾದನೆಗೆ ಅನುಕ್ರಮವಾಗಿ –ಹಾಲು, ಎಮ್ಮೆ ಅಥವಾ ಆಕಳು, ನಾವು ಅವುಗಳಿಗೆ ಪೂರೈಸಲಿರುವ ಮೇವು ಇತ್ಯಾದಿಗಳು – ಅಂತ್ಯದಲ್ಲಿ ರವಿ ಹೀಗೆ ಇರುವುದು ಕಂಡುಬರುವುದು. ಅಂದರೆ ರವಿಯ ಶಕ್ತಿಯನ್ನು ನಾವು ಬೆಣ್ಣೆಯ ರೂಪವಾಗಿ ನಮ್ಮ ದೇಹಕ್ಕೆ ಒದಗಿಸುತ್ತೇವೆ. ಹೀಗೆ ನಾವು ಯಾವುದೇ ಸಮಸ್ಯೆಯನ್ನು ಪರೀಕ್ಷಿಸಿದರೂ ನಾವು ಸಲ್ಲಿಸುವ ಹಣವು, ಈ ಸಾಧನಗಳು ಒಳಗೊಂಡ ಶಕ್ತಿಗ್ಗೇ ಎಂದು ಕಂಡುಬರುವುದಲ್ಲದೆ, ಇಂಥ ಶಕ್ತಿಯ ಮೂಲ ಝರಿಯು ರವಿಯೆಂದೇ ತಿಳಿದುಬರುವುದು. ಶಕ್ತಿರಹಿತ ವ್ಯಾಪಾರವು ಸಾಧ್ಯವಿಲ್ಲವೆಂದ ಬಳಿಕ 'ಲೋಕದ ವ್ಯಾಪಾರವು' ಶಕ್ತಿಯಿಂದಲೇ ಸಾಧ್ಯ ಮತ್ತು ಇಂಥ ಶಕ್ತಿಯನ್ನು ರವಿಯೇ ಒದಗಿಸಲಿರುವನಾದ್ದರಿಂದ 'ಲೋಕದ ಚೇಷ್ಟೆಗೆ ರವಿ ಬೀಜವಾದಂತೆ' ಎಂಬ ವಚನದ, ವೈಜ್ಞಾನಿಕ ಸತ್ಯತೆಯು ವಿದಿತವಾಗುವುದು.

ಇದರಂತೆಯೇ, ಇಂದು ನಮಗೆ ದೊರೆಯುವ ಮಳೆ, ಗಾಳಿಗಳು, ಋತುಗಳು ಹಾಗೂ ಅವುಗಳ ಬದಲಾವಣೆಗಳು, ಕಲ್ಲಿದ್ದಲು. ಪೆಟ್ರೋಲ್ ಮುಂತಾದ ಎಲ್ಲವುಗಳೂ ರವಿಯಿಂದಲೇ ತಮ್ಮ ಶಕ್ತಿಯನ್ನು ದೊರಕಿಸಿಕೊಂಡಿವೆ ಎಂದು ತಿಳಿದುಬರುವುದು. ಇದು ನಮಗೆ ಜಗತ್ತಿನಲ್ಲಿಯ ಯಾವುದೇ ದೇಶದಿಂದ ಕಳಿಸಲ್ಪಟ್ಟ ರೇಡಿಯೋದ ಅಲೆಗಳು ಮುಟ್ಟಲಿರುವುದು ರವಿಯಿಂದಲೆ. ಹಾಗೆಯೇ ನಮ್ಮ ಸುಖಕರವಾದ ಆರೋಗ್ಯಕ್ಕೆ ಬೇಕಿರ ಬಹುದಾದ ಬೆಳಕಿನ ತೆರೆಗಳನ್ನು ಕಳುಹಿಸುವಾತನು ಈತನೇ. ಸ್ವಲ್ಪದರಲ್ಲಿಯೆ ಹೇಳುವುದಾದರೆ ನಮ್ಮ ನಿಸರ್ಗದ ಪ್ರಯೋಗ ಶಾಲೆಯನ್ನು ಲಕ್ಷಾವಧಿ ವರ್ಷಗಳಿಂದ ನಡೆಯಿಸುತ್ತಿರುವ ಮತ್ತು ಹಾಗೆಯೆ ಮುಂದೆ ಸಹ ನಡೆಯಿಸಲಿರುವ ವಿಶ್ವಜನಕನು ಈತನೇ. ಇವನೇ ನಮ್ಮ ಜೀವನಾ ಧಾರನು, ನಮ್ಮ ನಾಗರಿಕತೆಯ ಚಕ್ರವನ್ನು ತಿರುಗಿಸಲು ಬೇಕಿರುವ

ಶಕ್ತಿರೂಪ ಹಣವನ್ನು ವಿನಾಮೂಲ್ಯವಾಗಿ ಒದಗಿಸುವವನು ಮತ್ತು ಪೃಥ್ವಿಯ ಮೇಲೆ ನಡೆಯಲಿರುವ ಪ್ರಯೋಗ ಶಾಲೆಗಳ ಹಾಗೂ ಎಲ್ಲ ವ್ಯಾಪಾರಗಳ ನಿಜವಾದ ಸಂಚಾಲಕನು. ಇವನಿಂದ ಒಂದೇ ದಿನದಲ್ಲಿ ಬರಬಹುದಾದ ಶಕ್ತಿರೂಪ ಹಣವನ್ನು, ನಮ್ಮ ನೂರು ವರ್ಷಗಳ ಜೀವಿತದಲ್ಲಿ ಉಪಯೋಗಿಸಲು ಸಾಧ್ಯವಿಲ್ಲ. ಇಂದು ಮರುಭೂಮಿಗಳೆಂದು ತ್ಯಕ್ತವಾದ ಪ್ರದೇಶಗಳಲ್ಲಿ ನಮಗೆ ನೇರವಾಗಿ ದೊರೆಯುವ ರವಿ ಶಕ್ತಿಯನ್ನು ಹಿಡಿದು ಉಪಯೋಗಿಸಲು ಸಾಧ್ಯವಿದ್ದಲ್ಲಿ. ಈ ಶಕ್ತಿಯು ನಮಗೆ ಶಾಶ್ವತವಾಗಿ ಸಾಕಾಗುವಷ್ಟಿದೆ. ಈತನ ಶಕ್ತಿಯನ್ನು ಎಷ್ಟು ವರ್ಣಿಸಿದರೂ ಕಡಿಮೆಯೇ.

ಅಕ್ಕನ ವಚನದಲ್ಲಿ ಉಪಯೋಗಿಸಲ್ಪಟ್ಟ ಚೇಷ್ಟೆಗೆ ವ್ಯಾಪಾರವೆಂದು ಅರ್ಥಮಾಡಿ ಈವರೆಗೆ ವಿವೇಚಿಸಿದ್ದಿದೆ; ಆದರೆ ಈ ವ್ಯಾಪಾರವು ಕೇವಲ ಸದ್ವ್ಯಾಪಾರ ವಿರದೆ ದುರ್ವ್ಯಾಪಾರವೂ ಇರಬಹುದಾಗಿದೆ. ಸ್ವಾರ್ಥಸಾಧನೆ ಹಾಗೂ ಶಕ್ತಿಲಾಲಸೆಗಳಿಗಾಗಿ ಇದೇ ರವಿಯಿಂದ ದೊರೆಯಲಿರುವ ಮತ್ತು ನಿಸರ್ಗವು ನಮ್ಮ ಅನುಕೂಲತೆಗಾಗಿ ಕೊಡಮಾಡಿದ ಶಕ್ತಿರೂಪ ಹಣವನ್ನು, ಯುದ್ಧ ಮೊದಲಾದ ದುರ್ವ್ಯಾಪಾರಗಳಿಗೂ ಉಪಯೋಗಿಸುತ್ತಿದ್ದೇವೆ. ಇಂಥ ದುರ್ವ್ಯಾಪಾರಗಳಲ್ಲಿ ಅಪವ್ಯಯವಾಗುವ ಶಕ್ತಿಯನ್ನು, ಸದ್ವ್ಯಾಪಾರಗಳಿಗೋಸ್ಕರ ಉಪಯೋಗಿಸುವ ಮನೋಭಾವವು ಎಲ್ಲರಲ್ಲಿಯೂ ಮೂಡಬಹುದೇ?

ಕಡೆಯದಾಗಿ, ಇಂದು ರವಿಯ ಪ್ರಯೋಗಾಶಾಲೆಯಲ್ಲಿ ಏನೇನು ಜರುಗಲಿರಬಹುದು ಇದು ಹೇಳಲು ಸಾಧ್ಯವಿಲ್ಲ. ಇಂದು ಅನುಭೇದನವು ನಮ್ಮಲ್ಲಿ ತಿಳಿದು ಕೇವಲ ಹಲವೇ ವರ್ಷಗಳಾಗಿದ್ದರೂ ಇದು ಅಲ್ಲಿಯ ನಿತ್ಯದ ವ್ಯವಹಾರವಾಗಿದೆ. ನಮಗೆ ಗೊತ್ತಿಲ್ಲದ ಪೃಥ್ವಿಯ ಮೇಲಿನ ಅನೇಕ ವ್ಯಾಪಾರಗಳಿಗೆ ಈ ಶಕ್ತಿಯು ಹೇಗೆ ಕಾರಣೀಭೂತವಾಗಿದೆ ಇತ್ಯಾದಿ ನಮಗೆ ಹೇಳಲು ಸಾಧ್ಯವಿಲ್ಲ. ರವಿ ವಿಷಯವಾಗಿ ಈವರೆಗೆ ತಿಳಿದಿರುವ ಜ್ಞಾನವನ್ನು ತಿಳಿಯಲಿರುವ ಜ್ಞಾನದೊಡನೆ ಹೋಲಿಸಿದ್ದಾದರೆ ನಮಗೆ ಈವರೆಗೆ ತಿಳಿದ ಅಂಶವು ಅತ್ಯಲ್ಪವೆಂದೇ ಹೇಳಬೇಕಾಗುವುದು.

ನ್ಯೂಟನ್‌ನು ಹುಟ್ಟುವ ಪೂರ್ವದಲ್ಲಿ ಗಿಡದಿಂದ ಗಲಿತವಾದ ಸೇಬು ಹಣ್ಣು ನೆಲಕ್ಕೆ ಬೀಳುತ್ತಿದ್ದಿಲ್ಲವೆಂದಲ್ಲ, ಆದರೆ, ಇದು ಗುರುತ್ವಾಕರ್ಷಣದ ಮೂಲವೇ ಎಂದು ತಿಳಿಯಲು ಹೇಗೆ ನ್ಯೂಟನ್‌ನಂಥ ಶೋಧ ಬುದ್ಧಿಗೆ ಸಾಧ್ಯವಾಯಿತೋ ಹಾಗೆಯೇ ಅಕ್ಕನು ಜನ್ಮವೆತ್ತುವ ಪೂರ್ವದಲ್ಲಿ ಲೋಕದ ವ್ಯಾಪಾರಕ್ಕೆ ರವಿಯೇ ಕಾರಣವಿದ್ದರೂ, ಇದನ್ನು ತಿಳಿಯಲು ಅಕ್ಕನಂಥ ಪ್ರತಿಭೆಯೇ ಬೇಕಾಯಿತು. ಆದರೆ ಆಧ್ಯಾತ್ಮ ಜೀವನವನ್ನು ನಡೆಯಿಸುತ್ತಿರುವ ಈ ಸಾಧ್ವೀಮಣಿಯು ವೈಜ್ಞಾನಿಕ ಸತ್ಯವನ್ನು–ಯಾವ ಸತ್ಯವು ರವಿಯು ಉದಯಿಸುವವರೆಗೆ ಅಚ್ಚಳಿಯದೇ ದಿನೇ ದಿನೇ ಹೆಚ್ಚು ಹೆಚ್ಚು ಪ್ರಖರವಾಗಿ ಉಳಿಯುವುದೊ ಅಂಥ ಸತ್ಯವನ್ನು – ಹೇಗೆ ಕಂಡುಹಿಡಿದಳು. ಇದು ಮಾತ್ರ ಪ್ರಯೋಗಗಳನ್ನು ಅವಲಂಬಿಸಿ ತತ್ತ್ವ ನಿಶ್ಚಯವನ್ನು ಅಂಗೀಕರಿಸುವ ವಿಜ್ಞಾನಕ್ಕೆ ಸಾಧ್ಯವಿಲ್ಲೆಂಬಂತೆ ತೋರುವುದು. ಇಂಥ ಸತ್ಯವನ್ನು ಕಂಡು ಹಿಡಿದ ಅಕ್ಕನ ರೀತಿಯು ಅಕ್ಕನಿಗೇ ಗೊತ್ತು.

ಇದೇ ತರದ ಮತ್ತು ಶ್ರೀ ಮದ್ಭಾಗವತದಲ್ಲಿ ಉಕ್ತವಾದ ಒಂದು ಮಾತಿನ ವಿಷಯವಾಗಿ. ೧೯೩೪ರಲ್ಲಿ ರಶಿಯಾ ಆಕಾಶದಲ್ಲಿ ೧೪ ಮೈಲುಗಳವರೆಗೆ ಮೇಲೆ ಹೋದ ಬಲೂನಿನಲ್ಲಿಯ ವೈಜ್ಞಾನಿಕರ ವರದಿಯಿಂದ, ಪುಷ್ಟಿಯು ದೊರೆಯುವಂತಿದೆ. ಭಾಗವತ ಪಂಚಮ ಸ್ಕಂದದಲ್ಲಿ

ಮೇಲೆ ಹೋದಂತೆ ಅಂಧಕಾರವಿದೆಯೆಂದು ಉಕ್ತವಾಗಿದೆ, ರಶಿಯಾದ ವೈಮಾನಿಕರ ವರದಿಯ ಪ್ರಕಾರ, ೫ ಮೈಲು ಎತ್ತರದ ಮೇಲೆ ನೀಲವರ್ಣದ್ದಾಗಿ ಕಾಣುವ ಆಕಾಶವು ೧೪ ಮೈಲುಗಳಷ್ಟಾಗುವುದರಲ್ಲಿ ಕರೇ–ಬೂದಿ ಬಣ್ಣದ್ದಾಗಿ ಕಾಣುವುದೆಂದು ತಿಳಿದಿದೆ. ಈ ವಿಷಯವಾಗಿ, ಪ್ರಖ್ಯಾತ ಖಗೋಲ ಶಾಸ್ತ್ರಜ್ಞರಾದ ಜೀನ್ಸ್ ಇವರು "ನಾವು ವಾಯು ಮಂಡಲದಿಂದ ಪೂರ್ತಿಯಾಗಿ ಹೊರಗೆ ಹೋದಲ್ಲಿ, ಆಕಾಶವು ಸಂಪೂರ್ಣವಾಗಿ ಕರಿದಾಗಿ ಕಾಣುವಲ್ಲಿ ಏನೂ ಸಂದೇಹವಿಲ್ಲ" ಎಂಬ ಅಭಿಪ್ರಾಯವನ್ನು, ತಮ್ಮ ಒಂದು ಪುಸ್ತಕದಲ್ಲಿ ವ್ಯಕ್ತಮಾಡಿದ್ದಾರೆ.

೨೩. ಅಕ್ಕನ ಬೆಡಗಿನ ವಚನ

●

ಲೀಲಾದೇವಿ ಆರ್. ಪ್ರಸಾದ್

"ಅತ್ತೆ ಮಾಯೆ, ಮಾವ ಸಂಸಾರಿ.
ಮೂವರು ಮೈದುನರು ಹುಲಿಯಂತವದಿರು
ನಾಲ್ವರು ನಗೆವೆಣ್ಣು ಕೇಳು ಕೆಳದಿ
ಐವರು ಭಾವದಿರನೊಯ್ವ ದೈವರಿಲ್ಲ
ಆರು ಪ್ರಜೆಯತ್ತಿಗೆಯರ ಮೀರಲಾರೆನು
ತಾಯೆ, ಹೇಳುವಡೆ ಏಳು ಪ್ರಜೆ ತೊತ್ತಿರ ಕಾಹು
ಕರ್ಮವೆಂಬ ಗಂಡನ ಬಾಯ ಟೊಣೆದು
ಹಾದರವಸಾಡುವೆನು ಹರನ ಕೂಡೆ
ಮನವೆಂಬ ಸಖಿಯ ಪ್ರಸಾದದಿಂದ
ಅನುಭಾವವ ಕಲಿತೆನು ಶಿವನೊಡನೆ;
ಕರಚೆಲುವ ಶ್ರೀಶೈಲ ಚೆನ್ನಮಲ್ಲಿಕಾರ್ಜುನನೆಂಬ
ಸಜ್ಜನದ ಗಂಡನ ಮಾಡಿಕೊಂಬೆ."

–ಅಕ್ಕಮಹಾದೇವಿ

ಇದೊಂದು ಅಕ್ಕಮಹಾದೇವಿಯ ಬೆಡಗಿನ ವಚನ. ವಚನ ಸಾಹಿತ್ಯದಲ್ಲಿ ಬೆಡಗಿನ ವಚನಗಳಿಗೆ ವಿಶೇಷವಾದ ಅನುಭಾವದ ಅರ್ಥಗಳು ಸಮ್ಮಿಳನವಾಗಿರುತ್ತವೆ. ಈ ವಚನದ ಭಾವಾರ್ಥವನ್ನು ವಿವಿಧ ಆಯಾಮಗಳಿಂದ ಗುರುತಿಸಬಹುದಾಗಿದೆ. ಸಮಾಜದ ಕೌಟುಂಬಿಕ ಜೀವನದಲ್ಲಿ ಅತ್ತೆ, ಮಾವ, ಮೈದುನ, ನಾದಿನಿ, ಭಾವಂದಿರು ಇವರೆಲ್ಲರೂ ಬೌದ್ಧಿಕ ಜೀವನದಲ್ಲಿ ಪ್ರಮುಖವಾದ ಸಂಸಾರದ ನಿರ್ಣಾಯಕ ಪಾತ್ರಧಾರಿಗಳಾಗಿದ್ದಾರೆ. ಹೆಣ್ಣಿನ ಜೀವನದಲ್ಲಿ 'ಮದುವೆ' ಒಂದು ಪ್ರಮುಖವಾದ ಬದಲಾವಣೆಯ ಘಟ್ಟವೆಂದೇ ಗುರುತಿಸಬಹುದು. ಮದುವೆಯ ಮೂಲಕ ಬರುವ ಕೌಟುಂಬಿಕ ಸಂಬಂಧಗಳು, ಸಾಂಪ್ರದಾಯಿಕ ವ್ಯವಸ್ಥೆಯೊಳಗೆ ಮೂಡಿಬಂದು ಹೆಣ್ಣಿನ ಜೀವನದ ಸುತ್ತಲೂ ಹೆಣೆಯತ್ತ ಬಂದಿರುವುದು ಸ್ವಾಭಾವಿಕವೆಂದೇ ಹೇಳಬಹುದು.

ಇಂದು ಅವಿಭಕ್ತ ಕುಟುಂಬಗಳು ಮಾಯವಾಗುತ್ತಿವೆ. ಸಂಸಾರದಲ್ಲಿ ಬೆರೆತು ಕುಟುಂಬದ ಸದಸ್ಯರ ರಕ್ತಸಂಬಂಧವು ಅವುಗಳಲ್ಲಿ ವಿವಿಧ ಬಾಂಧವ್ಯದ ಹೆಸರುಗಳು ಕೂಡ ಮಾಯವಾಗುತ್ತ ನಡೆದಿವೆ. ಅಂದಿನ ದಿನಗಳಲ್ಲಿಯೂ ಬಾಧಿತ ಸಂಸಾರದಲ್ಲಿಯ ಎಲ್ಲ ವ್ಯಕ್ತಿಗಳಿಗೆ ಅವರವರ ಬಾಂಧವ್ಯಕ್ಕೆ ತಕ್ಕಂತೆ ಹೆಸರಿಸಿ ಗೌರವಿಸುತ್ತಿದ್ದರೆಂದು ಬೇರೆ ಹೇಳಬೇಕಾಗಿಲ್ಲ. ಅವುಗಳಲ್ಲಿ ತಂದೆ ಅಥವಾ ಅಕ್ಕ, ತಮ್ಮ ಅಥವಾ ಅವ್ವ, ಅಜ್ಜಿ, ಅಜ್ಜ, ದೊಡ್ಡಪ್ಪ, ಚಿಕ್ಕಪ್ಪ, ಚಿಕ್ಕವ್ವ, ದೊಡ್ಡವ್ವ, ಮಾವ, ಅತ್ತೆ, ಸೋದರಮಾವ, ಸೋದರತ್ತೆ, ತಮ್ಮ, ತಂಗಿ, ಅಕ್ಕ, ಅಣ್ಣ ಹೀಗೆ ವಿವಿಧ ಹೆಸರುಗಳಿಂದ ಅವರನ್ನು ಗುರುತಿಸಿ, ಬಾಯಿತುಂಬ ತಿಳಿಗನ್ನಡದಲ್ಲಿ ಅವರವರ ಗೌರವ ಹೆಸರುಗಳನ್ನು ಕರೆಯುವುದೊಂದು ವಿಶೇಷ ಹಾಗೂ ಆತ್ಮೀಯತೆಯ ಕುರುಹು ಕಂಡುಬರುತ್ತಿತ್ತು. ಆದರೆ ಇಂದು ಆಧುನಿಕತೆಯ ಮರುಳಾಗಿ ಆಂಗ್ಲಭಾಷೆಗೆ ಜೋತುಬಿದ್ದು ಕುಟುಂಬದ ವಿಧವಿಧವಾದ ಬಾಂಧವ್ಯದ ಹೆಸರುಗಳನ್ನು ಬದಿಗೊತ್ತಿ ಕೇವಲ ಮಹಿಳೆಯರಿಗೆ ಅಂಟಿ, ಮಹನೀಯರಿಗೆ ಅಂಕಲ್ ಎಂದು ಕರೆಯುವ ರೂಢಿ! ಅಜ್ಜ–ಅಜ್ಜಿಯರಿಗೆ ಗ್ರ್ಯಾಂಡ್‌ಮಾ, ಗ್ರ್ಯಾಂಡ್‌ಪಪ್ಪಾ ಎಂದು ಎರಡೆರಡೇ ಶಬ್ದಗಳಲ್ಲಿ ಪರಿವರ್ತಿಸಿಕೊಂಡು ಕೌಟುಂಬಿಕ ಬಾಂಧವ್ಯದ ಹೆಸರುಗಳು ಮಾಯವಾಗುತ್ತ ಬಂದಿವೆ. ಆದರೆ ಅಕ್ಕಮಹಾದೇವಿ ತನ್ನ ಬೆಡಗಿನ ವಚನದಲ್ಲಿ ಬಾಧಿತ ಪ್ರಪಂಚದ ಕುಟುಂಬದ ವಿಧವಿಧ ಸಂಬಂಧಗಳನ್ನು ಗುರುತಿಸಿ ಅವುಗಳನ್ನು ಪ್ರಪಂಚದ ಅನೇಕ ಆಕಾರ–ವಿಕಾರಗಳಲ್ಲಿ ಗುರುತಿಸಲು ಪ್ರಯತ್ನಿಸಿದಳೆಂದು ಕಂಡುಬರುವುದು.

ಆದರೆ ಈ ವಚನದಲ್ಲಿ ವಿಡಂಬನೆಯ ಮೂಲಕ ಅಕ್ಕಮಹಾದೇವಿ ಸಾಮಾಜಿಕ ಕುಟುಂಬದೊಳಗೆ ನಿರ್ಬಂಧದ ಚೌಕಟ್ಟಿನ ಪರಿಸರದ ಕಾವಲಿನಲ್ಲಿ ಹೆಣ್ಣಿನ ಸ್ಥಿತಿಯನ್ನು ಅರಿತು ಧ್ವನಿಯೆತ್ತಿದ್ದಾಳೆ. ಇಂತಹ ಕಟ್ಟುಪಾಡುಗಳನ್ನು ಮುರಿದು, ಅವುಗಳಿಂದ ಬಿಡುಗಡೆ ಹೊಂದಿ ಜೀವನದಲ್ಲಿ ಇನ್ನೊಂದು ಹೊಸ ಹೆಜ್ಜೆಯನ್ನು ಹುಡುಕುವ ಸಾಹಸವನ್ನೇ ಮಾಡಿತೋರಿಸಿದ ಮಹಾಶರಣೆ ಅಕ್ಕ. ಕೌಟುಂಬಿಕ ಅಧಿಕಾರ ಗಂಡನ ದರ್ಪ, ಅವನನ್ನು ಸುತ್ತಿ ಬಳಸಿದ ಬಳಗ, ಎಲ್ಲವನ್ನು ತ್ಯಜಿಸಿ, ತನ್ನ ಅಮೂಲ್ಯವಾದ 'ಅನುಭಾವದ' ಮೂಲಕ ಶಿವನೆಂಬ 'ಸಜ್ಜನಗಂಡ'ನನ್ನು ಪಡೆಯಲು ಅಡ್ಡಿಯಾಗುವ ಇಂತಹ ಕರ್ಮದ ಗಂಡನನ್ನೂ ತೊರೆದು, ನಿರಂತರ ಜಂಗಮರೂಪಿಯಾದ ಶಿವನನ್ನು ಒಲಿಸಲು ಶಿವನನ್ನು ತನ್ನ ಆತ್ಮಸಂಗಾತಿಯನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿ ಯಶಸ್ವಿಯಾದ ಮಹಾಸಾಧ್ವಿ ಅಕ್ಕ.

ಈ ಬೆಡಗಿನ ವಚನದ ಒಂದೊಂದು ಶಬ್ದಕ್ಕೂ, ಒಂದೊಂದು ಸಾಲಿಗೂ ಅನುಭಾವಿಗಳ ತರ್ಕಕ್ಕೆ, ಅನೇಕ ವಿಭಿನ್ನವಾದ ನಿಗೂಢವಾದ ಅರ್ಥಗಳನ್ನು ಗುರುತಿಸಬಹುದು.

ಅತ್ತೆಯೆಂದರೆ ಆಸೆಗಳು, ಮಾವ ಬಯಕೆ, ಅತ್ತೆ ಪ್ರಕೃತಿ, ಮಾವ ಪುರುಷ.

Matter & Energy

Nature & Matter

ಅತ್ತೆ–ಮಾವ, ನಿಸರ್ಗದ ಅದ್ಭುತಶಕ್ತಿಗಳೆಂದು ಗುರುತಿಸಬಹುದು.

ಸಂಸಾರಿ : ಶಕ್ತಿ ಸಂಸಾರವೆಂದರೆ ಲೌಕಿಕ ಪ್ರಪಂಚ. ಮೂವರು ಮೈದುನರು–ಸತ್ವ, ರಜ, ತಮಗಳು ಈ ಮೂರು ಗುಣಗಳ ಶಕ್ತಿ ಅಸಾಧ್ಯ. ಅಂತೆಯೇ ಹೆಣ್ಣು, ಹೊನ್ನು, ಮಣ್ಣು ಅವುಗಳನ್ನು ಮಾನವ ತನ್ನಲ್ಲಿ ಅಳವಡಿಸಿಕೊಳ್ಳಲು ಪಡುವ ಶ್ರಮ, ಸಾಹಸ ಅಪಾರ.

ಅವುಗಳನ್ನು ಎದುರಿಸುವ ಮನಸ್ಸು ಪರಿಪಕ್ವಯುತವಾಗದಿದ್ದಲ್ಲಿ ಅವುಗಳನ್ನು ಮೆಟ್ಟಿ ನಿಲ್ಲುವ ಶಕ್ತಿ ಆ ಸಾಹಸ ಹುಲಿಯ ಬೇಟೆಯಷ್ಟೆ ಕಷ್ಟಕರ.

ನಾಲ್ವರು ನಗೆವೆಣ್ಣು : ಮನ, ಬುದ್ಧಿ, ಚಿತ್ತ, ಅಹಂಕಾರ ಇವುಗಳನ್ನು ಕೂಡ ಹೆಣ್ಣಿನ ಸ್ವರೂಪದಲ್ಲಿಯೇ ಕಾಣಲಾಗುತ್ತದೆ. ಚಂಚಲ, ಮನಸ್ಸು, ಚುರುಕುಬುದ್ಧಿ, ಚಿತ್ರ ವಿಚಿತ್ರ ಚಿತ್ರಗಳು, ಅಹಂಕಾರದ ಪರಾಕಾಷ್ಠೆ ಇವುಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದು ಇತ್ಯಾದಿ.

ಐವರು ಭಾವದಿರನೊಯ್ವ : ಇಲ್ಲಿ ಮಾನವ ಶರೀರಕ್ಕೆ ಪಂಚೇಂದ್ರಿಯಗಳ ಪರಿಕಲ್ಪನೆ. ಕಣ್ಣು, ಕಿವಿ, ಮೂಗು, ನಾಲಿಗೆ, ತ್ವಚೆ ಇವುಗಳು ದೈವಸ್ವರೂಪ. ಮಾನವ ಶರೀರದ ಪಂಚ ಭೂತಗಳು. ಪೃಥ್ವಿ, ಅಪ್ಪು, ತೇಜಸ್ಸು, ವಾಯು, ಆಕಾಶ ಪಂಚಶಕ್ತಿಗಳು. ಇವುಗಳನ್ನು ಮೀರುವ ದೈವವಿಲ್ಲ. ಇವುಗಳನ್ನು ಸರಿದಾರಿಯಲ್ಲಿ ಕೊಂಡೊಯ್ಯುವುದೇ ವ್ಯಕ್ತಿ ಮಾಡಬೇಕಾದ ಕರ್ತವ್ಯ. ಪಂಚಪಾತಕಗಳು – ಪರಧನ, ಪರಸ್ತ್ರೀ, ಪರನಿಂದೆ, ಪರದೈವ, ಪರಹಿಂಸೆ.

ಆರು ಪ್ರಜೆಯತ್ತಿಗೆಯರ : ಅರಿಷಡ್ವರ್ಗಗಳು ಕಾಮ, ಕ್ರೋಧ, ಮೋಹ, ಲೋಭ, ಮದ, ಮತ್ಸರ ಇವುಗಳನ್ನು ಪ್ರಜೆಗಳೆಂದೂ ಅತ್ತಿಗೆಯರಿಗೆ ಹೋಲಿಸುವ ಪರಿ.

ಕಂಡದ್ದನ್ನು ಆಶಿಸುವುದೇ ಕಾಮ,
ಸಿಕ್ಕದೇ ಇದ್ದಾಗ ಕ್ರೋಧ.
ಸಿಕ್ಕಾಗ ಅದರ ಮೇಲಿನ ಮೋಹ (ಪ್ರೀತಿ)
ಅದು ಹೆಚ್ಚಿದಾಗ ಲೋಭ,
ಲೋಭ ಹೆಚ್ಚಿದಲ್ಲಿ ಅದರ ಮದ,
ಮದ ಹೆಚ್ಚಿದಲ್ಲಿ ಮತ್ಸರ ಹುಟ್ಟುವದು.

ಅರಿಷಡ್ವರ್ಗಗಳನ್ನು ಮೀರಿ ನಿಲ್ಲುವದು ಕರಕಷ್ಟವೆಂದೇ ಹೇಳಿರುವಳು.

ಏಳು ಪ್ರಜೆ : ಸಪ್ತವ್ಯಸನಗಳು ತನು, ಮನ, ಧನ, ರಾಜ್ಯ, ವಿಶ್ವ, ಉತ್ಸಾಹ, ಸೇವಕ. ಅಲ್ಲದೆ–ವಾಕ್ಪಾರುಷ, ಅರ್ಥದೂಷಣ, ದಂಡಪಾಷ್ಯ, ಮೃಗಯಾ, ದ್ಯೂತ, ಸ್ತ್ರೀ, ಪಾನ.

ಇವುಗಳಿಗೆ ವಚನ ಸಂಪುಟ ೧೫ರ ಪುಟ ೨೬೩ ವ್ಯಾಖ್ಯಾನವಿದೆ. ಅರಿಷಡ್ವರ್ಗಗಳನ್ನು ಮೀರಿ ನಡೆಯುವುದು ಬಹು ಕಷ್ಟಕರ. ಕರ್ಮವನ್ನು ಮಾಡುವಾಗ್ಗೆ ಎಚ್ಚರವಹಿಸು. ದಾರಿ ತಪ್ಪಬೇಡ. ಇಲ್ಲಿ ಕರ್ಮವೆನ್ನುವುದನ್ನು ಗಂಡನಿಗೆ ಹೋಲಿಸಿ ಹೇಳಿದಂತೆ ಕಾಣುವುದು. ಇಂತಹ ಕರ್ಮದೊಡೆಯ ಗಂಡನ ಬಾಯಿ ಮುಚ್ಚಿಸಿ, ಅಂದರೆ ಟೊಣೆಯೆಂಬ ಶಬ್ದದ ಅರ್ಥ ಮೋಸ ಮಾಡು, ಬಡಿ ಎಂದು.

ಹಾದರವನಾಡುವೆನು ಹರನ ಕೂಡೆ: ಹಾದರ ಶಬ್ದದ ಬಗ್ಗೆ ನನಗೆ ಬಹಳ ವಿಸ್ಮಯ ವೆನಿಸುತ್ತದೆ. ಅಕ್ಕಮಹಾದೇವಿಯಂತಹ ಶರಣೆಯಿಂದ ಇಂತಹ ಶಬ್ದದ ಉಲ್ಲೇಖ ಹೇಗೆ ಆಯಿತು? ಹಾದರ ಇದರರ್ಥ ಇಂದ್ರಿಯಗಳ ಮೇಲೆ ಬಲವಂತದ ಪ್ರಯೋಗವೆನ್ನಬಹುದೇ? ಅಥವಾ ಮಾನವನ ಸಹಜ ಕ್ರಿಯೆಗಳಲ್ಲಿ ಮೂಡಿಬರುವ ನಿಸರ್ಗದ ಬಯಕೆಯೇ? ಅಕ್ಕಮಹಾದೇವಿ ಈ ಶಬ್ದವನ್ನು ಉಪಯೋಗಿಸಿದರೆ? ಅಥವಾ ತಾಳೆಗರಿಗಳಲ್ಲಿ ಮಸುಕಾಗಿ ಮೂಡಿಬಂದ ಅಹಿತಕರವಾದ ಶಬ್ದವೆ? ಇದೇ ತರಹ ಅಕ್ಕನ ಇನ್ನೊಂದು ವಚನದಲ್ಲಿ ನಿಮ್ಮ ನಿಮ್ಮ ಗಂಡಂದಿರನ್ನು ಒಲೆಯೊಳಗಿಕ್ಕು.

ಇದರಂತೆ ಬಸವಣ್ಣನವರ ವಚನದಲ್ಲಿಯೂ ಕೆಲವು ಅಹಿತಕರ ಶಬ್ದಗಳು ಕಂಡು ಬರುತ್ತವೆ. ಬಸವಣ್ಣನ ಮನೆಗೆ ಕಳ್ಳ ಬಂದಾಗ ಹೆಂಡತಿಗೆ 'ಚಂಡಾಲಗಿತ್ತಿ'ಯೆಂಬ ನುಡಿಯು ಕಂಡುಬರುತ್ತದೆ. ಮಹಿಳೆಯೆಂದರೆ ಮಹಾದೇವಿಯೆಂದು ಗೌರವಿಸಿದ ಮಹಾಪುರುಷ ಬಸವಣ್ಣ ತನ್ನ ಧರ್ಮಪತ್ನಿಗೆ "ಚಂಡಾಲಗಿತ್ತಿ"ಯೆಂದು ಕರೆದುದು ಸರಿಯೇ? ಬಹುಶ?ಃ ಅದು "ಬೆಂಡೋಲೆ ಕಿತ್ತಿ"ಯೆಂಬ ಶಬ್ದ ಓಲೆಗರಿಯಲ್ಲಿ ಮಸುಕಾಗಿ 'ಚೆಂಡಾಲಗಿತ್ತಿ' ಆಗಿರ ಬಹುದೆಂಬ ಕಲ್ಪನೆ ನನ್ನದಾಗಿದೆ. ಇದೇ ತರಹ ಅಕ್ಕನ ಈ ವಚನದಲ್ಲಿ "ಹಾದರವ ನಾಡುವೆನು", "ಆದರವನಾಡುವೆನು" ಹರನ ಕೂಡೆಯೆಂಬುದು ಓಲೆಗರಿಯಲ್ಲಿ "ಅದರವ" ಮಾಯವಾಗಿ "ಹಾದರ"ಯೆಂದು ಕಂಡುಬಂದಿರಬಹುದು? ಇಂತಹ ಪ್ರಕ್ಷಿಪ್ತ ಅಹಿತಕರ ಶಬ್ದ ಗಳನ್ನು ಸರಿಪಡಿಸಿ ವಚನಗಳನ್ನು ಪರಿಷ್ಕರಿಸಿ, ಮುಂದೆ ಅಚ್ಚಾಗುವಾಗ ಜಾಗರೂಕತೆಯನ್ನು ವಹಿಸಿದರೆ ಒಳಿತೆಂಬುದು ನನ್ನ ಭಾವನೆ. ಹಳೆಗನ್ನಡದಲ್ಲಿ ಆ ಹೋಗಿ ಹಾ ಆಗಿರಬಹುದು.

ಮನವೆಂಬ ಸಖಿಯ ಪ್ರಸಾದದಿಂದ ಮನಸ್ಸೇ ಸ್ನೇಹಿತೆ. ಮನಸ್ಸನ್ನು ಸಂಗಾತಿಯಾಗಿ ಮಾಡಿಕೊಂಡು ಮನಸ್ಸಿನಲ್ಲಿ ಎಲ್ಲ ಸೌಖ್ಯಗಳಿಂದ ತುಂಬಿಕೊಂಡು ಅಂತಲೇ ತುಂಬು ಹೃದಯದಿಂದ ಶಿವನೊಡನೆ ಒಡನಾಡಿ ಅನುಭಾವದಿಂದ ಜೀವನದ ಅನುಭವವನ್ನು ಕಲಿತೆನು. ತನ್ನ ಪತಿ ಎಂಥವನಿರಬೇಕೆಂಬ ಪರಿಕಲ್ಪನೆ ಅಕ್ಕಮಹಾದೇವಿಯು "ಕರಚೆಲುವ", 'ಸುರ ಸುಂದರ'ವಾಗಿರಬೇಕು. ಅವನನ್ನು ಕೇವಲ ಮಲ್ಲಿಕಾರ್ಜುನನೆಂದು ಕರೆಯಲಿಲ್ಲ. "ಚೆನ್ನ" ಮಲ್ಲಿಕಾರ್ಜುನ ಎಂದರೆ ಅರ್ಥ "ಚೆನ್ನ", "ಸಜ್ಜನ", "ಸುರ ಸುಂದರ" ನಿರಂತರ, "ಜಂಗಮ" ವರಿಸದೇ ಇರುವ ಅದ್ಭುತ "ಶಕ್ತಿ" ಅಳಿಯದೇ ಉಳಿಯುವ ಅಪಾರ "ದೈವಶಕ್ತಿ"ಯನ್ನು ತನ್ನ ಆರಾಧ್ಯದೇವರನ್ನು ಒಲಿಸಲು ತನ್ನ ಎಲ್ಲ ಪ್ರಯತ್ನಗಳೀಂದ ಹೆಚ್ಚಿನ ಜೀವನದ ಸರ್ವೇಸಾಮಾನ್ಯ ಜೀವನದ ಮೆಟ್ಟಿಲುಗಳನ್ನು ಧೈರ್ಯ, ಸ್ಥೈರ್ಯದಿಂದ, ಮೆಟ್ಟಿನಿಂದ ಅಪರೂಪದ ಸ್ತ್ರೀ ಶಕ್ತಿ "ಅಕ್ಕಮಹಾದೇವಿ".

ನನ್ನ ದೃಷ್ಟಿಯಲ್ಲಿ ಈ ವಚನವನ್ನು ನಿರ್ವಚನ ಮಾಡುವುದು ಅಷ್ಟೊಂದು ಸುಲಭವಲ್ಲ. ಇಲ್ಲಿಯ ಒಂದೊಂದು ಶಬ್ದಕ್ಕೂ ನೂರಾರು ಅರ್ಥಗಳು ಹುಟ್ಟುತ್ತವೆ. ಈ ವಚನದ ಭಾವಾರ್ಥ. ದಾರ್ಶನಿಕರಿಗೂ, ಸಂಶೋಧಕರಿಗೂ, ಹಿರಿಯ ಸಾಹಿತಿಗಳಿಗೂ, ಆಧುನಿಕ ವಚನಕಾರರಿಗೂ ಒಂದು "ವಚನ ಪರೀಕ್ಷೆಯ" ಪ್ರಶ್ನೆಪತ್ರಿಕೆಯಾಗಿದೆ. ಈ 'ವಚನ ಪ್ರಶ್ನೆ' ಪತ್ರಿಕೆಯನ್ನು ಎಲ್ಲರೂ ತಮ್ಮ ದೃಷ್ಟಿಕೋನದಿಂದ ತಮ್ಮ ಪ್ರಾಜ್ವಲ ಮನಸ್ಸಿನಿಂದ ಅಳಿದೂ, ಸುರಿದೂ "ನಿರ್ವಚನ" ಮಾಡಬಹುದಾಗಿದೆ.

೨೪. ಅಕ್ಕನ ಅನುಭಾವ ಸಂಪತ್ತು

●

ಬಿ.ಸಿ. ವೀರಪ್ಪ

ಕನ್ನಡ ಸಾಹಿತ್ಯದ ಸಾರಸ್ವತ ಲೋಕಕ್ಕೆ ಹನ್ನೆರಡನೆಯ ಶತಮಾನದಲ್ಲಿದ್ದ ಶಿವಶರಣರು ನೀಡಿದ ಅನುಭಾವ ಸಂಪತ್ತು ಮನುಕುಲಕ್ಕೇ ಒಂದು ವಿಶೇಷ ಕೊಡುಗೆ. ಬಸವಾದಿ ಪ್ರಮಥರ ಸಾಲಿನಲ್ಲಿ ಧೀರ ಶರಣೆಯಾಗಿ, ದಿಟ್ಟ ನಿಲುವಿನ ಮಹಾನ್ ಸ್ತ್ರೀ ಚೇತನವಾಗಿ ಬೆಳಗಿದ ಅಕ್ಕನ ಬದುಕು, ಇತಿಹಾಸದಲ್ಲೇ ಅಬಲೆಯರ ಪಾಲಿನ ಪ್ರಥಮ ಪ್ರತಿಭಟನೆಯ ಧ್ವನಿಯಾಗಿತ್ತು. ಮಧುರಭಾವದ ಸುಂದರ ವಚನಕಾರ್ತಿಯಾಗಿದ್ದ ಅಕ್ಕನ ಬಹುತೇಕ ವಚನಗಳಲ್ಲಿ ಎದ್ದು ಕಾಣುವ ಮುಖ್ಯ ಅಂಶಗಳೆಂದರೆ, ಒಂದು, ತೀರ ಸರಳವಾದ ಹಾಗೂ ನೇರವಾದ ನಿಷ್ಠುರ ನುಡಿಗಳು. ಎರಡನೆಯದಾಗಿ, ಭಕ್ತಿ ಪೂರ್ಣವಾದ ಅನುಭಾವದ ಕಲ್ಪನೆಗಳು. ಆಧ್ಯಾತ್ಮ ಚಿಂತನೆಗೆ ಜೀವ–ಆತ್ಮಗಳ; ಕುಲ–ಮತಗಳ ಹಂಗಿಲ್ಲ ವೆಂಬುದನ್ನು ಸಾಧಿಸಿ ತೋರಿಸಿದ ಸಾಧ್ವಿ ಶಿರೋಮಣಿಯಾಕೆ. ಡಾ. ಎಂ. ಚಿದಾನಂದಮೂರ್ತಿಯವರು ಹೇಳಿರುವಂತೆ ಅಕ್ಕಮಹಾದೇವಿ ಎಂದು ಖ್ಯಾತಳಾಗಿರುವ ಮಹಾದೇವಿಯಕ್ಕ ವಚನ ಸಾಹಿತ್ಯಾಕಾಶದ ಉಜ್ವಲ ನಕ್ಷತ್ರ, ಶ್ರೇಷ್ಠ ಅನುಭಾವಿ; ತನ್ನ ಆದರ್ಶಕ್ಕಾಗಿ ಸಾಮಾಜಿಕ ವ್ಯವಸ್ಥೆ ಹಾಗೂ ರಾಜ–ಪ್ರಭುತ್ವಗಳೆರಡನ್ನೂ ಏಕಕಾಲಕ್ಕೆ ಧಿಕ್ಕರಿಸಿ ನಿಂತವಳು; ಜೀವನವನ್ನು ಹೋರಾಟದಲ್ಲಿ ಕಳೆದವಳು; ಹೆಣ್ಣುತನಕ್ಕೆ ಒಂದು ಗೌರವ ಭಾವನೆಯನ್ನು ತಂದುಕೊಟ್ಟು ಬಸವ ಅಲ್ಲಮ ಮೊದಲಾದವರಿಂದ ಸನ್ಮಾನಿತಳಾದವಳು. ಕನ್ನಡ ಸಾಹಿತ್ಯ ಅವಳಿಂದ ನಿಜವಾಗಿಯೂ ಶ್ರೀಮಂತವಾಯಿತು.[೧]

ಅಕ್ಕನ ಅನುಭಾವದ ಸಂಪತ್ತನ್ನು ಅರಿಯುವ ಮೊದಲು ಅನುಭಾವ ಎಂದರೇನೆಂಬುದನ್ನು ತಿಳಿಯುವುದು ಯುಕ್ತ. ಸಾಮಾನ್ಯ ಅರ್ಥದಲ್ಲಿ ಅನುಭಾವ ಎಂಬ ಮಾತನ್ನು ಅನುಭವ ಎಂದೇ ಪರಿಭಾವಿಸುವುದುಂಟು. ಆದರೆ ಇದು ಬರಿಯ ಅನುಭವವಲ್ಲ. ಒಂದು ರೀತಿಯ ಆತ್ಮಾನುಭೂತಿ; ಅಪರೋಕ್ಷಾನುಭಾವ. ಕನ್ನಡ ನಿಘಂಟು ಕಾರರು "ಅನುಭಾವವೆಂದರೆ ಭಗವಂತನನ್ನು ಸಾಕ್ಷಾತ್ಕಾರ ಮಾಡಿಕೊಳ್ಳುವುದು; ಪರಮಾತ್ಮ ನೊಡನೆ ನೇರವಾದ ಸಂಪರ್ಕ ಪಡೆದುಕೊಳ್ಳುವುದು"[೨] ಎಂಬುದಾಗಿ ಅರ್ಥೈಸಿದ್ದಾರೆ. ಮಹರ್ಷಿ ಅರವಿಂದರು ಅನುಭಾವವನ್ನು ಕುರಿತು, 'ಸೃಷ್ಟಿಗೆ ಮೂಲ ಕಾರಣವಾದ ಸತ್ಯದ ಸ್ವರೂಪವನ್ನು

ಪ್ರತ್ಯಕ್ಷವಾಗಿ ಕಾಣುವ, ಕೇಳುವ, ಸ್ಪರ್ಶಿಸುವ ಮತ್ತು ವಿವೇಚಿಸುವ ಶಕ್ತಿ' ಎಂದಿದ್ದಾರೆ.[೩]

'ಅನುಭಾವ' ಎಂಬ ಶಬ್ದದ ಅರ್ಥವನ್ನು ಪದಶಃ ಪರಿಶೀಲಿಸುವುದಾದರೆ, ಸಂಸ್ಕೃತದಲ್ಲಿ 'ಅನುಭೂ' ಎಂಬ ಪದವಿದೆ. ಇದಕ್ಕೆ ಅರಿಯುವುದು, ರುಚಿ ನೋಡುವುದು ಎಂಬ ಅರ್ಥಗಳಿವೆ. ಈ ಅನುಭೂ ಶಬ್ದದಿಂದ 'ಅನುಭವ' ಮತ್ತು 'ಅನುಭಾವ' ಎಂಬ ಪದಗಳು ಬಂದಿವೆ. ಈ ಹಿನ್ನೆಲೆಯಲ್ಲಿ 'ಅನು' ಎಂದರೆ ಅನುಸಾರಿಯಾದುದು, ನಂತರದ್ದು, ಇನ್ನೊಂದಕ್ಕೆ ಸಾದೃಶವಾದುದು. 'ಭವ' ಎಂದರೆ ಆಗುವಿಕೆ, ಇರುವಿಕೆ, ಹುಟ್ಟುವಿಕೆ, ಬಾಹ್ಯವಸ್ತು ಸಂಪರ್ಕಕ್ಕೆ ಅನುಸಾರಿಯಾಗಿ ನಮ್ಮಲ್ಲಿ ಉಂಟಾಗುವ ಅರಿವನ್ನು, ಗ್ರಹಿಕೆಯನ್ನು 'ಅನುಭಾವ' ಎಂದು ಹೇಳಲಾಗಿದೆ ಎಂಬುದಾಗಿ ಪ್ರೊ. ಸ.ಸ. ಮಾಳವಾಡ ಅವರು ತಮ್ಮ "ಅನುಭಾವ" ಎಂಬ ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ.[೪]

'ಅನುಭಾವ' ಎಂಬ ಪದಕ್ಕೆ ಸಂವಾದಿಯಾಗಿ ಆಂಗ್ಲಭಾಷೆಯಲ್ಲಿ 'ಮಿಸ್ಟಿಸಿಸಮ್' (Mysticism) ಎಂದು ಕರೆಯುತ್ತಾರೆ. ಇದು 'ನಿಕಟವಾಗಿರು' ಎಂಬ ಅರ್ಥವನ್ನು ಕೊಡುವ ಗ್ರೀಕ್ ಮೂಲ ಧಾತುವಿನಿಂದ ಬಂದಿರುವುದಂತೆ. ಪರಮಾತ್ಮನೊಂದಿಗೆ ನಿಕಟವಾಗಿರುವುದನ್ನು ತಿಳಿಸುವ ಇದಕ್ಕೆ ರಹಸ್ಯಜ್ಞಾನ, ಪವಿತ್ರಜ್ಞಾನವೆಂದೂ ಕರೆಯುವುದುಂಟು. ಪರಮಾತ್ಮನು ಪೂಜೆಗೊಳ್ಳುವ ಹೊರಗಿನ ವಸ್ತುವಾಗಿ ಉಳಿಯದೆ ನಿರಂತರವಾದ ಆಂತರಿಕ ಅನುಭಾವವಾಗುವಂತೆ ಸಾಗುವುದೇ ಇದರ ಗುರಿ. ಅತೀಂದ್ರಿಯ ಅನುಭವವನ್ನು ಪಡೆಯಬಲ್ಲ ಅಂತಃಸ್ಫುರಣೆ ಅನುಭಾವದಿಂದ ಸಾಧ್ಯವಾಗುತ್ತದೆ.[೫]

ಆಂಗ್ಲ ವಿಶ್ವಕೋಶ (Encylopaedia) Mysticism ಎಂದರೆ "It, (Mysticism) appears in connection with the endeavour of human mind to grasp the devine essence or the ultimate reality of things, and to enjoy the blessedness of actual communion with the highest. The first is the philosophic side of mysticism, the second its religious side. The first is theoretical or speculative, the second practical."[6] ಈ ಮೇಲಿನ ಮಾತುಗಳಲ್ಲಿ ಧಾರ್ಮಿಕ ಹಾಗೂ ತಾತ್ವಿಕ ಎರಡೂ ಬಗೆಯ ಪರಿಶೀಲನೆ ಕಂಡುಬರುತ್ತದೆ. ಆಡಿ. Dr. R.D. Ranade ಅವರು ತಮ್ಮ 'Mysticism in Maharastra' ಎಂಬ ಕೃತಿಯಲ್ಲಿ 'Mysticism denote the attitude of mind which involves a direct, immediate, first hand intuitive apprehension of god.'[7] ಎಂದಿದ್ದಾರೆ. ಈ ಮಾತುಗಳನ್ನು ಪರಿಶೀಲಿಸಿದಾಗ 'ಪರಮಾತ್ಮ', 'ಜೀವಾತ್ಮ' ಮತ್ತು ಇವುಗಳ ಸಂಬಂಧದಿಂದ ಉಂಟಾಗುವ 'ಅಮೃತತ್ವ' ಇವು ಮೂರೂ ಅನುಭಾವದ ಮೂಲ ತಳಹದಿಯಾಗಿರುವುದನ್ನು ನಾವು ಗುರುತಿಸಬಹುದು. ಇಲ್ಲಿ ಪರಮಾತ್ಮನೊಡನೆ ಸಮರಸಗೊಂಡು ಆತ್ಮೋನ್ನತಿಯನ್ನು ಪಡೆಯಬೇಕೆಂಬ ಜೀವಾತ್ಮನ ನಿರಂತರ ಬಯಕೆಯನ್ನು ಕೈಗೂಡಿಸುವ ಸಾಧನವೆ ಅನುಭಾವವೆನ್ನಿಸಿಕೊಳ್ಳುತ್ತದೆ. ಈ ದಿಸೆಯಲ್ಲಿ (ಅನುಭಾವವನ್ನು) "ಅಂತರಂಗದಲ್ಲಿರುವ ಶಕ್ತಿಗಳನ್ನು ಎಚ್ಚರಗೊಳಿಸಿ ಆ ಎಚ್ಚರದಿಂದ, ತೆರೆದ ಒಳಗಣ್ಣಿನಿಂದ ಸತ್ಯದ ಸ್ವರೂಪವನ್ನು ಪ್ರತ್ಯಕ್ಷವಾಗಿ ಸಾಕ್ಷಾತ್ಕರಿಸಿಕೊಳ್ಳುವುದನ್ನು ಅನುಭಾವ"ವೆಂದು, ಹೇಳಿರುವ ಡಾ. ಎಚ್. ತಿಪ್ಪೇರುದ್ರಸ್ವಾಮಿಯವರ ಮಾತು[೮] ಹೆಚ್ಚು ಅರ್ಥಪೂರ್ಣವಾಗಿದೆ. ಶರಣ ಸಾಹಿತ್ಯದ ಪರಿಕಲ್ಪನೆಯಲ್ಲಿ ಅನುಭಾವವನ್ನು

ಷಟ್‌ಸ್ಥಲ ಗಳಿಗೆ ಹೊಂದಿಸಲಾಗಿದೆ. ಇಲ್ಲಿ ಒಂದೊಂದು ಸ್ಥಲದಲ್ಲಿಯೂ ಸಾಧಕನಾದವನು ಒಂದೊಂದು ಭಕ್ತಿಯನ್ನು ಆಶ್ರಯಿಸುತ್ತಾನೆ. "ಭಕ್ತಿಸ್ಥಲದಲ್ಲಿ 'ಶ್ರದ್ಧಾಭಕ್ತಿ; ಮಹೇಶ ಸ್ಥಲದಲ್ಲಿ 'ನೈಷ್ಠಿಕಾಭಕ್ತಿ'; ಪ್ರಸಾದಿ ಸ್ಥಲದಲ್ಲಿ 'ಸಾವಧಾನಭಕ್ತಿ'–ಹೀಗೆ ಭಕ್ತಿಯು ವಿಕಾಸಗೊಳ್ಳುತ್ತಾ ಬಂದು, ಪ್ರಾಣಲಿಂಗಿ ಸ್ಥಲದಲ್ಲಿ 'ಅನುಭಾವಭಕ್ತಿ'ಯಾಗಿ ಪರಿಣಮಿಸುತ್ತದೆ. ಅಂದರೆ ಷಟ್‌ಸ್ಥಲದ ಆರಂಭದಿಂದ ಕೊನೆಯವರೆಗೂ ಭಕ್ತಿ ಅತ್ಯಾವಶ್ಯಕವಾಗಿದ್ದರೂ, ಸಾಧಕ ಬೆಳೆದಂತೆಲ್ಲಾ ಭಕ್ತಿಯ ಸ್ವರೂಪವೂ ವಿಕಾಸಗೊಳ್ಳುತ್ತಾ ಹೋಗುತ್ತದೆ. ಮುಂದೆ ಇದು ಶರಣ ಸ್ಥಲದಲ್ಲಿ 'ಆನಂದ ಭಕ್ತಿ'ಯಾಗಿ; ನಂತರ ಐಕ್ಯಸ್ಥಲದಲ್ಲಿ 'ಸಮರಸಭಕ್ತಿ'ಯಾಗಿ, ಲಿಂಗಾಂಗ ಸಾಮರಸ್ಯದಲ್ಲಿ ಕೊನೆಗೊಳ್ಳುತ್ತದೆ.

ಅನುಭಾವವನ್ನು ಕುರಿತು ಬಹುತೇಕ ವಚನಕಾರರು ತಮ್ಮ ವಚನಗಳಲ್ಲಿ ಪ್ರಸ್ತಾಪಿಸಿರುವುದನ್ನು ನಾವು ಪರಿಶೀಲಿಸಬಹುದು. ಮೊದಲಿಗೆ ಬಸವಣ್ಣನು ಅನುಭಾವವನ್ನು ಕುರಿತು,

> **"ಅನುಭಾವವಿಲ್ಲದ ಭಕ್ತಿ ಅನುವಿಂಗೆ ಬಾರದು;**
> **ಅನುಭಾವವಿಲ್ಲದ ಸಂಗ ಸಮರಸ ಸುಖವನೀಯದು;**
> **ಅನುಭಾವವಿಲ್ಲದ ಪ್ರಸಾದ ಪರಿಣಾಮ ಮಾಡದು ಕೂಡಲಸಂಗಮದೇವಾ?**
> **ನಿಮ್ಮ ಅನುಭಾವವ ಮಾತಿನ ಮಥನವೆನ್ನಬಹುದೆ?**

ಎಂದಿದ್ದಾನೆ.

ಶೂನ್ಯಸಿಂಹಾಸನಾಧೀಶ್ವರ ಅಲ್ಲಮಪ್ರಭು ಅನುಭಾವವನ್ನು ಕುರಿತಂತೆ,

> **"ಅನುಭಾವದಿಂದ ಹುಟ್ಟಿತ್ತು ಲಿಂಗ;**
> **ಅನುಭಾವದಿಂದ ಹುಟ್ಟಿತ್ತು ಜಂಗಮ;**
> **ಅನುಭಾವದಿಂದ ಹುಟ್ಟಿತ್ತು ಪ್ರಸಾದ;**
> **ಅನುಭಾವದಲ್ಲಿ ಗುಹೇಶ್ವರಲಿಂಗಮನುಪಮ ಸುಖ.**

ಎಂದು ಹೇಳಿದ್ದಾನೆ.

ಇದೇ ಧಾಟಿಯಲ್ಲಿ ಮುಂದುವರೆಯುವ ಮಹಾದೇವಿಯಕ್ಕನೂ ಕೂಡ ಅನುಭಾವವನ್ನು ಕುರಿತು,

> **"ಮರ ಮರ ಮಥನಿಸಿ ಕಿಚ್ಚು ಹುಟ್ಟಿ**
> **ಸುತ್ತಣ ತರುಮರಾದಿಗಳ ಸುಡಲಾಯಿತು;**
> **ಆತ್ಮವಾತ್ಮ ಮಥನಿಸಿ ಅನುಭಾವ ಹುಟ್ಟಿ**
> **ತನು ಗುಣಾದಿಗಳ ಸುಡಲಾಯಿತು;**
> **ಇದು ಕಾರಣ ನಿಮ್ಮ ಮಹಾನುಭಾವಿಗಳ**
> **ಅನುಭಾವವ ತೋರಿ ಎನ್ನನುಳುಹಿಕೊಳ್ಳಾ ಚೆನ್ನಮಲ್ಲಿಕಾರ್ಜುನಾ ಎಂದಿದ್ದಾಳೆ.**

ಕೊನೆಯದಾಗಿ ಅನುಭಾವನ್ನು ಕುರಿತಂತೆ ಸ್ವತಂತ್ರ ಸಿದ್ಧಲಿಂಗೇಶ್ವರನು

> **"ಅನುಭಾವ ನೆಲೆಗೊಂಡಲ್ಲದೆ ಅಂಗ ಲಿಂಗದ ಹೊಲಬನರಿಯಬಾರದು;**
> **ಅನುಭಾವ ನೆಲೆಗೊಂಡಲ್ಲದೆ ಭಕ್ತಿ ವಿರಕ್ತಿ ನೆಲೆಗೊಳ್ಳದು;**
> **ಅನುಭಾವ ನೆಲೆಗೊಂಡಲ್ಲದೆ ಜ್ಞಾನ ಸುಜ್ಞಾನದ ನೆಲೆಯ ಕಾಣಬಾರದು;**
> **ಅನುಭಾವ ನೆಲೆಗೊಂಡಲ್ಲದೆ ತಾನು ತಾನಾಗಬಾರದು;**

ಎಂದು ಹೇಳಿದ್ದಾನೆ.

ನಿಮ್ಮನುಭಾವದ ಅನುವಿನಲ್ಲಿಪ್ಪವರ ನೀವೆಂದೇ ಕಾಂಬೆನು."[೪] ಎಂದು ಘೋಷಿಸಿದ್ದಾನೆ. ಹೀಗೆ ಅನುಭಾವದ ಹಿರಿಮೆಯನ್ನು ಕುರಿತು ಅನೇಕ ಶರಣರು ತಮ್ಮ ವಚನಗಳಲ್ಲಿ ಹಾಡಿದ್ದಾರೆ. ಈ ಹಿನ್ನೆಲೆಯಲ್ಲಿ 'ಅನುಭಾವ' ಎಂಬ ಶಬ್ದವನ್ನು 'ಶರಣರು ಆಧ್ಯಾತ್ಮ ಪ್ರಪಂಚಕ್ಕೆ ಕೊಟ್ಟ ಕಾಣಿಕೆ' ಎಂಬ ಡಾ. ಎಚ್.ತಿಪ್ಪೇರುದ್ರಸ್ವಾಮಿಯವರ ಮಾತು[೫] ಒಪ್ಪತಕ್ಕದ್ದೇ ಸರಿ. ಒಟ್ಟಾರೆ ಶರಣರ ಪರಿಕಲ್ಪನೆಗಳಲ್ಲಿ ಪರಿಭಾವಿಸುವುದಾದರೆ, ಅನುಭಾವವೆಂಬುದು ತಮ್ಮ ಅರಿವಿನಿಂದ ಮತ್ತು ಅದರ ಆಚರಣೆಯಿಂದ ಪಡೆದ ವಿಶೇಷ ಅನುಭವವನ್ನು ನಿರ್ದೇಶಿಸುವಂತಹದು. ಮೇಲಾಗಿ ಅದೊಂದು ಬಗೆಯ 'ಶಿವಾನುಭಾವ'.

ಅಕ್ಕಮಹಾದೇವಿಯ ಬಗೆಗೆ ನಮಗೆ ಲಭ್ಯವಿರುವ ಸಾಹಿತ್ಯಕ ಹಾಗೂ ಚಾರಿತ್ರಿಕ ಆಧಾರಗಳ ಮೂಲಕ ತರ್ಕಿಸಿದಾಗ, ಆಕೆ ಏರುಂಜವ್ವನೆಯಾಗಿದ್ದಾಗಲೇ ಸಂಘರ್ಷಾತ್ಮಕ ಬಾಳ್ವೆಯನ್ನು ನಡೆಸಬೇಕಾದದ್ದು ಅನಿವಾರ್ಯವಾಗಿತ್ತು. ಹದಿಹರೆಯದ ಹೊಸ್ತಿಲಲ್ಲಿ ಇರುವಾಗಲೇ ಆಕೆ ಆಧ್ಯಾತ್ಮ ಕ್ಷೇತ್ರದ ಅನುಭಾವಿಯಾಗಿದ್ದವಳು. ಕಠೋರ ಬದುಕಿನ ನಡುವೆಯೂ ಒಂದೆಡೆ ಪ್ರಭುತ್ವವನ್ನೇ ಧಿಕ್ಕರಿಸಿದ್ದರೆ; ಮತ್ತೊಂದೆಡೆ ಹೆಣ್ತನಕ್ಕೆ ಸವಾಲಾಗಿದ್ದ ಸ್ತ್ರೀ ಮಿತಿಗಳಿಗೆ ತಿಲಾಂಜಲಿಯನ್ನು ಇತ್ತವಳು. ಭಕ್ತಿ ಹಾಗೂ ವೈರಾಗ್ಯದ ಛಲತೊಟ್ಟು ಶ್ರೀಗಿರಿಯ ಸೋಪಾನವನ್ನು ಏರಿದವಳು. ಹೀಗಾಗಿ ಅವಳ ಜೀವನ ಹಾಗೂ ಸಾಧನೆ ಹೆಣ್ಣಿನ ಇಹಪರಗಳೆರಡರ ಸಾಧನೆಯ ಒಂದು ಮಹಾ ಪ್ರಕರಣವೇ ಸರಿ. ಡಾ. ಸಿದ್ಧಯ್ಯ ಪುರಾಣಿಕ ಅವರು ಹೇಳಿರುವಂತೆ, "ಪರಮಾತ್ಮನನ್ನು ಕಾಣುವ ಕಾತುರದಲ್ಲಿ ಕರಗಿ ಹೋದವರನೇಕ; ಕಂಡ ಕೆಲವರಲ್ಲಿ ತಾವು ಕಂಡ ದಿವ್ಯದರ್ಶನವನ್ನು ಬಣ್ಣಿಸಿ ಹೋದವರು ಎಲ್ಲೋ ಅಪರೂಪ. ಅಂತಹ ಅತಿ ವಿರಳ ಅನುಭಾವಿಗಳಲ್ಲಿ ಅಕ್ಕಮಹಾದೇವಿಯೂ ಒಬ್ಬಳು.[೬] ಹೀಗೆ ಮಲ್ಲಿಕಾರ್ಜುನನನ್ನು ಕಂಡು ಎನ್ನ ಕಂಗಳ ಬರ ಹಿಂಗಿತ್ತು ಎಂಬ ಅಕ್ಕನ ಅನುಭಾವ ದಿಂಗಿತವನ್ನು ಅವಳ ಜೀವನದುದ್ದಕ್ಕೂ ಅವಳದೇ ಅಭಿವ್ಯಕ್ತಿಯ ವಚನಗಳಲ್ಲಿ ನಾವು ಕಾಣಬಹುದು. ಡಾ. ಬಸವರಾಜ ಕಲ್ಗುಡಿಯವರು ಹೇಳಿರುವಂತೆ, "ಅಕ್ಕನ ವಚನಗಳ ದಾಟಿ ಹೆಚ್ಚು ಅಂತರ್ಮುಖವೆನಿಸುವಂಥದ್ದು. ಅಂತರ್ಮುಖದ ಧ್ವನಿಗಳೇ ಅನುಭಾವದ ಆಶಯಗಳನ್ನು ಹೆಚ್ಚು ಪ್ರಖರವಾಗಿ ಎತ್ತಿ ತೋರಿಸುತ್ತವೆ."[೧೧]

ಅಕ್ಕನ ಬದುಕಿನ ರೂಪುರೇಷೆಗಳನ್ನು ಹೇಳುವಾಗ ಡಾ. ಎಂ. ಚಿದಾನಂದಮೂರ್ತಿಯವರು ಅವಳ ಬದುಕನ್ನು ನಾಲ್ಕು ಘಟ್ಟಗಳಲ್ಲಿ ಗುರುತಿಸಿದ್ದಾರೆ. ಹುಟ್ಟಿನಿಂದ ತಾರುಣ್ಯದವರೆಗೆ ಅವಳು ಸುಂದರ ಕನಸುಗಳನ್ನು ಕಾಣುತ್ತಾ ಹಕ್ಕಿಯಂತೆ ಬದುಕಿದ ಕಾಲ–ಇದು ಮೊದಲನೆಯ ಘಟ್ಟ; ಬಲವಂತದ ಮದುವೆಗೆ ಒಳಗಾಗಿ ಕೆಲಕಾಲ ತನಗೆ ಒಲ್ಲದ ಗಂಡನೊಡನೆ ಬಾಳುವೆಯನ್ನು ಮಾಡಿದ ಕಾಲ ಇದು ಎರಡನೆಯ ಘಟ್ಟ; ಕೈಹಿಡಿದ ಗಂಡನ ಮನೆಯಿಂದ ಹೊರಬಂದರೂ ಏಕಾಂಗಿಯಾಗಿ ಅಲೆದಾಡುತ್ತ, ದುಷ್ಟರ, ಕಾಮುಕರ ಕ್ರೂರ ಕಣ್ಣಿಗೆ ಒಳಗಾಗಿ ವೇದನೆಗೆ ಒಳಗಾದ ಕಾಲ ಇದು ಮೂರನೆಯ ಘಟ್ಟ; ಕಲ್ಯಾಣದಲ್ಲಿ ಬಸವ ಅಲ್ಲಮರಂತಹ ಭಕ್ತರಿಂದ ಸಾಂತ್ವನ ಸಮಾಧಾನ ಪಡೆದು, ಮನಸ್ಸಿನ ಬೇಗುದಿಯನ್ನು ಕಳೆದುಕೊಂಡು, ಬಳಿಕ ಶ್ರೀಶೈಲಕ್ಕೆ ಬಂದು ತನ್ನ ಕೊನೆಯ ದಿನಗಳನ್ನು ಚೆನ್ನಮಲ್ಲಿಕಾರ್ಜುನನ ಸಾನ್ನಿಧ್ಯದಲ್ಲಿ ಕಳೆದುದು ನಾಲ್ಕನೆಯ ಘಟ್ಟ.[೧೨] ಪ್ರಸ್ತುತ ಈ ನಾಲ್ಕೂ ಘಟ್ಟಗಳಲ್ಲೂ ಅಕ್ಕನ ಅನುಭಾವದ ವ್ಯವಹಾರವನ್ನು ಸೂಕ್ಷ್ಮವಾಗಿ ಪರಿಶೀಲಿಸುವುದೇ ಇಲ್ಲಿನ ಉದ್ದೇಶ.

ತಾರುಣ್ಯಾವಸ್ಥೆಗೆ ಕಾಲಿಡುವ ಪೂರ್ವದಿಂದಲೇ ಅಕ್ಕನಿಗೆ ಅನುಭಾವದ ನೆಲೆಯ ಸುಂದರ ಕನಸುಗಳು ಗರಿಗಟ್ಟಿದ್ದುವು. ಅವಳ ವಚನಗಳಲ್ಲಿ ಭಾವತೀವ್ರತೆಯ ಜೊತೆಗೆ ನಿಷ್ಕಾಮ ಪ್ರೇಮ ನೆಲೆಯೂರಿದ್ದುದನ್ನು ನಾವು ಗುರುತಿಸಬಹುದು.

"ಅಕ್ಕ ಕೇಳವ್ವ ಅಕ್ಕಯ್ಯ, ನಾನೊಂದು ಕನಸ ಕಂಡೆ.
ಅಕ್ಕಿಯಡಕೆ, ಓಲೆ ತೆಂಗಿನಕಾಯ ಕಂಡೆ!
ಚಿಕ್ಕ ಚಿಕ್ಕ ಜಡೆಗಳ ಸುಲಿಪಲ್ಲ ಗೊರವನು
ಭಿಕ್ಷಕ್ಕೆ ಮನೆಗೆ ಬಂದುದ ಕಂಡೆ!
ಮಿಕ್ಕು ಮೀರಿ ಹೋಹನ ಬೆಂಬತ್ತಿ ಕೈವಿಡಿದೆನು.
ಚೆನ್ನಮಲ್ಲಿಕಾರ್ಜುನಯ್ಯನ ಕಂಡು ಕಣ್ತೆರೆದೆನು.

ಇಲ್ಲಿ ಅವಳ ಸುಂದರ ಕನಸಿನ ಕಲ್ಪನಾಲೋಕದ ಜೊತೆಗೆ, ಆಧ್ಯಾತ್ಮಿಕ ವ್ಯವಹಾರದ ಭಾವಪೂರ್ಣ ಅನುಸಂಧಾನದ ತಂಗಾಳಿ ಬೀಸಲಾರಂಭಿಸಿದೆ. ಈ ವೇಳೆಗಾಗಲೆ ಅವಳು ತನ್ನ ಕಾರಣ ತನುವನ್ನು ಮನೋಮಯ ಜಗತ್ತಿನ ಅಜ್ಞಾನ ಒಡೆಯನೊಂದಿಗೆ ಸಮೀಕರಿಸುವ ಹಂತದಲ್ಲಿದ್ದಳು. ಹೀಗೆ ಮುಂದುವರೆಯುವ ಅಕ್ಕನ ಅನುಭಾವದ ಕನಸುಗಳು ಮುಂದೆ ಮತ್ತಷ್ಟು ದೃಢಗೊಳ್ಳುತ್ತಾ ಸಾಗುತ್ತವೆ.

"ಹೊಳೆವ ಕೆಂಜಡೆಗಳ, ಮಣಿಮಕುಟ ಸುಲಿಪಲ್ಲ,
ನಗೆಮೊಗದ ಕಂಗಳ ಕಾಂತಿಯಿಂ; ಈರೇಳು ಭುವನಮಂ ಬೆಳಗುವ,
ದಿವ್ಯ ಸ್ವರೂಪನ ಕಂಡೆ ನಾನು, ಕಂಡೆನ್ನ ಕಂಗಳ ಬರ ಹಿಂಗಿತ್ತೆಂದು
ಗಂಡ ಗಂಡರೆಲ್ಲ ಹೆಂಡ ಹೆಂಡಿರಾಗಿ ಆಳುವ ಗರುವನ ಕಂಡೆ ನಾನು
ಜಗದಾದಿ ಶಕ್ತಿಯೊಳು ಬೆರಸಿ ಒಡನಾಡುವ ಪರಮಗುರು
ಚೆನ್ನಮಲ್ಲಿಕಾರ್ಜುನನ ನಿಲವ ಕಂಡು ಬದುಕಿದೆನು".

ಅವಳ ಕಲ್ಪನಾ ಲೋಕದಲ್ಲಿ ರೂಪುಗೊಳ್ಳುವ ಆ ದಿವ್ಯ ಸ್ವರೂಪವನ್ನು ಕಂಡಾಗ ಆಕೆಯ ಕಂಗಳ ಬರ ಹಿಂಗಿತ್ತಂತೆ. ಆ ಮಹಾಮೂರ್ತಿಯ ಮೇಲೆ ಅವಳಿಗೆ ಎಲ್ಲಿಲ್ಲದ ಭಕ್ತಿ ಗೌರವ. ಹೀಗೆ ಸಹಜ ಬದುಕಿನ ಆಚೆಗೂ ಇರುವ, ಅಜ್ಞಾನ ನೆಲೆಗಳಲ್ಲಿ ತಾನು ಅನುಭವಿಸಿದ ಸುಂದರ ರಸನಿಮಿಷಗಳನ್ನು ತನ್ನ ವಚನಗಳ ಮೂಲಕ ಅಭಿವ್ಯಕ್ತಿಸಿದ್ದಾಳೆ. ಇಂತಹ ಪರಿಕಲ್ಪನಾ ಪ್ರಪಂಚದಲ್ಲಿ ಅವಳ ಭಾವನೆಗಳು ಮತ್ತಷ್ಟು ಗಟ್ಟಿಗೊಳ್ಳುತ್ತಾ ಮುಂದುವರೆಯುತ್ತವೆ.

"ಎನ್ನ ಮನವ ಮಾರುಗೊಂಡನವ್ವ,
ಎನ್ನ ತನುವ ಸೂರೆಗೊಂಡನವ್ವ,
ಎನ್ನ ಸುಖವನಪ್ಪುಗೊಂಡನವ್ವ,
ಎನ್ನಿ ರವನಿಂಬುಗೊಂಡನವ್ವ,
ಚೆನ್ನಮಲ್ಲಿಕಾರ್ಜುನನ ಒಲುಮೆಯವಳಾನು".

ಇಂತಹ ಮಾತುಗಳನ್ನು ಗಮನಿಸಿದಾಗ ಅಕ್ಕನ ಅನುಭಾವ ತೀವ್ರತೆ ದಿನೇ ದಿನೇ ಮರವ ನಪ್ಪುವ ಬಳ್ಳಿಯಂತೆ ವ್ಯಾಪಿಸುವುದನ್ನು ನಾವು ಕಾಣಬಹುದು. ಈ ಹಂತದಲ್ಲಿ ಜೀವಾತ್ಮ-ಪರಮಾತ್ಮರ ಅನುಸಂಧಾನದ ಪ್ರಾಥಮಿಕ ನೆಲೆಗಳು ಗುರುತಿಸಲ್ಪಡುತ್ತವೆ. ಇಂಥವೇ

ನೆಲೆಗಳನ್ನು ಗುರುತಿಸಲ್ಪಡುವ ಇನ್ನೊಂದು ವಚನ ದೃಷ್ಟಾಂತವನ್ನು ನೋಡುವುದರ ಮೂಲಕ ಮೊದಲನೆಯ ಘಟ್ಟದ ಪರಾಮರ್ಶೆಯನ್ನು ಮುಕ್ತಾಯಗೊಳಿಸಬಹುದು.

"ಕಾಣುತ್ತ ಕಾಣುತ್ತ ಕಂಗಳ ಮುಚ್ಚಿದೆ ನೋಡವ್ವ;
ಕೇಳುತ್ತ ಕೇಳುತ್ತ ಮೈಮರೆದೊರಗಿದೆ ನೋಡವ್ವ;
ಹಾಸಿದ ಹಾಸಿಗೆಯ ಹಂಗಿಲ್ಲದೆ ಹೋಯಿತ್ತು ಕೇಳವ್ವ;
ಚೆನ್ನಮಲ್ಲಿಕಾರ್ಜುನದೇವನು ಕೂಡುವ ಕೂಟದ ಪರಿಯ
ನಾನೇನೆಂದರಿಯದೆ ಮರೆದೆ ಕಾಣವ್ವ."

ಹೀಗೆ ವಯೋಧರ್ಮಕ್ಕೆ ಅನುಗುಣವಾಗಿ ಸುಂದರ ಕನಸುಗಳನ್ನು ಕಾಣುವುದು ಸಹಜ. ಅದರೆ ತನ್ನ ಕಲ್ಪನಾಲೋಕದ ಅಸಹಜ ನೆಲೆಯಲ್ಲಿ ನಿಂತು ಅನುಭಾವದ ತೀವ್ರತೆಯನ್ನು ಸವಿದು, ಆ ಅನುಭವವನ್ನು ಅರಿತೂ ಅರಿಯದಂತೆ ಸುಖಿಸುವ ಅವಳ ಭ್ರಾಮಕ ನೆಲೆಯ ಜಗತ್ತು, ಆಕೆಯ ಆಧ್ಯಾತ್ಮ ಸಾಧನೆಯ ಸೋಪಾನವೆನ್ನಬಹುದು. ಇದು ಅಕ್ಕನ ವಯಸ್ಸಿಗೆ ಮೀರಿದ ಶಿವ ಸಾಕ್ಷಾತ್ಕಾರದ ಮೊದಲನೆಯ ಘಟ್ಟವೂ ಹೌದು.

ಎರಡನೆಯ ಘಟ್ಟದಲ್ಲಿ ಅಕ್ಕ ಕೌಶಿಕನ ಅರಮನೆಯಲ್ಲಿ ಬಂಧಿಯಾಗಿದ್ದ ಸಂದರ್ಭದಲ್ಲಿ ಮೂಡಿ ಬಂದಿರಬಹುದಾದ ಕೆಲವು ಅನುಭಾವದ ನೆಲೆಗಳನ್ನು ವಿವೇಚಿಸಬಹುದು. ಆಕೆಯ ಜೀವನದಲ್ಲಿ ಇದೊಂದು ಒತ್ತಡದ ಸಂದರ್ಭ. ತನ್ನ ಹೆಣ್ತನದ ಪೂರ್ಣ ಸ್ವಾತಂತ್ರ್ಯಕ್ಕೆ ಇಲ್ಲಿ ಅವಕಾಶವಿರಲಿಲ್ಲ. ಅವಳ ದೈವಿಕ ಹಾಗೂ ಮಾನಸಿಕ ವೇದನೆಗಳು ಅವಳದೇ ವಚನಗಳಲ್ಲಿ ಹೀಗೆ ನಿವೇದನೆಗೊಳ್ಳುತ್ತವೆ:

"ಸಾವಿಲ್ಲದ ಕೇಡಿಲ್ಲದ ಚೆಲುವಂಗಾನೊಲಿದೆನವ್ವ!
ಎಡೆಯಿಲ್ಲದ ಕಡೆಯಿಲ್ಲದ, ತೆರಹಿಲ್ಲದ ಕುರುಹಿಲ್ಲದ
ಚೆಲುವಂಗಾನೊಲಿದೆನವ್ವ!
ಭವವಿಲ್ಲದ ಭಯವಿಲ್ಲದ ನಿಸ್ಸೀಮ ಚೆಲುವಂಗಾನೊಲಿದೆ
ಇದು ಕಾರಣ ಚೆನ್ನಮಲ್ಲಿಕಾರ್ಜುನ ಗಂಡನೆನಗೆ
ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕು ತಾಯೆ".

ಇಲ್ಲಿ ಬಹಿರಂಗವಾಗಿಯೇ ಕೌಶಿಕನನ್ನು ನಿರಾಕರಿಸುವ ಅಕ್ಕ ಅಂತರಂಗದಲ್ಲಿ ಈಗಾಗಲೇ ನಿಸ್ಸೀಮ ಚೆಲುವನನ್ನು ಮನಸಾರೆ ವರಿಸಿದ್ದಾಳೆ. ಅವಳ ಈ ಅನುಬಂಧ ನಿಷ್ಕಾಮ ಜಗತ್ತಿನ ಮನೋಮಯ ವ್ಯವಹಾರದ್ದು. ಯಾವ ಸಿರಿ, ಸಂಪದಗಳೂ ಅವಳಿಗೆ ತೃಣ ಸಮಾನ. ಲೋಕದ ಗಂಡರೆಲ್ಲ ಅವಳ ದೃಷ್ಟಿಯಲ್ಲಿ ನಶ್ವರರು. ಅಸದೃಶ ವ್ಯಕ್ತಿತ್ವವುಳ್ಳ, ಆಕಾರಾತೀತವಾದ, ಆಗೋಚರ ಸಾಮ್ರಾಜ್ಯದ ನಿಸ್ಸೀಮ ಚೆಲುವನೊಂದಿಗೆ ಇವಳ ಮನ ವಿಹರಿಸುತ್ತದೆ. ತಾರುಣ್ಯಪೂರ್ವದ ಸುಂದರ ಕನಸುಗಳಿಗೆ ಈಗ ಮತ್ತಷ್ಟು ಗರಿ ಮೂಡಿದಂತಾಗಿದೆ. ತನ್ನ ಅಂತರಂಗದ ವ್ಯವಹಾರದಲ್ಲಿ ಪ್ರಗತಿಯ ಹಂತವನ್ನು ಏರತೊಡಗಿದ್ದಾಳೆ. ಇಂತಹ ನಿಷ್ಕಾಮಿ, ಅನುಭಾವಿ ಅಕ್ಕನನ್ನು ಕೌಶಿಕ ಅರ್ಥಮಾಡಿಕೊಳ್ಳುವುದಿರಲಿ, ಕಾಡದೆ ಬಿಟ್ಟಿರಲಿಕ್ಕಿಲ್ಲ! ಅಕ್ಕ ತಾನು ಇಂತಹ ಪರಿಸ್ಥಿತಿಯ ಒತ್ತಡಗಳಿಂದ ನುಡಿದ ಅನುಭವದ ಮಾತುಗಳು. ಅನುಭಾವದ ನೆಲೆಯ ಒಳಗೇ ಇರುವುದನ್ನು ಗಮನಿಸಬಹುದು.

"ಅಂಗದ ಭಂಗವ ಲಿಂಗ ಸುಖದಿಂದ ಗೆಲಿದೆ,
ಮನದ ಭಂಗವ ಅರುಹಿನ ಮುಖದಿಂದ ಗೆಲಿದೆ,
ಜೀವದ ಭಂಗವ ಶಿವಾನುಭಾವದಿಂದ ಗೆಲಿದೆ,
ಕರಣದ ಕತ್ತಲೆಯ ಬೆಳಗನುಟ್ಟು ಗೆಲಿದೆ,
ಜವ್ವನದ ಹೊರಮಿಂಚಿನಲ್ಲಿ ನಿಮ್ಮ ಕಣ್ಣಿಂಗೆ ತೋರುವ
ಕಾಮನ ಸುಟ್ಟುರುಹಿದ ಭಸ್ಮವ ನೋಡಯ್ಯಾ!
ಚೆನ್ನಮಲ್ಲಿಕಾರ್ಜುನ ಕಾಮನ ಕೊಂದು ಮನಸಿಜನಾಗುಳುಹಿದರೆ
ಮನಸಿಜನ ತಲೆಯ ಬರಹವ ತೊಡೆದೆನು."

ಈ ವಚನದ ಮಾತುಗಳು ಅವಳ ಅಂತರಂಗದ ಸಂಘರ್ಷದಿಂದ ಹೊರ ಬಂದಂತಹವು. ಮಹಾತ್ಮರೂ ಅನುಭಾವಿಗಳೂ ಆಗಿದ್ದವರಿಂದ ಮಾತ್ರ ಇಂತಹ ಸಂದಿಗ್ಧ ಗಳಲ್ಲೂ ಉತ್ತಮ ನಡೆಯನ್ನೂ ಶ್ರೇಷ್ಠವಾದುದನ್ನೂ ನಿರೀಕ್ಷಿಸಲು ಸಾಧ್ಯ. ಏಕೆಂದರೆ ಅಕ್ಕ ಮನಸಿಜನ ಮಾಯೆಗೆ ಒಲಿಯುವವಳಾಗಿದ್ದರೆ ಕೌಶಿಕನ ಅಂತಃಪುರದಲ್ಲಿ ಯಾವ ರೀತಿಯ ಕೊರತೆಗಳೂ ಇರಲಿಲ್ಲ. ಅಲ್ಲಿಯೂ ಕೂಡ ಅಕೆ ತನ್ನ ತನುಮನಗಳ ಮೇಲಾದ ಮನಸಿಜನ ಮಾಯಾಜಾಲವನ್ನು ಮೀರಿ ನಿಲ್ಲುವ ಅಂತರಂಗದ ಆವಿಷ್ಕಾರವನ್ನು ಸಾಧಿಸಿ ತೋರುತ್ತಾಳೆ. ತನಗೊದಗಿದ್ದ ಈ ಭವಪಾಶ ಗಳನ್ನು ದಾಟುವ, ಅವಳ ಅಂತರ್ವಾಣಿಯ ನಿಲುವು ಪುರುಷಾರ್ಥದಿಂದ ಹೊರತಾದ, ಪಾರಮಾರ್ಥಿಕ ಚಿಂತನೆಯ ಯಶಸ್ಸಿನ ಮೆಟ್ಟಿಲುಗಳಾಗಿವೆ. ಬದುಕಿನ ಅತ್ಯಂತ ಕ್ಲಿಷ್ಟ ಸಂದರ್ಭ ಗಳಲ್ಲೂ ತನ್ನ ವೈರಾಗ್ಯ ಸಂಪನ್ನತೆಯನ್ನು ಮೆರೆದು, ಭಕ್ತಿಯನ್ನು ಇಮ್ಮಡಿಗೊಳಿಸಿಕೊಂಡ ಅಕ್ಕನ ಜೀವನ ನಿಜವಾಗಿಯೂ ಅನುಭಾವದ ಮಹಾನ್ ಚೇತನ.

'ಹರನೇ ಗಂಡನಾಗಬೇಕೆಂದು ಅನಂತಕಾಲ ತಪಸಿದ್ದೆ ನೋಡಾ' ಎಂದು ಹೇಳುವಷ್ಟಕ್ಕೆ ಹರನಿಗೇ ತನ್ನನ್ನು ನಿಜ ಸತಿಯನ್ನಾಗಿ ಸಾಕಾರಪಡಿಸಿಕೊಂಡಿದ್ದಾಳೆ. ಈ ವೇಳೆಗಾಗಲೆ ಅವಳು ದೇಹಭಾವವನ್ನು ಸಂಪೂರ್ಣವಾಗಿ ಅಳಿದು ಮೋಹದಿಂದ ಮುಕ್ತಳಾಗಿ, ಪರಮನೊಳಗೆ ಅನುಸಂಧಾನಗೊಳ್ಳುವ ಔನ್ನತ್ಯದ ಶಿಖರವನ್ನು ಏರತೊಡಗಿದ್ದಾಳೆ. ಈಗ ಅವಳಿಗೆ ಕಾಯ, ಮಾಯೆಗಳ ಹಂಗಿಲ್ಲ. ಲೋಕದ ಸಹಜ ವ್ಯಾಪಾರದ ಆಚೆಗಿನ ವ್ಯವಹಾರದಲ್ಲೇ ಅವಳ ಸಂವಾದವೇನಿದ್ದರೂ, ಇಂತಾದವರಿಗೆ ಅರಮನೆಯೇನು? ಅಡವಿಯೇನು?

"ಮಂಗಳವೇ ಮಜ್ಜನವೆನಗೆ,
ವಿಭೂತಿಯೇ ಒಳಗುಂದದರಿಸಿನವೆನಗೆ,
ದಿಗಂಬರವೇ ದಿವ್ಯಾಂಬರವೆನಗೆ,
ದಿಗಂಬರವೇ ದಿವ್ಯಾಂಬರವೆನಗೆ,
ಶಿವಪಾದ ರೇಣುವೇ ಅನುಲೇಪನವೆನಗೆ,
ರುದ್ರಾಕ್ಷಿಯೇ ಮೈದೊಡಿಗೆಯೆನಗೆ,
ಶರಣರ ಶ್ರೀಪಾದಗಳೇ ತೊಂಡಿಲವೆನಗೆ,
ಚೆನ್ನಮಲ್ಲಿಕಾರ್ಜುನನೇ ಗಂಡನೆನಗೆ,
ಆನು ಚೆನ್ನಮಲ್ಲಿಕಾರ್ಜುನಂಗೆ ಮದುವಳಿಗೆ;
ಎನಗೆ ಬೇರೆ ಶೃಂಗಾರವೇಕೆ ಹೇಳವ್ವ!"

ಈ ಪರಿಯ ಶಿವಸಾಕ್ಷಾತ್ಕಾರದ ಅನುಭಾವ ಸಾಧಕಿ ಅಕ್ಕನೊಂದಿಗೆ, ಹೇಗೆ ತಾನೆ ಆ ಕೌಶಿಕ ಅನುರಕ್ತಿ ಪಡೆದಾನು. ಅವಳ ಸಮಗ್ರ ವ್ಯಕ್ತಿತ್ವ ಸಂಪೂರ್ಣ ಶಿವಾನುಭೂತಿಯನ್ನು ಪಡೆದಾಗಿದೆ. ಪ್ರಮುಖವಾಗಿ ಇಲ್ಲಿ ಅಕ್ಕನ ಭಕ್ತಿಮಾರ್ಗ ಹಾಗೂ ಜ್ಞಾನಮಾರ್ಗ ಇವೆರಡೂ ಅವಳನ್ನು ಅನುಭಾವಿಯ ಹಂತಕ್ಕೆ ಕೊಂಡೊಯ್ದಿದೆ. ಇಷ್ಟಾದರೂ ಕೂಡ ಅಕ್ಕನಿಗೆ ಕೌಶಿಕನ ಅರಮನೆಯಲ್ಲಿ ಇರುವವರೆಗೂ ಅವನಿಂದ ಉಪಟಳ ತಪ್ಪಿರಲಿಲ್ಲ. ವೈರಾಗ್ಯನಿಧಿ ಅಕ್ಕನ ಎಲ್ಲ ವ್ರತಗಳಿಗೂ ಆತ ಭಂಗ ತಾರದಿರಲಿಲ್ಲ. ಬಿರುಗಾಳಿಗೊಡ್ಡಿದ ಸೊಡರಿನಂತೆ ಅಕ್ಕ, ಕಡುಕಷ್ಟಗಳ ನಡುವೆಯೂ ಪರಮಾರ್ಥವನ್ನು ಸಾಧಿಸಿದ್ದಳು.

"ಕೈಸಿರಿಯ ದಂಡವ ಕೊಳಬಹುದಲ್ಲದೆ,. ಮೈಸಿರಿಯ ದಂಡವ ಕೊಳಲುಂಟೆ?
ಉಟ್ಟಂತ ಉಡುಗೆ ತೊಡುಗೆಯನೆಲ್ಲ ಸೆಳೆದುಕೊಳಬಹುದಲ್ಲದೆ
ಮುಚ್ಚಿ ಮುಸುಕಿರ್ದ ನಿರ್ವಾಣವ ಸೆಳೆದುಕೊಳ್ಳಬಹುದೆ?
ಚೆನ್ನಮಲ್ಲಿಕಾರ್ಜುನದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ
ಉಡುಗೆ ತೊಡುಗೆಯ ಹಂಗೇಕೋ ಮರುಳೆ."

ಆಚಾರ ಸಂಪನ್ನೆ ಅಕ್ಕನ ಬಾಯಿಂದ ಇಂತಹ ಮಾತುಗಳು ಬರಬೇಕಾದರೆ ಆಕೆ ಎಂತಹ ಪರಿಸ್ಥಿತಿಯ ಒತ್ತಡವನ್ನು ಅನುಭವಿಸಿರಬೇಕು. ಮಾನಸಿಕವಾಗಿ ನೊಂದು ಬೆಂದ ಅವಳ ಅಂತರಾತ್ಮ ಅನುಭಾವ ಪಾಕದ ಕೊಡನಾಗಿ ಪರಿವರ್ತನೆಗೊಂಡಂತಿದೆ. ಇಂತಹ ಅನುಭಾವದ ಅಮೃತತ್ವ, ದೂಷಣೆಗಿಳಿಯದೆ, ಪರಿವರ್ತನೆಗೆ ತಕ್ಕ ಉಪದೇಶಾಮೃತವಾಗಿ ಪರಿಣಮಿಸಿದೆ. ಚಿಪ್ಪಿನ ಒಳಗಣ ಕಾಂತಿಮಣಿಯಂತೆ ಅವಳ ಒಂದೊಂದು ಆಣಿಮುತ್ತುಗಳೂ ಅನುಭಾವದ ನೆಲೆಯಿಂದ ಹೊರಹೊಮ್ಮಿದ ಸ್ಪರ್ಶಮಣಿಯಂತಿವೆ.

ಮೂರನೆಯ ಘಟ್ಟದಲ್ಲಿ ಅಕ್ಕ ಲೋಕದ ಮೊನಚು ನುಡಿಗಳಿಗೆ ಮನನೊಂದು, ಮನ ಅನುಭವಿಸಿದ ಮಾನಸಿಕ ಯಾತನೆಗಳಿಗನುಗುಣವಾಗಿ ಸ್ಪಂದಿಸಿದ ಭಾವನಾತ್ಮಕ ನೆಲೆಗಳನ್ನು ಪರಿಶೀಲಿಸಬಹುದು. ತಾರುಣ್ಯದ ಉತ್ತುಂಗದಲ್ಲಿದ್ದ ಆಕೆ, ಕೌಶಿಕನ ಸೆರೆಯನ್ನು ಹರಿದು ಕೌಟುಂಬಿಕ ನೆಲೆಯನ್ನೇ ಮೀರಿ ನಿಲ್ಲುತ್ತಾಳೆ. ಅರಮನೆಯಿಂದ ಹೊರಬಂದರೇನು? ಲೌಕಿಕರ ವಕ್ರದೃಷ್ಟಿ ಇವಳನ್ನು ಬೆಂಬಿಡದೆ ಕಾಡತೊಡಗಿತು. ಬೋಗುಣಿಯಿಂದ ಬೆಂಕಿಗೆ ಹಾರಿದಂತಹ ಕರುಣಾಜನಕ ಸ್ಥಿತಿ ಅವಳದಾಗಿತ್ತು. ಇಂತಹ ಜರ್ಝರಿತವಾದ ಸಂದರ್ಭಗಳಲ್ಲೂ ಆಕೆಯ ಸ್ಪಂದನ ಅನುಭಾವದ ನೆಲೆಯನ್ನು ಮೀರುವುದಿಲ್ಲ. ಸರ್ವಸ್ವವನ್ನೂ ತೊರೆದು ಸರ್ವಾಂತ ರ್ಯಾಮಿಯಲ್ಲಿ ತನ್ಮಯಳಾಗಬಯಸುವ ಆಕೆಯ ಭಾವುಕ ವರ್ತನೆ ಕೋಟಿಗೊಬ್ಬ ಶರಣನಿಗೆ ಮಾತ್ರ ಸಾಧ್ಯವಾಗುವಂಥದ್ದು.

"ಆರೂ ಇಲ್ಲದವಳೆಂದು
ಆಳಿಗೊಳಲು ಬೇಡ ಕಂಡಯ್ಯ,
ಏನ ಮಾಡಿದಡೆಯೂ ನಾನು ಅಂಜುವಳಲ್ಲ
ತರಗೆಲೆಯ ಮೆಲಿದು ನಾನಿಹೆನು,
ಸುರಗಿಯ ಮೇಲೊರಗಿ ನಾನಿಹೆನು.
ಚೆನ್ನಮಲ್ಲಿಕಾರ್ಜುನಯ್ಯಾ ಕರ(ಕಡೆನೋಡಿದಡೆ)
ಒಡಲನೂ ಪ್ರಾಣವನೂ ನಿನಗೊಪ್ಪಿಸಿ ಶುದ್ಧಳಹೆನು."

ಅಕ್ಕಮಹಾದೇವಿ ಜಟಿಲ ಪರಿಸ್ಥಿತಿಗೆ ಮಣಿದು ಮನಸೋತವಳಲ್ಲ. ಕಗ್ಗಲ್ಲಿರಲಿ, ಪ್ರಪಾತವಿರಲಿ, ಬಿಡದೆ ಹರಿಯುವ ಪ್ರವಾಹದಂತೆ ಅವಳ ಮನಸ್ಸು. ಎಲ್ಲಿಂದೆಲ್ಲಿಗೇ ಹರಿದರೂ ತನ್ನ ಸ್ವಂತಿಕೆಯನ್ನು ಬಿಡದ ಛಲ. ಹಾಗೂ ಪರಿವರ್ತನಾಶೀಲ ಸಾಗರವನ್ನು ದಾಟುವಾಗ ಒದಗಿಬರುವ ಎಡರುತೊಡರುಗಳನ್ನೆಲ್ಲಾ ನಂಬಿದವನ ಕೊರಳಿಗೇ ಸಮರ್ಪಿಸುವ ಸಮರತಿ (ಅರ್ಪಣಾ) ಭಾವ ಅಕ್ಕನದು.

ಅರಮನೆಯಿಂದ ಹೊರಬಂದ ಅಕ್ಕನನ್ನು ಅಂದಿನ ಸಮಾಜ, ಗಂಡನನ್ನು ಬಿಟ್ಟವಳು, ಸಂಸಾರವನ್ನು ತೊರೆದವಳು ಎಂದು ಜರಿದಿರುವುದು ಸಹಜವೆ. ಇಂತಹ ವೇದನೆಗೆ ಒಳಗಾದ ಅವಳ ನಿವೇದನೆಯು ಹರಿದುಬರುವುದು ಹತಾಶದ ನೆಲೆಯಿಂದಲ್ಲ, ಅರಿವಿನ ಮಾರ್ಗದಿಂದ, ಅನುಭಾವದ ಸನ್ಮಾರ್ಗದಿಂದ. ಅವಳ ನಿಜ ಅನುಸಂಧಾನವೇ ಅವಳ ವಿಶಿಷ್ಟ ವ್ಯಕ್ತಿತ್ವದ ಲಕ್ಷಣ. ಈ ಜೀವನವೆಂಬ ಭವ ವಾಸದ ವೈವಾಹಿಕ ಕಲ್ಪನೆಯಂತೂ ಬೆರಗು ಮೂಡಿಸುವಂತಹದು.

"ಗುರುವೇ ತೆತ್ತಿಗನಾದ, ಲಿಂಗವೇ ಮದುವಣಿಗನಾದ,
ಆನು ಮದುವಳಿಗೆಯಾದೆನು, ವಸುಧೆಯ ಭಕ್ತರೆಲ್ಲರು ನಿಬ್ಬಣಿಗರಾದರು,
ಕೊಟ್ಟರು ಸಾದೃಶ್ಯವಪ್ಪ ಗಂಡನ ನೋಡಿ
ಇದು ಕಾರಣ ಚೆನ್ನಮಲ್ಲಿಕಾರ್ಜುನನೇ ಗಂಡನೆನಗೆ."

ಇಲ್ಲಿ ವೀರಶೈವ (ಶರಣ) ಪರಿಕಲ್ಪನೆಗೆ ಅನುಗುಣವಾಗಿ ಅನುಭಾವವನ್ನು ಸತಿ–ಪತಿ ಭಾವದ ಮೂಲಕ ಅಭಿವ್ಯಕ್ತಿಗೊಳಿಸಲಾಗಿದೆ. ತನ್ನ ಅನುಭಾವವನ್ನೇ ಶ್ರೇಷ್ಠ ಕಾವ್ಯವಾಗಿಸುವ ಸಾಮರ್ಥ್ಯವುಳ್ಳ ಅಕ್ಕನ ವೈರಾಗ್ಯಸಂಪನ್ನತೆ ಅವಿಸ್ಮರಣೀಯವಾದುದು. ಇಂತಹ ಸಮರತಿಭಾವದ ಅಕ್ಕನ ಮದುವೆ ಚೆನ್ನಮಲ್ಲಿಕಾರ್ಜುನನೊಡನೆ ನಡೆದ ರೀತಿಯಂತೂ ಅತ್ಯಂತ ಅದ್ಭುತವಾದ ಕಲ್ಪನೆ.

"ಜಲದ ಮಂಟಪದ ಮೇಲೆ, ಉರಿಯ ಚಪ್ಪರವನ್ನಿಕ್ಕಿ,
ಆಲಿಕಲ್ಲ ಹಸೆಯ ಹಾಸಿ, ಕಾಲಿಲ್ಲದ ಹೆಂಡತಿಗೆ
ತಲೆಯಿಲ್ಲದ ಗಂಡ ಬಂದು ಮದುವೆಯಾದನು.
ಎಂದೆಂದಿಗೂ ಬಿಡದ ಬಾಳುವೆಗೆ ಕೊಟ್ಟರೆನ್ನ
ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ ಮದುವೆಯ ಮಾಡಿದರು".*

ಅಕ್ಕನ ಮಾತುಗಳು ಬೆಡಗಿನಿಂದ ಕೂಡಿದ್ದರೂ, ಈ ವೇಳೆಗಾಗಲೇ ಆಕೆ ಎಂತಹ ಅನುಭಾವದ ಶೃಂಗವನ್ನು ತಲುಪಿದ್ದಳೆಂಬುದಕ್ಕೆ ಉತ್ತಮ ನಿದರ್ಶನವಾಗಿದೆ. ಪ್ರಸ್ತುತ ಸಂದರ್ಭ ಅವಳ ಅತ್ಯುನ್ನತ ಭಕ್ತಿಯ ಅನುಭಾವದ ಅನುಸಂಧಾನವೆನ್ನಬಹುದು.

'ಲೋಕದಲ್ಲಿ ಹುಟ್ಟಿದ ಬಳಿಕ ಸ್ತುತಿ ನಿಂದೆಗಳಿಗೆ ಅಂಜದೆ ಸಮಾಧಾನಿಯಾಗಿರಬೇಕು' ಎಂದು ಹೇಳುವ ಅಕ್ಕ, ಲೋಕದ ಅಲ್ಪಮತಿಗಳ ಪರಿಹಾಸ್ಯಕ್ಕೆ ಬೆಲೆ ಕೊಡುವವಳಲ್ಲ. ಅದಕ್ಕಾಗಿ ತನ್ನ ಗಟ್ಟಿ ಮನಸ್ಸಿನ ದಿಟ್ಟ ಉತ್ತರ ಸಿದ್ಧವಾಗಿಯೇ ಇರುತ್ತದೆ.

"ಗಟ್ಟಿ ತುಪ್ಪಕ್ಕೆ ತಿಳಿದುಪ್ಪಕ್ಕೆ ಭೇದವುಂಟೇ ಅಯ್ಯಾ?
ದೀಪಕ್ಕೆ ದೀಪ್ತಿಗೆ ಭೇದವುಂಟೇ ಅಯ್ಯಾ?
ಎನ್ನ ಅಂಗವನು ಶ್ರೀ ಗುರು ಮಂತ್ರವ ಮಾಡಿ ತೋರಿದನಾಗಿ
ಸಾವಯ ನಿರವಯಕ್ಕೆ ಭಿನ್ನವಿಲ್ಲವಯ್ಯಾ
ಚೆನ್ನಮಲ್ಲಿಕಾರ್ಜುನನ ಬೆರಸಿ ಮತಿಗೆಟ್ಟವಳ ಏತಕ್ಕೆ ನುಡಿಸುವಿರಯ್ಯಾ?"

ಅವಳ ಸದೃಢ ವ್ಯಕ್ತಿತ್ವ ಶ್ರೀ ಗುರುವಿನಿಂದ ಮಂತ್ರಮಯವಾದುದು; ಭಿನ್ನಾ ಭಿನ್ನಗಳಿಂದ ಮುಕ್ತವಾದುದು; ನರ ಹರನಾದಾಗಿನ ಅದ್ವೈತದ ಸಿದ್ಧಿಯನ್ನು ಪಡೆದದ್ದು. ಹೀಗೆ ಮಹಾದೇವಿಯಕ್ಕ ಹಂತಹಂತವಾಗಿ ಸಾಧನೆಯ ಪಥದಲ್ಲಿ ಅನುಭಾವದ ಶೃಂಗವನ್ನು ಏರತೊಡಗುತ್ತಾಳೆ.

ಕೊನೆಯ ಘಟ್ಟದ ವೇಳೆಗೆ ಆಕೆ ಲೋಕದ ಎಲ್ಲ ಜಂಜಡಗಳಿಂದ ದೂರವಾಗಿ ಕಲ್ಯಾಣಕ್ಕೆ ಬಂದು ಬಸವಾದಿ ಶರಣರ ಶರಧಿಯಲ್ಲಿ ಸಮ್ಮಿಳಿತಳಾಗಿ ಸಂತಸಪಡುತ್ತಾಳೆ. ಅಲ್ಲಿ ಅನುಭಾವಿಗಳ ಸಂಗವ ಮಾಡಿ ತಾನು ಹಿಂದೆ ಅನುಭವಿಸಿದ್ದ ಎಲ್ಲಾ ಭವಗಳನ್ನೂ ಮರೆಯುತ್ತಾಳೆ. ತನ್ನ ಜೀವಿತದಲ್ಲೇ ಅತ್ಯುನ್ನತ ಮಟ್ಟದ ಮಹಾನುಭಾವಿಯ ಹಂತವನ್ನು ಏರಲು ನೆರವಾದ ಶರಣರನ್ನು ಮನಸಾರೆ ಸ್ಮರಿಸುತ್ತಾಳೆ.

"ಅಯ್ಯಾ, ನಿಮ್ಮ ಅನುಭಾವಿಗಳ ಸಂಗದಿಂದ
ಎನ್ನ ತನು ಶುದ್ಧವಾಯಿತ್ತು,
ಅಯ್ಯಾ ನಿಮ್ಮ ಅನುಭಾವಿಗಳ ಸಂಗದಿಂದ
ಎನ್ನ ಮನ ಶುದ್ಧವಾಯಿತ್ತು,
ಅಯ್ಯಾ ನಿಮ್ಮ ಅನುಭಾವಿಗಳೆನ್ನ ನೊರೆದೊರೆದು
ಆಗು ಮಾಡಿದ ಕಾರಣ
ಚೆನ್ನಮಲ್ಲಿಕಾರ್ಜುನಾ ನಿಮಗಾನು ತೊಡುಗೆಯಾದೆನು."

ಈ ಮಾತುಗಳು ಅವಳಲ್ಲಿನ ಮುಕ್ತಮನಸ್ಸಿನ ಸಮಷ್ಟಿ ಪ್ರಜ್ಞೆಗೆ ಹಿಡಿದ ಕನ್ನಡಿಯಂತಿವೆ. ಜೊತೆಗೆ ಆಕೆಯು ತನ್ನ ಅಂತಿಮ ಘಟ್ಟದಲ್ಲಿ ಕಲ್ಯಾಣದ ಬಸವಾದಿ ಪ್ರಮಥರೊಂದಿಗೆ ಬೆರೆತಾಗ ಹಾಗೂ ಜೀವನದಲ್ಲಿ ತನಗಾದ ನೋವು ನಲಿವುಗಳಿಗೆ ಅವರು ನೀಡಿದ ಸಾಂತ್ವನದ ಕುರುಹಾಗಿ ಮೇಲಿನ ಮಾತುಗಳು ಹೊರಹೊಮ್ಮಿವೆ.

ಲೋಕದ ನಡಾವಳಿಕೆಗೆ ತದ್ವಿರುದ್ಧವಾದ ಅಕ್ಕನ ನಡೆಯು ನೋಡುಗರಿಗೆ ಒಂದು ವಿಪರ್ಯಾಸವಾಗಿ ತೋರುವುದು ಸಹಜವೆ. ಅವಳ ಅಲ್ಪಕಾಲದ ಅಪಾರ ಅನುಭವಗಳ ಅನುಭಾವದ ಸಾರ ಮುಂದಿನ ವಚನದಲ್ಲಿ ಮಡುಗಟ್ಟಿನಿಂತಿದೆ.

"ಮೂಲದ್ವಾರದ ಬೇರ ಮುಟ್ಟಿ ಭೂ ಮಂಡಲವನೇರಿದೆ;
ಆಚಾರದ ಬೇರ ಹಿಡಿದು ಐಕ್ಯದ ತುದಿಗೇರಿದೆ;
ವೈರಾಗ್ಯದ ಸೋಪಾನದಿಂದ ಶ್ರೀಗಿರಿಯನೇರಿದೆ;
ಕೈವಿಡಿದು ಕರೆದುಕೊಳ್ಳಾ, ಚೆನ್ನಮಲ್ಲಿಕಾರ್ಜುನ!"

ಇವು ಅವಳ ಒಟ್ಟಾರೆ ಬದುಕಿನ ವಿಭಿನ್ನ ಸ್ತರಗಳ ಅವಸ್ಥಾಂತರವೂ ಹೌದು. ಜೊತೆಗೆ ಹಂತ ಹಂತವಾಗಿ ತಾನು ಏರಿದ ಪರಮಸಿದ್ಧಿಯ ಪ್ರತೀಕವೂ ಹೌದು. ಆರಂಭದ ದಿನಗಳಿಂದ ಇಲ್ಲಿಯವರೆಗೆ ತಾನು ಯಾವ ಪುರುಷಾರ್ಥಕ್ಕಾಗಿ ಹಂಬಲಿಸುತ್ತಿದ್ದಳೋ ಅಂತಹ ಪರಮಾನು ಸಂಧಾನ ಕೈಗೂಡಿದಾಗ ಆಕೆಯಲ್ಲಿ ಉಂಟಾದ ಭಾವನೆಗಳು ಸಮರಸದ ಸಂಕೇತವಾಗಿವೆ.

"ತನು ನಿಮ್ಮ ರೂಪಾದ ಬಳಿಕ ನಾನಾರಿಗೆ ಮಾಡುವೆ?
ಮನ ನಿಮ್ಮ ರೂಪಾದ ಬಳಿಕ ನಾನಾರ ನೆನೆವೆ?
ಪ್ರಾಣ ನಿಮ್ಮ ರೂಪಾದ ಬಳಿಕ ನಾನಾರನಾರಾಧಿಸುವೆ?

ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ, ನಾನಾರನರಿವೆ?
ಚೆನ್ನಮಲ್ಲಿಕಾರ್ಜುನಾ, ನಿಮ್ಮಲ್ಲಿ ನೀವಾಗಿ ನಿಮ್ಮಿಂದ
ನಿಮ್ಮ ಮರೆದೆನಯ್ಯಾ."

ಅಕ್ಕನ ಅನುಭಾವದ ಪೂರ್ಣಾವಸ್ಥೆಯ ದ್ಯೋತಕವಿದು. ಕಳೆದ ಮೂರೂ ಘಟ್ಟಗಳಲ್ಲಿ ಏರುಮುಖವಾಗಿದ್ದ ಪರಮಾರ್ಥಸಾಧನೆಯು, ಭಕ್ತಿಯ ವಿಭಿನ್ನ ಹಂತಗಳನ್ನು ದಾಟಿ, ಈಗ ಅನುಸಂಧಾನ (ಸಾಕಾರ) ಸಿದ್ಧಿಯ ಪೂರ್ಣಾವಸ್ಥೆಯನ್ನು ಪಡೆದಂತಾಗಿದೆ. ನಾನು ನೀನೆಂಬ ಅಭೇದಗಳನ್ನು ಮೆಟ್ಟಿ ಸರ್ವೇಶ್ವರನಲ್ಲಿ ಸಾಕಾರಗೊಂಡ (ನಿರಾಕಾರದ) ಶರಣತತ್ವದ ಶೂನ್ಯಸಂಪಾದನೆಯನ್ನು ಗಳಿಸಿದ ಸಾರ್ಥಕ್ಯವಿಲ್ಲಿದೆ.

ಅನುಭಾವ ಸಾಮ್ರಾಜ್ಯದ ಅಗ್ರಗಣ್ಯಳೆನಿಸುವ ಅಕ್ಕನ ಬದುಕಿನ ಅಂತ್ಯದ (ಪರ್ಯವಸಾನದ) ಅನುಭಾವದ ಮಾತುಗಳು ಹೃದಯವನ್ನು ಮಿಡಿಯುವಂತಿವೆ:

"ಕದಳಿಯೆಂಬುದು ತನು ; ಕದಳಿಯೆಂಬುದು ಮನ;
ಕದಳಿಯೆಂಬುದು ಸರ್ವ ವಿಷಯಂಗಳು;
ಕದಳಿಯೆಂಬುದು ಭವ ಘೋರಾರಣ್ಯ.
ಕದಳಿಯೆಂಬುದ ಗೆದ್ದು ತವೆ ಬದುಕಿ ಬಂದು
ಕದಳಿಗೆ ಬಂದ ಮಗಳೆಂದು ಕರುಣದಿಂ ತೆಗೆದು ಬಿಗಿಯಪ್ಪಿದರೆ
ಚೆನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು."

ಇಂತಹ ಅಮೃತಮಯ ವಾಣಿಗೆ ಅನ್ಯವಿವರಣೆಯ ಅಗತ್ಯುವುಂಟೆ? ಅದೇನೇ ಇರಲಿ ಅಕ್ಕನ ಬದುಕು ವಿವಿಧ ಸ್ತರಗಳಲ್ಲಿ ಹರಿಯುವ ಹೊನಲಿನಂತಿದ್ದು, ಭವಸಾಗರಗಳನ್ನೆಲ್ಲಾ ದಾಟಿ, ತನ್ನ ಅಂತಃಸತ್ವಗಳಿಗೆ ಎಲ್ಲಿಯೂ ಚ್ಯುತಿ ಬಾರದಿರುವಂತೆ, ಅಮೃತಮಯವಾದ ಅನುಭಾವ ಶರಧಿಯಲ್ಲಿ ಕೂಡಿಕೊಂಡ ಪರಿ ಜಗತ್ತಿಗೇ ಆದರ್ಶವಾಗಿದೆ. ಒಟ್ಟಾರೇ ಅವಳ ಇಡೀ ಬದುಕೆ ಒಂದು ಬಗೆಯ ಅಂತರಂಗದ ಸಂಘರ್ಷ, ಅನುಭಾವದ ಆವಿಷ್ಕಾರ. ಹೀಗಾಗಿ ಅವಳ ಬಹುತೇಕ ವಚನ ಸಂಪತ್ತು ಬರಿಯ ಸಾಹಿತ್ಯಕ ಕೊಡುಗೆ ಮಾತ್ರವಲ್ಲ; ಶ್ರೇಷ್ಠ ಜೀವನದ ಸಾಧನೆಯ ಅನುಭಾವ ಸಂಪತ್ತೂ ಹೌದು.

---

೧. ವಚನ ಸಾಹಿತ್ಯ, ಬೆಂ.ವಿ.ವಿ., ಪುಟ. ೮೨, ೮೩.
೨. ಕನ್ನಡ ನಿಘಂಟು; ಕ.ಸಾ.ಪ; ಸಂ, ೧, ಪು. ೨೫೬.
೩. ಡಾ. ತಿಪ್ಪೇರುದ್ರಸ್ವಾಮಿ; ಶರಣರ ಅನುಭಾವ ಸಾಹಿತ್ಯ, ಪು: ೧೬೪
೪. ಅದೇ, ಪು. ೧೬೨
೫. ಡಾ. ಸಿದ್ಧಯ್ಯ ಪುರಾಣಿಕ; ಶರಣ ಸರಣಿ, ಪು. ೩ (ಅಡಿ ಟಿಪ್ಪಣಿ)
೬. ಅದೇ. ಪು. ೧೬೪
೭. ಸಿದ್ಧಗಂಗಾ ಶ್ರೀ. (ಸಂ॥ ಚನ್ನಪ್ಪ ಎರೇಸೀಮೆ) ಟಿ.ಆರ್. ಮಹದೇವಯ್ಯ ಪು. ೬೩೩
೮. ಶರಣರ ಅನುಭಾವ ಸಾಹಿತ್ಯ, ಪು. ೧೬೪

೯. ಅದೇ, ಪು. ೧೬೯

* ಚಂಚಲವಾದ ಮನಸ್ಸೆಂಬ ಮಂಟಪದ ಮೇಲೆ ಜ್ಞಾನದ ಚಪ್ಪರವನ್ನಿಕ್ಕಿದರು. ಗುರುವಿನ ಕರುಣೆಯ ದೃಷ್ಟಿಯೇ ಹಸೆಮಣೆಯಾಯಿತು. ಲೌಕಿಕದ ಆಚರಣೆಯಿಲ್ಲದ ಶರಣ ಸತಿಗೆ ಭವ ಬಂಧನಗಳನ್ನು ಮೆಟ್ಟಿನಿಂತ ಲಿಂಗ ಪತಿಯಾದನು. ಇದು ಎಂದೆಂದಿಗೂ ಬಿಡದ ಶಾಶ್ವತವಾದ ದಾಂಪತ್ಯ, ಅಂತಹ ದಾಂಪತ್ಯ ನನಗೆ ಘಟಿಸಿತು, ಎನ್ನುತ್ತಾಳೆ ಅಕ್ಕ".

ಡಾ. ಎಚ್. ತಿಪ್ಪೇರುದ್ರಸ್ವಾಮಿ: ಶರಣರ ಅನುಭಾವ ಸಾಹಿತ್ಯ, ಪು. ೭೫.

೨೫. ಅಕ್ಕನ ಸೃಷ್ಟಿಯ ವಿಚಾರ ಹಾಗೂ ಮಾಯಾವಾದ

●

ಡಾ. ಉಷಾ ಕಿರಣ್

ಹಿನ್ನೆಲೆ

ವಚನಕಾರರ ಉದಾತ್ತವಾದ ಆದರ್ಶ, ತತ್ತ್ವ, ವಿಚಾರಗಳು ನಮಗೆ ಇಂದೂ ಕೂಡ ಅವಶ್ಯವಾಗಿರುವುದಕ್ಕೆ ಕಾರಣ ಅವರು ಬದುಕನ್ನು ಕಂಡುಕೊಂಡ ರೀತಿ, ವಾಸ್ತವತೆಯನ್ನು ಒಪ್ಪಿಕೊಂಡು ಬದುಕಿದ ರೀತಿಗಳು ನಮ್ಮ ಬದುಕಿಗೂ ಹತ್ತಿರವಾಗಿರುವುದೇ ಆಗಿದೆ. ಅವರು ಹೇಳುವ ವಿಚಾರಗಳು ನಮ್ಮ ಮಾನಸಿಕ ನೆಲೆಗೆ ಸಂಬಂಧಪಟ್ಟವೇ ಆಗಿರುವುದರಿಂದ ಅವರು ಸೂಚಿಸುವ ಪರಿಹಾರಗಳು ನಮಗೆ ಬೇಡವಾಗುವುದಿಲ್ಲ. ಈ ಬಹುಮುಖ ವಿನ್ಯಾಸ ಅಥವಾ ಆಯಾಮಗಳಿಂದಾಗಿಯೇ ಈ ವಿಚಾರಗಳು ಒಂದು ಜಾತಿ ಧರ್ಮದ ಚೌಕಟ್ಟಿಗೆ ಒಳಪಡದೆ ವಿಶ್ವವ್ಯಾಪಕತೆ ಪಡೆದ ಮಾನವತಾ ಧರ್ಮಕ್ಕೆ ಸೇರುತ್ತವೆ. ಅವರು ಬದುಕನ್ನು ಇದ್ದ ಹಾಗೆ ಒಪ್ಪಿಕೊಂಡಿದ್ದಕ್ಕಿಂತ ಹೆಚ್ಚಾಗಿ ಅದನ್ನು ಸತ್ಯಶುದ್ಧ ಪ್ರಸಾದ ಭಾವದಲ್ಲಿ ಅನುಭವಿಸಿ, ತಮ್ಮ ಅನುಭವಗಳನ್ನು ಇತರರಿಗೆ ಹಂಚುವ ದಾರಿತೋರುವ ಅನುಭಾವಿಗಳಾದರು. ಈ ಹಿನ್ನೆಲೆಯಲ್ಲಿ ವೀರ ವೀರಾಗಿಣಿಯೆನಿಸಿರುವ ಮಹಾದೇವಿಯಕ್ಕನ ವಿಚಾರಗಳನ್ನು ಕುರಿತು ಚಿಂತಿಸುವಾಗ ನಮಗೆ ಮಹದೇವಿಯಕ್ಕ ರುದ್ರಕನ್ನಿಕೆಯೆಂಬುದಕ್ಕಿಂತ ಈ ನೆಲದಲ್ಲಿ ಹುಟ್ಟಿ ಬಾಳಿದವಳು ಎಂದಾಗ ನಮಗೆ ಹೆಚ್ಚು ಹತ್ತಿರವಾಗುತ್ತಾಳೆ. ಶ್ರೀಭೂಸನೂರಮಠ ಅವರು ಹೇಳುವಂತೆ 'ಕೈಲಾಸದ ರುದ್ರಕನ್ನಿಕೆಗಿಂತ ಬಹುದೊಡ್ಡ ನಿಲುವು ಈ ನೆಲದ ಅಕ್ಕನದು.[೧] 'ಚೆನ್ನಮಲ್ಲಿಕಾರ್ಜುನನ ಕೊಂದು ಸಾವ ಭಾಷೆ'ಯಲ್ಲಿ ಬದುಕನ್ನು ಅನುವುಗೊಳಿಸಿಕೊಂಡ ಅಕ್ಕನ ಅನುಭಾವಿಕ ವ್ಯಕ್ತಿತ್ವವನ್ನು ಆಕೆಯ ಕೆಳಗಿನ ವಚನ ಸಾದರಪಡಿಸುತ್ತದೆ.

ನಾನೆಂಬುದ ನಿಲಿಸಿ ನೀನೆಂಬುದ ಕೆಡಿಸಿ ಉಭಯ ಲಿಂಗೈಕ್ಯವ ಮಾಡಿದೆ.
ಚನ್ನಮಲ್ಲಿಕಾರ್ಜುನನೊಳಗೆ ನಾನಳಿದೆನಾಗಿ ಲಿಂಗವೆಂಬ ಘನವು
ಎನ್ನಲ್ಲಿ ಅಳಿಯಿತ್ತು ಕಾಣಾ ಸಂಗನ ಬಸವಣ್ಣಾ[೨]

ಈಕೆಯ ಜೀವನ-ಸಾಧನೆಯನ್ನು ಕುರಿತು ಮಡಿವಾಳ ಮಾಚಯ್ಯನವರು ಹೀಗೆ ಹೇಳಿದ್ದಾರೆ.

ಕಾಮಿಯಾಗಿ ನಿಃಕಾಮಿಯಾದಳು
ಸೀಮೆಯಲ್ಲಿದ್ದು ನಿಸ್ಸೀಮೆಯಾದಳು.

ಭವಿಯ ಸಂಗವ ತೊರೆದು ಭವ ಬಾಧೆಯ ಹರಿದಳು
ಬಸವಣ್ಣ ಗತಿಯೆಂದು ಬರಲು, ನಾನು ಮಡಿಯ ಹಾಸಿ ನಡೆಸಿದೆ.
ನಡೆವುದಕ್ಕೆ ಹಾಸಿದ ಮಡಿಯ ಸರ್ವಾಂಗಕ್ಕೆ ಹೊದ್ದಳು
ಆ ಮಡಿಯ ಬೆಳಗಿನ ಬೆಳಗಿನೊಳಗೆ ನಿರ್ವಯಲಾದಳು.
ಕಲಿದೇವರ ದೇವಯ್ಯಾ ಮಹಾದೇವಿಯಕ್ಕನ ನಿಲವ
ಬಸವಣ್ಣನ ಕೃಪೆಯಿಂದಲರಿದೆನಯ್ಯಾ ಪ್ರಭುವೆ.[೩]

ಇಂತಹ ಸಾಧನೆಗಳಿಗೆ ಮಹಾದೇವಿಯಕ್ಕ ಬಾಲ್ಯದಿಂದ ಪಡೆದ ಶಿಕ್ಷಣ, ತಂದೆ ತಾಯಿ–ಗುರುಗಳ ಮಾರ್ಗದರ್ಶನಗಳೇ ಕಾರಣವಾಗಿ ಆಕೆ ಅತ್ಯಂತ ಸಮರ್ಥವಾದ ಸ್ವತಂತ್ರ ನಿಲವನ್ನು ರೂಪಿಸಿಕೊಂಡಳು. 'ಮನಸಿಜನ ತಲೆಯ ಬರಹವ ತೊಡೆದನು' ಎನ್ನುವ ಅಕ್ಕ 'ಬೆಂದ ನುಲಿಯಂತೆ' 'ಕಾಯದ ವಿಚಾರಗಳನ್ನು ಸುಟ್ಟು ಚೆನ್ನಮಲ್ಲಿಕಾರ್ಜುನನೆಂಬ ಗಂಡನ ಒಳಹೊಕ್ಕು ಬೆರೆಸಿದೆನು' ಎಂದು ಎಲ್ಲ ಪ್ರಾಪಂಚಿಕ ಪರಂಪರೆಗಳಿಗೆ ನಾಸ್ತಿಯಾದಳು. ಈ ಹಿನ್ನೆಲೆಯಲ್ಲಿ ಆಕೆಯ ಸೃಷ್ಟಿಯನ್ನು ಕುರಿತು ತಾತ್ತ್ವಿಕ ಚಿಂತನೆ, ಮಾಯೆಯನ್ನು ಬಗೆಹರಿಸಿ ಕೊಳ್ಳಲು ಬೇಕಾದ ಮಾನಸಿಕ ಸಿದ್ಧತೆಗಳ ಬಗ್ಗೆ ಹೇಳಿರುವ ವಿಚಾರಗಳು ಉನ್ನತವಾಗಿವೆ. ಚನ್ನಮಲ್ಲಿಕಾರ್ಜುನನ ಭಕ್ತಿ ಭಾವವೇ ಪ್ರಧಾನವಾಗಿರುವ ಈಕೆಯ ವಚನಗಳಲ್ಲಿ ವೈಯಕ್ತಿಕ ಅನುಭವಗಳು, ಪ್ರಾಪಂಚಿಕ ಕೋಟಲೆಗಳು ಅತ್ಯಂತ ಹೃದಯಂಗಮವಾಗಿವೆ. 'ತೆರಣಿಯ ಹುಳು ತನ್ನ ಸ್ನೇಹದಲ್ಲಿ ಮನೆಯ ಮಾಡಿ, ತನ್ನ ನೂಲು ತನ್ನ ಸುತ್ತಿ ಸಾವ ತೆರನಂತೆ, ಮನ ಬಂದುದ ಬಯಸಿ ಬೇವುತ್ತಿದ್ದೇನೆ' ಎಂದು ಸಂಸಾರದ ಆಶೆ ಆಮಿಷಗಳ ಬಂಧನವನ್ನು ಬಿಡಿಸಿಕೊಳ್ಳುವ ಹೃದಯದ ಹಂಬಲ ಕಳವಳಗಳನ್ನು ಸಾಂದ್ರಗೊಳಿಸುವ ಭಾವಗಳನ್ನು ತೆರಣಿಯ ಹುಳುವಿನ ಪ್ರತಿಮೆಯ ಮೂಲಕ ಅತ್ಯಂತ ಸಮರ್ಥವಾಗಿ ಚಿತ್ರಿಸಿದ್ದಾಳೆ.

ಕಲ್ಲ ಹೊಕ್ಕಡೆ ಕಲ್ಲ ಬೆರೆಸಿದೆ, ಗಿರಿಯ ಹೊಕ್ಕಡೆ ಗಿರಿಯ ಬೆರಸಿದೆ
ಭಾಪು ಸಂಸಾರವೆ ಬೆನ್ನಿಂದ ಬೆನ್ನು ಹತ್ತಿಬಂದೆ.
ಚನ್ನಮಲ್ಲಿಕಾರ್ಜುನಯ್ಯಾ, ಇನ್ನೇವೆನಿನ್ನೇವೆ?[೪]

ಮೇಲಿನ ವಚನದಲ್ಲಿ ತನ್ನ ಸಾಧನೆಗೆ ಅಡ್ಡಿಯಾಗಿ ಬರುವ ಭವಬಂಧನದ ಮಾಯಾ ಗುಣವನ್ನು ಜಂಕಿಸಿ ಕಿಡಿಕಾರುವ ತೀಕ್ಷ್ಣ ನುಡಿಗಳು ಮಹದೇವಿಯಕ್ಕನ ಅತ್ಯಂತ ಸಹಜ ಶೈಲಿಯ ಒಂದು ವಿಶಿಷ್ಟ ಗುಣವೆನ್ನಬಹುದು.

ಸೃಷ್ಟಿಮೂಲ

ಸೃಷ್ಟಿ ಎಂದ ತಕ್ಷಣ ಇಡೀ ವಿಶ್ವದ ಸಕಲ ಚರಾಚರ ವಸ್ತುಗಳ ಸೃಷ್ಟಿಯನ್ನು ಕುರಿತ ಕಲ್ಪನೆ ನಮ್ಮನ್ನು ಆವರಿಸುವುದು ಸಹಜ. ಇಂದಿನ ವೈಜ್ಞಾನಿಕ ದೃಷ್ಟಿಗೂ ನಿಲುಕದಿರುವ ಸೃಷ್ಟಿಯ ಮೂಲವನ್ನು ಹಾಗೂ ಅತ್ಯಂತ ಅದ್ಭುತವಾದ ಈ ಸೃಷ್ಟಿಗೆ ಕಾರಣನಾಗಿರಬಹುದಾದ ಸೃಷ್ಟಿಕರ್ತನನ್ನು ಕುರಿತು ಬಹುಶಃ ಜಗತ್ತಿನ ಎಲ್ಲ ಚಿಂತಕರೂ ಚಿಂತಿಸಿದಷ್ಟು ಅದು ಕೇವಲ ಅಗೋಚರ ಶಕ್ತಿಯಾಗಿಯೇ ಉಳಿದಿದೆ. ಅನುಭಾವಿಗಳ ಸಿದ್ಧಾಂತದ ಪ್ರಕಾರ ಸೃಷ್ಟಿಕರ್ತನಾದ ದೇವರೇ ಸರ್ವಶಕ್ತ ಹಾಗೂ ಸಕಲ ಕಾರಣಕರ್ತ. ಇದೇ ಭಾವನೆ ಇಂದು ಎಲ್ಲ ವರ್ಗದ ಜನರಲ್ಲಿ ಬೇರೂರಿ ನಿಂತಿದೆ.

'ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ' ಎಂದು ಹೊಯ್ದಾಡುವ ಜೀವಕ್ಕೆ ದೇವರಿದ್ದಾನೆ, ಎನ್ನುವ ಕಲ್ಪನೆಯೇ ಮನಸ್ಸಿಗೆ ಎಷ್ಟೋ ಧೈರ್ಯ ಕೊಡುತ್ತದೆ; ಆನಂದ ಕೊಡುತ್ತದೆ. ಕಷ್ಟ ಬಂದಾಗ ಹೇಳಿಕೊಳ್ಳಲು ಅತ್ಯಂತ ಹತ್ತಿರದವನು ಹಾಗೂ ಆತ್ಮೀಯ ನೆನಿಸುವವನು ದೇವರೇ! ಇಂತಹ ಕರುಣಾಸಾಗರ ನೆನಿಸಿದ ದೇವರನ್ನು ಹಲವಾರು ಬಗೆಯಲ್ಲಿ ಸ್ತುತಿಸುವುದು ಮನುಷ್ಯನ ಕೊನೆ ಮೊದಲಿಲ್ಲದ ಹಂಬಲ. 'ರವಿ ಕಾಣದ್ದನ್ನು ಕವಿ ಕಂಡ' ಎನ್ನುವ ಸೃಜನ ಶೀಲ ಕವಿಗಳೂ ಕೂಡ ಸೃಷ್ಟಿಕರ್ತನನ್ನು ಕುರಿತು 'ಎನ್ನ ಹರಣ ನಿನಗೆ ಶರಣ ಸಕಲ ಕಾರ್ಯ ಕಾರಣ' ಎಂದೂ 'ಸಕಲಕೆಲ್ಲಕೆ ನೀನೆ ಅಕಳಂಕ ಗುರುವೆಂದು ನಿಖಿಳ ಶಾಸ್ತ್ರಗಳೆಲ್ಲ ಪೇಳುತಿರಲರಿದೆನು' ಎಂದೂ ಹೃದಯತುಂಬಿ ಹಾಡಿದ್ದಾರೆ.

ಸೃಷ್ಟಿಯನ್ನು ಕುರಿತು ವಚನಗಳು

ಸೃಷ್ಟಿ ರಹಸ್ಯದ ಆದಿ ಅನಾದಿತನವನ್ನು ಕುರಿತ ಮಹದೇವಿಯಕ್ಕನ 'ಸೃಷ್ಟಿಯ ವಚನ' ಹಾಗೂ ಇತರ ಕೆಲವು ವಚನಗಳಲ್ಲಿ ತಾತ್ವಿಕ ವಿವೇಚನೆಯೊಂದಿಗೆ ಅಕ್ಕನ ಅನುಭಾವದ ಸಿದ್ಧಾಂತವನ್ನು ಕಾಣುತ್ತೇವೆ. ಶೂನ್ಯದಿಂದ ಉದಯವಾದ ಚಿತ್ ಶಕ್ತಿಯೇ ಪರಶಿವನ ಆತ್ಮಶಕ್ತಿ. ಇದು ಒಂದರಿಂದ ಹಲವು. ನಾಮ, ರೂಪ, ಕ್ರಿಯೆಗಳು ಒಂದರೊಡನೊಂದು ಸೇರಿ ಅನಂತಕೋಟಿ ಬ್ರಹ್ಮಾಂಡದ ಸೃಷ್ಟಿಗೆ ಕಾರಣವೆಂಬುದು ಎಲ್ಲ ವಚನಕಾರರ ಅಭಿಮತ.

> **ವನವೆಲ್ಲಾ ನೀನೆ, ವನದೊಳಗಣ ದೇವ ತರುವೆಲ್ಲಾ ನೀನೆ**
> **ತರುವಿನೊಳಗಾಡುವ ಖಗಮೃಗವೆಲ್ಲಾ ನೀನೆ.**
> **ಚನ್ನಮಲ್ಲಿಕಾರ್ಜುನಾ,**
> **ಸರ್ವಭರಿತನಾಗಿ ಎನಗೇಕೆ ಮುಖದೋರೆ?**[೫]

ಎಂದು ಮೇಲಿನ ವಚನದಲ್ಲಿ ಮಹದೇವಿಯಕ್ಕ ತನ್ನ ಪರಮ ಆರಾಧ್ಯದೈವವಾದ ಚನ್ನಮಲ್ಲಿಕಾರ್ಜುನ ದೇವನೇ ಸೃಷ್ಟಿಯ ಸಕಲ ರೂಪಗಳನ್ನೂ ತನ್ನಲ್ಲಿ ಅಡಗಿಸಿಕೊಂಡ ವಿರಾಟ್ ಶಕ್ತಿಯೆಂದು ಭಾವಿಸಿ, ಪರಶಿವನ ಸರ್ವಶಕ್ತತೆಯನ್ನು ಕುರಿತು ವಿವೇಚಿಸಿದ್ದಾಳೆ. ಸೃಷ್ಟಿ ಸತ್ಯದ ಅನ್ವೇಷಣೆಯ ಹಂಬಲ, ಆತ್ಮಜ್ಞಾನದ ಪರಮಗುರಿಗಳು ಕೂಡಿಕೊಂಡು, 'ಸರ್ವ ಭರಿತನಾಗಿ ಎನಗೇಕೆ ಮುಖದೋರೆ' ಎಂದು ಅರ್ಥೈಸುವ ಅಕ್ಕನಲ್ಲಿ ಸಕಲ ಶಕ್ತನ ಶಕ್ತಿಯನ್ನು ಮತ್ತಷ್ಟು ಪರಿಭಾವಿಸಿ ನೋಡುವ ವಿವೇಚನೆ ಕಾಣುತ್ತದೆ. ಕಾಯದ ಕತ್ತಲೆ ಕಳೆದು ಮನದ ಮಾಯೆಯನ್ನು ಹರಿದು ಅಂತರಂಗದ ಅರಿವು ಪರಿಣಾಮಿಗಳಾದವರಲ್ಲಿ ಮಾತ್ರ ಕಂಡು ಬರುವ ಇಂತಹ ಚಿಂತನ ಸಾಮಾನ್ಯರಿಗೆ ಅರ್ಥವಾಗಲಾರದು. ಅವರಿಗೆ ಹುಟ್ಟು ಸಾವು ಇಂತಹ ಪ್ರಕೃತಿಯ ನಿಯಮಗಳೆಲ್ಲ ಬಿಡಿಸಲಾರದ ಒಂದು ಒಗಟು ಮಾತ್ರ. ಹುಟ್ಟಿನಿಂದ ಸಾವಿನವರೆಗಿನ ಹಲವಾರು ಲೋಕ ವ್ಯವಹಾರಗಳು ಆತ್ಮನ ಅರಿವನ್ನು ಮುಚ್ಚಿಬಿಡುತ್ತವೆ. ಕತ್ತಲೆಯಿಂದ ಬೆಳಕಿಗೆ, ತಮಸೋಮಾ ಜ್ಯೋತಿರ್ಗಮಯ ಎಂದು ನಡೆಯಬಲ್ಲವರಿಗೆ ಮಾತ್ರ ಇಂತಹ ಅನ್ವೇಷಣೆ ಸಾಧ್ಯ. ಇಂತಹ ಸತ್ಯಜ್ಞಾನದ ಅಪೇಕ್ಷೆ ಅನ್ವೇಷಣೆಗಳು ಶರಣರಲ್ಲಿ ತೀಕ್ಷ್ಣವಾಗಿದ್ದುದರಿಂದಲೇ ಅವರು ಸೃಷ್ಟಿಯನ್ನು, ಆತ್ಮನನ್ನು, ಶಿವನನ್ನು ಕುರಿತು ತೀವ್ರವಾಗಿ ಚಿಂತಿಸಿದರು. ಪಿಂಡಸ್ಥಲದಿಂದ ಆರಂಭವಾಗುವ ಶರಣರ ತತ್ವವಿವೇಚನೆ ಸಂಸಾರ ಹೇಯಸ್ಥಲ ಮಾಯಾ ವಿಲಾಸವಿಡಂಬನ ಸ್ಥಲಗಳನ್ನು ದಾಟಿ ಶರಣ ಪ್ರಸಾದಿ ಮಾಹೇಶ್ವರ

ಸ್ಥಲಗಳ ಮೂಲಕ ಐಕ್ಯಸ್ಥಲವನ್ನು ತಲುಪುವುದು ಜ್ಞಾನವಿಕಾಸದ ಮಜಲುಗಳಿಗೆ ದ್ಯೋತಕವಾಗಿದೆ.

ಹಾಲು ತುಪ್ಪವ ನುಂಗಿ ಬೇರಾಗಬಲ್ಲುದೆ?
ಸೂರ್ಯಕಾಂತದ ಅಗ್ನಿಯನಾರು ಭೇದಿಸಬಲ್ಲರು?
ಅಪಾರ ಮಹಿಮೆ ಚೆನ್ನಮಲ್ಲಿಕಾರ್ಜುನನೆನ್ನೊಳಗಡಗಿಪ್ಪ ಪರಿಯ
ಬೇರಿಲ್ಲದೆ ಕಂಡು ಕಣ್ದೆರೆದೆನು.[೬]

ಆತ್ಮವಿಶ್ಲೇಷಣೆಯ ಅರಿವನ್ನು ಸಮನಿಸಿಕೊಂಡಿರುವ ಮಹದೇವಿಯಕ್ಕನ ಮೇಲಿನ ವಚನದಲ್ಲಿ ಹಾಲಿನ ಮರೆಯಲ್ಲಿರುವ ತುಪ್ಪ ಅಂದರೆ ಪಿಂಡದ ಮರೆಯಲ್ಲಿರುವ ಪರಬ್ರಹ್ಮದ ಶಿವಜ್ಞಾನವು ಸೂರ್ಯಕಾಂತದ ಒಳಗೆ ಅಗ್ನಿಯ ಕಳೆಯಂತೆ ಪ್ರಜ್ವಲವಾಗಿದ್ದು ಅರಿದು ಕಂಡವರಿಗೆ ಗೋಚರವಾಗುವ ಗುಪ್ತಶಕ್ತಿಯಾಗಿದ್ದು ಇಂತಹ ಸಮ್ಯಗ್ ಜ್ಞಾನದ ಅರಿವನ್ನು ಪಡೆದ ದೃಕ್ಕಿಗೆ ತಾನೇ ಪರಬ್ರಹ್ಮವೆಂಬುದು ಕಣ್ದೆರೆವೆಯಾಗಿ ತೋರುತ್ತದೆ. ಇದು ಅಕ್ಕನ ಜಾಗೃತ ಮನಸ್ಸಿನ ಹಾಗೂ ಅರಿವಿನ ಪರಿಪೂರ್ಣತೆಯನ್ನು ಪಡೆದುಕೊಂಡಿದ್ದರ ಪ್ರಮಾಣವಾಗಿದೆ. ಪರಮಾತ್ಮ ಜೀವಾತ್ಮರ ಏಕೋಭಾವವನ್ನು ಈ ವಚನ ಸ್ಪಷ್ಟಪಡಿಸುತ್ತದೆ.

ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುಳಿದು ಸೂಸುವ ಗಾಳಿ ನಿಮ್ಮ ದಾನ' ಎಂದು ಜೇಡರ ದಾಸಿಮಯ್ಯ ಹೇಳಿದಂತೆ ನಿಮ್ಮ ವಚನಕಾರರೂ ಸೃಷ್ಟಿಯ ಅನಂತ ಕೊಡುಗೆಗಳನ್ನು ಅವುಗಳ ವಿಸ್ಮಯಕಾರಿ ಗುಣಗಳನ್ನು ಕುರಿತು ಸ್ತುತಿಸಿದ್ದಾರೆ.

ಈಳೆ ನಿಂಬೆ ಮಾವು ಮಾದಲಕ್ಕೆ
ಹುಳಿ ನೀರನೆರೆದವರಾರಯ್ಯಾ?
ಕಬ್ಬು ಬಾಳೆ ಹಲಸು ನಾರಿವಾಳಕ್ಕೆ
ಸಿಹಿ ನೀರನೆರೆದವರಾರಯ್ಯಾ?
ಕಳವೆ ರಾಜಾನ್ನ ಶಾಲ್ಯಾನ್ನಕ್ಕೆ
ಓಗರದ ಉದಕವನೆರೆದವರಾರಯ್ಯಾ?
ಮರುಗ ಮಲ್ಲಿಗೆ ಪಚ್ಚೆ ಮುಡಿವಾಳಕ್ಕೆ
ಪರಿಮಳದುದಕವನೆರೆದವರಾರಯ್ಯಾ?
ಇಂತೀ ಜಲವು ಒಂದೆ, ನೆಲನು ಒಂದೆ, ಆಕಾಶವು ಒಂದೆ
ಜಲವು ಹಲವು ದ್ರವ್ಯಂಗಳ ಕೂಡಿ, ತನ್ನ ಪರಿ ಬೇರಾಗಿಹ ಹಾಗೆ,
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯನು
ಹಲವು ಜಗಂಗಳ ಕೂಡಿಕೊಂಡಿರ್ದಡೇನು? ತನ್ನ ಪರಿ ಬೇರೆ?[೭]

ಮೇಲಿನ ವಚನದಲ್ಲಿ ಒಂದೇ ನೀರಿಗೆ ವಿಭಿನ್ನ ಬಗೆಯ ಶಕ್ತಿಸಾಮರ್ಥ್ಯ ನೀಡಿದ ಸೃಷ್ಟಿಯ ಅದ್ಭುತ ಗುಣಗಳನ್ನು ಒಂದೊಂದಾಗಿ ಸಾಲಿಡುತ್ತಾ ಕೊನೆಗೆ ಜಲದ ಹಲವು ಶಕ್ತಿ ರೂಪಗಳಂತೆ ಪರಶಿವನು ಹಲವು ರೂಪಗಳಲ್ಲಿ ಅಡಗಿದ್ದರೂ ವಿಶಿಷ್ಟನಾದ ವಿಶ್ವರೂಪನೆಂದು ಹೇಳಿದ್ದಾಳೆ ಮಹದೇವಿಯಕ್ಕ, ಇಂತಹ ಭಗವಂತನಿಗೆ,

ದೃಶ್ಯವಾದ ರವಿಯ ಬೆಳಗು, ಆಕಾಶದ ವಿಸ್ತೀರ್ಣ, ವಾಯುವಿನ ಚಲನೆ,
ತರುಗುಲ್ಮ ಲತಾದಿಗಳಲ್ಲಿಯ ತಳಿರು ಪುಷ್ಪ

ಷಡುವರ್ಣಂಗಳೆಲ್ಲ ಹಗಲಿನ ಪ್ರಭೆ
ಚಂದ್ರಪ್ರಕಾಶ ನಕ್ಷತ್ರ ಅಗ್ನಿ ವಿದ್ಯುತ್ ಆದಿಗಳು
ದೀಪ್ತಿಮಯವೆನಿಸಿಪ್ಪವೆಲ್ಲ ಇರುಳು ನಿನ್ನ ಪೂಜೆ
ಹಗಲಿರುಳು ನಿನ್ನ ಪೂಜೆಯಲ್ಲಿ ಎನ್ನ ಮರೆದಿಪ್ಪೆನಯ್ಯಾ
ಚೆನ್ನಮಲ್ಲಿಕಾರ್ಜುನಾ.[೮]

ವಿಶ್ವದ ಸೃಷ್ಟಿಯೇ ನಿನ್ನ ಪೂಜೆಗಾಗಿ ಇರುವಾಗ ನಾನು ಕೂಡ ನಿನ್ನ ಪೂಜೆಯಲ್ಲಿ ಎನ್ನ ಮರೆದಿಪ್ಪೆನಯ್ಯಾ ಎಂದು ಹೇಳುತ್ತಾ ವಿಶ್ವದ ಸಕಲ ವಸ್ತುಗಳೂ ಪರಮಾತ್ಮನನ್ನು ಒಳಗೊಂಡು ಹೊರತೋರದಿರುವಿಕೆಯ ಚಮತ್ಕಾರವು ತನ್ನಲ್ಲಿಯೂ ಅಡಗಿರುವುದನ್ನು ಗುರುತಿಸಿಕೊಂಡಿದ್ದಾಳೆ.

'ಕೋಲ ತುದಿಯ ಕೋಡಗನಂತೆ' ಮನುಷ್ಯರು ಜಗದ ಯಂತ್ರವಾದಕನಾದ ಭಗವಂತನ ಕೈಯಲ್ಲಿ ಕೇವಲ ಸೂತ್ರದ ಬೊಂಬೆಗಳೆಂಬುದನ್ನು ಬಹುಸ್ಪಷ್ಟ ಚಿತ್ರದಲ್ಲಿ ಮೂಡಿಸಿದ್ದಾಳೆ ಮಹಾದೇವಿಯಕ್ಕ. 'ಅಷ್ಟದಳ ಕಮಲದ ಆತ್ಮನೊಳಗೆ ಸೃಷ್ಟಿ ಜನಿಸಿ, ಕೂರುಮ ದಿಗುದಂತಿ ದಿಗುವಳೆಯವ ನುಂಗಿ, ನಿಜಶೂನ್ಯ ತಾನಾದ ಬಳಿಕ ತನ್ನ ತಾನರಿದ ನಿಜಪದ ಭಿನ್ನಯೋಗಕ್ಕೆ ಬಹುದೆ?' ಎಂದು ಸೃಷ್ಟಿಯ ಮೂಲವನ್ನು ಅರಿತವರಿಗೆ ಮತ್ತೆ ಬೇರೆ ಯೋಗವೇಕೆ ಎಂದು ಎಚ್ಚರಿಸಿ ಅದೇ ನಿಜವಾದ ಪರಮನಿಲುವು ಎಂದು ಹೇಳಿದ್ದಾಳೆ. 'ಆದಿ ಅನಾದಿಗಳೆಂಬೆರಡಿಲ್ಲದ ನಿರವಯವ ಶಿವ ನಿಮ್ಮ ನಿಜವನಾರಯ್ಯಾ ಬಲ್ಲರು' ಎಂದು ಸುಲಭವಾಗಿ ಯಾರಿಗೂ ನಿಲುಕದ ಪರಶಿವನ ಸ್ವರೂಪವನ್ನು ಕುರಿತು ಹೇಳಿದ್ದಾಳೆ.

ಆಧಾರ ಸ್ವಾಧಿಷ್ಠಾನ ಮಣಿಪೂರಕ ಅನಾಹತ ವಿಶುದ್ಧಿ
ಆಜ್ಞೆಯವ ನುಡಿದಡೇನು?
ಆದಿ ಅನಾದಿಯ ಶುದ್ಧಿಯ ಕೇಳಿದಡೇನು, ಹೇಳೀದಡೇನು?
ತನ್ನಲ್ಲಿದ್ದುದ ತಾನರಿಯದನ್ನಕ್ಕರ
ಉನ್ಮನಿಯ ರಭಸದ ಮನಪವನದ ಮೇಲೆ
ಚನ್ನಮಲ್ಲಿಕಾರ್ಜುನಯ್ಯನ ಭೇದಿಸಲರಿಯರು.[೯]

ಮೇಲಿನ ವಚನದಲ್ಲಿ ಆದಿ ಅನಾದಿಗಳನ್ನು ಕೇವಲ ಒಣತತ್ವಗಳೆಂದು ತಿಳಿದು ತನ್ನ ಆತ್ಮನ ಪಡೆಯದವರಿಗೆ ದೇವರ ನಿಲುವು ಅರಿಯಲು ಬಾರದೆಂದು ಸ್ಪಷ್ಟಪಡಿಸಿದ್ದಾಳೆ.

ತನ್ನ ವಿನೋದಕ್ಕೆ ತಾನೇ ಸೃಜಿಸಿದ ಸಕಲ ಜಗತ್ತ
ತನ್ನ ವಿನೋದಕ್ಕೆ ತಾನೇ ಸುತ್ತಿದನದಕ್ಕೆ ಸಕಲ ಪ್ರಪಂಚನು
ತನ್ನ ವಿನೋದಕ್ಕೆ ತಾನೇ ತಿರುಗಿಸಿದನನಂತ ಭವ ದುಃಖಗಳಲ್ಲಿ
ಇಂತೆನ್ನ ಚೆನ್ನಮಲ್ಲಿಕಾರ್ಜುನನೆಂಬ ಪರಶಿವನು
ತನ್ನ ಜಗದ್ವಿಲಾಸ ಸಾಕಾದರೆ ಮತ್ತೆ
ತಾನೆ ಪರಿವನದರ ಮಾಯಾ ಪಾಶವನು.[೧೦]

ಈ ವಚನದಲ್ಲಿ ಲೀಲಾ ವಿಲಾಸನಾದ ಶಿವನು ತನ್ನ ವಿನೋದಕ್ಕೆ ಸೃಷ್ಟಿಸಿದ ಈ ಜಗತ್ತನ್ನು ತನಗೆ ಸಾಕೆನಿಸಿದಾಗ ತಾನೇ ಅದರ ಮಾಯಾ ಪಾಶವನ್ನು ಕಳಚುವನೆಂಬ ನಂಬಿಕೆ ಕಂಡು ಬರುತ್ತದೆ. ಸೃಷ್ಟಿಲೀಲೆಯ ಹಲವು ಅದ್ಭುತ ರೂಪಗಳಲ್ಲಿ ಸಕಲ ಪ್ರಪಂಚದ ಸೃಷ್ಟಿವಲಯಗಳು

ಕೇವಲ ಒಂದು ಮಾಯಾ ಮುಸುಕಿನ ಲೀಲಾ ವಿಲಾಸವಾಗಿರುವುದು ಅರಿವು ಪಡೆದವರ ಕಣ್ಣಿಗೆ ಮಾತ್ರ ಗೋಚರವಾಗುತ್ತದೆ.

ಅಕ್ಕಗಳ ಸೃಷ್ಟಿಯ ವಚನ

ಸೃಷ್ಟಿಯ ಮೂಲವನ್ನು ಕುರಿತು ರಚಿಸಿರುವ ಅಕ್ಕಗಳ ಸೃಷ್ಟಿಯ ವಚನವು ಸೃಷ್ಟಿಯನ್ನು ಕುರಿತು ವೀರಶೈವ ಅನುಭವದ ದೃಷ್ಟಿಯನ್ನು ಸಾದ್ಯಂತವಾಗಿ ಪ್ರತಿಬಿಂಬಿಸುತ್ತದೆ. ಶರಣನ ಸ್ವರೂಪವನ್ನು ಮೊದಲು ಖಚಿತವಾಗಿ ನಿರೂಪಿಸುತ್ತಾ ನಾನಾರೆಂಬುದನ್ನರಿತ ನಂತರ ಎಲ್ಲವೂ ತನ್ನ ಅಧೀನ ಎಂಬುದನ್ನು ತಿಳಿದು ಪರಬ್ರಹ್ಮದ ಚಿಂತನೆಗೆ ತನ್ನನ್ನು ತೊಡಗಿಸಿ ಕೊಂಡಾಗ ಕಂಡುಬರುವ ತತ್ವ ವಿವೇಚನೆ ಹೀಗಿದೆ. ಶೂನ್ಯದಿಂದ ಚಿತ್‌ಶಕ್ತಿ ಉದ್ಭವಿಸಿ ಅದರ ಮುಖಾಂತರನಾದ ಬಿಂದು ಕಲೆಗಳು ತಲೆದೋರಿದವು. ಅನಂತರ ಪಂಚಸಾದಾಖ್ಯ ದೊಳಗಿಂದ ಹಾಯ್ದು ಸೃಷ್ಟಿ ನಿರ್ಮಾಣವಾಯಿತು. ಬೀಜದೊಳಗಡಗಿದ ವೃಕ್ಷದಂತೆ ಜೀವಾತ್ಮನ ಶಕ್ತಿ ಅಡಗಿರುತ್ತದೆ. ಪಂಚಲಿಂಗ, ಪಂಚಮುಖ, ಪಂಚಾಕ್ಷರಿ, ಪಂಚಕಲೆ, ಪಂಚಶಕ್ತಿ, ಪಂಚತನ್ಮಾತ್ರಂಗಳು, ಪಂಚಭೂತಗಳು ಒಂದರಿಂದೊಂದು ಉತ್ಪತ್ತಿಗೊಳ್ಳುತ್ತಾ ಒಂದೊಂದು ತತ್ವಗಳು ಐದು ತತ್ವಗಳಲ್ಲಿ ಕೂಡಿ ಇಪ್ಪತ್ತೈದು ತತ್ವಗಳಿಂದ ಕೂಡಿದ ಶರೀರವು ಚಿದಂಶಿಕನಾದ ಆತ್ಮನಿಗೆ ಅಂಗವಾಯಿತು. ಇದೇ ದೇಹಸಂಬಂಧ. ಇದಕ್ಕೆ ಜ್ಞಾನೇಂದ್ರಿಗಳು, ಕರ್ಮೇಂದ್ರಿಯಗಳು. ಪ್ರತ್ಯಾಂಗಗಳಾದವು.

ಆದಿಯನಾದಿ ನಿತ್ಯಾನಿತ್ಯವ ತಿಳಿಯಲರಿಯದೆ
ವಾಯಕಕೆ ಪರಬ್ರಹ್ಮವ ನುಡಿವ ವಾಯು ಪ್ರಾಣಿಗಳವರೆತ್ತ ಬಲ್ಲರೋ
ಆ ಪರಬ್ರಹ್ಮದ ನಿಜದ ನಿಲವ?
ಅದೆಂತೆಂದಡೆ:
ಆದಿಯೆ ದೇಹ ಅನಾದಿಯೆ ನಿರ್ದೇಹ,
ಆದಿಯೆ ಸಕಲ ಅನಾದಿಯೆ ನಿಷ್ಕಲ,
ಆದಿಯೆ ಜಡ ಅನಾದಿಯೆ ಅಜಡ,
ಆದಿಯೆ ಕಾಯ ಅನಾದಿಯೆ ಪ್ರಾಣ.
ಈ ಎರಡರ ಯೋಗವ ಭೇದಿಸಿ ತನ್ನಿಂದ ತಾನೆ ತಿಳಿದು ನೋಡಲು,
ಆದಿ ಸಂಬಂಧವಪ್ಪ ಭೂತಂಗಳು ನಾನಲ್ಲ,
ದಶವಿಧೇಂದ್ರಿಯಂಗಳು ನಾನಲ್ಲ, ದಶವಾಯುಗಳು ನಾನಲ್ಲ,
ಅಷ್ಟಮದಂಗಳು ಸಪ್ತವ್ಯಸನಂಗಳು
ಅರಿಷಡ್ವರ್ಗಂಗಳು ಷಡೂರ್ಮಿಗಳು ಷಡ್ಭ್ರಮೆಗಳು
ಷಡ್ಭಾವ ವಿಕಾರಂಗಳು ಷಟ್ಕರ್ಮಂಗಳು ಷಡ್ಧಾತುಗಳು
ತನುತ್ರಯಂಗಳು, ಜೀವತ್ರಯಂಗಳು
ಮಲತ್ರಯಂಗಳು, ಮನತ್ರಯಂಗಳು
ಗುಣತ್ರಯಂಗಳು ಭಾವತ್ರಯಂಗಳು

ಆ ಅಂಗಕ್ಕೆ ಆ ಕಲೆಗಳನೆ ಷಡ್ವಿಧ ಶಕ್ತಿಗಳೆಂದೆನಿಸಿ,
ಆ ಶಕ್ತಿಗಳಿಗೆ ಷಡ್ವಿಧ ಭಕ್ತಿಯನಳವಡಿಸಿ
ಆ ಭಕ್ತಿಗಳಿಗೆ ಭಾವ ಜ್ಞಾನ ಮನ ಬುದ್ಧಿ ಚಿತ್ತ ಅಹಂಕಾರಗಳನೆ
ಷಡ್ವಿಧ ಹಸ್ತಂಗಳೆಂದೆನಿಸಿ,
ಆ ಹಸ್ತಂಗಳಿಗೆ ಮಹಾಲಿಂಗವಾದಿಯಾದ
ಪಂಚಲಿಂಗಗಳನೆ ಷಡ್ವಿಧ ಲಿಂಗಂಗಳೆಂದೆನಿಸಿ
ಆ ಲಿಂಗಂಗಳಿಗೆ ಷಡಕ್ಷರಿಯನೆ ಷಡ್ವಿಧ ಮಂತ್ರಗಳೆಂದನಿಸಿ,
ಆ ಮಂತ್ರ ಲಿಂಗಗಳಿಗೆ ಹೃದಯಗೂಡಿ
ಪಂಚೇಂದ್ರಿಯಂಗಳನೆ ಷಡ್ವಿದ ಮುಖಂಗಳೆಂದೆನಿಸಿ
ಆ ಮುಖಂಗಳಿಗೆ ತನ್ಮಾತ್ರಂಗಳನೆ ದ್ರವ್ಯಪದಾರ್ಥಗಳೆಂದೆನಿಸಿ
ಆ ದ್ರವ್ಯ ಪದಾರ್ಥಂಗಳು ಆಯಾಯ ಮುಖದ ಲಿಂಗಾಂಗಳಲ್ಲಿ
ನಿರಂತರ ಸಾವಧಾನದಿಂದ ಅರ್ಪಿತವಾಗಿ ಬೀಗಲೊಡನೆ.
ಅಂಗಸ್ಥಲಂಗಳಡಗಿ ತ್ರಿವಿಧ ಲಿಂಗಾಂಗ ಸ್ಥಲಂಗಳುಳಿದು
ಕಾಯ ಗುರು, ಪ್ರಾಣ ಲಿಂಗ, ಜ್ಞಾನ ಜಂಗಮ–
ಗುರುವಿನಲ್ಲಿ ಶುದ್ಧ ಪ್ರಸಾದ, ಲಿಂಗದಲ್ಲಿ ಸಿದ್ಧಪ್ರಸಾದ,
ಜಂಗಮದಲ್ಲಿ ಪ್ರಸಿದ್ಧ ಪ್ರಸಾದ–ಇಂತೀ ತ್ರಿವಿಧ ಪ್ರಸಾದವು ಏಕಾರ್ಥವಾಗಿ
ಮಹಾಘನ ಪರಿಪೂರ್ಣ ಪ್ರಸಾದವಳವಟ್ಟ ಶರಣ
ಜ್ಞಾನಿಯಲ್ಲ, ಅಜ್ಞಾನಿ ಮುನ್ನವೆ ಅಲ್ಲ.
ಶೂನ್ಯವಲ್ಲ ನಿಃಶೂನ್ಯ ಮುನ್ನವೆ ಅಲ್ಲ.
ದ್ವೈತಿಯಲ್ಲ, ಅದ್ವೈತಿ ಮುನ್ನವೆ ಅಲ್ಲ.
ಇಂತೀ ಉಭಯಾತ್ಮಕ ತಾನೆಯಾಗಿ!
ಇದು ಕಾರಣ, ಇದರ ಆಗು–ಹೋಗು ಸಕೀಲ ಸಂಬಂಧವ
ಚನ್ನಮಲ್ಲಿಕಾರ್ಜುನಯ್ಯಾ ನಿಮ್ಮ ಶರಣರೆ ಬಲ್ಲರು.[೧೧]

ಈ ದೇಹಕ್ಕೆ ಶಿವ ತಾನೇ ಗುರುವಾಗಿ ಇಷ್ಟಲಿಂಗಧಾರಣ ಮಾಡುವ ಸಕೀಲ ಸಂಬಂಧದ ಮೂಲಕ ಅಂದರೆ ಷಟ್‌ಸ್ಥಲ ಆಚರಣೆಗಳ ಮೂಲಕ ಮಹಾಘನ ಪರಿಪೂರ್ಣಗೊಂಡ ಪ್ರಸಾದಿಯಾಗುವನು.

ಈ ಸೃಷ್ಟಿಯ ವಚನವು ಧರ್ಮಶಾಸ್ತ್ರದ ಚೌಕಟ್ಟಿನಲ್ಲಿ ಮೂಡಿಬಂದಿರುವುದರಿಂದ ಮಹತ್ವ ಪೂರ್ಣವಾಗಿದ್ದು. ಇಂದಿಗೂ ವೀರಶೈವರ ಪಟ್ಟಾಧಿಕಾರದ ಸಮಯದಲ್ಲಿ ಪ್ರಭುದೇವರ ಸೃಷ್ಟಿಯ ವಚನದೊಂದಿಗೆ ಇದನ್ನು ಜೋಡಿಸಿ ಪಠನಮಾಡುವುದು ರೂಢಿಯಲ್ಲಿರುವುದಾಗಿ ಎಂ.ಎಸ್. ಲಠ್ಠೆಯವರು ಹೇಳಿದ್ದಾರೆ.

ಶರಣ ಗರ್ಭದಲ್ಲಿ ಲಿಂಗ ಹುಟ್ಟಿತು, ಬ್ರಹ್ಮಾದಿ ದೇವತೆಗಳು ಹುಟ್ಟಿದರು, ಸಕಲ ಪ್ರಪಂಚ ಉದಿಸಿತು ಎಂದು ಶರಣರು ಹೇಳಿದ್ದಾರೆ. ಆದಿ ಲಿಂಗ ಅನಾದಿ ಬಸವಣ್ಣ ಎಂಬ ಹೇಳಿಕೆಯನ್ನು ಒಳಹೊಕ್ಕು ಪರೀಕ್ಷಿಸಿದರೆ ಮಾನವ ದೃಷ್ಟಿ ಮತ್ತು ಶರಣರ ಅನುಭಾವ ದೃಷ್ಟಿಗೆ ಇದು ಶಾಶ್ವತ ಸತ್ಯವೆಂದು ತೋರುತ್ತದೆ. ಅಂದರೆ ಮನುಷ್ಯ ಮೊದಲು ಹುಟ್ಟಿ, ಆ ಮನುಷ್ಯರಲ್ಲಿ ಭಕ್ತ ಹುಟ್ಟಿದ

ಮೇಲೆ ದೇವರು, ದೇವರ ಕಲ್ಪನೆ ಹುಟ್ಟಿದೆ. 'ಹೆಸರಿಲ್ಲದೆ ಲಿಂಗಕ್ಕೆ ಹೆಸರನಿಟ್ಟವರಾರು' ಎಂಬ ಪ್ರಭುದೇವರ ಮಾತನ್ನು ಇಲ್ಲಿ ಸ್ಮರಿಸಬಹುದಾಗಿದೆ. ಹಾಗೆಯೇ ಕೆಳಗಿನ ವಚನವನ್ನೂ ಕೂಡ.

ಆದಿಯಾಧಾರವಿಲ್ಲದಂದು, ಹಮ್ಮು ಬಿಮ್ಮುಗಳಿಲ್ಲದಂದು,
ಸುರಾಳ ನಿರಾಳವಿಲ್ಲದಂದು, ಶೂನ್ಯ ನಿಃಶೂನ್ಯವಿಲ್ಲದಂದು,
ಸಚರಾಚರವೆಲ್ಲಾ ರಚನೆಗೆ ಬಾರದಂದು
ಗೂಹೇಶ್ವರನ ಶರಣನುದಯಿಸಿದನಂದು.[೨೨]

ಗ್ರಹ ನಕ್ಷತ್ರಾದಿಗಳು ರೂಪುಗೊಳ್ಳುವ ಮುನ್ನ ಜ್ಯೋತಿರ್ಮಯ ನೀಹಾರಿಕೆಯ ಸ್ಥಿತಿಯಲ್ಲಿದ್ದ ವಿಶ್ವವು ಕ್ರಮೇಣ ವಿವಿಧ ಬ್ರಹ್ಮಾಂಡಗಳಾಗಿರುವುದೆಂದು ವಿಜ್ಞಾನಿಗಳು ಕೂಡ ಹೇಳುತ್ತಾರೆ. ಚಿತ್‌ಶಕ್ತಿಯಿಂದ ವಿರಾಟ್ ರೂಪದ ದೈವದ ಕಲ್ಪನೆ ಮೂಡಿಬಂದು ನಿರಾಕಾರ ವಾದುದಕ್ಕೆ ಆಕಾರ ದೊರೆತು ಉಪಾಸನೆಗೆ ಅನುಕೂಲವಾಗಿದೆ ಎನ್ನಬಹುದು. ಸೃಷ್ಟಿಯೆಲ್ಲ ಆತನ ದೇಹದ ಭಾಗವೆಂದು ಪರಿಗಣಿಸಲಾಗಿತ್ತು. ಆದರೆ ಈ ವಿರಾಟ್ ಪುರುಷತ್ವವು ಕ್ರಮೇಣವಾಗಿ ಅವರವರ ಭಾವದಂತೆ ಬ್ರಹ್ಮ ವಿಷ್ಣು ಶಿವ ರೂಪಗಳನ್ನು ಪಡೆದು ಶಿವಶಕ್ತಿ ಮೇಲೆನಿಸಿ ಉಳಿದವರೆಲ್ಲ ಆತನನ್ನು ಅನುಸರಿಸಿಕೊಂಡಿರುವಂತೆ ನಂಬಿಕೆ ಬಂದಿದೆ. ಎಲ್ಲ ಶಕ್ತಿಗಳೂ ಆತನಿಗೆ ಅಧೀನ, ಆತನಿಗೇ ಸೇರಿದವು. ಎಲ್ಲ ದೇವತೆಗಳ ಶಕ್ತಿಗೂ ಮಿಗಿಲಾದ ಶಕ್ತಿಯೊಂದಿದ್ದು ಅದೇ ಪರಶಿವನೆಂದು ಸೃಷ್ಟಿಯಕರ್ತ ಶಿವನೇ ಎಂದು ನಂಬಲಾಗಿದೆ. ವಿಶ್ವದ ಅಣುರೇಣುಗಳಲ್ಲಿಯೂ ಅಡಗಿರುವ ಪರಮಾತ್ಮ ಮುಗಿಲ ಮರೆಯ ಮಿಂಚಿನಂತೆ ಅವ್ಯಕ್ತನಾಗಿರುವನೆಂದು ತಿಳಿಯಲಾಗಿದೆ. ಶಿವನ ಸೃಷ್ಟಿಯೂ ಕೂಡ ಅತ್ಯಂತ ಚಮತ್ಕಾರ ಪೂರ್ಣವಾಗಿ ಕಾಣುತ್ತದೆ. 'ಶರಧಿಯ ಮೇಲೆ ಧರೆಯ ಕರಗದಂತಿರಿಸಿದೆ. ಗದ್ದುಗೆ ಬೋದುಗೆ ಇಲ್ಲದಂತಿರಿಸಿದೆ. ಎಲೆ ಮೃಡನೇ ನೀನಲ್ಲದೆ ಉಳಿದ ದೈವಂಗಳಿಗಹುದೇ ರಾಮನಾಥಾ' ಎಂದು ಉದ್ಗಾರ ಮಾಡಿದ್ದಾರೆ. ಇದು ಭೂಮಿಯ ಗುರುತ್ವಾಕರ್ಷಣ ಶಕ್ತಿಯ ಬಗ್ಗೆ ಕೂಡ ಶರಣರು ಚಿಂತಿಸಿರುವುದನ್ನು ತೋರಿಸುತ್ತದೆ. ಈ ವಿರಾಟ್ ಶಕ್ತಿಯ ನಿಷ್ಕಲ ಗುಣವನ್ನು ಕುರಿತು ಪ್ರಮುಖ ವಚನಕಾರರಾದ ಅಲ್ಲಮ, ಮಹಾದೇವಿಯಕ್ಕ ಮುಂತಾದವರು ಗಂಭೀರ ವಿವೇಚನೆ ನಡೆಸಿರುವುದು ವಚನಗಳಲ್ಲಿ ಕಂಡುಬರುತ್ತದೆ.

ಶಿವನು ತನ್ನ ಶರೀರಿದಿಂದ ಹುಟ್ಟಿಸಿದ ಅನಂತಕೋಟಿ ಬ್ರಹ್ಮಾಂಡ ಜೀವರಾಶಿಗಳು ನೋಡ ನೋಡುತ್ತಾ ಸಕಲ ವಿಸ್ತಾರದ ರೂಪವನ್ನು ತಾಳಿ ಬಗೆಬಗೆಯ ವರ್ಣ ಆಕಾರಗಳಲ್ಲಿ ಸೃಷ್ಟಿ ವಿಲಾಸದ ಲೀಲೆಯಾಗಿ ಶಾಂತರೂಪದಿಂದ ರುದ್ರರೂಪದವರೆಗಿನ ಪ್ರಕೃತಿಯ ಹಲವು ತಾನ ವಿತಾನಗಳಲ್ಲಿ ವಿಶ್ವಮಯವಾಗಿ ತೋರಿ ಅಡಗುವ ಬೃಹತ್ತತೆಯಲ್ಲಿ ಮನುಷ್ಯ ಕೇವಲ ಬಿಂದುರೂಪ.

ಮಾಯಾವಾದ

ಪುರುಷನ ಮುಂದೆ ಮಾಯೆ ಸ್ತ್ರೀಯೆಂಬ ಅಭಿಮಾನವಾಗಿ ಕಾಡುವುದು.
ಸ್ತ್ರೀಯ ಮುಂದೆ ಮಾಯೆ ಪುರುಷನೆಂಬ ಅಭಿಮಾನವಾಗಿ ಕಾಡುವುದು.
ಲೋಕವೆಂಬ ಮಾಯೆಗೆ ಶರಣ ಚಾರಿತ್ರ್ಯ ಮರುಳಾಗಿ ತೋರುವುದು.
ಚನ್ನಮಲ್ಲಿಕಾರ್ಜುನನೊಲಿದ ಶರಣಂಗೆ
ಮಾಯೆಯಿಲ್ಲ, ಮರಹಿಲ್ಲ, ಅಭಿಮಾನವೂ ಇಲ್ಲ.[೨೩]

ಜಗತ್ತಿನಲ್ಲೇ ತೀರ ಅಪರೂಪದ ಹಾಗೂ ಅತ್ಯಂತ ವಿಶಿಷ್ಟವಾದ ಇತಿಹಾಸವನ್ನು ನಿರ್ಮಿಸಿದ ಮಹದೇವಿಯಕ್ಕ ತಾನು ಗೆದ್ದ ಮಾಯೆಯ ಬಗ್ಗೆ ಬಹಳ ಸ್ಪಷ್ಟವಾದ ಮಾತುಗಳನ್ನೇ ಹೇಳಿದ್ದಾಳೆ. ಲೋಕವೆಂಬ ಮಾಯೆಗೆ ಶರಣ ಚಾರಿತ್ರ್ಯ ಮರುಳಾಗಿ ತೋರಿದರೆ; ಪ್ರಪಂಚದ ಮಾಯೆಯನ್ನು ಗೆದ್ದ ಮಹಾದೇವಿಯಕ್ಕನಿಗೆ ಲೋಕದ ಹಂಗೇನು? ಚನ್ನಮಲ್ಲಿಕಾರ್ಜುನ ದೇವರ ಬೆಳಗನುಟ್ಟು ಲಜ್ಜೆಗೆಟ್ಟವಳಿಗೆ ಉಡುಗೆ ತೊಡುಗೆಯ ಹಂಗೇಕ ಮರುಳೆ? ಎಂದು ಅಜ್ಞಾನಿಗಳ ಮರುಳು ತನಕ್ಕೆ ಹೇಸಿ ತನ್ನ ಛಲದ ಹಾದಿಯಲ್ಲಿ ನಡೆದವಳು ಮಹಾದೇವಿಯಕ್ಕ.

ಮಾಯೆಯೆಂದರೆ ಹೆಣ್ಣು ಹೊನ್ನು ಮಣ್ಣು ಎಂದು ಭಾವಿಸಿದ್ದ ಭ್ರಾಂತಿಗಳಿಗೆ ವಿರುದ್ಧವಾಗಿ ವಚನಕಾರರು ಹೆಣ್ಣು ಮಾಯೆಯಲ್ಲ. ಗಂಡು ಮಾಯೆಯಲ್ಲ, ಮನದ ಮುಂದಣ ಆಶೆಯೇ ಮಾಯೆ ಎಂದು ಸ್ಪಷ್ಟಪಡಿಸಿ ತೋರಿಸಿದರು. ಅದುವರೆಗಿನ ದರ್ಶನ ಶಾಸ್ತ್ರದ ಪ್ರಕಾರ ಹೆಣ್ಣು ಹೊನ್ನುಗಳನ್ನೇ ಮಾಯೆಯೆಂದು ತಿಳಿದು ಅವುಗಳನ್ನು ಗೆಲ್ಲಲೂ ಆಗದೆ, ಬಿಡಲೂ ಆಗದೆ ಮನುಷ್ಯ ಒಂಟಿತನದಲ್ಲಿ ಬದುಕಲೂ ಆಗದ ಸಾಯಲೂ ಆಗದ ಪರಿಸ್ಥಿತಿಯಲ್ಲಿ ಕಂಗಾಣ ದವನಾಗಿದ್ದ. ಮನದ ಮುಂದಣ ಆಶೆಯೇ ಮಾಯೆ ಎಂಬ ಅರಿವು ಮೂಡಿದ ಮೇಲೆ ಸಂಸಾರ ಒಂದು ಬಂಧನವಾಗದೆ ಸಾಧನೆಯ ರಂಗವಾಯಿತು; ಪರಸ್ಪರ ಪೂರಕವಾಗಬಲ್ಲ ಒಂದು ಶಕ್ತಿಯಾಯಿತು. ನಿಜವಾದ ಮಾಯೆ, ಮೋಹ ಯಾವುದು ಎಂಬುದು ಅನುಭವಕ್ಕೆ ಬಂದ ಮೇಲೆ ಅದನ್ನು ಗೆಲ್ಲುವ ಮಾರ್ಗವೂ ಸ್ಪಷ್ಟವಾಗಿ ಕಾಣತೊಡಗಿತು.

ಮಾಯೆಯನ್ನು ಸಾಮನ್ಯವಾಗಿ ಹೆಣ್ಣಿನ ಭಾವದಲ್ಲಿ, ರಕ್ಕಸಿಯ ಭಾವದಲ್ಲಿ ಪ್ರಾಪಂಚಿಕ ಸಂಸಾರ ವಿಷಯಗಳ ರೂಪದಲ್ಲಿ ಕಾಣಲಾಗಿದ್ದುದರ ನೆರಳು ವಚನ ಸಾಹಿತ್ಯದಲ್ಲೂ ಕಂಡು ಬಂದಿದ್ದರೂ ಕೂಡ ಮನದ ಮುಂದಣ ಆಶೆಯೇ ಮಾಯೆ ಎಂಬ ಖಚಿತವಾದ ಅಭಿಪ್ರಾಯವನ್ನು ಅಲ್ಲಮಪ್ರಭು, ಮಹಾದೇವಿಯಕ್ಕ ಮುಂತಾದ ಕೆಲವು ಪ್ರಮುಖ ವಚನಕಾರರಲ್ಲಿ ಕಾಣುತ್ತೇವೆ. ಮಾಯೆಯನ್ನು ಕುರಿತು ಮಹದೇವಿಯಕ್ಕ ಅತ್ಯಂತ ನಿರ್ದಿಷ್ಟವಾದ ಶಬ್ದಗಳಲ್ಲಿ ನಿರೂಪಣೆ ಮಾಡಿರುವುದೇ ಅಲ್ಲದೆ ಜಗದ ಜನರೆಲ್ಲ ಈ ಮಾಯೆಗೆ ಸಿಕ್ಕಿ ನರಳುವ ಬಗ್ಗೆ ಸೂಕ್ಷ್ಮವಾದ ವಿಡಂಬನೆಯನ್ನೂ ಮಾಡಿದ್ದಾಳೆ. ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡುವ ಮಾಯೆಯನ್ನು ಇಕ್ಕಿದವನು ಶಿವ, ಅದನ್ನು ಗೆಲ್ಲಲು ಯಾರಿಗೂ ಬಾರದು. ಹಿಂದಣ ಹಳ್ಳ, ಮುಂದಣ ತೊರೆಯಂತೆ ಮಾಯೆ ಎಲ್ಲರನ್ನೂ ನಾಶಪಡಿಸುತ್ತಿದೆ. ಅರಿದವರ ಅರಿವನ್ನು ಮರೆಗೊಳಿಸುವ, ಕೂಡುವ ಭಾವವನ್ನು ಮರೆಮಾಡುವ, ನೋಡುವ ದೃಷ್ಟಿಯನ್ನು ಮರೆ ಮಾಡಿಸುವ ಮಾಯೆಯ ಶಕ್ತಿಯನ್ನು ಅತಿಗಳೆಯುವುದು ಸಾಮಾನ್ಯರಿಗೆ ಸಾಧ್ಯವಿಲ್ಲ. ಇಂತಹ ಮಾಯೆಯಿಂದ ತನ್ನನ್ನು ಕಾಯಯ್ಯಾ ಎಂದು ಅರಿವಿಗೆ ಶರಣಾಗಿದ್ದಾಳೆ ಅಕ್ಕ, ಎನ್ನ ಸುತ್ತಿದ ಪ್ರಪಂಚನ ಬಿಡಿಸಾ, ನಿಮ್ಮ ಧರ್ಮ! ಎಂದು ಮಾಯಾಪಾಶವೆನಿಸಿದ ಪ್ರಪಂಚದ ಬಂಧನದಿಂದ ಬಿಡುಗಡೆ ಪಡೆಯಲು ತೀವ್ರ ಪ್ರಯತ್ನ ಮಾಡಿದ್ದಾಳೆ. ಮಾಯದ ಸಂಸಾರದ ಪಾಶವನ್ನು ಕಿತ್ತೆಸೆದು 'ನಿಮ್ಮ ಹೊದ್ದುವಂತೆ ಮಾಡಾ ನಿಮ್ಮ ಧರ್ಮ!' ಎಂದು ಚಿಂತಿಸುವುದರೊಂದಿಗೆ ದೇವ ನೊಲುಮೆಯನ್ನು ಪಡೆದು ಅಮೃತದ ಆಪ್ಯಾಯನವಾಗಿ ಮಾಯೆಯನ್ನು ಮೆಟ್ಟಿ ನಿಲ್ಲುವ ಶಕ್ತಿಯನ್ನು ಸಾಧಿಸಿಕೊಂಡಿದ್ದಾಳೆ. ಹೆಣ್ಣು ತಾನು ಹೆಣ್ಣು ಎಂದು ಭಾವಿಸಿಕೊಂಡಾಗ ಗಂಡಿನ ಸೂತಕ, ಗಂಡಿಗೆ ತಾನು ಗಂಡು ಎಂದು ಭಾವಿಸಿಕೊಂಡಾಗ ಹೆಣ್ಣಿನ ಸೂತಕ, ಇಂತಹ ಭಾವನೆಗಳ ಸೂತಕ ಮನದಲ್ಲಿ ಹಿಂಗಿದಾಗ

ತನುವಿನ ಸೂತಕವೇ ಕೊನೆಮೊದಲಿಲ್ಲದೆ ಪರಿಹಾರ ವಾಗಬಹುದಾಗಿದ್ದರೂ ಜಗವೆಲ್ಲ ಇದರಲ್ಲಿ ಮರುಳಾಗಿಹೋಗಿದೆ. ಆದರೆ ಮಹದೇವಿಯಕ್ಕನಿಗೆ ತನ್ನ ಚನ್ನಮಲ್ಲಿಕಾರ್ಜುನ ನೊಬ್ಬನೇ ಗಂಡು ರೂಪಾಗಿದ್ದು, ಜಗವೆಲ್ಲ ಹೆಣ್ಣುರೂಪದ ಮಾಯಾವೇಷವನ್ನು ತಾಳಿದ್ದರೂ ಕೂಡ ಆತ ಯಾವುದಕ್ಕೂ ನಿಲುಕದ ನಿರಾಳ ನಿಃಶೂನ್ಯ ನಾಗಿದ್ದಾನೆ. ಆತನ ಪರಿಣಾಮಕ್ಕೆ ಒಳಗಾದ ಮಹದೇವಿಯಕ್ಕನಿಗೆ ಆತ ಹುಟ್ಟು ಹೊರೆಯ ಕಟ್ಟಳೆಯ ಕಳೆದು ಹೊನ್ನು ಮಣ್ಣಿನ ಮಾಯೆಯ ಮಾಣಿಸಿ, ತನುವಿನ ಲಜ್ಜೆಯ ನಿಳುಹಿ ಮನದ ಕತ್ತಲೆಯನ್ನು ಕಳೆದಿದ್ದಾನೆ. ತನ್ನ ಭವಬಂಧನವನ್ನು ಕಳೆದ ಪರಶಿವನ ಘನವನ್ನು ಉಪಮಿಸುವ ಶಕ್ತಿ ಸಾಲದೆ ಮಹದೇವಿಯಕ್ಕ ಆತನ ಶ್ರೀಪಾದದಲ್ಲಿ ಸರ್ವಾರ್ಪಣವಾಗಿ ಅಡಗಿ ಹೋಗಿದ್ದಾಳೆ. ಇಂತಹ ಗೆಲುವಿಗೆ ದಾರಿ ತೋರಲು ಕಾರಣನಾದ ಬಸವಣ್ಣನ ದಯೆಯನ್ನು ಕುರಿತು,

ಕಾಮಾರಿಯ ಗೆಲಿದೆನು ಬಸವಾ ನಿಮ್ಮ ದಯದಿಂದ,
ಸೋಮಧರನ ಹಿಡಿತಪ್ಪೆನು ಬಸವಾ ನಿಮ್ಮ ಕೃಪೆಯಿಂದ,
ನಾಮದಲ್ಲಿ ಹೆಂಗೂಸೆಂಬ ಹೆಸರಾದಡೇನು?
ಭಾವಿಸಲು ಗಂಡುರೂಪು, ಬಸವಾ ನಿಮ್ಮ ದಯದಿಂದ
ಅತಿಕಾಮಿ ಚನ್ನಮಲ್ಲಿಕಾರ್ಜುನಂಗೆ ತೊಡರಿಕ್ಕಿ
ಎರಡುವರಿಯದೆ ಕೂಡಿದೆನು, ಬಸವಾ ನಿಮ್ಮ ಕೃಪೆಯಿಂದ[೧೪]

ಎಂದು ಕೇಳಿ, ಮಾಯೆಯನ್ನು ಗೆಲ್ಲುವ ತನ್ನ ಛಲವನ್ನು, ಆತ್ಮವಿಶ್ವಾಸವನ್ನು ನಾಮದಲ್ಲಿ ಹೆಂಗೂಸಾದರೂ ಭಾವಿಸಲು ಗಂಡು ರೂಪು ಪಡೆದುಕೊಂಡಿರುವ ತನ್ನ ಅತ್ಯಂತ ಉನ್ನತವಾದ ಸಾಧನೆಯನ್ನೂ ತೋರಿಸಿದ್ದಾಳೆ. ಬಿಟ್ಟರೂ ಬಿಡದ ಮಾಯೆ ಸಾಮಾನ್ಯರಿಗೆ ಅಳವಲ್ಲವೆಂದು ಹೇಳುವ ಈ ಕೆಳಗಿನ ವಚನದಲ್ಲಿ,

ಬಿಟ್ಟೆನೆಂದಡೆ ಬಿಡದೀ ಮಾಯೆ, ಬಿಡದಿದ್ದಡೆ ಬೆಂಬತ್ತಿತ್ತು ಮಾಯೆ
ಯೋಗಿಗೆ ಯೋಗಿಣಿಯಾಯಿತ್ತು ಮಾಯೆ,
ಸವಣಂಗೆ ಸವಣಿಯಾಯಿತ್ತು ಮಾಯೆ
ಯತಿಗೆ ಪರಾಕಿಯಾಯಿತ್ತು ಮಾಯೆ
ನಿನ್ನ ಮಾಯೆಗೆ ನಾನಂಜುವಳಲ್ಲ,
ಚನ್ನಮಲ್ಲಿಕಾರ್ಜುನ ದೇವಾ, ನಿಮ್ಮಾಣೆ![೧೫]

ಎಂದು ಮಾಯಾಶಕ್ತಿಗೆ ಸಿಲುಕಿದವರನ್ನು ಸೂಕ್ಷ್ಮವಾಗಿ ವಿಡಂಬಿಸುತ್ತಾ ಇಷ್ಟೆಲ್ಲ ಶಕ್ತಿಯುತವಾದ ಮಾಯೆಗೆ ತಾನು ಅಂಜದೆ ದೃಢವಾಗಿರುವುದನ್ನು ಸಾಬೀತು ಪಡಿಸಿದ್ದಾಳೆ. ಎಲ್ಲರನ್ನು ಬಿಟ್ಟ ಯತಿಗೂ ಕೂಡ ಮಾಯಾವಿಲಾಸ ಪರಾಕಿಯಾಗಿ ಕಾಡುವುದನ್ನು ಬಹಳ ನವಿರಾಗಿ ಹೇಳಿದ್ದಾಳೆ. ಒಟ್ಟಿನಲ್ಲಿ ಮಾಯೆಯದು ಕಾಡುವ ಪ್ರವೃತ್ತಿ, ಇದರಿಂದ ಬಿಡಿಸಿಕೊಂಡು ಪಾರಾಗಲು ಅರಿವಿನ ಶರಣುತನವೇ ದಾರಿ. ಸವಣನಾದರೇನು? ಯತಿಯಾದರೇನು? ಮಾಯೆಗೆ ಶರಣಾದವರೇ ಎಲ್ಲ ಲೋಕದ ಜನರನ್ನು ಮಂದೆಗಟ್ಟಿ ಹಿಂದೆ ಬೆಂಗೋಲನೆತ್ತಿ ಹಿಡಿದು ಕಾಡುತ್ತಾ ಅಟ್ಟಿಸುತ್ತಾ ಬರುವ ಮಾಯೆಯಿಂದ ವಿಮುಕ್ತಿ ಪಡೆಯಲು ತೀವ್ರ ಸಂಕಲ್ಪ ನಿಗ್ರಹ ಶಕ್ತಿಗಳು ಅತ್ಯಾವಶ್ಯಕ. ಇಂತಹ ಮಾಯೆಯನ್ನು ಅಂಜದೆ ಗೆಲ್ಲುವ ಪರಿಯನ್ನು ಮಾರ್ಗವನ್ನು ಮಹದೇವಿಯಕ್ಕ ತೋರಿಸಿಕೊಟ್ಟಿದ್ದಾಳೆ.

ಮಾಯೆಯ ವಿವಿಧ ರೂಪಗಳನ್ನು ಕುರಿತು ಬಸವಣ್ಣನವರ ವಚನವೊಂದರಲ್ಲಿ ಕಂಡುಬರುವ ವ್ಯಾಖ್ಯಾನ ಕೆಳಗಿನಂತಿದೆ:

ಜನಿತಕ್ಕೆ ತಾಯಾಗಿ ಹೆತ್ತಳು ಮಾಯೆ;
ಕೊಟಕ್ಕೆ ಸ್ತ್ರೀಯಾಗಿ ಕೂಡಿದಳು ಮಾಯೆ;
ಮೋಹಕ್ಕೆ ಮಗಳಾಗಿ ಹುಟ್ಟಿದಳು ಮಾಯೆ,
ಇದಾವ ಪರಿಯಲ್ಲಿ ಕಾಡಿಹುದು ಮಾಯೆ!
ಈ ಮಾಯೆಯ ಕಳೆವಡೆ ಎನ್ನಳವಲ್ಲ
ನೀವೆ ಬಲ್ಲಿರಿ ಕೂಡಲಸಂಗಮದೇವಾ![೧೬]

ಮನುಷ್ಯ ಜೀವನದ ವಿವಿಧ ಘಟ್ಟಗಳಲ್ಲಿ ಉಂಟಾಗುವ ಮಾಯಾಮೋಹದ ಮುಸುಕನ್ನು ಕಳೆದು ಬಿಡುಗಡೆ ಪಡೆಯುವುದು ಸುಲಭವಲ್ಲ. ಇಂತಹ ಮಾಯೆಯನು ಪ್ರಭುದೇವರು ಕಂಗಳೊಳಗೇ ಇರುವ ಕತ್ತಲೆ ಎಂದು ಸೂತ್ರೀಕರಿಸಿದರು. ಕತ್ತಲೆ ತಿಳಿಯದವರೆಗೆ ಬೆಳಗಿನೊಳಗಣ ಶೃಂಗಾರ ಅರಿವಿಗೆಬಾರದು. ಅಂತಹ ಪರಿಸ್ಥಿತಿಯಲ್ಲಿ ಸಿಲುಕಿದ ಮನಕ್ಕೆ ದುಗುಡವೇ ಆಹಾರವಾಗಿ ನಿರ್ಣಯ ಶಕ್ತಿಯನ್ನು ಕಳೆದುಕೊಂಡು ಬಿಡುತ್ತದೆ. 'ಅನಲನ ಕಾಲು ನಾಲಗೆಯಂತೆ, ಹೆರೆಹಿಂಗದ ಮಾಯೆ ಭಾವಿಸಿದಲ್ಲಿಯೆ ನಿಂದಿತ್ತು ಕಾಲಾಂತಕ ಭೀಮೇಶ್ವರ ಲಿಂಗವೆಂದಲ್ಲಿಯೇ ಹೆರೆ ಹಿಂಗಿತ್ತು ಮಾಯೆ!'[೧೭] ಎಂದು ಢಕ್ಕೆಯ ಬೊಮ್ಮಣ್ಣನ ವಚನದಲ್ಲಿ ಮಾಯೆಯ ಸ್ವರೂಪವನ್ನು ಕಾಣಲಾಗಿದೆ.

ಚಿದ್ವಿಲಾಸದ ಮುಂದೆ ಇದಿರಿಟ್ಟು ತೋರುವ
ಮಾಯಾ ವಿಲಾಸದ ಹೊದ್ದಿಗೆ ಇದೇನೊ![೧೮]

ಎಂದು ತೋಂಟದ ಸಿದ್ಧಲಿಂಗೇಶ್ವರರ ವಚನದಲ್ಲಿ ಮಾಯಾವಿಲಾಸಕ್ಕೆ ವಿಭ್ರಮ ಗೊಂಡರೂ ಅದರಲ್ಲಿ ಸಿಲುಕದೆ ವಸ್ತುನಿಷ್ಠವಾಗಿ ದೂರನಿಂತು ಅದನ್ನು ಕಾಣುವ ವಿಡಂಬಿಸುವ ಕೆಚ್ಚೆದೆ ಶರಣರಲ್ಲಿದ್ದುದು ಸ್ಪಷ್ಟವಾಗಿ ಕಂಡುಬರುತ್ತದೆ.

ಅಲ್ಲೆಂದಡೆ ಉಂಟೆಂಬುದೀ ಮಾಯೆ,
ಒಲ್ಲನೆಂದಡೆ ಬಿಡದೀ ಮಾಯೆ, ಎನಗಿದು ವಿಧಿಯೆ!
ಚನ್ನಮಲ್ಲಿಕಾರ್ಜುನಯ್ಯಾ,
ಒಪ್ಪಿ ಮರೆವೊಕ್ಕಡೆ ಮತ್ತುಂಟೆ? ಕಾಯಯ್ಯಾ ಶಿವಧೋ![೧೯]

ಮೊಂಡುತನದ ಮಾಯೆ ಅಲ್ಲವಾದುದನ್ನು ಹೌದೆಂಬಂತೆ ತೋರುತ್ತದೆ. ಬೇಡವೆಂದರೂ ಬಿಡದೆ ಬೆಂಬತ್ತಿ ಕಾಡಿಸುತ್ತದೆ. ಸೋಲನ್ನೊಪ್ಪಿ ಚನ್ನಮಲ್ಲಿಕಾರ್ಜುನನ ಮೊರೆವೋಗುವು ದರಿಂದ ಮಾತ್ರ ಈ ಮಾಯೆಯಿಂದ ಬಿಡುಗಡೆ ಸಾಧ್ಯ. ಈ ಮಾಯೆಯಿಂದ ಕಾಯುವವನು ಆತನೊಬ್ಬನೇ ಎಂಬುದು ಅಕ್ಕನ ನಂಬಿಕೆ.

ಮಾಹಾದೇವಿಯಕ್ಕನ ಮಾಯಾವಾದದಲ್ಲಿ ಮಾಯೆ ಕಾಯ ಪ್ರಾಣಗಳನ್ನು ಆವರಿಸುವುದೇ ಅಲ್ಲದೆ ಅರಿವು ಮರೆವುಗಳನ್ನೂ ಬಿಡದೆ ಕಾಡುತ್ತದೆ. ಅರಿವಿಗೆ ಮರೆವಾಗಿ, ಮರೆವಿಗೆ ಅರಿವಾಗಿ ಕಾಡುವದು ಅದರ ಗುಣ. ಅರಿದವರಿಗೆ ಅರಿತೆನೆಂಬ ಭಾವನೆಯೇ ಮಾಯೆಯಾದರೆ, ಮರೆತವರಿಗೆ ಮರೆತೆನೆಂಬುದೇ ಮಾಯೆಯಾಗುತ್ತದೆ. ಇದನ್ನು ಮಾಣಿಸಿ ಮಾಯಾ

ಕೋಲಾಹಲನಾಗಬಲ್ಲವನಿಗೆ ಮಾತ್ರ ಇದನ್ನು ಮೀರಿ ನಿಲ್ಲುವುದು ಸಾಧ್ಯವಾಗುತ್ತದೆ. ಶಿವನೇ ಒಡ್ಡಿರುವಂಥದ್ದು ಈ ಮಾಯದ ಬಲೆ ಎಂದು ಅಕ್ಕ ಈ ಮುಂದಿನ ವಚನದಲ್ಲಿ ಹೇಳಿದ್ದಾಳೆ.

ಕಾಯಕ್ಕೆ ನೆಳಲಾಗಿ ಕಾಡಿತ್ತು ಮಾಯೆ,
ಪ್ರಾಣಕ್ಕೆ ಮನವಾಗಿ ಕಾಡಿತ್ತು ಮಾಯೆ,
ಮನಕ್ಕೆ ನೆನಹಾಗಿ ಕಾಡಿತ್ತು ಮಾಯೆ,
ನೆನಹಿಂಗೆ ಅರುಹಾಗಿ ಕಾಡಿತ್ತು ಮಾಯೆ,
ಅರುಹಿಂಗೆ ಮರಹಾಗಿ ಕಾಡಿತ್ತು ಮಾಯೆ,
ಜಗದ ಜಂಗುಳಿಗೆ ಬೆಂಗೋಲನೆತ್ತಿ ಕಾಡಿತ್ತು ಮಾಯೆ,
ಚನ್ನಮಲ್ಲಿಕಾರ್ಜುನಾ,
ನೀನೊಡ್ಡಿದ ಮಾಯೆಯನಾರೂ ಗೆಲಬಾರದು[೨೦]

ಇಂದ್ರ, ಚಂದ್ರ, ಹರಿ, ಅಜರನ್ನೂ ಬಿಡದೆ ನುಂಗಿದ ಮಾಯೆ ಈ ಕೀಳು ಭುವನವನ್ನು ಆರಡಿಗೊಂಡು ನುಂಗುತ್ತಿದೆಯೆಂದು ಕೆಳಗಿನ ವಚನದಲ್ಲಿ ಹೇಳಲಾಗಿದೆ:

ಹರಿಯ ನುಂಗಿತ್ತು ಮಾಯೆ, ಅಜನ ನುಂಗಿತ್ತು ಮಾಯೆ;
ಇಂದ್ರನ ನುಂಗಿತ್ತು ಮಾಯೆ, ಚಂದ್ರನ ನುಂಗಿತ್ತು ಮಾಯೆ;
ಬಲ್ಲೆನೆಂಬ ಬಲುಗೈಯರ ನುಂಗಿತ್ತು ಮಾಯೆ,
ಅರಿಯೆನೆಂಬ ಅಜ್ಞಾನಿಗಳ ನುಂಗಿತ್ತು ಮಾಯೆ,
ಈರೇಳು ಭುವನವನಾರಡಿಗೊಂಡಿತ್ತು ಮಾಯೆ,
ಚನ್ನಮಲ್ಲಿಕಾರ್ಜುನಯ್ಯಾ, ಎನ್ನ ಮಾಯವ ಮಾಣಿಸಾ, ಕರುಣಿ![೨೧]

ಮಾಯೆಯೊಳಗಾದವನು ನಿದ್ರೆಯೊಳಗಾದಂತೆ ಬುದ್ಧಿಹೀನನಾಗುತ್ತಾನೆ. ಇದನ್ನು ಮಾಣಿಸಲು ಶಿವಕಾರುಣ್ಯವೇ ಸಾಧನವೆಂದು ಹೇಳಿದ್ದಾಳೆ. ಮಾಯೆಯಿಂದ ಉಂಟಾಗುವ ಮದವನ್ನು ಮುರಿಯಲು, ಕಾಯದ ಕತ್ತಲೆಯನ್ನು ಕಳೆಯಲು, ಜೀವನ ಜಂಜಾಟವನ್ನು ಮಾಣಿಸಲು ಚನ್ನಮಲ್ಲಿಕಾರ್ಜುನನಲ್ಲಿ ಮನಸ್ಸನ್ನು ನೆಲೆ ನಿಲ್ಲಿಸುವುದೇ ಅಕ್ಕನ ಧ್ಯೇಯವಾಗಿದೆ;

ಎನ್ನ ಮಾಯದ ಮದವ ಮುರಿಯಯ್ಯಾ
ಎನ್ನ ಕಾಯದ ಕತ್ತಲೆಯ ಕಳೆಯಯ್ಯಾ
ಎನ್ನ ಜೀವದ ಜಂಜಡವ ಮಾಣಿಸಯ್ಯಾ
ಎನ್ನ ದೇವ ಚನ್ನಮಲ್ಲಿಕಾರ್ಜುನಯ್ಯಾ
ಎನ್ನ ಸುತ್ತಿದ ಪ್ರಪಂಚವ ಬಿಡಿಸಾ, ನಿಮ್ಮ ಧರ್ಮ![೨೨]

ತನ್ನ ಕಾಯ ಮಣ್ಣು, ಜೀವ ಬಯಲು ಎಂಬ ತಿಳಿವಳಿಕೆ ಮೂಡಿದ ಮೇಲೆ ಅಕ್ಕನಿಗೆ ಚನ್ನಮಲ್ಲಿಕಾರ್ಜುನನನ್ನು ನೆನೆಯುವುದೇ ಏಕೈಕ ಗುರಿಯಾಗಿದೆ.

ಎನ್ನ ಕಾಯ ಮಣ್ಣು, ಜೀವ ಬಯಲು
ಆವುದ ಹಿಡಿವೆನಯ್ಯಾ ದೇವಾ?
ನಿಮ್ಮನಾವ ಪರಿಯಲ್ಲಿ ನೆನೆವೆನಯ್ಯಾ
ಎನ್ನ ಮಾಯೆಯನು ಮಾಣಿಸಯ್ಯಾ
ಚನ್ನಮಲ್ಲಿಕಾರ್ಜುನಾ[೨೩]

ನೋಡಿಹೆನೆಂದಡೆ ದೃಷ್ಟಿ ಮರೆಯಾಯಿತ್ತು
ಕೂಡಿಹೆನೆಂದಡೆ ಭಾವ ಮರೆಯಾಯಿತ್ತು
ಏನೆಂಬೆನೆಂತೆಂಬೆನಯ್ಯಾ?
ಅರಿದಿಹೆನೆಂದಡೆ ಅರುಹು ಮರೆಯಾಯಿತ್ತು
ನಿಮ್ಮ ಮಾಯೆಯ ನತಿಗಳೆವಡೆ ಎನ್ನಳವೆ?
ಕಾಯಯ್ಯಾ, ಚನ್ನಮಲ್ಲಿಕಾರ್ಜುನಾ[೨೪]

ತನ್ನ ಪರಮ ಆರಾಧ್ಯದೈವವನ್ನು ನೋಡುವುದಕ್ಕೆ, ಕೂಡುವುದಕ್ಕೆ ಮರೆಯಾಗಿರುವ ಮಾಯೆ ತನ್ನ ಅರಿವನ್ನೂ ಕೂಡ ಮರೆಗೊಳಿಸಬಹುದೆಂಬ ಶಂಕೆಯಿಂದ ತನ್ನನ್ನು ಕಾಯಯ್ಯಾ ಎಂದು ಚನ್ನಮಲ್ಲಿಕಾರ್ಜುನನ ಮರೆಹೊಕ್ಕಿದ್ದಾಳೆ. ಸೃಷ್ಟಿ ಸತ್ಯವನ್ನು ಮುಸುಕಿ ಮಿಥ್ಯಾವಿಲಾಸವನ್ನು ಪಸರಿಸಿ ತನ್ನ ಪಾಶದಲ್ಲಿ ಸೆಳೆದುಕೊಳ್ಳುವ ಮಾಯೆಯ ಶಕ್ತಿಯನ್ನು ಅತಿಗಳೆಯುವುದು ಸಾಧ್ಯವೆ? ಈ ಮುಸುಕನ್ನು ಹರಿದಾಗಲೇ, ನಿಜವಾದ ಪ್ರಾಪಂಚಿಕ ಸತ್ಯದ ಅರಿವಾಗುವುದು. ಮಾಯಾವಿಲಾಸ ಹರಿಯದೆ ಕಣ್ಣಿನ ಕತ್ತಲೆ ದೂರಾಗುವುದಿಲ್ಲ. ಇದನ್ನು ಅರಿಯುವುದು ಶರಣನಿಗೆ ಮೊದಲ ಹೆಜ್ಜೆ ಎಂಬ ಭಾವನೆ ಅಕ್ಕನಲ್ಲಿ ಕಂಡುಬರುತ್ತದೆ.

ಹುಟ್ಟು ಹೊರೆಯ ಕಟ್ಟಳೆಯ ಕಳೆವೆನಯ್ಯಾ
ಹೊನ್ನು ಮಣ್ಣಿನ ಮಾಯೆಯ ಮಾಣಿಸಿದನವ್ವಾ
ಎನ್ನ ತನುವಿನ ಲಜ್ಜೆಯ ನಿಳುಹಿ, ಎನ್ನ ಮನದ ಕತ್ತಲೆಯ ಕಳೆದ
ಚನ್ನಮಲ್ಲಿಕಾರ್ಜುನನಯ್ಯನೊಳಗಾದವಳ
ಏನೆಂದು ನುಡಿಸುವಿರವ್ವಾ?[೨೫]

ಚನ್ನಮಲ್ಲಿಕಾರ್ಜುನನ ಕಾರುಣ್ಯದಿಂದ ತನ್ನ ಹುಟ್ಟು ಹೊರೆಯಾದ ಹೆಂಗೂಸೆಂಬ ಕಟ್ಟಳೆಯನ್ನು ಕಳೆದು ಮಾಯೆಯನ್ನು ಮಾಣಿಸಿದಳು. ಇಂತಹ ದೈವದಲ್ಲಿ ಒಂದಾಗಿ ಸೇರಿ ಹೋದವಳನ್ನು ಜಗದ ಮನುಜರು ಖಂಡಿಸಿ, ಚುಚ್ಚುವ ಮಾತಾಡುವುದರಿಂದ ಏನು ಪ್ರಯೋಜನ? ಆಕೆ ಅವುಗಳಿಗೆಲ್ಲ ಅತೀತವಾದ ಸ್ಥಿತಿಯನ್ನು ತಲುಪಿದ್ದಾಳೆ. ತನಗೆ ನೋವುಂಟುಮಾಡಿದವರಿಗೂ ಕೂಡ ಸನ್ಮಾರ್ಗ ತೋರುವಂತಹ ಮಾತುಗಳನ್ನಾಡುವ ಉದಾತ್ತ ವ್ಯಕ್ತಿತ್ವ ಅಕ್ಕನದು.

ಹೆಣ್ಣು ಹೆಣ್ಣಾದಡೆ ಗಂಡಿನ ಸೂತಕ,
ಗಂಡು ಗಂಡಾದಡೆ ಹೆಣ್ಣಿನ ಸೂತಕ,
ಮನದ ಸೂತಕ ಹಿಂಗಿದಡೆ ತನುವಿನ ಸೂತಕಕ್ಕೆ ತೆರಹುಂಟೆ?
ಅಯ್ಯಾ ಮೊದಲಿಲ್ಲದ ಸೂತಕಕ್ಕೆ ಮರುಳಾಯಿತ್ತು ಜಗವೆಲ್ಲ
ಎನ್ನ ದೇವ ಚನ್ನಮಲ್ಲಿಕಾರ್ಜುನನೆಂಬ ಗುರುವಿಂಗೆ
ಜಗವೆಲ್ಲ ಹೆಣ್ಣು ನೋಡಾ, ಅಯ್ಯಾ[೨೬]

ಹೆಣ್ಣಿಗೆ ಗಂಡು, ಗಂಡಿಗೆ ಹೆಣ್ಣು ಸೂತಕವೆನ್ನುವವರು ತಮ್ಮ ಮನದ ಮೊದಲ ಸೂತಕವನ್ನರಿಯದೆ ಮರುಳಾಗಿ ಹೋದರು. ಮಹದೇವಿಯಕ್ಕ ಎಲ್ಲ ಸೂತಕವನ್ನು ಮೀರಿದ ಚನ್ನಮಲ್ಲಿಕಾರ್ಜುನನಿಗೆ ಸರ್ವಾರ್ಪಣವಾಗಿ ಬದುಕಿದವಳು.

ಕಾಯದ ಕಳವಳವ ಕೆಡಿಸಿ, ಮನದ ಮಾಯೆಯ ಮಾಣಿಸಿ,
ಎನ್ನ ಹರಣವ ಮೇಲೆತ್ತಿ ಸಲಹಿದೆಯಯ್ಯಾ,
ಶಿವ ಶಿವಾ, ಎನ್ನ ಭವಬಂಧನವ ಬಿಡಿಸಿ,
ನಿಮ್ಮತ್ತ ತೋರಿದ ಘನವನುಪಮಿಸಬಾರದಯ್ಯಾ
ಇರುಳೋಸರಿಸಿದ ಜಕ್ಕವಕ್ಕಿಯಂತೆ
ನಾನಿಂದು ನಿಮ್ಮ ಶ್ರೀಪಾದವನಿಂಬುಗೊಂಡು
ಸುಖದೊಳೋಲಾಡುವೆನಯ್ಯಾ, ಚನ್ನಮಲ್ಲಿಕಾರ್ಜುನಾ[೨೭]

ಆತ್ಮಜ್ಞಾನದ ಕರುಣಾಮೃತವನ್ನು ನೀಡಿಸಲಹಿದ ಚನ್ನಮಲ್ಲಿಕಾರ್ಜುನನ ಶ್ರೀಪಾದದಲ್ಲಿ ತನ್ನ ಭವಬಂಧನ ಹರಿದ ಮುಕ್ತಭಾವದಿಂದ ಆತ್ಮಾರ್ಪಣೆಗೊಂಡಿರುವ ಅಕ್ಕನ ನಿಲುವು ಜಗತ್ತಿನ ಇತಿಹಾಸದಲ್ಲಿ ಒಂದು ಅಸಾಧಾರಣ, ಅಸದೃಶ ಘಟನೆ. ಈ ಲೋಕದ ಮಾಯೆ ಆಕೆಯನ್ನು ಎಲ್ಲಿಯೂ ಬಂಧಿಸಲಾಗಲೇ ಇಲ್ಲ. ಬಾಲ್ಯದಿಂದಲೇ ಶರಣಪತಿ ಲಿಂಗಪತಿ ಭಾವದಲ್ಲಿ ಬೆಳೆದು ಬಂದುದರೊಂದಿಗೆ ರಾಜಭೋಗವನ್ನು ಕೌಶಿಕ ಮಹಾರಾಜನನ್ನು ಧಿಕ್ಕರಿಸಿದ್ದೇ ಅಲ್ಲದೆ 'ನಿನ್ನ ತಾಯಿತನವನೊಲ್ಲೆ ಹೋಗಾ' ಎಂಬ ಮಾತಿನ ಮೂಲಕ ತಂದೆ ತಾಯಿ ಮತ್ತು ಇತರ ಎಲ್ಲ ಬಂಧನಗಳನ್ನು ಕಳಚಿಕೊಳ್ಳುವುದು ಆಕೆಗೆ ನೋವಿನ ಕಷ್ಟದ ಪ್ರಸಂಗವಾಗುವುದರ ಬದಲಿಗೆ ಕಲ್ಯಾಣದ ಶರಣರ ಸಂಗದ ನಿರೀಕ್ಷಣೆಯ ಸುಖದ ಭಾವವನ್ನೇ ಕೊಟ್ಟಿತು.

ಮಾಯೆಗೆ ವಶನಾದ ಮನುಷ್ಯ ಪಶುವಿನಂತಾಗುತ್ತಾನೆ, ಅಜ್ಞಾನಿಯಾಗುತ್ತಾನೆ ಎಂಬುದು ಹಿಂದಿನಿಂದ ಭಾರತೀಯದರ್ಶನ ಶಾಸ್ತ್ರದಲ್ಲಿ ನಿರ್ಣೀತವಾಗಿರುವ ವಿಷಯ. ವಚನಕಾರರೂ ಕೂಡ ಮಾಯೆಯ ತಮಂಧ ಗುಣಗಳನ್ನು ಹೇಳುವುದರೊಂದಿಗೆ ಜಗತ್ತು ಸುಳ್ಳಲ್ಲ. ಇದು ಮನುಷ್ಯನ ಕ್ರಿಯೆ, ಅರಿವುಗಳು ಪಕ್ವಗೊಳ್ಳುವುದಕ್ಕೆ ಸಾಧನವಾದ ನೆಲೆಯೆಂಬುದನ್ನು ಪ್ರತ್ಯಕ್ಷ ಪಡಿಸಿ ತಮ್ಮ ಕಾರ್ಯ ಸಾಧನೆಗಳಲ್ಲಿ ತೋರ್ಪಡಿಸಿದರು. ಅಕ್ಕನ ಬದುಕು ಅನುಭಾವದ ತಾತ್ವಿಕ ನೆಲೆಯಲ್ಲಿ ಗಟ್ಟಿಗೊಂಡಿದ್ದರಿಂದ ಆಕೆ ಪ್ರಾಪಂಚಿಕ ಮಾಯಾವಿಲಾಸವನ್ನು ಗುರುತಿಸಿ ಅದನ್ನು ಅತಿಗಳೆದಳು ವೀರ ಯೋಧಳಂತೆ. ಪ್ರಪಂಚದ ಕಷ್ಟಕೋಟಲೆಗಳನ್ನು ಕರೆದು, ಕೆಣಕಿ, ಗೆದ್ದುಕೊಂಡಳು. ಎಲ್ಲ ಬಗೆಯ ಕಾರ್ಪಣ್ಯಗಳಿಗೆ ಒಡ್ಡಿಕೊಂಡು ತನ್ನ ಬದುಕಿನ ತತ್ತ್ವವನ್ನು ಕಾಯ್ದುಕೊಂಡಳು. ಈ ಸಾಧನೆಯಲ್ಲಿ ಆಕೆ ಅನುಭವಿಸಿದ ನೋವು, ನಮ್ಮ ಸಮಾಜ ಆಕೆಗೆ ಕೊಟ್ಟ ನೋವು ಎಷ್ಟೆಂಬುದನ್ನು ಕಲ್ಪಿಸಿಕೊಳ್ಳಲೂ ನಮಗೆ ಧೈರ್ಯವಾಗಲಾರದು. ಆದರೆ ಅಕ್ಕನಿಗೆ ಲೋಕದ ಹಂಗು ಇರಲಿಲ್ಲ. ಆಕೆ ನೋವನ್ನು ಗೆದ್ದು ಅನುಭಾವಿಯಾದಳು. ನಾಮದಲ್ಲಿ ಹೆಂಗೂಸಾದ ಭಾವವನ್ನೇ ತೊರೆದು ಭಾವಿಸಲು ಗಂಡು ರೂಪಾಗಿ ನಿಂತ ಅಕ್ಕನ ಅಚಲ ನಿರ್ಧಾರ, ಛಲ, ದಿಟ್ಟತನಗಳು ಇಂದಿನ ಸಮಾಜದಲ್ಲಿ ಹಲವಾರು ಸಮಸ್ಯೆಗಳಿಂದ ಪೀಡಿತ ಳಾಗಿರುವ ಮಹಿಳೆಗೆ ಆದರ್ಶ ಪ್ರಾಯವಾಗಿವೆ. ಅಂದಿನ ಸಮಾಜದ ಎಲ್ಲ ಕೊಳಕಿನಿಂದ ಸಿಡಿದು ನಿಂತು ತನ್ನ ಧ್ಯೇಯ ಸಾಧಿಸ್ಸಿದ ಆಕೆಯ ಆತ್ಮ ವಿಶ್ವಾಸ, ಆತ್ಮ ಗೌರವಗಳು ಆಕೆಯನ್ನು ವೀರ ವಿರಾಗಿಣಿ ಪಟ್ಟದಲ್ಲಿ ಶಾಶ್ವತವಾಗಿ ಕೂರಿಸಿವೆ. ವಚನಕಾರರಲ್ಲಿ ಶ್ರೇಷ್ಠ ಅನುಭಾವಿಯೆನಿಸಿ ಇಂದಿಗೂ ಕೂಡ ಕನ್ನಡ ಸಾಹಿತ್ಯದ ಶ್ರೇಷ್ಠ ಕವಯಿತ್ರಿಯೆನಿಸುವ ಮಟ್ಟದಲ್ಲಿರುವ ಅಕ್ಕನನ್ನು ಕುರಿತು 'ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲ ಸಿದ್ಧಮಲ್ಲಿಕಾರ್ಜುನ' ಎಂದು ಮೆಚ್ಚಿ

ನುಡಿದ ಅಂದಿನ ಶರಣ ಸಮಾಜವೇ ಆಕೆಯನ್ನು ಪ್ರತ್ಯಕ್ಷ ದೈವವಾಗಿ ಕಂಡು ಗೌರವಿಸಿದೆ. ಶತಮಾನಗಳ, ಹೆಣ್ಣು ಮಾಯೆಯೆಂಬ ಕಳಂಕವನ್ನು ತೊಡೆದು ತಾತ್ವಿಕ ಜ್ಞಾನ, ಅನುಭಾವಗಳ ನೆಲೆಯಲ್ಲಿ ಸಮಾನಸ್ಥಾನ ಸಾಧಿಸಿದ ಕೀರ್ತಿ ಅಕ್ಕನಿಗೆ ಸಲ್ಲುತ್ತದೆ.

ಆಧಾರ ಗ್ರಂಥಗಳು

೧) ಪರಾಮರ್ಶೆ. ಸಂ.ಸಂ. ಶಿ. ಭೂಸನೂರಮಠ, ೨) ಶೂನ್ಯ ಸಂಪಾದನೆ (ಗೂಳೂರು ಸಿದ್ಧವೀರಣ್ಣೊಡೆಯರು ಸಂ. ಅವರೇ, ೩) ಅದೇ, ೪) ರಿಂದ ೧೧) ಶಿವಶರಣೆಯರ ವಚನಗಳು. ಸಂ.ಆರ್.ಸಿ. ಹಿರೇಮಠ, ೧೨) ಶೂನ್ಯಸಂಪಾದನೆ ಸಂ.ಸಂ. ಶಿ. ಭೂಸನೂರಮಠ, ೧೩) ರಿಂದ ೧೫) ಶಿ. ಶ. ವಚನಗಳು ಸಂ. ಆರ್. ಸಿ. ಹಿರೇಮಠ, ೧೬) ಲಿಂಗಚಿದಮೃತ ಬೋಧೆ ಸಂ. ಎಂ.ಎಸ್. ಸುಂಕಾಪುರ, ೧೭) ರಿಂದ ೨೭) ರವರೆಗೆ ಶಿವಶರಣೆಯರ ವಚನಗಳು. ಸಂ. ಆರ್.ಸಿ. ಹಿರೇಮಠ.

೨೬. ಮಹಾದೇವಿಯಕ್ಕನ ವಚನಗಳ ಶಬ್ದಕಲ್ಪ

ಡಾ. ಸಂಗಮೇಶ ಸವದತ್ತಿಮಠ

ಸೀಮೆಯಿಲ್ಲದ ನಿಸ್ಸೀಮಂಗೊಲಿದ, ಆದಿ ಅನಾದಿಯಿಲ್ಲದ ಅಂತರಂಗ-ಬಹಿರಂಗ ಎಲ್ಲವೂ ಒಂದೇ ಜ್ಞಾನಪ್ರಭೆಯಾಗಿನಿಂದ ಬಟ್ಟಬಯಲಿನ ಶರಣೆ ಮಹಾದೇವಿಯಕ್ಕ ಪಾರಮಾರ್ಥ ಲೋಕದ ಅದ್ಭುತದ ವ್ಯಕ್ತಿಗಳಲ್ಲೊಬ್ಬಳು. ಆಧ್ಯಾತ್ಮದ ಉನ್ನತ ಶಿಖರ ಗಳಲ್ಲೊಬ್ಬಳು. ಅಲ್ಲಮಪ್ರಭುವಾದಿಯಾಗಿ ಹಲವು ಪ್ರಮುಖ ಶರಣರಿಂದ ಮುಕ್ತಕಂಠದ ಹೊಗಳಿಕೆಗೆ ಪಾತ್ರಳಾದ ಏಕೈಕ ಶಿವಶರಣೆ ಮಹಾದೇವಿಯಕ್ಕ. ಐಹಿಕ ಸುಖವನ್ನು ಯಕಃಶ್ಚಿತ್ ಎಂದು ಭಾವಿಸಿ ಅದನ್ನು ಧಡಾರನೆ ಒದ್ದು 'ತನುವಿನೊಳಗಿದ್ದು ತನುವ ಗೆದ್ದು ಮನದೊಳಗಿದ್ದು ಮನವ ಗೆದ್ದು ವಿಷಯ ದೊಳಗಿದ್ದು ವಿಷಯಗಳನ್ನು ಗೆದ್ದು ಅಂಗಸಂಗವ ತೊರೆದು ಭವವಗೆದ್ದು ಚೆನ್ನಮಲ್ಲಿಕಾರ್ಜುನನ ಹೃದಯಕಮಲವನ್ನು ತಾನೆ ಬಗಿದು ಅರಳಿಸಿ ಅದರಲ್ಲಿ ಹೊಕ್ಕ ನಿರವಯಲಾದ' ಮಹಾದೇವಿಯಕ್ಕನ ಸ್ಥಾನ ಶಿವಶರಣರಲ್ಲಿ ಅತ್ಯಂತ ಮಹತ್ವಪೂರ್ಣ ವೆನಿಸಿದೆ. ಹೆಣ್ಣು ಕುಲದ ಹೆಮ್ಮೆಯಾದ ಅಕ್ಕ ಈ ನಾಡಿನಲ್ಲಿ ಬದುಕಿ ಬಾಳಿದ್ದಳೆಂಬುದೇ ಒಂದು ಅದ್ಭುತವೆನಿಸುತ್ತದೆ. ಅರಿವಿನ ಆಗರ, ಶಿವಾನುಭವ ಸಂಪನ್ನೆ, ಕೆಚ್ಚಿನ ಖಣಿ, ಭಕ್ತಿಯ ಭಾವುಕಿ, ಯೋಗದ ಮೇರುವಾದ ಅಕ್ಕ, ಬಸವಾದಿ ಪ್ರಮಥರೆಲ್ಲರನ್ನೂ ಬೆರಗುಗೊಳಿಸಿದ ಬೆಡಗಿ.

ಮಹಾದೇವಿಯಕ್ಕನ ಅನ್ಯಾದೃಶ್ಯ ಭೂಮ ವ್ಯಕ್ತಿತ್ವ ಯಾರನ್ನೂ ಮಂತ್ರಮುಗ್ಧರನ್ನಾಗಿಸು ವಂಥದು. ಅವಳ ಆಧ್ಯಾತ್ಮದ ನಿಲುವಿನ ಪರಿಯೇ ಬೇರೆ. ಅವಳ ಭಕ್ತಿಯೋಗದ ಪಾರಮ್ಯ ಒಂದೆಡೆ ನಮ್ಮ ಕಣ್ಣು ಕುಕ್ಕಿಸಿದರೆ, ಇನ್ನೊಂದೆಡೆ ಅವಳ ಜೀವಾನುಭವದಿಂದ ಮೂಡಿ ಬಂದ ವಚನಗಳ ಸಾಹಿತ್ಯಿಕ ಚೆಲುವು ನಮ್ಮನ್ನು ಆಕರ್ಷಿಸುತ್ತದೆ. ಇಡೀ ಪ್ರಪಂಚದ ಸಾಹಿತ್ಯದ ದೃಷ್ಟಿಯಿಂದ ಕನ್ನಡದ ವಚನ ಸಾಹಿತ್ಯ ಮನುಷ್ಯನ ಜೀವನಾನುಭವಗಳ ಉಪಮಾತೀತ ಅಭಿವ್ಯಕ್ತಿಯೆನಿಸಿರುವುದರಿಂದ ಅದು ಪ್ರಪಂಚದ ವಿಶಿಷ್ಟ ಸಾಹಿತ್ಯವೆನಿಸಿದೆ. ಇಡೀ ವಚನ ಸಾಹಿತ್ಯದಲ್ಲಿ ಸಾಹಿತ್ಯಾನುಭೂತಿಯ ದೃಷ್ಟಿಯಿಂದ ಸಾಮಾಜಿಕ ಹಿನ್ನೆಲೆಯ ಆತ್ಮಿಕ ಅನುಭಾವದಭಿವ್ಯಕ್ತಿ ಹೆಚ್ಚು ಸ್ಫುಟವಾಗಿ ಮೂಡಿಬಂದಿರುವುದು ಅಕ್ಕಮಹಾದೇವಿಯ ವಚನಗಳಲ್ಲೇ. ಲೋಕ ಹಾಗೂ ಲೋಕೋತ್ತರ ಅನುಭವಗಳ ಸಂಕೀರ್ಣ ಅನುಭವ ಅನುಭಾವಗಳನ್ನು ಅವಳೊಬ್ಬ ಹೆಣ್ಣಾಗಿ ಅಭಿವ್ಯಕ್ತಿಸಿರುವ ರೀತಿಯ ಅರ್ಥಪೂರ್ಣತೆ ಹೆಚ್ಚು ಮಹತ್ವದ್ದೆನಿಸುತ್ತದೆ.

ನುಡಿದ ಅಂದಿನ ಶರಣ ಸಮಾಜವೇ ಆಕೆಯನ್ನು ಪ್ರತ್ಯಕ್ಷ ದೈವವಾಗಿ ಕಂಡು ಗೌರವಿಸಿದೆ. ಶತಮಾನಗಳ, ಹೆಣ್ಣು ಮಾಯೆಯೆಂಬ ಕಳಂಕವನ್ನು ತೊಡೆದು ತಾತ್ವಿಕ ಜ್ಞಾನ, ಅನುಭಾವಗಳ ನೆಲೆಯಲ್ಲಿ ಸಮಾನಸ್ಥಾನ ಸಾಧಿಸಿದ ಕೀರ್ತಿ ಅಕ್ಕನಿಗೆ ಸಲ್ಲುತ್ತದೆ.

ಆಧಾರ ಗ್ರಂಥಗಳು

೧) ಪರಾಮರ್ಶೆ. ಸಂ.ಸಂ. ಶಿ. ಭೂಸನೂರಮಠ, ೨) ಶೂನ್ಯ ಸಂಪಾದನೆ (ಗೂಳೂರು ಸಿದ್ಧವೀರಣ್ಣೊಡೆಯರು ಸಂ. ಅವರೇ, ೩) ಅದೇ, ೪) ರಿಂದ ೧೧) ಶಿವಶರಣೆಯರ ವಚನಗಳು. ಸಂ.ಆರ್.ಸಿ. ಹಿರೇಮಠ, ೧೨) ಶೂನ್ಯಸಂಪಾದನೆ ಸಂ.ಸಂ. ಶಿ. ಭೂಸನೂರಮಠ, ೧೩) ರಿಂದ ೧೫) ಶಿ. ಶ. ವಚನಗಳು ಸಂ. ಆರ್. ಸಿ. ಹಿರೇಮಠ, ೧೬) ಲಿಂಗಚಿದಮೃತ ಬೋಧೆ ಸಂ. ಎಂ.ಎಸ್. ಸುಂಕಾಪುರ, ೧೭) ರಿಂದ ೨೭) ರವರೆಗೆ ಶಿವಶರಣೆಯರ ವಚನಗಳು. ಸಂ. ಆರ್.ಸಿ. ಹಿರೇಮಠ.

ಅವಳ ಅನನ್ಯ ಭಕ್ತಿರತಿಭಾವ ಅಮೂರ್ತವಾದ ಮಲ್ಲಿಕಾರ್ಜುನನಲ್ಲಿ ಕೇಂದ್ರೀಕೃತವಾಗಿರುವುದರಿಂದ ಅವಳ ಭಾವ, ಜ್ಞಾನ ಕ್ರಿಯೆಗಳೆಲ್ಲವೂ ನಿರ್ದಿಷ್ಟವೆನಿಸಿವೆ. ಅವಳ ಆಧ್ಯಾತ್ಮ ಧೀಶಕ್ತಿಯ ಹಲವು ಮುಖಗಳು ಅವಳ ಅಭಿವ್ಯಕ್ತಿಯ ಶಬ್ದಕಲ್ಪದಲ್ಲಿ ಮೂರ್ತಗೊಂಡಿದೆ. ಅವಳ ವಚನಗಳು ಮೂರನೆಯ ವ್ಯಕ್ತಿಯ ಬಗೆಗೆ ಎರಡನೆಯ ವ್ಯಕ್ತಿಗೆ ಹೇಳುವ ಕೇವಲ ತಾತ್ತ್ವಿಕ ಬೋಧನೆಗಳಂತಿರದೆ ಎಲ್ಲಕ್ಕೂ ತಾನೇ ಪ್ರಶ್ನೋತ್ತರವಾಗುತ್ತ ನವೀನ ಶಬ್ದಕಲ್ಪದಲ್ಲಿ ನಿರೂಪಿಸಿರುವ ಬಿಡಿ ಸಾಹಿತ್ಯ ಮುತ್ತುಗಳಾಗಿವೆ. ಅವಳ ವಚನಗಳ ಶಬ್ದಕಲ್ಪಲ್ಲಿ ನಿರೂಪಿಸಿರುವ ಬಿಡಿ ಸಾಹಿತ್ಯ ಮುತ್ತುಗಳಾವೆ. ಅವಳ ವಚನಗಳ ಶಬ್ದಕಲ್ಪಗಳನ್ನು ಲಕ್ಷಗೊಟ್ಟು ನೋಡಿದಲ್ಲಿ, ಅವಳ ಪ್ರತಿಭೆ, ಪಾಂಡಿತ್ಯ, ಲೋಕಾನುಭವ, ಶಿವಾನುಭವ, ಎಲ್ಲವೂ ಸುಲಭವಾಗಿ ಗಮನಕ್ಕೆ ಬರುತ್ತವೆ.

ಅವಳ ಶಬ್ದಕಲ್ಪವನ್ನು ಮುಖ್ಯವಾಗಿ ಧ್ವನಿ, ರೂಪ, ಅರ್ಥ ಹಾಗೂ ಶೈಲಿ ಈ ಅಂಶಗಳ ಹಿನ್ನೆಲೆಯಲ್ಲಿ ಇಲಿ ಪರಿಶೀಲನೆಗೆತ್ತಿಕೊಳ್ಳಲಾಗಿದೆ.

ಧ್ವನಿ : ಭಾಷೆಯ ಮೂಲ ಸಾಮಗ್ರಿ ಧ್ವನಿ. ಧ್ವನಿಗಳನ್ನು ಆಯಾ ಭಾಷಿಕರು ತಮತಮಗನುಕೂಲವಾದ ರೀತಿಯಲ್ಲಿ ವೈವಿಧ್ಯಪೂರ್ಣವಾಗಿ ಬಳಸಿಕೊಳ್ಳುವರು. ಇಂತಹ ಮಹತ್ವದ ಧ್ವನಿ ಘಟಕಗಳಿಂದ ಶಬ್ದದ ರೂಪ ನಿರ್ಮಾಣವಾಗುವುದು. ಆ ಶಬ್ದಗಳ ವೈವಿಧ್ಯಕ್ಕೆ ಈ ಘಟಕಗಳೇ ಮೂಲಕಾರಣ. ಧ್ವನಿ ವ್ಯತ್ಯಾಸ, ಶಬ್ದಗಳ ರೂಪ ಹಾಗೂ ಶಬ್ದಗಳ ಅರ್ಥ ಬದಲಾವಣಗೆ ಕಾರಣವಾಗಬಹುದು. ಅಥವಾ ಬದಲಾವಣೆಯನ್ನುಂಟು ಮಾಡದೆಯೆ ಧ್ವನಿಗಳನ್ನು ವಿಶಿಷ್ಟ ರೀತಿಯಲ್ಲಿ ಬಳಸಬಹುದು. ಮಹಾದೇವಿಯಕ್ಕ ಧ್ವನಿಗಳನ್ನು ರೂಢಿಗನುಗುಣವಾಗಿಯೇ ಸಾಮಾನ್ಯವಾಗಿ ಬಳಸಿದರೂ ಅವುಗಳನ್ನು ಬಳಸುವ ಅವಳ ಕೌಶಲ ಹಿರಿದು.

ಮಹಾದೇವಿಯಕ್ಕ ತನ್ನ ವಚನಗಳಲ್ಲಿ ಬಳಸಿರುವ ವರ್ಣಗಳಲ್ಲಿ ಅಚ್ಚಗನ್ನಡ ಧ್ವನಿಗಳಂತೂ ಸರಿಯೆ. ಜೊತೆಗೆ ಸಂಸ್ಕೃತ ವರ್ಣಗಳನ್ನು ಧಾರಾಳವಾಗಿ ಬಳಸಿದ್ದಾಳೆ. ನೇರ ಸಂಸ್ಕೃತದಿಂದ ಸ್ವೀಕೃತ ಶಬ್ದಗಳಲ್ಲಿ ಸಂಸ್ಕೃತದಲ್ಲಿದ್ದಂತೆಯೆ ವರ್ಣಗಳ ಬಳಕೆಯುಂಟು. ಕೆಲವೆಡೆ ಸಂಸ್ಕೃತ ಪದಗಳನ್ನು ತದ್ಭವ ಮಾಡಿಕೊಂಡು ಕನ್ನಡ ವರ್ಣಗಳನ್ನು ಬಳಸಿದ್ದಾಳೆ: (ಭಾಷೆಯಲ್ಲಿ ಮಹತ್ವದ ಸಾಮ್ಯಧ್ವನಿಗಳ ಗುಂಪಿನ ಪ್ರತಿನಿಧಿಧ್ವನಿಯನ್ನು ಸ್ಥೂಲವಾಗಿ 'ವರ್ಣ' ಎಂದಿಟ್ಟುಕೊಂಡು 'ವರ್ಣ' ಪದವನ್ನು ಇಲ್ಲಿ ಬಳಸಲಾಗಿದೆ).

ಮಹಾದೇವಿಯಕ್ಕ ಶಕಟರೇಫ (ಱ್) ವರ್ಣವನ್ನು ಸ್ಪಷ್ಟವಾಗಿ ತಪ್ಪಿಲ್ಲದೆ, ಬಳಸಿದ್ದಾಳೆ.

ಉದಾ: ಒಳಗನಱಿದು ಹೊಱಗೆ ಮಱೆದವರನೀ ಎನಗೆ ತೋಱಯ್ಯ. ಆದರೆ 'ೞ' ವನ್ನವಳು ಎಲ್ಲಿಯೂ ಬಳಸಿಲ್ಲ.

ಸಬಿಂದುಕ ಶಬ್ದಗಳು ಅಲ್ಲಲ್ಲಿ ದೊರೆಯುತ್ತವೆ. ಉದಾ: ಬೇಂಟೆ, ಕೆಲಂಬರು ಇತ್ಯಾದಿ.

ಇನ್ನುಳಿದಂತೆ ಮಹಾದೇವಿಯಕ್ಕನ ವಚನಗಳ ಭಾಷೆ ಅಚ್ಚನಡುಗನ್ನಡ. ಶಿಷ್ಟ ಭಾಷೆಯಾಗಿದ್ದರಿಂದ ಆ ನಡುಗನ್ನಡದ ಲಕ್ಷಣಗಳೆಲ್ಲವನ್ನೂ ಒಳಗೊಂಡ ಕಾರಣ ನಡುಗನ್ನಡ ವರ್ಣಗಳೆಲ್ಲವೂ ಅಕ್ಕನ ಭಾಷೆಯಲ್ಲಿ ಬಳಕೆಗೊಂಡಿವೆ. ವ್ಯಂಜನಾಂತ ಶಬ್ದಗಳು ಸ್ವರಾಂತವಾಗುವಿಕೆ ನಡುಗನ್ನಡದ ಒಂದು ವಿಶೇಷ ಅಂಶ. ಅಂತೆಯೆ ಅಕ್ಕನ ವಚನಗಳಲ್ಲಿ ವ್ಯಂಜನಾಂತ ಶಬ್ದಗಳು ದೊರೆಯುವುದಿಲ್ಲ. ಆದರೆ ರೇಫೆಯುಕ್ತ ಸಂಯುಕ್ತ ಪದ ಒಂದೆರಡರಲ್ಲಿ ಮಾತ್ರ ವ್ಯಂಜನಾಂತಗೊಂಡು ಬಳಕೆಯಾಗಿರುವುದುಂಟು. ಉದಾ: ಕೂಡಿರ್ದು. ಈ ಬಳಕೆ ನಿಯತವಲ್ಲವೆಂಬುದನ್ನು ಕೊರುಮ (ಕೂರ್ಮ) ಪದದಲ್ಲಿರುವ ಸ್ವರಾಂತ ಒಳಕೆ ತೋರಿಸಿಕೊಟ್ಟಿದೆ.

ಪ್ರಾಯಃ ಸಮಾವೇಶಿಕ ಅಸಮಾವೇಶಿಕ, ಅರ್ಥಭೇದವನ್ನುಂಟುಮಾಡುವ ರೀತಿಯಲ್ಲಿ ಉತ್ತಮ ಪುರುಷ, ಏಕವಚನ ಸರ್ವನಾಮಗಳಲ್ಲಿನ 'ನ' ವರ್ಣಲೋಪವಾಗಿರುವುದನ್ನು ಗಮನಿಸಬಹುದು: ನನಗೆ>ಎನೆಗೆ, ನನ್ನ>ಎನ್ನ, ನಾನು>ಆನು, ತದ್ಭವೀಕರಣಗೊಂಡಾಗ ನಡುಗನ್ನಡ ಭಾಷಾ ರಚನೆಗೆ ಅನುಗುಣವಾಗಿ ಶಬ್ದಗಳು ಬಳಕೆಗೊಂಡಿವೆ. ಉದಾ: ಅದುಭುತ (ಅದ್ಭುತ) ಆತುಮ (ಆತ್ಮ).

ರೂಪ ಹಾಗೂ ಅರ್ಥ : ಅರ್ಥವನ್ನು ಅಥವಾ ಅರ್ಥಗಳನ್ನು ನೀಡುವಂತೆ ಕ್ರಮಬದ್ಧವಾಗಿರಿಸಿದ ಧ್ವನಿ ಅಥವಾ ಧ್ವನಿಮೊತ್ತವು 'ಶಬ್ದ' ಎನಿಸುತ್ತದೆ. ಶಬ್ದದ ಮೂಲ ಘಟಕ ಆಕೃತಿ ಅಥವಾ ರೂಪ ಎನಿಸಿದರೆ ಒಂದು ಅಥವಾ ಹಲವು ಮೂಲ ಘಟಕಗಳ ಮೊತ್ತ ಶಬ್ದ ಎನಿಸುತ್ತದೆ. ಉದಾಹರಣೆಗೆ ಜಲದ ಎಂಬುದೊಂದು ಶಬ್ದ. ಈ ಶಬ್ದದಲ್ಲಿ 'ಜಲ' ಹಾಗೂ 'ಆ' ಎಂಬೆರಡು ಮೂಲ ಘಟಕಗಳು. 'ಜಲ' ಘಟಕದಲ್ಲಿ 'ಜ್' 'ಅ' 'ಲ್' ಅ ಎಂಬ ನಾಲ್ಕು ಧ್ವನಿ ಘಟಕಗಳಿದ್ದರೆ 'ಅ'ದಲ್ಲಿ ಒಂದೇ ಧ್ವನಿ ಘಟಕವಿದೆ. 'ಅ' ಎಂಬುದು 'ಪ್ರತ್ಯಯ'. (ಬದ್ಧ) ಘಟಕ; ಜಲ ಎಂಬುದು ಸ್ವತಂತ್ರನಾಮ ಘಟಕ. ಇವೆರಡೂ ಸಂಧಿಗೊಂಡಾಗ ಮಧ್ಯ 'ದ' ಎಂಬ ಧ್ವನಿ ಆಗಮವಾಗಿದೆ. ಇವೆಲ್ಲವೂ ಒಟ್ಟಾಗಿ ಸೇರಿ ಒಂದು ಶಬ್ದರೂಪಗೊಂಡಿದೆ. 'ಜಲದ' ಎಂಬ ರೂಪಕ್ಕೆ ನೀರಿನ ಎಂಬ ಅರ್ಥವಿದೆ. ಹೀಗೆ ಒಂದು ರೂಪ ಅದಕ್ಕೆ ಕನಿಷ್ಠ ಪಕ್ಷ ಒಂದು ಅರ್ಥ ಅಂಟಿಕೊಂಡಿರುತ್ತದೆ. ಇಂಥ ಶಬ್ದಗಳು ರೂಪ, ಅರ್ಥಗಳ ಬೆಳವಣಿಗೆ ಇಲ್ಲವೆ ವ್ಯತ್ಯಾಸಗಳನ್ನು ಹೊಂದಬಹುದು. ಅನ್ಯಭಾಷೆಯಿಂದ ಅನೇಕ ಶಬ್ದಗಳು ಸ್ವೀಕೃತವಾಗಬಹುದು. ಹೀಗೆಯೇ ಶಬ್ದ ಬಳಕೆ ವಾಕ್ಯರಚನೆಗೆ ಕಾರಣವಾಗುತ್ತಾ ಅಲ್ಪಾರ್ಥದಿಂದ ಪೂರ್ಣಾರ್ಥ ದಡೆಗೆ ಸಾಗುತ್ತದೆ. ಮಹಾದೇವಿಯಕ್ಕನ ಶಬ್ದಕಲ್ಪದ ಕೌಶಲವನ್ನು ಈ ವಿಭಾಗದಲ್ಲಿ ಸ್ಪಷ್ಟವಾಗಿ ಗುರುತಿಸಬಹುದು.

ಅಚ್ಚಗನ್ನಡ ಮೂಲ ಶಬ್ದಗಳು ಅಕ್ಕಮಹಾದೇವಿಯ ವಚನಗಳಲ್ಲಿ ವಿಪುಲವಾಗಿ ಬಳಕೆಗೊಂಡಿವೆ.

ಮಡಿಕೆ, ಕುಡಿಕೆ, ತಡಿಕೆ, ಹಡಿಕೆ, ಅಂದುಗೆ, ಹಾವುಗೆ, ಜಲವಟ್ಟಿಗೆ, ಅಲಗು, ಅಗುಸೆ, ಅರತ, ಅಳು, ಉಲುಹು, ಮರಹು, ಊಣೆ, ಒಚ್ಚತ, ಜಗರ, ಕಳಲೆ, ಕಿಚ, ಕಿಚೆ, ಕೇದಿ, ಕೊಟ್ಟಣ, ಗರುವ, ಗಸಣಿ, ಚುಳುಕು, ನೊಸಲು, ಪೈಸರ, ಬಚ್ಚಣಿ, ಬಟು, ಬೀಸರ, ಮನಕತ, ಮೇಳಾಪ, ವಾರುವ, ಸಿತಗ, ಸುಂಕಿಗ, ಸೋನೆ, ಹಂದೆ, ಹದುಳಿಗ, ಹೊರೆ, ಹೊಳಲು, ಇಂತಹ ನೂರಾರು ಸಹಸ್ರಾರು ಶಬ್ದಗಳನ್ನು ಗುರ್ತಿಸಬಹುದು. ಅಕ್ಕಮಹಾದೇವಿ ಬಳಸಿರುವ ಅಚ್ಚಗನ್ನಡ ಶಬ್ದಗಳನ್ನು ಗಮನಿಸಿದರೆ ಪ್ರಾದೇಶಿಕ ವಿಶಿಷ್ಟ ಉಪಭಾಷಾ ಶಬ್ದಗಳಿಗಿಂತ ಶಿಷ್ಟಶಬ್ದಗಳ ವಿಪುಲತೆ ಎದ್ದುಕಾಣುತ್ತದೆ.

ಮಹಾದೇವಿಯಕ್ಕ ಸಾಕಷ್ಟು ಓದಿಕೊಂಡವಳೆಂಬುದಕ್ಕೆ ಅವಳು ಬಳಸಿರುವ ಸಂಸ್ಕೃತ ಪದಗಳು ಹಾಗೂ ಕ್ಲಿಷ್ಟ ಕನ್ನಡ ಪದಗಳೇ ಸಾಕ್ಷಿಯಾಗಿವೆ. ಸಂಸ್ಕೃತದ ನೇರ ಶಬ್ದಗಳಂತೂ ಸರಿಯೆ ಅವುಗಳನ್ನು ತದ್ಭವೀಕರಣಗೊಳಿಸಿಕೊಂಡೂ ಬಳಸುತ್ತಾಳೆ.

ಶ್ವಾನ, ವಿಶ್ರಾಮ, ರೋಮ, ಅಷ್ಟಾಷಷ್ಟಿ, ಕ್ಷುಧೆ, ಭೃತ್ಯ, ಕರ್ತೃ, ಪಾಷಾಣ, ತಚ್ಚಿಷ್ಯ, ಮಸ್ತಕ, ಕರ್ಣ, ಶುನಕ, ಶೂಕರ, ಕುಕ್ಕುಟ, ಮಾರ್ಜಾಲ, ಅಕ್ಷಯ ಶೈತ್ಯ ಸುಜ್ಞಾನ, ಸತ್ಕ್ರಿಯಾ, ಗರ್ಭ, ಸ್ಥಾಪ್ಯ, ಧೂಮ್ರ, ಘನ, – ಇಂಥ ನೂರಾರು ಸಂಸ್ಕೃತ ಶಬ್ದಗಳು ಬಿಡಿಬಿಡಿಯಾಗಿ ವಿಪುಲವಾಗಿ

ಬಳಕೆಗೊಂಡಿವೆ. ವೈಚಾರಿಕ ಗಂಭೀರತೆಯನ್ನು ಸೂಚಿಸುವಲ್ಲಿ ಇಂಥ ಸಂಸ್ಕೃತ ಪದ ಮಿಶ್ರಣ ಅಕ್ಕಮಹಾದೇವಿಗೆ ಅನಿವಾರ್ಯವೆನಿಸರಬಹುದು. ಇಲ್ಲೊಂದು ವಚನವನ್ನು ಗಮನಿಸಿ–

ಅಯ್ಯಾ ಸದಾಚಾರ ಸದ್ಭಕ್ತಿ ಸತ್ಕ್ರಿಯಾ ಸಮ್ಯಕ್ ಜ್ಞಾನ ಸದ್ವರ್ತನೆ
ಸಗುಣ ನಿರ್ಗುಣ ನಿಜಗುಣ ಸಚ್ಚರಿತ್ರ ಸದ್ಭಾವ
ಸಗುಣ ನಿರ್ಗುಣ ಸಚ್ಚರಿತ್ರ ಸದ್ಭಾವ
ಅಕ್ರೋಧ ಸತ್ಯವಚನ ಶಮೆದಮೆ ಭವಿಭಕ್ತ ಭೇದ
ಸತ್ಪಾತ್ರ ದ್ರವ್ಯಾರ್ಪಣ ಗೌರವಬುದ್ಧಿ ಲಿಂಗಲೀಯ ಜಂಗಮಾನುಭಾವ
ದಶವಿಧಪಾದೋದಕ, ಏಕಾದಶ ಪ್ರಸಾದ ಷೋಡಶಭಕ್ತಿ ನಿರ್ವಾಹ
ತ್ರಿವಿಧ ಷಡ್‌ವಿಧ ನವವಿಧ ಲಿಂಗಾರ್ಚನೆ
ತ್ರಿವಿಧ ಷಡ್‌ವಿಧ ನವವಿಧ ಜಪ
ತ್ರಿವಿದ ಷಡ್‌ವಿಧ ನವವಿಧ ಲಿಂಗಾರ್ಪಣ
ಚಿದ್ವಿಭೂತಿ, ಸ್ನಾನ, ಧೂಳನೆ, ಧಾರಣ, ಸರ್ವಾಂಗದಲ್ಲಿ ಚಿದ್ರುದ್ರಾಕ್ಷಿ ಧಾರಣ
ತಾ ಮಾಡುವ ಸತ್ಯಕಾಯಕ ತಾ ಬೇಡುವ ಸದ್ಭಕ್ತಿ ಭಿಕ್ಷ, ತಾ ಕೊಟ್ಟು ಕೊಂಬ ಭೇದ

ತಾನಾಚರಿಸುವ ಸತ್ಯ ನಡೆ ನುಡಿ, ತಾ ನಿಂದ ನಿರ್ವಾಣ ಪದ
ಇಂತೀ ಬತ್ತೀಸ ನೆಲೆ ಕಲೆಗಳ ಸದ್ಗುರು ಮುಖದಿಂದ
ಬಸವ ಮೊದಲಾದ ಸಮಸ್ತ ಗಣಂಗಳೆಲ್ಲಾ ಪ್ರಮಥ
ನಿರಾಭಾರಿ ವೀರಶೈವ ಸನ್ಮಾರ್ಗವಿಡಿದಾಚರಿಸಿದರು ನೋಡಾ
ಇಂತು ಪ್ರಮಥಗಣವಾಚರಿಸಿದ
ಸತ್ಯ ಸನ್ಮಾರ್ಗವಜೆಯದ ಮೂಢ ಅಧಮರನೆಂತು
ಶಿವಭಕ್ತಿ ಶಿವಭಕ್ತ ಶಿವಜಂಗಮವೆಂಬೆನೆಯ್ಯ ಚೆನ್ನಮಲ್ಲಿಕಾರ್ಜುನಾ (೧೭೬)

ಈ ವಚನದಲ್ಲಿ ಒಟ್ಟು ೯೨ ಶಬ್ದಗಳಿದ್ದು ಅದರಲ್ಲಿ ೬೨ ಶಬ್ದಗಳು ಸಂಸ್ಕೃತದಲ್ಲಿವೆ. ಸಂಸ್ಕೃತ ಶಬ್ದಗಳ ಆಯ್ಕೆಯಲ್ಲಿ ಮಹಾದೇವಿಯಕ್ಕ ಅನುಸರಿಸುವ ರೀತಿ ಎಂದರೆ ನೇರ ಸಂಸ್ಕೃತ ಶಬ್ದಗಳನ್ನು ಇದ್ದುದಿದ್ದಂತೆ ತೆಗೆದುಕೊಳ್ಳುವುದೇ ವಿಶೇಷ. ತದ್ಭವ ಮಾಡಿಕೊಳ್ಳುವ ಬಗೆ ತೀರ ಕಡಿಮೆಯೆಂದೇ ಹೇಳಬೇಕು. ಆತುಮ (ಆತ್ಮ), ಕೂರುಮೆ (ಕೂರ್ಮ), ರೂಹು(ರೂಪ), ಹರವಸ(ಪರವಶ), ಸಜ್ಜೆ (ಶಯ್ಯ), ಸವಣ (ಶ್ರವಣ), ಅದುಭುತ (ಅದ್ಭುತ), ಜಕ್ಕವಕ್ಕಿ (ಚಕ್ರವಾಕ) ಮುಂತಾದ ಕೆಲವು ತದ್ಭವ ಶಬ್ಧಗಳು ವಿರಳವಾಗಿ ದೊರೆಯುತ್ತವೆ.

ಸಂಸ್ಕೃತ ಹಾಗೂ ಸಂಸ್ಕೃತದಿಂದ ತದ್ಭವ ಮಾಡಿಕೊಂಡ ಶಬ್ದಗಳಲ್ಲದೆ ಆಡುನುಡಿಯ ಶಬ್ದಗಳನ್ನು ಮಹಾದೇವಿಯಕ್ಕ ಸಹಜವಾಗಿ ಬಳಸುತ್ತಾಳೆ. ಕಾಣಿಕೆ, ಹಿಡಿಯಿರೇ, ಕೊಲ್ಲಕಾಯಿ, ಅಪ್ಪಾ ಬೊಪ್ಪಾ, ಅವ್ವಾನೀ ಮರುಳವ್ವೆ, ಆಗು ಮಾಡು, ಹೂಣಿಕೆಹೊಗು, ಈಡಾಡು – ಇಂಥ ಅನೇಕ ದೇಸಿ ಶಬ್ದಗಳು ಅಕ್ಕನ ವಚನಗಳಲ್ಲಿ ಹೆಣೆದುಕೊಂಡಿರುವುದರಿಂದ ಅವಳ ವಚನಗಳ ಭಾಷಾ ಸೌಷ್ಠವ ಆಕರ್ಷಕವೆನಿಸುತ್ತದೆ. ಅಚ್ಚಗನ್ನಡ ಶಬ್ದಗಳನ್ನು ತೆರಪಿಲ್ಲದೆ ಪ್ರಾಸಬದ್ಧವಾಗಿ ಜೋಡಿಸಿ ಸರಪಳಿ ಮಾಡಿ ಭಾವ ವಿಸ್ತರಣೆಗೆ ಚೆಲುವು ತಂದುಕೊಡುವುದೂ ಅಕ್ಕನ ಶಬ್ದಕಲ್ಪದ ಗಮನಾರ್ಹ ಅಂಶವಾಗಿದೆ.

ಸಜ್ಜನೆಯಾಗಿ ಮಜ್ಜನಕ್ಕೆರವೆ, ಅಱಲುಗೊಂಡ ಕೆಱೆಗೆ ತೊಱೆ ಬಂದು ಹಾಯ್ದಂತಾಯಿತು.

ಅಮೇಧ್ಯದ ಮಡಿಕೆ, ಮೂತ್ರದ ಕುಡಿಕೆ, ಎಲುವಿನ ತಡಿಕೆ, ಕೀವಿನ ಹಡಿಕೆ

(ಮಡಿಕೆ–ಗಡಿಗೆ, ಕುಡಿಕೆ–ಕುಳ್ಳಿ, ತಡಿಕೆ–ಹಂದರ, ಹಡಿಕೆ–ಹೂಜಿ)

ಹಿತವಿದೆ ಮತವಿದೆ ಗತಿಯಿದೆ; ಪಾತಾಳವಿತ್ತಿತ್ತ ಪಾದಂಗಳತ್ತತ್ತ;

ಇನ್ನೇವೆನಿನ್ನೇವೆ; ಬಂದೆ ಬಂದೆ, ಉಂಡೆ ಉಂಡೆ; ಸಾಕ್ಷಿ ಸತ್ತುತ್ತು, ಪತ್ರ

ಬೆಂದುತ್ತು; ಲೆಕ್ಕ ತುಂಬಿತ್ತು; ಒಳಗನಱೆದು ಹೊಱಗೆ ಮಱೆದವರ ನೀ

ಎನಗೆ ತೋಱಯ್ಯ; ಒಳಗಣ ಗಂಡನಯ್ಯ ಹೊರಗಣ ಮಿಂಡನಯ್ಯ.

ಮಹಾದೇವಿಯಕ್ಕನ ಈ ಬಗೆಯ ಶಬ್ದಕಲ್ಪ ಅವಳ ವಚನಗಳಿಗೆ ಕಾವ್ಯ ಸೌಂದರ್ಯವನ್ನು ಉಂಟುಮಾಡಿದೆ. ಇದರಿಂದಾಗಿ ಅವಳ ಬಿಡಿವಚನಗಳು ಬಿಡಿಭಾವಗೀತೆಗಳಂತೆ ಶೋಭಿಸುತ್ತವೆ.

೧೨ನೆಯ ಶತಮಾನ ಭಾಷಾದೃಷ್ಟಿಯಿಂದ ನಡುಗನ್ನಡದ ಕಾಲ. ಆದ್ದರಿಂದ ಅಕ್ಕ ಸಹಜವಾಗಿ ತನ್ನ ವಚನಗಳಲ್ಲಿ ನಡುಗನ್ನಡವನ್ನೇ ಬಳಸಿಕೊಂಡಿದ್ದಾಳೆ. ಆದರೂ ಕ್ವಚಿತ್ತಾಗಿ ಅಲ್ಲಲ್ಲಿ ಹಳಗನ್ನಡ ಶಬ್ದಗಳೂ ಇಣಿಕಿ ಹಾಕಿವೆ– ಇಪ್ಪೆ (ಇರುಂಪೆ), ಕೆಲಂಬರು, ಬೇಂಟೆ, ಚೋಹ, ಜಳವಟ್ಟಿಗೆ, ಜೋಳವಾಳಿ, ಕೆಯ್, ಐದು, ಕಿತ, ಪೈಸರ, ಬೆಸಗೈ, ಬೇಟ ಇತ್ಯಾದಿ.

ಅಕ್ಕನ ಶಬ್ದ ಬಳಕೆಯ ರೀತಿ ಒಮ್ಮೊಮ್ಮೆ ವಿಶಿಷ್ಟವಾಗಿ, ನವೀನವಾಗಿ ತೋರುವುದೂ ಉಂಟು.

ಉದಾ : ಸಾಕ್ಷಿ ಸತ್ತುತ್ತು, ಪತ್ರ ಬೆಂದುತ್ತು

ಅಂಗಶೀತಕ್ಕೆ ಬೀಸಾಟ ಅಱೆವೆಗಳುಂಟು

ಅಂತು (ಅಂತ್ಯ), ಗುಂಪ (ಆಳ); ಹೊಳಲಸುಂಕಿಗ (City tax payer)

ಹಂಗುಗಿತ್ತಿ, ಎಲೆಗವ್ವಾ

ವಿಭಕ್ತ್ಯರ್ಥ ಪದಗಳನ್ನು ಬಳಸುವಲ್ಲಿ ಅಕ್ಕ ವಿಶಿಷ್ಟವಲ್ಲದ ವಿಧಾನವನ್ನಳವಡಿಸಿದ್ದಾಳೆ. ಪ್ರಾಯಃ ಆ ಕಾಲದ ಆಡುನುಡಿಯ ಪ್ರಭಾವವೇ ಇದಕ್ಕೆ ಕಾರಣವಾಗಿರಬಹುದು.

ಧನದ ಮೇಲೆ ಬಂದವರೆಲ್ಲ ಅನುಸರಿಗಳಲ್ಲದೆ

ಇಲ್ಲಿ 'ಮೇಲೆ' ಶಬ್ದ ಉದ್ದೇಶಿತ ಅರ್ಥದಲ್ಲಿ ಬಳಕೆಯಾಗಿದ್ದರೆ ಅದೇ 'ಮೇಲೆ' ಶಬ್ದ ಚತುರ್ಥಿ ಅರ್ಥದಲ್ಲಿ ಬಳಕೆಯಾಗಿರುವುದೂ ಉಂಟು:

ಮನದ ಮೇಲೆ ಬಂದು ನಿಂದು ಜಱಿದು

ಈ 'ಮೇಲೆ' ಎಂಬ ಶಬ್ದವನ್ನು ಇನ್ನೂ ವಿಶಿಷ್ಟಾರ್ಥದಲ್ಲಿ ಅಕ್ಕ ಬಳಸುತ್ತಾಳೆ.

ಮಧ್ಯಾಹ್ನದಿಂದ ಮೇಲೆ ಹಿರಿಯರಿಲ್ಲ

ಅಸ್ತಮಾನದಿಂದ ಮೇಲೆ ಜಿತೇಂದ್ರಿಯರಿಲ್ಲ

ಇಲ್ಲಿ 'ಮೇಲೆ' ಎಂಬುದು ಸ್ಥೂಲಾರ್ಥದಲ್ಲಿ 'ಆಚೆ' ಇರಬಹುದಾದರೂ ಅದಕ್ಕಿಂತ ಭಿನ್ನಾರ್ಥ ಇಲ್ಲಿದೆ.

ದ್ವಿತೀಯಾ ವಿಭಕ್ತಿಯನ್ನು ಪ್ರಥಮೆಯ ರೂಪದಲ್ಲಿ ಬಳಸಿರುವುದನ್ನು ನೋಡಿ–

ಮೋಹವುಳ್ಳಲ್ಲಿ ಕರುಳುವ ಕಡಿಯಯ್ಯಾ

ಮೋಹವುಳ್ಳಲ್ಲಿ ಬೆರಳುವ ಕಡಿಯಯ್ಯಾ

ಪಂಚೇಂದ್ರಿಯ ಸಪ್ತಧಾತು ಅಷ್ಟಮದ ಕೊಂದು ಕೂಗಿತ್ತಲ್ಲಾ.

ದ್ವಿತೀಯಾ ವಿಭಕ್ತಿಯನ್ನು ಉವ + (ಅ) ನ್ನು/ನು ರೂಪದಿಂದ ಬಳಸಿದ್ದೂ ಉಂಟು; ಕಾಣಲಾರೆನಯ್ಯ ನಿಮ್ಮುವನು.

ಮಹಾದೇವಿಯಕ್ಕ ಮಾನವೇತರ ಲಿಂಗ ಶಬ್ದಗಳನ್ನು ಮಾನವಲಿಂಗ ಶಬ್ದಗಳನ್ನಾಗಿಸಿದ್ದು ಒಂದು ವಿಶೇಷ.

ನಿತ್ಯವೆನ್ನ ಮನೆಗೆ ನಡೆದು ಬಂದಿತ್ತೆಂದು
ಮುಕ್ತಿ ಎನ್ನ ಮನೆಗೆ ನಡೆದು ಬಂದಿತ್ತೆಂದು
ಅಳಿಸಂಕುಳಿವೇ ಮಾಮರವೆ ಬೆಳದಿಂಗಳೆ... ಕರೆದು ತೋಱಿರೆ.

ಹಸಿವೇ ನೀನು ನಿಲ್ಲುನಿಲ್ಲು
ಅರ್ಥ ಸಂನ್ಯಾಸಿಯಾದಡೇನಯ್ಯಾ....
ರುಚಿ ಸಂನ್ಯಾಸಿಯಾದಡೇನಯ್ಯಾ....

ಆಜ್ಞಾರ್ಥ, ವಿಧ್ಯರ್ಥ, ಪ್ರಶ್ನಾರ್ಥ ಸಂಬೋಧನೆ ಶಬ್ದಗಳನ್ನು ಅಕ್ಕನ ಸಂಗ್ರಹದಲ್ಲಿ ನೋಡಿ –

ನಚ್ಚಿಗೆ. ಸಲುಗುಗೆ, ಸೋಲುಗೆ, ಅಳಲುಗೆ, ಬಳಲುಗೆ, ಕರಗುಗೆ.... ಹಸಿವೆ ನೀನು ನಿಲ್ಲು, ಕೇಳಿರೆ, ಮಾಣಿಸಾ, ಕೆಡದಿರೆ, ಮೃಡನಡಿಯ, ಹಿಡಿಯಿರೆ, ಶಿವಧೋ ಕಾಯಯ್ಯಾ, ಬಿಡಿಸಾ ನಿಮ್ಮ ಧರ್ಮ, ಗೆಲಬಾರದು, ಅಱಿಯಬಾರದು, ಇನ್ನೇವೆನಿನ್ನೇವೆ ಅಕ್ಕ ಕೇಳಾ ಅಕ್ಕಯ್ಯಾ, ಎಲೆಗವ್ವಾ

ಅಕ್ಕನ ಶಬ್ದ ಕಲ್ಪದಿಂದಾದ ಪಡೆನುಡಿಗಳು, ಉಪಮೆಗಳು, ರೂಪಕಗಳು ಇತ್ಯಾದಿ ಅವಳ ಭಾಷೆಯ ಸೊಗಡಿನಲ್ಲಿ ಅಡಗಿದ ಅಣಿಮುತ್ತುಗಳು–

ಬಿಲ್ವ ಬೆಳವಲಕಾಯಿ ಒಂದಾಗಿ ಹಿಡಿಯಬಹುದೆ
ಶೃಂಗಾರವೆಂಬ ಹಂಚಿಗೆ ಹಲ್ಲತೆಱದಡೇನುಂಟು
ಕಱುವಿನ ರೂಹುನರಗಿಳಿಯನೋದಿಸುವಂತೆ
ಪರಿಮಳವ ಕೊಂಡು ಲಂಬಿಸುವ ತುಂಬಿ
ಚಿನ್ನದೊಳಗಣ ಬಣ್ಣ,
ಎಮ್ಮೆಗೊಂದು ಚಿಂತೆ ಸಮ್ಮಗಾಱಗೊಂದು ಚಿಂತೆ
ತೆರಣಿಯ ಹುಳು ತನ್ನ ಸ್ನೇಹದಿಂದ ಮನೆಯ ವಾಡಿ ತನ್ನ ನೂಲು ತನ್ನನೆ
ಸುತ್ತಿ ಸಾವಂತೆ; ಲೋಕದ ಚೇಷ್ಟೆಗೆ ರವಿಬೀಜವಾದಂತೆ ಕರಣಂಗಳ ಚೇಷ್ಟೆಗೆ
ಮನವೆಬೀಜ. ಬಲ್ಲಿದ ಹಗೆಯವ ತಗೆವನ್ನಬರ ಬಡವರ ಹರಣ
ಹಾಱಿಹೋಗಿತ್ತು. ಅಕ್ಕಿ ಇಲ್ಲದ ತುಪ್ಪೊಕ್ಕೆ ಅಗ್ಗವಣಿಯನೆಱವೆ
ಚಿನ್ನದ ಕತ್ತಿಯಲ್ಲಿ ತಲೆಹೊಯ್ದಡೆ ಸಾಯದಿರ್ಪರೆ
ಉಸುರಿನ ಪರಿಮಳವಿರಲು ಕುಸುರಿನ ಹಂಗೇಕೆ
ಹಾವಿನ ಹಲ್ಲ ಕಳೆದು ಹಾವನಾಡಿಸಬಲ್ಲಡೆ ಹಾವಿನ ಸಂಗವೆ ಲೇಸು
ಗೂಗೆ ಕಣ್ಣ ಕಾಣಲಱಿಯದೆ ರವಿಯ ಬಯ್ವುದು
ಚಂದನವ ಕಡಿದು ಕೊಱೆದು ತೇದಡೆ ನೊಂದನೆಂದು ಕಂಪ ಬಿಟ್ಟಿತ್ತೇ
ಚಿತ್ರದ ಸತಿಯ ಶೃಂಗಾರವೇತಕ್ಕೆ ಪ್ರಯೋಜನ
ಹಣ್ಣ ಮೆದ್ದ ಬಳಿಕ ಆ ಮರವನಾರು ತಱಿದಡೇನು

ಚಂದ್ರಕಾಂತದ ಶಿಲೆಗೆ ಬಂದು ಗಜ ಹೋಱಿದಂತೆ
ಅವ ವಿದ್ಯೆಯ ಕಲಿತಡೇನು? ಸಾವ ವಿದ್ಯೆ ಬೆನ್ನ ಬಿಡದು
ಹಾಲ ಹಿಡಿದು ಬೆಣ್ಣೆಯನು ಅಱಿಸಲುಂಟೇ?
ಉಣಲೆಂದು ಬಂದ ಸುಖ ಉಂಡಲ್ಲದೆ ಹಱಿಯದು
ಮೊಲೆ ಮುಡಿ ಇದ್ದಡೇನು ಮೂಗಿಲ್ಲದವಳಿಂಗೆ
ಕಂದನಲ್ಲಿ ಕುಂದನಱಿಸುವರೆ
ತುಂಬಿದುದು ತುಳುಕದು ನೋಡಾ
ಗಿರಿಯಲ್ಲಲ್ಲದೆ ಹುಲ್ಲು ಮೊರಡಿಯಲ್ಲಾಡುವುದೆ ನವಿಲು?
ಬಂಜೆ ತಾಯಿಯ ಬೇನೆಯನಱಿವಳೆ
ಬೊಬ್ಬುಲಿಯನೇಱಿದ ಮರ್ಕಟನಂತೆ
ಕಟ್ಟಿದ ಮೆಱೆಗೆ ಕೋಡಿ ಮಾಣದು

ಇಂಥ ಹಲವಾರು ಉದಾಹರಣೆಗಳು ವಚನಗಳನ್ನು ಸಾಹಿತ್ಯ ಮೌಲ್ಯಕ್ಕೇರಿಸಿವೆ. ಹೀಗೆಯೇ ಮಹಾದೇವಿಯಕ್ಕನ ಶಬ್ದಕಲ್ಪದ ಅದ್ಭುತ ಜಗತ್ತು ನಮ್ಮ ಮನಸೂರೆಗೊಳ್ಳುತ್ತದೆ. ಅಂತೆಯೆ ಹನ್ನೆರಡನೆಯ ಶತಮಾನದಲ್ಲಿ ಮಹಾತ್ಮ ಬಸವಣ್ಣ ಅಕ್ಕನನ್ನ ಮನಸಾರೆ ಹೊಗಳಿ ಅವಳ ಶಬ್ದಕಲ್ಪಕ್ಕೆ ಮುಗ್ಧನಾಗಿದ್ದಾನೆ.

ಹೆಂಗೂಸಿನಂಗವ ನೋಡಿರೆ ಪುರಾತನರು
ಬಾಲತನದಂಗವ ನೋಡಿರೆ ಪುರಾತನರು
ಬ್ರಹ್ಮವನಾಚರಿಸಿ ತನ್ನ ಮಱಿದಿಪ್ಪುದ ನೋಡಿರೆ ಲಿಂಗವಂತರು
ತನ್ನಲ್ಲಿ ತಾನು ನಿಶ್ಚಯವಾಗಿ ಭಾಷೆ ಬೀಸರವೋಗದೆ ಇಪ್ಪ ಇರವು
ಕೂಡಲಸಂಗಮದೇವರಲ್ಲಿ ನಮ್ಮ ಮಹಾದೇವಿಯಕ್ಕಂಗಾಯಿತ್ತು.

ಇಲ್ಲಿ ಬಸವಣ್ಣ ಮಹಾದೇವಿಯಕ್ಕನ ವ್ಯಕ್ತಿತ್ವವನ್ನು ಅವಳ "ಬೀಸರವೋಗದ ಭಾಷೆ"ಯ ಮೂಲಕ ಗುರುತಿಸಿದ್ದು ಅವಳ ಶಬ್ದಕಲ್ಪದ ಕೌಶಲಕ್ಕೆ ಬರೆದ ಭಾಷೆಯಾಗಿದೆ.

೨೭. ಮಹಾದೇವಿಯಕ್ಕನ ಸ್ವರವಚನ ಸಾಹಿತ್ಯ

•

ಡಾ. ಚೆನ್ನಕ್ಕ ಪಾವಟೆ

ಮಹಾದೇವಿಯಕ್ಕನದು ಅನುಭಾವಪೂರ್ಣ ವ್ಯಕ್ತಿತ್ವ, ಅವಳ ಚರಿತ್ರೆಗಿಂತ ಚಾರಿತ್ರ್ಯಕ್ಕೆ ವಿಶೇಷ ಪ್ರಾಶಸ್ತ್ಯ. ಸಾಹಿತ್ಯದಲ್ಲಿ ರೂಪ ಗೊಂಡಿರುವ ಅಕ್ಕನ ಭಕ್ತಜೀವನದ ವಿಕಾಸವನ್ನು ಗಮನಿಸಿದರೆ ಅವಳ ಐಹಿಕಜೀವನ ನಿರೂಪಣೆಗಿಂತ ಆಧ್ಯಾತ್ಮಿಕ ಬದುಕಿನ ಸಿದ್ಧಿ ಅಧಿಕ ಗೋಚರಿಸುತ್ತದೆ. ಅವಳ ಮಧುರಭಕ್ತಿಯ ಪರಾಕಾಷ್ಠತೆ, ವೈರಾಗ್ಯದ ಪ್ರಖರತೆಯೊಂದಿಗೆ ವಿಕಾಸಗೊಳ್ಳುವ ಸರ್ವಾರ್ಪಣ ಭಕ್ತಿಯ ಕಲಾತ್ಮಕ ಚಿತ್ರಣಕ್ಕೆ ವಚನಸಾಹಿತ್ಯ ಪ್ರಧಾನ ಆಕರವಾಗಿದ್ದರೆ, ಸ್ವರವಚನಸಾಹಿತ್ಯ ಗೌಣ ಆಕರವೆನಿಸಿದೆ.

ಶರಣರ ಗದ್ಯಾತ್ಮಕ ಬರವಣಿಗೆಗೂ, ಸರ್ವಜ್ಞನ ಪದ್ಯಾತ್ಮಕ ಬರವಣಿಗೆಗೂ ನಾವು 'ವಚನ' ಎಂಬ ಪದವನ್ನೇ ಬಳಸುತ್ತೇವೆ. ಇದನ್ನು ನೋಡಿದರೆ 'ವಚನ' ಎಂಬ ಪದ ಗದ್ಯ ಆಕೃತಿಯನ್ನು ಸೂಚಿಸುವುದಿಲ್ಲ; ಪದ್ಯ ಆಕೃತಿಯನ್ನೂ ಸೂಚಿಸುವುದಿಲ್ಲ, 'ಪ್ರಾಮಾಣಿಕತೆ' ಎಂಬ ಆಶಯವನ್ನು ಸೂಚಿಸುತ್ತಿರಬಹುದೆನಿಸುತ್ತದೆ. ಪ್ರಾಮಾಣಿಕತೆ ಅಥವಾ ಪ್ರಮಾಣ ಮಾಡಿ ಹೇಳುವಿಕೆಗೆ ನಾವು 'ವಚನ' (Promise) ಎನ್ನುವುದನ್ನು ಇಲ್ಲಿ ನೆನೆಯಬಹುದು. ಆದುದರಿಂದ ವಚನವೆನ್ನುವುದು ಆತ್ಮದೇವತೆಯ ಮೇಲೆ ಅಣೆಇಟ್ಟು ಗದ್ಯರೂಪದಲ್ಲಿಯೋ ಪದ್ಯರೂಪದಲ್ಲಿಯೋ ಅಭಿವ್ಯಕ್ತ ಗೊಳಿಸಿದುದು ಎನ್ನಬೇಕಾಗುತ್ತದೆ. 'ಸುಳ್ನುಡಿ (ಸುರುಳ-ಪ್ರತಿಜ್ಞೆ, ವಚನ, ಸುರುಳ್+ನುಡಿ-ಸುರುಳ್ನುಡಿ-ಸೂಳ್ನುಡಿ) ಎಂಬುದಕ್ಕೆ ಇದೇ ಅರ್ಥ ಎನ್ನುತ್ತಾರೆ ಡಾ. ಕಲಬುರ್ಗಿಯವರು.

ಸ್ವರವಚನವೆಂಬುದು ವೀರಶೈವರು ಬಳಸಿದ ಒಂದು ಹೊಸ ಸಾಹಿತ್ಯಿಕ ಪರಿಭಾಷೆ. ನಿರ್ದಿಷ್ಟ ರಾಗ ತಾಳಸಮನ್ವಿತವಾಗಿರುವ ವಚನಗಳಿಗಿಂತ ಗಾತ್ರ ಮತ್ತು ಪಾತ್ರದಲ್ಲಿ ಭಿನ್ನವಾಗಿರುವ ಇವನ್ನು ಸ್ವರವಚನವೆಂದೂ, ಸ್ವರಪದವೆಂದೂ ಕರೆಯಲಾಗಿದೆ. ಸ್ಥೂಲ ಅರ್ಥದಲ್ಲಿ ಇದು ಹಾಡುಗಬ್ಬ. ಪ್ರಾರಂಭದಲ್ಲಿ ಪಲ್ಲವಿ ಇಲ್ಲವೆ ಪಲ್ಲವಿ-ಅನುಪಲ್ಲವಿ, ಆಮೇಲೆ ಕೆಲವು ಪದ್ಯಗಳು, ಕೊನೆಗೆ ಕಡ್ಡಾಯವಾಗಿ ಮುದ್ರಿಕೆ, ಇದು ಸ್ವರವಚನದ ರೂಪಮುದ್ರೆ, ಸಾಮಾನ್ಯವಾಗಿ ಪ್ರತಿಯೊಂದು ಸ್ವರವಚನಗಳ ರೂಪಮುದ್ರೆ. ಸಾಮಾನ್ಯವಾಗಿ ಪ್ರತಿಯೊಂದು ಸ್ವರವಚನಗಳ ತಲೆಯ ಮೇಲೆ ರಾಗಗಳ, ಕೆಲವೊಮ್ಮೆ ತಾಳಗಳ ನಿರ್ದೇಶನವಿರುತ್ತಿದ್ದು ಇದು ಶರಣರ ಸಂಗೀತ ಜ್ಞಾನಕ್ಕೆ ಸೂಚನೆ ಎನಿಸಿವೆ. ವೀರಶೈವತತ್ವ, ಲೋಕನೀತಿ ಇದರ ವಸ್ತುಸಂಪತ್ತು.

ವಚನಗಳ ಸಾಹಿತ್ಯಗುಣ ಸ್ವರವಚನದಲ್ಲಿ ಇಲ್ಲ ಎಂಬ ವಾದವಿದೆ. ಮೂಲತಃ ಸ್ವರವಚನ ಸಂಗೀತ ಮಾಧ್ಯಮದ ಸಾಹಿತ್ಯ. ಸಂಗೀತ ಮಾಧ್ಯಮ ಬಿಟ್ಟು ಲೇಖನಮಾಧ್ಯಮದ ಮೂಲಕ ಗಮನಿಸಿದರೆ ಇವುಗಳ ತತ್ವ ಪರಿಣಾಮಗಳಲ್ಲಿ ಕೊರತೆ ಕಂಡುಬರುವುದು ಸಹಜ. ಹೀಗಾಗಿ ಇದನ್ನು ಓದದೆ ಹಾಡಿದರೆ ಇವುಗಳ ನಿಜವಾದ ಸ್ವರೂಪ ಗೋಚರ.

ಅಯ್ಯಾ, ನೀ ಕೇಳಿದರೆ ಕೇಳು ಕೇಳದಿರ್ದೊಡೆ ಮಾಣು
ನಿನ್ನ ಹಾಡಿದಲ್ಲದೆ ನಾ ಸೈರಿಸಲಾರೆ ॥

ಎಂಬ ಮಹಾದೇವಿಯಕ್ಕನ ನುಡಿ, 'ಶಿವತತ್ವ ಗೀತವ ಪಾಡುವುದು, ಶಿವನ ಮುಂದೆ ನಲಿದಾಡುವುದಯ್ಯ' ಎಂಬ ಬಸವಣ್ಣನ ಹೇಳಿಕೆ[೨] ಅಂದು ಸ್ವರವಚನಗಳನ್ನು ಹಾಡುವುದು ರೂಢಿಯಲ್ಲಿದ್ದಿತ್ತೆಂದು ತಿಳಿದುಬರುತ್ತದೆ.

ವಚನಗಳನ್ನು ಸ್ವರವಚನಗಳನ್ನು ಸ್ತುತಿ, ಪೂಜೆ, ಗೋಷ್ಠಿಯ ಸಂದರ್ಭಗಳಲ್ಲಿ ಹಾಡುತ್ತಿದ್ದ ಉಲ್ಲೇಖಗಳು ಅಲ್ಲಲ್ಲಿಗೆ ದೊರೆಯುತ್ತವೆ. ಹರಿಹರನು ತನ್ನ ಲಿಂಗಾರ್ಚ ನರಗಳೆಯಲ್ಲಿ ಬತ್ತೀಸ ರಾಗಗಳಲ್ಲಿ ಲಲಿತ, ಬಂಗಾಳ, ಮಲಹರಿ ವರಾಳಿ ದೇಶಿ ಗುಜ್ಜರಿ, ದೇಶಾಕ್ಷಿ ಗಾಳರಾಗ ಗಳನ್ನು ಹೆಸರಿಸಿರುವನು.[೩] ಶಿವಾಲಯಗಳಲ್ಲಿ ಮೊಳಗುವ ಶಂಖದ, ಅಹತಗೊಳ್ಳುವ ಭೇರಿಯನಿನಾದದ ಹಿಮ್ಮೇಳದಲ್ಲಿ ಗುಡ್ಡರು ಸಿದ್ಧರಾಮನ ಒಂದು ಹಾಡನ್ನು ಶುದ್ಧ ಭೈರವಿಯಲ್ಲಿ ಹಾಡುತ್ತಿದ್ದುದಾಗಿ ಸಿದ್ಧರಾಮ ಚಾರಿತ್ರ್ಯ ವರ್ಣಿಸಿದೆ.[೪] ಸಿದ್ಧರಾಮನ ವಚನ ಗಳನ್ನು ಹಾಡುವುದನ್ನು ಕೇಳಿ ಭಕ್ತಿ ಮುಗ್ಧಳಾದ ಒಬ್ಬ ಕಾಂತೆ ದೂರದಿಂದ ಸೊನ್ನಲಿಗೆಗೆ ಬಂದು ಸಿದ್ಧರಾಮನ ಸಂದರ್ಶನ ಪಡೆದಳಂತೆ.[೫] ಒಬ್ಬ ಮಹೇಶ್ವರನು ಹಾಡಿದ ಬಸವನ ಒಂದು ಗೀತವನ್ನು ಕಳಿಂಗದೇಶದ ಮಹಾಭಕ್ತನಾದ ಮಹಾದೇವ ಶೆಟ್ಟಿಯು ಕೇಳಿ ಕಾತರಗೊಂಡು ತಲೆದೂಗಿ ಕಲ್ಯಾಣಕ್ಕ ಭಿಮುಖನಾಗಿ ನಡೆದನಂತೆ.[೬] ಅಜಗಣ್ಣನ ಮರಣಕ್ಕಾಗಿ ಮರುಗುತ್ತಿದ್ದ ಮುಕ್ತಾಯಕ್ಕನನ್ನು ಕಾಣುವ ಸಂದರ್ಭದಲ್ಲಿ ಪ್ರಭುದೇವರು 'ಪರಸ್ಥಲದ ಲಿಂಗಮಂ ಕರಸ್ಥಲದೊಳು ಸ್ಥಿತಿಷ್ಟು ಬಲದಹಸ್ತದೊಳು ವೀಣಾದಂಡಮಂ ಪಿಡಿದು ಪರಮಾ ನಂದರಸ ಒಸರಲು ಪ್ಲಾಡುವ ಸ್ವರವೆ ನಾದಬ್ರಹ್ಮದೊಳು ತರಹರಮಾಗಿ ದಿವ್ಯವಚನಾ ಮೃತಗಳಂ ಪಾಡುತ್ತ, ಬಂದನಂತೆ. ಗುರುರಾಜನ ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರೆಯು ಬಸವ ಪ್ರಭುದೇವ, ಸತ್ಯೇಶ, ಚಾಮಯ್ಯ, ಮಡಿವಾಳ ಮಾಚಿದೇವಯ್ಯ, ಅಜಗಣ್ಣ ಶಂಕರದಾಸಿಮಯ್ಯ, ಜೇಡರದಾಸ, ಕೇತಯ್ಯ, ಉದ್ಭಟ, ಕಕ್ಕಯ್ಯ ಚೆನ್ನಬಸವ, ಕಲ್ಲಿದೇಹ, ಹಲಾಯುಧ ಕೇಶಿರಾಜ, ಚಿಕ್ಕಾರ್ಯ, ಮಸಣಾರ್ಯ, ಸಿದ್ಧರಾಮ ಮಹಾದೇವಿಯಕ್ಕ, ಸೊಡ್ಡಳ ಬಾಚಾರ್ಯರ ಸಾಹಿತ್ಯವನ್ನು ಮಲ್ಲಿಕಾರ್ಜುನ ಪಂಡಿತಾರಾಧ್ಯರ ಕಾಲದಲ್ಲಿ ಜನತೆ ಮೈದುಂಬಿ ಹಾಡುತ್ತಿದ್ದರೆಂದು ತಿಳಿಸಿದೆ.[೮]

ಕಳೆದ ೮೦೦ ವರ್ಷಗಳ ಅವಧಿಯಲ್ಲಿ ಹುಟ್ಟಿದ ಈ ಸ್ವರವಚನ ಸಾಹಿತ್ಯವನ್ನು ಡಾ. ಕಲಬುರ್ಗಿಯವರು ೧) ಸಂಪಾದನೆಗಳು ೨) ಸ್ವತಂತ್ರ ಕೃತಿಗಳು ೩) ಬಿಡಿಸ್ವರವಚನಗಳು ಎಂದು ವರ್ಗೀಕರಿಸಿರುವರು. ಈ ವರ್ಗೀಕರಣದಲ್ಲಿ ಮಹಾದೇವಿಯಕ್ಕಗಳ ಒಟ್ಟು ಸ್ವರ ವಚನಗಳು ೮೫. ಅವು ಅನುಕ್ರಮವಾಗಿ ೧) ಅಂಗಸಂಗಿಯಾಗಿ ಸಂಬಂಧಿಯಲ್ಲ ೨) ಅಮ್ಮ ನಾನೆಂತು ತೊಳಲಬಹುದು ೩) ಅಱುಹಿಂದಲಾಚರಿಸಬೇಕು ೪) ಆಪತ್ತಿನೊಳ ಗಾದೆನಯ್ಯ ೫) ಇನ್ನೇತಕೆನ್ನಮದುವೆ ೬) ಇದ್ದರೆ ಇರಲಿ ಈ ದೇಹ ೭) ಎಂದಿರ್ಪನೋ ಈ ಗಿರಿಯಲಿ ೮) ಎಂದಿರ್ಪನೊ ಶ್ರೀ ಗಿರಿಯಲಿ ೯) ಎಮ್ಮವರೆನ್ನ ಮದುವೆಯ ಮಾಡಿದರು ೧೦) ಎಂತು

ನಾ ಸೈರಿಸಲಯ್ಯ ೧೧) ಎನಗೆ ಬಂದ ಬವರ ೧೨) ಎಲ್ಲವನು ಪೇಳುವೆನು ೧೩) ಏನು ಮಾಡಲಮ್ಮ ಶಾಂತ ೧೪) ಏನೋ ನಲ್ಲ ನೀ ೧೫) ಏನಂದೆಂಬೆ ೧೬) ಒಲ್ಲೆ ಗಂಡನ ಕೂಟವ ೧೭) ಒಲ್ಲೆನೊಕತನವ ೧೮) ಕನ್ನೆ ಹೂವಿನ ಬೇಡುತಿ ೧೯) ಕಂಗಳ ನೋಟವು ೨೦) ಕರೆ ಕರೆ ಕರೆ ಕರೆ ೨೧) ಕಣ್ಣಾರೆ ಕಂಡೆ ೨೨) ಕೆರೆಯ ತಡಿಯಲೆಂದು ೨೩) ಜ್ಞಾನದೀಪಕ್ಕೆ ಸೋ ೨೪) ಕೈಯ ತೋರೆ ೨೫) ಗುಮ್ಮಬಂದಿದೆ ಕೋ ೨೬) ಜೋ ಜೋ ಈಶ ೨೭) ತನ್ನ ತಾನರಿಯ ೨೮) ತನ್ನಿಂದ ತಾನರಿದ ಬಳಿಕ ೨೯) ತೂಗಲಿಲ್ಲದ ವಾನರನು ೩೦) ತೂಗು ತೊಗೆನ್ನ ೩೧) ತೂಗಿದೆನು ನಿಜ ೩೨) ತೋರಿಸೈ ಗುರುನಾಥನೆ ೩೩) ನಮ್ಮ ಮನೆಯಲಿಂದು ೩೪) ನಂಬಿದೆ ಗುರುವೆ ೨೫) ಗುಮ್ಮಬಂದಿದೆ ಕೋ ೨೬) ಜೋ ಜೋ ಈಶ ೨೭) ತನ್ನ ತಾನರಿಯ ೨೮) ತನ್ನಿಂದ ತಾನರಿದ ಬಳಿಕ ೨೯) ತೂಗಲಿಲ್ಲದ ವಾನರನು ೩೦) ತೂಗು ತೊಗೆನ್ನ ೩೧) ತುಗಿದೆನು ನಿಜ ೩೨) ತೋರಿಸೈ ಗುರುನಾಥನೆ ೩೩) ನಮ್ಮ ಮನೆಯಲಿಂದು ೩೪) ನಂಬಿದೆ ಗುರುವೆ ೩೫) ನಿಬ್ಬಣಕ್ಕೆ ಹೋಗುತ್ತದಲ್ಲೈ ೩೬) ಬಸವನ ನೆನೆಮನವೆ ೩೭) ಮನವೇ ನೋಡು ೩೮) ಮುಕುತಿ ಹೋಯಿತು ೩೯) ಬೆಳಗಾಯಿ ತೇಳಯ್ಯ ೪೦) ಲಿಂಗದಾದಿ ಮಧ್ಯದಲ್ಲಿ ೪೧) ಲಿಂಗದೊಳು ಮೆಟ್ಟಿರುವನು ೪೨) ಲಿಂಗ ಬಾರಾಮಂಗಳನೆ ೪೩) ಸುರಬೀಜ ಪುನರಪಿ ೪೪) ಹೃದಯ ಸರೋಜ ೪೫) ಹೋದೆನೂರಿಗೆ ಮುಂತಾದವು.

ಇವು ಮಹಾದೇವಿಯಕ್ಕನ ಇಲ್ಲಿಯವರೆಗೆ ದೊರೆತ ಸ್ವರವಚನಸಾಹಿತ್ಯ ಸಂಪತ್ತು. ಈ ಹಾಡುಗಳ ತಲೆಯ ಮೇಲೆ ಕಾಂಬೋಧಿ, ಶುದ್ಧ ಕಾಂಬೋಧಿ ತೆಲುಗು ಕಾಂಬೋಧಿ ಅಹರಿ, ರಾಮಕ್ರೀ ನಾರಾಯಣಿಗೌಳ, ದೇಸಿ, ಪಹಡಿ, ಶಂಕರಾಭರಣ, ಮಧುಮಾಧವಿ, ಲಲಿತ, ಬವುಳಿ ನಾದರಾಮಕ್ರೀ, ಪಹಾಡಿ ದೇಸಿತೆಲುಗ ಮುಂತಾದ ರಾಗಗಳ ವ್ಯವಸ್ಥಿತ ರೀತಿಯ ಸಂಗ್ರಹ, ವರ್ಗೀಕರಣ, ವಿಶ್ಲೇಷಣೆ ಕೆಲಸ ನಡೆದರೆ ವೀರಶೈವ ಸ್ವರವಚನಕಾರರ ಸಂಗೀತ ಜ್ಞಾನ. ಸಂಗೀತ ಪ್ರಸಾರ ಇತ್ಯಾದಿಗಳನ್ನು ಗುರುತಿಸಿ ಹರಿದಾಸರಿಗೆ ಪೂರ್ವದಲ್ಲಿ ಮತ್ತು ತರುವಾಯ ಇವರಿಂದ ಕರ್ನಾಟಕಕ್ಕೆ ಸಂದ ಸಂಗೀತದ ಕಾಣಿಕೆಯನ್ನು ಎತ್ತಿತೋರಿಸ ಬಹುದಾಗಿದೆ. ಇವು ವಚನಸಾಹಿತ್ಯದ ಪರೀವೀಕ್ಷಣೆ, ಪರಿಷ್ಕರಣ ಮತ್ತು ಪ್ರಕಟನೆಗೆ ಕೊಟ್ಟಂತೆ ಸ್ವರವಚನಸಾಹಿತ್ಯಕ್ಕೆ ಗಮನ ಕೊಟ್ಟಿಲ್ಲ. ಈ ಕೆಲಸ ವ್ಯವಸ್ಥಿತವಾಗಿ ನಡೆದರೆ, ಕನ್ನಡದ ಕೀರ್ತನ ಸಾಹಿತ್ಯದ ಮಗ್ಗುಲಲ್ಲಿ ಇಂಥದೇ ಇನ್ನೊಂದು ಪ್ರಕಾರ ಎದ್ದುಕಾಣಬಹುದಾಗಿದೆ' ಎಂಬ ವೀರಶೈವ ಸ್ವರವಚನಸಾಹಿತ್ಯದ ಲೇಖಕ ಡಾ. ಕಲಬುರ್ಗಿಯವರ ಕರೆಯನ್ನು ನಾವು ಕಾರ್ಯಗತಗೊಳಿಸಬೇಕಿದೆ.

ಛಂದೋದೃಷ್ಟಿಯಿಂದಲೂ ಅಕ್ಕನ ಸ್ವರವಚನಗಳು ವೈವಿಧ್ಯಪೂರ್ಣವಾಗಿವೆ. ಮಾತ್ರಾ ಛಂದಸ್ಸು, ಅಂಶಛಂದಸ್ಸು ಇವೆರಡರ ಮಿಶ್ರಛಂದಸ್ಸುಗಳ ಪದ್ಯಗಳು ಇಲ್ಲಿವೆ. ಆಧುನಿಕ ಭಾವಗೀತೆಯ ಲಯ ಮಟ್ಟುಗಳನ್ನು ಹೋಲುವವು ಈ ಸ್ವರವಚನಗಳು.

ವಿರಾಗಿಣಿ ಮಹಾದೇವಿಯಕ್ಕನ ಆತ್ಮನಿರ್ಭರತೆ, ಅಚಲನಿಷ್ಠೆ ಧೀಮಂತಿಕೆ ಬೆರಗುಗೊಳಿಸು ವಂಥದು. ಅಂತರಂಗ ಬಹಿರಂಗದಲ್ಲಿ ಚನ್ನನೊಲುಮೆ ತುಂಬಿಕೊಂಡ ಮಾದೇವಿಯ ಮೈಮನಗಳಲ್ಲಿ ಉತ್ಕಟ ಭಾವ ತರಂಗಗಳು ವ್ಯಾಪಿಸಿಕೊಂಡಿವೆ. ಈ ತರಂಗಗಳ ಅಭಿವ್ಯಕ್ತಿಯೆ ಅವಳ ಸ್ವರವಚನಗಳು.

ಹಗಲಿರುಳೆನ್ನದ ಚೆನ್ನಭಕ್ತಿಯಲಿ ಮುಳುಗೇಳುತ್ತಿರುವ ಅಕ್ಕನ ಅಲೌಕಿಕ ಪ್ರೇಮಕ್ಕೆ ನಿಶ್ಚಿತನೆಲೆಯನ್ನು ಅರಹುವ ಗುರು ಅವಶ್ಯಕನೆನಿಸಿದ್ದಾನೆ. ಲೌಕಿಕಜೀವನದಿಂದ ಪಾರು ಮಾಡುವ ಗುರುವನ್ನು ಅಂಬಿಗನಿಗೆ ಹೋಲಿಸಿ ತೆರೆತೆರೆಯಾಗಿ ತೇಲಿಬರುವ ಪ್ರವಾಹದಾಟಲು ಶಕ್ತಿಸಾಲದಾದಾಗ ಅದನ್ನು ಕರುಣಿಸುವ ಸಮರ್ಥಗುರು ಅಂಬಿಗ ಎಂಬ ಸುಂದರ ರೂಪಕದಲ್ಲಿ ಗುರುವಿನ ಯೋಗ್ಯತೆ ಮೂಡಿ ನಿಂತಿದೆ. ಅಂಥ ಗುರು ಅಂಬಿಗನ ಸತ್ಯದ ಹುಟ್ಟಿನಿಂದ ಭಕ್ತಿ ಪಂಥದತ್ತ ಸಾಗುವ ಭಕ್ತನಿಗೆ ಮುಕ್ತಿಮಂಟಪ ದೊರಕಿಸಲು ಕೋರುವ ಅಕ್ಕ.

ಸತ್ಯವೆಂಬ ಹುಟ್ಟಂಬಿಗ ಸದ
ಭಕ್ತಿಯೆಂಬ ಪದವಂಬಿಗ
ನಿತ್ಯಮುಕ್ತ ನಮ್ಮ ಚೆನ್ನಮಲ್ಲಿಕಾರ್ಜುನನ
ಮುಕ್ತಿಮಂಟಪಕೊಯ್ಯೊ ಅಂಬಿಗ ॥

ಸಾಕ್ಷಾತ್ ಶಿವಸ್ವರೂಪನಾದ ಗುರು ಅಂಬಿಗನೆಂಬ ಭಾವನೆ ಮಾತ್ರವಲ್ಲ. ಭಾಷೆಯಲ್ಲಿ ಹೆಪ್ಪುಗಟ್ಟಿ ರೂಪಕತೆಯಲ್ಲಿ ಸ್ವಾಭಾವಿಕತೆಯನ್ನು ಈ ಪದ್ಯ ಕೊಡುತ್ತದೆ. ದುರ್ದೈವದ ಸಂಗತಿಯೆಂದರೆ ಈ ಸ್ವರವಚನ "ಪುರಂದರವಿಠಲ", ಅಂಕಿತದಲ್ಲಿಯೂ ಕೆಸ್ತೂರದೇವನ ಸ್ವರವಚನ ಎಂಬ ಹೆಸರಿಂದಲೂ ಪ್ರಚಾರವಾಗುತ್ತಲಿದೆ.

ಅನುಭಾವ ಮಾರ್ಗ

ಶರಣರು ತಮ್ಮ ಸಾಧನೆಯ ಮಾರ್ಗದಲ್ಲಿ ಅವಲಂಬಿಸಿದುದು ತಾತ್ವಿಕ ಹಿನ್ನೆಲೆಯನ್ನು ಆದರೆ ಅದನ್ನು ತಾತ್ವಿಕಜಿಜ್ಞಾಸೆಯ ಮಟ್ಟದಲ್ಲಿ ನಿಲ್ಲಿಸದೆ ಅನುಭಾವದಿಂದ ಆನಂದತ್ತ ಮುನ್ನಡೆಸಿದರು. ಪ್ರಧಾನವಾಗಿ ಅವರದು ಅನುಭಾವ ಮಾರ್ಗ. ಅದರ ಅವಲಂಬನೆಗೆ ಹಂದರವಾಗಿ ವೀರಶೈವ ಸಿದ್ಧಾಂತ ಪರಿಣಮಿಸಿತು. ಅದರಲ್ಲೂ ವೀರಶೈವದ ಷಟಸ್ಥಲಮಾರ್ಗ ಅವರಿಗೆ ಹೆಚ್ಚಾಗಿ ಹಿಡಿಸುತ. ಭಕ್ತಿಜ್ಞಾನಕ್ರಿಯೆಗಳು ಇಲ್ಲಿ ಮುಪ್ಪುರಿಗೊಂಡು ಸಾಮರಸ್ಯಕ್ಕೇರಿಸುವ ನಿಚ್ಚಣಿಕೆಗಳನ್ನು ನಿರ್ಮಿಸಿವೆ. ಶರಣರ ಸಾಧನೆಯಿಂದ ಷಟಸ್ಥಲ ಪರಿಪೂರ್ಣತೆಯೊಂದಿಗೆ ಹೊಸ ಕಾಂತಿಯನ್ನು ಪಡೆಯಿತು. ಈ ಚೌಕಟ್ಟಿನಲ್ಲಿ ಮಹಾದೇವಿಯಕ್ಕನ ಸ್ವರವಚನಗಳನ್ನು ವಿಶ್ಲೇಷಣೆ ಮಾಡಬಹುದಾಗಿದೆ.

ಇಲಿ ಸ್ಥಲವೆಂದರೆ ಶಿವತತ್ವ, ಅದು ಚಲನೆಯಿಂದ ಅಂಗಸ್ಥಲ ಲಿಂಗಸ್ಥಲವೆಂದು ಎರಡಾಗುತ್ತದೆ. ಇದರಲ್ಲಿ ಲಿಂಗಸ್ಥಲ ಶಿವ, ಅಂಗಸ್ಥಲ ಜೀವ. ಒಂದು ಉಪಾಸ್ಯ, ಇನ್ನೊಂದು ಉಪಾಸಕ ಇದನ್ನೇ ಮಹಾದೇವಿಯಕ್ಕ

ಒಂದೇ ಎರಡಾದವೆಯಮ್ಮ
ಎರಡೇ ಮೂರಾದವೆಯಮ್ಮ
ಮೂರೇ ಆರಾದವೆಯಮ್ಮ
ಆರೇ ಮೂವತ್ತಾರಾದವೆಯಮ್ಮ
ಆ ಮೂವತ್ತಾರೇ ಇನ್ನೂ ಹದಿನಾರದವೆ ಅಮ್ಮ
ಇನ್ನೂರ ಹದಿನಾರಾಗಿ ಲಿಂಗದೇವರ ತೃಪ್ತಿಯ ನೋಡಿದೆನೆ ಅಮ್ಮ ॥

ಎಂದು ಹೇಳಿದುದು ಕಟಕಾದಿರೂಪಗಳನ್ನು ಧರಿಸಿ ಚಿನ್ನ ಬೇರೆ ಬೇರೆ ಹೆಸರು ಪಡೆದರೂ

ಸ್ವಭಾವತ ಚಿನ್ನವೇ ಆಗಿರುವಂತೆ ಲಿಂಗಸ್ಥಲದಂತೆ ಅಂಗಸ್ಥಲವೂ ಪರಶಿವಸ್ವರೂಪವಾಗಿಯೇ ಇರುತ್ತದೆ. ಇದನ್ನು ನೋಡಿದರೆ ಭಕ್ತಿಸ್ಥಲದಿಂದ ಐಕ್ಯಸ್ಥಲದವರೆಗೆ ಏರುವ ಆಧ್ಯಾತ್ಮಿಕ ಯಾತ್ರೆಯ ಮುನ್ನಡೆಯನ್ನು ಅದಕ್ಕೆ ಅವಶ್ಯಕವಾದ ಉಪಾಸನಾವಿಧಾನ, ಲಿಂಗಸ್ವರೂಪ, ಶಕ್ತಿಭಕ್ತಿಗಳ ಕಲ್ಪನೆಯನ್ನು ಮಹಾದೇವಿಯಕ್ಕ ತನ್ನ ಸ್ವರವಚನಗಳಲ್ಲಿ ಅರ್ಥವತ್ತಾಗಿ ಮೂಡಿಸಿದ್ದಾಳೆ.

ಷಟಸ್ಥಲದ ವೈಶಿಷ್ಟ್ಯವಿರುವುದು ತಾತ್ವಿಕ ಸಿದ್ಧಾಂತಕ್ಕೂ ಧಾರ್ಮಿಕ ಆಚರಣೆಗೂ ಸಮನ್ವಯವನ್ನು ಕಲ್ಪಿಸಿರುವಲ್ಲಿ. ಅದು ತಾತ್ವಿಕ ಸಿದ್ಧಾಂತದ ಅಡಿಪಾಯದ ಮೇಲೆ ನಿಂತಿರಬೇಕು. ವಿಚರ ಸಮನ್ವಿತವಾಗಬೇಕು. ತಾತ್ವಿಕ ಜಿಜ್ಞಾಸೆ ಶುಷ್ಕವಾಗದೆ ಆಚಾರದೊಡನೆ ಬೆರೆತು ಜೀವನದಲ್ಲಿ ಅಳವಟ್ಟಿರಬೇಕು. ಇವೆರಡನ್ನು ಸಾಧಿಸಿದುದು ಷಟ್‌ಸ್ಥಲ. ಆಧ್ಯಾತ್ಮಿಕ ಸಾಧನೆಗೆ ಒಡ್ಡಿರುವ ಒಂದು ಮನಶಾಸ್ತ್ರದ ಕೈಪಿಡಿ ಎಂದು ಇದನ್ನು ಕರೆಯಬಹುದು. ಭಕ್ತಸ್ಥಲ ಮಾಹೇಶ್ವರಸ್ಥಲ ಗಳಲ್ಲಿ ಸಾಧಕನ ಸಂದೇಹ ತಳಮಳ ಆತಂಕ ಕುತೂಹಲ, ನಿಷ್ಠೆ ನಿರೀಕ್ಷಣೆ ಈ ಎಲ್ಲ ಭಾವನೆಗಳು ವ್ಯಕ್ತವಾಗುತ್ತವೆ. ಈ ಜಗತ್ತೇ ಒಂದು ಪ್ರಯೋಗಶಾಲೆಯಾಗುತ್ತದೆ. ಅಂತರಂಗದ ಬಹಿರಂಗಗಳೆರಡನ್ನು ಒಳಹೊಕ್ಕು ನೋಡಿ ಬೆರಸಿದರೂ ಬೇರಾಗದೆ ಬೆಳೆದು ನಿಲ್ಲುತ್ತದೆ. ಇಲ್ಲಿ ತತ್ವಜಿಜ್ಞಾಸೆ. ಜ್ಞಾನಮಾರ್ಗ, ಕ್ರಿಯಾಚರಣೆಯ ಕರ್ಮಮಾರ್ಗ, ಉಪಾಸನೆಯು ಭಕ್ತಿಮಾರ್ಗಗಳ ಮುಪ್ಪುರಿ ಇರುತ್ತದೆ.

ಆತ್ಮ ಜಾಗೃತಿ

ಭಕ್ತಸ್ಥಲದ ಮೊದಲನೆಯ ಹಂತ ಪಿಂಡಸ್ಥಲ. ವಿಶ್ವಾಸ ಮತ್ತು ಕ್ರಿಯೆ ಇವೆರಡೂ ಭಕ್ತಸ್ಥಲದ ಮುಖ್ಯ ಲಕ್ಷಣಗಳು. ಪಾಪಸಮೂಹವನ್ನು ಕಳೆದುಕೊಂಡು ಶುದ್ಧಾಂತಃಕರಣ ನಾದವನು ಪಿಂಡಸ್ಥಲಯೋಗ್ಯನಾಗುತ್ತಾನೆ. ಅವನಲ್ಲಿ ಶಿವತತ್ವ ಸುಪ್ತವಾಗಿ ಅಡಗಿರುತ್ತದೆ ಎಂಬುದನ್ನು ಅಕ್ಕ ತನ್ನ ಸಾಧನೆಯಲ್ಲಿ

ಬಕುತಿರತಿಯ ಸಂಭಾಷಣೆಯಿಂದವೆ
ಯುಕುತಿಯ ಮರೆದೆನು ಕಾಯದ ಜೀವದ
ಪ್ರಕೃತಿಯ ತೊರೆದೆನು ಸುತ್ತಿದ ಮಾಯಾಪಾಶವ ಹರಿದೆನೊ
ಸುಕೃತಿಯಾಯ್ತು ನಿಮ್ಮಯ ನೆನಹಿಂದವೆ
ಮುಕುತಿಯ ಫಲಗಳ ದಾಂಟಿಯೆ ಬಂದೆನು
ಸಕುತೆಯಾದೆ ನಾ ಪ್ರಾಣಲಿಂಗಕೆ ॥

ಎಂದು ವಿವರಿಸಿರುವಳು. ತನ್ನ ಸುಪ್ತಚೇತನದ ನಿಲುವಿನ ಬಗೆಗೆ ಸಾಧಕನಿಗೆ ತನ್ನ ಮಾರ್ಗದ ಸ್ಪಷ್ಟಕಲ್ಪನೆ ಇರಬೇಕೆಂಬುದು ಅಕ್ಕನ ಅನಿಸಿಕೆ. ತಾನು ಶಿವಸ್ವರೂಪನೆಂದು ಶಿವನಾಗಿಯೆ ಶಿವನನ್ನು ಪೂಜಿಸುವದು, ಶಿವನಲ್ಲದವನಿಗೆ ಶಿವೋಪಾಸನೆ ಸಿದ್ಧಿಸದು ಎಂಬುದು ಅಕ್ಕ ನಂಬಿದ ನಂಬಿಕೆ.

ಹೀಗೆ ತನ್ನ ಸ್ವಸ್ವರೂಪವನ್ನು ತತ್ವತಃ ತಿಳಿದ ಭಕ್ತನಿಗೆ ವಿಸ್ಮೃತಿಯೊಂದು ಈ ಮರೆವೆಗೆ ಕಾರಣವಾಗಿ ಸಂಸಾರದ ವಿಚಾರದಲ್ಲಿ ಜಿಹಾಸೆ ಸಹಜವಾಗಿಯೆ ಉಂಟಾಗುತ್ತದೆ. ಅದೇ ಸಂಸಾರಹೇಯಸ್ಥಲ. ಈ ಸಂಸಾರ ತಿರಸ್ಕರಣೀಯ, ತ್ಯಾಜ್ಯ ಎಂಬುದು ಇಲ್ಲಿನ ಉದ್ದೇಶವಲ್ಲ ಇದನ್ನು ಮೀರಿ ಮುನ್ನಡೆಯಬೇಕಾದರೆ ನಿರ್ಲಿಪ್ತ ಮನೋಭಾವ ಅವಶ್ಯಕ.

ಇದ್ದರೆ ಇರಲಿ ಈ ದೇಹ ಹೋದರೆ ಹೋಗಲಿ
ಪಂಚತತ್ವಭಾವವಳಿದು ಸರ್ವಸಾಕ್ಷಿಯಾದ ಮೇಲೆ ॥
ಎಂಬ ದೃಢನಿರ್ಧಾರ,
ಅರುಹಿಂದಲಾಚರಿಸಬೇಕು.
ಮರಹಿಲ್ಲದೆ ತಾನಿರಬೇಕು
ತೆರೆಯ ಮರೆಯ ಕುರುಹರಿಯಬೇಕು
ಪರಬ್ರಹ್ಮದೊಳಗೆ ತಾ ನೆರೆಯಬೇಕು ॥

ಆತ್ಮಜಾಗೃತಿಯ ಎಚ್ಚರಿಕೆಯಮಾತು ಭಕ್ತಸ್ಥಲದಲ್ಲಿ ಬಹಳ ಅಗತ್ಯ ಎಂಬುದು ಅಕ್ಕನ ಈ ಸ್ವರವಚನದಿಂದ ತಿಳಿದುಬರುವ ಅಂಶ. ಜ್ಞಾನದ ಬಲದಿಂದ ತಮ್ಮನ್ನು ತಾವು ಅರಿಯುತ್ತಲೇ ತಮ್ಮೆದುರಿನ ಪ್ರಪಂಚವನ್ನೂ ಅರ್ಥಮಾಡಿಕೊಳ್ಳಲು ಯತ್ನಿಸಿದುದು ಶರಣಧರ್ಮ. ಜ್ಞಾನ ಕ್ರಿಯೆಗಳ ಮೂಲಕ ಮನುಷ್ಯಜೀವನವನ್ನು ಸಾರ್ಥಕಗೊಳಿಸುವ ಹಲವೊಂದು ಸೋಪಾನ ಗಳನ್ನು ಕುರಿತು ಶಿವಶರಣರು ತಮ್ಮದೇ ಆದ ತತ್ವಜ್ಞಾನದ ಪರಿಭಾಷೆಯನ್ನೇ ನಿರ್ಮಿಸಿ ಕೊಂಡಿದ್ದರೆನ್ನಬೇಕು. 'ತನುವಿನೊಳಗೆ ಹುಸಿ ತುಂಬಿ ಮನದೊಳಗೆ ವಿಷತುಂಬಿ ಮನೆಯೊಳಗೆ ಮನೆಯೊಡೆಯನಿಲ್ಲ' ಎಂಬ ಕಳವಳದೊಡನೆ ತಮ್ಮ ಸ್ವಂತಮನೆಯನ್ನು ಹಸನುಗೊಳಿಸುವ ಹವ್ಯಾಸ ಅವರದು. ಈ ನೈರ್ಮಲ್ಯ ವಿಧಾನಕ್ಕೆ ತಕ್ಕ ಜ್ಞಾನಪೂರ್ಣಕ್ರಿಯೆ, ಕ್ರಿಯಾಶೀಲಜೀವನಕ್ಕ ಅಕ್ಕ ತನ್ನನ್ನೇ ತಾನು ಸಮರ್ಪಿಸಿಕೊಂಡುದು. . Philosophy is not only a dey to knowledge but a pathway to reality. To follow this pathway is not only to know but to strive and, if the striving is successful ultimately to be ಎಂದು C.E.M. Joadರಂಥ ಪಾಶ್ಚಿಮಾತ್ಯ ಚಿಂತಕರು (Story of Indian Civilization) ಅಭಿಪ್ರಾಯ ಪಟ್ಟಿರುವುದನ್ನು ಈ ಸಂದರ್ಭದಲ್ಲಿ ಗಮನಿಸಬೇಕು. ಕೇವಲ ತಾತ್ವಿಕ ಚಿಂತನೆಯೇ ತತ್ವಜ್ಞಾನದ ಗುರಿಯಾಗದೆ ಕ್ರಿಯೆಗಳಲ್ಲಿ ತೊಡಗುವುದಾಗಿದೆ ಎಂಬುದು ನಿಜವಾದರೆ ಇದು ವಚನಕಾರರಿಗೂ ತುಂಬ ಸಮನ್ವಯಿಸುತ್ತದೆ.

ಕಾಲಪ್ರವಾಹದೊಡನೆ ಹತ್ತು ಕಡೆಗೆ ಹರಿಯುವ ಮನೋಲಹರಿಗಳಿಗೆ ಸಾರ್ಥಕತೆಯ ಕೇಂದ್ರ ಬಿಂದು ಈ ಮನ.

ಕರೆ ಕರೆ ಕರೆ ಕರೆ ಘನವಯ್ಯೋ
ಕರೆದು ಹೇಳಿ ಎಮ್ಮವರಿಗೆ ಈ ಸುದ್ದಿಯ
ಅತ್ತೆ ಮಾತುಗಳ್ಳೆ, ಚಿತ್ತವ ಕಲಕಿದ
ಮತ್ತೆ ಮಾವನೊಳಿದನಲ್ಲವೆನ್ನ
ಚಿತ್ತವಲ್ಲಭನಿಂದಾದ ಬಂಧ ನಾ
ವಿಸ್ತರಿಸಲಾರೆ ಹೇಳಿ ಎಮ್ಮವರಿಗೆ ॥

ತನ್ನ ಮನಸ್ಸಿನ ತಾಮಸದಿಂದ ತಾನೇ ಅಂಧಕ್ಕಾರ ನಿರ್ಮಿಸಿಕೊಳ್ಳುವ ಈ ಸ್ಥಿತಿ ದುಃಖಕ್ಕೆ ಮೂಲಕಾರಣವೆನಿಸುತ್ತದೆ. ಅದಕ್ಕೆ ತನ್ನ ವೈರಾಗ್ಯದ ಪಕ್ವಾವಸ್ಥೆಯಲ್ಲಿ,

ಹಸಿವೆ ನೀನು ನಿಲ್ಲು ತೃಷೆಯೇ ನೀನು ನಿಲ್ಲು ನಿಲ್ಲು
ನಿದ್ರೆಯೇ ನೀನು ನಿಲ್ಲು ಕಾಮನೆ ನೀನು ನಿಲ್ಲು ನಿಲ್ಲು ॥

ಎಂದು ತನ್ನ ದೈಹಿಕ ಮಾನಸಿಕ ದೌರ್ಬಲ್ಯಗಳಿಗೆ ಕಡಿವಾಣಹಾಕಿ ತನ್ನ ವೈರಾಗ್ಯ ಮೆರೆದವಳು ಅಕ್ಕ. ಮನಸ್ಸಿನ ಈ ಸ್ವರೂಪ ಅರಿತು ಅದಕೆ ಅತೀತನಾಗಲು ಅಕ್ಕ ಕೈಕೊಂಡ ಸತತ ಪ್ರಯತ್ನದಿಂದ ಕಲಿತ ಪಾಠ

ಹರಿಯ ಮನೆಯ ಮೆಟ್ಟಿ ಮೇಯಬೇಕು । ಮರ
ಕಂಗಳೆಲ್ಲವ ಕೊಂದುರಿಯಬೇಕು.
ಕರಿಯ ಬೇಡನ ಶಿರವರಿಯಬೇಕು । ತನ್ನ
ಬರಿಯ ಮನೆಯ ಹೊಕ್ಕು ನೆರೆಯಬೇಕು ॥
ಮಂಜಿನ ಕೊಡನೊಡೆದರಿಯಬೇಕು । ಅದ
ರಂಜಿಪ ಬಂಜೆಯು ಸರಿಯಬೇಕು
ಮುಂಜೂರಲಮೃತವ ಕರೆಯಬೇಕು ಬೇಗ
ನಂಜದೆ ಸುರಿದು ಮೈಮರೆಯಬೇಕು ॥
ಹುಲ್ಲೆಯ ತಲ್ಲಣವಡಗಬೇಕು ಅಲ್ಲಿ
ಮೆಲ್ಲನೆ ಬಿಲ್ಲುಗಾರ ಸೊಲ್ಲಬೇಕು
ಸೊಲ್ಲುಗಾರನ ಬಿಲ್ಲ ಮೆಲ್ಲಬೇಕು ಚನ್ನ
ಮಲ್ಲಿಕಾರ್ಜುನನಲ್ಲಿ ನಿಲ್ಲಬೇಕು ॥

ಇಲ್ಲಿ ಪ್ರಾಣಾಶ್ರಯವನ್ನು ಮೆಟ್ಟಿ ನಿಲ್ಲುವುದು. ಮಿಥ್ಯಾತನುವೆಂಬ ಕೊಡನೊಡೆದು ಮಾಯೆಯನ್ನು ಗೆಲಿದು ಬ್ರಹ್ಮರಂಧ್ರವೆಂಬ ಮನೆಯ ಹೋಗುವುದು, ಜೀವಭಾವದ ತಲ್ಲಣವಡಗಿ ಅಲ್ಲ ಸದ್ಗುರುವಿನ ಉಪದೇಶದಿಂದ ಶಿವಯೋಗದ ನಿರ್ಧಾರವನ್ನು ಅಂಗೀಕರಿಸುವುದು ಅಕ್ಕ ಕಲಿತ ವಿದ್ಯೆ.

ಸಾಧಕನ ಮುಂದಿನ ಪ್ರಗತಿಗೆ ನಿಷ್ಠೆ, ಅವಧಾನ, ಅನುಭಾವಗಳು ಕೈಗೂಡಬೇಕು. ಅಹಂಕಾರವನ್ನು ತ್ಯಜಿಸಿ ದೈವಶಕ್ತಿಗೆ ಶರಣಾಗುವುದು ಇಲ್ಲಿಯ ಸಾಧಕನ ಸಂಪೂರ್ಣ ಶರಣಾಗತಿ. ಎಂಥ ಸಂದರ್ಭದಲ್ಲಿಯೂ ಏಕೈಕನಿಷ್ಠೆ ಭಕ್ತನ ಮೊದಲ ಲಕ್ಷಣವೆನಿಸಬೇಕು. ಅದಕ್ಕೆ ಶ್ರದ್ಧೆ ಮತ್ತು ನಿಷ್ಠಗಳೆರಡು ಸಾಧಕನ ಜೀವನದ ನೆಲೆಗಟ್ಟುಗಳೆನಿಸಬೇಕು. ಅವೆರಡರ ಸಮನ್ವಯ ಮತ್ತು ವಿಕಾಸ ಇಲ್ಲಿ ಕಂಡುಬರುವದು.

ಈ ಸಂಸಾರ ಬಂಧನ ನಶ್ವರ ಹೇಯ ಎಂದು ತಿಳಿದವಳಾದರೂ ಅಕ್ಕ ಇದರಿಂದ ಪಲಾಯನ ವಾದವನ್ನು ಸೂಚಿಸುವುದಿಲ್ಲ. ಇದೆಲ್ಲ ಮಾಯೆ, ಭ್ರಾಂತಿಜನ್ಯ, ವ್ಯರ್ಥ ಎಂಬ ಅಸಹಜ ನಿರಾಶೆಯ ವೈರಾಗ್ಯ ಅಲ್ಲಿಲ್ಲ. ಇದನ್ನು ಸತ್ಯ ಒಂದು ಒಪ್ಪಿಕೊಂಡು ಇಲ್ಲಿದ್ದು ಇಲ್ಲಿಂದಲೇ ಅತೀತವಾದ ಮಾರ್ಗವನ್ನು ಹುಡುಕಬೇಕೆಂದುಕೊಂಡಿರುವಳು. ಅದಕ್ಕೆ ಅವಳು ಮಾನವಜನಾಂಗಕ್ಕೆ ಉಪದೇಶಿಸಿದ ಮರ್ಮವಿದು.

ಒಡನೆ ಹುಟ್ಟಿದರೈವರು ನಿನಗಮ್ಮ
ಕೆಡಹಿಯಾರು ಮಂದಿ ಕೊಲುತಿಹರಮ್ಮ
ಬಡಿದಾಡೆ ತಾಯಿ ಮಕ್ಕಳು ಬಯ್ವರಮ್ಮ
ತೊಡರಿರೆ ನಾಲ್ವರು ಹೆದರದಿರಮ್ಮ

ಪೊಡವೀಶನಡಿಯ ಬಿಡದೆ ಪಿಡಿಯಮ್ಮ
ಒಡಲಕಿಚ್ಚಿನ ಕೊರವಿಯು ನಾನಲ್ಲಮ್ಮ ॥

ಎಂದು ಹೇಳುವುದರ ಮೂಲಕ ಮನಕಣ್ಣುಕೈಗಳಿಗೆ ಯಾವರೂಪದಿಂದ ಮಾಯೆಯ ಸಂಕೋಲೆ ತೊಡಿಸಲು ಬಂದರೂ ಆಯಾರೂಪದಲ್ಲಿಯೆ ಅರಿಷಡ್ವರ್ಗಗಳನ್ನು ಗೆಲ್ಲುವುದು, ಅಂದರೆ ಅವುಗಳನ್ನು ನೋಡುವ ಮನೋಧರ್ಮವನ್ನು ಬದಲಾಯಿಸುವುದು. ಲೌಕಿಕ ದ್ವಂದ್ವಗಳನ್ನು ಮೀರಿ ಅಲೌಕಿಕತೆಯ ಸೋಪಾನವನ್ನೇರುವುದು.

ಅಕ್ಕನ ಕಣ್ಮನಗಳು ನಿತ್ಯ ನಿರಂತರ ಹಂಬಲಿಸಿದುದು ಚೆನ್ನಮಲ್ಲಿಕಾರ್ಜುನನ ಸಂಗ ಸುಖಕ್ಕಾಗಿ, 'ಚೆನ್ನಮಲ್ಲಿಕಾರ್ಜುನಯ್ಯ ಬಂದಾನೆಂದು ಬಟ್ಟೆಗಳ ನೋಡಿ ಬಾಯಾರುತ್ತಿಹೆನು' ಎಂಬ ತಳಮಳದಲ್ಲಿ, 'ಎನ್ನ ದೇವ ಚೆನ್ನಮಲ್ಲಿಕಾರ್ಜುನನ ಕಾಣದೊಡೆ ಆನೆಂತು ಬದುಕುವೆನವ್ವಾ' ಎಂಬ ಕಳವಳದಲ್ಲಿ. 'ಅಯ್ಯಾ ನೋಡಿದಡೆ ನೋಡು, ನೋಡದಿರ್ದೊಡೆ ಮಾಣು, ನಾ ನಿನ್ನ ನೋಡಿ ಹಿಗ್ಗಿ ಹಾರೈಸಿದಲ್ಲದೆ ಸೈರಿಸಲಾರೆನಯ್ಯಾ' ಎಂದು ಗೋಗರೆಯುವಲ್ಲಿ, ಅಕ್ಕನ ಕಣ್ಣುಗಳು ಪರಮಾರ್ಥ ಪ್ರಪಂಚದ ಪರಿಚಯ ಮಾಡಿಸಿವೆ. ಹೊರಜಗತ್ತಿಗೂ ಅಕ್ಕನ ಅಂತರಂಗಕ್ಕೂ ದೈವೀಬೆಳಕಿನ ಕೊಂಡಿಜೋಡಿಸಿದ ಅವಳ ಕಣ್ಣುಗಳೆಂದರೆ ಅವಳ ಇರವಿನರಿವು ಹೆಚ್ಚಿಸಿದ ಕಣ್ಣು. ಅವಳ ಇರಿವಿನಾಚೆಯ ಅರಿವಿಗೂ ರಹದಾರಿಯಾದ ಕಣ್ಣು; ಈ ಅರಿವು ಅಕ್ಕನ ಒಳಗಣ್ಣಿನೆದುರು ಕನಸಾಗಿ ಕಂಗೊಳಿಸಿ 'ನಗೆಮೊಗದ ಕಂಗಳಕಾಂತಿಯಿಂ ಈರೇಳು ಭುವನಮಂ ಬೆಳಗುವ ದಿವ್ಯಸ್ವರೂಪನ ಕಂಡು ತನ್ನ ಆಧ್ಯಾತ್ಮದನುಭವದ ದಿವ್ಯಾನುಭವ ಪಡೆದಿರುವಳಕ್ಕ. ಆ ಚೆನ್ನಮಲ್ಲಿಕಾರ್ಜುನನ ಹೊರತು ಅನ್ಯದೈವ ತನಗಿಲ್ಲ ಎಂಬುದನ್ನು ಒಂದು ಸ್ವರವಚನದ ಮೂಲಕ ಸಿದ್ಧಪಡಿಸಿಕೊಟ್ಟಿದ್ದಾಳೆ.

ಈಶ ಮಹೇಶನೆ ಮನೆದೈವವಮ್ಮ
ಬೇಸರುಮಾಡಿ ರಾಶಿದೈವವ ಹಿಡಿಯೆ
ಕಾಸಿಗೆ ಬಾರದ ಕಸವಪ್ಪೆಯಮ್ಮ
ಹೇಸಿ ದೈವವ ಬಿಡು, ಪಿಡಿ ಈಶನಡಿಯ
ಮೀಸಲ ಹಿಡಿಯಮ್ಮ ಸೂಸದ ಮನವ
ನಾಸಿಕಾಗ್ರದೊಳು ಗಮನಿಸಿ ನಿಲ್ಲಮ್ಮ ॥

ಹರಿದಾಡುವ ಮನವನ್ನು ಅವನ ಪದತಲಕ್ಕರ್ಪಿಸಿ, ಮನಮೀಸಲು ಹಿಡಿದರೆ ಸಾಕು. ಆ ಭಕ್ತಿಯೂ ಸುಲಭವಾದುದಲ್ಲ. ಬಸವಣ್ಣನವರು ಹೇಳಿದಂತೆ ಹೋಗುತ್ತ ಕೊಯ್ವ, ಬರುತ್ತ ಕೊಯ್ವ ಭಕ್ತಿ ಅದು. ಆದರೆ ಆ ಭಕ್ತಿಯೇ ಚೆನ್ನಮಲ್ಲಿಕಾರ್ಜುನನಿಗೆ ಪ್ರಿಯ. ಅವನು ಅನೇಕ ಬಗೆಯಲ್ಲಿ ಕಾಡಿನೋಡುತ್ತಾನೆ ಬೇಡಿ ನೋಡುತ್ತಾನೆ. ಇವೆಲ್ಲಕ್ಕೂ ಅಂಜದೆ ಹೋದರೆ ಆತನೆ

ಘನವನಿಂಬುಗೊಂಡು ಮನದ ಬೆಂಬಳಿ
ವಿಡಿದುಳಿದಲ್ಲಿ ನಿಜವಾಗಿ ನಿಂದನು
ತಾನೆಂಬುದಿಲ್ಲ ನಿರಂತರ ಸುಖಿ ಗುರು
ಚೆನ್ನಮಲ್ಲಿಕಾರ್ಜುನಯ್ಯ ನಿಮ್ಮ ಶರಣನು ॥

ಈ ಭಕ್ತಿ ಸುಭಾಷೆ, ಸರ್ವಸಮತೆ ಮಹೇಶ್ವರಸ್ಥಲದತ್ತ ನಡೆಯುವ ಅಕ್ಕನ ಮನೋ ವ್ಯಾಪಾರವನ್ನು ಸೂಚಿಸುತ್ತವೆ.

ನೈಷ್ಠಿಕ ಭಕ್ತಿ

ಮಹೇಶ್ವರಸ್ಥಲ ನೈಷ್ಠಿಕಭಕ್ತಿ ಪ್ರಧಾನವಾದುದು. ಆಚಾರ ವಿಚಾರಗಳಿಂದ ಗಟ್ಟಿಕೊಂಡ ಅಕ್ಕನ ಅಚಲವಾದ ನಿಷ್ಠೆ ಇಲ್ಲಿ ಬೆಳೆದು ನಿಂತಿದೆ. ಸಾಹಸ, ಧೈರ್ಯ, ಹಠ, ಛಲ ಮೊದಲಾದ ಗುಣಗಳು ಇಲ್ಲಿ ಕಂಡರೂ ತಾಮಸನಿರಸನದಿಂದ ಉಂಟಾದ ಸಾತ್ವಿಕಕಳೆಯಿಂದ ಪೋಷಿತ ವಾಗಿವೆ. ಚೆನ್ನಮಲ್ಲಿಕಾರ್ಜುನನನ್ನು ಪಡೆಯಲೇಬೇಕೆಂಬ ಛಲ.

ಜಗವಂದ್ಯಗೆ ಬೇಟವ ಮಾಡಿದೆ ನಾ
ಹಗೆಯಾದೆನು ಸಂಸಾರಕ್ಕೆಲ್ಲ
ನಗುತೈದರೆ ಲಜ್ಜೆಯ ನಾಚಿಕೆಯನು ತೊರೆದವಳೆಂದನ್ನ
ಗಗನಗಿರಿಯ ಮೇಲಿರ್ದಹಿನೆಂದಡೆ
ಲಗುನೆಯಾಗಿ ನಾನರಸುತ ಬಂದೆನು
ಅಘಹರ ಕರುಣಿಸು ನಿಮಗಾನೊಲಿದೆನು ॥
ಎಂದು ಹೇಳುವ ದಿಟ್ಟ ರೀತಿಯಾಗಲಿ,
ಸತ್ತು ಹುಟ್ಟುವವರಿಗೆ ಸೆರಗು ಹಾಕುವಳಲ್ಲ
ಮುತ್ತೈದಿತನವ ಮೆಚ್ಚುವಳಲ್ಲವೈ
ಕರ್ತೃ ಶ್ರೀಶೈಲದ ಚೆನ್ನಮಲ್ಲಿಕಾರ್ಜುನ
ನಿಂತು ಕರಸ್ಥಳದಿ ನೆಲೆಗೊಂಡ ಬಳಿಕ ॥

ಎಂಬ ಮನದ ಇಚ್ಛಾಶಕ್ತಿಯಾಗಲಿ ಜನಸಾಮಾನ್ಯರ ಹಿಡಿತಕ್ಕೆ ಎಟಕದ ಮಾತು. ಇಂಥ ನಿಷ್ಠೆ ಸುಲಭಸಾಧ್ಯವಲ್ಲ. ಅದು ಅಳವಡಬೇಕಾದರೆ ಮನಸ್ಸಿನ ಸಂದು ಸಂಶಯವಡಗಬೇಕು. ಬದುಕು ತನ್ನದೇ ಆದ ಕೆಲವು ಕಟ್ಟುಪಾಡುಗಳನ್ನು ಹಾಕಿಕೊಳ್ಳಬೇಕು. ಅದಕ್ಕೆ ಅಕ್ಕ

ಅನ್ಯದೈವಕ್ಕೆ ತಲೆವಾಗದೆ ಆಚಾರದಲ್ಲಿ ನಡೆವ, ಪ್ರತಿಪೂಜೆಯ ಮಾಡದೆ ಪರದಲ್ಲಿ ನಿಲ್ಲುವ, ಮೂಲ ಮೂರು ಬಿಟ್ಟು ಮಂತ್ರಮರೆಯದೆ ಮಹಾಘನದಲ್ಲಿ ನಿಲ್ಲುವ, ಆಕರದೊಳು ಲಿಂಗವಿದ್ದು ಕಾಂಚನಕ್ಕೆ ಕೈಯಾನದೆ ಅರಿವಿನಲ್ಲಿನಿಲ್ಲುವ, ಅನಾದಿಲಿಂಗ ಕರಕ್ಕೆ ಬಂದಿರಲು ಆಲೋಕನ ಮರೆತು ಕಾಕುದೈವಗಳ ಹಿಂಬಾಲಿಸದ ನಿಷ್ಠೆ ಹೊಂದಿದವಳು. ಈ ನಿಷ್ಠೆ ಇಲ್ಲದೆ "ಪೂಜೆ ಎಷ್ಟು ಕಾಲ ಮಾಡಿದರೇನಮ್ಮ ನಷ್ಟವಲ್ಲದೆ ದೃಷ್ಟ ಉಂಟೇ" ಎಂದು ಕಿವಿಮಾತು ಹೇಳಿದವಳು. ಅಕ್ಕನ ಲೋಕಾನುಭವ ಶಿವಾನುಭವವಾಗಿ ಪರಿಪಾಕಗೊಂಡ ರೀತಿಯಲ್ಲಿ ಅವಳ ಇಂದ್ರಿಯಗಳೆಲ್ಲ ಮುಖ್ಯವಾಗಿ ಅವಳ ಅರಿವಿನ ಕಣ್ಣು ಬಲುಎಚ್ಚರಿಕೆಯಿಂದ ಗಮನಿಸಿದುಂಟು. ಒಮ್ಮೊಮ್ಮೆ ಲೋಕದ ನಡೆನುಡಿಗಳಲ್ಲಿ ವಿಸಂಗತಿಗಳನ್ನು ಕಂಡ ಅವಳ ಹೆಣ್ಣುರೂಪದೊಳಗಿನ ಗಂಡುಧ್ವನಿ ಗಡುಸಾಗಿ ಸಿಡಿದುದೂ ಉಂಟು. ಅಕ್ಕನ ಚಿಕ್ಕಪ್ರಾಯದಲ್ಲಿ ಪಕ್ವಗೊಂಡ ಅವಳ ಶಿವದೃಷ್ಟಿಯ ಮೂಲಕ ನಡೆದ ಕಾವ್ಯ ಸೃಷ್ಟಿ ನಮ್ಮನ್ನು ಬೆರಗು ಗೊಳಿಸುತ್ತದೆ. ತನ್ನ ಸುತ್ತಲಿನ ಸೃಷ್ಟಿಯಲ್ಲಿ ಶಿವಭಾವದ ಆವಿಷ್ಕಾರವನ್ನು ಕಂಡರಸಿದ ಅಕ್ಕನ ಶಿವದೃಷ್ಟಿ ಒಂದೊಂದು ಸ್ವರವಚನಗಳಲ್ಲೂ ಹರಳುಗೊಂಡು ನಿಂತಿದೆ.

ಸಾತ್ವಿಕಗುಣ, ಕಠೋರನಿಷ್ಠೆ, ಜೀವನದ ಎಲ್ಲ ರಂಗಗಳಲ್ಲಿಯೂ ಆಕೆಗೆ ಮಾರ್ಗದರ್ಶನ ಮಾಡಿವೆ. ನಾವು ಮಾಡುವ ಎಲ್ಲ ಕಾರ್ಯಗಳು ಸಮಾಜದ ಮತ್ತು ವ್ಯಕ್ತಿಯ ಹಿತಕ್ಕೆ

ಕಾರಣವಾಗುವಂತಿರಬೇಕೆಂಬುದನ್ನು ಅಕ್ಕ ಸೂಕ್ಷ್ಮವಾಗಿ ಗಮನಿಸಿದುದುಂಟು.

ಹೆಣ್ಣು ಹೊನ್ನ ಮಣ್ಣ ಬಿಟ್ಟು
ಕಣ್ಣಿನೊಳು ಕಣ್ಣು ಕಂಡು
ಕನ್ನಡಿ ಹಿಡಿದು ನೋಡಿದಂತೆ
ತಾನ ತಾನು ಆದ ಬಳಿಕ ॥

ಈ ದೇಹ ಇದ್ದರೂ ಅಷ್ಟೇ, ಹೋದರೂ ಅಷ್ಟೆ. ತನುವೆಂಬ ಮನದೊಳಗೆ ನೆಲಸಿಪ್ಪ ಪರಮಾತ್ಮನಾತ.

ಮಾಡುವರ ಕಂಡು ಮಾಡುವನಲ್ಲ
ಮಾಡದವರ ಕಂಡು ಮಾಡದವನಲ್ಲ.
ತಾ ಮಾಡುವ ಮಾಟಕ್ಕೆ ತವಕಿಗನಾಗಿ
ಹಿಂದುಮುಂದರಿಯದ ಶರಣನಾತ ॥

ಷಟ್‌ಸ್ಥಲದ ಮೊದಲನೆಯ ಎರಡು ಹೆಜ್ಜೆಗಳಲ್ಲಿ ಅಕ್ಕನ ಅಧ್ಯಾತ್ಮಿಕ ಯಾತ್ರೆಯ ಗುರಿ ನಿಶ್ಚಿತವಾಗಿದೆ. ಪೂರ್ಣದೃಷ್ಟಿಯಿಂದ ಸೃಷ್ಟಿರಹಸ್ಯವನ್ನು ಪರಾಮರ್ಶಿಸುವ ಮತ್ತು ಅದರಿಂದ ಅಂಗೀಕರಿಸಿದ ಆದರ್ಶಗಳನ್ನು ಅನುಷ್ಠಾನಕ್ಕೆ ತರುವ ನಿರಂತರ ಆತ್ಮಜಾಗೃತಿಯ ಪ್ರಯತ್ನ ಈ ಸ್ವರವಚನಗಳಲ್ಲಿ ತುಂಬಿನಿಂತಿದೆ. ಆಧ್ಯಾತ್ಮಿಕ ಸಾಧನೆಯ ವಿಕಾಸಕ್ಕೆ ಇವೆರಡೂ ಭದ್ರ ಬುನಾದಿಗಳೆನಿಸಿವೆ.

ಪ್ರಸಾದಿ ಪ್ರಾಣಲಿಂಗಿ

ಮಹಾದೇವಿಯಕ್ಕನ ಸಾಧನೆಯ ಅಂತರಂಗಿಕ ವಿಕಾಸಮಾರ್ಗದಲ್ಲಿ ಇವೆರಡು ಪ್ರಮುಖವಾದ ಹೆಜ್ಜೆಗಳೆನಿಸಿವೆ. ಶ್ರದ್ಧೆ, ನಿಷ್ಠೆಗಳಪೂರ್ವ ಸಿದ್ಧತೆಯನ್ನು, ಅದರಿಂದ ಒಂದು ಪೂರ್ಣದೃಷ್ಟಿಯನ್ನು ಪಡೆದ ಅಕ್ಕ ಇಲ್ಲಿ ಕ್ರಮವಾಗಿ ಅವಧಾನಭಕ್ತಿ ಅನುಭಾವ ಭಕ್ತಿಗಳನ್ನು ಅವಲಂಬಿಸಿ ಮುಂದೆ ನಡೆದಿದ್ದಾಳೆ. ಶ್ರದ್ಧೆನಿಷ್ಠೆಗಳೆರಡೂ ಅಪ್ರಯತ್ನಪೂರ್ವಕವಾಗಿ ಸಹಜಸ್ಥಿತಿಯಾಗಿ ಇಲ್ಲಿ ಪರಿಣಮಿಸಿವೆ. ಸಾವಧಾನದ ನಿಲುವನ್ನು ಪಡೆದಿವೆ. ಇದರಿಂದ ಮನಸ್ಸಿನ ಆತಂಕ ತಳಮಳಗಳು ಹಿಂಗಿ ಹಠನಿಷ್ಠೆಗಳು ಮೃದುತ್ವ ಪಡೆದು ಮನಸ್ಸಿನ ಪ್ರಸನ್ನತೆಗೆ ಕಾರಣವಾಗಿವೆ. ಮಲ್ಲಿಕಾರ್ಜುನ ಸಾನಿಧ್ಯಕ್ಕೆ ಹೋದಂತೆಲ್ಲ ಆಕೆಯ ವ್ಯಕ್ತಿತ್ವದಲ್ಲಿ ಉಂಟಾದ ಪರಿವರ್ತನೆ ದೈವಿಕಪರಿಣಾಮಗಳನ್ನು ಈ ಸ್ವರವಚನಗಳು ಸೂಕ್ಷ್ಮವಾಗಿ ತಿಳಿಸಿಕೊಡುತ್ತವೆ.

ಪ್ರಸಾದಿಸ್ಥಲದಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶ ಸತತಕ್ರಿಯೆಯಲ್ಲಿ ನಿರತ ನಾದರೂ ಅವುಗಳಿಗೆ ಅತೀತವಾದ ನಿರ್ಲಿಪ್ತತೆಯನ್ನು ರೂಢಿಸಿಕೊಂಡ ಬಗೆ. ಕರ್ಮ ನಿರತನಾಗದೆ ಈ ಲೋಕದಲ್ಲಿ ಬದುಕುವ ಹಕ್ಕು ಯಾರಿಗೂ ಇಲ್ಲ. 'ಅಂತರಂಗದಲ್ಲಿ ಅರಿವಾದಡೇನಯ್ಯ ಬಹಿರಂಗದಲ್ಲಿ ಕ್ರಿಇಲ್ಲದನ್ನಕ್ಕ. ಕ್ರಿಯೆ ಮರೆದಲ್ಲಿ ಅರಿವು ಹೀನಾಗಿಪ್ಪುದು' ಇಂತಹ ಅನೇಕ ನುಡಿಗಳು ಕರ್ಮದ ಅವಶ್ಯಕತೆಯನ್ನು ಎತ್ತಿಹಿಡಿದಿವೆ.

ಮೆಚ್ಚಿ ಒಲಿದು ಪುನವರ್ಗರ್ಲವ ಭಾವವು
ಬಿಚ್ಚದೆ ಬೇರೆಂದೆನಿಸದ ಪ್ರಾಣವು

ಬೆಚ್ಚಂತಿರ್ದುದು ಅಚ್ಚೊತ್ತಿದ ಮಹಾಘನ ತಾ ನೆಲೆಗೊಂಡು ॥ನಿಂತ ವೇಳೆಯಲ್ಲಿ ಆ ಸಾಧನೆ ಅಹಂಕಾರದ ಒಂದು ಮುಖವೆನಿಸಬಾರದು. ತಾನು ಮಾಡಿದ ಸಾಧನೆ ತಾನ್ನೊಬ್ಬಳಿಗೆ ಅಲ್ಲ. ಗುರುಲಿಂಗ ಜಂಗಮಕ್ಕೆ ಅದು ಸಲ್ಲಬೇಕಾದುದು. ಎಂಬಲ್ಲಿಯ ಮಾತು, ಕರ್ಮಯೋಗದ ವ್ಯಾಪ್ತಿಯನ್ನು ಸಮಾಜದ ಹಿತಕ್ಕಾಗಿ ತಿರುಗಿಸುವ ಉದಾತ್ತದೃಷ್ಟಿ ಇಲ್ಲಿದೆ. ವ್ಯಕ್ತಿ ಮತ್ತು ಸಮಾಜಗಳೆರಡರ ಹಿತಸಾಧನೆಯ ಪೂರ್ಣದೃಷ್ಟಿ ಅಳವಡಬೇಕಾದರೆ

ನೆರಹಗೂಡದೆ ಏಕಾಂತದೊಳಿರಬೇಕು
ನೆರಹಬೇಕಮಲಗುಣ ಪರವಸ್ತುಗಳನು
ಪರಿಹರಿಸಿ ಕಳೆಯಬೇಕೆನ್ನ ವಿಷಯಂಗಳನು
ಎರವಿಲ್ಲದೊಂದು ಮನದಲಿ ಭಜಿಸಬೇಕು ॥

ಎಂಬ ಅಣತಿಯನ್ನಿತ್ತವಳು ಅಕ್ಕ. ಈ ರೀತಿಯ ಸಾಧನೆಯಿಂದ ಈ ಲೋಕದಲ್ಲಿ ಇದ್ದೂ ಇಲ್ಲದಂತೆ ಬಾಳುವ ನಿಲುವು ಅಕ್ಕನಿಗೆ ಸಹಜವಾಗಿ ಲಭಿಸಿದಂತಿದೆ. ಬಂದುದೆಲ್ಲವನ್ನೂ ಲಿಂಗಕ್ಕೆ ಅರ್ಪಿಸಿಕೊಳ್ಳುವ ಪ್ರಸಾದಿತತ್ವದ ಒಂದು ಮುಖ ಇಲ್ಲಿಯದಾದರೆ, ತನ್ನನ್ನೇ ಸಂಪೂರ್ಣವಾಗಿ ಲಿಂಗಕ್ಕೆ ಅರ್ಪಿಸಿಕೊಳ್ಳುವುದು ಇಲ್ಲಿಯ ಇನ್ನೊಂದು ಮುಖ. 'ಕಾಯವೇ ಲಿಂಗಾರ್ಪಿತ, ಅರ್ಪಿತವೇ ಪ್ರಸಾದ, ಎಂದಿದ್ದಾನೆ ಚನ್ನಬಸವಣ್ಣ. ಮಹಾದೇವಿಯಕ್ಕನ ಈ ಬಗೆಯ ಪ್ರಸಾದಿಸ್ಥಲದ ಸಾಧನೆ.

ಘನ ಮಹಾಲಿಂಗದೊಳು ನೆನಹಳಿದು ಮನಕೂಡೆ
ಅನುವರಿದು ತನುಕರಣ ಹೃದಯದೊಳಗೆ
ಘನಗುರು ಚನ್ನಮಲ್ಲೇಶ ನಿಮ್ಮೊಳಗೊಂದಿ
ಅನುದಿನವು ಬಿಡದೆ ಬೆರಸುವೆನೆಂದಿಗೆ ॥

ಅನುದಿನವು ಬಿಟ್ಟೂಬಿಡದೆ ತನುಕರಣ ಹೃದಯದೊಳಗೆ ಪ್ರಾಣ ಬೀಸರವೊಗದೆ ಮೀಸಲಾಗಿ ಅರ್ಪಿತವಾಗುವ ನಿಜವಾದ ಪ್ರಸಾದಿತತ್ವ ಇಲ್ಲಿದೆ. ಈ ಪ್ರಸಾದ ಸರಳವಾಹುದಲ್ಲ. ಕಾಯವ ಕಳೆದು ಕಾಯಪ್ರಸಾದಿ, ಜೀವ ಕಳೆದು ಜೀವಪ್ರಸಾದಿ. ಪ್ರಾಣವ ಕಳೆದು ಪ್ರಾಣಪ್ರಸಾದಿ ಆಗಿ ಪರಿಣಮಿಸಬೇಕು. ದೇವರಿಗೆ ನೈವೇದ್ಯ ಮಾಡಿದುದು, ಅರ್ಪಿತವಾಗಿ ಉಳಿದುದನ್ನು ಪ್ರಸಾದವೆಂದು ಭಾವಿಸುವುದು ಒಂದು ಹಂತದಲ್ಲಿ ಮಾತ್ರ. ನಿಜವಾದ ಪ್ರಸಾದವೆಂದರೆ 'ತನುವಿನೊಳು ತನುವಾಗಿ ಮನದೊಳಗೆ ಮನವಾಗಿ ನೆನಹಿನೊಳು ನೆನಹಾಗಿ ಸತ್ತು ಸತ್ತಿನೊಳಡಗಿ ಸತ್ತುಚಿತ್ತಾನಂದ ನಿತ್ಯಪರಿಪೂರ್ಣದಲ್ಲಿ ಒಡವೆರೆದು ಒಂದಾಗುವುದು.'

ಮಹಾದೇವಿಯಕ್ಕನ ಸ್ವರವಚನಗಳಲ್ಲಿ ಬರುವ ಅರ್ಪಣಾತತ್ವ ಅರ್ಥವತ್ತಾದುದು. 'ತನ್ನ ಮುಟ್ಟಿ ನೀಡಿದುದೇ ಪ್ರಸಾದ, ತನ್ನ ಮುಟ್ಟದೆ ನೀಡಿದುದೇ ಓಗರ', ಸಂಕಲ್ಪ ವಿರಹಿತನಾಗಿ ತನ್ನ ಸರ್ವಸ್ವವನ್ನು ಅರ್ಪಿಸಿಕೊಳ್ಳುವುದು. 'ಕಾಯ ಲಿಂಗಾರ್ಪಿತವಾದಬಳಿಕ ಕರ್ಮಕ್ರಿಯೆಗಳು ಇರಲಾಗದು. ಜೀವ ಲಿಂಗಾರ್ಪಿತವಾದ ಬಳಿಕ ಸಂಸಾರ ವ್ಯಾಪ್ತಿಯಾದ ಜೀವದ ಗುಣ ಇರಲಾಗದು. ಅದು ಅರ್ಪಿತವಲ್ಲ ನೋಡಾ' ಎನ್ನುತ್ತಾರೆ ಶರಣರು. ಕರಣಂ ಗಳೆಲ್ಲವೂ ಅಂಗ ಕಿರಣಂಗಳಾಗಿ ಆ ಲಿಂಗಕಿರಣವೇ ಹರಣವಾಗಬೇಕು. ಅರ್ಪಿತವಾದುದಕ್ಕೆ ಸಾಕ್ಷಿ ಅದು. ಅದು ಸಾಧಿತವಾಗುವ ಸರಳ ಉಪಾಯವನ್ನು ಮಹಾದೇವಿಯಕ್ಕ ಸೂಕ್ಷ್ಮವಾಗಿ ಧ್ವನಿಪೂರ್ಣವಾಗಿ ವ್ಯಕ್ತಪಡಿಸಿರುವಳು. 'ಜೀವದಾದಿಬಿಂದುವನ್ನು ತೀವಿ ಊರ್ಧ್ವಮುಖವ ಮಾಡಿ ಓವಿದಕ್ಷರದಲ್ಲಿ

ಕೂಡಿಬಿಡದೆ ಅನುದಿನ ಕಾಲವೈರಿಯಾದ ಶಿವನ ಭಾವದೊಳಗೆ ಬೆರೆಯಬಲ್ಲ ಸಾವಧಾನಿಯಾದಂತವನಿಗೆ ಮಾತ್ರ ಇದು ಸಾಧ್ಯ' ಎಂಬುದು ಅಕ್ಕನ ಅಭಿಮತ. ಈ ಅನುಭವದಲ್ಲಿ ನಿಂತ ಅಕ್ಕನಸಾಧನೆ ಇನ್ನೂ ಮೇಲಿನ ಹಂತಕ್ಕೇರಿರುವುದನ್ನು ಪ್ರಾಣಲಿಂಗಿಸ್ಥಲದಲ್ಲಿ ಕಾಣುತ್ತೇವೆ.

'ಪ್ರಾಣಲಿಂಗ'ವೆಂಬ ಮಾತೇ ಮಹತ್ವಪೂರ್ಣವಾದುದು. ಇಷ್ಟಲಿಂಗ ಪ್ರಾಣಲಿಂಗ ಭಾವಲಿಂಗ ಈ ಮಾತುಗಳಲ್ಲಿ ಶರಣರು ಕಂಡ ಆಂತರಿಕ ಅನುಭಾವದ ದೃಷ್ಟಿ ಪ್ರಧಾನವಾಗಿ ಗೋಚರಿಸುತ್ತದೆ. ದೇವಾಲಯಗಳಲ್ಲಿಟ್ಟು ಪೂಜಿಸುವ ಸ್ಥಾವರಲಿಂಗಗಳಿಂದ ಬೇರೆಯಾದುದು ಇಷ್ಟಲಿಂಗ. ದೇಶಿಕನಿತ್ತ ಈ ಲಿಂಗವನ್ನು ದೇಹದ ಮೇಲೆ ಅಯತವಾಗಿರಿಸಿ ಅನಿಷ್ಟವನ್ನು ದೂರಗೊಳಿಸಿ ಲಿಂಗಾಂಗಸಾಮರಸ್ಯದ ಇಷ್ಟಾರ್ಥವನ್ನು ಸಾಧಿಸಿಕೊಡುವ ಸಾಧನೆ ಇದು. ಅರುಹನ್ನು ಅರಿಯಲು ಕೊಟ್ಟ ಕುರುಹು ಇದು. ಭಕ್ತ ಮಹೇಶ ಪ್ರಸಾದಿ ಸ್ಥಲಗಳು ಇದರ ಅನುಸಂಧಾನಮಾರ್ಗದಲ್ಲಿ ಬೆಳೆದುಬಂದ ವಿಕಾಸದ ಹೆಜ್ಜೆಗಳು. ಅಂಗದ ಮೇಲೆ ಚನ್ನಮಲ್ಲಿಕಾರ್ಜುನ ಲಿಂಗವನ್ನು ಧರಿಸಿದ ಅಕ್ಕ ಅವನನ್ನು ಅನನ್ಯ ಶ್ರದ್ಧೆಯಿಂದ ನಂಬಿದ್ದಾಳೆ. ಏಕೈಕನಿಷ್ಠೆಯಿಂದ ಉಪಾಸಿಸಿದ್ದಾಳೆ. ವಿಶ್ವವೆಲ್ಲ ಅವನ ಪ್ರಸಾದವೆಂದು ಭಾವಿಸಿದ್ದಾಳೆ. ಸಾವಧಾನ ಭಕ್ತಿಯಿಂದ ತನ್ನನ್ನು ಅವನಿಗೆ ಸಮರ್ಪಿಸಿಕೊಂಡು ತಾನೆ ಪ್ರಸಾದರೂಪವಾಗಿ ಅಕ್ಕ ಪರಿಣಮಿಸಿರುವಳು. ಇದರ ಮುಂದಿನ ಹೆಜ್ಜೆಯ ಪ್ರಾಣಲಿಂಗ ಪೂಜೆ. ಇದು ಇಷ್ಟಲಿಂಗದ ಶ್ರದ್ಧೆ ಪೂಜೆ', ನಿಷ್ಠೆ ಅರ್ಪಣೆಗಳನ್ನು ಒಳಗೊಂಡು ಆಂತರಿಕಜಗತ್ತನ್ನು ಪ್ರವೇಶಿಸುತ್ತದೆ. 'ಲಿಂಗದಲ್ಲಿ ಪ್ರಾಣವ ನಿಲಿಸಿ, ಪ್ರಾಣದಲ್ಲಿ ಲಿಂಗವ ನಿಲಿಸಿ ನೆನೆವುತ್ತಿದ್ದ ಕಾರಣ ಪ್ರಾಣಲಿಂಗವಾಯಿತು' ಎನ್ನುತ್ತಾನೆ ಒಬ್ಬ ಶರಣ. ಅಂದರೆ ಪ್ರಾಣದಲ್ಲಿ ಲಿಂಗವನ್ನು ನಿಲ್ಲಿಸುವುದೇ ಪ್ರಾಣಲಿಂಗ ಪೂಜೆ.

ಘನ ಮಹಾಲಿಂಗದೊಳು ನೆನಹಳಿದು ಮನಕೂಡೆ
ಅನುವರಿದು ತನುಕರಣ ಹೃದಯದೊಳಗೆ
ಘನಗುರು ಚನ್ನಮಲ್ಲೇಶ ನಿಮ್ಮೊಳಗೊಂದಿ
ಅನುದಿನವು ಬಿಡದೆ ಬೆರಸುವನೆಂದಿಗೆ ॥

ಎಂದು ಸಾರುವಲ್ಲಿ ಅಕ್ಕ ಪ್ರಾಣಲಿಂಗದ ಸ್ವರೂಪವನ್ನು ಸೂಚಿಸಿರುವಳು. ಅಕ್ಕನ ಪ್ರಾಣಲಿಂಗ ಸಾಧನೆಯಲ್ಲಿ ಧ್ಯಾನ ಅನುಸಂಧಾನಕ್ಕೆ ಹೆಚ್ಚಿನ ಮಹತ್ವ ಬಂದಿದೆ. ಇಲ್ಲಿ ಚನ್ನಮಲ್ಲಿಕಾರ್ಜುನಲಿಂಗ ಉಪಾಸ್ಯವಾದ ಸ್ಥೂಲವಸ್ತುವಾಗಿ ಉಳಿಯದೆ ಅಂತರಂಗ ಬಹಿರಂಗವನ್ನೆಲ್ಲ ವ್ಯಾಪಿಸಿದ ಶಕ್ತಿ ಎನಿಸಿದೆ. ಅಂತೆಯೆ ಅಕ್ಕ 'ಲಿಂಗದೊಳು ಮೆಚ್ಚಿ ಮನ ಹಿಂಗದಿಹ ಭಾವಸುಖವಾರಿಗಿಹುದೋ' ಎಂದೆನಿಸಿರುವಳು.

ಚನ್ನಮಲ್ಲಯ್ಯನನ್ನು ಪೂಜಿಸುವ ಬಹಿರಂಗದ ಪೂಜೆ ಅಂತರಂಗದ ನಿರ್ಮಲ ಪರಂಜ್ಯೋತಿಯನ್ನು ಕಾಣುವುದರ ಕಡೆಗೆ ಮುನ್ನಡೆದಿದೆ. ಪ್ರಸಾದಿ ಸ್ಥಲದ ಇಷ್ಟಲಿಂಗೋಪಾಸನೆ ಪ್ರಾಣಲಿಂಗಿಸ್ಥಲದಲ್ಲಿ ಸಾಧನೆ ನಡೆಸುತ್ತ ಮುನ್ನಡೆದಿದೆ. ಅಂತಃಶಕ್ತಿಯನ್ನು ಜಾಗೃತಗೊಳಿಸುವ ಯೋಗದ ಕಡೆಗೆ ಅದು ತಿರುಗದೆ ಅನುಭಾವಭಕ್ತಿಯಿಂದ ಇಷ್ಟಲಿಂಗದ ಅನುಸಂಧಾನ ಕೈ ಕೊಂಡಿದೆ.

ಪ್ರಾಣಲಿಂಗಸ್ಥಲ ಯೋಗಾಭ್ಯಾಸದ ಕೊನೆಯಹಂತವನ್ನು ಒಳಗೊಂಡಿದೆ. ಮೊಲದನೆಯ ಮೂರು ಸ್ಥಲಗಳಲ್ಲಿ ಭಕ್ತಿ ಕ್ರಿಯೆ ಜ್ಞಾನ ರೂಪದ ಪೂರ್ಣಸಿದ್ಧತೆ ಪಡೆದು, ಇಲ್ಲಿ ಈ ಮೂರು

ಮುಪ್ಪುರಿಗೊಂಡು ದೇಹದಲ್ಲಿರುವ ಅಂತಃಶಕ್ತಿಯನ್ನು ಜಾಗೃತಗೊಳಿಸುವ ಮಟ್ಟದಲ್ಲಿ ಯೋಗ ಸಾಧನೆಯನ್ನು ಕೈಕೊಂಡಿವೆ. ಈ ಎಲ್ಲ ಅಂಶಗಳನ್ನು ಇಷ್ಟಲಿಂಗದ ಮೂಲಕವೇ ನಿರ್ವಹಿಸುವ ಸಹಜಕ್ರಿಯೆಯನ್ನಾಗಿ ಅಳವಡಿಸಿರುವುದು ಇದರ ವೈಶಿಷ್ಟ್ಯ. 'ಮನವೆ ದಳನಾಲ್ಕು ಷಟ್‌ದಳ ದ್ವಾದಶಿ ಷೋಡಶದಳ ಯುಗ್ಮವಳಿಯ ಮಂಟಪದಿ, ಮನವೆ, ಹೊಳೆವ ಚಿದ್ಘನದ ಚಿತ್ಕಳೆ ತುಂಬಿ ತುಳಕಲಾ ದಳಿಗಳೊಳು ದಳ ವಿದಳವಾಗಿ ಮನವೆ, ಕಳೆ ಕಳಾಸಂದ ಪೂರ್ಣೈಸೂಕ್ತಿ ಸಹಸ್ರ ದಳದ ಕಳೆಯೊಳಗೆಲ್ಲವಳಿದು, ಮನವೆ, ಥಳಥಳಿಸಿಹೊಳೆವ ಸದ್ಗುರು ಚನ್ನಮಲ್ಲನೊಳು ಬೆಳಗು ಚಿದ್ಬೆಳಗು ನೀನಹಡೆ' ಎಂದು ಪ್ರಾಣಲಿಂಗಸ್ಥಲದ ಸಾಧನೆಯಲ್ಲಿ ಅಕ್ಕ ಉದ್ಗಾರ ತೆರೆದಿರುವಳು.

ಅಕ್ಕನ ಕರಸ್ಥಲದಲ್ಲಿದ್ದ ಇಷ್ಟಲಿಂಗದ ದೃಷ್ಟಿಯೋಗದಿಂದ ಕಣ್ಣು ತುಂಬಿದೆ. ಕಂಗಳ ನೋಟದ ಮೂಲಕ ಮನದ ಕೊನೆಯನ್ನು ಹೋಲುತ್ತದೆ. ಮನದ ಕೊನೆಯಲ್ಲಿ ನೋಡಿದರೆ ಭಾವದಲ್ಲಿ ಇಂಬಿಡುತ್ತದೆ. ಅವಳ ಸರ್ವಾಂಗ ಲಿಂಗವಾಗಿ ಪರಿಣಮಿಸಿದೆ. ಇಷ್ಟಲಿಂಗ ಪ್ರಾಣಲಿಂಗಗಳೆರಡೂ ಈ ಸಾಧನೆಯಲ್ಲಿ ಒಂದಾಗುವವು. ಅಂಗದ ಮೇಲೆ ಕುರುಹಾಗಿಟ್ಟ ಇಷ್ಟಲಿಂಗವನ್ನು ಅಕ್ಕ ಅನುಸಂಧಾನ ಮಾಡುತ್ತ ಅಲ್ಲಿ ಆಯತವಾದುದನ್ನು ಇಲ್ಲಿ ಸ್ವಾಯತ ಮಾಡಿಕೊಂಡಿರುವಳು. ಅದಕ್ಕೆ ಸಹಾಯಕವಾದ ಯೋಗ ಸಾಧನೆಯ ಸಂಪೂರ್ಣ ಅಧ್ಯಯನ ಅಕ್ಕನ 'ಯೋಗಾಂಗ ತ್ರಿವಿಧಿ'ಯಲ್ಲಿ ನಾವು ಮನಗಾಣಬಹುದು.

ಬ್ರಹ್ಮರಂಧ್ರದ ಬ್ರಹ್ಮ ನಿರ್ಮಳನಾದವ
ಒಮ್ಮನದಿಂದ ಲಾಲಿಸುತ
ಸುಮ್ಮನಿರದೆ ನಿಜತತ್ವವಾ ಒಂದೆಂಬ
ಮರ್ಮವರಿಯಬೇಕು ॥

ಒಪ್ಪುವ ನಿಟಿಲಭ್ರೂಮಧ್ಯದ ಕೊನೆಯೊಳ
ಗಿಪ್ಪ ಜ್ಯೋತಿರ್ಲಿಂಗವನರಿದು
ತಪ್ಪದೆ ಧ್ಯಾನಿಸಿ ಶಿವಲಿಂಗಾಮೃತ
ತೃಪ್ತಿಯೊಳಿಸರಬೇಕು ॥

ಮೂರು ತನುವಿನೊಳಗೆ ಆರೂಢವೆಂದೆಂಬ
ಆರಕ್ಷಕದಿರವನರಿದು
ಸೇರಿ ಶ್ರೀ ಗುರು ತತ್ವಚಿತ್ತಾನಂದವ
ಸಾರಿ ಪೂಜಿಸಬೇಕು ॥

ಅಕ್ಕನ ಸಾಧನೆಯು ಪ್ರಾಣಲಿಂಗಾರ್ಚನೆಯ ಮರ್ಮವಿದು. ಇಷ್ಟಲಿಂಗದ ಅನುಸಂಧಾನಕ್ಕೆ ಅನುಗುಣವಾಗಿ ಯೋಗಾಭ್ಯಾಸದ ಎಲ್ಲ ಸಾಧನೆಗಳೂ ಇಲ್ಲಿ ಪರಿವರ್ತಿತವಾಗಿವೆ.

ಒಟ್ಟಿನಲ್ಲಿ ಮಹಾದೇವಿಯಕ್ಕ ಪ್ರಾಣಲಿಂಗಿಸ್ಥಲದಲ್ಲಿ ತನ್ನ ಅಂತಃಶಕ್ತಿಯ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡಿರುವಳು. ಅಕ್ಕನ ಇಷ್ಟ ಲಿಂಗೋಪಾಸನೆ ಒಳಹೊರಗೆ ವ್ಯಾಪಿಸಿ ಸರ್ವಾಂಗಲಿಂಗವಾಗಿ ಪರಿಣಮಿಸಿದೆ. ಅಂಥ ಸಾಧನೆಯ ಅಕ್ಕ, ಕಂಗಳ ನೋಟವು ಕಾಯದ ಕರದಲ್ಲಿ ಲಿಂಗದ ಕೂಟವು ಶಿವಶಿವ ಚಲುವನು ಮಂಗಳ ಮೂರುತಿ ಮತಿಗಳ ದೇವಂಗೆತ್ತುವೆನಾರತಿಯ', ಎಂದು ಸಾರಿ ಮನದುಂಬಿ ಹಾಡಿದ್ದಾಳೆ.

ಮುಪ್ಪುರಿಗೊಂಡು ದೇಹದಲ್ಲಿರುವ ಅಂತಃಶಕ್ತಿಯನ್ನು ಜಾಗೃತಗೊಳಿಸುವ ಮಟ್ಟದಲ್ಲಿ ಯೋಗ ಸಾಧನೆಯನ್ನು ಕೈಕೊಂಡಿವೆ. ಈ ಎಲ್ಲ ಅಂಶಗಳನ್ನು ಇಷ್ಟಲಿಂಗದ ಮೂಲಕವೇ ನಿರ್ವಹಿಸುವ ಸಹಜಕ್ರಿಯೆಯನ್ನಾಗಿ ಅಳವಡಿಸಿರುವುದು ಇದರ ವೈಶಿಷ್ಟ್ಯ. 'ಮನವೆ ದಳನಾಲ್ಕು ಷಟ್‌ದಳ ದ್ವಾದಶಿ ಷೋಡಶದಳ ಯುಗ್ಮವಳಿಯ ಮಂಟಪದಿ, ಮನವೆ, ಹೊಳೆವ ಚಿದ್ಘನದ ಚಿತ್ಕಳೆ ತುಂಬಿ ತುಳಕಲಾ ದಳಿಗಳೊಳು ದಳ ವಿದಳವಾಗಿ ಮನವೆ, ಕಳೆ ಕಳಾಸಂದ ಪೂರ್ಣೈಸೂಕ್ತಿ ಸಹಸ್ರ ದಳದ ಕಳೆಯೊಳಗೆಲ್ಲವಳಿದು, ಮನವೆ, ಥಳಥಳಿಸಿಹೊಳೆವ ಸದ್ಗುರು ಚನ್ನಮಲ್ಲನೊಳು ಬೆಳಗು ಚಿದ್ಬೆಳಗು ನೀನಹಡೆ' ಎಂದು ಪ್ರಾಣಲಿಂಗಸ್ಥಲದ ಸಾಧನೆಯಲ್ಲಿ ಅಕ್ಕ ಉದ್ಗಾರ ತೆರೆದಿರುವಳು.

ಅಕ್ಕನ ಕರಸ್ಥಲದಲ್ಲಿದ್ದ ಇಷ್ಟಲಿಂಗದ ದೃಷ್ಟಿಯೋಗದಿಂದ ಕಣ್ಣು ತುಂಬಿದೆ. ಕಂಗಳ ನೋಟದ ಮೂಲಕ ಮನದ ಕೊನೆಯನ್ನು ಹೋಲುತ್ತದೆ. ಮನದ ಕೊನೆಯಲ್ಲಿ ನೋಡಿದರೆ ಭಾವದಲ್ಲಿ ಇಂಬಿಡುತ್ತದೆ. ಅವಳ ಸರ್ವಾಂಗ ಲಿಂಗವಾಗಿ ಪರಿಣಮಿಸಿದೆ. ಇಷ್ಟಲಿಂಗ ಪ್ರಾಣಲಿಂಗಗಳೆರಡೂ ಈ ಸಾಧನೆಯಲ್ಲಿ ಒಂದಾಗುವವು. ಅಂಗದ ಮೇಲೆ ಕುರುಹಾಗಿಟ್ಟ ಇಷ್ಟಲಿಂಗವನ್ನು ಅಕ್ಕ ಅನುಸಂಧಾನ ಮಾಡುತ್ತ ಅಲ್ಲಿ ಆಯತವಾದುದನ್ನು ಇಲ್ಲಿ ಸ್ವಾಯತ ಮಾಡಿಕೊಂಡಿರುವಳು. ಅದಕ್ಕೆ ಸಹಾಯಕವಾದ ಯೋಗ ಸಾಧನೆಯ ಸಂಪೂರ್ಣ ಅಧ್ಯಯನ ಅಕ್ಕನ 'ಯೋಗಾಂಗ ತ್ರಿವಿಧಿ'ಯಲ್ಲಿ ನಾವು ಮನಗಾಣಬಹುದು.

ಬ್ರಹ್ಮರಂಧ್ರದ ಬ್ರಹ್ಮ ನಿರ್ಮಳನಾದವ
ಒಮ್ಮನದಿಂದ ಲಾಲಿಸುತ
ಸುಮ್ಮನಿರದೆ ನಿಜತತ್ವವಾ ಒಂದೆಂಬ
ಮರ್ಮವರಿಯಬೇಕು ॥

ಒಪ್ಪುವ ನಿಟಿಲಭ್ರೂಮಧ್ಯದ ಕೊನೆಯೊಳ
ಗಿಪ್ಪ ಜ್ಯೋತಿರ್ಲಿಂಗವನರಿದು
ತಪ್ಪದೆ ಧ್ಯಾನಿಸಿ ಶಿವಲಿಂಗಾಮೃತ
ತೃಪ್ತಿಯೊಳಿಸರಬೇಕು ॥

ಮೂರು ತನುವಿನೊಳಗೆ ಆರೂಢವೆಂದೆಂಬ
ಆರಕ್ಷಕದಿರವನರಿದು
ಸೇರಿ ಶ್ರೀ ಗುರು ತತ್ವಚಿತ್ತಾನಂದವ
ಸಾರಿ ಪೂಜಿಸಬೇಕು ॥

ಅಕ್ಕನ ಸಾಧನೆಯು ಪ್ರಾಣಲಿಂಗಾರ್ಚನೆಯ ಮರ್ಮವಿದು. ಇಷ್ಟಲಿಂಗದ ಅನುಸಂಧಾನಕ್ಕೆ ಅನುಗುಣವಾಗಿ ಯೋಗಾಭ್ಯಾಸದ ಎಲ್ಲ ಸಾಧನೆಗಳೂ ಇಲ್ಲಿ ಪರಿವರ್ತಿತವಾಗಿವೆ.

ಒಟ್ಟಿನಲ್ಲಿ ಮಹಾದೇವಿಯಕ್ಕ ಪ್ರಾಣಲಿಂಗಿಸ್ಥಲದಲ್ಲಿ ತನ್ನ ಅಂತಃಶಕ್ತಿಯ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಂಡಿರುವಳು. ಅಕ್ಕನ ಇಷ್ಟ ಲಿಂಗೋಪಾಸನೆ ಒಳಹೊರಗೆ ವ್ಯಾಪಿಸಿ ಸರ್ವಾಂಗಲಿಂಗವಾಗಿ ಪರಿಣಮಿಸಿದೆ. ಅಂಥ ಸಾಧನೆಯ ಅಕ್ಕ, ಕಂಗಳ ನೋಟವು ಕಾಯದ ಕರದಲ್ಲಿ ಲಿಂಗದ ಕೂಟವು ಶಿವಶಿವ ಚಲುವನು ಮಂಗಳ ಮೂರುತಿ ಮತಿಗಳ ದೇವಂಗೆತ್ತುವೆನಾರತಿಯ', ಎಂದು ಸಾರಿ ಮನದುಂಬಿ ಹಾಡಿದ್ದಾಳೆ.

ಹೀಗೆ ಅಕ್ಕನ ನಿರಂತರಬದುಕಿನಲ್ಲಿ ಪ್ರಸಾದಿ ಪ್ರಾಣಲಿಂಗಿಸ್ಥಲಗಳು ಮಾರ್ಗದಲ್ಲಿ ಮಧ್ಯವರ್ತಿಯಾಗಿ ಕೆಲಸ ನಿರ್ವಹಿಸಿವೆ. ಭಕ್ತ ಮಹೇಶ್ವರರ ಶ್ರದ್ಧೆ, ನಿಷ್ಠೆಗಳ ಮೇಲೆ ಬೆಳೆದು, ಪ್ರಸಾದಿಸ್ಥಲದಿಂದ ಜ್ಞಾನಮಾರ್ಗದತ್ತ ತಿರುಗಿದೆ. ಪ್ರಾಣಲಿಂಗಿಯಲ್ಲಿ ಅನುಭಾವ ಪ್ರಧಾನವಾಗಿ ಪರಿಣಮಿಸಿದೆ. ಶರಣರಮಾರ್ಗ ಅನುಭಾವ ಪ್ರಧಾನವಾದುದು ಎಂಬುದನ್ನು ಗಮನಿಸಿದರೆ ಆ ಅನುಭಾವವನ್ನೇ ಅವಲಂಬಿಸಿ ಬೆಳೆದ ಅಕ್ಕನ ಪ್ರಾಣಲಿಂಗಸ್ಥಲದ ಯೋಗಮಾರ್ಗ ಮನದಟ್ಟಾಗುತ್ತದೆ. ಒಂದು ಕಡೆ ಶ್ರದ್ಧೆನಿಷ್ಠೆಗಳ ತಳಹದಿಯ ಮೇಲೆ, ಇನ್ನೊಂದು ಕಡೆಗೆ ಶರಣ ಐಕ್ಯಸ್ಥಲಗಳ ಆನಂದ ಸಮರಸದ ಕಡೆಗೆ ತನ್ನ ಕೈಯನ್ನು ಚಾಚಿದೆ. ಈ ದೃಷ್ಟಿಯಿಂದ ಈ ಸ್ಥಲ ಷಟ್‌ಸ್ಥಲದ ಕೇಂದ್ರಬಿಂದುವೆನಿಸಿದೆ.

ಪ್ರಾಣಲಿಂಗಿಸ್ಥಲದಲ್ಲಿ ಪ್ರಯತ್ನಪೂರ್ವಕ ಕೈಕೊಂಡ ಯೋಗಸಾಧನೆಯ ಅನುಭಾವ, ಶರಣ ಐಕ್ಯಸ್ಥಲಗಳಲ್ಲಿ ಸಹಜಸ್ಥಿತಿಯಲ್ಲಿ ಪರಿಣಮಿಸಿದೆ. ಇಲ್ಲಿ ಭಾವಲಿಂಗ ಭರಿತಳಾಗಿ ಆನಂದ ಮತ್ತು ಸಮರಸಭಕ್ತಿಗಳಿಂದ ಆತ್ಯಂತಿಕ ತೃಪ್ತಿಯನ್ನು ಅಕ್ಕ ಪಡೆದಿರುವಳು. ಇಲ್ಲಿ ಆಕೆ ಸಂಶಯರಹಿತೆ, ನಿರ್ಭೀತಳು, ಅಪಾರ ಆತ್ಮವಿಶ್ವಾಸವುಳ್ಳವಳೆನಿಸಿರುವಳು. ಪ್ರಪಂಚವನ್ನು ಹೊದ್ದಿಯೂ ಹೊದ್ದದಂತಿದ್ದು ಕರ್ತವ್ಯವನ್ನೇ ನಿರ್ವಹಿಸುವ ನಿರಾಭಾರಿ ಎನಿಸಿದ್ದಾಳೆ. ಇದು ಷಟಸ್ಥಲ ಮಾರ್ಗದಲ್ಲಿ ಮುಖ್ಯ ಗಮನಿಸಬೇಕಾದ ಅಂಶ. ಇಲ್ಲಿ ಅಕ್ಕ ತನ್ನ ಉದ್ಧಾರವನ್ನಷ್ಟೇ ನೋಡಿಕೊಳ್ಳದೆ ತಾನು ಕಂಡ ಬೆಳಗನ್ನು ಇತರರಿಗೂ ತೋರಿಸಿಕೊಡುವ ಪ್ರಯತ್ನದಲ್ಲಿ ಮುಂದುವರೆದಿರುವಳು. ಈ ಸಾಧನೆಯ ಸಾರ್ಥಕತೆಯನ್ನು ಆಕೆಯ ಶರಣಸ್ಥಲದ ಸ್ವರವಚನಗಳಲ್ಲಿ ಕಾಣಬಹುದು.

ಶರಣ–ಐಕ್ಯಸ್ಥಲ

'ಶರಣ' ಎನ್ನುವದು ಶಿವನಿಗೆ ಶರಣು ಹೊಕ್ಕವ, ಶಿವಯೋಗದ ಸಾಧಕ ಎಂಬ ಅರ್ಥ ವ್ಯಾಪ್ತಿಯುಳ್ಳ ಪದಗಳು. ಇಲ್ಲಿಯ ಶರಣಸ್ಥಲದ ಅರ್ಥವೇ ಬೇರೆ. ಆತ ಶಿವಯೋಗದ ತುತ್ತತುದಿಯಲ್ಲಿ ನಿಂತ ಅನುಭಾವಿ. ಆತನನ್ನು ಅಕ್ಕ ಅಂಗಸಂಗಿಯಾಗಿ ಸಂಬಂಧಿಯಲ್ಲ, ಲಿಂಗದಲಾಪ್ಯಾಯನಿಯಾಗಿ ಇತರ ಸುಖಂಗಳ ಬಿಟ್ಟು ಕಳೆದ ಸುಮನಸಾರಾಯವಾದ ಶರಣ, ಗುರು ಕರುಣ ಸಂಯೋಗದಿಂದ ಶಿಷ್ಯನಿಂತು ಕರದಲಿ ಹುಟ್ಟಿದನು, ಕರುಣ ಸನ್ನಿಹಿತನ ಗಾಹಿಯಾಗಿ ಗಾಳಿಯ ಸುಳುಹಡಗಿದ ಶರಣನು. ಆಸೆಯೆಂಬ ಹದನುಳು ಹಾಗಿ ಹಿಡಿದ ಛಲವ ಬಿಡೆನೆಂಬ ಬೇರೂರಿ ಸಂಕಲ್ಪ ವಿಕಲ್ಪವೆಂಬೆರಡೂ ಇಲ್ಲದೆ ನಿಃಕಳನಾಗಿಪ್ಪ ಶರಣನು, ತಾ ಮಾಡುವ ಮಾಟಕ್ಕೆ ತವಕಿಗನಾಗಿ ಹಿಂದು ಮುಂದರಿಯದ ಶರಣನು, ತಾಮಸವಿಷಯ ವಿರಹಿತ ಶರಣನು' ಎಂದು ಶರಣಸ್ಥಲದ ಲಕ್ಷಣಗಳನ್ನು ಹೇಳಿರುವಳು. ಅವನು 'ಮಾಡುವವರ ಕಂಡು ಮಾಡುವನಲ್ಲ, ಮಾಡದವರಕಂಡು ಮಾಡದವರಕಂಡು ಮಾಡದವನಲ್ಲ, ಲೋಕವಿಡಿದು ಲೋಕವ ಹಿಂಗಿದಂತಿಪ್ಪವನು, ಬೆಂದ ನುಲಿಯಂತೆ ಹುರಿಗುಂದದದಂತಿಪ್ಪನು' ಎಂದು ಅಕ್ಕ ತನಗೆ ಹೋಲಿಸಿಕೊಂಡು ಹೇಳಿದ ಹೇಳಿಕೆಯಿಂದ ಶರಣರ ನಿರ್ಲಿಪ್ತ ಮನೋಧರ್ಮ ಸುವ್ಯಕ್ತವಾಗುತ್ತದೆ.

ಆಧ್ಯಾತ್ಮಿಕವಾಗಿ ಅಕ್ಕ ಸಿದ್ಧಿಯ ಶಿಖರದಲ್ಲಿ ನಿಂತವಳು. ಶ್ರದ್ಧೆ ನಿಷ್ಠೆ ಅವಧಾನ ಅನುಭಾವಭಕ್ತಿಗಳನ್ನು ದಾಟಿ ಆನಂದಭಕ್ತಿಯ ನಿಬ್ಬೆರಗಿನಲ್ಲಿ ಒಂದಾದವಳು.

ಮನಕೆ ಗೋಚರವಾಗಿ ತನುಮನರೂಪಾಗಿ
ಅನುವಿನಲಿ ವರನ ಬಲ್ಲವರ
ನೆನೆವರಿಗೆ ಸಿರಿ ನೇಮವ ತೋರುವ
ಘನ ಚೆನ್ನಮಲ್ಲನಂಬಿನಿಯನನು ॥

ಎಂದಳು ಮಹಾದೇವಿಯಕ್ಕ. ಅಂಗಲಿಂಗ ಸಂಗಿಯಾದ ಅಕ್ಕನ ಅಂಗೆಲ್ಲ ಲಿಂಗವೇ. ಅವಳ ಮನವೆಲ್ಲ ಅವಿರಳಜ್ಞಾನವೇ. ಅಕ್ಕನ ಈ ಸ್ಥಲದಲ್ಲಿ ಕಾಣುವ ವಿಶೇಷತೆಯೆಂದರೆ ಐಕ್ಯತೆಯನ್ನು ಸಹಜ ಸ್ಥಿತಿಯನ್ನಾಗಿ ಪಡೆದಿದ್ದರೂ ಆಕೆ ಲೌಕಿಕ ಜಗತ್ತಿನ ಸಂಪರ್ಕವನ್ನು ಕಳೆದುಕೊಳ್ಳದೆ ಇದ್ದುದು. ಶರಣಸತಿ ಲಿಂಗಪತಿ ಎಂಬ ಭಾವನೆಯಿಂದ ತನ್ನನ್ನು ಸಂಪೂರ್ಣವಾಗಿ ಚನ್ನಮಲ್ಲಿಕಾರ್ಜುನನಿಗೆ ಅರ್ಪಿಸಿಕೊಂಡವಳು. ಈ ಅಲೌಕಿಕ ಪತಿಯೊಡನೆ ಸಮರಸದ ಕೂಟವನ್ನು ಪಡೆದು ಆನಂದದ ನಿಬ್ಬೆರಗಿನಲ್ಲಿ ನಿಂತವಳು. ಅಕ್ಕನ 'ತವರುಮನೆ ಕಲ್ಯಾಣ', 'ಗಂಡನುಳ್ಳ ಗರತಿ' 'ಕನಸಿನ ಸುಖ' 'ನಿಜದುಯ್ಯಲೆ' ಇನ್ನೇತಕೆನ್ನ ಮದುವೆಯ ಚಿಂತೆ', 'ಎಮ್ಮವರೆನ್ನ ಮದುವೆಯ ಮಾಡಿದರು' ಮುಂತಾದ ಸ್ವರವಚನಗಳಲ್ಲಿ ಹಾಸುಹೊಕ್ಕಾಗಿ ಮೂಡಿನಿಂತಿದೆ ಅನುಭಾವ ತತ್ವ.

ಈ ಅತ್ಯಂತಿಕ ಅನುಭವದಲ್ಲಿ ಕ್ಷಣಕಾಲ ಮೈಮರೆತರೂ ಅಕ್ಕ ಅಲ್ಲಿಯೇ ಕಣ್ಮುಚ್ಚಿ ನಿಂತುಬಿಟ್ಟಿಲ್ಲ. ಸಮಾಜದ ಶಿಶುವಾಗಿ ಬೆಳೆದು ಆಕೆ ತನ್ನ ಅನುಭವದ ಬೆಳಕನ್ನು ತನ್ನ ಸುತ್ತಲಿನ ಸಮಾಜದ ಮೇಲೆ ಬೀರುವ ಕಾರ್ಯದಲ್ಲಿ ನಿರತಳಾಗಿದ್ದಾಳೆ. 'ನಿಜದುಯ್ಯಲೆ' ಸ್ವರವಚನ ಈ ಭಾವದ ಸ್ಪಷ್ಟ ಮಾದರಿಯೆನಿಸಿದೆ.

ಶರಣಸ್ಥಲ ಸಾಧನೆಯಲ್ಲಿದ್ದ ಅಕ್ಕ ತನಗಾಗಿ. ಮಾಡಬೇಕಾದುದೇನ ಉಳಿದಿಲ್ಲ. ಅವಳ ಕ್ರಿಯೆಗಳೆಲ್ಲ ಸಮಾಜದ ಒಳಿತಿಗಾಗಿ. ಧ್ಯಾನ ಪೂಜೆ ಜಪ ತಪಾದಿಗಳ ಹಂಗು ಆಕೆಗಿಲ್ಲ,. 'ತನು ನಿಮ್ಮ ರೂಪಾದ ಬಳಿಕ ಅರಿಗೆ ಮಾಡುವೆ? ಮನ ನಿಮ್ಮ ರೂಪಾದ ಬಳಿಕ ಆರನೆನೆವೆ, ಪ್ರಾಣ ನಿಮ್ಮ ರೂಪಾದ ಬಳಿಕ ನಾನಾರನಾರಾಧಿಸುವೆ? ಅರಿವು ನಿಮ್ಮಲ್ಲಿ ಸ್ವಯವಾದ ಬಳಿಕ ಆರನರಿವೆ'. ಎಂಬ ಅಕ್ಕನ ವಚನ ಅವಳ ದೃಢಮನೋನಿರ್ಧಾರವನ್ನು ತಿಳಿಯಪಡಿಸಿದೆ.

ಇನ್ನು ಐಕ್ಯಸ್ಥಲ ಅಂತಿಮ ಹಂತ. ತನ್ನ ಕರ್ತವ್ಯವನ್ನು ಮನಸಾ ನಿರ್ವಹಿಸಿದ ಅನುಭಾವಿ ಅಕ್ಕ ಸಂಪೂರ್ಣ ಸಾಮರಸ್ಯದಲ್ಲಿ ಲೀನವಾಗುವುದನ್ನು ಈ ಸ್ಥಲ ಸೂಚಿಸಿದೆ. ಅಂಗ ಲಿಂಗಗಳಲ್ಲಿ ಎರಡೆಂಬ ಭಾವವಳಿದು ಏಕೋಭಾವ ಮೂಡಿದೆ. ಇಲ್ಲಿ ಕರ್ಪುರ ಅಗ್ನಿಸಂಯೋಗವಾಗಿ ಕರ್ಪುರದ ಗಣವಳಿದು ಅಗ್ನಿಯಾದಂತೆ' ಅಂಗವ ನೆನೆದು ಲಿಂಗವೇ ತಾನಾಗಿ ಪರಿಣಮಿಸಿರುವಳು. ಶರಣಸ್ಥಲದ ಸಾಧನೆಯ ಹಂತದಾಟಿ ಐಕ್ಯಸ್ಥಲದ ಅನುಭಾವವನ್ನು ಸವಿದ ಅಕ್ಕ.

ಕದಳಿ ಎಂಬುದು ತನು, ಕದಳಿ ಎಂಬುದು ಮನ
ಕದಳಿ ಎಂಬುದು ವಿಷಯಗಳು
ಕದಳಿ ಎಂಬುದು ಭವ ಘೋರಾರಣ್ಯ
ಕದಳಿ ಎಂಬುದ ಗೆದ್ದು ತವೆ ಬದುಕಿ ಬಂದು
ಕದಳಿಯ ಬನದಲ್ಲಿ ಭವಹರನ ಕಂಡೆನು
ಭವಗೆಟ್ಟು ಬಂದ ಮಗಳೆಂದು ಕರುಣದಿಂ ತೆಗೆದು ಬಿಗಿಯಪ್ಪಿದಡೆ
ಚನ್ನಮಲ್ಲಿಕಾರ್ಜುನನ ಹೃದಯ ಕಮಲದಲ್ಲಿ ಅಡಗಿದೆನು ॥

ಎಂದು ಹಾಡಿದ್ದು ತನ್ನ ಇಡೀ ಸಾಧನೆಯಮಾರ್ಗವನ್ನು ಸೂಚಿಸಿ ಕೊನೆಯಲ್ಲಿ ಚನ್ನಮಲ್ಲಿಕಾರ್ಜುನನ ಹೃದಯಕಮಲದಲ್ಲಿ ಅಡಗಿದುದನ್ನು ಹೇಳುತ್ತಾಳೆ. ಅದೇ ಆಕೆಯ ಸ್ವರವಚನದಲ್ಲಿ 'ಕಾಮವೆಂಬ ಹೊಲನ ದಾಂಟಿ, ಸೀಮೆಯೆಂಬ ಹೊಲಬನರಿದು ಹೇಮಗಿರಿಯ ಹೊಕ್ಕ ಬಳಿಕ ಮರಳಿ ಬಾರೆನಕ್ಕಯ್ಯ ಎಂಬ ವಾಣಿಯಲ್ಲಿ ಅವಳು ಚನ್ನಮಲ್ಲಿಕಾರ್ಜುನನ ಹೃದಯಕ್ಕೆ ಅರ್ಪಿತವಾದ ಬಳಿಕ ಲೌಕಿಕಕ್ಕೆ ಬಾರೆ ಎಂಬ ದೃಷ್ಟಿ ನಿರ್ಧಾರಿತವಾಗಿ ಮೂಡಿನಿಂತಿದೆ.

ಇದು ಒಂದು ಬಗೆಯ ನಿವೃತ್ತಿ ಮಾರ್ಗ. ತನುಮನ ಪ್ರಾಣ ಭಾವಗಳು ನಿವೃತ್ತಿಯಾಗಿ ಲಿಂಗಸ್ವರೂಪವಾಗುತ್ತವೆ, ಲಿಂಗಲೀಯವಾಗುತ್ತವೆ. ಹೀಗೆ ತನುಮನ ಭಾವಗಳು ನಿವೃತ್ತಿಯಾದಂತೆಲ್ಲ ಗುರುಲಿಂಗ ಜಂಗಮಗಳು, ತನ್ನಲ್ಲಿ ಒಂದಾಗಿ ಐಕ್ಯವಾಗುತ್ತವೆ. 'ತನ್ನ ತಾನರಿದಡೆ ತನ್ನರಿವೆ ಗುರು' ತಾನೇ ಲಿಂಗ ತನ್ನ ನಿಷ್ಠೆಯೆ ಜಂಗಮ'. ಗುರಿಯನ್ನು ಮುಟ್ಟುವವರೆಗೆ ಈ ಎಲ್ಲ ಪರಿಕರಗಳ ಸಾಧನೆಗಳ ಅವಶ್ಯಕತೆ. ಕರ್ತವ್ಯ ನಿರ್ವಹಣೆ ನಿಲುಕಡೆಗೆ ಬಂದ ಮೇಲೆ ಅವು ಒಂದರಲ್ಲೊಂದು ಐಕ್ಯವಾಗುತ್ತವೆ. ಹೀಗೆ ಅಕ್ಕ ತನ್ನ ಅವಿರತ ಪ್ರಯತ್ನ ದೃಢ ನಿರ್ಧಾರದಿಂದ ತಾನು ತಾನೇ ಆಗಿ ಚೆನ್ನಮಲ್ಲಿಕಾರ್ಜುನನಲ್ಲಿ ಒಡವೆರೆದು ಒಂದಾಗಿರುವಳು.

ಇದು ಮಹಾದೇವಿಯಕ್ಕನ ಸ್ವರವಚನಗಳನ್ನಾಧರಿಸಿ ರಚಿಸಲಾದ ಷಟಸ್ಥಲಮಾರ್ಗದ ಒಂದು ಸ್ಥೂಲ ನಿರೂಪಣೆ. ಇಲ್ಲಿ ಚನ್ನಮಲ್ಲ, ಚೆನ್ನಮಲ್ಲಿಕಾರ್ಜುನ, ಶ್ರೀಗಿರಿ ಚನ್ನಮಲ್ಲಿಕಾರ್ಜುನ, ಶ್ರೀಶೈಲಚನ್ನಮಲ್ಲಿಕಾರ್ಜುನ, ಚನ್ನಮಲ್ಲಿಕಾರ್ಜುನದೇವ, ಚನ್ನಮಲ್ಲೇಶ ಚನ್ನಮಲ್ಲೇಶ್ವರ ಚನ್ನಮಲ್ಲೇಶ್ವರಲಿಂಗ ಮುಂತಾದ ವಿಭಿನ್ನ ಅಂಕಿತನಾಮಗಳಿಂದ ಚನ್ನಮಲ್ಲಿಕಾರ್ಜುನ ಕರೆಸಿಕೊಂಡಿದ್ದಾನೆ. ಭಕ್ತಸ್ಥಲದಿಂದ ಹಿಡಿದು ಐಕ್ಯ ಸ್ಥಲದವರೆಗಿನ ಹಂತಹಂತವಾಗಿ ಮೇಲೇರಿದ ಅಕ್ಕನ ಅಧ್ಯಾತ್ಮಯಾತ್ರೆಯ ಅವಿರಳ ಚಿತ್ರವನ್ನು ಕೆಲವು ಪ್ರಧಾನ ಅಂಶಗಳ ಮೂಲಕ ಮಾತ್ರ ಇದುವರೆಗೆ ಗಮನಿಸಿದ್ದೇವೆ. ಇಲ್ಲಿ ಮಹಾದೇವಿಯಕ್ಕನ ಸಾಧಕ ಮನೋವಿಕಾಸದ ಚಿತ್ರ ವಚನಗಳಲ್ಲಿಯಷ್ಟು ಸ್ಪುಟವಾಗಿ ಬಾರದೇ ಹೋದರೂ ತಕ್ಕಮಟ್ಟಿಗೆ ತೆರೆಹಿಡಿಯಲು ಸಾಧ್ಯವಾಗಿದೆ. ಒಟ್ಟಿನಲ್ಲಿ ಅಕ್ಕನ ಸ್ವರವಚನಗಳಲ್ಲಿ ಶರಣಸತಿ ಲಿಂಗಪತಿ ಭಾವ ಕಾವ್ಯದುದ್ದಕ್ಕೂ ಹರಿದು ಒಂದು ತಾತ್ವಿಕ ಮೌಲ್ಯದ ಹಿನ್ನೆಲೆಯನ್ನು ಕಾವ್ಯಕ್ಕೆ ತಂದುಕೊಟ್ಟಿದೆ ಎಂದು ಹೇಳಬೇಕು.

ಆಧಾರಗಳು :

೧. ಅಕ್ಕನ ವಚನಗಳು ೮೩, ಸಂ. ಡಾ. ಎಲ್. ಬಸವರಾಜು
೨. ಬಸವಣ್ಣನವರ ಷಟಸ್ಥಲದ ವಚನ ೧೭೫
೩. ಹರಿಹರನ ರಗಳೆಗಳು, ಲಿಂಗಾರ್ಚನ ರಗಳೆ
೪. ಸಿದ್ಧರಾಮಚರಿತ್ರಾ
೫. ಸಿದ್ಧರಾಮಚಾರಿತ್ರ ೯:೨೭
೬. ಬಸವರಾಜದೇವರ ರಗಳೆ ೧೨ನೆಯ ಸ್ಥಲದ ಆರಂಭ
೭. ಶೂನ್ಯ ಸಂಪಾದನೆ ಪು. ೨೫–೨೬
೮. ಮಲ್ಲಿಕಾರ್ಜುನ ಪಂಡಿತಾರಾಧ್ಯ ಚರಿತ್ರೆ
ಪ್ರಕಟನೆ : ಮಹಾದೇವಿಯಕ್ಕನ ಸಮಗ್ರ ಸಾಹಿತ್ಯ ಸಮಾಲೋಚನ ೧೯೯೨, ಶಿಕಾರಿಪುರ.

೨೮. ಅಕ್ಕನ ವಚನಗಳ ಓದು : ಮರುಪರಿಶೀಲನೆ

●

ಎಸ್. ಸಿರಾಜ್ ಅಹಮದ್

ಕನ್ನಡದಲ್ಲಿ ವಚನ ಸಾಹಿತ್ಯವನ್ನು ಕುರಿತು ವಿಪುಲವಾದ ವಿಮರ್ಶೆ/ವಿಶ್ಲೇಷಣೆಗಳು ಬಂದಿದ್ದರೂ ಅವು ವಚನ ಸಮಾಜದ ಬಗೆಗಿನ ನಮ್ಮ ಗ್ರಹಿಕೆಗಳನ್ನು ಇನ್ನಷ್ಟು ಸ್ಪಷ್ಟಗೊಳಿಸ ಬೇಕಾಗಿದೆ. ಯಾಕೆಂದರೆ 'ವಚನ ಚಳವಳಿಯ ಹಿನ್ನೆಲೆಯಲ್ಲಿ ನಾವಿಂದು ಎತ್ತುತ್ತಿರುವ ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಪ್ರಶ್ನೆಗಳಿಗೆ ಉತ್ತರ ಹುಡುಕಲು ವಚನ ಸಾಹಿತ್ಯವನ್ನು ಬಿಟ್ಟರೆ ಬೇರೆ ಚಾರಿತ್ರಿಕ, ಸಾಮಾಜಿಕ ಆಕರಗಳಿಲ್ಲ. ವಚನ ಚಳವಳಿ ಸಾಧ್ಯ ಮಾಡಿರುವ ಕ್ರಾಂತಿಕಾರಿ ಪಲ್ಲಟವನ್ನು ವಿಶ್ಲೇಷಿಸಲು ನಮಗೆ ವಚನ ಸಾಹಿತ್ಯವನ್ನು ಬಿಟ್ಟರೆ ಇತರ ಸಮಾಜಶಾಸ್ತ್ರೀಯ ಅಧ್ಯಯನಗಳು ಸಿಕ್ಕುವುದಿಲ್ಲ' ಎಂಬ ಮಾತನ್ನು ಹಲವು ವಿದ್ವಾಂಸರು ವಚನ ಸಮಾಜವನ್ನು ತೀಕ್ಷ್ಣ ವಿಮರ್ಶೆಗೆ ಗುರಿ ಪಡಿಸುವ ಸಂದರ್ಭದಲ್ಲಿ ಪ್ರಸ್ತಾಪಿಸಿದ್ದಾರೆ.[೧] ಈ ಕೊರತೆಯನ್ನು ಆರ್.ಎನ್. ನಂದಿ, ಇರ್ಫಾನ್ ಹಬೀಬ್‌ರಂಥ ವಿದ್ವಾಂಸರ ಬಹುಪಾಲು ಪೂರ್ಣಗೊಳಿಸಿದ್ದಾರೆ. ಆದರೂ ವಚನ ಚಳವಳಿಯ ಸೋಲು ಏಕಾಯಿತು? ಅಲ್ಲಿ ಹೆಣ್ಣಿಗೆ ದಕ್ಕಿದ ಸ್ಥಾನ ನಿಜಕ್ಕೂ ಎಂಥದು? ಅದು ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನು ಪರೋಕ್ಷವಾಗಿ ಸಮರ್ಥಿಸಿತೆ? ಎಂಬಂಥ ಪ್ರಶ್ನೆಗಳನ್ನು ಕೇಳಿದರೆ, ಈ ಬಗ್ಗೆ ಉತ್ತರ ನೀಡುವುದು ತೊಡಕಿನ ಸಂಗತಿಯಾಗಿ ತೋರುತ್ತದೆ.

ಅಕ್ಕಮಹಾದೇವಿಯ ವಚನಗಳನ್ನು ಸಾಂಸ್ಕೃತಿಕ ಮುಖಾ ಮುಖಿಯ ನೆಪದಲ್ಲಿ ಹೊಸ ಓದಿಗೆ ಗುರಿಪಡಿಸುವ ಸಂದರ್ಭ ದಲ್ಲಿ ಅಕ್ಕನ ಕುರಿತಾಗಿ ಬಂದಿರುವ ವಿಮರ್ಶೆಯ ನಿಲುವುಗಳೂ ನಮ್ಮ ಚರ್ಚೆಯಲ್ಲಿ ಮುಖ್ಯಪಾತ್ರವಹಿಸಬಹುದು ಎಂದು ನಾನು ಭಾವಿಸಿರುವೆ. ಹಾಗಾಗಿ ನನ್ನ ವಿಶ್ಲೇಷಣೆಯಲ್ಲಿ, ಅಕ್ಕನನ್ನು ಕುರಿತು ಈಗಾಗಲೇ ಚಾಲ್ತಿಯಲ್ಲಿರುವ ಅಭಿಪ್ರಾಯಗಳನ್ನು ಪರಿಶೀಲನೆಗೆ ಒಳಪಡಿಸಲಾಗಿದೆ. ಅಕ್ಕನ ಬಗ್ಗೆ ಬಂದಿರುವ ವಿಫುಲವಾದ ವಿಮರ್ಶೆಯಲ್ಲಿ ಆಕೆಯನ್ನು ಸ್ತ್ರೀ ಸ್ವಾತಂತ್ರ್ಯದ ಅತ್ಯುತ್ತಮ ಉದಾಹರಣೆ ಎಂಬಂತೆ ನೋಡಲಾಗಿದೆ. ಜಿ.ಎಸ್. ಶಿವರುದ್ರಪ್ಪನವರು ಒಂದು ಕಡೆ ಆಕೆ ತಾತ್ವಿಕವಾಗಿ ಹಾಗೂ ವೈಚಾರಿಕವಾಗಿ ವಚನ ಚಳವಳಿಗೆ ಋಣಿಯಾಗಿರುವುದು ತೀರಾ ಕಡಿಮೆ ಎನ್ನುತ್ತಾರೆ. ಅಕ್ಕನ ಸಾಧನೆ ವ್ಯಕ್ತಿ ವಿಶಿಷ್ಟವಾದದ್ದು, ಹಾಗಾಗಿ ಆಕೆ ಶರಣ ಚಳವಳಿಗೆ ಋಣಿಯಾಗಬೇಕಿಲ್ಲ ಎಂಬ

ಅಭಿಪ್ರಾಯವನ್ನು ಹಲವರು ವ್ಯಕ್ತಪಡಿಸಿದ್ದಾರೆ ಅಕ್ಕನ ಸಾಧನೆಯಲ್ಲಿ ಬಸವಣ್ಣನ ಪಾತ್ರ ವಿಶೇಷವಾಗಿರದೆ ಕೂಡಿಬಂದ ಆಕಸ್ಮಿಕದ್ದು ಎಂಬ ಮಾತುಗಳನ್ನೂ ಸಹ ಹೇಳಲಾಗಿದೆ.[೨] ಆದರೆ ಈ ಬಗೆಯ ಮಾತುಗಳು ವಚನ ಚಳವಳಿಯ ಮುಖ್ಯ ಸಂವೇದನೆಯನ್ನು ಗಣನೆಗೆ ತೆಗೆದುಕೊಂಡಂತೆ ಕಾಣುವುದಿಲ್ಲ. ರಾಮಾನುಜನ್ ಅವರ ಮಾತನ್ನೇ ಬಳಸಿ ಹೇಳುವುದಾದರೆ ವಚನ ಸಂವೇದನೆಯನ್ನೇ ಒಂದು feminine principle ಆಗಿ ನೋಡಲು ಸಾಧ್ಯವಿದೆ.[೩] ವಚನಕಾರರ ಪ್ರಮುಖ ತತ್ವವಾದ ಶರಣಸತಿ ಲಿಂಗಪತಿ ಎಂಬುದೂ ಸಹ ಭಕ್ತಿಯನ್ನೇ ಒಂದು ಸ್ತ್ರೀ ಸಂವೇದನೆಯ ಅಭಿವ್ಯಕ್ತಿಯನ್ನಾಗಿ ನೋಡಲು ಸಾಧ್ಯವಿದೆ. ವಚನ ಸಾಹಿತ್ಯವನ್ನು ಒಳಗೊಂಡಂತೆ ಭಕ್ತಿ ಕಾವ್ಯದ ಮೂಲ ಆಶಯಗಳಾದ ಪ್ರೇಮ ಮಿಲನ ವಿರಹಗಳು ಸ್ತ್ರೀ ಸಂವೇದನೆಗೆ ಹತ್ತಿರವಾದ ಅನುಭವಗಳಾಗಿರುವುದರಿಂದ ವಚನಗಳಲ್ಲಿ ಕಾಣುವ ಭಕ್ತಿಯನ್ನು ಸ್ತ್ರೀ ಸಂವೇದನೆಗೆ ಸಮೀಕರಿಸಿ ನೋಡುವುದು ಉಚಿತವಾಗಿದೆ. ವಚನ ಸಾಹಿತ್ಯದಲ್ಲಿಯೇ ಸ್ತ್ರೀ ಸಂವೇದನೆಯೊಂದು ಅಂತರ್ಗತಗೊಂಡಿದೆ ಎಂಬುದು ನಿಜವಾದರೂ, ಒಟ್ಟಾಗಿ ಆ ಸಂದರ್ಭದಲ್ಲಿ ಸ್ತ್ರೀಗೆ ಸಿಕ್ಕಿದ ಸ್ಥಾನಮಾನ ಅಷ್ಟೇನೂ ದೊಡ್ಡದಲ್ಲೆಂಬ ಪ್ರಶ್ನೆ ಹಾಗೇ ಉಳಿದಿದೆ. ಈ ಪ್ರಶ್ನೆಯನ್ನು ಮುಂದೆ ವಿವರವಾಗಿ ಚರ್ಚಿಸಬಹುದು.

ರಾಮಾನುಜನ್ ಈ ಬಗ್ಗೆ ಪ್ರಸ್ತಾಪಿಸುತ್ತ ವಚನ ಚಳವಳಿಯಲ್ಲಿ ಹೆಣ್ಣು ಗಂಡಾಗುವ ಗಂಡು ಹೆಣ್ಣಾಗುವ ಪ್ರಕ್ರಿಯೆ ಅತ್ಯಂತ ವಿಶಿಷ್ಟವಾದದ್ದು ಎಂದು ಗುರ್ತಿಸುತ್ತಾರೆ. ಬಸವಣ್ಣ ವಚನವೊಂದರಲ್ಲಿ ಕೆಲವೊಮ್ಮೆ ನಾನು ಹೆಣ್ಣು, ಕೆಲವೊಮ್ಮೆ ಗಂಡು ಎನ್ನುತ್ತಾನೆ. ಇನ್ನೊಮ್ಮೆ "ಜಗವೆಲ್ಲಾ ಅರಿಯಲು/ಎನಗೊಬ್ಬ ಗಂಡನುಂಟು/ಆನು ಮುತ್ತೈದೆ/ಕೂಡಲಸಂಗಮ ದೇನವನಂತಪ್ಪ ಎನಗೊಬ್ಬ ಗಂಡನುಂಟು"[೪] ಎನ್ನುತ್ತಾನೆ. ಇನ್ನೊಂದು ವಚನದಲ್ಲಿ "ಎನ್ನ ಗಂಡ ಬರಬೇಕೆಂದು/ಎನ್ನ ಅಂತರಂಗವೆಂಬ ಮನೆಯ ತೆರಹು ಮಾಡಿ/ಅಷ್ಟದಳ ಕಮಲವೆಂಬ ಓವರಿಯೊಳಗೆ" ಎನ್ನುತ್ತ ಗಂಡಸು ಪಡೆದುಕೊಂಡಿರುವ ಸ್ವಯಂ ಅಧಿಕಾರ ವನ್ನು ವಿಸರ್ಜಿಸಿ ಕೊಳ್ಳಲು ಯತ್ನಿಸುತ್ತಾನೆ. ಇನ್ನೊಂದು ಕಡೆ ಅಕ್ಕ ತಾನು ಕಟ್ಟಿಕೊಂಡ ಗಂಡನನ್ನು ತೊರೆದು ಸಮಾಜವನ್ನು ಧಿಕ್ಕರಿಸಿ ಇಷ್ಟದೈವವನ್ನೇ ಗಂಡನನ್ನಾಗಿ ಸ್ವೀಕರಿಸು ವುದರ ಮೂಲಕ ಮನು ವಿಧಿಸಿದ ಕಟ್ಟಳೆಗಳನ್ನು ಮುರಿದು ಹೊಸ ವ್ಯಕ್ತಿತ್ವ ಕಟ್ಟಿಕೊಳ್ಳುತ್ತಾಳೆ. ಈ ಮಾತುಗಳನ್ನು ಅಕ್ಕನದು ಅಂತಿಮವಾಗಿ ವ್ಯಕ್ತಿ ವಿಶಿಷ್ಟ ಸಾಧನೆ ಅಥವಾ ಆಕೆಯ ಸಾಧನೆಯಲ್ಲಿ ಬಸವಣ್ಣನ ಪಾತ್ರವಿಲ್ಲ ಎನ್ನುವ ಹೇಳಿಕೆಗಳಿಗಿಂತ ವಚನ ಸಂವೇದನೆಯನ್ನೇ ಒಂದು ಸ್ತ್ರೀಪರ ಅನುಭೂತಿ ಎಂದು ಸೂಚಿಸುವುದಕ್ಕಾಗಿ ಪ್ರಸ್ತಾಪಿಸಬೇಕಾಗಿದೆ.

ಅಕ್ಕನನ್ನು ಸ್ತ್ರೀ ಸಂವೇದನೆಯ ಮಾದರಿ ಎಂದೊಡನೆ ಶರಣ ಸತಿ ಲಿಂಗಪತಿ ಎಂಬ ತತ್ವದಲ್ಲಿಯೇ ಲಿಂಗವೆಂಬ ಗಂಡು ಪತಿಯಾಗಿದ್ದಾನಲ್ಲವೆ? ಅಕ್ಕ ಸ್ತ್ರೀವಾದಿಯಂತೆ ಕಂಡರೂ ಅವಳ ಚೆನ್ನಮಲ್ಲಿಕಾರ್ಜುನ ಅಂತಿಮವಾಗಿ ಒಬ್ಬ ಗಂಡಸೇ ಅಲ್ಲವೆ ಎಂಬ ಅರ್ಥದ ಪ್ರಶ್ನೆ ಗಳನ್ನು ಹಲವು ಸಂದರ್ಭಗಳಲ್ಲಿ ಎತ್ತಲಾಗಿದೆ.[೫] ಈ ಬಗೆಯ ಪ್ರಶ್ನೆಗಳನ್ನು ಎತ್ತುವ ಮೂಲಕ ವಚನಗಳು ಪರೋಕ್ಷವಾಗಿ ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನು ಗಟ್ಟಿಗೊಳಿಸಿದವು ಎಂಬ ಸೂಚನೆ ದೊರೆಯುತ್ತದೆ. ಆದರೆ ಈ ಬಗೆಯ ಮಾತುಗಳ ಹಿಂದೆ ಸ್ತ್ರೀಗೆ ಅಥವಾ ಸ್ತ್ರೀವಾದಿಗೆ ಗಂಡಿನ ಸಖ್ಯವೇ ಪ್ರಶ್ನಾರ್ಹವೆಂಬ ಮನೋಭಾವ ಕೆಲಸ ಮಾಡಿದಂತಿದೆ. ಅಕ್ಕನ ದೈವ ಒಬ್ಬ ಗಂಡಸೇ ಎಂದು ಆಕ್ಷೇಪಿಸುವವರು "ನೆಲದ ಮರೆಯ ನಿಧಾನದಂತೆ, ಫಲದ ಮರೆಯ

ರುಚಿಯಂತೆ" ಎಂಬ ವಚನದಲ್ಲಿ ಆಕೆ ತನ್ನ ಚೆನ್ನ, ಅರಿವಿಗೆ ನಿಲುಕದ ಅನುಭವವೆಂದು ಹೇಳಿರುವುದನ್ನು ಗಮನಿಸಿದಂತಿಲ್ಲ. ಆದರೆ ಈ ಬಗೆಯ ಪ್ರಶ್ನೆಗಳಿಗೆ ಉತ್ತರಿಸುವ ಮೊದಲು ಅಕ್ಕನ ಸಾಧನೆಯ ವಿಶಿಷ್ಟತೆಯನ್ನು ಅವಳ ಹೆಣ್ತನದ, ಸ್ತ್ರೀ ಅನುಭವದ ಹಿನ್ನೆಲೆಯಲ್ಲಿ ವಿವರಿಸುವ ಅಗತ್ಯವಿದೆ.

ಅಕ್ಕ ಎಂಥ ವಿಚಿತ್ರ ವ್ಯಕ್ತಿ ಎಂದರೆ ಅವಳು ತನ್ನ ಚೆನ್ನಮಲ್ಲಿಕಾರ್ಜುನ, ಜ್ಞಾನಕ್ಕೆ ಅತೀತನಾದವನು, ಸಾವಿಲ್ಲದ ರೂಹಿಲ್ಲದ ಚೆಲುವ ಎನ್ನುತ್ತಾಳೆ. ಅಂಥ ರೂಹಿಲ್ಲದ ಚೆಲುವನನ್ನು ಆರಾಧಿಸುವ ಇವಳು ಮಾತ್ರ ಶುದ್ಧ ಹೆಣ್ಣೇ; "ಅರಿಸಿನವನೆ ಮಿಂದು, ಹೊಂದಡಿಗೆಯನೆ ತೊಟ್ಟ" ಶುದ್ಧ ಹೆಣ್ಣೇ ರೂಹಿಲ್ಲದ ಚೆಲುವವನ್ನು ಆರಾಧಿಸುತ್ತಿರುವುದು ಅಕ್ಕನ ಸಂಕೀರ್ಣ ವ್ಯಕ್ತಿತ್ವಕ್ಕೆ ಉದಾಹರಣೆಯಾಗಿದೆ. ಅಕ್ಕ ಕಾಯದ ಅಭಿಮಾನ ಲಜ್ಜೆಯನ್ನು ತೊರೆದಿದ್ದರೂ ಅವಳ ಕಾವ್ಯಾನುಭವವು ಶುದ್ಧ ಹೆಂಗೂಸಿನದೇ ಆಗಿದೆ. "ಬಟ್ಟಿಹ ಮೊಲೆಯ ಭರದ ಜವ್ವನದ..." ಹಾಗೂ "ಮುಡಿಬಿಟ್ಟು ಮೊಗಬಾಡಿ ತನು ಕರಗಿದವಳ...." ಎಂಬ ವಚನಗಳಲ್ಲಿ ಕಾಯದ ಲಜ್ಜೆಯನ್ನು ಮೀರಿದವಳ ಚಿತ್ರವಿದೆ ಎಂಬುದನ್ನು ಎಷ್ಟು ನಿಜವೋ ಅಕ್ಕ ಕಾಯದ ಅರಿವನ್ನು ಬಿಟ್ಟು ಬರೆದಿಲ್ಲೆಂಬುದೂ ಅಷ್ಟೇ ನಿಜ. ಈ ಬಗೆಯ ವಚನಗಳಲ್ಲಿ ದೇಹವೇ ಕಾವ್ಯ ವಸ್ತುವಾಗಿದೆ. ಇನ್ನೊಂದು ಅದ್ಭುತ ವಚನದಲ್ಲಿ:

ಪಂಚೇಂದ್ರಿಯಗಳ ಉರವಣೆಯ
ಉದುಮದದ ಭರದ ಜವ್ವನದೊಡಲು ವೃಥಾ ಹೋಯಿತ್ತಲ್ಲಾ!
ತುಂಬಿ ಪರಿಮಳವ ಕೊಂಡು ಲಂಬಿಸುವ ತೆರನಂತೆ
ಇನ್ನೊಂದಿಗೆ ಒಳಕೊಂಬೆಯೋ, ಅಯ್ಯಾ ಚೆನ್ನಮಲ್ಲಿಕಾರ್ಜುನಾ

ತನ್ನ ಆಧ್ಯಾತ್ಮದ ಅನುಭವವನ್ನು ಪಂಚೇಂದ್ರಿಯಗಳ ಬಾಧೆ ಎಂಬಂತೆ ಹೇಳಿರುವುದು ಅತ್ಯಂತ ವಿಶಿಷ್ಟವಾಗಿದೆ.

ಅಕ್ಕ ತನ್ನ ವಚನಗಳಲ್ಲಿ ತನ್ನ ಹೆಣ್ತನದ, ಲಿಂಗದ ಅನುಭವವನ್ನು ಅಭಿವ್ಯಕ್ತಿಸುವ ಹಾಗೆಯೇ ತನ್ನ ಮತ್ತು ಚೆನ್ನಮಲ್ಲಿಕಾರ್ಜುನ ನಡುವಿನ ಸಂಬಂಧವನ್ನು ಉತ್ಕಟ ಲೈಂಗಿಕ ಮಿಲನದ ನೆಲೆಯಲ್ಲಿ ಪ್ರಸ್ತುತ ಪಡಿಸುತ್ತಾಳೆ ಈ ಮಾತನ್ನು ಕನ್ನಡದ ಸಂದರ್ಭದಲ್ಲಿ ಹಲವಾರು ವಿಮರ್ಶಕರು ಬಹಳ ಸಮರ್ಥವಾಗಿ ವಿವರಿಸಿರುವುದರಿಂದ ಈ ಬಗ್ಗೆ ಹೆಚ್ಚು ಹೇಳುವ ಅಗತ್ಯವಿಲ್ಲ. ಅಕ್ಕನ ಲಿಂಗೀಯ ಅನುಭವ ಹಾಗೂ ಅವಳು ಆಧ್ಯಾತ್ಮವನ್ನು ಲೈಂಗಿಕ ಮಿಲನದ ಪರಿಭಾಷೆಯಲ್ಲಿ ವಿವರಿಸಿರುವ ಪರಿ ಇವೆರಡೂ ದೃಷ್ಟಿಕೋನಗಳನ್ನು ಬಳಸಿಕೊಂಡು ಅಕ್ಕ ಕೊನೆಗೆ ಏನನ್ನು ಸಾಧಿಸಲು ಯತ್ನಿಸಿರಬಹುದು ಎಂಬ ಪ್ರಶ್ನೆಯನ್ನು ಕೇಳುವುದು ಅಗತ್ಯವಾಗಿದೆ. ಅಕ್ಕ ತನ್ನ ಲಿಂಗದ ಮತ್ತು ಲೈಂಗಿಕತೆಯ ಅನುಭವವನ್ನು ಹೇಳಿಕೊಳ್ಳುತ್ತಲೇ ಅದನ್ನೇ ತನ್ನ ಹೆಣ್ತನಕ್ಕೆ ಹಾಕಿರುವ ನಿರ್ಬಂಧಗಳನ್ನು ಮೀರುವ ದಾರಿಯಾಗಿಸಿಕೊಂಡಿದ್ದಾಳೆ. ಅಂದರೆ ಯಾವ ಲಿಂಗದ (ಜೆಂಡರ್ ಎಂಬ ಅರ್ಥದಲ್ಲಿ) ಕಾರಣಕ್ಕಾಗಿ ಹೆಣ್ಣನ್ನು ಅಥವಾ ಅಕ್ಕನಂಥವಳನ್ನು ಶೋಷಿಸಲಾಗಿದೆಯೊ, ಲೈಂಗಿಕತೆಯ ದಾಹಕ್ಕೆ ತೊತ್ತಾಗಿಸಿಕೊಳ್ಳಲಾಗಿದೆಯೋ, ಅದೇ ಅನುಭವಗಳನ್ನು ಯಾವ ಸಂಕೋಚವೂ ಇಲ್ಲದೆ ಹೇಳುತ್ತ ಅದನ್ನೇ ತನ್ನ ವಿಮೋಚನೆಯ ದಾರಿಯಾಗಿಸಿಕೊಂಡಿದ್ದಾಳೆ. ಆದ್ದರಿಂದ "ದೈಹಿಕತೆಗೆ ಒತ್ತು ಕೊಡುವ ಮೂಲಕ ದೈಹಿಕತೆಯನ್ನು ಚೆನ್ನಮಲ್ಲಿಕಾರ್ಜುನನಿಗೆ ಒಪ್ಪಿಸಿ ಅಕ್ಕ ಮುಕ್ತತೆ ಪಡೆಯುತ್ತಾಳೆ"

ಎಂದು ರಾಜೇಂದ್ರ ಚೆನ್ನಿಯವರು ಹೇಳಿರುವುದು ಬಹುಶಃ ಇದೇ ಅರ್ಥದಲ್ಲಿ ಅನ್ನಿಸುತ್ತದೆ. (ಅಧ್ಯಯನ "ಮಹದೇವಿಯಕ್ಕ ಮತ್ತು ವಚನ ಸಂಪ್ರದಾಯ" ಲೇಖನದಲ್ಲಿ).

ಆದರೆ ಅಕ್ಕ ಹೆಣ್ತನವನ್ನು ತನ್ನ ಅನುಭವದ ಕೇಂದ್ರವಾಗಿಸಿಕೊಂಡಿದ್ದಾಳೆ ಎಂಬುದನ್ನು essentialist ದೃಷ್ಟಿಕೋನದಿಂದ ನೋಡಬಾರದು. ಅಕ್ಕನಿಗೆ ಲಿಂಗಾನುಭವವೇ, ಸ್ತ್ರೀತನವೇ ಮುಖ್ಯವೆಂದರೆ ಅದನ್ನು ಸ್ತ್ರೀ ಪುರುಷ ಎಂಬ ಸರಳ ಬೈನರಿ ವರ್ಗೀಕರಣದ ತೊಡಕಿನಲ್ಲಿ ನೋಡುವ ಅಪಾಯಕ್ಕೆ ತುತ್ತಾಗುತ್ತೇವೆ. ವಾಸ್ತವವಾಗಿ ಅಕ್ಕನಲ್ಲಿ ಲಿಂಗಾನುಭವ ಎಷ್ಟು ಮುಖ್ಯ ವಾಗಿದೆಯೋ ಅಷ್ಟೇ ಮುಖ್ಯವಾಗಿ ಲಿಂಗಾನುಭವವನ್ನು, ಗಂಡು ಹೆಣ್ಣಿನ ಲಿಂಗೀಯತೆಯನ್ನು ಮೀರುವ ಪ್ರಯತ್ನವೂ ಇದೆ. ಆದ್ದರಿಂದ ಅಕ್ಕನನ್ನಾಗಲಿ ಬಸವಣ್ಣನನ್ನಾಗಲೀ, ಗಂಡು, ಹೆಣ್ಣುಗಳೆಂಬ, ಪುರುಷ ಪರ–ಸ್ತ್ರೀ ವಿರೋಧ ಎಂಬಂಥ ವರ್ಗೀಕರಣದ ರಟ್ಟು ಪೆಟ್ಟಿಗೆಗಳಲ್ಲಿ ಇಟ್ಟು ನೋಡುವುದು ತಪ್ಪು, ಜೊತೆಗೆ ವಚನಕಾರರಲ್ಲಿ ಲಿಂಗಾನುಭವವನ್ನು ಒಳಗೊಂಡೇ ದ್ವಿಲಿಂಗೀಯವಾಗುವುದು (Androgynous) ಮತ್ತು ವಿಶಾಲ ಅರ್ಥದಲ್ಲಿ ಕೊನೆಗೊಮ್ಮೆ ಅಲ್ಲಮನಲ್ಲಿ ಆಗುವಂತೆ ನಿರ್ಲಿಂಗಿಯಾಗುವುದು ಅವರ ಆಧ್ಯಾತ್ಮಿಕ ವಿಕಾಸ ಪಥದಲ್ಲಿ ಬರುವ ಬೇರೆಬೇರೆ ಮಜಲುಗಳಾಗಿವೆ. ಆದ್ದರಿಂದ ಅವರಿಗೆ ಸೆಕ್ಸ್ ಅನ್ನು ಒಳಗೊಂಡೇ ಜೆಂಡರ್ ಅನ್ನು ಮೀರುವುದು ಸಮಸ್ಯೆಯೇ ಅಲ್ಲ.

ಉದಾಹರಣೆಗೆ "ಅಂಗ ಕ್ರಿಯಾಲಿಂಗವ ಭೇದಿಸಿ, ಅಂಗ ಲಿಂಗದೊಳಗಾಯಿತ್ತು" ಎಂಬ ವಚನದಲ್ಲಿ ಮನ ಜಂಗಮ ಸೇವೆಯ ಮಾಡಿ ಜಂಗಮಲಿಂಗವಾಯಿತ್ತು ಎನ್ನುತ್ತಾ ಕೊನೆಗೆ "ನಿಮ್ಮ ಒಲುಮೆಯಿಂದ ಸಂದಳಿದು" ಅಂದರೆ ಅಂತರ ಅಳಿದು ಸ್ವಯಂಲಿಂಗವಾದೆನಯ್ಯಾ ಎನ್ನುತ್ತಾಳೆ. ಹಾಗೆಯೇ "ಅಂಗದೊಳಗೆ ಅಂಗವಾಗಿ ಅಂಗವ ಲಿಂಗೈಕ್ಯವ ಮಾಡಿದೆ" ಎಂಬ ವಚನದಲ್ಲಿ ಅರಿವನ್ನು, ಜ್ಞಾನವನ್ನು ಕ್ರಿಯೆಯನ್ನು ಲಿಂಗೈಕ್ಯಗೊಳಿಸಿ ನಿಃಪತಿಯಾಗಿ ಅಂದರೆ ಮಾಗಿ ಸಿದ್ಧಿ ಹೊಂದಿ ಪರಿಪೂರ್ಣಳಾದೆ ಎನ್ನುತ್ತಾಳೆ. ಮುಂದುವರೆದು "ನಾನೆಂಬುದ ನಿಲಿಸಿ, ನೀನೆಂಬುದ ಕೆಡಿಸಿ, ಉಭಯವ ಲಿಂಗೈಕ್ಯ ಮಾಡಿದೆ" ಎನ್ನುತ್ತಾಳೆ. ನಂತರ ನಾನೆಂಬ ಅವಳು ಲಿಂಗದಲ್ಲಿ ಐಕ್ಯವಾದ ಮೇಲೆ "ಲಿಂಗವೆಂಬ ಘನವು ಎನ್ನಲ್ಲಿ ಅಳಿಯಿತ್ತು ಕಾಣಾ ಸಂಗನ ಬಸವಣ್ಣ" ಎನ್ನುತ್ತಾಳೆ. ಇಲ್ಲಿ ನಾನೆಂಬುದು ಹೇಗೆ ಅಳಿದಿದೆಯೋ, ಹಾಗೆ ಲಿಂಗವೂ ಅಳಿದಿದೆ. ನಾನು ವಿಸರ್ಜಿತವಾದಂತೆ ಸ್ವಯಂ ಲಿಂಗವೂ ವಿಸರ್ಜನೆಗೊಂಡಿದೆ.

"ಗಟ್ಟಿದುಪ್ಪ ತಿಳಿದುಪ್ಪಕ್ಕೆ ಹಂಗುಂಟೆ ಅಯ್ಯಾ" ಎಂಬ ವಚನದಲ್ಲಿ ನನಗೂ ಲಿಂಗಕ್ಕೂ ಭೇದವಿಲ್ಲ ಎನ್ನುತ್ತಾ "ಸಾವಯವಕ್ಕೂ ನಿರವಯವಕ್ಕೂ ಭೇದವಿಲ್ಲಯ್ಯಾ" ಎನ್ನುತ್ತಾಳೆ. ಇನ್ನೊಂದು ವಚನದಲ್ಲಿ ಲಿಂಗವೇ ಸ್ವಾಯತವಾಗಿ, ತನ್ನ ಅಧೀನದಲ್ಲಿದೆ ಎನ್ನುತ್ತಾಳೆ. ಅಂದರೆ ಅಕ್ಕನ ಪ್ರೇಮೋತ್ಕರ್ಷದ ಆಧ್ಯಾತ್ಮಿಕ ಪರಾಕಾಷ್ಠೆಯಲ್ಲಿ ಸ್ವಯಂ ಲಿಂಗವೂ ವಿಸರ್ಜನೆ ಗೊಂಡಿದೆ. ಗಂಡು ಹೆಣ್ಣೆಂಬ ಭೇದದ ಸಂದಳಿದು ಹೋಗಿದೆ. ಹಾಗಾಗಿ ಅಕ್ಕನ ವಚನ ಗಳನ್ನು ಹೆಣ್ಣಿನ ಅನುಭವವೆಂಬ essentialist ಪ್ರಭೇದದ ಇಕ್ಕಟ್ಟಿನಲ್ಲಿಟ್ಟು ನೋಡಿದರೆ, ಅದನ್ನು ಮೀರುವ ಅಂಶಗಳನ್ನು ಕಡೆಗಣಿಸಿದಂತಾಗುತ್ತದೆ. ಅಕ್ಕನದು ಲಿಂಗಾನುಭವದ (sexist) ಸಂವೇದನೆ ಯಾಗಿರುವಂತೆ, ಉಭಯಲಿಂಗ (androgynous) ಆಗಬಲ್ಲ ಸಂವೇದನೆ ಸಹ ಆಗಿದೆ. ನಿಶ್ಚಿತವಾದ, ವರ್ಗೀಕೃತವಾದ ಲಿಂಗೀಯ ವ್ಯಕ್ತಿತ್ವಗಳನ್ನು ಪಲ್ಲಟ ಗೊಳಿಸಲು ವರ್ಜನಿಯಾ

ವೂಲ್ಫ್‌ರಂಥವರು ಉಭಯ ಲಿಂಗಿತ್ವವನ್ನು ಬಳಸಿಕೊಳ್ಳುತ್ತಾರೆ. ಅಕ್ಕ ಸಹ ಆ ದಾರಿಯಲ್ಲಿ ಸಾಗಿದ್ದಾಳೆ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕಿದೆ.

ಹಾಗಾಗಿಯೇ ಅಕ್ಕನ ಇಷ್ಟದೈವ ಚೆನ್ನಮಲ್ಲಿಕಾರ್ಜುನ ಕೊನೆಗೂ ಒಬ್ಬ ಗಂಡಸೇ ಎಂದು ತಕರಾರು ಎತ್ತುವುದು ಅನಗತ್ಯವಾಗಿದೆ. ವಿಚಿತ್ರವಾಗಿ ಕಾಣುವ ಈ ಪ್ರಶ್ನೆಯನ್ನು ಇನ್ನೊಂದು ಬಗೆಯಲ್ಲಿ ಅರ್ಥ ಮಾಡಿಕೊಳ್ಳಲು ಸಾಧ್ಯವಿದೆ. ಅಕ್ಕನ ವಚನಗಳಲ್ಲಿ ಬರುವ ಲೈಂಗಿಕ ಮಿಲನದ ಉತ್ಕಟತೆಯನ್ನು ಅನುಭಾವವಾಗಿ ಒಪ್ಪಿಕೊಂಡಿರುವ ನಾವು ಅಕ್ಕನ ಇಷ್ಟದೈವ ಗಂಡಸು ಎಂಬ ಬಗ್ಗೆ ಯಾಕೆ ತಕರಾರು ಎನ್ನುತ್ತೇವೆ? ಈ ಬಗೆಯ ಪ್ರಶ್ನೆಗಳ ಹಿಂದೆ ಅಕ್ಕನನ್ನು ವೈರಾಗ್ಯಮೂರ್ತಿ ಎಂದು ನಂಬಿಸಲಾಗಿರುವ ಗೃಹೀತವೂ ಕೆಲಸ ಮಾಡಿದಂತಿದೆ. ವೈರಾಗ್ಯ ಮೂರ್ತಿಯೆಂಬ ಸಿದ್ಧ ನಂಬಿಕೆಗೆ ಅಕ್ಕನ ಪತಿ ಐಹಿಕನಾದ ಗಂಡಸಾಗಿರುವುದು ರುಚಿಸುವುದಿಲ್ಲ. ಆದರೆ ಅಕ್ಕ ಲೌಕಿಕದ ರೂಕ್ಷತೆಯನ್ನು ತಿರಸ್ಕರಿಸಿದವಳೇ ವಿನಾ ಲೌಕಿಕತೆಯನ್ನೇ ಇಡಿಯಾಗಿ ತಿರಸ್ಕರಿಸಿದಂತೆ ಕಾಣುವುದಿಲ್ಲ:

ಹಾವಿನ ಹಲ್ಲು ಕಳೆದು ಹಾವಾನಾಡಿಸಬಲ್ಲಡೆ
ಹಾವಿನ ಸಂಗವೆ ಲೇಸು ಕಂಡಯ್ಯಾ
ಕಾಯದ ಸಂಗವ ವಿವರಿಸಬಲ್ಲಡೆ
ಕಾಯದ ಸಂಗವೆ ಲೇಸು ಕಂಡಯ್ಯಾ
ತಾಯಿ ರಕ್ಕಸಿಯಾದಂತೆ ಕಾಯ ವಿಕಾರವು-
ನೀನೊಲಿದವರು ಕಾಯಗೊಂಡಿದ್ದರೆನಬೇಡ

ವಚನದಲ್ಲಿ ಭವವನ್ನು ಪೂರ್ಣ ತ್ಯಜಿಸುವ ಭಾವ ಕಾಣುವುದಿಲ್ಲ. ಕಾಯದ ಗುಣಗಳನ್ನು ಗೆದ್ದು ಬಾಳುವುದಾದರೆ ಕಾಯವೇ ಲೇಸು ಎನ್ನುವ ನಿಲುವಿನ ಈಕೆಗೆ "ಹೇಸಿ, ಒಲ್ಲೆ ಸಂಸಾರನೆಂಬುದು/ವೈರಾಗ್ಯವ ಬಲ್ಲವರಲ್ಲ" (೩೫೧) ಎಂಬ ಅರಿವಿದೆ. ಸಂಸಾರ ಜೀವನದ ಒಳಸುಳಿಗಳ ನಡುವೆ ಸಿಲುಕಿಯೇ ಆಧ್ಯಾತ್ಮದ ಆಶಯಗಳನ್ನು ಸಾಕಾರಗೊಳಿಸಿ ಕೊಳ್ಳುವುದು ಅವಳ ದಾರಿಯಾಗಿದೆ. ಹಾಗಾಗಿ ಅಕ್ಕನ ಇಷ್ಟದೈವ ಅಂತಿಮವಾಗಿ ಒಬ್ಬ 'ಗಂಡನೂ' ಗಂಡಸೂ ಆಗಿರುವ ಬಗ್ಗೆ ವಾದ ಬೆಳೆಸುವ ಅಗತ್ಯವಿಲ್ಲ.

ಇಷ್ಟೆಲ್ಲ ಹೇಳಿಯೂ ವಚನ ಚಳವಳಿಯ ಮುಖ್ಯಧಾರೆಯಲ್ಲಿದ್ದ ಅಕ್ಕನ ಮಾದರಿ ಅಂದಿನ ಸಮಾಜದಲ್ಲಿ ಸ್ತ್ರೀಗೆ ನೀಡಲಾಗಿದ್ದ ಸ್ಥಾನಮಾನವನ್ನು ಕ್ರಾಂತಿಕಾರಕವಾಗಿ ಪಲ್ಲಟಗೊಳಿಸಲು ಯಾಕೆ ಸಾಧ್ಯವಾಗಲಿಲ್ಲ ಎಂಬ ಪ್ರಶ್ನೆ ಹಾಗೆಯೇ ಉಳಿದಿದೆ. ಕನ್ನಡ ವಿಮರ್ಶೆ ಕಾಲಕಾಲಕ್ಕೆ ಈ ಕುರಿತು ಪ್ರಶ್ನೆಗಳನ್ನು ಕೇಳುತ್ತಲೇ ಬಂದಿದೆ. ವಚನ ಚಳವಳಿ ಮೂಲತಃ ಅವೈದಿಕ ತಾಂತ್ರಿಕ ಪಥಗಳಿಂದ ಪ್ರೇರಣೆ ಪಡೆದು ಸ್ತ್ರೀಯ ಬಗೆಗಿನ ಅಸ್ಪೃಶ್ಯ ಮನೋಭಾವವನ್ನು ನಿವಾರಿಸಲು ಸಾಧ್ಯವಾಯಿತಾದರೂ ಮೂಲತಃ ಹೆಣ್ಣಿನ ಶೀಲ ಕಲ್ಪನೆಯ ವಿಷಯದಲ್ಲಿ ಹಾಗೂ ಪತಿನಿಷ್ಠೆಯ ವಿಷಯದಲ್ಲಿ ಶರಣರು ಸಾಂಪ್ರದಾಯಿಕವಾಗಿಯೇ ಉಳಿದುಬಿಟ್ಟ ಬಗ್ಗೆ ರಹಮತ್ ತರೀಕೆರೆ ಆಕ್ಷೇಪವೆತ್ತಿದ್ದಾರೆ.[೬] ಕೆ.ಜಿ. ನಾಗರಾಜಪ್ಪನವರು ಬಹಳ ಹಿಂದೆಯೇ ವೀರಶೈವರ ಹೆಣ್ಣಿನ ಕಲ್ಪನೆಯಲ್ಲಿ ಗೊಂದಲವಿರುವ ಬಗ್ಗೆ ವಿಶ್ಲೇಷಣೆ ನಡೆಸಿದ್ದಾರೆ.[೭] ಆಧ್ಯಾತ್ಮಿಕ ಸಾಧನೆಯಲ್ಲಿ ಹೆಣ್ಣಿಗೆ ಸಮಾನ ಅವಕಾಶ ದೊರಕಿದಂತೆ ಕಂಡರೂ, ಸಾಮಾಜಿಕ ಜೀವನದಲ್ಲಿ ಅಂಥ ಬದಲಾವಣೆ ಎದ್ದು ಕಾಣಲಿಲ್ಲವೆಂದಿದ್ದಾರೆ. ಇತ್ತೀಚೆಗೆ ಇಂಗ್ಲಿಷಿನಲ್ಲಿ ಬಂದ ವಿಜಯಾ

ರಾಮಸ್ವಾಮಿಯವರ ಪುಸ್ತಕದಲ್ಲಿ ಅಕ್ಕ ಮೇಲ್ನೋಟಕ್ಕೆ ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳಾದ ಗಂಡ, ಕುಟುಂಬ ಅತ್ತೆ ಮಾವಂದಿರು ಇತ್ಯಾದಿಗಳನ್ನು ಪ್ರಶ್ನಿಸಿದಂತೆ ಕಂಡರೂ ಆಕೆಯ ವಚನಗಳು ಪರೋಕ್ಷವಾಗಿ ಅದೇ ಮೌಲ್ಯಗಳನ್ನು ಎತ್ತಿಹಿಡಿಯುವುದು ವಿಪರ್ಯಾಸ ಎಂದು ವಾದಿಸಿದ್ದಾರೆ.[೮] ಈ ಬಗೆಯ ಪ್ರಶ್ನೆಗಳನ್ನು ಎರಡು ಬಗೆಗಳಲ್ಲಿ ಉತ್ತರಿಸಲು ಸಾಧ್ಯವಿದೆ. ಮೊದಲನೆಯದಾಗಿ ವಚನ ಸಮಾಜದ ಚಾರಿತ್ರಿಕ, ಸಾಮಾಜಿಕ ವಿವರಗಳ ಆಧಾರದಿಂದ ಇದನ್ನು ಆರಂಭದಲ್ಲಿಯೇ ಸಮಸ್ಯಾತ್ಮಕವೆಂದು ಸೂಚಿಸಲಾಗಿದೆ ಇನ್ನೊಂದು ಎರಡನೆಯದಾಗಿ ವಚನಗಳೇ ನೀಡುವ ಅಂತಃಸ್ಸಾಕ್ಷ್ಯದಿಂದ.

ಮೊದಲನೆಯದಾಗಿ ವಚನ ಸಮಾಜದ ಸಮಾಜಶಾಸ್ತ್ರೀಯ ವಿವರಗಳ ನೆರವಿನಿಂದ ಅವು ಎಷ್ಟೇ ಕಡಿಮೆಯಾಗಿದ್ದರೂ – ಹೇಳುವುದಾದರೆ, ಅಕ್ಕನನ್ನು ಒಳಗೊಂಡು ಮೀರಾ ಮತ್ತಿತರರ ಭಕ್ತಿ ಕಾವ್ಯ ಪರಂಪರೆಯು ಹೆಣ್ಣಿಗೆ ಪರಂಪರಾನುಗತವಾಗಿ ಹೊರಿಸಲಾಗಿದ್ದ ಹೆಂಡತಿ, ತಾಯಿ ಮಗಳ ಪಾತ್ರವನ್ನು ನಿರಾಕರಿಸಿ ಹೊಸ ಅಸ್ತಿತ್ವವನ್ನು ಕೊಟ್ಟಿತು ಎಂಬುದೇನೋ ನಿಜ. ಹಾಗಿದ್ದರೂ ಆಧ್ಯಾತ್ಮಿಕ ಕ್ಷೇತ್ರದಲ್ಲಿ ದೊರಕಿದ ಅವಕಾಶ ಮೇಲ್ನೋಟಕ್ಕೆ ಗಮನಾರ್ಹವಾಗಿ ಕಂಡರೂ ಅವಳಿಗಿದ್ದ ಆಯ್ಕೆಗಳ ಬಗ್ಗೆ ಹೇಳುವುದಾದರೆ ಅವು ಬಹಳ ಸೀಮಿತವಾಗಿದ್ದವು. ಭಕ್ತಿಕಾವ್ಯದ ಸಂದರ್ಭದಲ್ಲಿ ಹೆಣ್ಣಿಗೆ ಸ್ವತಂತ್ರ್ಯ ಪಾತ್ರನಿರ್ವಹಣೆಯ ಹೊಸ ಅವಕಾಶ ಸಿಕ್ಕಿದರೂ ಅದು ನಿರ್ಣಾಯಕವಾಗಿ ಭಿನ್ನವಾಗಿರಲಿಲ್ಲ. ಮೀರಾ, ಕೃಷ್ಣನ ಪ್ರೇಮದ ವಿಷಯದಲ್ಲಿ ಬಂಡಾಯಗಾರ್ತಿಯಂತೆ ಕಂಡರೂ ಅವಳು ಇನ್ನೊಂದು ನೆಲೆಯಲ್ಲಿ ಕೃಷ್ಣನ ಪ್ರೇಮಕ್ಕೆ ಕಟ್ಟು ಬಿದ್ದ ಕರ್ತವ್ಯಶೀಲ ಪತಿವ್ರತೆಯಂತೆ ಕಾಣುತ್ತಾಳೆ ಎಂದು ಭಾರತದ ಸ್ತ್ರೀ ಬರಹಗಾರ್ತಿಯರು ಹಾಗೂ ಮಧ್ಯಕಾಲೀನ ಸಾಹಿತ್ಯದ ಬಗ್ಗೆ ವಿಶೇಷ ಅಧ್ಯಯನ ನಡೆಸಿರುವ ಸೂಸಿಥಾರು ಹೇಳುತ್ತಾರೆ.[೯] ಮೀರಾ ಕುರಿತು ಈ ಮಾತು ಸರಿಯೆನ್ನಿಸಿದರೂ ಅಕ್ಕನ ವಚನಗಳಲ್ಲಿ ಈ ಬಗೆಯ ಅಪಾರ ಸಮರ್ಪಣಭಾವ, ಕರ್ತವ್ಯಶೀಲ ಪತಿವ್ರತೆಯ ನಿರಂತರ ಓಲೈಕೆ ಕಾಣುವುದಿಲ್ಲ. "ಅಯ್ಯಾ ನೀನು ಕೇಳಿದಡೆ ಕೇಳು, ಕೇಳದಿದ್ದೊಡೆ ಮಾಣು" ಎಂಬ ವಚನದಲ್ಲಿ ಅಕ್ಕನ ಪ್ರೇಮ ತನ್ನ ಇಷ್ಟದೈವದ ಹಂಗನ್ನು ತೊರೆದು ತನ್ನ ಹರುಷದಲ್ಲಿ ಓಲಾಡುವ ಸ್ವತಂತ್ರ ವ್ಯಕ್ತಿತ್ವವೊಂದರ ಅಗತ್ಯವಾಗಿ ಕಂಡುಬರುತ್ತದೆ. ಚೆನ್ನಮಲ್ಲಿಕಾರ್ಜುನನ ಬಗೆಗಿನ ಪ್ರೇಮ ಮೀರಾಳ ರೀತಿಯಲ್ಲಿ ಪತಿಯ ಪ್ರೇಮಕ್ಕೆ ಕಟ್ಟುಬಿದ್ದ ಪತಿವ್ರತೆಯ ಬಗೆಯದ್ದಾಗಿಲ್ಲ. ಅವಳು ತನ್ನ ಪ್ರೇಮವನ್ನು ವ್ಯಾಖ್ಯಾನಿಸುವುದು "ಹಾದರವನಾಡುವೆನು ಹರನ ಕೂಡೆ" ಎಂದೇ "ಒಳಗಣ ಗಂಡನಯ್ಯಾ, ಹೊರಗಣ ಮಿಂಡನಯ್ಯಾ" ವಚನದಲ್ಲೂ ಅವಳ ಪ್ರೇಮ ಎಲ್ಲ ನಿಯಮಗಳಿಗೆ ಹೊರತಾದುದು ಎಂಬ ಭಾವವಿದೆ.

ಹೀಗಿದ್ದರೂ ಅಕ್ಕನ ಮಾದರಿ ಅಂದಿನ ಸ್ತ್ರೀಯ ಸ್ಥಿತಿಯನ್ನು ಪಲ್ಲಟಗೊಳಿಸಲು ಸಾಧ್ಯವಾಗಲಿಲ್ಲ ಎಂಬುದು ಕಟುಸತ್ಯ. ಅದಿರಲಿ, ಸ್ವತಃ ಅಕ್ಕನ ಸಮಕಾಲೀನ ಮಹಿಳಾ ವಚನಕಾರರ ಮೇಲೆಯೇ ಅಕ್ಕನ ಪ್ರಭಾವ ಆಗಿರುವುದು ಬಹಳ ಕಡಿಮೆ. ಆಯ್ದಕ್ಕಿ ಲಕ್ಕಮ್ಮ ತನ್ನ ವಚನವೊಂದರಲ್ಲಿ ಬಸವಾದಿ ಪ್ರಮಥರನ್ನೆಲ್ಲ ನೆನೆದು "ತನ್ನ ಜೀವ ಶುದ್ಧವಾಯಿತ್ತಯ್ಯಾ" ಎಂದು ಹೇಳುವಾಗ ಅಲ್ಲಿ ಅಕ್ಕನ ಪ್ರಸ್ತಾಪವೇ ಬರುವುದಿಲ್ಲ. ಇತರ ಮಹಿಳಾ ವಚನಕಾರರೂ ಸಹ ಹೆಚ್ಚಾಗಿ ವ್ರತಾಚರಣೆಗೆ ಮಹತ್ವ ನೀಡಿದಂತಿದೆ. ಇದನ್ನೆಲ್ಲ ಗಮನಿಸಿದಾಗ ಅಕ್ಕ ಬದುಕಿದ ಸಮಾಜದಲ್ಲಿ ಸಾಂಪ್ರದಾಯಕವಾದ ಹೆಣ್ಣಿನ ಪಾತ್ರಕ್ಕಿಂತ ಭಿನ್ನವಾದ ಪಾತ್ರವನ್ನು ಅಪೇಕ್ಷಿಸುವ

ಮನಃಸ್ಥಿತಿ ಇರಲಿಲ್ಲವೆನಿಸುತ್ತದೆ. ಅಷ್ಟಲ್ಲದೆ ಅಕ್ಕ ತನ್ನ ಸಾಂಪ್ರದಾಯಕ ಗೃಹಿಣಿಯ ಪಾತ್ರವನ್ನು ನಿರಾಕರಿಸಿ ಹೊಸ ಮಾರ್ಗವನ್ನು ಅರಸಿ ಹೊರಟಾಗ ಅದು ಸಹನೀಯವೆಂಬಂತೆ ಕಂಡಿದ್ದು, ಅವಳ ಆಧ್ಯಾತ್ಮಿಕ ಹುಡುಕಾಟದ ಕಾರಣಕ್ಕಾಗಿಯೇ ಎಂದು ತೋರುತ್ತದೆ. ಹೆಣ್ಣಿನ ಪಾತ್ರಧಾರಣೆಗೆ ಸಮಾಜ ಸಿದ್ಧವಾಗದೇ ಇದ್ದ ಆ ಸಂದರ್ಭದಲ್ಲಿ ಅಕ್ಕನದು ಏಕಾಂತಿ ಹೋರಾಟವಾಗಿಯೇ ಉಳಿಯಿತು. ಆದ್ದರಿಂದಲೇ ಅವಳ ಸಮಕಾಲೀನ ವಚನಕಾರ್ತಿಯರ ಮೇಲೆಯೇ ಅಕ್ಕನ ಪ್ರಭಾವವಿಲ್ಲ. ಆದರೆ ಹೆಣ್ಣಿನ ಹೊಸ ಪಾತ್ರ ಸ್ವೀಕರಣೆಗೆ ಸಿದ್ಧವಾಗಿರುವಂತೆ ತೋರುವ ೨೦ನೇ ಶತಮಾನದ ಈ ಸಂದರ್ಭದಲ್ಲಿ ಅಕ್ಕ ಎಲ್ಲ ಮಹಿಳಾ ಬರಹಗಾರ್ತಿಯರಿಗೆ ಸ್ಫೂರ್ತಿಯ ಮೂಲಸೆಲೆಯಾಗಿದ್ದಾಳೆ. ಅವಳನ್ನು ನೆನೆಯದೇ ಇರುವ ಹೊಸ ತಲೆಮಾರಿನ ಕವಯತ್ರಿಯರು ಇಲ್ಲವೇ ಇಲ್ಲ.

ವಚನ ಸಮಾಜದಲ್ಲಿ ಹೆಣ್ಣಿನ ಸ್ವಾತಂತ್ರ್ಯದ ವಿಷಯವನ್ನು ಇನ್ನೊಂದು ಬಗೆಯಲ್ಲೂ ವಿಶ್ಲೇಷಿಸಬಹುದು. ವಚನ ಸಮಾಜದಲ್ಲಿ ಹೆಣ್ಣಿನ ಬಗ್ಗೆ ಅಸ್ಪೃಶ್ಯ ಭಾವವಿರಲಿಲ್ಲ ಹಾಗೂ ಮದುವೆ ಎಂಬ ಶುದ್ಧ ಲೌಕಿಕ ವಿಷಯವನ್ನು ಕುರಿತು ವಚನಕಾರರಿಗೆ ತಿರಸ್ಕಾರವೂ ಇರಲಿಲ್ಲ ಎಂಬುದು ಸರ್ವವಿಧಿತವಾಗಿದೆ. ವಚನ ಚಳವಳಿಯಲ್ಲಿ ಪಾಲ್ಗೊಂಡ ೩೦೦ಕ್ಕೂ ಹೆಚ್ಚು ಮಂದಿ (ಶೇ. ೭೩) ಕೆಳಜಾತಿಗೆ ಸೇರಿದವರಾಗಿದ್ದರು. ಅವರಲ್ಲಿ ಸುಮಾರು ೧೫ ಮಂದಿಗೆ, ಅಂದರೆ ಅರ್ಧಕ್ಕಿಂತ ಜಾಸ್ತಿ ಸಂಖ್ಯೆ ಕೆಳಜಾತಿಯ ಶರಣೆಯರಿಗೆ ಮದುವೆ ಆಗಿರಲಿಲ್ಲವೆಂಬ ಸಂಗತಿ ಈಚಿನ ಅಧ್ಯಯನದಿಂದ ತಿಳಿದುಬರುತ್ತದೆ.[೧೦] ಇಷ್ಟೊಂದು ಪ್ರಮಾಣದಲ್ಲಿ ಮಹಿಳೆಯರು, ಅದರಲ್ಲೂ ಕೆಳಜಾತಿಯ ಮಹಿಳೆಯರು ಅವಿವಾಹಿತರಾಗಿಯೇ ಉಳಿದಿದ್ದರು ಎಂಬ ಅಂಶ ವಚನ ಸಮಾಜದ ಅಂತರ್ ವೈರುಧ್ಯಗಳತ್ತ ಬೆರಳು ಮಾಡಿ ತೋರಿಸುತ್ತದೆ ಅಲ್ಲಿ ಹೆಣ್ಣಿಗೆ ಸಮಾನ ಅವಕಾಶವಿತ್ತು ಎಂಬುದು ಮೇಲ್ನೋಟಕ್ಕೆ ಅರಿವಿಗೆ ಬಂದರೂ ನಿಜಸ್ಥಿತಿ ಬೇರೆಯೇ ಆಗಿತ್ತು ಎನಿಸುತ್ತದೆ. ಮಹಿಳೆಯರಿಗೆ ಆಧ್ಯಾತ್ಮಿಕ ಸ್ವಾತಂತ್ರ್ಯ ಸಿಕ್ಕಿದ್ದರೂ ಕೆಳಜಾತಿಯ ಶರಣೆಯರಿಗೆ ಮನುಷ್ಯ ಸಹಜ ಆಯ್ಕೆಗಳ ವಿಷಯದಲ್ಲಿ ಸ್ವಾತಂತ್ರ್ಯ ಸಿಕ್ಕಿರಲಿಲ್ಲ. ಅವರಿಗೆ ಪುರೋಹಿತಶಾಹಿ ಮೌಲ್ಯಗಳಾದ ಜಾತಿ, ವರ್ಣಗಳನ್ನು ಒಂದು ಕಡೆ ಮತ್ತು ಇನ್ನೊಂದು ಕಡೆ ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳಾದ ಕುಟುಂಬ, ಪತಿಭಕ್ತಿ ಇತ್ಯಾದಿಗಳನ್ನು ಎದುರಿಸುವ ಅನಿವಾರ್ಯ ಇತ್ತೆಂದು ಕಾಣುತ್ತದೆ. ಆದ್ದರಿಂದ ಅಕ್ಕನಿಗೆ ಸಾಧ್ಯವಾದಂತೆ ತನಗೆ ಸರಿಕಂಡ ಬದುಕನ್ನು ಆಯ್ಕೆ ಮಾಡುವ ಮತ್ತು ತಿರಸ್ಕರಿಸುವ ಸ್ವಾತಂತ್ರ್ಯ ಇರಲಿಲ್ಲ. ಇನ್ನೊಂದು ಮುಖ್ಯ ಅಂಶವೆಂದರೆ, ಹೆಣ್ಣಿಗೆ ನಿಜವಾದ ಸ್ವಾತಂತ್ರ್ಯ ಸಿಗದೇ ಹೋಗಿದ್ದಕ್ಕೆ ಮುಖ್ಯಕಾರಣ, ವಚನ ಚಳವಳಿ ಮಹಿಳೆಯರ ಆಧ್ಯಾತ್ಮಿಕ ಸ್ವಾತಂತ್ರ್ಯಕ್ಕೆ ನೀಡಿದ ಮಹತ್ವವನ್ನು ಆರ್ಥಿಕ ಸ್ವಾತಂತ್ರ್ಯಕ್ಕೆ ನೀಡಲಿಲ್ಲ ಎಂಬುದೇ ಆಗಿದೆ. ಇದರಿಂದ ವಚನ ಚಳವಳಿಯು ಸ್ತ್ರೀ ವಿಮೋಚನೆ, ಪಿತೃಪ್ರಧಾನ ವ್ಯವಸ್ಥೆಯ ಪಲ್ಲಟಕ್ಕೆ ಪ್ರಯತ್ನಿಸಿದರೂ ಅವುಗಳ ವಿರುದ್ಧ ನಿರ್ಣಾಯಕ ಹೋರಾಟ ಮಾಡಲು ಸಾಧ್ಯವಾಗಲಿಲ್ಲ ಎಂಬ ಅಂಶ ಗೊತ್ತಾಗುತ್ತದೆ.

ಆದರೆ ವಚನಗಳನ್ನು ಎದುರಿಗಿಟ್ಟುಕೊಂಡು ಈ ಪ್ರಶ್ನೆಗಳನ್ನು ವಿಶ್ಲೇಷಿಸಿದರೆ ಇದಕ್ಕಿಂತ ಬೇರೆ ನಿಲುವನ್ನು ತಾಳಲು ಸಾಧ್ಯ. ಅಕ್ಕನ "ಅತ್ತೆ ಮಾಯೆ, ಮಾವ ಸಂಸಾರಿ" ಮತ್ತು "ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ" ಎಂಬ ವಚನಗಳನ್ನು ಉದಾಹರಿಸಿ ಇವು ಪಿತೃಪ್ರಧಾನ ವ್ಯವಸ್ಥೆಯ ಮೌಲ್ಯಗಳನ್ನು ಸಮರ್ಥಿಸುವಂತಿವೆ ಎಂದು ವಾದಿಸಿದ್ದಾರೆ. ಆದರೆ

"ಅತ್ತೆ ಮಾಯೆ ಮಾವ ಸಂಸಾರಿ" ಎಂಬ ವಚನದಲ್ಲಿ ಮೇಲ್ನೋಟಕ್ಕೆ ಕಾಣುವ ಅತ್ತೆಮಾವರ ಚಿತ್ರಣವನ್ನು ಬೆಡಗಿನ ವಚನದ ಹಾಗೆ, ಅನ್ಯೋಕ್ತಿಯಂತೆ ಓದಿಕೊಳ್ಳಬೇಕು. ಇದೇ ವಚನದಲ್ಲಿ "ಕರ್ಮವೆಂಬ ಗಂಡನ ಬಾಯ ಟೊಣೆದು ಹಾದರವನಾಡುವೆನು ಹರನ ಕೂಡೆ" ಎಂಬ ಮಾತನ್ನು ಗಮನಿಸಿದರೆ ಅಕ್ಕ ಮತ್ತು ಚೆನ್ನ ಮಲ್ಲಿಕಾರ್ಜುನನ ಸಂಬಂಧ ಎಲ್ಲ ಲೋಕದ ಸಂಬಂಧಗಳಿಗೆ ಅತೀತವಾಗಿ, ಎಲ್ಲ ನಿಯತಿಯನ್ನು ಮೀರಿದ ಅರ್ಥದಲ್ಲಿ ನಿಯಮ ಬಾಹಿರವಾದದ್ದು ಎಂಬ ಸೂಚನೆಯಿದೆ. ಅಲ್ಲಿ "ಮನವೆಂಬ ಸಖಿಯ" ಕೂಡಿ ಚೆನ್ನಮಲ್ಲಿಕಾರ್ಜುನನೊಡನೆ ಮಾಡುವ ಹಾದರ ಎಲ್ಲ ಸಂಬಂಧಗಳ ನೈತಿಕ ನಿಯಂತ್ರಣವನ್ನು ಮೀರಿದ ಅನುಭಾವವೊಂದರ ಹುಡುಕಾಟದ ಆಶಯವನ್ನು ಧ್ವನಿಸುವು ದರಿಂದ ವಚನವು ಅತ್ತೆ, ಮಾವ ಇತ್ಯಾದಿ ಪಿತೃಪ್ರಧಾನ ಕುಟುಂಬ ಸಂಬಂಧಗಳನ್ನು ಮಾನ್ಯ ಮಾಡಿದಂತೆ ಕಾಣುವುದಿಲ್ಲ. ಹಾಗೆಯೇ:

> **ಜಲದ ಮಂಟಪದ ಮೇಲೆ ಉರಿಯ ಚಪ್ಪರವನಿಕ್ಕಿ**
> **ಆಲಿಕಲ್ಲ ಹಸೆಯ ಹಾಸಿ ಬಾಸಿಗವ ಕಟ್ಟಿ**
> **ಕಾಲಿಲ್ಲದ ಹೆಂಡತಿಗೆ ತಲೆಯಿಲ್ಲದ ಗಂಡ ಬಂದು ಮದುವೆಯಾದನು**
> **ಎಂದೆಂದೂ ಬಿಡದ ಬಾಳುವೆಗೆ ಕೊಟ್ಟರೆನ್ನ**
> **ಚೆನ್ನಮಲ್ಲಿಕಾರ್ಜುನನೆಂಬ ಗಂಡಂಗೆನ್ನ**
> **ಮದುವೆಯ ಮಾಡಿದರೆಲೆ ಅವ್ವಾ**

ಈ ವಚನವನ್ನು ಸೂಕ್ಷ್ಮವಾಗಿ ಗಮನಿಸಿದರೆ ಇಲ್ಲಿ ಕಾಲಿಲ್ಲದ ಹೆಂಡತಿ ಅಂದರೆ ಭಿನ್ನ ಕ್ರಿಯೆ ಅರಿಯದವಳೆಂಬ ಅರ್ಥವಿದೆ. ತಲೆಯಿಲ್ಲದ ಗಂಡನಿಗೆ ಅಖಂಡ ಜ್ಞಾನವನ್ನು ಹೊಂದಿದ ಪರಮಾತ್ಮನೆಂಬ ಅರ್ಥವೂ ಇದೆ. ಇದನ್ನು ಸರಳ ಗಂಡು ಹೆಣ್ಣಿನ ಮದುವೆಯಂತೆ ನೋಡಲು ಸಾಧ್ಯವಿಲ್ಲ.

ಮೇಲಿನ ಮಾತುಗಳನ್ನು ಗಮನಿಸಿದರೆ ವಚನ ಸಮಾಜದ ಸಾಮಾಜಿಕ ವಿವರಗಳು ಹೆಣ್ಣಿನ ಸ್ವಾತಂತ್ರ್ಯವನ್ನು ಕುರಿತಾದ ಪ್ರಶ್ನೆಗಳನ್ನು ಸಮಸ್ಯಾತ್ಮಕಗೊಳಿಸಿದರೆ, ಇವೇ ಪ್ರಶ್ನೆಗಳನ್ನು ವಚನಗಳ ಅಂತಃಸ್ಸಾಕ್ಷ್ಯದ ನೆರವಿನಿಂದ ಬೇರೆ ರೀತಿಯಲ್ಲಿ ಬಿಡಿಸಲು ಸಾಧ್ಯವಿದೆ ಎನಿಸುತ್ತದೆ. ಆದ್ದರಿಂದಲೇ ವಚನ ಸಮಾಜ ಮತ್ತು ಅದರ ತಾತ್ವಿಕತೆಯ ಬಗೆಗಿನ ನಮ್ಮ ಗ್ರಹಿಕೆ ಅಪರಿಪೂರ್ಣವಾಗಿದೆ ಎಂಬ ಮಾತನ್ನು ಆರಂಭದಲ್ಲಿಯೇ ಸೂಚಿಸಲಾಗಿದೆ. ಈ ನೆಲೆಯಲ್ಲಿ ಇನ್ನಷ್ಟು ವಿಚಾರ ವಿಮರ್ಶೆ ನಡೆಯುವುದು ಅಗತ್ಯವಾಗಿದೆ.

ಅಕ್ಕನ ವಚನಗಳು ಸೂಚಿಸುವ ಪಿತೃಪ್ರಧಾನ ಮೌಲ್ಯಗಳು ಮತ್ತು ಆಕೆ ಹಾಕಿಕೊಟ್ಟ ಸ್ತ್ರೀವಿಮೋಚನೆಯ ಹಾದಿಯ ಪರಿಣಾಮಗಳೇನು ಎಂಬ ಬಗ್ಗೆ ನಮ್ಮ ತಕರಾರುಗಳೇನೇ ಇರಲಿ, ಅಕ್ಕ ಕೌಶಿಕನೆಂಬ ರಾಜನನ್ನು ಧಿಕ್ಕರಿಸಿ ಶಿವನನ್ನು ಗಂಡನಾಗಿ ಸ್ವೀಕರಿಸಿದ್ದು ಹಲವು ಪಲ್ಲಟಗಳ ರೂಪಕವಾಗಿ ಕಾಣುತ್ತದೆ. ಕೌಶಿಕ ಸೂಚಿಸುವ ರಾಜಾಧಿಕಾರ ಮತ್ತು ಪುರುಷಾಧಿಕಾರಗಳಿಗೆ ಪರ್ಯಾಯವಾಗಿ ಅಕ್ಕ ಇಷ್ಟದೈವವಾಗಿ ಸ್ವೀಕರಿಸಿರುವುದು ಸಾಂಸ್ಥಿಕ ಧರ್ಮವನ್ನು ಪ್ರತಿನಿಧಿಸುವ ಪರಮಶಿವನನ್ನು. ಆದರೆ ಅಂಥ ಪರಮಶಿವನನ್ನು ಸಾಮಾನ್ಯ ಗಂಡನನ್ನಾಗಿಸಿ ಲೌಕಿಕಕ್ಕೆ ಇಳಿಸಿರುವುದು ಬಹಳ ದೊಡ್ಡ ಪಲ್ಲಟದ ರೂಪಕವಾಗಿದೆ. ಅದು ರಾಜಸತ್ತೆ, ಪುರುಷಾಧಿಕಾರ ಹಾಗೂ ಧಾರ್ಮಿಕತೆಗಳ ವಿರುದ್ಧ ಮಾಡಿದ ಒಂಟಿ ಹೆಂಗೂಸಿನ ಹೋರಾಟವೆಂಬುದು ಬಹಳ ಮುಖ್ಯವಾದ ಸಂಗತಿಯಾಗಿದೆ.

ಟಿಪ್ಪಣಿಗಳು

೧. ವಚನ ಚಳವಳಿಯನ್ನು ಶುದ್ಧ ಸಾಹಿತ್ಯಿಕ ಸಾಹಿತ್ಯ ಪಂಥವೆಂಬಂತೆ ವಿಶ್ಲೇಷಿಸುವ ಕ್ರಮದಿಂದಾಗಿ ಈ ಸಂದರ್ಭದ ಸಾಮಾಜಿಕ ಚಾರಿತ್ರಿಕ ಸಂಗತಿಗಳನ್ನು ಕುರಿತು ಪ್ರಶ್ನೆಗಳು ತೊಡಕಿನವುಗಳಾಗಿ ಪರಿಣಮಿಸಿವೆ. ವಚನಗಳನ್ನು ಹೊರತುಪಡಿಸಿ ಅಂದಿನ ಸಮಾಜವನ್ನು ವಿಶ್ಲೇಷಿಸಲು ನಮಗಿರುವ ಚಾರಿತ್ರಿಕ ಆಕರಗಳು ಕಡಿಮೆ ಎಂಬ ಅಂಶವನ್ನು ಹಲವಾರು ವಿದ್ವಾಂಸರು ಉಲ್ಲೇಖಿಸಿದ್ದಾರೆ. ಮಧ್ಯಕಾಲೀನ ಭಕ್ತಿ ಚಳವಳಿಯನ್ನು ಅಭ್ಯಾಸ ಮಾಡಿರುವ ಸೂಸಿಥಾರು ಅವರು ಭಕ್ತಿ ಚಳವಳಿ ಪಿತೃ ಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸಿದ್ದು, ಸ್ತ್ರೀಗೆ ಹೊಸ ಸ್ಥಾನ ದೊರಕುವಂತೆ ಮಾಡಿದ್ದು ನಿಜ ಎಂದು ಒಪ್ಪಿಕೊಂಡರೂ ಇದನ್ನು ಖಚಿತವಾಗಿ ಹೇಳಲು ನಮಗಿರುವ ಪುರಾವೆಗಳು ಗೌಣ ಎನ್ನುತ್ತಾರೆ. (ವಿಮನ್ ರೈಟಿಂಗ್ ಇನ್ ಇಂಡಿಯಾ–೬೦೦ ಬಿಸಿ ಟು ದ ಪ್ರೆಸೆಂಟ್; ೧೯೯೧) ರಾಜೇಂದ್ರ ಚೆನ್ನಿ ೧೨ನೇ ಶತಮಾನದಲ್ಲಿ ನಡೆದ ವಿಪ್ಲವವನ್ನು ಚಾರಿತ್ರಿಕವಾಗಿ ಪುನರ್ರಚಿಸುವುದು ಅಸಾಧ್ಯ ಎಂಬ ಸ್ಥಿತಿ ಯಾಕಿದೆ ಎಂದು ಪ್ರಶ್ನಿಸುತ್ತಾರೆ. ಅಂದಿನ ಜಾತಿವ್ಯವಸ್ಥೆ ಹಾಗೂ ಅದರ ವಿರುದ್ಧದ ಬಂಡಾಯವನ್ನು ದಾಖಲಿಸಲು ನಮಗೇಕೆ ಸಾಧ್ಯವಾಗಿಲ್ಲ ಎಂದು ಸಹ ಅವರು ಕೇಳುತ್ತಾರೆ. ಜೊತೆಗೆ ರಾಮಾನುಜನ್ ಅಂಥವರ ಅನುವಾದದಿಂದ ವಚನಗಳ ಅಚಾರಿತ್ರಿಕವಾದ ಓದು ಚಾಲ್ತಿಗೆಬಂತು ಎನ್ನುತ್ತಾರೆ. ("ವಚನ ಚಳವಳಿ ಮತ್ತು ಬಸವಣ್ಣ" ಎಂಬ ಲೇಖನ ಬಸವಣ್ಣನ ವಚನಗಳು : ಸಾಂಸ್ಕೃತಿಕ ಮುಖಾಮುಖಿ, ಕನ್ನಡ ವಿಶ್ವವಿದ್ಯಾಲಯ : ೨೦೦೪) ವಚನಗಳು ಕಥನ ಮಾದರಿಯನ್ನು ತೊರೆದು ವ್ಯಕ್ತಿಯ ಅನುಭವಕ್ಕೆ ಮಹತ್ವ ನೀಡಿದ್ದು, ಉನ್ನತ ಚಿಂತನೆಯನ್ನು ವ್ಯಕ್ತಪಡಿಸಲು ಕನ್ನಡವನ್ನು ಸಿದ್ಧಗೊಳಿಸಿದ್ದು ಆಕಸ್ಮಿಕವಾಗಿರದೆ ಮಹತ್ವದ ಪಲ್ಲಟವಾಗಿದೆ ಎಂದು ಅಭಿಪ್ರಾಯ ಪಟ್ಟರೂ ಇವುಗಳಿಗೆ ಕಾರಣ ಹುಡುಕುವುದು ಬಹುಮಟ್ಟಿಗೆ ಊಹೆಯನ್ನು ಆಧರಿಸಿದ ಕೆಲಸವಾಗಿದೆ ಎಂದು ಓ.ಎಲ್. ನಾಗಭೂಷಣ ಸ್ವಾಮಿ ನಂಬುತ್ತಾರೆ (ಇಂದಿನ ಹೆಜ್ಜೆ : ಅಕ್ಷರ ಪ್ರಕಾಶನ, ೧೯೯೭) ಪು.೪.

೨. ಎಂ.ಎಸ್. ಆಶಾದೇವಿ, "ಮಹಿಳೆ : ಬಸವಣ್ಣನ ನಿಲುವುಗಳು", ಬಸವಣ್ಣನ ವಚನಗಳು: ಸಾಂಸ್ಕೃತಿಕ ಮುಖಾಮುಖಿ, (ಕನ್ನಡ ವಿಶ್ವವಿದ್ಯಾಲಯ, ಹಂಪಿ : ೨೦೦೪) ಪು. ೬೦.

೩. ಎ.ಕೆ. ರಾಮಾನುಜನ್, ದಿ ಕಲೆಕ್ಟಡ್ ಎಸ್ಸೇಸ್ ಆಫ್ ಎ.ಕೆ. ರಾಮಾನುಜನ್ (ಓ.ಯು.ಪಿ; ೧೯೯೯) ಪು. ೨೭೦.

೪. ಎಲ್. ಬಸವರಾಜು (ಸಂ), ಬಸವಣ್ಣನ ವಚನಗಳು, ಗೀತಾಬುಕ್ ಹೌಸ್ ಮೈಸೂರು, ೧೮೫೨ ಲೇಖನದಲ್ಲಿ ಉದ್ಧರಿಸಿರುವ ಎಲ್ಲಾ ಅಕ್ಕನ ವಚನಗಳನ್ನು ಡಾ. ವೀರಣ್ಣ ಅವರು ಸಂಪಾದಿಸಿರುವ ಶಿವಶರಣೆಯರ ವಚನ ಸಂಪುಟದಿಂದ ಆರಿಸಿಕೊಳ್ಳಲಾಗಿದೆ. (ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ೧೯೩ರ ಆವೃತ್ತಿ.

೫. ಉದಾ. "ಪುರುಷ ದೈವಕ್ಕೆ ತನ್ನನ್ನು ಅರ್ಪಿಸಿಕೊಳ್ಳುವ ಲೈಂಗಿಕ ಮಿಲನದ ಉತ್ಕಟತೆ ಯನ್ನು ಮುಕ್ತವಾಗಿ ಹೇಳಿಕೊಳ್ಳುವ ಅಕ್ಕ, ತನ್ನ ಆಧ್ಯಾತ್ಮಿಕ ವಿರಕ್ತಿಯ ಹಂಬಲಗಳಲ್ಲಿ ವಿಚಿತ್ರವಾಗಿ ಸ್ತ್ರೀವಾದಿಯಾಗಿದ್ದಳು" ಎಂದು ರಹಮತ್ ಅಭಿಪ್ರಾಯ ಪಡುತ್ತಾರೆ.

ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಕನ್ನಡ ವಿಶ್ವವಿದ್ಯಾಲಯ, ಹಂಪಿ ೧೯೯೬, ಪು. ೨೦೬.

೬. ಮರದೊಳಗಣ ಕಿಚ್ಚು, ಪು. ೫೨.

೭. ಕೆ.ಜಿ. ನಾಗರಾಜಪ್ಪ, ಮರುಚಿಂತನೆ, ಪುಸ್ತಕ ಚಂದನ, ತುಮಕೂರು, ೧೯೮೩.

೮. ವಿಜಯಾ ರಾಮಸ್ವಾಮಿ, ಡಿವಿನಿಟಿ ಅಂಡ್ ಡೀವಿಯೆನ್ಸ್

೯. ಸೂಸಿಥಾರು ಮತ್ತು ಕೆ. ಲಲಿತಾ., ವಿಮೆನ್ ರೈಟಿಂಗ್ ಇನ್ ಇಂಡಿಯಾ–೬೦೦ ಬಿ.ಸಿ.ಟು.ದ ಪ್ರೆಸೆಂಟ್, ೧೯೯೧

೧೦. ವಿಜಯಾ ರಾಮಸ್ವಾಮಿ, ಡಿವಿನಿಟಿ ಅಂಡ್ ಡೀವಿಯೆನ್ಸ್

೨೯. ಅಕ್ಕನ ಅಗ್ನಿದಿವ್ಯದ ಹಾದಿಯಲ್ಲಿ ಇಂದಿನ ತಳಮಳಗಳ ನೆನೆದು....

•

ರಘುನಾಥ ಚ.ಹ.

ಸಹಜ ಬೆಳಕಿಗೆ ಬೆನ್ನು ಹಾಕಿ ಕೃತಕ ಬೆಳಕು ಲಕಲಕಿಸು ತ್ತಿರುವ ಗೋಡೆಗಳ ನಡುವೆ ಕುಳಿತು ಅಕ್ಕಮಹಾದೇವಿಯ 'ಚಂದನವ ಕಡಿದು ಕೊರೆದು ತೇದಡೆನೊಂದೆನೆಂದು ಕಂಪ ಬಿಟ್ಟಿತ್ತೆ?' ವಚನದಲ್ಲಿ ಮುಳುಗಿಹೋಗಿದ್ದೇನೆ. ಈ ಕ್ಷಣ ಹಳ್ಳಿಯಿಂದ ಬೆಂಗಳೂರು ಪೇಟೆಗೆ ಬಂದ ಹೆಣ್ಣುಮಕ್ಕಳು ನೆನಪಾಗುತ್ತಿದ್ದಾರೆ. ಭವಿಷ್ಯವನ್ನರಸುತ್ತ ಬೆಂಗಳೂರಿಗೆ ವಲಸೆ ಬಂದ ಮನೆಯವರ ಜೊತೆ ಬಂದವರು, ಮದುವೆಯಾಗಿ ಗಂಡನನ್ನು ಹಿಂಬಾಲಿಸಿದವರು, ನಗರದ ಬಣ್ಣಗಳೊಂದಿಗೆ ಸುಲಭವಾಗಿ ಕರಗಿಹೋಗುವುದು ಅಚ್ಚರಿಯೆನ್ನಿಸುತ್ತದೆ. ನೈಟಿಗಳಲ್ಲಿ ಮುಳುಗಿಹೋದ ಈ ಹೆಣ್ಣು ಮಕ್ಕಳು ತಮ್ಮ ಮಕ್ಕಳೊಂದಿಗೆ ನಾಲಗೆ ತಿರುಗದ ಇಂಗ್ಲಿಷ್‌ನಲ್ಲಿ ಮಾತನಾಡುವುದನ್ನು, ತಮ್ಮ ಪುಟಾಣಿಗಳ ಬಾಯಲ್ಲಿ ಮಮ್ಮಿ-ಡ್ಯಾಡಿ ಎಂದು ಹೇಳಿಸುತ್ತಾ ಧನ್ಯತೆ ಅನುಭವಿಸುವುದನ್ನು- 'ಎ,ಬಿ,ಸಿ,ಡಿ' ಹೇಳಿಸಿ ಖುಷಿ ಪಡುವುದನ್ನು ನೋಡುವುದೇ ಒಂದು ಚೆಂದ. ಅಪ್ಪಟ ಕನ್ನಡ ಪರಿಸರದಲ್ಲಿ ಬೆಳೆದವರು ತಮ್ಮ ಕರುಳ ಕುಡಿಗಳು ತಮ್ಮಂತಾಗ ಬಾರದು ಎಂದು ತಹತಹಿಸುವುದು, ಅದಕ್ಕಾಗಿ ತಮ್ಮ ವ್ಯಕ್ತಿತ್ವವನ್ನೇ ಬದಲಿಸಿಕೊಳ್ಳಲು ಒದ್ದಾಡುವುದನ್ನು ನೋಡಿದಾಗ ಮರುಕವೂ ಉಂಟಾಗುತ್ತದೆ. ಇದು ಕೇವಲ ಹೆಣ್ಣುಮಕ್ಕಳ ಒದ್ದಾಟವಲ್ಲ. ತಮ್ಮ ಭವಿಷ್ಯದ ಕುರಿತು ಆತಂಕ, ಹಿಂದೆಂದೂ ಕಾಡದಷ್ಟರಮಟ್ಟಿಗೆ ಗಂಡಸರನ್ನೂ ಕಾಡುತ್ತಿದೆ. ಈ ಆತಂಕವನ್ನು ಪರಿಹರಿಸಿಕೊಳ್ಳುವ ನಿಟ್ಟಿನಲ್ಲವರು ಇಂಗ್ಲಿಷ್‌ನಲ್ಲಿ ಬೆಳಕು ಹುಡುಕುತ್ತಿದ್ದಾರೆ.

ನಮ್ಮ ಗುರಿಗಳು ಈಗ ಬದಲಾಗಿವೆ. ಆರಂಕುಶವಿಟ್ಟರೂ ಎನ್ನ ಮನಸ್ಸು ಬನವಾಸಿಯನ್ನೇ ನೆನೆಯುತ್ತದೆ ಎನ್ನುವ ಪಂಪನ ಪೀಳಿಗೆ ನಾವಲ್ಲ. ದುಡ್ಡಿಗಾಗಿ ಊರನ್ನು, ಭಾಷೆಯನ್ನು ಮರೆಯಲು ಸಿದ್ಧವಾಗಿರುವವರು. ನಾವು ಏನನ್ನಾದರೂ ಪಡೆಯಲು ಏನನ್ನಾದರೂ ಕಳೆದುಕೊಳ್ಳಬೇಕು ಎನ್ನುವ ವಾಸ್ತವ ನಮಗೆ ಚೆನ್ನಾಗಿ ಗೊತ್ತು. ಈ ಕಳೆದುಕೊಳ್ಳುವ ಪಟ್ಟಿಯಲ್ಲಿ ಭಾಷೆ, ಭಾವನೆ ಏನು ಬೇಕಾದರೂ ಇರಬಹುದು!

ಮತ್ತೆ ಮತ್ತೆ ಓದಿಸಿಕೊಳ್ಳುತ್ತಿರುವ 'ಚಂದನವ ಕಡಿದು ಕೊರೆದು ತೇದಡೆ, ನೊಂದೆನೆಂದು ಕಂಪ ಬಿಟ್ಟಿತ್ತೆ?' ಎನ್ನುವ ಅಕ್ಕಮಹಾದೇವಿಯ ವಚನಕ್ಕೂ ವರ್ತಮಾನದ ತಲ್ಲಣಗಳಿಗೂ ಎತ್ತಣ ಸಂಬಂಧ ? ಈ ಸಂಬಂಧವನ್ನು ಸ್ಪಷ್ಟಗೊಳಿಸುವ ಉದಾಹರಣೆ 'ಗಳಂತೆ ಪ್ರತಿಭಾ ರವಿಶಂಕರ್ ಮತ್ತು ತಾನಿಯಾ ಬ್ಯಾನರ್ಜಿ ಎನ್ನುವ ನತದೃಷ್ಟ ಹೆಣ್ಣುಮಕ್ಕಳ ಪ್ರಕರಣಗಳು ಕಾಡುತ್ತಿವೆ. ಇತ್ತೀಚೆಗಷ್ಟೇ ಕೊಲೆಗೀಡಾದ ಈ ಇಬ್ಬರು ಕಾಲ್‌ಸೆಂಟರ್‌ಗಳಲ್ಲಿ ಕೆಲಸ ಮಾಡುತ್ತಿದ್ದ ಹೆಣ್ಣುಮಕ್ಕಳು. ಇಬ್ಬರು ಒಳ್ಳೆಯ ಸಂಬಳ ಹೊಂದಿದ್ದರು. ತಾನಿಯಾ ತನ್ನ ಗೆಳೆಯನಿಂದಲೇ ಕೊಲೆಯಾದಳು. ಕೊಲೆಗಳ ನಂತರ ಕಾಲ್‌ಸೆಂಟರ್‌ಗಳಲ್ಲಿನ ಮುಕ್ತ ವಾತಾವರಣವನ್ನು ಆಕ್ಷೇಪಿಸುವ ಹಾಗೂ ಅಲ್ಲಿ ಕೆಲಸ ಮಾಡುವ ಹೆಣ್ಣುಮಕ್ಕಳ ಭದ್ರತೆಯ ಬಗ್ಗೆ ಅನುಮಾನ ವ್ಯಕ್ತಪಡಿಸುವ, ಅದೇ ಕಾಲಕ್ಕೆ ಅವರ ನಡತೆಯ ಬಗ್ಗೆಯೂ ಅನುಮಾನ ವ್ಯಕ್ತಪಡಿಸುವ ವರದಿಗಳು ಮಾಧ್ಯಮಗಳಲ್ಲಿ ಪ್ರಕಟವಾದವು.

ಪ್ರತಿಭಾ ಮತ್ತು ತಾನಿಯಾ ಹಾಗೂ ಅಕ್ಕಮಹಾದೇವಿಯ ನಡುವಣ ಹೋಲಿಕೆ, ಅವರೆಲ್ಲರೂ ಮಹಿಳೆಯರಾಗಿದ್ದರು ಎನ್ನುವ ಒಂದೇ ಲಕ್ಷಣಕ್ಕೆ ಕೊನೆಗೊಳ್ಳುತ್ತದೆ. ಅಕ್ಕನ ಹಾದಿಯೇ ಬೇರೆ, ನತದೃಷ್ಟ ಹುಡುಗಿಯರ ಸಂಗತಿಯೇ ಬೇರೆ. ಆದರೆ ಅಕ್ಕ ಕೂಡ ಒಂದು ಬಗೆಯ ಲೈಂಗಿಕ ಶೋಷಣೆಗೆ ಒಳಗಾಗಿದ್ದಳು ಎನ್ನುವುದನ್ನು ಮರೆಯುವಂತಿಲ್ಲ.

ಜಾಗತೀಕರಣದ ಸಂದರ್ಭದಲ್ಲಿ ದೇಹದ ಕೊಳೆಯಷ್ಟೇ ಸಲೀಸಾಗಿ ದೇಸೀತನಗಳನ್ನು ನೀಗಿಕೊಳ್ಳುತ್ತಿರುವ ವಾಸ್ತವ ಹಾಗೂ ಕಾಲ್‌ಸೆಂಟರ್ ಹೆಣ್ಣುಮಕ್ಕಳ ದುರಂತಗಳು ಮಾಹಿತಿ ತಂತ್ರಜ್ಞಾನ ಯುಗದ ಜಾಣಜಾಣೆಯರ ಬದುಕಿನ ಗುರಿಯನ್ನು ಬೆಟ್ಟು ಮಾಡುತ್ತಿದೆ ಅನ್ನಿಸುತ್ತಿದೆ. ಮೇಲ್ನೋಟಕ್ಕೆ ತಾಳೆಯಾಗದಂತೆ ಕಾಣುವ ಈ ಸಂಗತಿಗಳಿಗೆ ಪರಸ್ಪರ ಸಂಬಂಧವಿದೆ ಎನ್ನುವುದು ನನ್ನ ನಂಬಿಕೆ. ಬದುಕಿನ ಎಲ್ಲ ಮಗ್ಗುಲುಗಳನ್ನು ಹಣವೇ ಆವಾಹಿಸಿಕೊಂಡಿರುವ ಸಂದರ್ಭದಲ್ಲಿ ಮೌಲ್ಯಗಳು ಕ್ಲೀಷೆ ಅನ್ನಿಸುವುದರಲ್ಲಿ ಆಶ್ಚರ್ಯವೇನೂ ಇಲ್ಲ. ಈ ಬೆರಗು ಹಾಗೂ ಆತಂಕದಲ್ಲೇ ಅಕ್ಕನ ಕವಿತೆ ಮರೆತುಹೋದ ಹಾದಿಯನ್ನು ನೆನಪಿಸುವಂತೆ ಕಾಣುತ್ತಿದೆ.

* * *

ವರ್ತಮಾನದ ತಲ್ಲಣಗಳಿಗೆ ಉತ್ತರವಾಗಿ ಕಂಡ ಅಕ್ಕನ ವಚನ ಈ ರೀತಿ ಇದೆ:

ಚಂದನವ ಕಡಿದು ಕೊರೆದು ತೇದಡೆ
ನೊಂದೆನೆಂದು ಕಂಪ ಬಿಟ್ಟಿತ್ತೆ?
ತಂದು ಸುವರ್ಣವ ಕಡಿದೊರೆದಡೆ
ಬೆಂದು ಕಳಂಕ ಹಿಡಿಯಿತ್ತೆ?
ಸಂದುಸಂದು ಕಡಿದ ಕಬ್ಬನು ತಂದು ಗಾಣದಲ್ಲಿಕ್ಕಿ ಅರೆದಡೆ,
ಬೆಂದು ಪಾಕಗುಡದೆ ಸಕ್ಕರೆಯಾಗಿ ನೊಂದೆನೆಂದು ಸಿಹಿಯಬಿಟ್ಟಿತ್ತೆ?
ನಾ ಹಿಂದೆ ಮಾಡಿದ ಹೀನಂಗಳೆಲ್ಲವ ತಂದು
ಮುಂದಿಳುಹಲು ನಿಮಗೇ ಹಾನಿ.
ಎನ್ನ ತಂದೆ ಚೆನ್ನಮಲ್ಲಿಕಾರ್ಜುನಯ್ಯಾ
ನೀ ಕೊಂದಡೆಯೂ ಶರಣೆಂಬುದ ಮಾಣೆ.

ಚೆಲುವಾದ, ಮೊದಲ ಓದಿಗೆ ಸರಳ ಎನ್ನಿಸುವ ವಚನವಿದು. ಅಕ್ಕಮಹಾದೇವಿಯ ಉಳಿದ ವಚನಗಳಲ್ಲಿನ ಅರ್ಥದ ತಿಳಿ, ಮಾಧುರ್ಯ ಈ ವಚನದಲ್ಲಿಯೂ ಇದೆ.

'ಚಂದನವ ಕಡಿದು ಕೊರೆದು ಅರೆದೊಡೆ' ಎನ್ನುವ ಮೊದಲ ಸಾಲು ಸುಲಭವಾಗಿ ಅರ್ಥವಾಗುತ್ತದೆ. ಮರವನ್ನು ಕಡಿಯುವುದು ಮನುಷ್ಯ ಸಹಜ ಸ್ವಭಾವ, ಗಾಯಗೊಂಡ ಮನುಷ್ಯ ದ್ವೇಷ ಸಾಧಿಸುತ್ತಾನೆಯೇ ಹೊರತು ಮರಗಳಿಗೆ ಹಗೆತನ ಗೊತ್ತಿಲ್ಲ. ಅದು ಬೇರೆಯದೇ ವಿಷಯ. ಇಲ್ಲಿನ ಶ್ರೀಗಂಧದ ಮರವನ್ನು ನೋಡಿ. ಮರವನ್ನು ಕಡಿಯಲಾಗಿದೆ. ಅದರ ಕೆಲವು ಭಾಗಗಳನ್ನು ತಿದ್ದಿ ತೀಡಿ ಕೊರೆದು ಮೂರ್ತಿಗಳನ್ನಾಗಿ ಮಾಡಲಾಗಿದೆ. ಕೆಲವು ತುಣುಕುಗಳನ್ನು ತೇದು ದೇಹಕ್ಕೆ ಪೂಸುವ ಗಂಧವನ್ನಾಗಿ ಪರಿವರ್ತಿಸಲಾಗುತ್ತದೆ. ರೂಪಾಂತರ ಅದೇನೇ ಇರಲಿ, ಗಂಧದ ಕಂಪು ಮಾತ್ರ ಕೊಂಚವೂ ಕಡಿಮೆ ಆಗುವುದಿಲ್ಲ. ತೇದಷ್ಟೂ ಗಂಧದ ಪರಿಮಳ ಹೆಚ್ಚುತ್ತಲೇ ಇರುತ್ತದೆ.

ಅಕ್ಕಮಹಾದೇವಿಯ ವಚನದ ಎರಡನೇ ಚರಣ ಚಿನ್ನದ ಶ್ರೇಷ್ಠತೆಗೆ ಸಂಬಂಧಿಸಿದ್ದು. ಅಕ್ಕಸಾಲಿಗನ ಕುಲುಮೆಯಲ್ಲಿ ಬೆಂದಷ್ಟೂ ಹದಗೊಳ್ಳುವ ಬಂಗಾರ, ಕುಸುರಿ ಕಲೆಯಲ್ಲಿ ಆಭರಣವಾಗಿ ಅರಳುತ್ತದೆ. ಈ ಬೇಯುವ ಅರೆಯುವ ಕ್ರಿಯೆಯಲ್ಲಿ ಬಂಗಾರ ಪರಿಶುದ್ಧ ಗೊಳ್ಳುವುದೇ ಹೊರತು, ಕಲುಷಿತಗೊಳ್ಳುವ ಪ್ರಶ್ನೆಯೇ ಇಲ್ಲ.

ವಚನದ ಮೂರನೇ ಚರಣ ಕೂಡ ಗುಣವಿಶೇಷಣಕ್ಕೆ ಸಂಬಂಧಪಟ್ಟಿದ್ದೇ ಆಗಿದೆ. ಕಬ್ಬನ್ನು ತಂದು, ಅದರ ಗೆಣ್ಣುಗಳನ್ನು ಸವರಿ ಗಾಣದಲ್ಲಿಕ್ಕಿ ಅರೆಯಲಾಗುತ್ತದೆ. ನಾವೀಗ ಗಾಣದ ಮನೆಯನ್ನು, ಅಂದರೆ ಆಲೆಮನೆಯನ್ನು ನೆನಪಿಸಿಕೊಳ್ಳಬೇಕು. ಅಲ್ಲಿ ಹೊರೆಹೊರೆ ಕಬ್ಬು ಗಾಣದ ಬಾಯಿಗೆ ಸಿಕ್ಕಿ ನಜ್ಜುಗುಜ್ಜಾಗಿ ರಸ ಕಕ್ಕುತ್ತದೆ. ಕಬ್ಬಿನ ರಸ ದೊಡ್ಡ ಕೊಪ್ಪರಿಗೆಗಳಲ್ಲಿ ಸಂಗ್ರಹ ವಾಗುತ್ತದೆ. ಆ ಬೆಂಕಿಯ ಮೂಲವಾದರೂ ಯಾವುದು? ರಸ ಕಳೆದುಕೊಂಡು ಶುಷ್ಕವಾದ ಕಬ್ಬಿನ ಸಿಪ್ಪೆಯೇ ಬೆಂಕಿಯಾಗಿ ಉರಿಯುತ್ತದೆ. ರಸ ಕುದ್ದು ಒಂದು ಹದದಲ್ಲಿ ಸಕ್ಕರೆಯಾಗುತ್ತದೆ. ಇದೆಲ್ಲ ನೋವಿನ ಪ್ರಕ್ರಿಯೆಯ ನಡುವೆಯೂ ಕಬ್ಬಿನ ಸಹಜ ಸಿಹಿ ಯಾವ ಹಂತದಲ್ಲಿಯೂ ಕೊಂಚವೂ ಕಡಿಮೆಯಾಗುವುದಿಲ್ಲ. ನೊಂದೆನೆಂದು ಕಬ್ಬು ಸಿಹಿಯ ಬಿಟ್ಟುಕೊಡುವುದಿಲ್ಲ.

ಮತ್ತೆ ವಚನವನ್ನು ಮೊದಲಿನಿಂದ ಓದಿಕೊಳ್ಳೋಣ. ತೀಡಿದಷ್ಟೂ ಪರಿಮಳ ನೀಡುವ ಚಂದನ, ಪುಟವಿಟ್ಟಷ್ಟೂ ಹೊಳೆಯುವ ಚಿನ್ನ, ಬೆಂದು ಪಾಕವಾಗಿ ಸಕ್ಕರೆಯಾಗುವ ಕಬ್ಬು ಇವೆಲ್ಲ ನಮ್ಮ ಅನುಭವಕ್ಕೆ ನಿಲುಕುವ ಸಂಗತಿಗಳೇ ಆಗಿವೆ. ಆದರೆ ವಚನದ ಮುಂದಿನ ಸಾಲುಗಳಲ್ಲಿ ಅಕ್ಕ ಅಂತರ್ಮುಖಿಯಾಗುತ್ತಾಳೆ.

ಗಂಧ, ಚಿನ್ನ, ಕಬ್ಬಿನ ಉದಾಹರಣೆಗಳ ನಂತರ ಅಕ್ಕ ಹೇಳುತ್ತಾಳೆ:

ನಾ ಹಿಂದೆ ಮಾಡಿದ ಹೀನಂಗಳೆಲ್ಲವ
ತಂದು ಮುಂದಿಳುಹಲು ನಿಮಗೇ ಹಾನಿ.
ಎನ್ನ ತಂದೆ ಚೆನ್ನಮಲ್ಲಿಕಾರ್ಜುನಯ್ಯಾ
ನೀ ಕೊಂದಡೆಯೂ ಶರಣೆಂಬುದ ಮಾಣೆ.

ವಚನದ ಮೊದಲ ಭಾಗದಲ್ಲಿ ಲೋಕದ ಸಂಗತಿಗಳನ್ನು ಹೇಳುವ ಅಕ್ಕ, ಉತ್ತರಾರ್ಧದಲ್ಲಿ ಅಂತರ್ಮುಖಿಯಾಗಿಬಿಡುತ್ತಾಳೆ. ಚೆನ್ನಮಲ್ಲಿಕಾರ್ಜುನನ ಕುರಿತು ತನ್ನ ಬದಲಾಗದ ನಿಷ್ಠೆಯನ್ನು ಅತ್ಯಂತ ಸ್ಪಷ್ಟವಾಗಿ ನಿವೇದಿಸಿಕೊಳ್ಳುತ್ತಿದ್ದಾಳೆ. ಆ ನಿಷ್ಠೆಯಾದರೂ ಎಂತಹುದು?

ಮುನ್ನ ಮಾಡಿದ ಅಪರಾಧಗಳೆಲ್ಲವನ್ನು ಪಟ್ಟಿ ಮಾಡಿ ಮುಂದಿಟ್ಟು, ಈ ಕಾರಣ ಗಳಿಂದಾಗಿ ನೀನು ನನ್ನ ಸಂಗಕ್ಕೆ ಯೋಗ್ಯಳಲ್ಲ ಎಂದು ಚನ್ನಮಲ್ಲಿಕಾರ್ಜುನ ನಿರಾಕರಿಸಿದರೂ ಅಕ್ಕ ಸೋಲುವಳಲ್ಲ. ಇಂಥ ನಿರಾಕರಣೆಯಿಂದ ನಿಮಗೇ ಹಾನಿ ಎನ್ನುವುದು ಆಕೆಯ ಸ್ಪಷ್ಟ ನಿಲುವು. ಅಂದರೆ ಪಾಪಗಳ ಮುಂದಿರಿಸಿ ನಿರಾಕರಿಸುವುದು ವ್ಯರ್ಥ ಕಸರತ್ತೇ ಹೊರತು, ಅದರಿಂದ ಯಾವುದೇ ಉಪಯೋಗವಿಲ್ಲ. ಏಕೆಂದರೆ ಅಕ್ಕ ಚನ್ನಮಲ್ಲಿಕಾರ್ಜುನನಿಗೆ ಶರಣಾಗಿದ್ದಾಳೆ. ದಂಡಿಸಿದಷ್ಟೂ ತಾಯಿಗೆ ಜೋತು ಬೀಳುವ ಕೂಸಿನ ಮನಸ್ಥಿತಿ ಅಕ್ಕನದು. ಅದು ಕೊಂದರೂ ಬದಲಾಗದ ಶರಣಾಗತಿ ಭಾವ.

ಅದೆಲ್ಲಾ ಸರಿ. ಚಂದನದ ಕಂಪಿಗೂ, ಪುಟವಿಟ್ಟ ಚಿನ್ನದ ಹೊಳಪಿಗೂ, ಸಿಹಿಯ ಮತ್ತೊಂದು ರೂಪವಾಗಿ ಬದಲಾದ ಕಬ್ಬಿಗೂ ಹಾಗೂ ಅಕ್ಕನ ಶರಣಾಗತಿಗೂ ಎತ್ತಣ ಸಂಬಂಧ? ವಚನ ಮರು ಓದನ್ನು ಬಯಸುವುದೂ ಇಲ್ಲಿಯೇ. ಸೂಕ್ಷ್ಮವಾಗಿ ಗಮನಿಸಿ. ಶ್ರೀಗಂಧದ ಪರಿಮಳ ಹೆಚ್ಚಳವಾಗುವ ಹಿನ್ನೆಲೆಯಲ್ಲೊಂದು ನೋವಿದೆ. ಚಿನ್ನ ಶುದ್ಧಗೊಳ್ಳುವ ಆಭರಣವಾಗಿ ಪರಿವರ್ತನೆಗೊಳ್ಳುವ ಹಾದಿಯಲ್ಲೊಂದು ನೋವಿದೆ. ಕಬ್ಬುಗಾಣದ ಬಾಯಿಂದ ಹೌದು, ಕೊಪ್ಪರಿಗೆಯಲ್ಲಿ ಬೆಂದು ಸಕ್ಕರೆಯಾಗಿ ಹರಳುಗಟ್ಟುವ ಪ್ರಕ್ರಿಯೆ ಯಲ್ಲೂ ನೋವಿದೆ. ಇಂಥದ್ದೇ ಸಂಕಟಗಳ ಹಾದಿಯಲ್ಲಿ, ಪರೀಕ್ಷೆಗಳ ಅಗ್ನಿದಿವ್ಯಗ 'ಳಲ್ಲಿ ಅಕ್ಕ ಹಾದು ಬಂದಿದ್ದಾಳೆ. ಅಂತಿಮವಾಗಿ ಆಕೆಯ ಬದುಕಿನ ಸಾರ್ಥಕತೆಯ ಪರಿಮಳ-ಸಿಹಿ-ಪರಿಶುದ್ಧತೆ ಸಾಧ್ಯವಾಗಿರುವುದು ಚನ್ನಮಲ್ಲಿಕಾರ್ಜುನನ ಸಂಗದಲ್ಲಿ, ಶರಣಾಗತಿಯಲ್ಲಿ.

ವಚನದಲ್ಲಿನ ಚಂದನ, ಸುವರ್ಣ, ಕಬ್ಬು ಹಾಗೂ ಅಕ್ಕಮಹಾದೇವಿಯನ್ನು ಬೇರೆ ಬೇರೆಯಾಗಿ ನೋಡಬೇಕಿಲ್ಲ. ಪುಟ್ಟವಿಟ್ಟಷ್ಟೂ ಹೊಳೆಯುವ ಚಿನ್ನದಂತೆ, ತೇದಷ್ಟೂ ಇಮ್ಮಡಿ ಗೊಳ್ಳುವ ಗಂಧದ ಪರಿಮಳದಂತೆ, ನೊಂದಷ್ಟೂ ಸಿಹಿಯ ಬಿಟ್ಟುಕೊಡುವ ಕಬ್ಬಿನಂತೆ, ಪರೀಕ್ಷೆಗಳು ಎದುರಾದಂತೆಲ್ಲ ಅಕ್ಕಮಹಾದೇವಿಯ ಹಾದಿ ನಿಚ್ಚಳವಾಗಿದೆ. ಆ ದಾರಿಯಾದರೂ ಎಂತಹುದು?

ಹರೆಯ ಕಣ್ತೆರೆಯುವ ಸಮಯದಲ್ಲಿ ಎದುರಾದವನು ಕೌಶಿಕ, ಆತನ ಅಧಿಕಾರ, ಶ್ರೀಮಂತಿಕೆ, ದೇಹಮದವನ್ನು ತಿರಸ್ಕರಿಸಿ ಅರಮನೆಯಿಂದ ಅರಿವಿನ ದಾರಿಗೆ ನಡೆದವಳು ಅಕ್ಕ. ಈ ಹಾದಿಯಲ್ಲಿ ದೇಹದ ಮೇಲಿನ ಮೋಹವನ್ನು ಕಳೆದುಕೊಂಡಳು. ಆಕೆ ತನ್ನ ದೇಹದ ಮೇಲಿನ ಮೋಹವನ್ನು ತೊರೆದರೂ, ಲೋಕದ ಕಣ್ಣಿಗೆ ಮಾತ್ರ ಆಕೆಯೂ ಒಂದು ಹೆಣ್ಣು! ಅದರಲ್ಲೂ ಯೌವನ ತುಂಬಿದ ಹೆಣ್ಣು. ಅನುಭವ ಮಂಟಪದಲ್ಲಿ ಅಲ್ಲಮಪ್ರಭು ಕೂಡ ಇದೇ ಮಾತನ್ನಾಡುತ್ತಾನೆ.

ಉದಮದವ ಯೌವನವನೊಳಕೊಂಡ ಸತಿ ನೀನು
ಇತ್ತಲೇಕೆ ಬಂದೆಯವ್ವಾ?
ಸತಿಯೆಂದರೆ ಮುನಿವರು ನಮ್ಮ ಶರಣರು.
ನಿನ್ನ ಪತಿಯ ಕುರುಹ ಹೇಳಿದರೆ ಬಂದು ಕುಳ್ಳಿರಿ
ಅಲ್ಲವಾದರೆ ತೊಲಗು ತಾಯೆ.

ಎನ್ನುವ ಅಲ್ಲಮ, ಅಕ್ಕನ ಕುರಿತ ಸಮಾಜದ ಸಂಶಯಕ್ಕೆ ಮಾತು ನೀಡುತ್ತಾನೆ. ಆಕೆಯ ನಿಗ್ರಹ ಶಕ್ತಿಯನ್ನು ಪ್ರಶ್ನಿಸುತ್ತಾನೆ. ಅಲ್ಲಮನ ಶಂಕೆಗೆ ಅಕ್ಕನದು ಸ್ಪಷ್ಟ ಉತ್ತರ: ಶಿವ ಮನ್ಮಥನ ಕೊಂದ.

ಅನಂತರ ಕರುಣೆಯಿಂದ, ಎಲ್ಲರ ಮನಸ್ಸಿನಲ್ಲಿ ನೀನು ಹುಟ್ಟು ಎಂದು ಮನ್ಮಥನನ್ನು ಮನಸಿಜನನ್ನಾಗಿ ಮಾಡಿದ. ಆ ಮನಸಿಜನ ಹಣೆಯ ಬರಹವನ್ನೇ ತೊಡೆದು ಹಾಕಿದವಳು ನಾನು. ಅಂದರೆ ನಾನು ಕಾಮಮುಕ್ತಳು ಎನ್ನುತ್ತಾಳೆ.

ಅಲ್ಲಮ ಬಡಪೆಟ್ಟಿಗೆ ಬಗ್ಗುವುದಿಲ್ಲ. ದೇಹವನ್ನು ಕೂದಲಿನಿಂದ ಮುಚ್ಚಿದ ಅಕ್ಕನ ಉದ್ದೇಶವನ್ನೇ ಪ್ರಶ್ನಿಸಿ, ದೇಹದ ಮೋಹದಿಂದ ನೀನಿನ್ನೂ ಮುಕ್ತಳಾಗಿಲ್ಲ ಎನ್ನುತ್ತಾನೆ. ಅಕ್ಕನೋ ಜಾಣ ಶಿಷ್ಯೆ. ಗುರುವಿನ ಮಾತನ್ನೇ ತಿರುಗಿಸುತ್ತಾಳೆ. 'ನೀವೇ ಹೇಳಿದಂತೆ ಉದಮದ ಹೆಣ್ಣು ನಾನು. ಈ ಹೆಣ್ಣಿನ ಕಾಮಮುದ್ರೆಯ ಕಂಡು ನಿಮಗೆ ನೋವಾದೀತು' ಎಂದು ಕೇಶವಸ್ತ್ರವ ಧರಿಸಿದುದಾಗಿ ಹೇಳುತ್ತಾಳೆ.

'ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ
ಭವವಿಲ್ಲದ ಭಯವಿಲ್ಲದ ನಿರ್ಭಯ ಚೆಲುವಂಗೆ
ನಾನೊಲಿದೆನಯ್ಯಾ, ಚೆನ್ನಮಲ್ಲಿಕಾರ್ಜುನ ಗಂಡನೆನಗೆ,
ಮಿಕ್ಕಿನ ಲೋಕದ ಗಂಡರೆನಗೆ ಸಂಬಂಧವಿಲ್ಲವಯ್ಯಾ'.

ಎಂದು ಅಕ್ಕ ತನ್ನ ಪುರುಷನ ವಿಳಾಸವ, ತನ್ನ ಸತೀತ್ವದ ನಿಷ್ಠೆಯ ಪ್ರಕಟಪಡಿಸುತ್ತಾಳೆ. ಅಲ್ಲಮನಿಗೆ ಒಪ್ಪಿಕೊಳ್ಳದೆ ವಿಧಿಯಿಲ್ಲ.

'ತನುವಿನೊಳಗಿದ್ದು ತನುವ ಗೆದ್ದಳು
ಮನದೊಳಗಿದ್ದು ಮನವ ಗೆದ್ದಳು
ವಿಷಯದೊಳಗಿದ್ದು ವಿಷಯಂಗಳ ಗೆದ್ದಳು'

ಎಂದು ಅನುಭವ ಮಂಟಪ ಅಕ್ಕಮಹಾದೇವಿಯನ್ನು ಶ್ಲಾಘಿಸುತ್ತದೆ. ಇದು ಅಕ್ಕ ಸಾಗಿಬಂದ ಪರೀಕ್ಷೆ ಹಾಗೂ ಆ ಪರೀಕ್ಷೆಯಲ್ಲಿ ಅವಳ ವ್ಯಕ್ತಿತ್ವ ಉಜ್ವಲವಾಗಿ ಪ್ರಕಟಗೊಂಡ ಒಂದು ಉದಾಹರಣೆ. ಪುಟವಿಟ್ಟಾಗ ಚಿನ್ನ ಕಂಗೊಳಿಸುತ್ತದಲ್ಲ– ಅಂಥ ಉದಾಹರಣೆ.

ಈ ಪರೀಕ್ಷೆಯ ಹಾದಿಯಲ್ಲಿ ಅಕ್ಕ ಉದ್ಗರಿಸುತ್ತಾಳೆ–

ಉಡುವೆ ನಾನು ಲಿಂಗಕ್ಕೆಂದು
ತೊಡುವೆ ನಾನು ಲಿಂಗಕ್ಕೆಂದು
ಮಾಡುವೆ ನಾನು ಲಿಂಗಕ್ಕೆಂದು
ನೋಡುವೆ ನಾನು ಲಿಂಗಕ್ಕೆಂದು
ಎನ್ನಂತರಂಗ ಬಹಿರಂಗಗಳು ಲಿಂಗಕ್ಕಾಗಿ.

ಲಿಂಗವನ್ನು ಹೊರತುಪಡಿಸಿ ತನಗೆ ಬದುಕೇ ಇಲ್ಲ ಎನ್ನುವ ಈ ವಚನ. 'ನೀ ಕೊಂದಡೆಯೂ ಶರಣೆಂಬುದ ಮಾಣೆ' ಎನ್ನುವ ಸಾಲಿಗೆ ಸಮರ್ಥನೆಯಂತಿದೆ, ಅಲ್ಲವೇ?

ಶರಣಾಗತಿ ಅಕ್ಕಮಹಾದೇವಿಗೆ ಮಾತ್ರ ಸೀಮಿತವಾದುದಲ್ಲ. ಎಲ್ಲ ಶರಣರೂ ತಮ್ಮ ತಪ್ಪುಗಳನ್ನು ಒಪ್ಪಿಕೊಂಡು, ಲಿಂಗಕ್ಕೆ ಶರಣು ಎಂದವರೇ. ಬಸವಣ್ಣನನ್ನೇ ನೋಡಿ: 'ಎನ್ನ ತಪ್ಪು ಅನಂತಕೋಟಿ/ನಿಮ್ಮ ಸೈರಣೆಗೆ ಲೆಕ್ಕವಿಲ್ಲವಯ್ಯಾ' ಎನ್ನುತ್ತಾರೆ. ಇದೇ ಬಸವಣ್ಣ–

ಬೆದಕದಿರು ಬೆದಕದಿರು; ಬೆದಕಿದರೆ ಹುರುಳಿಲ್ಲ
ಚಿತ್ತರಟ್ಟೆಯ ಕಾಯಲ್ಲಿ ಮತ್ತೇನನರಸುವಿರಿ
ನಿಮ್ಮುತ್ತಮಿಕೆಯ ಮೆರೆಯಯ್ಯಾ ಕೂಡಲಸಂಗಮದೇವಾ.

ಎನ್ನುತ್ತಾರೆ. 'ನಿಮ್ಮುತ್ತಮಿಕೆಯ ಮೆರೆಯಯ್ಯಾ' ಎನ್ನುವ ಬಸವಣ್ಣನ ಮಾತು, 'ಹೀನಂಗಳೆಲ್ಲವ ತಂದು ಮುಂದಿಳುಹಲು ನಿಮಗೇ ಹಾನಿ' ಎನ್ನುವ ಅಕಕನ ವಚನದ ಸಾಲನ್ನು ನೆನಪಿಸುವಂತಿದೆ.

ಭಕ್ತಿ ಹಾಗೂ ಬಂಡಾಯದ ಬಗ್ಗೆ ಮಾತನಾಡುವಾಗಲೆಲ್ಲ ಅಕ್ಕನ ನೆನಪಾಗುತ್ತದೆ. ಈ ಎರಡೂ ಮುಖಗಳನ್ನು 'ಚಂದನವ ಕಡಿದು...' ವಚನದಲ್ಲಿಯೂ ಕಾಣಬಹುದು. ಶರಣಾಗತಿ ಆಕೆಯ ಭಕ್ತಿಯ ಮುಖ. 'ಹೀನಂಗಳೆಲ್ಲವ ತಂದು ಮುಂದಿಳುಹಲು ನಿಮಗೇ ಹಾನಿ' ಎನ್ನುವ ಎಚ್ಚರಿಕೆಯಲ್ಲಿ, 'ನೀ ಕೊಂದರೂ ಶರಣೆಂಬುದ ಮಾಣೆ' ಎನ್ನುವ ನಿಶ್ಚಯದಲ್ಲಿ ಆಕೆಯ ಬಂಡಾಯ ಮನೋಧರ್ಮವಿದೆ.

ಅಕ್ಕನ ಬದುಕು, ಭಕ್ತಿ ಎಲ್ಲವನ್ನೂ ಮರೆತು 'ಚಂದನವ...' ವಚನವನ್ನು ಆಸ್ವಾದಿಸಬಹುದು. ಇದು ಬೆಳದಿಂಗಳನ ಸಹಜ ಸೌಂದರ್ಯ ಮೈಗೂಡಿಸಿಕೊಂಡಿರುವ ಕವಿತೆ. ಬಂಡಾಯ–ಭಕ್ತಿ ಎಲ್ಲವನ್ನೂ ಮೀರಿದ ಚೆಲುವನ್ನು ಅಂತರ್ಗತವಾಗಿಸಿಕೊಂಡಿರುವ ಕವಿತೆ.

*　　　*　　　*

ವಚನದ ಚಂದನ, ಚಿನ್ನ, ಕಬ್ಬನ್ನು ಮತ್ತೆ ನೆನೆಯಬೇಕು. ಗಂಧದ ಪರಿಮಳ, ಚಿನ್ನದ ಪ್ರಭೆ, ಕಬ್ಬಿನ ಸಿಹಿ ಅವುಗಳ ಸಹಜ ಗುಣ. ಆದರೆ ಈ ಗುಣಗಳು ಅನುಭವಕ್ಕೆ ಬರಬೇಕಾದರೆ, ಅಭಿವ್ಯಕ್ತಗೊಳ್ಳಬೇಕಾದರೆ ಅಗ್ನಿದಿವ್ಯಕ್ಕೆ ಈಡಾಗಲೇಬೇಕು.

ಕೃತಕ ಪರಿಮಳ, ಕೃತಕ ಸಿಹಿ, ಕೃತಕ ಪ್ರಭೆಗಳನ್ನು ಸೃಷ್ಟಿಸುತ್ತಿರುವ ಕಾಲದಲ್ಲಿ ಬದುಕುತ್ತಿರುವವರು ನಾವು. ಇಂಥ ಸಂದರ್ಭದಲ್ಲಿ ಅಕ್ಕನ ಅಗ್ನಿದಿವ್ಯದ ಹಾದಿ ಕೃತಕವಾಗಿ ಕಂಡರೆ ಅಚ್ಚರಿಯಿಲ್ಲ. ಆದರೆ ಇಂದಿನ ಬಹುತೇಕ ತಳಮಳ, ಬಿಕ್ಕಟ್ಟುಗಳಿಗೆ ಈ ಅಗ್ನಿದಿವ್ಯದ ಹಾದಿಯಲ್ಲಿಯೇ ಉತ್ತರವಿದೆ. ಅದನ್ನು ಕಂಡುಕೊಳ್ಳುವ ಸಹನೆ ನಮಗೆ ಬೇಕಷ್ಟೆ.

೩೦. ಜಾನಪದ ಪ್ರಜ್ಞೆಯ ಬಿಂಬ: ಅಕ್ಕಮಹಾದೇವಿ ಸಣ್ಣಾಟ

•

ಡಾ. ಶಾಂತಾ ಇಮ್ರಾಪೂರ

ಕಳೆದ ಎಂಟು ಶತಮಾನಗಳ ಕನ್ನಡ ನಾಡಿನ ಚರಿತ್ರೆ, ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯಲ್ಲಿ ಭಕ್ತಿ–ಜ್ಞಾನ–ವೈರಾಗ್ಯಕ್ಕೆ ಜೀವಂತ ಪ್ರತೀಕವಾಗಿ ಉಳಿದುಕೊಂಡಿರುವ ಅಕ್ಕಮಹಾದೇವಿಯ ವ್ಯಕ್ತಿತ್ವವು ಬಸವಣ್ಣನಷ್ಟೇ ಜನ ಮಾನಸಕ್ಕೆ ಹತ್ತಿರವಾದುದು. ವಾಸ್ತವ ಬದುಕಿನ ಮಿತಿಗಳನ್ನು, ಸಾಮಾಜಿಕ ಗ್ರಹಿಕೆಗಳನ್ನು ಅತಿಕ್ರಮಿಸಿ ಸ್ವತಂತ್ರ ಸಲಿಲದಂತೆ ಹರಿದ ಅಕ್ಕನ ವ್ಯಕ್ತಿತ್ವ ಮತ್ತು ಬದುಕು ಲೋಕನೀತಿಗೆ ಅಪವಾದವಾದರೂ, ಕಳೆದ ಎಂಟು ಶತಮಾನಗಳುದ್ದಕ್ಕೂ ಅಕ್ಕಮಹಾದೇವಿ ಪಡೆದುಕೊಂಡಿರುವ ಲೋಕ ಮನ್ನಣೆ ಅನನ್ಯವಾದುದು. ಸಮಕಾಲೀನ ಶರಣಸಮುದಾಯದ ಮೆಚ್ಚಿಗೆ–ಪ್ರಶಂಸೆಗೆ ಪಾತ್ರಳಾದ ಹಿರಿಮೆ ಅಕ್ಕನಿಗಿದೆ. ವಿವಾಹ–ಸತಿ–ಸಂಸಾರ ಮುಂತಾದ ಸಾಂಪ್ರದಾಯಿಕ ಸ್ತ್ರೀಧರ್ಮವನ್ನು ಧಿಃಕ್ಕರಿಸಿ ಲೋಕ ವಿರೋಧಿ ಆದರ್ಶವನ್ನು ಕಟ್ಟಿಕೊಂಡು, ಕಾಣದ ಬದುಕಿಗಾಗಿ ಹಂಬಲಿಸಿದ 'ಮಹಾದೇವಿಯಕ್ಕನ ಮಾರ್ಗವು' ಬಹುಮುಖ ಚರ್ಚೆಗೆ ಒಳಗಾಗುತ್ತಲೇ ಇದೆ. ಹೆಣ್ಣಾಗಿ ಅದೂ ವಿರಾಗಿಣಿಯಾಗಿ ಆಕೆ ತೆಗೆದುಕೊಂಡ ನಿರ್ಧಾರ, ಆಯ್ಕೆ – ಆತ್ಮಸ್ಥೈರ್ಯ, ನಿರ್ಭೀತ ಸ್ವತಂತ್ರ ನಿಲುವು ಸಮಕಾಲೀನ ಸಮಾಜವನ್ನು ದಿಗ್ಭ್ರಮೆಗೊಳಿಸಿದೆ. ಮುಂದಿನ ಶತಮಾನಗಳಲ್ಲಿಯೂ ಬುದ್ಧಿಜೀವಿಗಳ ಜಿಜ್ಞಾಸೆಗೆ ಒಳಗಾಗಿದೆ. ಕವಿ–ಲೇಖಕರಿಗೆ ಅಕ್ಕನ ಬದುಕು ಕಾವ್ಯವಾಗಿ ಕಂಡಿದೆ. ಪ್ರೇಮ ಯೋಗಿನಿ ನಿತ್ಯವಿರಹಿಣಿಯಾದ ಮಹಾದೇವಿಯಕ್ಕನ ಅನುಭಾವದ ಸ್ವರೂಪ, ಆತ್ಮ ನಿವೇದನೆಯ ಆರ್ತತೆ, ವಚನಗಳ ಸಾಹಿತ್ಯಕ ಸತ್ವ, ಕಾವ್ಯಪ್ರತಿಭೆ ಮತ್ತು ವೀರಶೈವ ತತ್ವಶಾಸ್ತ್ರ ವಿವೇಚನೆಯ ಪ್ರಾವೀಣ್ಯತೆ ಮಹಾದೇವಿಯಕ್ಕನನ್ನು ಶ್ರೇಷ್ಠ ಅನುಭಾವಿಯಾಗಿ, ಪ್ರತಿಭಾಪೂರ್ಣ ಕವಯಿತ್ರಿಯಾಗಿ ಕಡೆದು ನಿಲ್ಲಿಸಿವೆ. ಸಮಕಾಲೀನ ಸಮಾಜದ ಸಾಂಪ್ರದಾಯಿಕ ವ್ಯವಸ್ಥೆಯನ್ನು ಪ್ರಶ್ನಿಸಿ–ಪ್ರತಿಭಟಿಸಿ ನಿಂದೆ–ಮನ್ನಣೆಗಳಿಗೆ ಜಗ್ಗದೇ–ಬೀಗದೇ ನಿರ್ಲಿಪ್ತ ಸತ್ಯಾನ್ವೇಷಕಿಯಾಗಿ ಗುರಿಯತ್ತ ಸಾಗಿದ ಆತ್ಮಪ್ರತ್ಯಯ ಆತ್ಮಸಮರ್ಪಣೆ ಅಕ್ಕನ ಸತ್ವವಿಶಿಷ್ಟ.

ಅನುಭವಮಂಟಪದ ಶರಣರಿಂದ ಆಧ್ಯಾತ್ಮದ ಅಗ್ನಿದಿವ್ಯವನ್ನೆದುರಿಸಿ ಹರನ ಸತಿಯಾಗಿ ಮಧುರಭಕ್ತಿಯ ಪ್ರಭೆಯಿಂದ ಭಕ್ತಿ–ಜ್ಞಾನ–ವೈರಾಗ್ಯದ ಶ್ರೀಗಿರಿಯನ್ನೇರಿದ್ದಾಳೆ. ಲೌಕಿಕ ಬದುಕಿನಲ್ಲಿ ಕೈಗೆಟಕುವಂತಿದ್ದ ಎಲ್ಲ ಭೋಗ ಭಾಗ್ಯಗಳನ್ನು, ಪ್ರೀತಿ, ದಾಂಪತ್ಯ ಇತ್ಯಾದಿ ಭಾವನಾತ್ಮಕ ಬದುಕನ್ನು ಧಿಃಕ್ಕರಿಸಿದ ಅಕ್ಕ ಅಲೌಕಿಕ ನೆಲೆಯ ಅಂಥದೇ ಬದುಕಿಗಾಗಿ ನಿರಂತರ ಹಂಬಲಿಸಿದವಳು. ಕಾಣುವುದನ್ನು ತಿರಸ್ಕರಿಸಿ, ಕಾಣದ ಸುಖಕ್ಕಾಗಿ ಪರಿತಪಿಸಿದವಳು. ಹೀಗೆ ಲೌಕಿಕ ಗ್ರಹಿಕೆಗಳಿಗೆ ಅತೀತವಾಗಿ, ಮನುಷ್ಯ ಸಹಜ ಮಿತಿಗಳನ್ನು ಕಳೆದುಕೊಳ್ಳುತ್ತ ಅಲೌಕಿಕ ಆವರಣದಲ್ಲಿ ಬದುಕಿದ ಮಹಾದೇವಿಯಕ್ಕನ ಅಸಾಮಾನ್ಯ ಕಥನವು ಕಳೆದ ಎಂಟುನೂರು ವರ್ಷಗಳಿಂದಲೂ ಕನ್ನಡಸಾಹಿತ್ಯಕ್ಕೆ ವಸ್ತುವನ್ನೊದಗಿಸಿದೆ. ಅಕ್ಕಮಹಾದೇವಿಯ ಜೀವಿತಾವಧಿಗೆ ಹತ್ತಿರವಾಗಿ ಬದುಕಿದ ಕವಿ ಹರಿಹರ (೧೩ನೆಯ ಶತಮಾನ), ಚಾಮರಸ (೧೫ನೆಯ ಶತಮಾನ), ಚನ್ನಬಸವಾಂಕ (೧೭ನೆಯ ಶತಮಾನ), ರಾಚಕವಿ (೧೮ನೆಯ ಶತಮಾನ) ಮುಂತಾದವರು ಮಹಾದೇವಿಯಕ್ಕನನ್ನು ಕುರಿತು ಕಾವ್ಯಗಳನ್ನು ರಚಿಸಿದ್ದಾರೆ. ನಾಲ್ಕೂ ಶೂನ್ಯ ಸಂಪಾದನೆಕಾರರು ಮಹಾದೇವಿಯಕ್ಕನ ಅನುಭಾವಿ ವ್ಯಕ್ತಿತ್ವದ ಉನ್ನತ ಸತ್ವವನ್ನು, ವೈರಾಗ್ಯ–ಭಕ್ತಿ–ಜ್ಞಾನದ ಪ್ರಖರತೆಯನ್ನು ಅದ್ಭುತವಾಗಿ ನಿರೂಪಿಸಿದ್ದಾರೆ. ಇಪ್ಪತ್ತನೆಯ ಶತಮಾನ ದಲ್ಲಿಯೂ ಮಹಾದೇವಿಯಕ್ಕನನ್ನು ಕುರಿತು ಕತೆ–ಕಾದಂಬರಿ–ನಾಟಕ–ಕಾವ್ಯ, ಮಹಾಕಾವ್ಯ, ಪ್ರಬಂಧ–ಮಹಾಪ್ರಬಂಧ–ವಿಮರ್ಶೆ ಇತ್ಯಾದಿ ಪ್ರಕಾರಗಳಲ್ಲಿ ವಿಪುಲ ಸಾಹಿತ್ಯ ರಚನೆಯಾಗಿದೆ. ಹೀಗೆ ಎಂಟು ಶತಮಾನಗಳಿಂದಲೂ ಕನ್ನಡದ ಬೌದ್ಧಿಕ ಪ್ರಪಂಚವನ್ನು, ಸೃಜನಶಿಲ ಪ್ರಜ್ಞೆಯನ್ನು ಪ್ರಭಾವಿಸುತ್ತಲಿರುವ ಅಕ್ಕನ ವ್ಯಕ್ತಿತ್ವವು ಜಾನಪದ ಮನಸ್ಸನ್ನು ಆಳವಾಗಿ ಮುಟ್ಟಿದೆ. ಪರಮಾತ್ಮನನ್ನೇ ಪತಿಯೆಂದು ಆರಾಧಿಸಿ, ಪ್ರಾಪಂಚಿಕತೆಗೆ ವಿಮುಖಳಾದ ಅಕ್ಕನ ಅನುಭಾವದ ನಿಲುವನ್ನು ತಮ್ಮ ಜೀವನಾನುಭವದ ತಕ್ಕಡಿಯಲ್ಲಿ ತೂಗಿ ನೋಡಿರುವ ಜಾನಪದರು, ಲಾವಣಿ, ಸಣ್ಣಾಟ ಮತ್ತು ಜೋಗುಳ ಪದಗಳಲ್ಲಿ, ಬಿಡಿ ತ್ರಿಪದಿಗಳಲ್ಲಿ, ಕುಟ್ಟುವ–ಬೀಸುವ–ಹಂತಿಯ ಹಾಡುಗಳಲ್ಲಿ ಮಹಾದೇವಿಯಕ್ಕನ ಗುಣ ವಿಶೇಷಗಳನ್ನು ಕೊಂಡಾಡಿದ್ದಾರೆ. ಮಹಾದೇವಿಯಕ್ಕನನ್ನು ಶ್ರೇಷ್ಠ ಶಿವ ಭಕ್ತೆಯಾಗಿ ಆರಾಧಿಸುವ ಜನಪದರು ಆಕೆಯನ್ನು ಕುರಿತು ತಮ್ಮ ರಚನೆಗಳಲ್ಲಿ ಶಿಷ್ಟಪರಂಪರೆಗೆ ಭಿನ್ನವಾದ ಅನೇಕ ಹೊಸ ಒಳನೋಟಗಳನ್ನು ನೀಡುವ ಮೂಲಕ ಅಕ್ಕನ ಚರಿತ್ರೆಯಲ್ಲಿರುವ ಚಾರಿತ್ರಿಕ ಸಂದಿಗ್ಧತೆಗಳನ್ನು ನಿರಾಯಾಸವಾಗಿ ದಾಟಿ ಬಂದಿರುವುದು ಕುತೂಹಲಕಾರಿಯಾದ ಆಯಾಮವಾಗಿದೆ ಉದಾ: ವಿವಾಹ ಮತ್ತು ದಿಗಂಬರತ್ವದ ಪ್ರಸಂಗಗಳು.

ಅಕ್ಕಮಹಾದೇವಿ ಸಣ್ಣಾಟದ ಸ್ವರೂಪ : ಇದೊಂದು ಭಕ್ತಿ ಪ್ರಧಾನವಾದ ಸಣ್ಣಾಟ. ಶರಣರಾಟವೆಂದೂ ಗುರುತಿಸಬಹುದು, ಎಲ್ಲ ಸಣ್ಣಾಟಗಳೂ ಸ್ತುತಿ ಪೀಠಿಕೆಗಳಿಂದಲೇ ಪ್ರಾರಂಭವಾಗುವಂತೆ 'ಅಕ್ಕಮಹಾದೇವಿ' ಸಣ್ಣಾಟವೂ ಸ್ತುತಿ ಪದ್ಯದಿಂದ ಪ್ರಾರಂಭವಾಗಿದೆ. ನಾಟಕ ದುದ್ದಕ್ಕೂ ಅಲ್ಲಲ್ಲಿ ಸನ್ನಿವೇಶ ಸಂದರ್ಭಗಳಿಗೆ ಅನುಸಾರವಾಗಿ ಇಷ್ಟದೇವತಾಸ್ತುತಿ ಬರುತ್ತದೆ. ಪ್ರಾರಂಭಕ್ಕೆ ವಿಘ್ನೇಶ್ವರ, ದುರ್ಗಾದೇವಿ. ಸರಸ್ವತಿ, ಲಕ್ಷ್ಮೀ ಹಾಗೂ ಶ್ರೀ ಶಿವಬಸವೇಶ್ವರರನ್ನು ಸ್ತುತಿಸಲಾಗಿದೆ, ನಂತರ ಶಿವ–ಪಾರ್ವತಿಯ ಸ್ತುತಿಮಾಡಿದ ಕಥೆಗಾರನು. ತಾನು ಆಡಲಿರುವ ಕಥೆಗೆ ಅಭಯನೀಡೆಂದು ವಿಘ್ನನಿವಾರಕನನ್ನು ಬೇಡಿಕೊಂಡಿದ್ದಾನೆ. ಸ್ತುತಿಯ ಎರಡನೆಯ ಭಾಗದಲ್ಲಿ "ಉಡುತಡಿಯ ಮಹಾದೇವಿಯ

ಚರಿತೆಯನು ಸರಸ ನಾಟಕ" ರೂಪದಿಂದಾ ಚಿತ್ರಿಸುವೆನು. ಶಿವಭಕ್ತಿಮಹಿಮೆಯ ಚಿತ್ರಿಸುವೆನು, ಅಲ್ಲಮಪ್ರಭುವಿನ ಲೀಲೆಯನ್ನು ವರ್ಣಿಸುವೆನು, ಸಭಾದಲ್ಲಿ ಕುಳಿತಿರುವಂಥ ಪಂಡಿತರೇ ಚಿತ್ತವಿಟ್ಟು ಕೇಳಿರಿ, ಮುಕ್ತಿ ಆಧಾರತತ್ವದ ಸಾರಾ, ಗಂಡು ಮೆಟ್ಟಿನ ದೇವಗಿರಿ ಜಾಹೀರಾ, ಅಲ್ಲಿ ಇರುವ ವಿಘ್ನೇಶ್ವರಾ, ಆತನ ದಯದಿಂದ ನಾ ಕಥೆಗಾರ, ರಚಿಸುವೆ ಕಥನಮಾಡಿ ಮಜಕೂರಾ" ಎಂದು ತಾನು ಆಡಲಿರುವ ಸಣ್ಣಾಟದ ಕಥಾವಸ್ತು ಹಾಗೂ ಶಿವಭಕ್ತಿಯ ಮಹಿಮೆಯನ್ನು ಸಾರುವ ಕಥೆಯ ಉದ್ದೇಶವನ್ನು ಹೇಳಿದ್ದಾನೆ. ದೇವಗಿರಿಯ ವಿಘ್ನೇಶ್ವರನ ದಯದಿಂದ ಕಥೆಯನ್ನು ರಚಿಸಿ ಆಡುವುದಾಗಿ ಪ್ರೇಕ್ಷಕರೆದುರು ಆಟಕ್ಕೆ ಪೀಠಿಕೆ ಹಾಕುತ್ತಾನೆ.

ಕವಿ–ಕೃತಿ ಮತ್ತು ಕಾಲ : ಪ್ರಸ್ತುತ ಸಣ್ಣಾಟದ ಸಂಪಾದನೆಗೆ ಬಳಸಿಕೊಂಡಿರುವ ಎರಡು ಹಸ್ತಪ್ರತಿಗಳು (೧೯೭೯, ೧೯೯೭) ಈಗಿನ ಹಾವೇರಿ ಜಿಲ್ಲೆಯ ದೇವಗಿರಿ ಗ್ರಾಮದಲ್ಲಿ ದೊರೆತಿವೆ.* ಪ್ರಾರಂಭದ ಮಂಗಲಾಚರಣೆ ಪದದಲ್ಲಿ ಕವಿಯು "ಉಡುತಡಿಯ ಅಕ್ಕಮಹಾದೇವಿಯ ಚರಿತೆಯನು ಪಳುವೆನೆಂದು" ಹೇಳಿರುವುದು ಗಮನಾರ್ಹ. ಮಹಾದೇವಿಯಕ್ಕನ ಶಿವಭಕ್ತಿಯ ಮಹಿಮೆಯನ್ನು ತಿಳಿಸಲೋಸುಗ ಈ ಸಣ್ಣಾಟವನ್ನು ರಚಿಸಿರುವುದಾಗಿ ಹೇಳಿಕೊಂಡಿದ್ದಾನೆ.

ಪ್ರಸ್ತುತ ಸಣ್ಣಾಟದ ಹಾಡುಗಳಲ್ಲಿ ಅನೇಕ ಸಾರೆ ದೇವಗಿರಿ ಗ್ರಾಮದ ಉಲ್ಲೇಖ ಬರುತ್ತದೆ. ಆ ಗ್ರಾಮದ ದೇವತೆಗಳಾಗಿರುವ ದುರ್ಗಾದೇವಿ, ಈಶ್ವರ, ವಿಘ್ನೇಶ, ಬಸವೇಶ್ವರರನ್ನು ವಿಶೇಷವಾಗಿ ಸ್ಮರಿಸಲಾಗಿದೆ. (ಪುಟ ೧, ೨, ೧೧, ೧೩, ೪೦, ೪೯,-೬೬, ೭೦, ೮೩, ೧೨೨, ೧೪೬, ಗಳಲ್ಲಿ ಕಥೆಗಾರ ಅಕ್ಕಮಹಾದೇವಿ, ಅಲ್ಲಮ ಪ್ರಭುದೇವ ಹಾಗೂ ಕೌಶಿಕರ ಹಾಡುಗಳಲ್ಲಿ ಈ ದೇವರ ಸ್ತುತಿಗಳಿವೆ). ಆದರೆ ಕವಿಯ ಹೆಸರು ಹಾಗೂ ಕಾಲದ ಬಗೆಗೆ ಸಣ್ಣಾಟದಲ್ಲಿ ಯಾವ ಖಚಿತವಾದ ಆಧಾರಗಳು ಸಿಗುವುದಿಲ್ಲ. ಸಣ್ಣಾಟದ ಒಂದು ಸಂದರ್ಭ: ಅಕ್ಕಮಹಾದೇವಿ ಕೌಶಿಕನಿಗೆ ಭಕ್ತಿಮಾರ್ಗವನ್ನು ಬೋಧಿಸುವ ಸನ್ನಿವೇಶದಲ್ಲಿ (ಪುಟ ೮೩).

"ಈ ದೇಹ ಸ್ಥಿರವಲ್ಲ
ಕಡೆಗಿದು ಮಣ್ಣಿನಪಾಲಾ ಆಗುವುದು ಸಿದ್ಧಾಂತಾ
ಎಲ್ಲರಿಗೂ ಗೊತ್ತಿದ್ದುದೇ ಮಾತಾ
ಒದ್ದಾಡುವುದೇನು ಮರತಾ
ದೇವಗಿರಿ ಬಸವೇಶನ ನೆನಸು ಅನುದಿನ
ಕವಿ ಹೇಳ್ಯಾನ ಶಿವಣ್ಣಾ"
ಸಣ್ಣಾಟದ ಕೊನೆಗಿರುವ (ಪು. ೧೪೫ ರಲ್ಲಿ) ಮಂಗಲಪದ್ಯದಲ್ಲಿ
'ದೇವಗಿರಿ ಪುರದೊಳಗೆ ಮೆರೆವಾ
ಪುಟ್ಟರಾಜ ಕರುಣಕಂದಗೆ
ಶಿವಯೋಗಿ ಕುಮಾರನು ಪೊರೆದ
ಶಿವನ ಪರಮಜ್ಯೋತಿ ಪಾರ್ವತಿಗೆ'

ಅದಲ್ಲದೇ ಸ್ತುತಿ ಪದದ ಬಹುಭಾಗ (ಪುಟ ೨) ಮೂಲ ಸಣ್ಣಾಟದಲ್ಲಿಯೇ ಇದ್ದಿರಬಹುದಾದಂತೆ ತೋರುತ್ತದೆ.

'ಶರಣರ ಪಾದಯುಗಗಳನು
ನಿತ್ಯದಿ ಭಜಿಸುವೆ ಅವರನ್ನು
ಉಡುತಡಿ ಮಹಾದೇವಿಯ ಚರಿತೆಯನು'

ಇಡೀ ಸಣ್ಣಾಟದಲ್ಲಿ ಕವಿಯ ಉಲ್ಲೇಖವಿರುವ ಈ ಮೇಲಿನ ಮೂರು ಪದ್ಯಗಳ ಆಧಾರದಿಂದ "ಅಕ್ಕಮಹಾದೇವಿ" ಸಣ್ಣಾಟದ ಕರ್ತೃ ಪುಟ್ಟರಾಜನ ಕರುಣೆಯ ಕಂದ, ಶಿವಯೋಗದಲ್ಲಿ ಪರಿಣಿತನಾದ ಕವಿ ಶಿವಣ್ಣನಾಗಿರಬಹುದೆಂದು ಊಹಿಸಬಹುದು. ಇಲ್ಲಿ ಪ್ರಸ್ತಾಪಿತಗೊಂಡಿರುವ "ಕವಿ ಶಿವಣ್ಣ" 'ಉಡುತಡಿಯ ಮಹಾದೇವಿಯ ಸಣ್ಣಾಟ' ಬರೆದಿರುವ ಹಣ್ಣಿಕೇರಿ ಶಿವಾನಂದ ಕವಿಯಾಗಿರಬಹುದೇ ಎಂಬುದು ವಿಚಾರಾರ್ಹವಾಗಿದೆ.

ಈ ಹಿಂದೆ ಸಣ್ಣಾಟಗಳ ರಚನೆಯಲ್ಲಿ ಖ್ಯಾತರಾದ ಕಾದ್ರೊಳ್ಳಿಯ ನೀಲಕಂಠಪ್ಪ ಪತ್ತಾರ (೧೮೯೫-೧೯೭೪) ಹಾಗೂ ಹಣ್ಣಿಕೇರಿ ಶಿವಾನಂದ ಕವಿಗಳು ಕ್ರಮವಾಗಿ 'ಮಹಾದೇವಿಯಕ್ಕ' ಹಾಗೂ 'ಉಡುತಡಿಯ ಮಹಾದೇವಿ' ಹೆಸರಿನಲ್ಲಿ ಅಕ್ಕಮಹಾದೇವಿಯನ್ನು ಕುರಿತು ಸಣ್ಣಾಟ ಗಳನ್ನು ರಚಿಸಿದ್ದಾರೆ. ಆದರೆ ಈ ಎರಡೂ ಕೃತಿಗಳು ನಮಗೆ ಲಭ್ಯವಾಗಿಲ್ಲದಿರುವುದು ದೊಡ್ಡ ಕೊರತೆಯಾಗಿದೆ.

ನೀಲಕಂಠ ಪತ್ತಾರನು ಶಿವಾನಂದ ಕವಿಗಿಂತ ಕಿರಿಯನಾದರೂ ಸಣ್ಣಾಟ ರಚನೆಯಲ್ಲಿ ಆದ್ಯನೆನಿಸಿದ್ದಾನೆ. ಅದಲ್ಲದೇ ಶಿವಾನಂದ ಕವಿಯು ಕಾಲಾಧೀನನಾದ (೧೯೪೬) ತರುವಾಯ ೧೯೭೪ರವರೆಗೂ ಬದುಕಿದವನು. ಆಧುನಿಕ ಸಮಾಜ, ಜೀವನ ವಿಧಾನ ಕಂಡವನು. ಅದರಿಂದ ಪ್ರಸ್ತುತ ಸಣ್ಣಾಟದಲ್ಲಿ ಬಳಕೆಯಾಗಿರುವ ಕೆಲವು ಅನ್ಯದೇಶಿಯ ಪದಗಳ ಬಳಕೆ, ಸಮಕಾಲೀನ ವಿಷಯಗಳ ಪ್ರಸ್ತಾಪ ಮತ್ತು ಆಡುಭಾಷೆಯ ಬಳಕೆಯನ್ನು ನೋಡಿದರೆ ಕಾದ್ರೊಳ್ಳಿಯ ನೀಲಕಂಠಪ್ಪ ಪತ್ತಾರನು ಬರೆದ 'ಮಹಾದೇವಿಯಕ್ಕ' ಸಣ್ಣಾಟವೇ ಪ್ರಸ್ತುತ ಸಣ್ಣಾಟದ ಮೂಲಕೃತಿಯಾಗಿರಬಹುದೇ? ಎಂಬ ಸಂಶಯ ಹುಟ್ಟುತ್ತದೆ. ಆದರೆ ಹಣ್ಣಿಕೇರಿ ಶಿವಾನಂದ ಕವಿಯ 'ಉಡುತಡಿ ಮಹಾದೇವಿ' ಸಣ್ಣಾಟವೇ ಪ್ರಸ್ತುತ 'ಅಕ್ಕಮಹಾದೇವಿ' ಸಣ್ಣಾಟದ ಮೂಲಪ್ರತಿಯಾಗಿರುವ ಸಾಧ್ಯತೆಯನ್ನು ಸಮರ್ಥಿಸುವ ಕೆಲವು ಆಧಾರಗಳು ದೊರೆಯುತ್ತವೆ.

ಗೀತರೂಪದ ಆಟಗಳು ಸಂಭಾಷಣೆ ರೂಪಕ್ಕೆ ತಿರುಗಿದ ಎರಡನೆಯ ಘಟ್ಟದಲ್ಲಿ ರಚಿತ ವಾಗಿರಬಹುದಾದ ಶಿವಾನಂದ ಕವಿಯ "ಉಡುತಡಿ ಮಹಾದೇವಿ" ಸಣ್ಣಾಟದ ರಚನೆಯ ಕಾಲ ಸುಮಾರು ಕ್ರಿ.ಶ. ೧೯೩೦-೧೯೪೦ ಇರಬಹುದಾಗಿದೆ. ಯಾಕೆಂದರೆ ಶಿವಾನಂದ ಕವಿಯು ೧೯೪೬ರ ವರೆಗೂ ಬದುಕಿರುವುದರಿಂದ ಆತನು ಸಣ್ಣಾಟ ರಚನೆಯಲ್ಲಿ ಪಳಗಿದ ಸಂದರ್ಭವೂ ಅದೇ ಆಗಿರಬೇಕು. ಮೂಲಕೃತಿ ಲಭ್ಯವಾಗದ ಹೊರತು ಕವಿ, ಕೃತಿ ಮತ್ತು ಕೃತಿ ರಚನೆಯ ಕಾಲದ ಬಗೆಗೆ ನಿಖರವಾಗಿ ಹೇಳಲು ಸಾಧ್ಯವಾಗುವುದಿಲ್ಲ.

ಭಾಷೆ ಮತ್ತು ಹಾಡು : ದೇವಗಿರಿಯ ಸಣ್ಣಾಟದ ಪ್ರಸ್ತುತ ಪ್ರತಿಯು ಮೂಲ ಸಣ್ಣಾಟಕ್ಕಿಂತ ಸಾಕಷ್ಟು ಬದಲಾವಣೆಗಳಿಗೆ ಒಳಗಾದಂತೆ ತೋರುತ್ತದೆ. ತಲೆತಲಾಂತರದಿಂದ ಒಬ್ಬರಿಂದ ಒಬ್ಬರಿಗೆ ಹಸ್ತಪ್ರತಿಯ ಮೂಲಕವೇ ಪ್ರದರ್ಶನಗೊಳ್ಳುತ್ತ ಬರುವಾಗ ಹಸ್ತಪ್ರತಿಯಲ್ಲಿ ಸ್ಥಳೀಯವಾದ ಅನೇಕ ಹೊಸ ಸಂಗತಿಗಳು ಸೇರ್ಪಡೆಯಾಗುವುದುಂಟು. ಪ್ರಾದೇಶಿಕ ಭಾಷೆಯ ವಿಶಿಷ್ಟ ನುಡಿಗಟ್ಟುಗಳು, ಗಾದೆ, ನಾಣ್ಣುಡಿ, ಪಡೆನುಡಿ, ಆಚರಣೆ-ಸಂಪ್ರದಾಯ ಇತ್ಯಾದಿ

ಅನೇಕ ವಿಷಯಗಳು ಹಸ್ತಪ್ರತಿಯಲ್ಲಿ ಬೆರೆಯುವುದುಂಟು. ಅಂತೆಯೇ ಅಕ್ಕಮಹಾದೇವಿ ಸಣ್ಣಾಟವು ಕಾಲಾಂತರದಲ್ಲಿ ಅನೇಕ ಮಾರ್ಪಾಟುಗಳನ್ನು ಹೊಂದಿರಲು ಸಾಧ್ಯ.

ಪ್ರಸ್ತುತ ಸಣ್ಣಾಟದಲ್ಲಿಯ ಪಾತ್ರ-ಸನ್ನಿವೇಶ, ಕಥಾಸಂದರ್ಭಾನುಸಾರವಾಗಿ ಬರುವ ಹಾಡುಗಳಲ್ಲಿ ವಿಶೇಷವಾದ ಯಾವ ಕಾವ್ಯಗುಣವೂ ಇಲ್ಲ. ಸಾಮಾನ್ಯವಾಗಿ ಐದು ಮಾತ್ರಾಗಣಗಳ ಆಧಿಕ್ಯವೇ ಹೆಚ್ಚು. ಅಂತ್ಯಪ್ರಾಸ ಆದಿಪ್ರಾಸ ಹಾಗೂ ಹಾಡಿನ ಪಾದಗಳಲ್ಲಿ ನಿಯತಿ ಇಲ್ಲ, ಹಾಡುಗಳಿಗೆ ಛಂದಸ್ಸಿನ ಯಾವುದೇ ಸುಸಂಬದ್ಧತೆಯಾಗಲಿ, ವೈವಿಧ್ಯತೆಯಾಗಲಿ ಕಾಣದು. ಮಾತ್ರಾಗಣ ಮತ್ತು ಅಂಶಗಣ ಬಂಧದ ಮಿಶ್ರಣವೂ ಗೋಚರಿಸುತ್ತದೆ. ಸಂಭಾಷಣೆಯ ನಾಟಕೀಯ ಭಾಷೆ ಶಿಷ್ಟ ಹಾಗೂ ಆಡುಭಾಷೆಯ ಸಂಯುಕ್ತ ರೂಪದ್ದಾಗಿದೆ. ಪುನರುಕ್ತಿ ಸಾಮಾನ್ಯ, ಕಥಾನುಸಾರವಾಗಿ ಬರುವ ಹಾಡಿನ ವಿಷಯವೇ ಮಾತುಗಳಲ್ಲಿ ಪುನರಾವೃತ್ತಿಗೊಳ್ಳುವುದು. ಇದು ಬಯಲಾಟದ ಜಾಯಮಾನವೇ ಆಗಿದೆ. ಸತ್ವಯುತವಾದ ದೇಸಿಪದಗಳು ಮಾತಿಗೆ ಮೊನಚನ್ನು ತಂದಿವೆ. ಉದಾ: ಗಡಾ, ಬಡಾ, ಬೇತು, ಮಸಲತ್ತು, ಗಜಂನಿಲ್ಲು, ಉಸಾಬರಿ, ಹರಕತ್ತು, ಕವುಕ್ಕನೇ, ಲಗು, ಬೆರಕಿ, ತ್ರಾಸು, ನಿತ್ರಾಣ ಇತ್ಯಾದಿ.

ಪ್ರಸ್ತುತ ಸಣ್ಣಾಟದಲ್ಲಿ ಬರುವ 'ಅಕ್ಕಮಹಾದೇವಿ-ಕೌಶಿಕ, ಕೌಶಿಕ-ದೂತಿ, ಚಾರುಮತಿ-ದೂತಿ, ಅಲ್ಲಮಪ್ರಭು-ಅಕ್ಕಮಹಾದೇವಿ ಪಾತ್ರಗಳ ಈ ಕೆಲವು ಸನ್ನಿವೇಶಗಳಲ್ಲಿ ಸಂಭಾಷಣೆಗಳಲ್ಲಿರುವ ತೀವ್ರೆ, ಕ್ರಿಯಾಶೀಲತೆ ಮತ್ತು ನಾಟಕೀಯತೆ ಸಣ್ಣಾಟದ ವಿಶೇಷ ಗುಣವಾಗಿದೆ. ದೂತಿಯ ಮಾತುಗಳಂತೂ ಅಪ್ಪಟ ಜಾನಪದೀಯ ಸೊಗಡಿನಿಂದ ಜೀವಂತವಾಗಿವೆ. ಪ್ರಾದೇಶಿಕ ಭಾಷೆಯ ಸತ್ವ-ಸ್ವರೂಪವನ್ನು ಸಮರ್ಥವಾಗಿ ಸೆರೆಹಿಡಿದಿಟ್ಟಿವೆ. ಕೆಲವೊಮ್ಮೆ ಪಾತ್ರಕ್ಕೆ ಉಚಿತವಲ್ಲದ ಎಲ್ಲೆ ಮೀರಿದ ಭಾಷೆಯ ಬಳಕೆಯಿಂದಾಗಿ ಪಾತ್ರಗಳ ಸ್ವಭಾವ ಗುಣಧರ್ಮಕ್ಕೆ ಊನವುಂಟಾಗಿದೆ, ಕೌಶಿಕ ಅಕ್ಕಮಹಾದೇವಿಯರ ಸಭಾಷಣೆಗಳಲ್ಲಿಯೂ ಇಂಥ ಅಪಪ್ರಯೋಗಗಳು ನುಸುಳಿಕೊಂಡಿವೆ.

ಆಧುನಿಕತೆಯ ಪ್ರಭಾವ : ಎಲ್ಲ ಸಣ್ಣಾಟಗಳೂ ಕಾಲಾಂತರದಲ್ಲಿ ಆಧುನಿಕ ಪ್ರಭಾವಕ್ಕೆ ಒಳಗಾದಂತೆ 'ಅಕ್ಕಮಹಾದೇವಿ' ಸಣ್ಣಾಟವೂ ಸಮಕಾಲೀನ ವಿದ್ಯಮಾನಗಳಿಂದ ಪ್ರಭಾವಿತ ವಾಗಿದೆ, ಭಾಷೆಯ ಬಳಕೆಯಲ್ಲಿ ಮಾತ್ರವಲ್ಲದೇ ಹಲವಾರು ಸನ್ನಿವೇಶಗಳಲ್ಲಿ ಆಧುನಿಕ ಮನೋ ಧರ್ಮವನ್ನು ಕಥಾಸಂವಿಧಾನಕ್ಕೆ ಧಕ್ಕೆ ಬರದಂತೆ ನಿರೂಪಿಸಿರುವುದು ಅರ್ಥಪೂರ್ಣವಾಗಿದೆ.

ಉದಾ :

೧. **ಈಗಿನ ಜನ ಪರಮಾತ್ಮನನ್ನು ಮರೆತು**
ಸುಖ ಬರಲೆಂತ ಆಶೆ ಮಾಡುತ್ತಾರೋ
ದುಷ್ಟಕಾಲಕ ಮಳೆ ಬೆಳೆ ಹೋಗಿ,
ಕಾಲರಾ ಪ್ಲೇಗು ಬ್ಯಾನಿ ಹಬ್ಬತಾವೋ
ಕಾಲ ಬದಲಾತು ಜನರಿಗೆ ಬುದ್ಧಿ ಬರಲಿಲ್ಲೋ।

(ಅಕ್ಕಮಹಾದೇವಿ ಪದ-ಪುಟ ೨೦)

೨. ಅಕ್ಕಮಹಾದೇವಿಯನ್ನು ಒಪ್ಪಿಸಿಕೊಂಡು ಬರುವಂತೆ ಕೌಶಿಕನು

ದೂತಿಗೆ ಬಹುಮಾನ ಕೊಡುವ ಸಂದರ್ಭ,

'ತೆಗೆದು ಕೊಡುವ ಡ್ರೆಸ್'

(ಕೌಶಿಕನ ಪದ ಪುಟ – ೫೩)

ದೂತಿಯ ಹಂಚಿಕೆಯಂತೆ ಚಾರುಮತಿ ರಾಜಪೋಷಾಕು ಧರಿಸುವ ಸಂದರ್ಭ

'ನಾ ಧರಿಸುವ ಡ್ರೆಸ್'

(ಚಾರುಮತಿ ಪದ ಪುಟ–೧೨೪)

೩. ಹೀಗೆ ಆಂಗ್ಲಪದ ಡ್ರೆಸ್, ಕಾಲರಾ, ಪ್ಲೇಗು ಬಳಕೆಯಾದಂತೆ ಇನ್ನೂ ಕೆಲವು ಅನ್ಯದೇಶೀಯ ಪದ ಬಳಕೆಯನ್ನು ನೋಡಬಹುದು.

ಉದಾ: ಹಕೀಕಿತ್ತು, ಕಬೂಲಿ, ಚೌಲಾ, ಮಸಲತ್ತು, ಆಖೈರು ಇತ್ಯಾದಿ.

ಒಟ್ಟಾರೆ 'ಅಕ್ಕಮಹಾದೇವಿ' ಸಣ್ಣಾಟವು ವೀರಶೈವ ಧರ್ಮದ ಹಿರಿಮೆಯನ್ನು ಸಾರುವ ಮೂಲ ಆಶಯ ಹೊಂದಿದ್ದು, ಜಾನಪದೀಯ ಲೇಪದಿಂದಾಗಿ ಮೆರಗು ಪಡೆದಿದೆ. ಪವಾಡ ಮಯ ಸಂಗತಿಗಳೂ ಜರುಗುತ್ತವೆ. ಅನುಭಾವಿಯಾದ ಅಲ್ಲಮಪ್ರಭು ಸಾಮಾನ್ಯನಂತಿದ್ದು, ಲೋಕಕಲ್ಯಾಣಕ್ಕಾಗಿ "ಜಂಗಮಲಿಂಗ"ವಾಗಿದ್ದಾನೆ. ಜನಸಾಮಾನ್ಯರಷ್ಟೇ ಅಲ್ಲ, ಪ್ರಾಜ್ಞರ ತಿಳುವಳಿಕೆಗೂ ಅಚ್ಚರಿ ಮೂಡಿಸುವ ರೀತಿಯಲ್ಲಿ "ಅಕ್ಕಮಹಾದೇವಿ" ಚಿತ್ರಿತಗೊಂಡಿದ್ದಾಳೆ. ಶಿವಶರಣೆ ಅಕ್ಕಮಹಾದೇವಿಯ ಘನ ವ್ಯಕ್ತಿತ್ವಕ್ಕೆ ಯಾವುದೇ ರೀತಿಯಲ್ಲಿ ಕಳಂಕ ಉಂಟಾಗದಂತೆ ಆಕೆಯ ವ್ಯಕ್ತಿತ್ವವನ್ನು ಉನ್ನತೀಕರಿಸಿದ್ದಾನೆ.

ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿರುವ ಶರಣರ ಸಣ್ಣಾಟಗಳ ಪರಂಪರೆಯಲ್ಲಿ ಪ್ರಮುಖವಾಗಿರುವ 'ಅಕ್ಕಮಹಾದೇವಿ' ಸಣ್ಣಾಟವು ಜಾನಪದ ಸಂವೇದನೆಯಲ್ಲಿ ಜೀವಂತ ವಾಗಿರುವ ಮಹಾದೇವಿಯಕ್ಕನ ವ್ಯಕ್ತಿತ್ವದ ಕಥನವಾಗಿದೆ. ಚರಿತ್ರೆಗಿಂತಲೂ ಚಾರಿತ್ರ್ಯ ನಿರೂಪಣೆಗೇ ಆದ್ಯತೆ ನೀಡಿರುವುದು ಇದರ ವೈಶಿಷ್ಟ್ಯ. ಶಿವಭಕ್ತಳಾದ ಅಕ್ಕನ ಲಿಂಗಭಕ್ತಿ ಮತ್ತು ವಿರಕ್ತಿಯ ಶಕ್ತಿಯನ್ನು, ಶರಣರ ಹಿರಿಮೆಯನ್ನು ಸಾರುವುದೇ ಪ್ರಸ್ತುತ ಸಣ್ಣಾಟದ ಪ್ರಮುಖ ಆಶಯ ವಾಗಿದೆ. ಅಂತೆಯೇ ಮಹಾದೇವಿಯಕ್ಕನ ಚಾರಿತ್ರಿಕ ವಿವರಗಳು ಉಪೇಕ್ಷಿತ ಗೊಂಡಿದ್ದರೂ, ಜನಮಾನಸದಲ್ಲಿ ಪರಂಪರೆಯಾಗುಳಿದಿರುವ ವಿರಾಗಿಣಿ ಅಕ್ಕಮಹಾದೇವಿಯ ವ್ಯಕ್ತಿತ್ವವನ್ನು ಪರಿಚಯಿಸುವಲ್ಲಿ ಸಣ್ಣಾಟವು ಸಫಲವಾಗಿದೆ.

ಕಳೆದ ಇಪ್ಪತ್ತು ವರ್ಷಗಳಲ್ಲಿ ನನಗೆ ದೊರಕಿರುವ 'ಅಕ್ಕಮಹಾದೇವಿ' ಸಣ್ಣಾದ ಎರಡು ನಕಲು ಪ್ರತಿಗಳ ಹಿನ್ನೆಲೆಯಲ್ಲಿ ಸಂಪಾದಿಸಿರುವ ಪ್ರಸ್ತುತ ಸಣ್ಣಾಟವು ಕಾಲಕಾಲಕ್ಕೆ ಸಾಕಷ್ಟು ಬದಲಾವಣೆಗಳೊಗೊಳಗಾದಂತೆ ತೋರುತ್ತದೆ. ೧೯೭೬ ಮತ್ತು ೧೯೭೦ರಲ್ಲಿ ಹಾವೇರಿ ತಾಲೂಕಿನ ದೇವಗಿರಿ ಗ್ರಾಮದಲ್ಲಿ ಸಂಗ್ರಹಿಸಲಾದ ಎರಡೂ ಹಸ್ತಪ್ರತಿಗಳಲ್ಲಿ ಗಮನಾರ್ಹ ಬದಲಾವಣೆಗಳಿಲ್ಲವಾದರೆ, ಇವೆರಡೂ ನಕಲು ಪ್ರತಿಗಳಿಗೆ ಆಕರವಾದ ಮೂಲಪ್ರತಿ ಒಂದೇ ಆಗಿದೆ. ಆದರೆ ಸಣ್ಣಾಟದ ಪದ್ಯ ಮತ್ತು ಗದ್ಯಭಾಗದಲ್ಲಿರುವ ಕೆಲವು ವಿರೋಧಾಭಾಸಗಳನ್ನು ಗಮನಿಸಿದರೆ ಸಣ್ಣಾಟದ ಮೂಲಕ ಕಥೆಯು ಆಯಾ ಪ್ರದರ್ಶನಕಾರರ ಅಗತ್ಯ–ಅಭಿರುಚಿಗಳಿಗೆ ತಕ್ಕಂತೆ ಮಾರ್ಪಾಡುಗಳನ್ನು ಹೊಂದಿರುವಂತೆ ತೋರುತ್ತದೆ, ಶಿಷ್ಟಸಾಹಿತ್ಯವು ನೀಡುವ ಅಕ್ಕನ ಚಾರಿತ್ರಿಕ ವಿವರಗಳಿಗೆ ನಿಷ್ಠವಾಗಿಯೇ ರಚನೆಯಾಗಿರಬಹುದಾದ ಪ್ರಸ್ತುತ

ಸಣ್ಣಾಟದ ಮೂಲ ಕಥಾಸಂವಿಧಾನವು ನಂತರದ ಅವಧಿಯಲ್ಲಿ ಮೊಟಕುಗೊಂಡಂತೆ ಭಾಸವಾಗುತ್ತದೆ. ಕೌಶಿಕನ ಪ್ರಸಂಗದ ನಂತರ ಉಡುತಡಿಯನ್ನು ತ್ಯಜಿಸಿ ನಡೆವ ಮಹಾದೇವಿಯಕ್ಕ ಕಲ್ಯಾಣಕ್ಕೆ ಬರುತ್ತಾಳೆ. ಅನುಭವ ಮಂಟಪದಲ್ಲಿ ಶಿವಶರಣರಿಂದ ಅನುಭಾವದ ಪರೀಕ್ಷೆಯನ್ನು ಎದುರಿಸುತ್ತಾಳೆ. ನಂತರ ಪ್ರಭುದೇವರ ನಿರ್ದೇಶನದಂತೆ ಶ್ರೀಶೈಲದ ಕದಳಿವನಕ್ಕೆ ಹೋಗಿ ಲಿಂಗೈಕ್ಯಳಾಗುತ್ತಾಳೆ. ಮಹಾದೇವಿಯಕ್ಕನ ವಚನಗಳು ಮತ್ತು ಸಮಕಾಲೀನ ಶರಣರ ಉಲ್ಲೇಖಗಳೂ ಈ ಸಂಗತಿಗಳನ್ನು ಬೆಂಬಲಿಸುತ್ತವೆ. ಆದರೆ ಪ್ರಸ್ತುತ ಸಣ್ಣಾಟದಲ್ಲಿ ಅಕ್ಕನ ಉತ್ತರಾರ್ಧ ಬದುಕಿನ ಈ ವಿವರಗಳು ಸಂಪೂರ್ಣ ಬದಲಾಗಿವೆ. ಉಡುತಡಿಯನ್ನು ತ್ಯಜಿಸಿದ ಮಹಾದೇವಿಯಕ್ಕ, ಶಿವಭಕ್ತನಾಗಲು ಹಂಬಲಿಸುವ ಕೌಶಿಕನಿಗೆ ಪ್ರಭುದೇವರಿಂದ ಲಿಂಗಧಾರಣ ಮಾಡಿಸುವ ಉದ್ದೇಶದಿಂದ ನೇರವಾಗಿ ಶ್ರೀಶೈಲಕ್ಕೆ ಹೋಗುತ್ತಾಳೆ. ಕಲ್ಯಾಣ ಮತ್ತು ಶಿವಶರಣರ ಪ್ರಸ್ತಾಪವನ್ನು ಕೈಬಿಟ್ಟಿರುವ ಪ್ರಸ್ತುತ ಸಣ್ಣಾಟದಲ್ಲಿ ಕಥೆಯನ್ನು ಹೆಚ್ಚು ರೋಚಕಗೊಳಿಸಲು ಪೂರಕವಾಗುವ ಹೊಸ ಸನ್ನಿವೇಶಗಳನ್ನು ಅಳವಡಿಸ ಲಾಗಿದೆ. ಉದಾ: ಅಕ್ಕನ ಸೀರೆ ಅಕ್ಷಯವಾಗುವುದು, ಶಾಪದಿಂದ ಮೈಯಲ್ಲಿ ಬೆಂಕಿ ಹುಟ್ಟಿಕೊಳ್ಳುವುದು, ಬೇಕೆಂದಾಗ ಮಹಾದೇವಿಯಕ್ಕ, ಅಲ್ಲಮರು ಅದೃಶ್ಯರಾಗುವುದು ಇತ್ಯಾದಿ.

ಮಹಾದೇವಿಯಕ್ಕನ ಹುಟ್ಟೂರು 'ಉಡುತಡಿ' ಎನ್ನುವಲ್ಲಿ ಪ್ರಾಚೀನ ಕಾವ್ಯಪುರಾಣಗಳು ಏಕಾಭಿಪ್ರಾಯ ವ್ಯಕ್ತಪಡಿಸಿವೆ. ಆದರೆ ಅಕ್ಕನ ತಂದೆ-ತಾಯಿಯ ಹೆಸರುಗಳಲ್ಲಿ ಒಮ್ಮತವಿಲ್ಲ. ಹರಿಹರನು ಹೇಳುವಂತೆ ನಿರ್ಮಲ ಸುಮತಿ ಎಂಬ ಹೆಸರುಗಳು ಸಾಂಕೇತಿಕವೆನಿಸಿದರೂ ಮುಂದಿನ ಬಹುತೇಕ ಕವಿಗಳು ಸರ್ವಸಾಮಾನ್ಯವಾಗಿ ಈ ಹೆಸರುಗಳನ್ನೇ ಒಪ್ಪಿಕೊಂಡಿದ್ದಾರೆ. ಪ್ರಸ್ತುತ ಸಣ್ಣಾಟದ ಮೂಲ ಪ್ರತಿಯಲ್ಲಿಯೂ ಸುಮತಿ-ನಿರ್ಮಲ ಎಂಬ ಹೆಸರುಗಳೇ ಉಕ್ತವಾಗಿದ್ದರೂ, ಮುಂದಿನ ನಕಲು ಪ್ರತಿಗಳಲ್ಲಿ ಬದಲಾವಣೆ ನಡೆದಂತೆ ಕಂಡುಬರುತ್ತದೆ. ಸಣ್ಣಾಟದ ಮಂಗಲ ಪದ್ಯದಲ್ಲಿ ಹೇಳಿರುವಂತೆ ಮಹಾದೇವಿಯಕ್ಕನು "ಸತ್ಯನಿರ್ಮಲ ಸುಮತಿ ಗರ್ಭದಿ ಸಾತ್ವಿಕ ಕಳೆ ಮೂರ್ತಿಗೊಳ್ಳುವಂತೆ ಪ್ರೀತಿಯಿಂದ ಧರೆಗಿಳಿದು ಬಂದಿಹ ನಿರ್ಮಲದೇವಿ"ಯಾಗಿದ್ದಾಳೆ. ಪದ್ಯಭಾಗದಲ್ಲಿ ಸ್ಪಷ್ಟವಾಗಿರುವ ಈ ಚಾರಿತ್ರಿಕ ವಿವರಣೆಯು ಗದ್ಯಭಾಗದಲ್ಲಿ ಬದಲಾವಣೆ ಹೊಂದಿದೆ. ಎರಡನೆಯ ಅಂಕದ ಪ್ರಾರಂಭದಲ್ಲಿ ಅಕ್ಕನ ತಂದೆ ನಿರ್ಮಲಶೆಟ್ಟಿಯ ಮೂಲಕ ಹೇಳಿಸಿರುವಂತೆ ಅಕ್ಕನ ತಾಯಿಯ ಹೆಸರು "ಬಸಲಿಂಗಿ". ಆಕೆ ದುರಗವ್ವನ ಬೇನೆಯಿಂದ ಮೃತಪಟ್ಟಿದ್ದಾಳೆ. ಜಾನಪದ ಪಠ್ಯಗಳು ಕಾಲಕಾಲಕ್ಕೆ ಪಾಠಾಂತರ ಗಳಿಗೆ ಒಳಗಾಗುವುದರಿಂದ ಇಂಥ ಪ್ರಕ್ಷಿಪ್ತಗಳು, ವೈರುಧ್ಯಗಳು ಸಾಮಾನ್ಯವಾಗಿ ಕಂಡು ಬರುತ್ತವೆ. ಪ್ರಸ್ತುತ ಸಣ್ಣಾಟವು ಮೂಲದಲ್ಲಿ ಚಾರಿತ್ರಿಕ ವಿವರಗಳಿಗೆ ನಿಷ್ಠವಾಗಿಯೇ ರಚಿತವಾಗಿ ನಂತರದ ಹಂತಗಳಲ್ಲಿ ಪಾಠಾಂತರಗಳಿಗೆ ಒಳಗಾಗದಂತೆ ಕಂಡುಬರುತ್ತದೆ.

ಮಹಾದೇವಿಯಕ್ಕನ ವಿವಾಹ ಪ್ರಸಂಗವು ಇಂದಿಗೂ ಕಗ್ಗಂಟಾಗಿಯೇ ಉಳಿದಿರುವ ಜಟಿಲ ಸಮಸ್ಯೆ. ಪ್ರಾಚೀನ ಕೃತಿಗಳಲ್ಲಿ ಈ ಕುರಿತು ಭಿನ್ನಾಭಿಪ್ರಾಯಗಳಿವೆ. ಆಧುನಿಕ ಸಾಹಿತ್ಯ ದಲ್ಲಿಯೂ ಇದು ಸಮಸ್ಯಾತ್ಮಕ ಸಂಗತಿಯಾಗಿಯೇ ಮುಂದುವರೆದಿದೆ. ಮಹಾದೇವಿಯಕ್ಕನು ಮೂರು ಕರಾರುಗಳೊಂದಿಗೆ ಕೌಶಿಕನನ್ನು ಮದುವೆಯಾಗಿ ನಂತರ ಕರಾರುಗಳನ್ನು ಮುರಿದ ಕೌಶಿಕನನ್ನು ತ್ಯಜಿಸಿ ಹೋದಳೆನ್ನುವ ಹರಿಹರ, ಚೆನ್ನಬಸವಾಂಕ ಕವಿಗಳ ಹೇಳಿಕೆಯನ್ನು ಮುಂದಿನ ಕೆಲವು ಕವಿಗಳು ಭಾಗಶಃ ಅನುಮೋದಿಸಿದರೆ, ಇನ್ನೂ ಕೆಲವರು ತೇಲಿಸಿಬಿಟ್ಟಿದ್ದಾರೆ.

ಶೂನ್ಯಸಂಪಾದನೆಗಳಲ್ಲಿ ಈ ಕುರಿತಂತೆ ಖಚಿತ ವಿವರಗಳಿಲ್ಲ. "ಭವಿಯ ಸಂಗಮಂ ತೊರೆದು" ಲಿಂಗಸಂಗಿಯಾದಳೆನ್ನುವ ಮೊದಲನೆಯ ಶೂನ್ಯ ಸಂಪಾದನೆಯ ಅಭಿಪ್ರಾಯವನ್ನು ಮುಂದಿನ ಸಂಪಾದನೆಗಳು ಅಲ್ಪಸ್ವಲ್ಪ ಬದಲಾವಣೆ ಮಾಡಿಕೊಂಡಿವೆ. ವಿವಾಹದ ಪ್ರಸ್ತಾಪವನ್ನು ತೇಲಿಸಿ ಮುಂದೆ ಹೋದಂತೆ ಭಾಸವಾಗುತ್ತದೆ. ಹೀಗೆ ಇಂದಿಗೂ ಅನಿರ್ಣಿತವಾಗಿಯೇ ಉಳಿದಿರುವ ವಿವಾಹದ ವಿಷಯವನ್ನು ಪ್ರಸ್ತುತ ಸಣ್ಣಾಟವು ನಿರ್ವಹಿಸುವ ವಿಧಾನ ಬೆರಗುಮೂಡಿಸುತ್ತದೆ. ಮಹಾದೇವಿಯಕ್ಕನ ಘನತೆಗೆ ಚ್ಯುತಿ ಬರದಂತೆ ಪ್ರಸ್ತುತ ವಿವಾಹ ಸನ್ನಿವೇಶವನ್ನು ಮಾರ್ಪಡಿಸಿ ಕೊಂಡಿರುವ ಸಣ್ಣಾಟದ ಕವಿಯು ಅಕ್ಕಮಹಾದೇವಿಯ ಶಿವಭಕ್ತಿಯ ಪಾರಮ್ಯವನ್ನು ಪ್ರದರ್ಶಿಸಲು ವಿವಾಹ ಪ್ರಸಂಗವನ್ನು ಸಮರ್ಥವಾಗಿ ಬಳಸಿಕೊಂಡಿದ್ದಾನೆ. ಶಿವಭಕ್ತೆಯಾದ ಮಹಾದೇವಿಯಕ್ಕನು ಪಾರ್ವತಿಯ ಸಾತ್ವಿಕಕಳೆ ಎನ್ನುವ ಸಾಂಪ್ರದಾಯಿಕ ನಂಬಿಕೆಯನ್ನು ಸಮರ್ಥಿಸುವಂತೆ ವಿವಾಹ ಪ್ರಸಂಗಕ್ಕೆ ನೀಡಿರುವ ತಿರುವು ಅರ್ಥಪೂರ್ಣವಾಗಿದೆ. ಮಹಾದೇವಿಯಕ್ಕನು ವೀರವಿರಕ್ತೆ, ಶ್ರೇಷ್ಠ ಶಿವಭಕ್ತೆ ಎಂದು ನಂಬಿರುವ ಜನಪದರಿಗೆ ಮಹಾದೇವಿಯಕ್ಕನ ವಿವಾಹವು ಒಂದು ಸಮಸ್ಯೆಯಾಗಿ ಕಂಡಿಲ್ಲ. ಕೌಸಿಕನ ಬಯಕೆಯನ್ನು ನಿರಾಕರಿಸಿ ತನ್ನ ಸುಜ್ಞಾನ–ಸದ್ಭಕ್ತಿ–ವಿರಕ್ತಿಯ ಶಕ್ತಿಯಿಂದ ಆತನ ಕಾಮುಕತನವನ್ನು ಪರಿಹರಿಸಿ, ಶಿವಭಕ್ತನನ್ನಾಗಿ ಪರಿವರ್ತಿಸಿದಳೆನ್ನುವ ಸಣ್ಣಾಟದ ಧೋರಣೆಯಲ್ಲಿ ಅಕ್ಕಮಹಾದೇವಿಯ ಬಗೆಗೆ ಜನಪದರದಲ್ಲಿರುವ ಭಕ್ತಿ–ಶ್ರದ್ಧೆ ವ್ಯಕ್ತವಾಗಿದೆ.

ಮಹಾದೇವಿಯಕ್ಕನ 'ದಿಗಂಬರತ್ವ'ವು ಆಕೆಯ ಚರಿತ್ರೆಯ ಅತ್ಯಂತ ವಿವಾದಾಸ್ಪದ ವಿಚಾರ. 'ದಿಗಂಬರವೇ ದಿವ್ಯಾಂಬರ' ಎಂದು ಅಂಗಸಂಗ ತೊರೆದು ಹೊರಟ ಮಹಾದೇವಿಯಕ್ಕನ ವಿರಕ್ತಿಯ ಅತ್ಯುನ್ನತ ನಿಲವನ್ನು ಸಂಕೇತಿಸುವ ಈ ಸಂಗತಿಯನ್ನು ಪ್ರಾಚೀನ ಕಾವ್ಯ ಪುರಾಣಗಳು ಏಕಪ್ರಕಾರವಾಗಿ ಬೆಂಬಲಿಸುತ್ತವೆ. ಕೇಶವೆಂಬ ಅಂಬರವನ್ನು ಮುಸುಕಿಟ್ಟು ಕೊಂಡು ಉಡುತಡಿಯನ್ನು ತೊರೆದು ಹೊರಟಳೆನ್ನುವ ಶಿಷ್ಟಸಾಹಿತ್ಯದ ಅಭಿಪ್ರಾಯವನ್ನು ಒಪ್ಪದ ಜನಪದರು ಈ ಪ್ರಸಂಗಕ್ಕೆ ಪೌರಾಣಿಕತೆಯ ಸ್ಪರ್ಶನೀಡಿ ಸಮಸ್ಯೆಯನ್ನು ಸುಲಭವಾಗಿ ಬಗೆಹರಿಸಿಕೊಂಡಿದ್ದಾರೆ. ಕಾಮೋನ್ಮತ್ತನಾದ ಕೌಶಿಕನು ಅಕ್ಕನನ್ನು ಬಲಾತ್ಕರಿಸಲು ಹೋಗಿ ಆಕೆಯ ಸೀರೆಯನ್ನು ಎಳೆಯುತ್ತಾನೆ. ಸೀರೆ ಅಕ್ಷಯವಾಗುತ್ತದೆ. (ಮಹಾಭಾರತದ ದ್ರೌಪದಿಯು ವಸ್ತ್ರಾಪಹರಣದ ಪ್ರಸಂಗದ ಪ್ರಭಾವವಿದೆ.) ಎಷ್ಟು ಸೆಳೆದರೂ ಸೀರೆ ಮುಗಿಯ ದಿದ್ದಾಗ ಕೌತುಕಗೊಂಡ ಕೌಶಿಕ ಮತ್ತೆ ಮತ್ತೆ ಎಳೆಯಲು ಪ್ರಯತ್ನಿಸುತ್ತಾನೆ. ಕೋಪಗೊಂಡ ಮಹಾದೇವಿಯಕ್ಕನು ಶಿವಭಕ್ತೆಯಾದ ತನ್ನ ಮೇಲೆ ಕೈಮಾಡಿದ ಉದ್ಧಟತನಕ್ಕಾಗಿ ಕೌಶಿಕನಿಗೆ ಶಾಪಕೊಡುತ್ತಾಳೆ. ಆಗ ಕೌಶಿಕನ ಮೈಯಲ್ಲಿ ಅಗ್ನಿಜ್ವಾಲೆ ಹುಟ್ಟಿಕೊಳ್ಳುತ್ತದೆ. ಅಕ್ಕನ ಶಿವಭಕ್ತಿ, ವಿರಕ್ತಿಯ ಶಕ್ತಿಯನ್ನು ಮನಗಂಡ ಕೌಶಿಕನು ಪಶ್ಚಾತ್ತಾಪದಿಂದ ಕ್ಷಮೆಬೇಡುತ್ತಾನೆ. ಶಿವಭಕ್ತನಾಗಿ ಪರಿವರ್ತನೆಹೊಂದುತ್ತಾನೆ. ಮಹಾದೇವಿಯಕ್ಕನನ್ನು 'ಗುರುಮಾತೆ'ಯಾಗಿ ಸ್ವೀಕರಿಸುತ್ತಾನೆ. ಹೀಗೆ ಮಹಾದೇವಿಯಕ್ಕನ ದಿಗಂಬರತ್ವ ಅಥವಾ ಕೇಶಾಂಬರತ್ವದ ಸಮಸ್ಯೆಯೇ ಸಣ್ಣಾಟದಲ್ಲಿ ಉದ್ಭವಿಸುವುದಿಲ್ಲ.

ಕವಿ ಹರಿಹರನನ್ನು ಹೊರತುಪಡಿಸಿ, ಉಳಿದೆಲ್ಲ ಪ್ರಾಚೀನ ಕನ್ನಡ ಕಾವ್ಯಗಳು ಚಿತ್ರಿಸುವಂತೆ, ಮಹಾದೇವಿಯಕ್ಕ ಉಡುತಡಿಯನ್ನು ತೊರೆದು ನೇರವಾಗಿ ಕಲ್ಯಾಣಕ್ಕೆ ಹೋಗುತ್ತಾಳೆ. ಅನುಭವಮಂಟಪದಲ್ಲಿ ಶರಣರಿಂದ ಪರೀಕ್ಷೆಯನ್ನು ಎದುರಿಸುತ್ತಾಳೆ. ನಂತರ ಪ್ರಭುದೇವರ

ನಿರ್ದೇಶನದಂತೆ ಶ್ರೀಶೈಲದ ಕದಳಿಗೆ ಹೋಗಿ ಲಿಂಗೈಕ್ಯಳಾಗುತ್ತಾಳೆ. ಸಮಕಾಲೀನ ಶರಣರ ವಚನಗಳು ಮತ್ತು ಅಕ್ಕನ ಸ್ವರಚಿತ ಸಾಹಿತ್ಯವು ಪುಷ್ಟೀಕರಿಸುವ ಅಕ್ಕನ ಉತ್ತರಾರ್ಧ ಬದುಕಿನ ಈ ಸಂಗತಿಯನ್ನು ಪ್ರಸ್ತುತ ಸಣ್ಣಾಟದಲ್ಲಿ ಕೈಬಿಡಲಾಗಿದೆ. ಕಾಮುಕ ಕೌಶಿಕನನ್ನು ಭಕ್ತನಾಗಿ ಪರಿವರ್ತಿಸಿದ ನಂತರ ಆತನಿಗೆ ಪ್ರಭುದೇವರಿಂದ ಲಿಂಗಧಾರಣ ಮಾಡಿಸುವ ಉದ್ದೇಶದಿಂದ ಅಕ್ಕಮಹಾದೇವಿ ಉಡುತಡಿಯನ್ನು ತೊರೆದು ಶ್ರೀಶೈಲಕ್ಕೆ ನಡೆಯುತ್ತಾಳೆ. ಅಕ್ಕನ ಬದುಕಿನ ಮಹತ್ವದ ಘಟನೆಗಳಾಗಿರುವ ಕಲ್ಯಾಣದ ಪಯಣ ಮತ್ತು ಅನುಭವಮಂಟಪದ ಪ್ರಸಂಗಗಳನ್ನು ಸಣ್ಣಾಟದಲ್ಲಿ ಸಂಪೂರ್ಣವಾಗಿ ಕೈಬಿಡಲಾಗಿದೆ.

ಹೀಗೆ ಮಹಾದೇವಿಯಕ್ಕನ ಜೀವನದ ಅತಿಮುಖ್ಯ ಘಟನೆಗಳಾಗಿರುವ ಬಸವಾದಿ ಕಲ್ಯಾಣದ ಶರಣರ ಪ್ರಸ್ತಾಪವನ್ನು ಸಂಪೂರ್ಣವಾಗಿ ಮೊಟಕುಗೊಳಿಸಿ ಅಕ್ಕನನ್ನು ಉಡುತಡಿಯಿಂದ ನೇರವಾಗಿ ಶ್ರೀಶೈಲಕ್ಕೆ ಕಳಿಸಿರುವ ಸಣ್ಣಾಟದ ಕಥಾವಿನ್ಯಾಸವು ಮೂಲ ಸಣ್ಣಾಟದ ಸಂವಿಧಾನದಲ್ಲಿರದೇ, ನಂತರದ ಪ್ರದರ್ಶನಗಳಲ್ಲಿ ಅನುಕೂಲಕ್ಕೆ ತಕ್ಕಂತೆ ನಡೆದಿರುವ ಕತ್ತರಿ ಪ್ರಯೋಗಗಳ ಫಲವಾಗಿರಬಹುದೆನ್ನುವ ಸಂಶಯ ಉದ್ಭವಿಸುತ್ತದೆ. ಕಾರಣ ಪ್ರಸ್ತುತ ಸಣ್ಣಾಟದ ಕವಿಗೆ ಮಹಾದೇವಿಯಕ್ಕನ ಬದುಕಿನ ಚಾರಿತ್ರಿಕ ಸಂಗತಿಗಳ ಸರಿಯಾದ ತಿಳುವಳಿಕೆಯಿದೆ. ಶಿವಶರಣರ ಭೇಟಿಗಾಗಿ ಅಕ್ಕನು ಕಲ್ಯಾಣಕ್ಕೆ ಹೋಗಿ ಪ್ರಭು ದೇವರಿಂದ ಮಾರ್ಗದರ್ಶನ ಪಡೆದುಕೊಂಡು ಲಿಂಗಾಂಗಸಮರಸಹೊಂದಿದಳೆನ್ನುವ ವಚನ ಸಾಹಿತ್ಯದ ಹೇಳಿಕೆಯನ್ನು ಕವಿ ಅರಿತಿದ್ದಾನೆನ್ನಲು ಸಣ್ಣಾಟದ ಮಂಗಲಪದದ ಉಲ್ಲೇಖಗಳು ಸಾಕ್ಷಿ ನುಡಿಯುತ್ತವೆ. ಕೌಶಿಕನ ಕಾಮವಾಸನೆ ಸುಟ್ಟು ಹಾಕಿದ ನಂತರ "ಶ್ರೇಷ್ಠಕಲ್ಯಾಣಕ್ಕೆ" ಹೋದಳೆನ್ನುವ ಸ್ಪಷ್ಟಸೂಚನೆ ಹೀಗಿದೆ:

"ದುಷ್ಟ ಕೌಶಿಕನೊಳಗೆ ಮೂಡಿದ
ಕೆಟ್ಟ ಕಾಮನ ಸುಟ್ಟು ಹಾಕುತ
ಶ್ರೇಷ್ಠ ಕಲ್ಯಾಣಕ್ಕೆ ಪೋಗುವ
ದೃಷ್ಟಿಯಿಂದ ಪ್ರಭುಕಂಡ ಸತಿಗೆ ಪಾರ್ವತಿಗೆ"

ಹೀಗೆ ಶಿಷ್ಟಸಾಹಿತ್ಯಕೃತಿಗಳು ಚಿತ್ರಿಸಿರುವ ಚಾರಿತ್ರಿಕ ವಿವರಗಳಿಗೆ ನಿಷ್ಠವಾಗಿರಬಹುದಾದ ಮೂಲ ಸಣ್ಣಾಟವು ಪಾಠಾಂತರ–ರೂಪಾಂತರಗಳಿಗೊಳಗಾಗಿ ಮೊಟಕುಗೊಂಡಿರುವ ಸಾಧ್ಯತೆಯನ್ನು ಊಹಿಸಬಹುದಾಗಿದೆ. ಪ್ರಸ್ತುತ ಸಣ್ಣಾಟದ ಪದ್ಯಗಳಲ್ಲಿ ಕಂಡುಬರುವ ಚಾರಿತ್ರಿಕ ಸಂಗತಿಗಳಿಗೂ, ಪದ್ಯಭಾಗದ ಕಥಾನಕಕ್ಕೂ ಏಕರೂಪತೆಯಿಲ್ಲದಿರುವುದು ಈ ಊಹೆಯನ್ನು ಸಮರ್ಥಿಸುತ್ತದೆ. ಪದ್ಯಗಳು ಮೂಲರೂಪವನ್ನು ಬಹುಮಟ್ಟಿಗೆ ಕಾಯ್ದು ಕೊಂಡಿದ್ದರೆ, ಗದ್ಯಭಾಗವು ಸಾಕಷ್ಟು ಬದಲಾವಣೆಗಳಿಗೊಳಗಾದಂತಿದೆ. ಕೌಶಿಕನೊಂದಿಗೆ ವಿವಾಹವಾಗದೇ ಆತನನ್ನು ಶಿವಭಕ್ತನಾಗಿ ಪರಿವರ್ತಿಸಿ, ಸೀರೆಯನ್ನು ಅಕ್ಷಯವಾಗಿಸಿಕೊಂಡು ತನ್ನ ಆಧ್ಯಾತ್ಮಿಕ ತೇಜಸ್ಸನ್ನು, ವಿರಕ್ತಿಯ ಔನ್ನತ್ಯವನ್ನು ಪ್ರದರ್ಶಿಸಿದ ಮಹಾದೇವಿಯಕ್ಕನನ್ನು ಮತ್ತೆ ಕಲ್ಯಾಣದ ಶರಣರಿಂದ ಪರೀಕ್ಷೆಗೊಳಪಡಿಸುವುದು ಅನುಚಿತವೆನ್ನುವ ಕಾರಣ ದಿಂದಲೂ ಕಲ್ಯಾಣದ ಭೇಟಿಯ ಪ್ರಸಂಗವು ಮೊಟಕುಗೊಂಡಿರುವ ಸಂಭವವಿದೆ, ಏಕೆಂದರೆ ಅನುಭವಮಂಟಪದ ಮಹಾದೇವಿಯಕ್ಕನ ಪ್ರಸಂಗವು ಸಂಪೂರ್ಣವಾಗಿ ಅಕ್ಕನ ವಿವಾಹದ ಸಮಸ್ಯೆ ಮತ್ತು ವಿರಕ್ತಿಯ ಸ್ಪಷ್ಟೀಕರಣಕ್ಕಾಗಿಯೇ ಸೃಷ್ಟಿಯಾದಂತಿದೆ.

ಪುರಾಣ ಮತ್ತು ಕಾವ್ಯಗಳ ಕಥೆಗಳಿಗೆ ಜಾನಪದ ಬದುಕಿನ ಬಣ್ಣ ತುಂಬಿ ರಂಜನೀಯವಾಗಿಸುವುದು ಜಾನಪದ ದೊಡ್ಡಾಟ–ಸಣ್ಣಾಟಗಳ ವಿಶಿಷ್ಟ ಲಕ್ಷಣವಾಗಿದೆ. ಚಾರಿತ್ರಿಕ ಸಂಗತಿಗಳ ಅನುಕರಣೆಗಿಂತ, ಜಾನಪದೀಯ ಸಂವೇದನೆಗಳಿಗೆ ನಿಷ್ಠವಾಗಿರುವ ಜಾನಪದ ರಚನೆಗಳಲ್ಲಿ ರಾಮಾಯಣ, ಮಹಾಭಾರತ, ಪುರಾಣಗಳ ಜನಪ್ರಿಯ ಸಂಗತಿಗಳ ಪ್ರಭಾವ–ಪುನರಾವರ್ತನೆಯಂತೂ ಸಾಮಾನ್ಯವಾದ ಸಂಗತಿ. ಅಂತೆಯೇ ಪ್ರಸ್ತುತ ಸಣ್ಣಾಟದಲ್ಲಿಯೂ ಹಲವಾರು ಹೊಸ ಸೃಷ್ಟಿಗಳು ಸೇರ್ಪಡೆಗೊಂಡಿವೆ. ಉದಾ: ಅಕ್ಷಯಸೀರೆ, ಶಾಪ ನಿಡುವುದು, ಕೌಶಿಕನ ಹೆಂಡತಿ ಚಾರುಮತಿಯ ಪಾತಿವ್ರತ್ಯದ ಮಹಿಮೆ ಇತ್ಯಾದಿ. ವೀರಶೈವ ಕಾವ್ಯಗಳಲ್ಲಿರುವ ಇನ್ನೊಂದು ಹೊಸ ಸಂಗತಿಯೆಂದರೆ, ರಾಜ ಕೌಶಿಕನು ವಿವಾಹಿತ. ಆತನ ರಾಣಿ ಚಾರುಮತಿ ಮಹಾಪತಿಭಕ್ತೆ, ರೂಪವತಿ, ಬುದ್ಧಿವಂತೆ. ಗಂಡನ ಪರಸ್ತ್ರೀ ವ್ಯಾಮೋಹವನ್ನು ಧೈರ್ಯವಾಗಿ ಖಂಡಿಸಿ ಬುದ್ಧಿಹೇಳುವ ವಿವೇಕಿ. ಕೌಶಿಕನನ್ನು ಮರಳಿ ರಾಜ್ಯಕ್ಕೆ ಕರೆತರಲು ನಾನಾ ಉಪಾಯಗಳನ್ನು ಮಾಡುತ್ತಾಳೆ. ಕೊನೆಗೆ ಕಠಿಣ ತಪಸ್ಸಿನಿದ ಪ್ರಭುದೇವರ ಮೆಚ್ಚಿಗೆಗಳಿಸಿ, ಪತಿಯನ್ನು ಮರಳಿ ಪಡೆದುಕೊಳ್ಳುತ್ತಾಳೆ. ಹೀಗೆ ಪಾತಿವ್ರತ್ಯದ ಶಕ್ತಿಯಿಂದ ಪತಿಯನ್ನು ಧರ್ಮ–ನೀತಿಮಾರ್ಗಕ್ಕೆ ಬದ್ಧನಾಗುವಂತೆ ಮಾಡಿ ಕರ್ತವ್ಯ ಪಾಲನೆಗೆ ಪ್ರೇರೇಪಿಸುತ್ತಾಳೆ.

ಅಕ್ಕಮಹಾದೇವಿಯ ಕಥಾನಿರೂಪಣೆಗಿಂತಲೂ ಆಕೆಯ ಶಿವಭಕ್ತಿ ಮತ್ತು ವಿರಕ್ತಿಯ ಕಥನದಲ್ಲಿಯೇ ಹೆಚ್ಚು ಆಸಕ್ತವಾಗಿರುವ ಈ ಸಣ್ಣಾಟವು ವೀರಶೈವ ಧರ್ಮ–ತತ್ತ್ವ–ಸಿದ್ಧಾಂತಗಳ ಪ್ರತಿಪಾದನೆಯನ್ನು ಸಮರ್ಥವಾಗಿ ನಿರ್ವಹಿಸಿದೆ. ಗುರು–ಲಿಂಗ–ಜಂಗಮ ಇತ್ಯಾದಿ ಅಷ್ಟಾವರಣಗಳ ಅರ್ಥ, ಮಹತ್ವವನ್ನು, ಭಕ್ತ, ಮಹೇಶ, ಪ್ರಾಣಲಿಂಗಿ, ಪ್ರಸಾದಿ ಇತ್ಯಾದಿ ಷಟ್‌ಸ್ಥಲಗಳ ಹಿರಿಮೆಯನ್ನು ಸಾಂದರ್ಭಿಕವಾಗಿ ನಿರೂಪಿಸಲಾಗಿದೆ. ಶಿವಶರಣರ ಲೋಕೋದ್ಧಾರದ ಕಾರ್ಯಗಳನ್ನು ಶಿವಭಕ್ತಿಯ ಶ್ರೇಷ್ಠತೆಯನ್ನು ಪ್ರಚಾರ ಮಾಡುವ ತನ್ನ ಉದ್ದೇಶಕ್ಕನುಗುಣವಾಗಿಯೇ ಕಥಾಸಂವಿಧಾನವನ್ನು ರೂಪಿಸಿಕೊಂಡಿರುವುದು ಸ್ಪಷ್ಟವಾಗಿದೆ. ಜನಾಕರ್ಷಕವಾಗುವಂತೆ ಸನ್ನಿವೇಶಗಳನ್ನು ಸೃಷ್ಟಿಸಿಕೊಂಡಿರುವ ಕವಿಯು ಅನ್ಯಧರ್ಮೀಯನಾದ ಕೌಶಿಕನನ್ನು ಶಿವಭಕ್ತನನ್ನಾಗಿ ಪರಿವರ್ತಿಸಿದ ಮಹಾದೇವಿಯಕ್ಕನ ಲಿಂಗಭಕ್ತಿಯ ಮಹಿಮೆಯನ್ನು ಪ್ರತಿಪಾದಿಸುವಲ್ಲಿ ಯಶಸ್ವಿಯಾಗಿದ್ದಾನೆ. ನಾಟಕದ ಮೂಲವಸ್ತುವಿನ ವ್ಯಾಪ್ತಿ ಕಿರಿದಾಗಿದ್ದರೂ, ವಸ್ತುವಿಗೆ ಪೂರಕವಾಗುವಂತೆ ಇತಿಹಾಸ, ಪುರಾಣ ಕಾವ್ಯಗಳ ಕಥೆಗಳನ್ನು, ಶಿವಭಕ್ತರ ಚರಿತ್ರೆಗಳನ್ನು ಸಾಂದರ್ಭಿಕವಾಗಿ ಅಳವಡಿಸಿ, ಶಿವಭಕ್ತಿಯ ಅರ್ಥವನ್ನು ಸ್ಫುಟವಾಗಿ ಪ್ರದರ್ಶಿಸಲಾಗಿದೆ. ಗುಡ್ಡವ್ವೆ, ಕೇತಯ್ಯ, ಸೌಂದರನಂಬಿ, ಕಲಿಗಣನಾಥ, ಅನುಸೂಯಾ, ದಮಯಂತಿ, ಬಾಣಾಸುರ, ವಿಶ್ವಾಮಿತ್ರ ಇತ್ಯಾದಿ ಭಕ್ತರ ಕಥೆಗಳನ್ನು ಸಮಯೋಚಿತವಾಗಿ ಬಳಸಿಕೊಂಡಿರುವಲ್ಲಿ ಕವಿಯ ಜಾಣ್ಮೆಯಿದೆ.

ಆತ್ಮೋದ್ಧಾರಕ್ಕೆ ಸಂನ್ಯಾಸದಷ್ಟೇ ಸಂಸಾರವೂ ಶ್ರೇಷ್ಠವಾದ ಮಾರ್ಗ, ಪ್ರಾಪಂಚಿಕ ಕರ್ತವ್ಯಗಳೊಂದಿಗೆ ಪರಿಶುದ್ಧ ಭಕ್ತಿಯಿಂದ ಪಾರಮಾರ್ಥವನ್ನು ಸಾಧಿಸಲು ಸಾಧ್ಯ ಎನ್ನುವ ಶರಣದರ್ಶನವನ್ನು ಸಣ್ಣಾಟದಲ್ಲಿ ಪ್ರಭುದೇವರ ಮೂಲಕ ಕೌಶಿಕನಿಗೆ ಹೇಳಿಸಿರುವುದು ಗಮನಾರ್ಹವಾಗಿದೆ. ವಿರಕ್ತಿಯನ್ನೇ ಆತ್ಮಕಲ್ಯಾಣದ ಶ್ರೇಷ್ಠಮಾರ್ಗವೆಂದು ನಂಬಿ, ಪ್ರಾಪಂಚಿಕತೆಯನ್ನು ತ್ಯಾಗಮಾಡಿ ಲಿಂಗಸಂಗಿಯಾದ ಮಹಾದೇವಿಯಕ್ಕನ ಕಥನವು

ಜನಸಾಮಾನ್ಯರ ಗ್ರಹಿಕೆ ಮತ್ತು ನಿರೀಕ್ಷೆಗಳಿಗೆ ವ್ಯತಿರಿಕ್ತವಾಗದಂತಿರಲು ಕೌಶಿಕನ ಪಾತ್ರವನ್ನು ಬಳಸಿಕೊಂಡಿರುವುದು ಅಕ್ಕನ ಚರಿತ್ರೆಗೆ ಹೊಸ ಆಯಾಮವನ್ನು ನೀಡಿದೆ. ಪ್ರಭುದೇವರ ಮೂಲಕ ಸಂಸಾರಯೋಗವನ್ನು ಬೋಧಿಸಿರುವಲ್ಲಿ ಕವಿಯ ಜನಪರ ಮನೋಧರ್ಮ ಸ್ಪಷ್ಟವಾಗಿದೆ. ಮಹಾದೇವಿಯಕ್ಕನ ವಿರಕ್ತಿಯಷ್ಟೇ ಕೌಶಿಕನ ಇಹ–ಪರ ಸಮನ್ವಯದ ಭಕ್ತಿಮಾರ್ಗವೂ ಶ್ರೇಷ್ಠವೆನ್ನುವ ಧ್ವನಿಯಿಂದಾಗಿ ಕೌಶಿಕನ ವ್ಯಕ್ತಿತ್ವಕ್ಕೆ ಅಂಟಿದ್ದ ಖಳನಾಯಕ ಪ್ರತೀಕವನ್ನು ಬದಲಾಯಿಸಿ ಉದಾತ್ತಗೊಳಿಸಲಾಗಿದೆ.

ಪ್ರಸ್ತುತ ಸಣ್ಣಾಟದ ಕರ್ತೃ ಶಿವಣ್ಣನು ಓದುಬರಹಬಲ್ಲ ಸುಶಿಕ್ಷಿತ ಮಾತ್ರವಲ್ಲದೇ, ಶೈವಕಾವ್ಯ ಪುರಾಣಗಳನ್ನು, ಶರಣಧರ್ಮ ತತ್ವಗಳ ತಿರುಳನ್ನು ಅರಿತುಕೊಂಡ ಪ್ರಬುದ್ಧ ವ್ಯಕ್ತಿ. ಅಕ್ಕಮಹಾದೇವಿ ಮತ್ತು ಪ್ರಭುದೇವರ ಪಾತ್ರಗಳ ಮೂಲಕ ನಡೆಸಿರುವ ವೀರಶೈವಧರ್ಮ ತತ್ವಗಳ ಸೈದ್ಧಾಂತಿಕ ವಿವೇಚನೆ ಮತ್ತು ಕಾವ್ಯಪುರಾಣಗಳ ಔಚಿತ್ಯಪೂರ್ಣ ಪ್ರಸ್ತಾಪಗಳು ಕವಿಯ ಬುದ್ಧಿಮತ್ತೆ, ಜಾಣ್ಮೆಗೆ ನಿದರ್ಶನಗಳು. ಸ್ತ್ರೀರೂಪದ ವರ್ಣನೆಯಲ್ಲಿ ಸಾಂಪ್ರದಾಯಿಕ ಕವಿಸಮಯಗಳ ಬಳಕೆ ಆತನ ಕಾವ್ಯಾನುಶೀಲನಕ್ಕೆ ಪೂರಕವಾಗಿವೆ.

ಬೇತಮಾಡು (ಉಪಾಯಮಾಡು) ಹಕೀಕತ್ತು (ಸಂಗತಿ), ಉಸಾಬರಿ (ಗೊಡವೆ), ಕುಂಟಲಿತನ (ವಂಚನೆ) ಇತ್ಯಾದಿ ವಿಶಿಷ್ಟ ಅರ್ಥಶಕ್ತಿಯುಳ್ಳ ಜಾನಪದ ಪದಪ್ರಯೋಗಗಳು ಉತ್ತರ ಕರ್ನಾಟಕದ ಆಡುಮಾತಿನ ಸೊಗಸನ್ನು ಸಮರ್ಥವಾಗಿ ಧ್ವನಿಸುತ್ತವೆ. ಜಾನಪದ ಬದುಕಿನಲ್ಲಿ ಇಂದಿಗೂ ಜೀವಂತವಾಗಿರುವ ವಿಶಿಷ್ಟ ದೇಶಿ ನುಡಿಗಟ್ಟು, ಗಾದೆಮಾತು ಮತ್ತು ದೃಷ್ಟಾಂತ, ಉಪಮೆಗಳ ಸಾಂದರ್ಭಿಕ ಬಳಕೆಯು ಕವಿಯ ಲೋಕಾನುಭವಕ್ಕೆ ನಿದರ್ಶನ. ಸಂಸಾರದಲ್ಲಿದ್ದೂ ಸಂನ್ಯಾಸವನ್ನಾಚರಿಸುವ ನಿರ್ಲಿಪ್ತತೆಯನ್ನು "ಕೆಸರಿನಲ್ಲಿರುವ ಕುಂಬಾರ ಹುಳುವಿಗೆ", ಕೈಗೆಟುಕದ್ದಕ್ಕಾಗಿ ಆಸೆಪಟ್ಟು ನಾಶ ಹೊಂದುವುದನ್ನು "ಹುಲಿ ಬಣ್ಣಕ್ಕಾಗಿ ನರಿ ಮೈಸುಟ್ಟುಕೊಂಡಂತೆ" ಎನ್ನುವ ದೃಷ್ಟಾಂತಗಳಲ್ಲಿಯ ಜಾನಪದ ಸೊಗಸು ವಿಶಿಷ್ಟವಾದುದು. ಸಣ್ಣಾಟದುದ್ದಕ್ಕೂ ಬಳಕೆ ಯಾಗಿರುವ ಇಂಥ ಹಲವಾರು ಪ್ರಯೋಗಗಳು ಸಣ್ಣಾಟದ ದೇಶಿಯ ಸತ್ವಕ್ಕೆ ಕಳೆಕಟ್ಟಿವೆ.

ಉದಾ:

* ಕಿವುಡ ಕಿಚಡಿ ಬೇಡಿದರ ಗೌಡ ಹಚಡ ಬೇಡಿದಂತೆ
* ಹೇಸಿ ನಿಬ್ಬಣಕ ಹೋಗಬಾರದು ಹೇಡಿ ಬೆನ್ನ ಹತ್ತಬಾರದು
* ಕರೆದು ಹೆಣ್ಣು ಕೊಟ್ಟರೆ ಅಳಿಯಾಗ ಮಲರೋಗ
* ಕೋಣನ ಮುಂದ ಕಿನ್ನೂರಿ ಬಾರಿಸಿದರೆ ಕೊಂಬು ಯಾವುದು ಕೊಳಗ ಯಾವುದು ಎನ್ನುವಂತೆ.

ಇಂಗ್ಲಿಷ ಮತ್ತು ಉರ್ದು ಇತ್ಯಾದಿ ಅನ್ಯದೇಶಿ ಪದಗಳ ಬಳಕೆ ಅಲ್ಲಲ್ಲಿ ಗೋಚರಿಸುತ್ತದೆ.

ಉದಾ : ಡ್ರೆಸ್ಸು, ಬಜಾರ, ಅಲ್ಲಾ, ಕಿಮ್ಮತ್ತು, ತುರಂಗ, ಬುಡ್ಡಿ, ಅಚ್ಚಾ ಇತ್ಯಾದಿ.

ಇಪ್ಪತ್ತನೆಯ ಶತಮಾನದ ಪೂರ್ವಾರ್ಧದಲ್ಲಿ ರಚನೆಯಾಗಿರುವ "ಅಕ್ಕಮಹಾದೇವಿ" ಸಣ್ಣಾಟದ ವಸ್ತು ಚಾರಿತ್ರಿಕವಾದರೂ, ಕರ್ತೃ ಕವಿ ಶಿವಣ್ಣನು ಆಧುನಿಕತೆಯ ಪ್ರಭಾವ–ಪರಿವರ್ತನೆಗಳನ್ನು ಅರಿತುಕೊಂಡ ಸಂವೇದನಾಶೀಲ ವ್ಯಕ್ತಿ. ಅಂತೆಯೇ ನಾಟಕದಲ್ಲಿ ಸಮಕಾಲೀನ ಸಮಾಜದ ಹಲವಾರು ವಿದ್ಯಮಾನಗಳು ಪ್ರಸ್ತಾಪಗೊಂಡಿವೆ. ಆಧುನಿಕತೆಯು ಸೃಷ್ಟಿಸಿರುವ ವಾಣಿಜ್ಯ ಸಂಸ್ಕೃತಿಯ ಫಲವಾಗಿ ದೈವಶ್ರದ್ಧೆ, ಧರ್ಮನಿಷ್ಠೆ, ಆಧ್ಯಾತ್ಮಿಕ ಚಿಂತನೆಗಳು

ಕಾಣೆಯಾಗುತ್ತಿರುವುದನ್ನು ವಿಷಾದದಿಂದ ಗುರುತಿಸುವ ಕವಿಯು ಹೆಚ್ಚಾಗುತ್ತಿರುವ ಪಾಪಕೃತ್ಯಗಳು, ರೋಗರುಜಿನಗಳ ಬಗೆಗೆ ಆತಂಕ ವ್ಯಕ್ತಪಡಿಸಿರುವುದು ಮತ್ತು ಶುಷ್ಕವೈಚಾರಿಕತೆಯ ಭ್ರಷ್ಟಸ್ಥಿತಿಯನ್ನು ವಿಡಂಬಿಸಿರುವುದು ಕವಿಯ ಸಾಮಾಜಿಕ ಕಾಳಜಿಯನ್ನು ಎತ್ತಿತೋರಿಸುತ್ತದೆ.

* ದೇವಗಿರಿ ಗ್ರಾಮದಲ್ಲಿ ಪ್ರತಿವರ್ಷವೂ 'ಅಕ್ಕಮಹಾದೇವಿ' ಸಣ್ಣಾಟ ಪ್ರದರ್ಶನ ಗೊಳ್ಳುತ್ತಿರುವುದಾಗಿ ತಿಳಿದು ಬರುತ್ತದೆ. ದೇವಗಿರಿಯಲ್ಲಿ ದೊರೆತ ಮೊದಲ ಹಸ್ತಪ್ರತಿಯನ್ನು ೧-೫-೧೯೭೭ರಲ್ಲಿ ನಕಲು ಮಾಡಿಕೊಳ್ಳಲಾಗಿದೆ. ಆದರೆ ಇದು ಪ್ರಸ್ತುತ ಸಣ್ಣಾಟದ ಮೂಲಪ್ರತಿಯಲ್ಲವೆನ್ನುವುದು ಆಂತರಿಕ ಪ್ರಮಾಣಗಳಿಂದ ಗ್ರಹಿಸಬಹುದಾಗಿದೆ. ೮-೯-೧೯೯೮ರಲ್ಲಿ ಅದೇ ದೇವಗಿರಿಯಲ್ಲಿ ಸಂಗ್ರಹಿಸಿದ ಎರಡನೆಯ ನಕಲು ಪ್ರತಿಯಲ್ಲಿ ಮೊದಲ ಪ್ರತಿಯಲ್ಲಿರುವ ಕೆಲವು ಸನ್ನಿವೇಶಗಳನ್ನು ಸಂಕ್ಷಿಪ್ತಗೊಳಿಸಲಾಗಿದೆ. ಕಾಲಾಂತರದಲ್ಲಿ ಮೂಲಕಥಾನಕವು ಅಗತ್ಯಕ್ಕೆ ತಕ್ಕಂತೆ ಸಾಕಷ್ಟು ಬದಲಾವಣೆಗಳನ್ನು ಹೊಂದಿರುವುದಕ್ಕೆ ಇನ್ನೂ ಅನೇಕ ನಿದರ್ಶನಗಳಿವೆ.

೩೧. ಅಕ್ಕಮಹಾದೇವಿ ವಚನಗಳಲ್ಲಿ ಸ್ಫೋಟಗುಣ

●

ಡಾ. ವಿಜಯಶ್ರೀ ಸಬರದ

"ಆದ್ಯರ ಅರವತ್ತು ವಚನಕ್ಕೆ ದಣ್ಣಾಯಕರ ಇಪ್ಪತ್ತು ವಚನ,
ದಣ್ಣಾಯಕರ ಇಪ್ಪತ್ತು ವಚನಕ್ಕೆ ಪ್ರಭುದೇವರ ಹತ್ತು ವಚನ,
ಪ್ರಭುದೇವರ ಹತ್ತು ವಚನಕ್ಕೆ ಅಜಗಣ್ಣನ ಐದು ವಚನ,
ಅಜಗಣ್ಣನ ಐದು ವಚನಕ್ಕೆ ಕೂಡಲಚನ್ನ ಸಂಗಯ್ಯನಲ್ಲಿ -
ಮಹಾದೇವಿಯಕ್ಕಗಳ ಒಂದು ವಚನ ನಿರ್ವಚನ ಕಾಣಾ ಸಿದ್ಧರಾಮಯ್ಯ".

ಚೆನ್ನಬಸವಣ್ಣ ಸಿದ್ಧರಾಮನಿಗೆ ಹೇಳುವ ಈ ವಚನದಲ್ಲಿ ಅಕ್ಕಮಹಾದೇವಿಯ ಪ್ರಾಮುಖ್ಯತೆ ಸ್ಪಷ್ಟವಾಗುತ್ತದೆ. ಮಹಾದೇವಿಯಕ್ಕ ವಿಭೂತಿ ಹಚ್ಚುತ್ತಿದ್ದಳೆಂಬುದಕ್ಕಾಗಲಿ, ರುದ್ರಾಕ್ಷಿ ಧರಿಸುತ್ತಿದ್ದಳು ಎಂಬುದಕ್ಕಾಗಲಿ ನಮಗಿಂದು ಮುಖ್ಯವಾಗುವುದಿಲ್ಲ. ಆಕೆ ಅನುಭವಮಂಟಪದ ಪ್ರಮುಖ ಅಂಗವಾಗಿದ್ದಳೆಂಬುದು ನಮಗಿಂದು ಬಹುಮುಖ್ಯ. ಶತಮಾನಗಳಿಂದ ಸ್ತ್ರೀ ಪ್ರವೇಶಿಸದ ಧಾರ್ಮಿಕ ಕ್ಷೇತ್ರದಲ್ಲಿ ಅಕ್ಕ ಪ್ರಮುಖವಾದದ್ದು ತನ್ನ ಬದುಕನ್ನೇ ಬರಹವನ್ನಾಗಿಸಿದ್ದು ಗಮನಿಸಬೇಕಾದ ಸಂಗತಿಗಳು.

'ಹೆಣ್ಣುಬಿಟ್ಟು ಲಿಂಗವನೊಲಿಸಬೇಕೆಂಬರು, ಹೆಣ್ಣಿಂಗೆಯೂ ಲಿಂಗಕ್ಕೆಯೂ ವಿರುದ್ಧವೆ?' ಎಂದು ಗಜೇಶ ಮಸಣಯ್ಯನ ಹೆಂಡತಿ ತನ್ನ ವಚನವೊಂದರಲ್ಲಿ ಪ್ರಶ್ನಿಸಿದರೆ, ಮಹಾದೇವಿಯಕ್ಕ ಇದನ್ನು ತನ್ನ ಬದುಕಿನಲ್ಲಿ ಸಾಕಾರಗೊಳಿಸಿದ್ದಾಳೆ. ಧಾರ್ಮಿಕ ಕ್ಷೇತ್ರದಿಂದ ತಳ್ಳಲ್ಪಟ್ಟಿದ್ದ ಹೆಣ್ಣಿನ ಎತ್ತರವನ್ನು ಅಕ್ಕ ತನ್ನ ಬದುಕಿನಲ್ಲಿ ಬಿತ್ತಿತೋರಿಸಿದ್ದಾಳೆ. ಶತಮಾನಗಳಿಂದ ಕಡೆಗಣಿಸಲ್ಪಟ್ಟಿದ್ದ ಹೆಣ್ಣು ವಚನಕಾರ್ತಿಯರ ಆಗಮನದಿಂದ ಮತ್ತೆ ಹೊಸ ಜನ್ಮ ಪಡೆದಿದ್ದಾಳೆ.

ಮಹಾದೇವಿಯಕ್ಕನ ವಚನಗಳಲ್ಲಿ ಬುದ್ಧಿಗಿಂತ ಭಾವಕ್ಕೆ ಪ್ರಧಾನತೆಯಿದೆ, ಮಾತಿಗಿಂತ ಕ್ರಿಯೆಗೆ ಮಹತ್ವವಿದೆ. ಮನಸ್ಸು ಕಟ್ಟುವ ಕೆಲಸ, ಹೊಸಭಾವನೆಗಳನ್ನು ಹುಟ್ಟುಹಾಕುವ ಕ್ರಿಯೆ ಅಕ್ಕನ ವಚನಗಳಲ್ಲಿ ನಡೆದಿದೆ. ಅಕ್ಕನಿಗೆ ಆಧ್ಯಾತ್ಮವೇ ಮುಖ್ಯವಾದರೂ ಅದು ಚೆನ್ನಬಸವಣ್ಣ ನಂತೆ ಬುದ್ಧಿಯ ಪ್ರದರ್ಶನವಾಗದೆ ಹೃದಯವಂತಿಕೆಯ ಬೆಳವಣಿಗೆಯಾಗುತ್ತದೆ. ಆದ್ದರಿಂದ ಅಕ್ಕನ ವಚನಗಳ ಮುಖ್ಯಗುಣವೆಂದರೆ ಹೃದಯವಂತಿಕೆ.

ಅಕ್ಕ ತನ್ನ ಬದುಕಿನ ಒಳನೋಟಗಳನ್ನು ಅತ್ಯಂತ ಕಲಾತ್ಮಕವಾಗಿ ನಿರೂಪಿಸುತ್ತಾಳೆ.

ಬದುಕು ಕಾವ್ಯವಾಗಿ ಬಿಚ್ಚಿಕೊಳ್ಳುವ ರೀತಿ ಗಮನಿಸುವಂತಹದು. ಅಕ್ಕನ ವಚನಗಳಲ್ಲಿ ಜನಪದ ಗರತಿಯ ಹೃದಯಮಿಡಿತದ ತುಡಿತದೊಂದಿಗೆ ಸಂಪ್ರದಾಯವನ್ನು ಕಿತ್ತೊಗೆದ ಹೋರಾಟ ಮನೋಭಾವವಿದೆ. ಆದ್ದರಿಂದ ಅಕ್ಕಮಹಾದೇವಿ ನಮಗಿಂದಿಗೂ ಪ್ರಸ್ತುತವಾಗುತ್ತಾಳೆ.

ಅಕ್ಕಮಹಾದೇವಿಯ ಭಕ್ತಿ ವೈರಾಗ್ಯ ಆಧ್ಯಾತ್ಮ ಈ ಮುಂತಾದ ವಿಷಯಗಳ ಬಗೆಗೆ ಈಗಾಗಲೇ ಸಾಕಷ್ಟು ಲೇಖನಗಳು ಪ್ರಕಟವಾಗಿವೆ. ಅಕ್ಕನ ಒಳನೋಟಗಳನ್ನು ಅರ್ಥೈಸಿಕೊಳ್ಳುತ್ತಾ ಅಕೆಯ ಸ್ಫೋಟಗುಣವನ್ನು ಗುರುತಿಸುತ್ತಾ ಆಕೆಯ ಬದುಕಿನ ದ್ವಂದ್ವಗಳನ್ನು ತಿಳಿದುಕೊಳ್ಳುವುದು ಈ ಲೇಖನದ ಪ್ರಮುಖ ಉದ್ದೇಶವಾಗಿದೆ.

ನಮ್ಮ ಸಾಹಿತ್ಯದಲ್ಲಿ ಹೆಣ್ಣು-ಹೊನ್ನು-ಮಣ್ಣುಗಳಿಗಾಗಿ ಏನೆಲ್ಲವನ್ನೂ ತ್ಯಾಗಮಾಡಿದವರು ಸಿಗಬಹುದು. ಆದರೆ ತಾನು ನಂಬಿಕೊಂಡ ಆದರ್ಶಗಳಿಗೆ ಬದ್ಧವಾಗಿ ಅದಕ್ಕಾಗಿ ಎಲ್ಲವನ್ನೂ ತ್ಯಾಗಮಾಡಿದವರು ತುಂಬಾ ವಿರಳ. ಅಂಥವರಲ್ಲಿ ಅಕ್ಕಮಹಾದೇವಿ ಪ್ರಮುಖಳು. ನಿಜವಾದ ಅರ್ಥದಲ್ಲಿ ಆಕೆಯ ತ್ಯಾಗ ಹೊಗಳು ಭಟ್ಟರ ಹಾಡಾಗದೆ ಪ್ರತಿಭಟನೆಯ ಸಂಕೇತವಾಗುತ್ತದೆ.

ಅಕ್ಕ ಬರೆಯುವದಕ್ಕಾಗಿ ಬರೆದವಳಲ್ಲ. ಬದುಕುವದಕ್ಕಾಗಿಯೂ ಬರೆದವಳಲ್ಲ. ಬದುಕಿನಲ್ಲಿ ಬರವಣಿಗೆ ಅನಿವಾರ್ಯವಾದಾಗ ಮಾತ್ರ ಬರೆದಿದ್ದಾಳೆ. ಆಕೆಯ ವಚನಗಳಲ್ಲಿ ಸುಂದರ ಸ್ವಪ್ನಗಳಿಲ್ಲ; ಹುಚ್ಚುಭ್ರಮೆಗಳಿಲ್ಲ. ಬದುಕನ್ನು ಜೀರ್ಣಿಸಿಕೊಳ್ಳುವ ಸಂಗತಿಗಳಿವೆ. ಮುಳ್ಳಿನ ಎದೆಹಾಯ್ದು ನಳನಳಿಸುವ ಹೂಗಳ ಹಾಡಿದೆ. ಅಕ್ಕನ ಪ್ರತಿಮಾತು ಆಕೆಯ ಜೀವನಾನುಭವದಿಂದ ಸ್ಫೋಟಿಸಿದ್ದೇ ಹೊರತು ಓದಿಕೊಂಡು ಬರೆದದ್ದಲ್ಲ. ಅಲ್ಲಿ ಬುದ್ಧಿವಂತಿಕೆಯ ಪ್ರದರ್ಶನವಿರದೆ ಅನುಭವದ ಎತ್ತರಗಳಿವೆ. ಅಕ್ಕನ ವಚನಗಳ ತುಂಬಾ ಜೀವನೋತ್ಸಾಹ ಸಂಭ್ರಮಿಸುವದರಿಂದ ಆಕೆ ಹೃದಯವನ್ನು ಮುಟ್ಟುತ್ತಾಳೆ; ಮನಸ್ಸಿಗೆ ತಟ್ಟುತ್ತಾಳೆ. ಆಕೆಯ ವಚನಗಳಲ್ಲಿ ಸಾಮಾಜಿಕ ವಿಡಂಬನೆಗಿಂತ ಅಂತರಂಗದ ತುಡಿತವಿದೆ. ಅಬ್ಬರ ಆವೇಶಗಳಿಗಿಂತ ತಣ್ಣನೆಯ ಸ್ಫೋಟವಿದೆ.

ಅಕ್ಕನ ವಚನಗಳಲ್ಲಿ ಆಕೆಯ ನೋವು-ನಿರಾಶೆ-ದ್ವಂದ್ವ-ಹೋರಾಟ ಇವೆಲ್ಲಾ ವ್ಯಕ್ತಿಗತವಾಗಿ ಬಿಚ್ಚಿಕೊಳ್ಳುತ್ತಾ ಮುಂದುವರೆದು ಬ್ರಹ್ಮಾಂಡದಷ್ಟು ವಿಶಾಲವಾಗಿ ಬೆಳೆದುನಿಲ್ಲುತ್ತವೆ. ವೈಯಕ್ತಿಕ ಶೋಧದಲ್ಲಿಯೇ ಸಾರ್ವತ್ರಿಕ ಕಾಳಜಿಗಳು ಎದ್ದು ಕಾಣುತ್ತವೆ. ಹೀಗಾಗಿ ಅಕ್ಕನ ವೈಯಕ್ತಿಕ ಬದುಕೇ ಸಾಮಾಜಿಕವಾಗಿ ವ್ಯಾಪಿಸುತ್ತಾ ಇಡೀ ವ್ಯವಸ್ಥೆಯ ಬೇರುಗಳನ್ನೇ ಅಲ್ಲಾಡಿಸಿಬಿಡುತ್ತದೆ.

ಅನ್ಯಾಯ ಮಾಡುವದು ಎಷ್ಟು ತಪ್ಪೋ ಅನ್ಯಾಯ ಸಹಿಸಿಕೊಳ್ಳುವುದೂ ಅಷ್ಟೇ ತಪ್ಪು. ಅನ್ಯಾಯ ಸಹಿಸಿಕೊಳ್ಳುವವರು ಇರುವವರೆಗೆ ಅನ್ಯಾಯ ಮಾಡುವವರು ಇರುತ್ತಾರೆ. ಇಂಥ ಅನ್ಯಾಯ ಶೋಷಣೆಗಳ ವಿರುದ್ಧ ಸಾಹಿತ್ಯದಲ್ಲಿ ಅಲ್ಲಲ್ಲಿ ಪ್ರತಿಭಟನೆಯ ಕೂಗು ಕೇಳಿಬರುತ್ತವೆ. ಅದರಲ್ಲಿ ವಚನಕಾರರು ಅತ್ಯಂತ ಪ್ರಮುಖರು.

ಅನ್ಯಾಯವಾದಾಗ ಪ್ರತಿಭಟಿಸುವದು – ಸ್ಫೋಟಿಸುವುದು ಮನುಷ್ಯನ ಸಹಜಗುಣ. ಈ ರೀತಿಯಾದ ಪ್ರತಿಭಟನೆಗಳಲ್ಲಿ ಎರಡು ವಿಧ. ಒಂದು ಪ್ರತ್ಯಕ್ಷವಾದ ಪ್ರತಿಭಟನೆ, ಮತ್ತೊಂದು ಪರೋಕ್ಷವಾದ ಪ್ರತಿಭಟನೆ. ಅನ್ಯಾಯವೆಸಗಿದವರೊಂದಿಗೆ ಮುಖಾಮುಖಿಯಾಗಿ ಹೋರಾಡುವದು ಒಂದು ಬಗೆಯಾದರೆ, ಅನ್ಯಾಯವೆಸಗಿದವರನ್ನು ತಿರಸ್ಕರಿಸಿ ಅಲ್ಲಿಂದ ಹೊರಟುಹೋಗುವದು ಮತ್ತೊಂದು ಬಗೆ. ಮೊದಲನೆಯದರಲ್ಲಿ ಫಲ-ಹೋರಾಟ ಗರಿಗೆದರಿದರೆ, ಎರಡನೆಯದರಲ್ಲಿ ಅಸಹಾಯಕತೆ-ತ್ಯಾಗ ಕಂಡುಬರುತ್ತದೆ. ಮುಖಾ

ಮುಖಿಯಾದ ಪ್ರತಿಭಟನೆ ಹಿಂಸಾತ್ಮಕವಾಗಲೂಬಹುದು. ಆದರೆ ಪರೋಕ್ಷವಾದ ಪ್ರತಿಭಟನೆ ಅಹಿಂಸಾತ್ಮಕವಾದದ್ದು. ಇಲ್ಲಿ ಅಕ್ಕಮಹಾದೇವಿಯ ಪ್ರತಿಭಟನೆ ಅಹಿಂಸಾತ್ಮಕವಾದದ್ದು, ತ್ಯಾಗದಿಂದೊಡಗೂಡಿದ್ದು ಆಗಿದೆ.

ಪಂಪನ 'ಆದಿಪುರಾಣ'ದಲ್ಲಿ ಬರುವ ಭರತ ಬಾಹುಬಲಿಗಳ ಕಥೆಯಲ್ಲಿ ಭರತನ ಅಹಂಕಾರ – ಸ್ವಾರ್ಥ ಹೆಚ್ಚಾದಾಗ ಆತನ ನೂರು ಜನ ಸಹೋದರರು ರಾಜ್ಯ ಪರಿತ್ಯಾಗ ಮಾಡುವುದರ ಮೂಲಕ ಪ್ರತಿಭಟಿಸಿದರೆ, ಬಾಹುಬಲಿ ಮುಖಾಮುಖಿಯಾಗಿ ಭರತನನ್ನೆದುರಿಸಿ ಸೋಲಿಸುತ್ತಾನೆ. ಇವೆರಡೂ ಪ್ರತಿಭಟನೆಗಳೆ; ಇವುಗಳಲ್ಲಿ ಒಂದು ಹೆಚ್ಚು, ಒಂದು ಕಡಿಮೆ ಎನ್ನುಲು ಬಾರದು. ಅವರವರ ಇತಿಮಿತಿಗಳೊಂದಿಗೆ ಅಂದಿನ ಅನಿವಾರ್ಯತೆ ಗನುಗುಣವಾಗಿ ಒಟ್ಟಾರೆ ಅನ್ಯಾಯದ ವಿರುದ್ಧ ಪ್ರತಿಭಟಿಸುವದು ಬಲು ಮುಖ್ಯವಾಗುತ್ತದೆ.

ವಚನಕಾರರಲ್ಲಿಯೂ ಇಂತಹ ಎರಡು ರೀತಿಯ ಪ್ರತಿಭಟನೆ ನಡೆಯುತ್ತದೆ. ಬಿಜ್ಜಳರಾಜನನ್ನು ಹಾಗೂ ಅಂದಿನ ಸಾಂಪ್ರದಾಯಿಕ ವ್ಯವಸ್ಥೆಯನ್ನು ಎದುರುಹಾಕಿಕೊಂಡು ವಚನಕಾರರು ಮುಖಾಮುಖಿಯಾಗಿ ಹೋರಾಡಿದರೆ, ಮಹಾದೇವಿಯಕ್ಕ ತನ್ನ ಅಂತರಂಗ–ಬಹಿರಂಗಗಳೆರಡರಲ್ಲೂ ರಾಜಪ್ರಭುತ್ವವನ್ನು ಧಿಕ್ಕರಿಸುತ್ತಾಳೆ.

ಕೌಶಿಕರಾಜ ಅಕ್ಕಮಹಾದೇವಿಯ ಚೆಲುವಿಕೆಯನ್ನು ಕಂಡು ಕಾಮಾತುರನಾಗಿ ತನ್ನ ಅಧಿಕಾರವನ್ನುಪಯೋಗಿಸಿಕೊಂಡು ಮದುವೆಯಾಗುತ್ತಾನೆ. ರಾಜಶಾಹಿಯ ಅಂದಿನ ಸಂದರ್ಭದಲ್ಲಿ ರಾಜ ತನ್ನ ಮನಸ್ಸಿಗೆ ಬಂದ ಚೆಲುವೆಯರನ್ನು ಉಪಭೋಗಿಸುತ್ತಿದ್ದ. ಇಂತಹ ಒಂದು ಪರಂಪರೆ ಇತಿಹಾಸದ್ದುದಕ್ಕೂ ಬೆಳೆದುಕೊಂಡು ಬಂದಿದೆ. ಈ ಕೌಶಿಕರಾಜ ಬಳ್ಳಿಗಾವೆಗೆ ಮಾಂಡಲಿಕ ಅರಸನಾಗಿದ್ದ. ಈತ ಬೇರಾರೂ ಆಗಿರದೆ ಕಸಪಯ್ಯನೇ ಆಗಿದ್ದ. "ಕೌಶಿಕನು ಬೇರೆ ಯಾರೂ ಅಲ್ಲ. ಬಿಜ್ಜಳನ ಪ್ರತಿನಿಧಿಯಾಗಿ ಬಳ್ಳಿಗಾವೆ ಭಾಗವನ್ನು ಆಳುತ್ತಿದ್ದ ಕನಪಯ್ಯ ನಾಯಕನೇ ಅವನು ಎಂದು ಹೇಳಲು ಆಧಾರಗಳಿವೆ" ಎನ್ನುವ ಡಾ. ಎಂ. ಚಿದಾನಂದ ಮೂರ್ತಿಯವರ ಮಾತು ಇದನ್ನೇ ಸ್ಪಷ್ಟಪಡಿಸುತ್ತದೆ. (ನೋಡಿ: ವಚನಸಾಹಿತ್ಯ. ಪು. ೮೩).

ಈ ರಾಜನ ನಡತೆ ಸ್ವಭಾವ ಅಕ್ಕನಿಗೆ ಇಷ್ಟವಾಗುವುದಿಲ್ಲ. ಆದರೆ ರಾಜಶಾಹಿಯ ಅಂದಿನ ಸಂದರ್ಭದಲ್ಲಿ ಸಾಮಾನ್ಯ ಜನರ ಇಷ್ಟ–ಅನಿಷ್ಟಗಳನ್ನು ಕೇಳುವವರಾರು? ಅಕ್ಕ ಅನಿವಾರ್ಯವಾಗಿ ಕೌಶಿಕರಾಜನನ್ನು ಮದುವೆಯಾಗಬೇಕಾಗುತ್ತದೆ.

ಈಕೆಯದು ಮೃದುಮಧುರವಾದ ಮುಗ್ಧ ಮನಸ್ಸು, ಆತನದು ತೀವ್ರವಾದ ಕಾಮುಕಭಾವ. ಈಕೆಗೆ ಪರದ ಮೋಕ್ಷ ಮುಖ್ಯವಾದರೆ ಆತನಿಗೆ ಇಹದ ಕಾಮ ಮುಖ್ಯ. ಹೀಗಾಗಿ ಇಬ್ಬರಿಗೂ ಹೊಂದಾಣಿಕೆಯಾಗುವುದಿಲ್ಲ. ಅಧಿಕಾರ ಬಲದಿಂದ ಮದುವೆಯಾಗಬಹುದೇ ಹೊರತು, ಮನಸ್ಸು ಕೂಡಿಸುವ ಕೆಲಸ ಸಾಧ್ಯವಿಲ್ಲ. ಎಷ್ಟೋ ಹೆಣ್ಣುಗಳು, ರಾಜರ ಚಪಲಕ್ಕೆ ಬಲಿಯಾಗಿ ನರಳುತ್ತಿರುವ ಸಂದರ್ಭದಲ್ಲಿ ಮಹಾದೇವಿಯಕ್ಕ ಗಟ್ಟಿಯಾಗಿ ಪ್ರತಿಭಟಿಸುತ್ತಾಳೆ.

ತನ್ನ ಗಂಡ ಒಬ್ಬ ರಾಜನಾಗಿದ್ದು, ತನ್ನೆಲ್ಲ ಆಶೆ ಆಕಾಂಕ್ಷೆಗಳನ್ನು ಈಡೇರಿಸಬಹುದೆಂದು ತಿಳಿದು ಮೌನವಾಗದೆ ತನ್ನ ಆದರ್ಶಗಳಿಗೆ ಬೆಲೆ ಕೊಟ್ಟು ರಾಜ್ಯ ಪ್ರಭುತ್ವವನ್ನೆ ಧಿಕ್ಕರಿಸುತ್ತಾಳೆ. ಈ ರೀತಿಯಾಗಿ ಪ್ರಭುತ್ವ ಹಾಗೂ ಪತಿತ್ವ ಎರಡನ್ನೂ ಏಕಕಾಲಕ್ಕೆ ತಿರಸ್ಕರಿಸಿ ಅಂದಿನ ರಾಜನೀತಿಯನ್ನು ವಿರೋಧಿಸುತ್ತಲೇ ಸ್ಫೋಟಿಸಿ ಹೊರಬಂದ ಹೆಣ್ಣು ಅಂದಿನ ಸಂದರ್ಭದಲ್ಲಿ ಸಿಗುವುದು ವಿರಳ. ಅಕ್ಕ ಮಹಾದೇವಿ ಆ ಕೆಲಸವನ್ನು ಮಾಡುತ್ತಾಳೆ. ಆತನ

ಕಾಮವಿಕಾರದೆದುರು ತಾನೊಂದು ಭೋಗದ ವಸ್ತುವಾಗಿ ಬಿದ್ದುಕೊಳ್ಳಲು ಆಕೆಯ ಮನಸ್ಸು ಒಪ್ಪುವುದಿಲ್ಲ. ಅಂತೆಯೇ ಆಕೆಗೆ ಪ್ರತಿಭಟನೆ ಅನಿವಾರ್ಯವಾಗುತ್ತದೆ. ಕೌಶಿಕನನ್ನು ತಿರಸ್ಕರಿಸಿ ಬಳ್ಳಿಗಾವೆಯನ್ನು ಬಿಟ್ಟು ಕಲ್ಯಾಣಕ್ಕೆ ಬರುತ್ತಾಳೆ. ಕಲ್ಯಾಣದಲ್ಲಿ ನಡೆದ ವಚನಕಾರರ ಹೋರಾಟದಲ್ಲಿ ಆಕೆ ಪಾಲುಗೊಂಡಿದ್ದರೂ ಆಕೆಯ ನೇರ ಹೋರಾಟ ನಡೆಯುತ್ತಿರುವುದು ಅಂತರಂಗದಲ್ಲಿ. ಅದೂ ಪ್ರಭುತ್ವದ ವಿರುದ್ಧವೇ, ಅಂತೆಯೇ ಅಕ್ಕ ಉಳಿದ ವಚನಕಾರರಿಗಿಂತ ಭಿನ್ನಳಾಗಿ ನಿಲ್ಲುತ್ತಾಳೆ.

ತನ್ನನ್ನು ವಿಮರ್ಶಿಸಿಕೊಳ್ಳುತ್ತಲೇ, ವ್ಯವಸ್ಥೆಯನ್ನೂ ವಿಮರ್ಶಿಸುವ, ಹೋರಾಟದ ಜತೆಯಲ್ಲಿ ವಿಶ್ಲೇಷಣೆಯನ್ನೂ ಮಾಡುವ ಮಹಾದೇವಿಯಕ್ಕ ಒಂದು ವಿಶಿಷ್ಟ ಶಕ್ತಿಯಾಗಿ ಬೆಳೆಯುತ್ತಾಳೆ. ಆತ್ಮವಂಚನೆ ಮಾತಿಕೊಳ್ಳದೆ, ನಂಬಿದ ಮೌಲ್ಯಗಳನ್ನು ಬಿಟ್ಟು ಕೊಡದೆ, ಪ್ರಭು ಮತ್ತು ಪತಿ ಇವೆರಡನ್ನೂ ಏಕಕಾಲಕ್ಕೆ ಧಿಕ್ಕರಿಸುವ ಹೋರಾಟಗಾರ್ತಿಯಾಗಿ ಗಮನ ಸೆಳೆಯುತ್ತಾಳೆ. ಈ ರಾಜ್ಯಪ್ರಭುತ್ವದಿಂದ ವಚನಕಾರರಿಗೆ ಸಾಮೂಹಿಕ ಅನ್ಯಾಯವಾಗಿದ್ದರೆ ಅಕ್ಕಮಹಾದೇವಿಗೆ ಸಾಮೂಹಿಕದ ಜೊತೆಗೆ ವೈಯಕ್ತಿಕ ಅನ್ಯಾಯವೂ ಆಗಿದೆ. ಆದ್ದರಿಂದ ಇಡೀ ವಚನಕಾರರ ಸಮೂಹದಲ್ಲೇ ಅಕ್ಕನ ಹೋರಾಟ ವಿಶಿಷ್ಟವಾಗಿ ಕಾಣುತ್ತದೆ. ಉಳಿದ ವಚನಕಾರರು ಸತಿಪತಿ ಸಮನ್ವಯದ ಅನ್ಯೋನ್ಯತೆ ಹೊಂದಿ ದಾಂಪತ್ಯ ಸುಖವನ್ನು ಅನುಭವಿಸಿ ಚಳವಳಿಯಲ್ಲಿ ಪಾಲ್ಗೊಂಡರೆ, ಅಕ್ಕ ಅಂತಹ ದಾಂಪತ್ಯ ಸುಖದಿಂದ ವಂಚಿತ ಗಳಾಗಿಯೂ, ಸಂಸಾರಿಕ ಶಾಂತಿ ನೆಮ್ಮದಿಗಳನ್ನು ಕಳೆದುಕೊಂಡು ಹೋರಾಡುವುದರಿಂದ ಆಕೆಯ ಹೋರಾಟ ತ್ಯಾಗದ ಹಂತ ತಲುಪುತ್ತದೆ. ಹದಿಹರೆಯದ ಮನಸ್ಸನ್ನು ನಿಯಂತ್ರಣ ದಲ್ಲಿರಿಸಲು, ಸಹಜ ಬಯಕೆಗಳನ್ನು ಸುಟ್ಟುಹಾಕಲು ಕಾಣದ ಚೆನ್ನಮಲ್ಲಿಕಾರ್ಜುನ ಆಕೆಗೆ ಅನಿವಾರ್ಯವಾಗುತ್ತಾನೆ. ಅಂತರಂಗದ ಆಸೆಗಳು ಬತ್ತಿಹೋದಾಗ ಮತ್ತೆ ಬದುಕಿನಲ್ಲಿ ಜೀವನೋತ್ಸಾಹ ಪಲ್ಲವಿಸಲು ಚೆನ್ನಮಲ್ಲಿಕಾರ್ಜುನ ಒಂದು ಸಂಕೇತ ಅಷ್ಟೆ. ಇಹದ ಸುಖ ಭ್ರಮನಿರಶನವಾದಾಗ ಪರದ ಮಹತ್ವ ಅನಿವಾರ್ಯವಾಗುತ್ತದೆ. ಬದುಕಿನ ಹರೆಯದ ದಿನಗಳಲ್ಲೇ ಎದುರಾದ ಇಂತಹ ಸಮಸ್ಯೆಗಳೆಲ್ಲವನ್ನು ಎದುರಿಸುತ್ತಾ, ನೋವು ನಿರಾಶೆಗಳನ್ನು ಕರಗಿಸಿಕೊಳ್ಳುತ್ತಾ, ರೊಚ್ಚು-ಸಿಟ್ಟನ್ನು ಕಲಾತ್ಮಕಗೊಳಿಸುತ್ತಾ ಅಕ್ಕ ಬದುಕುವುದು, ಬದುಕನ್ನು ಕಾವ್ಯಾತ್ಮಕವಾಗಿ ವರ್ಣಿಸುವುದು ಆಕೆಯ ಅಗಾಧ ಸಂಯಮಕ್ಕೆ, ತಾಳ್ಮೆಗೆ ನಿದರ್ಶನಗಳಾಗಿವೆ. ಅಕ್ಕನ ಈ ಅಗಾಧ ಶಕ್ತಿ ಇತಿಹಾಸದ ಯಾವ ಮಹಿಳೆಯಲ್ಲೂ ಸಿಗಲಾರದು. ಅಕ್ಕನ ಈ ಆಂತರಿಕ ಸ್ಫೋಟವನ್ನರಿಯದವರು ಆಕೆ ಸಾಮಾಜಿಕವಾಗಿ ಹೆಚ್ಚು ಮಾತನಾಡಿಲ್ಲ, ಆಕೆಗೆ ಆಧ್ಯಾತ್ಮವೇ ಮುಖ್ಯವಾಗುತ್ತದೆ ಎನ್ನುತ್ತಾರೆ. ಅಂದಿನ ಸಮಾಜ ವ್ಯವಸ್ಥೆಯಲ್ಲಿರುವ ರಾಜಶಾಹಿಯನ್ನು ಪ್ರತಿಭಟಿಸಲು ಅಕ್ಕ ತನ್ನ ವೈಯಕ್ತಿಕ ಹಿತವನ್ನೇ ತ್ಯಾಗಮಾಡುತ್ತಾಳೆ; ಸಂಸಾರದ ಸುಖವನ್ನೇ ಬಲಿಕೊಡುತ್ತಾಳೆ. ಒಂದು ಹೋರಾಟಕ್ಕೆ ಇದಕ್ಕಿಂತಲೂ ಹೆಚ್ಚಿನ ತ್ಯಾಗ ಮತ್ತೇನಿದೆ? ಇಷ್ಟೆಲ್ಲಾ ಗೊಂದಲಗಳ ನಡುವೆಯೂ ಆಕೆ ಸಾಮಾಜಿಕವಾಗಿ ಮಾತನಾಡುತ್ತಾಳೆ:

"ಶೀಲ ಶೀಲವೆಂಬಿರಯ್ಯಾ-
ಶೀಲದ ನೆಲೆಯ ಬಲ್ಲಡೆ ಹೇಳಿರೋ ಅರಿಯದಿದ್ದಡೆ ಕೇಳಿರೋ
ಕಾಮ ಒಂದನೆಯ ಭವಿ, ಕ್ರೋಧ ಎರಡನೆಯ ಭವಿ,
ಲೋಭ ಮೂರನೆಯ ಭವಿ, ಮೋಹ ನಾಲ್ಕನೆಯ ಭವಿ,

ಮದ ಐದನೆಯ ಭವಿ, ಮತ್ಸರ ಆರನೆಯ ಭವಿ, ಆಮಿಷ ಏಳನೆಯ ಭವಿ,
ಇಂತೀ ಏಳು ಭವಿಗಳ ತಮ್ಮೊಳಗಿಟ್ಟುಕೊಂಡು,
ಲಿಂಗವಿಲ್ಲದವರ ಭವಿ ಭವಿ ಎಂಬಿರಿ,
ತಮ್ಮಂತರಂಗದಲ್ಲಿದ್ದ ಲಿಂಗಾಂಗದ ಸುದ್ದಿಯನರಿಯದೆ
ಅಚ್ಚಪ್ರಸಾದಿ ನಿಚ್ಚಪ್ರಸಾದಿ ಸಮಯಪ್ರಸಾದಿಗಳೆಂದು
ಜಲಕ್ಕೆ ಕನ್ನವನಿಕ್ಕಿ ಉದಕವ ತಂದು ಲಿಂಗಕ್ಕೆ ಮಜ್ಜನಕ್ಕೆರೆವ
ಹಗಲುಗಳ್ಳರ ಮೆಚ್ಚುವನೆ ಚೆನ್ನಮಲ್ಲಿಕಾರ್ಜುನ?" (೧೬೯ನೇ ವಚನ)

ಇಲ್ಲಿ ಅಕ್ಕ ಸಾಮಾಜಿಕವಾಗಿ ಸ್ಫೋಟಿಸಿದ್ದಾಳೆ. ಸಾಮಾಜಿಕ ಸ್ಫೋಟದಲ್ಲೇ ಆಂತರಿಕ ಸ್ಫೋಟವೂ ಇದೆ. ಭವಿ–ಭಕ್ತ ಎಂದು ಜನರನ್ನು ಎರಡು ಗುಂಪುಗಳನ್ನಾಗಿ ಮಾಡುವುದನ್ನು ಆಕೆ ತೀವ್ರವಾಗಿ ಖಂಡಿಸಿದ್ದಾಳೆ. ಬಸವಣ್ಣ ಮುಂತಾದ ವಚನಕಾರರು ಲಾಂಛನಕ್ಕೆ ಶರಣೆಂಬೆ ಎನ್ನುತ್ತಾ ವಿಭೂತಿ ರುದ್ರಾಕ್ಷಿಗಳನ್ನು ಧರಿಸಿದ ದುಷ್ಟರನ್ನೂ ಕೂಡ ಭಕ್ತರೆಂದೇ ಭಾವಿಸುತ್ತಿದ್ದರು. ಇವುಗಳನ್ನು ಧರಿಸದ ಜನ ಒಳ್ಳೆಯವರಾಗಿದ್ದರೂ ಕೂಡ ಅವರನ್ನು ಭಕ್ತರೆಂದು ಪರಿಗಣಿಸುತ್ತಿರಲಿಲ್ಲ. "ಈ ಭವಿ–ಭಕ್ತ ವಿಂಗಡನೆಯೇ ವಚನಕಾರರ ಹೋರಾಟಕ್ಕೆ ನೀರೆರೆಯಿತು" ಎನ್ನುವ ವಿಚಾರವನ್ನು ಡಾ. ಬಸವರಾಜ ಸಬರದ ಅವರು ತಮ್ಮ ಲೇಖನವೊಂದರಲ್ಲಿ ಸ್ಪಷ್ಟಪಡಿಸಿದ್ದಾರೆ (ನೋಡಿ: "ವಚನ ಚಳವಳಿ: ಒಂದು ಒಳನೋಟ", ಡಾ. ಸಬರದ, 'ಸಂಕ್ರಮಣ ೧೬೭–೧೬೮ನೇ ಸಂಚಿಕೆ). ಇದು ಗಮನಿಸಬೇಕಾದ ಸಂಗತಿ. ಅಕ್ಕ ಇಂತಹ ವಿಂಗಡನೆಯನ್ನು ಒಪ್ಪುವುದಿಲ್ಲ. ಈ ವಿಚಾರವನ್ನು ಪ್ರತಿಭಟಿಸುತ್ತಾಳೆ. ಉಳಿದ ವಚನಕಾರರ ತಾಳಕ್ಕೆ ಕುಣಿಯದೆ ತನ್ನ ತನವನ್ನು ಪ್ರಕಟಿಸುತ್ತಾಳೆ. ಒಂದು ಚಳವಳಿಯಲ್ಲಿದ್ದುಕೊಂಡೇ ಆ ಚಳವಳಿಯ ಲೋಪದೋಷಗಳನ್ನು ಎತ್ತಿಹೇಳುತ್ತಾಳೆ. ಆದ್ದರಿಂದ ಈ ವಚನ, ಅಕ್ಕನ ಪ್ರಾಮಾಣಿಕ ಹೋರಾಟವನ್ನು, ವಿಶಾಲ ದೃಷ್ಟಿಕೋನವನ್ನು ಹೇಳುತ್ತದೆ. ಈ ಎಲ್ಲ ದೃಷ್ಟಿಕೋನಗಳಿಂದ ಅಕ್ಕನ ಬೆಳವಣಿಗೆಯಲ್ಲಿ ವಿಶಿಷ್ಟತೆ ಕಾಣಿಸುತ್ತದೆ. ನಿಜವಾದ ಭವಿತನವನ್ನು ಸ್ಪಷ್ಟಪಡಿಸುತ್ತಾ ಭವಿ–ಭಕ್ತ ಎನ್ನುವ ವಿಂಗಡನೆಯನ್ನು ಅಲ್ಲಗಳೆದಂತೆ ಸಾಮಾಜಿಕ ವಿಡಂಬನೆ ಮಾಡಿದ್ದಾಳೆ. ಸಂಪ್ರದಾಯವಾದಿಗಳನ್ನು ಟೀಕಿಸುತ್ತಲೇ "ಲಿಂಗವಿಲ್ಲದವರ ಭವಿ–ಭವಿ" ಎನ್ನುವ ವಚನಕಾರರನ್ನು ಟೀಕಿಸಿದ್ದಾಳೆ. ವಚನಕಾರರ ಅನೇಕ ವಚನಗಳಲ್ಲಿ ಸಂಪ್ರದಾಯವಿರುದ್ಧದ ಒಂದೇ ಟೀಕೆ ಇದ್ದರೆ, ಅಕ್ಕನ ಈ ವಚನದಲ್ಲಿ ಸಂಪ್ರದಾಯವಾದಿಗಳು ನೇರ ಟೀಕೆಗೊಳಪಡುತ್ತಲೇ, ಪ್ರಗತಿಪರ ವಿಚಾರಧಾರೆಯವರೆಂದು ತಿಳಿದಿರುವ ಸಂಪ್ರದಾಯವಾದಿಗಳೂ ಟೀಕೆಗೊಳಗಾಗುತ್ತಾರೆ. ಆದ್ದರಿಂದ ಈ ವಚನದಲ್ಲಿ ಕೇವಲ ವಾಚ್ಯವಾದ ವಿಡಂಬನೆಯಿರದೆ, ಧ್ವನಿ ಪೂರ್ಣವಾದ ಸೂಕ್ಷ್ಮವಿದೆ. ಒಂದೇ ವಚನದಲ್ಲಿ ಪರವಿರೋಧಿಗಳ ಟೀಕೆ ಏಕಕಾಲಕ್ಕೇ ನಡೆಯುತ್ತದೆ. ಅಕ್ಕನ ನಿಲವು ಅನ್ಯರಲ್ಲೂ ಧ್ವನಿತಗೊಳ್ಳುತ್ತದೆ. ನೇರ ನೋಟಕ್ಕೆ ಸಾಮಾನ್ಯವಾಗಿ ಕಾಣುವ ಈ ವಚನ ಇಡೀ ಚಳವಳಿಯನ್ನೇ ಪ್ರಶ್ನಿಸುವ ತಾಕತ್ತು ಪಡೆದಿದೆ.

"ಕಾಮನ ತಲೆಯ ಕೊರೆದು ಕಾಲನ ಕಣ್ಣ ಕಳೆದು
ಸೋಮ ಸೂರ್ಯರ ಹರಿದು ಹುಡಿಮಾಡಿ ತಿಂಬವಳಿಗೆ
ನಾಮವನಿಡಬಲ್ಲವರಾರು ಹೇಳಿರೆ." (೧೭೨ನೇ ವಚನ)

ಎನ್ನುವಲ್ಲಿ ಆತ್ಮವಿಶ್ವಾಸದೊಂದಿಗೆ ಆಂತರಿಕ ಸ್ಫೋಟವಿದೆ. ಅಕ್ಕ ಹದಿಹರೆಯದ ಬದುಕಿನಲ್ಲಿ

ಗಂಡನನ್ನು ತೊರೆದು ವಿಷಯಂಗಳ ಕೆರಳಿಸುವ ದೇಹದ ಮೇಲೆ ಜಿಗುಪ್ಸೆಗೊಂಡು ಬೆತ್ತಲೆ ದೇಹದ ತುಂಬಾ ಕೇಶರಾಶಿ ಹರಡಿಕೊಂಡು ನಡೆದಾಗ ವಿವಿಧ ರೀತಿಯ ಜನ ವಿವಿಧ ರೀತಿಯ ಮಾತುಗಳನ್ನಾಡಿರಬಹುದು. ಅದನ್ನು ಆಕೆ ಎದುರಿಸುವ ಧೈರ್ಯ, ಅಚಲ ವಿಶ್ವಾಸ ಈ ವಚನದಲ್ಲಿ ವ್ಯಕ್ತವಾಗಿದೆ:

"ಬಂಜೆ ತಾಯಿಯ ಬೇನೆಯನರಿವಳೆ?
ಬಲದಾಯಿ ಮುದ್ದ ಬಲ್ಲಳೆ?
ನೊಂದವರ ನೋವ ನೋಯದವರೆತ್ತಬಲ್ಲರೋ?" **(೨೯೧ನೇ ವಚನ)**

ಎನ್ನುವಲ್ಲಿ ಅಕ್ಕ ಉಂಡ ವಿಷ ಎಂತಹದೆಂಬುದು ಸ್ಪಷ್ಟವಾಗುತ್ತದೆ. ಬಂಜೆ ತಾಯಿ ಮಲತಾಯಿ ಪ್ರತೀಕಗಳು ಹೆಪ್ಪುಗಟ್ಟಿದ ಗಾಢವಾದ ನೋವಿನ ಪರಿಚಯಮಾಡಿ ಕೊಡುತ್ತವೆ. ಆಕೆಯನ್ನು ನೋಡಿ ಅಪಹಾಸ್ಯ ಮಾಡುವವರಿಗೆ ಈ ವಚನ ಚಾಟಿಯ ಏಟಿನಂತಿದೆ. ಶತಮಾನಗಳಿಂದ ನೊಂದು ಬೆಂದು ಕರಕಾದ ಹೆಣ್ಣಿನ ದನಿಯೊಂದು ಅಕ್ಕನ ವಚನಗಳ ತುಂಬಾ ಸ್ಫೋಟಿಸಿದೆ.

"ಇಹಕ್ಕೊಬ್ಬ ಗಂಡನೆ ಪರಕ್ಕೊಬ್ಬ ಗಂಡನೆ?
ಲೌಕಿಕಕ್ಕೊಬ್ಬ ಗಂಡನೆ ಪಾರಮಾರ್ಥಕ್ಕೊಬ್ಬ ಗಂಡನೆ?
ಎನ್ನ ಗಂಡ ಚೆನ್ನಮಲ್ಲಿಕಾರ್ಜುನ ದೇವರಲ್ಲದೆ
ಮಿಕ್ಕಿನ ಗಂಡರೆಲ್ಲ ಮುಗಿಲ ಮರೆಯ ಬೊಂಬೆಯಂತೆ." **(೨೯೨ನೇ ವಚನ)**

"ಎರದ ಮುಳ್ಳಿನಂತೆ ಪರಗಂಡರೆನಗವ್ವಾ
ಸೋಂಕಲಮ್ಮೆ ಸುಳಿಯಲಮ್ಮೆ
ನಂಬಿ ನಚ್ಚಿ ಮಾತಾಡಲಮ್ಮೆನವ್ವಾ
ಚೆನ್ನಮಲ್ಲಿಕಾರ್ಜುನನಲ್ಲದ ಗಂಡರಿಗೆ". **(೨೯೫ನೇ ವಚನ)**

ಮೇಲಿನ ಎರಡು ವಚನಗಳಲ್ಲಿ ಗಂಡ–ಗಂಡು ಇವುಗಳ ಬಗೆಗೆ ಜಿಗುಪ್ಸೆ ಭಾವವುಂಟಾಗಿ ಇವೆರಡನ್ನೂ ಒಳಗೊಂಡು ಇವೆರಡರಿಂದ ಭಿನ್ನವಾಗಿ ನಿಲ್ಲುವ ಚೆನ್ನ ಮಲ್ಲಿಕಾರ್ಜುನ ಸ್ಥಾಯಿಯಾಗಿ ನಿಲ್ಲುತ್ತಾನೆ. ಪರಗಂಡಸರು ಎರಗುವ–ಚುಚ್ಚುವ ಮುಳ್ಳುಗಳಿದ್ದಂತೆ ಎನ್ನುವಲ್ಲಿ ಕೌಶಿಕನ ಬಗೆಗಿನ ಹತಾಶಭಾವ ಲೋಕದ ಗಂಡುಗಳಿಗೂ ಸುತ್ತಿಕೊಳ್ಳುವುದರ ಮೂಲಕ ಒಳಗಿನ ರೊಚ್ಚು ಹೊರಹೊಮ್ಮಿದೆ. ಚೆನ್ನಮಲ್ಲಿಕಾರ್ಜುನನೊಬ್ಬನನ್ನು ಬಿಟ್ಟು ಉಳಿದ ಗಂಡರೆಲ್ಲ ಮುಗಿಲ ಮರೆಯ ಬೊಂಬೆಯಂತೆ ಎನ್ನುವಲ್ಲಿ ಒಳಗಿನ ನೋವು ಕಲಾತ್ಮಕವಾಗಿ ಅರಳಿ ನಿಂತಿರುವುದನ್ನು ಕಾಣಬಹುದಾಗಿದೆ.

"ಲಿಂಗಸ್ಥಲವ ಬಲ್ಲೆನೆಂಬ ಪರಬ್ರಹ್ಮಿಗಳು ನೀವು ಕೇಳಿರೆ,
ಲಿಂಗಸ್ಥಲ ನಿಃಶೂನ್ಯವಾಯಿತ್ತು ಸಂಗದೇವರ ಬೆನ್ನಿನಲ್ಲಿ,
ಜಂಗಮಸ್ಥಲವ ಬಲ್ಲೆನೆಂಬ ಪರಬ್ರಹ್ಮಿಗಳು ನೀವು ಕೇಳಿರೆ,
ಜಂಗಮಸ್ಥಲ ನಿಃಶೂನ್ಯವಾಯಿತ್ತು ಅಲ್ಲಮಪ್ರಭುದೇವರ ಬೆನ್ನಿನಲ್ಲಿ.
ಭಕ್ತಿಸ್ಥಲವ ಬಲ್ಲೆನೆಂಬ ಪರಬ್ರಹ್ಮಿಗಳು ನೀವು ಕೇಳಿರೆ,
ಭಕ್ತಿಸ್ಥಲ ನಿಃಶೂನ್ಯವಾಯಿತ್ತು ಸಂಗನ ಬಸವರಾಜದೇವರ ಬೆನ್ನಿನಲ್ಲಿ." ***(೩೩೯ನೇ ವಚನ)***

ಈ ವಚನದಲ್ಲಿ ಸ್ಥಲಗಳನ್ನು ಮೀರಿದ ಮಾನವ ಸಾಧನೆಯಿದೆ. ಈ ಷಟ್‌ಸ್ಥಲಗಳು ಸಾಧಕನಿಗೆ ಪ್ರಾರಂಭಹಂತದಲ್ಲಿ ಅವಶ್ಯವೆನಿಸಿದ್ದರೂ ಸಾಧನೆಯ ದಾರಿ ಮುಂದುವರೆದಂತೆ, ಸಾಧಕ ಎತ್ತರವಾಗಿ ಬೆಳೆದಂತೆ, ಈ ಸ್ಥಲಗಳು ಹಿಂದೆ ಬೀಳುತ್ತವೆ. ಸಾಧಕ ಮುಂದೆ ಹೋಗುತ್ತಾನೆ. ಬಸವಣ್ಣ–ಪ್ರಭು–ಸಿದ್ಧರಾಮ–ಚೆನ್ನಬಸವಣ್ಣ–ಅಜಗಣ್ಣ ಈ ಮುಂತಾದ ವಚನಕಾರರ ಮಹಾಸಾಧನೆಯನ್ನು ಎತ್ತಿಹೇಳುವ ಮಹಾದೇವಿಯಕ್ಕ ಮನುಷ್ಯ ಪ್ರಯತ್ನಕ್ಕೆ ಉನ್ನತಸ್ಥಾನ ಕಲ್ಪಿಸಿಕೊಟ್ಟಿದ್ದಾಳೆ. ಸ್ಥಲಗಳೆಲ್ಲಾ ಹಿಂದೆ ಬಿದ್ದು ಶರಣರ ಸಾಧನೆ ಮುಂದೆ ಸಾಗುವದು ಗಮನಿಸಬೇಕಾದ ಅಂಶ. ಕೇವಲ ಸ್ಥಲ ಲಾಂಛನ ಇವುಗಳಿಗೇ ಪ್ರಾಮುಖ್ಯತೆ ಕೊಟ್ಟು, ಇಂತಹ ಶಾಸ್ತ್ರ ಸಂಗತಿಗಳನ್ನು ಹೊಗಳಿ ಹಾಡುವ, ಪವಾಡ ಕತೆ ಕಟ್ಟಿ ವಚನಕಾರರ ಹೋರಾಟವನ್ನೇ ಕಾಣದಂತೆ ಮಾಡುವ ಭಾವಾವೇಶಗೊಂಡ ಭಕ್ತರಿಗೆ ಈ ವಚನ ಅತ್ಯಂತ ಮಾರ್ಮಿಕವಾಗಿ ಮುಟ್ಟುತ್ತದೆ. ಸ್ಥಲ–ಪೂಜೆಗಳ ವಿಧಿವಿಧಾನಗಳಿಂದ ಮನುಷ್ಯಪ್ರಯತ್ನ ದೊಡ್ಡದೆಂದು ಸಾರುವ ಈ ವಚನದ ಅರ್ಥ ತುಂಬಾ ಗಹನವಾದುದು.

"ಹಿಂದಣ ಹಳ್ಳ ಮುಂದಣ ತೊರೆ,
ಸಲ್ಲುವ ಪರಿಯೆಂತು ಹೇಳಾ
ಹಿಂದಣ ಕೆರೆ ಮುಂದಣ ಬಲೆ
ಹದುಳವಿನ್ನೆಲ್ಲಿಯದು ಹೇಳಾ". *(ವಚನ ೧೨)*
"ಉಳ್ಳುದೊಂದು ತನು, ಉಳ್ಳುದೊಂದು ಮನ,
ನಾನಿನ್ನಾವ ಮನದಲ್ಲಿ ತಲ್ಲಿಯವಾಹೆನಯ್ಯ.
ಅಕಟಕಟಾ ಕೆಟ್ಟೆ ಕೆಟ್ಟೆ, ಸಂಸಾರಕ್ಕಲ್ಲಾ ಪಾರಮಾರ್ಥಕ್ಕಲ್ಲಾ
ಎರಡಕ್ಕೆ ಬಿಟ್ಟ ಕರುವಿನಂತೆ. *(ವಚನ ೧೩)*

ಈ ಎರಡೂ ವಚನಗಳಲ್ಲಿ ಅಕ್ಕನ ದ್ವಂದ್ವಭಾವ ವ್ಯಕ್ತವಾಗಿದೆ. ತನ್ನ ಮನಸ್ಸಿಗೆ ಮೋಸಮಾಡಿಕೊಳ್ಳಲಾರದೆ, ನಂಬಿದ ಮೌಲ್ಯಗಳನ್ನು ಕೈಬಿಡದೆ ರಾಜಪ್ರಭುತ್ವವನ್ನು ಧಿಕ್ಕರಿಸಿದ ಅಕ್ಕನಿಗೆ ಸಾಂಪ್ರದಾಯಿಕ ಸಮಾಜ ಬಹಳಷ್ಟು ತೊಂದರೆ ಕೊಟ್ಟಿರಬೇಕು. ಆ ಸಂದರ್ಭದಲ್ಲಿ ಆಕೆ ತನ್ನ ಅಂತರಂಗದ ಮಾತುಗಳನ್ನು ಇಲ್ಲಿ ಹೇಳಿದ್ದಾಳೆ. ಹಳ್ಳ–ತೊರೆ, ಕೆರೆ–ಬಲೆ ಈ ಮುಂತಾದ ಪದಗಳು ಸಾಂಕೇತಿಕವಾಗಿ ನಿಂತು ಅರ್ಥಪೂರ್ಣವಾಗಿ ಧ್ವನಿಸುತ್ತದೆ. ಇಹ ಮತ್ತು ಪರ ಇವೆರಡರ ನಡುವೆ ಸಿಕ್ಕು ನರಳುವ ಅಕ್ಕನ ಬದುಕು ಇತ್ತ ಹೇಳಲುಬಾರದೆ, ಹೇಳದೆ ಇರದೆ ಇರುವ ಸ್ಥಿತಿಯನ್ನು ತಲುಪಿದೆ. ಎರಡಕ್ಕೆ ಬಿಟ್ಟ ಕರುವಿನಂತೆ ಎನ್ನುವ ಮಾತು ಇದನ್ನೇ ಧ್ವನಿಸುತ್ತದೆ.

ಅಕ್ಕನ ನೈಜ ಬದುಕು ನುಚ್ಚುನೂರಾದಾಗ ಆಕೆ ಕನಸು ಕಾಣುವ ಬಗೆ, ಅದನ್ನು ವರ್ಣಿಸುವ ರೀತಿ, ಹೇಳುವ ಸಂಯಮ ಆಕೆಯ ಬದುಕಿನ ಅನೇಕ ಘಟನೆಗಳನ್ನು ಕಟ್ಟಿಕೊಂಡು ಬೆಳೆಯುತ್ತವೆ. "ಚಿಲಿಪಿಲಿಗುಟ್ಟುವ ಗಿಳಿಗಳಿರಾ, ಸ್ವರವೆತ್ತಿ ಹಾಡುವ ಕೋಗಿಲೆಗಳಿರಾ, ಎರಗಿ ಬಂದಾಡುವ ದುಂಬಿಗಳಿರಾ, ಕುಣಿದಾಡುವ ನವಿಲುಗಳಿರಾ ನೀವು ಕಾಣಿರೆ ನೀವು ಕಾಣಿರೆ" ಎಂದು ಚೆನ್ನಮಲ್ಲಿಕಾರ್ಜುನನನ್ನು ಅಕ್ಕ ಅರಸುವ ಪರಿ ತುಂಬಾ ಮನ ಮಿಡಿಯುವಂತಹದು. ಭಕ್ತಿಭಾವದಲ್ಲಿ ಒಮ್ಮೊಮ್ಮೆ ಕಂಡೆನೆಂದು ಖುಷಿಪಡುವ, ಭಾವವಳಿದು ಬುದ್ಧಿ ಬೆಳದಾಗ ಕಾಣಲಿಲ್ಲೆಂದು ಹುಡುಕಾಡುವ ಅಕ್ಕನ ಬದುಕಿನ ಈ ಮುಗ್ಧಚಿತ್ರ ಅಂದಿನ ವ್ಯವಸ್ಥೆ ಹೆಣ್ಣಿಗೆ ಮಾಡಿರುವ ಮೋಸವನ್ನು ಸ್ಪಷ್ಟಪಡಿಸುತ್ತದೆ.

"ಕಾಮಿಸಿ ಕಲ್ಪಿಸಿ ಕಂದಿಕುಂದಿದೆನವ್ವಾ
ಮೋಹಿಸಿ ಮುದ್ದಿಸಿ ಮರುಳಾದೆನವ್ವಾ
ತೆರೆಯದೆ ತೊರೆಯದೆ ನಲಿದು ನಂಬಿದೆ ನಾನು
ಎನ್ನ ದೇವ ಚೆನ್ನಮಲ್ಲಿಕಾರ್ಜುನನೆನ್ನನೊಲ್ಲದಡೆ
ಅನೇವೆನವ್ವಾ?" *(ವಚನ: ೨೭೬)*

ಈ ವಚನದ ಪರಿಣಾಮವಂತೂ ತುಂಬಾ ಗಾಢವಾದುದು. ಇಹ–ಪರಗಳೆರಡಕ್ಕೂ ಸ್ಪಂದಿಸಿ ಎರಡರಲ್ಲೂ ಅಕ್ಕನಿಗೆ ನಿರಾಶೆಯಾದಾಗ ಇಂತಹ ಮಾತುಗಳು ಹೊರಟಿರಬೇಕು. ನಿರಂತರ ಹೋರಾಟದ ಒಂದು ಮನಸ್ಸು ಕೊನೆಗೆ 'ಅನೇವೆನವ್ವಾ?' ಎನ್ನುವ ಹಂತ ತಲುಪಬೇಕಾದರೆ ಆಕೆಯ ಅಸಹಾಯಕ ಸ್ಥಿತಿ ಅರ್ಥವಾಗುತ್ತದೆ. ಅಂತಹ ಸ್ಥಿತಿಯನ್ನೇ ಚಿತ್ರಿಸುವ, ಅಕ್ಕನ ಕರುಳುಕೊರೆಯುವ ಕಾವ್ಯ ವಿಚಾರ ಪ್ರಧಾನವಾಗುತ್ತದೆ.

"ಕಿಚ್ಚಿಲ್ಲದ ಬೇಗೆಯಲಿ ಬೆಂದೆನವ್ವಾ,
ಏರಿಲ್ಲದ ಗಾಯದಲಿ ನೊಂದೆನವ್ವಾ,
ಸುಖವಿಲ್ಲದ ಧಾವತಿಗೊಂಡೆನವ್ವಾ,
ಚೆನ್ನಮಲ್ಲಿಕಾರ್ಜುನ ದೇವರಿಗೊಲಿದು
ಬಾರದ ಭವಂಗಳಲಿ ಬಂದೆನವ್ವಾ"

ಎನ್ನುವಲ್ಲಿಯಂತೂ ಅಕ್ಕನ ಉತ್ಕಟತೆ ತೀವ್ರವಾಗಿದೆ. "ಕಿಚ್ಚಿಲ್ಲದ ಬೇಗೆಯಲಿ ಬೆಯ್ಯುವದು", "ಏರಿಲ್ಲದ ಗಾಯದಲ್ಲಿ ನೊಯ್ಯುವುದು" – ಈ ಮಾತುಗಳು ಅಕ್ಕನ ಅಂತರಂಗದ ಘಟನೆಗಳನ್ನು ಪರಿಚಯಿಸುತ್ತವೆ. ಇಷ್ಟೆಲ್ಲಾ ದ್ವಂದ್ವಗಳ ನಡುವೆಯೂ ಅಕ್ಕ ಬೆಳೆದು ನಿಲ್ಲುವ ಪರಿ ತುಂಬಾ ಮುಖ್ಯವಾದುದು.

ಮಹಾದೇವಿಯಕ್ಕ, ವಚನಕಾರರಲ್ಲೇ ವಿಶಿಷ್ಟ ವ್ಯಕ್ತಿತ್ವ ಪಡೆದವಳು. ಉಳಿದ ವಚನಕಾರರಿಗಿಂತ ಭಿನ್ನವಾದ ಬದುಕನ್ನು ಬಾಳಿದವಳು. ಸೂಳೆಸಂಕವ್ವೆ, ಕಾಳವ್ವೆ ಈ ಮುಂತಾದ ಶೂದ್ರ ವಚನಕಾರ್ತಿಯರಲ್ಲಿ ಸಾಮಾಜಿಕ ಸ್ಫೋಟವಿದ್ದರೆ ಅಕ್ಕನಲ್ಲಿ ಆಂತರಿಕ ಸ್ಫೋಟವಿದೆ. ಶೂದ್ರ ವರ್ಗದಿಂದ ಬಂದ ವಚನಕಾರ್ತಿಯರ ವಚನಗಳು ಸಿಡಿಮದ್ದುಗಳಾಗಿ ಸಿಡಿದು ನೇರವಾಗಿ ಸ್ಫೋಟಿಸಿದರೆ ಅಕ್ಕನ ವಚನಗಳು ಮಲ್ಲಿಗೆಯ ಕಂಪು ಬೀರುತ್ತಲೇ ಮುಳ್ಳಿನ ಮೊನಚನ್ನು ತೊಡುತ್ತವೆ. ಇಷ್ಟೆಲ್ಲಾ ನೋವು ನಿರಾಶೆ ಹೋರಾಟದ ಭಾವನೆಗಳನ್ನು ಆಕೆಯಷ್ಟು ಕಲಾತ್ಮಕವಾಗಿ ಯಾರೂ ಹೇಳಿಲ್ಲ.

ಅಕ್ಕನ ವಚನಗಳ ಕಾವ್ಯಸೌಂದರ್ಯ ಗಮನಾರ್ಹವಾದದು. ಅಲ್ಲಿ ಬರುವ ಅನೇಕ ವರ್ಣನೆಗಳಲ್ಲಿ ಮಧುರ ಪರಿಮಳದೊಂದಿಗೆ ನೊಂದ ಬದುಕಿನ ವಿಷಾನಿಲವೂ ಸೇರಿದೆ. ವಿಷದ ಹಲ್ಲು ಕಿತ್ತು ಹಾವನ್ನು ಆಡಿಸುವ ಪರಿಯೂ ಅಕ್ಕನಿಗೆ ತಿಳಿದಿದೆ. ಆದ್ದರಿಂದ ಅಕ್ಕನ ಬದುಕು ಅಧ್ಯಯನಯೋಗ್ಯವಾಗುತ್ತದೆ. ಅಕ್ಕ ಇಂದಿಗೂ ಪ್ರಮುಖಳಾಗುತ್ತಾಳೆ.

ಬಸವಣ್ಣ ಮುಂತಾದ ವಚನಕಾರರ ಹೋರಾಟಕ್ಕೆ ಒಂದು ಕೊನೆಯಿರುವುದನ್ನು ಗುರುತಿಸಬಹುದು. ಆದರೆ ಅಕ್ಕನದು ಕೊನೆಯಿಲ್ಲದ ನಿರಂತರ ಹೋರಾಟ. ಆಕೆಯ ಸ್ಫೋಟಗುಣ ಚುಚ್ಚಿ ಕೊಲ್ಲುವದಲ್ಲ, ಬಿಚ್ಚಿ ಅರಳಿಸುವುದು. ಆಕೆ ಮಾಡುವ ವಿಡಂಬನೆಗಳಲ್ಲಿ ಕೋಪ ನೆತ್ತಿ ಗೇರುವ ಬದಲು, ಬುದ್ಧಿ ಕೆಲಸ ಮಾಡಲು ಪ್ರಾರಂಭಿಸುತ್ತದೆ. ಇಷ್ಟೆಲ್ಲಾ ನೋವು

ನಿರಾಶೆಗಳ ನಡುವೆ ಆಕೆಯ ಬದುಕನ್ನೇ ಹೊಡೆದುಹಾಕಿದ ಪ್ರಭುತ್ವ ಪತಿತ್ವಗಳ ನಡುವೆ ಅಕ್ಕ ಒಂಟಿಯಾಗಿ ಹೋರಾಡಿದ್ದು ನಮಗಿಂದಿಗೂ ಮಹತ್ವದ ಸಂಗತಿಯಾಗುತ್ತದೆ. ಸಹನೆ–ತಾಳ್ಮೆಗಳೊಂದಿಗೆ ಹರಿದುಹಂಚಿಹೋದ ಬದುಕನ್ನು ಆಧ್ಯಾತ್ಮದ ಹಿನ್ನೆಲೆಯೊಂದಿಗೆ ಕಟ್ಟಿನಿಲ್ಲಿಸುವ ಆಕೆಯ ಪ್ರಯತ್ನ ಬಹಳ ಕುತೂಹಲವನ್ನು ಹುಟ್ಟಿಸುತ್ತದೆ. ಅಕ್ಕನ ವಚನಗಳಲ್ಲಿ ಹೆಣ್ಣಿನ ಶತಮಾನಗಳ ಶೋಷಣೆಯ ನೋವು ಹೂವಾಗಿ ಅರಳಿದೆ. ಇಂದಿನ ಜ್ವಲಂತ ಸಮಸ್ಯೆಗಳಿಗೂ ಅಲ್ಲಿ ತುಂಬಾ ಅರ್ಥಪೂರ್ಣವಾದ ಉತ್ತರಗಳಿವೆ. ಅಂತೆಯೆ ಅಕ್ಕ ತನ್ನ ವಚನಗಳ ಮುಖಾಂತರ ಇವತ್ತಿನ ವರ್ತಮಾನವನ್ನು ಸ್ಪಂದಿಸುತ್ತಾಳೆ.

ಅನುಬಂಧ

ಲೇಖಕರ ವಿಳಾಸಗಳು

೧. **ಡಾ. ಎಂ. ಚಿದಾನಂದ ಮೂರ್ತಿ**
'ಮಿಂಚು' ೬/ಎ (೧೦೧೧)
೪ನೇ ಕ್ರಾಸ್, ೧೧ನೇ ಮೇನ್
ವಿಜಯನಗರ, ೨ನೇ ಹಂತ
ಬೆಂಗಳೂರು– ೫೬೦ ೦೪೦

೨. **ಡಾ. ಜಿ.ಎಸ್. ಶಿವರುದ್ರಪ್ಪ**
ಚೈತ್ರ, ೮೬೭, ೧೮ನೇ ಮೇನ್
ಬನಶಂಕರಿ ೨ನೇ ಹಂತ
ಪದ್ಮನಾಭನಗರ, ಬೆಂಗಳೂರು–೭೦

೩. **ಡಾ. ಕೀರ್ತಿನಾಥ ಕುರ್ತಕೋಟಿ**
ದಿವಂಗತರು

೪. **ಪ್ರೊ. ಎಸ್. ಆರ್. ಗೌಡರ**
ಜೆ.ಟಿ. ಕಾಲೇಜು, ಗದಗ, ಜಿ. ಹಾವೇರಿ.

೫. **ಡಾ. ವಿಜಯಾದಬ್ಬೆ**
ಅಂಚೆ : ದಬ್ಬೆಗ್ರಾಮ
ಟಿ. ನರಸೀಪುರ ತಾಲೂಕ
ಮೈಸೂರು ಜಿಲ್ಲೆ.

೬. **ಡಾ. ಕೆ. ರವೀಂದ್ರನಾಥ**
ಪ್ರಾಧ್ಯಾಪಕರು
ಕನ್ನಡ ವಿಶ್ವವಿದ್ಯಾಲಯ
ಹಂಪಿ–೫೮೩೨೭೬
ತಾ. ಹೊಸಪೇಟೆ, ಜಿ. ಬಳ್ಳಾರಿ.

೭. **ಡಾ. ಆರ್. ಪೂರ್ಣಿಮಾ**
೮೯೮, 'ಮಲ್ಲಿಗೆ', ೪ನೇ ಮೇನ್ ರಸ್ತೆ
ವಿಜಯನಗರ
ಬೆಂಗಳೂರು–೫೬೦ ೦೪೦.

೮. **ಡಾ. ಮೀನಾಕ್ಷಿ ಬಾಳಿ**
ಹಿ. ಆಯ್ಕೆ, ಶ್ರೇಣಿ ಉಪನ್ಯಾಸಕರು
ಎಂ.ಎಸ್. ಆಯ್. ಪದವಿ ಕಾಲೇಜು
ಗುಲಬರ್ಗಾ.

೯. **ಡಾ. ಬಿ.ಎನ್. ಸುಮಿತ್ರಾಬಾಯಿ**
ಸಂಸ್ಕೃತ ಉಪನ್ಯಾಸಕರು
ಆಚಾರ್ಯ ಪಾಠಶಾಲಾ ಕಾಲೇಜು
ಎನ್.ಆರ್. ಕಾಲೋನಿ, ಬೆಂಗಳೂರು.

೧೦. **ಡಾ. ಶೈಲಜಾ ಉಡಚಣ**
ವಿಶ್ರಾಂತ ಪ್ರಾಧ್ಯಾಪಕರು
ಜೇವರ್ಗಿ ಅಪ್ಪರ್‌ಬ್ರಿಜ್
ಗುಲಬರ್ಗಾ.

೧೧. **ಡಾ. ಬಸವರಾಜ ಸಬರದ**
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ–೫೮೫ ೧೦೬

೧೨. **ಎ.ಬಿ. ಕಲಘಟಗಿ**
ಅಂಚೆ: ಹೊನವಾಡ
ತಾ. ಜಿಲ್ಲೆ: ವಿಜಾಪುರ.

೧೩. **ಡಾ. ಎಂ.ಎಸ್. ಲಠ್ಠೆ**
ದಿವಂಗತರು

೧೪. **ಜಿ. ಶಾರದ ರಾಜಶೇಖರ್**
ನಂ. ೮೪೭, ೪ನೇ ಮುಖ್ಯರಸ್ತೆ
ವಿಜಯನಗರ
ಬೆಂಗಳೂರು–೪೦.

೧೫. **ಶಿವಕುಮಾರ ಪಾವಟೆ**
ಇಂಗ್ಲಿಷ್ ಉಪನ್ಯಾಸಕರು
ಸರಕಾರಿ ಪದವಿಪೂರ್ವಕಾಲೇಜು
ನಾಗಸಂದ್ರ–೫೭೨ ೧೩೪,
ಕುಣಿಗಲ್ ತಾಲ್ಲೂಕು,
ತುಮಕೂರು ಜಿಲ್ಲೆ

೧೬. ಟಿ.ಎನ್. ಮಹಾದೇವಯ್ಯ
ಬಸವಪಥ, ಮಾಸಪತ್ರಿಕೆ
ಬಸವಸಮಿತಿ, ಬಸವಭವನ
ಶ್ರೀ ಬಸವೇಶ್ವರ ಸರ್ಕಲ್
ಬೆಂಗಳೂರು-೫೬೦ ೦೦೧.

೧೭. ಡಾ. ಎಂ.ಎಸ್. ಆಶಾದೇವಿ
ಕನ್ನಡ ಅಧ್ಯಾಪಕಿ
ಮಹಾರಾಣಿ ಕಾಲೇಜು
ಬೆಂಗಳೂರು-೫೬೦ ೦೦೧.

೧೮. ಕೆ. ನೀಲಾ
ನಂ ೧೨/೧ಸಿ.ಐ.
ಡಬ್ಲ್ಯೂಡಿ. ಕ್ವಾಟರ್ಸ್
ಜೇವರ್ಗಿ ಕಾಲೋನಿ
ಹಳೇ ಜೇವರ್ಗಿರಸ್ತೆ
ಗುಲಬರ್ಗಾ.

೧೯. ವೀಣಾ ಬನ್ನಂಜೆ
ಸತ್ಯಕಾಮ ಪ್ರತಿಷ್ಠಾನ,
ಕಲ್ಲಹಳ್ಳಿ – ೫೮೭ ೧೯೯
ಜಮಖಂಡಿ ತಾಲೂಕು
ಬಾಗಲಕೋಟೆ ಜಿಲ್ಲೆ

೨೦. ಡಾ. ಮಮತಾ ಜಿ. ಸಾಗರ
ಉಪನ್ಯಾಸಕರು
ಕನ್ನಡ ಅಧ್ಯಯನ ಕೇಂದ್ರ
ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು-೫೭೦ ೦೦೬.

೨೧. ಧರಣೀದೇವಿ ಮಾಲಗತ್ತಿ
ಪ್ರಾಧ್ಯಾಪಕರ ನಿವಾಸ
ಮಾನಸ ಗಂಗೋತ್ರಿ
ಮೈಸೂರು – ೫೭೦ ೦೦೬.

೨೨. ಡಾ. ಪಿ.ಎಸ್. ಶಂಕರ
'ದೀಪ್ತಿ', ಜಿಲ್ಲಾ ಕೋರ್ಟ್ ಹಿಂಭಾಗ
ಗುಲಬರ್ಗಾ-೫೮೫ ೧೦೨.

೨೩. ಪ್ರೊ. ಕೆ.ಎಸ್. ಸವಣೂರ
ದಿವಂಗತರು

೨೪. ಲೀಲಾದೇವಿ ಆರ್. ಪ್ರಸಾದ
ನಂ. ೬೪, ಲೋಯರ್ ಪ್ಯಾಲೇಸ್
ಆರ್ಚರ್ಡ್, ಸದಾಶಿವನಗರ, ಬೆಂಗಳೂರು.

೨೫. ಬಿ.ಸಿ. ವೀರಪ್ಪ
ನಂ. ೨೨೯, ೩ನೇ 'ಬಿ' ಮುಖ್ಯರಸ್ತೆ
ವಿಜಯನಗರ, ೨ನೇ ಹಂತ
ಬೆಂಗಳೂರು-೫೬೦ ೦೪೦.

೨೬. ಡಾ. ಉಷಾಕಿರಣ
ಸಂಶೋಧಕರು, ಕನ್ನಡ ಅಧ್ಯಯನ ವಿಭಾಗ
ಕೃಷಿ ವಿಶ್ವವಿದ್ಯಾಲಯ
ಹೆಬ್ಬಾಳ, ಬೆಂಗಳೂರು-೨೪.

೨೭. ಡಾ. ಸಂಗಮೇಶ ಸವದತ್ತಿ ಮಠ

೨೮. ಡಾ. ಚೆನ್ನಕ್ಕ ಪಾವಟೆ
ಪ್ರಾಧ್ಯಾಪಕರು, ಕನ್ನಡ ಅಧ್ಯಯ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ.

೨೯. ಎಸ್. ಸಿರಾಜ್ ಅಹಮದ್
ಅಧ್ಯಾಪಕರು, ಇಂಗ್ಲಿಷ್ ವಿಭಾಗ
ಸಹ್ಯಾದ್ರಿ, ಕಲಾ ಕಾಲೇಜು
ಶಿವಮೊಗ್ಗ – ೫೭೭ ೨೦೩.

೩೦. ರಘುನಾಥ ಚ.ಹ.
ಉಪಸಂಪಾದಕ/ವರದಿಗಾರರು
ಪ್ರಜಾವಾಣಿ, ೭೫, ಮಹಾತ್ಮ ಗಾಂಧಿ ರಸ್ತೆ
ಬೆಂಗಳೂರು – ೫೬೦ ೦೦೧

೩೧. ಡಾ. ಶಾಂತಾ ಇಮ್ರಾಪೂರ
ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

೩೨. ಡಾ. ವಿಜಯಶ್ರೀ ಸಬರದ
ಡೀನ್, ಕಲಾನಿಕಾಯ
ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು
ಕನ್ನಡ ಅಧ್ಯಯನ ವಿಭಾಗ
ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯ
ವಿಜಾಪುರ – ೫೮೫ ೧೦೧



ಗುಲಬರ್ಗಾ ವಿಶ್ವವಿದ್ಯಾಲಯವು ಕಳೆದ ಮೂರು ದಶಕಗಳಿಂದ ಬೋಧನೆ, ಸಂಶೋಧನೆ ಮತ್ತು ಪ್ರಕಟಣೆಗಳ ಮೂಲಕ ಗಮನ ಸೆಳೆದಿದೆ. ಈ ವಿಶ್ವವಿದ್ಯಾಲಯದ ಬೌದ್ಧಿಕ ಆಸ್ತಿ, ಬೋಧನೆ ಮತ್ತು ಸಂಶೋಧನೆ. ಇವು ಆಕರಗೊಳ್ಳುವುದು ಪ್ರಕಟಣೆಗಳ ಮೂಲಕವೇ. ಗುಲಬರ್ಗಾ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಯು ಅಪೂರ್ವ ಪ್ರಕಟಣೆಗಳ ಮೂಲಕ ಜನಮೆಚ್ಚುಗೆಯನ್ನು ಪಡೆಯುತ್ತಿದೆ.

ಕರ್ನಾಟಕ ಸರಕಾರವು ಸುವರ್ಣ ಮಹೋತ್ಸವದ ಸಂದರ್ಭದಲ್ಲಿ ಕರ್ನಾಟಕ ಸಂಸ್ಕೃತಿ, ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದಂತೆ ವಿವಿಧ ಬಗೆಯ ಮಹತ್ವದ ಯೋಜನೆಗಳನ್ನು ಹಮ್ಮಿಕೊಂಡಿದೆ. ನಮ್ಮ ವಿಶ್ವವಿದ್ಯಾಲಯಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿವಿಧ ಯೋಜನೆಗಳಿಗೆ ಅನುದಾನವನ್ನು ನೀಡಿದೆ. ಇದರ ಅಂಗವಾಗಿ ಕನ್ನಡ ಅಧ್ಯಯನ ಸಂಸ್ಥೆಯು ಕನ್ನಡ ಭಾಷಾಭಿವೃದ್ಧಿಯ ಯೋಜನೆಯ ಅಡಿಯಲ್ಲಿ **ಶರಣ ಸಾಹಿತ್ಯ ವಿಮರ್ಶಾ ಸಂಪುಟಗಳ ಪ್ರಕಟಣಾ ಯೋಜನೆ**ಯನ್ನು ಕೈಗೆತ್ತಿಗೊಂಡು ಅಲ್ಲಮಪ್ರಭು, ಬಸವಣ್ಣ, ಅಕ್ಕಮಹಾದೇವಿ, ಚೆನ್ನಬಸವಣ್ಣ, ಶೂನ್ಯಸಂಪಾದನೆ, ವಚನಕಾವ್ಯ ಚಿಂತನೆ, ಜಾಗತಿಕ ಚಿಂತಕರು ಮತ್ತು ಬಸವಣ್ಣ, ಸಿದ್ಧರಾಮ, ವಚನಕಾರ್ತಿಯರು, ದಲಿತ ವಚನಕಾರರು, ಇತರ ವಚನಕಾರರು ಹಾಗೂ ವಚನ: ಜಾನಪದ ಹೀಗೆ ಒಟ್ಟು ಹನ್ನೆರಡು ಸಂಪುಟಗಳನ್ನು ಹೊರತರುತ್ತಿದೆ.

ಡಾ. ವಿಜಯಶ್ರೀ ಸಬರದ ಅವರು ಬಹು ಶ್ರಮವಹಿಸಿ **ಅಕ್ಕಮಹಾದೇವಿ** ಸಂಪುಟವನ್ನು ಸಿದ್ಧಪಡಿಸಿದ್ದಾರೆ. ಈ ಸಂಪುಟದ ಲೇಖನಗಳು ಶತಮಾನದ ವಿಮರ್ಶಾ ಚಿಂತನೆಯನ್ನು ಸಾದರಪಡಿಸುತ್ತಲೆ ಹೊಸ ಆವಿಷ್ಕಾರ ಮತ್ತು ಚಿಂತನೆಗಳಿಗೆ ಉತ್ತಮ ಹಾದಿಯನ್ನು ನಿರ್ಮಿಸಿಕೊಡುತ್ತಿವೆ. ಈ ಸಂಪುಟವನ್ನು ಶ್ರಮವಹಿಸಿ ಸಿದ್ಧಪಡಿಸಿದ ಸಂಪಾದಕರಾದ ಡಾ. ವಿಜಯಶ್ರೀ ಸಬರದ ಅವರಿಗೂ ಯೋಜನೆಯ ಪ್ರಧಾನ ಸಂಚಾಲಕರಾದ ಡಾ. ಎಚ್.ಟಿ. ಪೋತೆ ಅವರಿಗೂ ಕನ್ನಡ ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಜಯರಾಮರಾಜೇ ಅರಸ್ ಅವರಿಗೂ ಹಾಗೂ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರಿಗೂ ಇತರ ಅಧಿಕಾರಿ ವರ್ಗದವರಿಗೂ ವಿಶೇಷ ಕೃತಜ್ಞತೆಗಳು ಸಲ್ಲುತ್ತವೆ.

ಪ್ರೊ. ಈ.ಟಿ. ಪುಟ್ಟಯ್ಯ
ಕುಲಪತಿಗಳು

ಬೆಲೆ : ರೂ. ೨೦೦/-



ಕನ್ನಡ ಅಧ್ಯಯನ ಸಂಸ್ಥೆ
ಗುಲಬರ್ಗಾ ವಿಶ್ವವಿದ್ಯಾಲಯ
ಗುಲಬರ್ಗಾ - ೫೮೫ ೧೦೬

ISBN 819210362-5
9788192103624